ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳಲ್ಲಿ ಸಾಮಾಜಿಕ ಸಂವೇದನೆ: ಒಂದು ಅಧ್ಯಯನ

ಕನ್ನಡ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ (ಹಂಪಿ)

ಸಾದರಪಡಿಸುವ ಸಂಶೋಧನಾ ನಿಬಂಧ

ಸಂಶೋಧಕರು

ಎಸ್.ಸಿ. ಮಂಗಳಾ, ಎಂ.ಎ., ಎಂ.ಇಡಿ., ಕೆ.ಇ.ಎಸ್.,

ಮುಖ್ಯ ಶಿಕ್ಷಕರು,
ಸರ್ಕಾರಿ ಪ್ರೌಢಶಾಲೆ, ಎಲೆಚಾಕನಹಳ್ಳಿ,
ಮಂಡ್ಯ ತಾಲ್ಲೂಕು ದಕ್ಷಿಣ ವಲಯ,
ಮಂಡ್ಯ ಜಿಲ್ಲೆ - ೫೭೧೪೦೨.

ಮಾರ್ಗದರ್ಶಕರು

ಡಾ. ಬೋರೇಗೌಡ ಚಿಕ್ಕಮರಳಿ

ಕನ್ನಡ ಪ್ರಾಧ್ಯಾಪಕರು,
ವಿಜಯ ಪ್ರಥಮ ದರ್ಜೆ ಕಾಲೇಜು,
ಪಾಂಡವಪುರ.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ (ರಿ), ಮಂಡ್ಯ.

666

೨೦೧೩ - ೧೪

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩. ೨೭೬.

ಸಂಪೂರ್ಣ ಸಂ.ಕ.[illegible]
Sl no - 666
666

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ,ಹಂಪಿ.

666

AKSHARA GRANTHALAYA
ACC.NO.131995

666

ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳಲ್ಲಿ ಸಾಮಾಜಿಕ ಸಂವೇದನೆ: ಒಂದು ಅಧ್ಯಯನ

ಕನ್ನಡ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ (ಹಂಪಿ)
ಸಾದರಪಡಿಸುವ ಸಂಶೋಧನಾ ನಿಬಂಧ

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಂಶೋಧಕರು

ಎಸ್.ಸಿ. ಮಂಗಳಾ, ಎಂ.ಎ., ಎಂ.ಇಡಿ., ಕೆ.ಇ.ಎಸ್.,

ಮುಖ್ಯ ಶಿಕ್ಷಕರು,
ಸರ್ಕಾರಿ ಪ್ರೌಢಶಾಲೆ, ಎಲೆಚಾಕನಹಳ್ಳಿ,
ಮಂಡ್ಯ ತಾಲ್ಲೂಕು ದಕ್ಷಿಣ ವಲಯ,
ಮಂಡ್ಯ ಜಿಲ್ಲೆ – ೫೭೧೪೦೨.

ಮಾರ್ಗದರ್ಶಕರು

ಡಾ. ಬೋರೇಗೌಡ ಚಿಕ್ಕಮರಳಿ

ಕನ್ನಡ ಪ್ರಾಧ್ಯಾಪಕರು,
ವಿಜಯ ಪ್ರಥಮ ದರ್ಜೆ ಕಾಲೇಜು,
ಪಾಂಡವಪುರ.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ (ರಿ), ಮಂಡ್ಯ.

೨೦೧೩ – ೧೪

131995

8KO.9
MAN 9

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀಮತಿ ಮಂಗಳಾ ಎಸ್.ಸಿ., ಇವರು ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾಕೇಂದ್ರ, ಕರ್ನಾಟಕ ಸಂಘ (ರಿ), ಮಂಡ್ಯ. (ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ) ಈ ಸಂಸ್ಥೆಯ ಮೂಲಕ **ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳಲ್ಲಿ ಸಾಮಾಜಿಕ ಸಂವೇದನೆ: ಒಂದು ಅಧ್ಯಯನ** ಎಂಬ ವಿಷಯವನ್ನು ಕುರಿತು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಂಶೋಧಕರಾಗಿ ಸಂಶೋಧನೆ ನಡೆಸಿ, ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಈ ಮಹಾಪ್ರಬಂಧವನ್ನು ಇಡಿಯಾಗಿ ಅಥವಾ ಬಿಡಿಯಾಗಿ ಈ ಮೊದಲು ಇವರು ಯಾವುದೇ ಪದವಿ ಅಥವಾ ಡಿಪ್ಲೊಮಾ ಪದವಿಗಾಗಿ ಬಳಸಿಕೊಂಡಿಲ್ಲ ಈ ಅಭ್ಯರ್ಥಿ ನನ್ನ ಮಾರ್ಗದರ್ಶನದಲ್ಲಿ ~~ನನ್ನೊಂದಿಗೆ~~ ನಾಲ್ಕು ವರ್ಷಗಳು ಸಂಶೋಧನೆಯ ಕೆಲಸ ಮಾಡಿದ್ದಾರೆಂದು ಈ ಪ್ರಬಂಧವನ್ನು ಕನ್ನಡ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ (ಹಂಪಿ) ಸಾದರಪಡಿಸಲು ನಾನು ಸಮ್ಮತಿಸುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಮಂಡ್ಯ
ದಿನಾಂಕ : 19.03.2014

(ಡಾ. ಬೋರೇಗೌಡ ಚಿಕ್ಕಮರಳಿ)
ಕನ್ನಡ ಪ್ರಾಧ್ಯಾಪಕರು,
ವಿಜಯ ಪ್ರಥಮ ದರ್ಜೆ ಕಾಲೇಜು,
ಪಾಂಡವಪುರ.

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯದ (ಹಂಪಿ) ಕನ್ನಡ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿರುವ **ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳಲ್ಲಿ ಸಾಮಾಜಿಕ ಸಂವೇದನೆ: ಒಂದು ಅಧ್ಯಯನ** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾಕೇಂದ್ರ, ಕರ್ನಾಟಕ ಸಂಘ (ರಿ), ಮಂಡ್ಯ (ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ) ಈ ಸಂಸ್ಥೆಯ ಮೂಲಕ ವಿಜಯ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರು ಹಾಗೂ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿರುವ **ಡಾ.ಬೋರೇಗೌಡ ಚಿಕ್ಕಮರಳಿ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಈ ಮಹಾಪ್ರಬಂಧ ನನ್ನ ಸ್ವಂತ ಸಂಶೋಧನೆಯಾಗಿದೆ. ಇದನ್ನು ಸಂಪೂರ್ಣವಾಗಿ ಆಗಲಿ ಅಥವಾ ಭಾಗಶಃ ಆಗಲಿ ಯಾವುದೇ ವಿಶ್ವವಿದ್ಯಾಲಯದ ಪದವಿ ಅಥವಾ ಡಿಪ್ಲೊಮಾಗೆ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಮಂಡ್ಯ
ದಿನಾಂಕ : 19.03.2014

Mangala. S. C.

(ಮಂಗಳಾ ಎಸ್.ಸಿ.)
ಮುಖ್ಯ ಶಿಕ್ಷಕರು,
ಸರ್ಕಾರಿ ಪ್ರೌಢಶಾಲೆ, ಎಲೆಚಾಕನಹಳ್ಳಿ,
ಮಂಡ್ಯ ತಾಲ್ಲೂಕು, ದಕ್ಷಿಣ ವಲಯ.

ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳಲ್ಲಿ ಸಾಮಾಜಿಕ ಸಂವೇದನೆ: ಒಂದು ಅಧ್ಯಯನ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

"ಪ್ರತಿಯೊಬ್ಬ ಮನುಷ್ಯನ ಜೀವನದಲ್ಲೂ ಒಂದು ಕಾದಂಬರಿಗೆ ಆಗುವಷ್ಟು ವಿಷಯವು ಸಿಗುತ್ತದೆ. ಬದುಕಿರುವ ಮನುಷ್ಯನ ಮನದಲ್ಲಿ ಅನುಭವವು ಒಂದು ನಿತ್ಯಪ್ರವಾಹವಾಗಿ ಹರಿಯುತ್ತಲೇ ಇರುತ್ತದೆ. ಯಾರನ್ನು ಎಷ್ಟು ಕುರಿತು ಬರೆಯುವುದು? ಮಿತಿಯಿರುವುದು ಅನುಭವಕ್ಕಲ್ಲ ಅದನ್ನು ಗ್ರಹಿಸಿ ರೂಪಿಸಿ ಕಲೆಯನ್ನಾಗಿಸುವ ಬರೆಹಗಾರರ ಸಾಮರ್ಥ್ಯಕ್ಕೆ ಅದನ್ನು ಕಾಣುವ ನೋಟಕ್ಕೆ ಅದನ್ನು ಅರ್ಥಮಾಡಿಕೊಂಡು ಕಲಾತ್ಮಕವಾಗಿ ತಾನು ಕಂಡ ಅರ್ಥವನ್ನು ಇನ್ನೊಬ್ಬರ ಮನಸ್ಸಿನಲ್ಲಿ ಮೂಡಿಸುವ ಸಾಮರ್ಥ್ಯಕ್ಕೆ"[೧] ಎನ್ನುತ್ತಾರೆ ಶಿವರಾಮ ಕಾರಂತರು.

ಅದರಂತೆಯೇ 'ಲೋಕೋ ಭಿನ್ನರುಚಿಃ' ಎಂಬ ಭವಭೂತಿಯ ಹೇಳಿಕೆಯಂತೆ ಒಂದೊಂದು ಸ್ತರದಲ್ಲಿ ಒಬ್ಬೊಬ್ಬರು ಬದುಕನ್ನು ನೋಡುವ ರೀತಿ, ಮನೋಧೋರಣೆ, ಅವರ ಆಸಕ್ತಿ ಎಲ್ಲವೂ ಭಿನ್ನ ವಿಭಿನ್ನವಾಗಿ ಕಂಡುಬರುತ್ತದೆ. ಈ ನಿಟ್ಟಿನಲ್ಲಿ ನೋಡಿದಾಗ ಸ್ತ್ರೀಪರ ಧೋರಣೆಯ ಹಿನ್ನೆಲೆಯಲ್ಲಿ ಮುಂಚೂಣಿಗೆ ನಿಲ್ಲುವ ಕಾದಂಬರಿಗಾರ್ತಿಯರಾದ ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳು ಇಂದಿಗೂ ಅಧ್ಯಯನಯೋಗ್ಯವಾದ ಬರೆಹಗಳಾಗಿ ನಿಲ್ಲುತ್ತವೆ.

ಹೂವಿನೊಂದಿಗೆ ನಾರು ಸ್ವರ್ಗಕ್ಕೆ ಎಂಬಂತೆ ಸುಸಂಸ್ಕೃತ ಕುಟುಂಬದ ಹಿನ್ನೆಲೆಯುಳ್ಳ ಜನಪ್ರಿಯ ಕಾದಂಬರಿಗಾರ್ತಿ ಶ್ರೀಮತಿ ಆರ್ಯಾಂಬರವರ ಬರೆವಣಿಗೆಯು ಬದುಕಿನ ವಿವಿಧ ಮಗ್ಗುಲುಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಉತ್ತಮ ಕೃತಿಗಳನ್ನು ಕನ್ನಡಕ್ಕೆ ನೀಡಿದೆ.

ಆರ್ಯಾಂಬರವರ ಬರೆವಣಿಗೆ ಜನಪ್ರಿಯತೆಯ ಜೊತೆಗೆ ಹಲವು ನೆಲೆಗಳಲ್ಲಿ ಸ್ತ್ರೀಪರ ಚಿಂತನೆಗಳನ್ನು ಸೃಷ್ಟಿಸುತ್ತಾ ಹೋಗುತ್ತದೆ. ಅವರ ಕಾದಂಬರಿಗಳ ವಸ್ತು ಮತ್ತು ವಿಷಯ ಹೇಗೆ ವೈವಿಧ್ಯಮಯವೋ ಹಾಗೆಯೇ ಅವರ ನಿಲುವುಗಳು ಆಕರ್ಷಕ.

ಬಹುಮುಖಿಯಾಗಿ ಚಿಂತಿಸುವ ಅವರ ಮನೋಧೋರಣೆಗಳನ್ನು ಒಳಗೊಂಡಂತೆ ರಚನಾಶೈಲಿಯ ವಿಸ್ತಾರವನ್ನು ಗಮನಿಸುವ ದೃಷ್ಟಿಯಿಂದ ಹಾಗೂ ಕನ್ನಡದ ಜನಪ್ರಿಯ ಸಾಹಿತ್ಯವನ್ನು ಸಮಾಜಮುಖಿಯಾಗಿಸಿ ಸಮೃದ್ಧಗೊಳಿಸುವಲ್ಲಿ ಆರ್ಯಾಂಬ ಮತ್ತು ಅವರ

ಸಹೋದರಿ ತ್ರಿವೇಣಿಯವರ ಪಾತ್ರವೇನು ಎಂಬುದನ್ನು ಅರಿಯುವ ದೃಷ್ಟಿಕೋನದಿಂದ ಈ ಅಧ್ಯಯನ ನಡೆದಿದೆ. ಆರ್ಯಾಂಬರ ಕಾದಂಬರಿಗಳನ್ನು ಮುಖ್ಯವಾಗಿರಿಸಿಕೊಂಡು ಅವುಗಳೊಡನೆ ತ್ರಿವೇಣಿಯವರ ಕಾದಂಬರಿಗಳನ್ನು ಹೋಲಿಸಿ ನೋಡುವ ಅಧ್ಯಯನ ಇದಾಗಿದೆ.

ಸಂಸ್ಕೃತ ಕಾವ್ಯಮೀಮಾಂಸಕರಲ್ಲಿ ಒಬ್ಬರಾದ ರಾಜಶೇಖರ "ಪ್ರತಿಭಾತರತಮ್ಯೇನ ಪ್ರತಿಷ್ಠಾ ಭುವಿಭೂರಿದಾ"[೨] ಅಂದರೆ ಪ್ರತಿಭೆಯ ಪ್ರಮಾಣಕ್ಕೆ ಅನುಗುಣವಾಗಿ ಲೇಖಕರು ವಿದ್ವಾಂಸರು ಲೋಕದಲ್ಲಿ ಪ್ರತಿಷ್ಠೆಯನ್ನು ಪಡೆದುಕೊಳ್ಳುತ್ತಾರೆ ಎಂದು ಹೇಳಿದ್ದಾರೆ. ಹೋಲಿಕೆಯೇ ಪ್ರತಿಭೆಯ ಪ್ರಮಾಣವನ್ನು ನಿರ್ಧರಿಸುವ ಸಂಗತಿಯಾಗಿರುತ್ತದೆ ಎಂದು ಸ್ಪಷ್ಟವಾಗಿ ಹೇಳುತ್ತಾರೆ.

ಅಂತಹ ಪ್ರತಿಭೆಯನ್ನು ಕಾದಂಬರಿಗಳ ರಚನೆಯಲ್ಲಿ ಅವ್ಯಾಹತವಾಗಿ ಬಳಸಿಕೊಂಡಿರುವ ಈ ಸಹೋದರಿಯರ ಕಾರ್ಯಕ್ಷೇತ್ರದ ಹಿನ್ನೆಲೆಯಲ್ಲಿ "ಒಬ್ಬರ ಸಾಧನೆಯ ಬೆಳಕಿನಲ್ಲಿ ಇನ್ನೊಬ್ಬರ ಸಾಧನೆಯನ್ನು ಒರೆಹಚ್ಚಿ ನೋಡುವುದೇ ಪ್ರಮುಖ ಕಾರ್ಯ"[೩] ಎಂಬ ಟಿ.ಎಸ್.ಎಲಿಯೆಟರ ಮಾತನ್ನು ಪ್ರತಿಬಿಂಬಿಸುವುದಾದರೆ; ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ ಎಂಬ ನಾಣ್ಣುಡಿಯಂತೆ ಸಹೋದರಿಯನ್ನು ಹಿಂಬಾಲಿಸಿ, ಅವರ ಸಮೀಪ ಸ್ಥಾನದಲ್ಲಿ ಸ್ಪಂದಿಸುವ ಆರ್ಯಾಂಬ ಮತ್ತು ಅವರ ಹಿರಿಯ ಸಹೋದರಿ ತ್ರಿವೇಣಿಯವರ ಕಾದಂಬರಿಗಳಲ್ಲಿನ ಸಾಮಾಜಿಕ ಸ್ತರವಿನ್ಯಾಸ, ಪಾತ್ರಚಿತ್ರಣ, ಕಥಾಚೌಕಟ್ಟು, ರಚನಾಶೈಲಿ ಹೀಗೆ ಒಂದೊಂದನ್ನು ಆಮೂಲಾಗ್ರವಾಗಿ ಪರಿಶೀಲಿಸಿದಾಗ ಅದರ ಆಳ, ವಿಸ್ತಾರದ ಅರಿವು ನಮಗಾಗುತ್ತದೆ.

ತೌಲನಿಕ ಅಧ್ಯಯನ ನಮ್ಮಲ್ಲಿ ಆನುಷಂಗಿಕವಾಗಿ ಬಂದಿದೆಯೇ ಹೊರತು ಪ್ರಧಾನವಾಗಿಯಲ್ಲ. ಈ ದೃಷ್ಟಿಯಿಂದ ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳಲ್ಲಿ ಸಾಮಾಜಿಕ ಸಂವೇದನೆ ಹೇಗಿದೆ ಎಂಬ ಈ ತೌಲನಿಕಅಧ್ಯಯನ ಒಂದು ಮುಖ್ಯ ಕಾರ್ಯ ಎಂದು ತಿಳಿಯಲಾಗಿದೆ. ಅಲ್ಲದೆ ಸಾಮಾಜಿಕ ಸಂವೇದನೆ ಎಂದರೇನು? ಅದು ಇವರಿಬ್ಬರ ಕಾದಂಬರಿಗಳಲ್ಲಿ ಯಾವ ರೀತಿ ಭಿನ್ನವಾಗಿದೆ. ಸಾಮ್ಯತೆಯಿಂದ ಕೂಡಿದೆ ಎಂಬುದನ್ನು ವಿಶ್ಲೇಷಣಾ ವಿಧಾನದಿಂದ ಗಮನಿಸಲಾಗುತ್ತದೆ.

ಏಕೆಂದರೆ, ಇದು ಕಾದಂಬರಿಗಳ ಸಾಮಾಜಿಕವಲಯದಿಂದ ಕೂಲಂಕಷವಾಗಿ ಎಚ್ಚರಿಕೆಯಿಂದ ಅನುಭವ ಪ್ರಮಾಣದ ಆಧಾರದ ಮೇಲೆ ನಡೆಸಬೇಕಾಗಿರುವ ಅಧ್ಯಯನ. ಆತುರದ ಅನಿರ್ದಿಷ್ಟವಾದ ತೀರ್ಮಾನಗಳಿಗೆ ಎಡೆಯಿರುವುದಿಲ್ಲ.

* ಸಂಪರ್ಕ ಸಂಬಂಧಗಳು ನೇರವೂ, ಸ್ಪಷ್ಟವೂ ಪ್ರಜ್ಞಾಪೂರ್ವಕವೂ ಆಗಿದ್ದಲ್ಲಿ ಮಾತ್ರವೇ ಹೋಲಿಸಿ ನೋಡಬೇಕು; ಆಕಸ್ಮಿಕಗಳಿಗೆ ವಿಶೇಷ ಒತ್ತು ಇರುವುದಿಲ್ಲ.

* ಅತ್ಯಂತ ಖಚಿತವಾದ ಸೂಕ್ಷ್ಮವಾದ ಅಂಶಗಳನ್ನು ಕಲೆಹಾಕುವ ವಿಚಾರಕ್ಕೆ ಒತ್ತು ಇರುತ್ತದೆ.
* ಆಕರ ಶೋಧನೆಯ ಬಗ್ಗೆ ವಿಶೇಷ ಆಸಕ್ತಿ ತೋರಬೇಕು.
* ಸ್ವೀಕಾರಗಳ ಅಧ್ಯಯನಕ್ಕೆ ವಿಶೇಷ ಮಹತ್ವ ಕೊಡಬೇಕು.
* ವಸ್ತು, ಆಶಯ, ಸ್ವರೂಪ ಅಥವಾ ಪ್ರಕಾರಗಳ ಜೊತೆಗೆ ಸನ್ನಿವೇಶಕ್ಕೆ ಮಹತ್ವ ನೀಡಬೇಕು.
* ಸಾದೃಶ್ಯಗಳು, ಆಕಸ್ಮಿಕಗಳು, ವಿಶೇಷಾರ್ಥವನ್ನು ನಿಶ್ಚಿತ ವಿನ್ಯಾಸಗಳನ್ನು ಹೊಂದಿರಬಹುದಾದ್ದರಿಂದ ಅವುಗಳನ್ನು ಆಳವಾಗಿ ಪರಿಶೀಲಿಸಬೇಕು.
* ಆಶಯಗಳ ಸವಿವರ ಅಧ್ಯಯನದ ಬಗೆಗೆ ವಿಶೇಷವಾದ ಒಲವು ಇರುವುದರಿಂದ ಅವುಗಳ ಸ್ವರೂಪ, ವರ್ಗೀಕರಣ, ಸಂಚಲನ, ಪ್ರಭಾವಗಳ ಅಧ್ಯಯನಕ್ಕೆ ಒತ್ತು ಕೊಡುವುದು.
* ಕಾದಂಬರಿ ಸೃಷ್ಟಿಯಲ್ಲಿ ಸಾವಯವ ನಿಯತತೆಯನ್ನು ಅರಸಲು ಪ್ರಯತ್ನಿಸುವುದು.
* ಅಧ್ಯಯನದ ಸೂಕ್ಷ್ಮತೆಯಂತೆಯೇ ವ್ಯಾಪಕತೆಗೆ ಹೆಚ್ಚು ಒತ್ತು ನೀಡುವುದು.

ಈ ಮೇಲಿನ ಎಲ್ಲಾ ತೌಲನಿಕ ಅಧ್ಯಯನದ ಅಂಶಗಳನ್ನು ಮಾನದಂಡವಾಗಿರಿಸಿಕೊಂಡು ಅಧ್ಯಯನ ಮಾಡುವ ಉದ್ದೇಶ ಇದಾಗಿದೆ. ಒಂದೊಂದು ವಿಚಾರದಲ್ಲೂ ಕಂಡುಬರುವ ಬರೆಹಗಾರ್ತಿಯರ ವೈಯಕ್ತಿಕ ಧೋರಣೆಗಳು, ನಿಲುವುಗಳು ಸಾಮಾಜಿಕ ಸಂವೇದನೆಯ ಹಿನ್ನೆಲೆಯಲ್ಲಿ ಹೇಗೆ ಜನಪ್ರಿಯವಾಗಿದೆ ಎಂಬುದನ್ನು ಅಭ್ಯಸಿಸುವ ದೃಷ್ಟಿಯಿಂದ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

"ವಾಸ್ತವದಲ್ಲಿ ಸಂಶೋಧನೆ, ವಿಮರ್ಶೆ, ಚಿಂತನೆ ಇವಕ್ಕೆಲ್ಲ ನಿಗದಿ ಮಾಡಿದ ಮಿತಿಗಳಿವೆ. ಆದರೆ, ಈ ಮಿತಿಗಳು ಮಿಶ್ರವಾಗುತ್ತವೆ. ಮಿತಿಗಳು ಮಿಶ್ರಣವಾಗುವುದೇ ಈಗಿನ ಅಧ್ಯಯನಗಳ ಪ್ರಧಾನ ಲಕ್ಷಣ. ಅದಕ್ಕಾಗಿ ಮೇಲಿನ ಸಮಸ್ತ ಬೌದ್ಧಿಕ ಚಟುವಟಿಕೆಗಳನ್ನು ಒಳಗೊಳ್ಳುವ ವಿಶಾಲ ಪರಿಕಲ್ಪನೆಯಾಗಿ 'ಅಧ್ಯಯನ' ಎಂಬುದನ್ನು ಬಳಸಲಾಗುತ್ತದೆ. ಇದು ಉಚಿತವೂ ಆಗಿದೆ. 'ಅಧ್ಯಯನ' ಎಂದರೆ ಸಾಂಪ್ರದಾಯಿಕ ಅರ್ಥದಲ್ಲಿ ಸಂಶೋಧನೆ ಮಾತ್ರವಲ್ಲ. ಇದರಲ್ಲಿ ಸಾಹಿತ್ಯ ವಿಮರ್ಶೆ, ಸಂಶೋಧನೆ ಹಾಗೂ ಚಿಂತನೆಗಳೂ ಸೇರುತ್ತವೆ. ಪುಸ್ತಕ ವಿಮರ್ಶೆಯೂ ಸೇರುತ್ತದೆ. ಸಾಮಾಜಿಕ ಪದಕೋಶಗಳ ರಚನೆ ಕೂಡ ಸಾಮಾಜಿಕ ಅಧ್ಯಯನದ ಭಾಗವಾಗಿ ನಡೆಯುತ್ತಿದೆ"[9] ಎಂಬ ತಾತ್ವಿಕ ತಿಳಿವಳಿಕೆಯ ಹಿನ್ನೆಲೆಯಲ್ಲಿ ಈ ಅಧ್ಯಯನ ಕೈಗೊಳ್ಳಲಾಗಿದೆ.

ಈ ಇಬ್ಬರು ಕಾದಂಬರಿಗಾರ್ತಿಯರು ಕೌಟುಂಬಿಕ ಮತ್ತು ಸಾಮಾಜಿಕ ಆವರಣದಿಂದ ಬಂದವರಾದರೂ ಅವರವರ ಕಾದಂಬರಿಗಳಲ್ಲಿ ಕಂಡುಬರುವ ಸ್ತ್ರೀಪರ ಕಾಳಜಿ, ಸಾಮಾಜಿಕ ಮನೋಧೋರಣೆ, ಸ್ತ್ರೀಶೋಷಣೆ, ಸ್ತ್ರೀಸಮಾನತೆ, ಸ್ತ್ರೀಪರ ನಿಲುವುಗಳು ಭಿನ್ನವಾಗುವ ಸಾಮ್ಯತೆಯನ್ನು ಪಡೆದುಕೊಳ್ಳುವ ಬಗೆಯನ್ನು ಎಳೆಎಳೆಯಾಗಿ ಅಭ್ಯಸಿಸುವ ಉದ್ದೇಶದಿಂದ ಹರಹನ್ನು ಹಿರಿದುಗೊಳಿಸುತ್ತಾ, ಅಧ್ಯಯನ ಮಾಡಲು ವಿಶ್ಲೇಷಣಾ ವಿಧಾನವನ್ನು ಅನುಸರಿಸಲಾಗಿದೆ.

ಸಮಾಜದ ಪ್ರಕ್ರಿಯೆಗಳಾದ ಸಾಮಾಜಿಕ ರಚನೆ, ವೈವಾಹಿಕ ವ್ಯವಸ್ಥೆ, ಕೌಟುಂಬಿಕ ವ್ಯವಸ್ಥೆ, ಸಾಮಾಜಿಕ ವಿನ್ಯಾಸದ ಪರಿಸ್ಥಿತಿ ಇವರಿಬ್ಬರ ಕಾದಂಬರಿಗಳಲ್ಲಿ ಹೇಗೆ ಸ್ಪಂದಿಸುತ್ತವೆ. ಇರುವ ಪರಸ್ಪರ ಅನ್ಯೋನ್ಯತೆಗಳು ಸಂಕ್ರಿಯಾತ್ಮಕ ರಚನೆಗಳು ಸಾಮಾಜಿಕ ಕಳಕಳಿಯೊಂದಿಗೆ ಹೇಗೆ ಪ್ರತಿಕ್ರಿಯಿಸುತ್ತವೆ. ವಿವಿಧ ಆಯಾಮಗಳ ವ್ಯಾಪ್ತಿಯಲ್ಲಿ ಹೇಗೆ ಸಂವೇದನೆಗೊಳ್ಳುತ್ತವೆ.

ಸ್ತ್ರೀಪರ ಕಾಳಜಿಯನ್ನು ಹೇಗೆ ಅವಲಂಬಿಸಿದೆ ಅವುಗಳ ವ್ಯಾಪ್ತಿ ಎಷ್ಟಿದೆ. ಮಹತ್ವವೇನು ಮುಂತಾಗಿ ಆತ್ಮಾವಲೋಕನ ಮಾಡುವ ಕ್ರಮದಿಂದ ಇವರ ಕಾದಂಬರಿಗಳನ್ನು ಅತ್ಯಂತ ಆಸ್ಥೆಯಿಂದ ಗಮನಿಸಲಾಗಿದೆ. "ಕಾದಂಬರಿಯನ್ನು ಅದರ ಯಾವುದೇ ಒಂದು ರೂಪಕ್ಕೆ ಮಾತ್ರ ಅನ್ವಯಿಸಿದರೆ ಅದರ ಪರಂಪರೆಗೆ ಹಾಗೂ ಚರ್ಚೆಗೆ ಹಾನಿಯುಂಟಾಗುತ್ತದೆ"[೫].

ತೌಲನಿಕ ಸಾಹಿತ್ಯದ ಅಧ್ಯಯನದಲ್ಲಿ ಯಾವುದೋ ಒಂದು ಸಮಾನವಸ್ತು ಅಥವಾ ವಿಷಯ ಅಂತರ್‌ಭಾವವನ್ನು ಆಧರಿಸಿ ವಿವಿಧ ಭಾಷೆಗಳಲ್ಲಿ ಮತ್ತು ವಿವಿಧ ಆ ಕಾಲಘಟ್ಟಗಳಲ್ಲಿ ರಚಿಸಲ್ಪಟ್ಟಿರುವ ಅನೇಕ ಕೃತಿಗಳನ್ನು ಒಂದೆಡೆ ತಂದು ಅವುಗಳನ್ನು ವಿಶ್ಲೇಷಿಸಿ ಅವುಗಳು ಆ ವಸ್ತುವನ್ನು, ವಿಷಯವನ್ನು, ಅಂತರ್‌ಭಾವವನ್ನು ಬೆಳೆಸಿರುವ ಬಗೆಯಲ್ಲಿರುವ ಸಾಮ್ಯ, ವೈಷಮ್ಯಗಳನ್ನು ಗುರುತಿಸಿ, ಅವುಗಳ ಆಧಾರದ ಮೇಲೆ ಆಕೃತಿಗಳು ಸೃಜಿಸಲ್ಪಟ್ಟ ಸಮಾಜ, ಸಂಸ್ಕೃತಿಗಳ ಬಗ್ಗೆ ವ್ಯಾಪಕ ಚಿಂತನೆ ನಡೆಸಲು ಅವಕಾಶವಿರುತ್ತದೆ.

ಉದಾಹರಣೆಗೆ, ವಿವಾಹ, ಕುಟುಂಬ ಮುಂತಾದ ಯಾವುದಾದರೂ ಒಂದು ವಸ್ತುವನ್ನಾಧರಿಸಿ ಅದೇ ವಸ್ತುವನ್ನು ಕೇಂದ್ರವಾಗುಳ್ಳ ವಿವಿಧ ಕೃತಿಗಳನ್ನು ಒಂದೆಡೆ ತರಬಹುದು. ಸಾಮಾಜಿಕ ಸಂಸ್ಥೆಗಳಲ್ಲಿ ಸ್ತ್ರೀಪುರುಷ ಸಂಬಂಧಗಳಲ್ಲಿ ವಿಪರ್ಯಾಯ ಇತ್ಯಾದಿ ಸಮಾನ

ಅಂತರ್‌ಭಾವವನ್ನಾಧರಿಸಿ ಅನೇಕ ಕೃತಿಗಳನ್ನು ತುಲಾನಾತ್ಮಕವಾಗಿ ಅಭ್ಯಸಿಸಬಹುದು. ಇಂತಹ ವಸ್ತು, ವಿಷಯ, ಅಂತರ್‌ಭಾವ ಸಮಾನತೆಯನ್ನಾಧರಿಸಿದ್ದ ತೌಲನಿಕ ಅಧ್ಯಯನದಿಂದ ಎರಡು ನೆಲೆಗಳಲ್ಲಿ ನಮಗೆ ಪ್ರಯೋಜನವಾಗುತ್ತದೆ.

ಸಮಾನ ವಸ್ತುವನ್ನು ವಿವಿಧ ಸಮಾಜಗಳು ನೋಡುವ ಕೋನಗಳು ಬೇರೆಬೇರೆಯಾಗಿರುವುದರಿಂದ, ಆ ವಸ್ತುವಿನ ಸಂಪೂರ್ಣ ಅಥವಾ ಬಹುಮುಖಿ ಅರಿವು ನಮಗೂ ಉಂಟಾಗುತ್ತದೆ. ಹಾಗೆಯೇ ಸಮಾನ ವಸ್ತುವನ್ನು ಭಿನ್ನಭಿನ್ನ ನೆಲೆಗಳಲ್ಲಿ ಸಮಾಜಗಳ ಪ್ರಮುಖ ಸಾಂಸ್ಕೃತಿಕ, ಸಾಮಾಜಿಕ ಕಾಳಜಿಗಳು ನಮ್ಮ ಅರಿವಿಗೆ ಬರುತ್ತವೆ.

ಒಂದು ಸಾಹಿತ್ಯದ ಅಥವಾ ಲೇಖನದ ಪ್ರಭಾವ ಇನ್ನೊಂದು ಸಾಹಿತ್ಯದ ಲೇಖಕನ ಮೇಲೆ ಎಷ್ಟು ಮತ್ತು ಹೇಗೆ ಆಗಿದೆ ಎಂಬುದು ಮತ್ತು ಆ ಪ್ರಭಾವದ ಪರಿಣಾಮಗಳನ್ನು ಗುರುತಿಸುವುದು ಈ ಪ್ರಕಾರದಲ್ಲಿ ಮುಖ್ಯವಾಗುತ್ತದೆ. "ತೌಲನಿಕ ಸಾಹಿತ್ಯ ಅಧ್ಯಯನವೆಂದರೆ, ಮುಖ್ಯವಾಗಿ ಭಿನ್ನಭಿನ್ನ ಲೇಖಕರ ಹಾಗೂ ಸಾಹಿತಿಗಳ ನಡುವೆ ಆಗಿರುವ ಪರಸ್ಪರ ಪ್ರಭಾವದ ಅಧ್ಯಯನ ಮತ್ತು ಆ ಪ್ರಭಾವದ ಪ್ರಸರಣದ ಅಧ್ಯಯನ"[೬].

ಪ್ರಭಾವ ಅಧ್ಯಯನದಲ್ಲಿ ವ್ಯಾವಹಾರಿಕ ಕ್ಷೇತ್ರದಲ್ಲಿ ಸಾಧ್ಯವಿರುವ ಹಾಗೆ ಸಾಹಿತ್ಯಿಕ ಕ್ಷೇತ್ರದಲ್ಲಿ ನೇರ ಹಾಗೂ ಸಂಪೂರ್ಣ ಕೊಂಡುಕೊಳ್ಳುವಿಕೆ ಸಾಧ್ಯವಿಲ್ಲ. ಒಂದು ಸಮಾಜ ತಾನು ಯಾವ ಪ್ರಭಾವವನ್ನು ಸ್ವೀಕರಿಸಲು ಸಿದ್ಧವಿದೆಯೋ ಅದನ್ನು ಮಾತ್ರ ಸ್ವೀಕರಿಸುತ್ತದೆ. ನಿರ್ದಿಷ್ಟವಾಗಿ ಯಾವುದಾದರೊಂದನ್ನು ಇನ್ನೊಂದರಿಂದ ಮತ್ತೆ ಸ್ವೀಕರಿಸುವಾಗಲು ಅದನ್ನು ತನ್ನ ಒತ್ತಡಗಳಿಗೆ ಬೇಕಾದಂತೆ ಮಾರ್ಪಡಿಸಿ ಎಂದರೆ ತನ್ನದಾಗಿಸಿಕೊಂಡು ಸ್ವೀಕರಿಸುತ್ತದೆ.

ಮಹತ್ವ

ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳ ಜನಪ್ರಿಯತೆಗೆ ಕಾರಣ ಅವರು ಆಯ್ಕೆ ಮಾಡಿಕೊಂಡ ವಸ್ತು ಮತ್ತು ಅದನ್ನು ನಿರೂಪಿಸಿರುವ ರೀತಿ. ವಾಸ್ತವ ಬದುಕಿನ ಸುತ್ತ ಹರಡಿಕೊಂಡ ಹಲವು ಸಮಸ್ಯೆಗಳನ್ನು ಎತ್ತಿಕೊಂಡು ಅದಕ್ಕೆ ಕಲಾತ್ಮಕವಾದ ಚೌಕಟ್ಟನ್ನು ಕೊಡುವಲ್ಲಿ ತೋರಿದ ಕೌಶಲ, ಅವರ ಕಾದಂಬರಿಗಳ ಯಶಸ್ಸಿನ ಗುಟ್ಟು, ಅದರಲ್ಲಿಯೂ ಹೆಣ್ಣಿನ ಬಾಳಿನ ಸುತ್ತಮುತ್ತ ಹುಟ್ಟಿದ ಸರಳ ಹಾಗೂ ಸಂಕೀರ್ಣ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ, ಸಂಸಾರದಲ್ಲಿ ತಲೆದೋರುವ ಕಹಿ ಸಿಹಿ ಅನುಭವಗಳನ್ನು ಚಿತ್ರವಾಗಿಸುವ ಅವರ ಕಲೆಗಾರಿಕೆ, ಇದನ್ನೇ ವಸ್ತುವಾಗುಳ್ಳ ತ್ರಿವೇಣಿ, ಆರ್ಯಾಂಬರವರ ಕಾದಂಬರಿಗಳು ಕನ್ನಡ ಕಾದಂಬರಿ ಪ್ರಪಂಚಕ್ಕೆ ನೀಡಿದ ಅಪೂರ್ವ ಕೊಡುಗೆಗಳಾಗಿವೆ.

ಜನಪ್ರಿಯ ಕಾದಂಬರಿಗಳಾಗಿಸಲು ಬಳಸಬೇಕಾದ ತಂತ್ರ ಕೌಶಲ್ಯ, ಕಲೆಗಾರಿಕೆ ಇವುಗಳು ಸಹೋದರಿಯರಿಗೆ ಸಿದ್ಧಿಸಿದ್ದವು. ಬದುಕಿನ ನೋವುನಲಿವು, ಏಳುಬೀಳು, ಪ್ರೀತಿ, ಪ್ರೇಮ, ಪ್ರಣಯ, ಹಾಸ್ಯ ಇತ್ಯಾದಿ ಅಂಶಗಳು ಅವರ ಕಾದಂಬರಿಯಲ್ಲಿ ಯಾವ ಕೃತಕತೆಯ ಸೋಂಕು ತಗುಲದಂತೆ ಕಾಣಿಸಿಕೊಂಡಿದ್ದು, ಅವರುಗಳನ್ನು ಜನಪ್ರಿಯ ಕಾದಂಬರಿಗಾರ್ತಿಯನ್ನಾಗಿಸಲು ಕಾರಣವಾದವು ಎನ್ನಬಹುದು. ಏಕೆಂದರೆ, ತ್ರಿವೇಣಿ ಅವರ ಜಾಯಮಾನಕ್ಕೆ ಹೆಚ್ಚಾಗಿ ಒಗ್ಗಿ ಬಂದಿದ್ದು ಕಾದಂಬರಿಯೇ ಆದರೆ, ಆರ್ಯಾಂಬರು ಅದರಾಚೆಯು ತಮ್ಮ ಬರೆಹದ ವಿಸ್ತಾರವನ್ನು ಸಾಹಿತ್ಯಕ್ಷೇತ್ರಕ್ಕೆ ನೀಡಿದ್ದಾರೆ. ಆದರೂ ತಮ್ಮ ವಿಶಿಷ್ಟ ಕಥನ ಕಲೆಯ ಮೂಲಕ ಇವರ ಮನಸ್ಸನ್ನು ಗೆದ್ದುಕೊಂಡವರು ಓದುಗರ ಸಂಖ್ಯೆಯನ್ನು ಹೆಚ್ಚಿಸಲು ಕಾರಣರಾದರು.

ತ್ರಿವೇಣಿಯವರ ೨೦ ಕಾದಂಬರಿಗಳಲ್ಲಿ **ಬೆಳ್ಳಿಮೋಡ, ಹೂವುಹಣ್ಣು, ಬೆಕ್ಕಿನಕಣ್ಣು, ಶರಪಂಜರ, ಹಣ್ಣೆಲೆಚಿಗುರಿದಾಗ, ಕಂಕಣ** ಕಾದಂಬರಿಗಳು ಆರ್ಯಾಂಬರ ೪೦ ಕಾದಂಬರಿಗಳಲ್ಲಿ **ಎರಡುಮುಖ, ಕಪ್ಪುಬಿಳುಪು, ಸವತಿಯನೆರಳು, ಮರಳಿಗೂಡಿಗೆ** ಕಾದಂಬರಿಗಳು ಚಲನಚಿತ್ರಗಳಾಗುವ ಮೂಲಕ ಅವರ ಜನಪ್ರಿಯತೆಯನ್ನು ಮತ್ತಷ್ಟು ಹೆಚ್ಚಿಸಿದವು.

ಲೇಖಕಿಯರಿಬ್ಬರು ತಮ್ಮ ಸುತ್ತಮುತ್ತಲು ಕಂಡ ಬದುಕನ್ನು ತಮ್ಮ ನೆರೆಹೊರೆಯ ವ್ಯಕ್ತಿಗಳ ನಡತೆ, ಸ್ವಭಾವ, ರೀತಿ ನೀತಿಗಳನ್ನು ಚೆನ್ನಾಗಿ ಅಭ್ಯಸಿಸಿ ತಮ್ಮ ಕೃತಿಗಳಲ್ಲಿ ಕಾಣಿಸಿದ್ದಾರೆ. ಕನ್ನಡದ ಕಾದಂಬರಿ ಪ್ರಪಂಚದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆಂಬುದು ಅವರ ಕಾದಂಬರಿಗಳಿಂದ ಮನವರಿಕೆಯಾಗುತ್ತದೆ. 'ಹೆಣ್ಣು ಏನು ಬರೀತಾಳೆ' ಎಂಬ ತಾತ್ಸಾರದ ಭಾವನೆಗಳಿದ್ದ ಪರಿಸರದಿಂದ ಹೊರಬಂದು ತಮ್ಮ ಬರೆವಣಿಗೆಯ ಮೂಲಕ ಜನಪ್ರಿಯರಾದ ತ್ರಿವೇಣಿ, ಆರ್ಯಾಂಬರು ಮಹಿಳೆಯರಿಗೆ ಗೌರವ ಸ್ಥಾನವನ್ನು ತಂದುಕೊಟ್ಟರು. ತಾವು ಗಳಿಸಿದ ಸೀಮಿತ ಅನುಭವಗಳನ್ನು ಪ್ರಾಮಾಣಿಕವಾಗಿ ಹಾಗೂ ಚೊಕ್ಕವಾಗಿ ತಮ್ಮ ಕೃತಿಗಳಲ್ಲಿ ತೆರೆದಿಟ್ಟರು.

ತಾತ್ವಿಕ ಸ್ವರೂಪ

* ಕೌಟುಂಬಿಕ ತಲ್ಲಣಗಳನ್ನು ಶಕ್ತವಾಗಿ ತೆರೆದಿಡುವ ರಚನೆಗಳು, ಸ್ತ್ರೀನೆಲೆಯಿಂದ ಕೌಟುಂಬಿಕ ಪರಿಸರವು ಉಂಟುಮಾಡುವ ಪರಿಣಾಮವನ್ನು ವಿವಿಧ ಆಯಾಮಗಳಲ್ಲಿ ಇಲ್ಲಿನ ಅಧ್ಯಾಯಗಳು ಬಿಂಬಿಸುತ್ತವೆ.
* ಸ್ತ್ರೀಯರು ತಮ್ಮ ಅಸ್ತಿತ್ವದ ನೆಲೆಯಲ್ಲಿ ಸಾಮಾಜಿಕ ಬದುಕಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ ಸಂದರ್ಭದಲ್ಲಿ ಕುಟುಂಬವು ಅದರ ದುಷ್ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎನ್ನುವ ತೀರ್ಮಾನವನ್ನು ಈ ಕಾದಂಬರಿಗಳ ನಿರೂಪಣೆಯು ಬಿಂಬಿಸುತ್ತವೆ.

* ಕೌಟುಂಬಿಕ ಸಂಘರ್ಷವು ಸ್ತ್ರೀಯರನ್ನು ಕಾಡುವಷ್ಟು ಗಾಢವಾಗಿ ಪುರುಷರನ್ನು ತಟ್ಟುವುದಿಲ್ಲ. ಆಧುನಿಕ ಸಮಾಜದ ಒಳಗೆ ಪುರುಷ ಕುಟುಂಬದ ಆವರಣದೊಳಗೆ ಆಗಂತುಕನಾಗಿಯೇ ಕಂಡುಬರುತ್ತಾನೆ.

* ಸಾಮಾಜೀಕರಣದ ಎಲ್ಲಾ ಬೆಳವಣಿಗೆಯ ಕೌಟುಂಬಿಕ ಆವರಣವನ್ನು ನಿಶ್ಯಕ್ತಗೊಳಿಸುವುದನ್ನು ಈ ಅಧ್ಯಾಯಗಳು ತೆರೆದಿಡುತ್ತವೆ.

* ಸ್ತ್ರೀ ಮಾತ್ರ ಕುಟುಂಬ ವ್ಯವಸ್ಥೆಯನ್ನು ನವೀಕರಿಸುವ ಮರಳಿ ಕಟ್ಟುವ ಮಾತ್ರವಲ್ಲ ಕುಟುಂಬ ಚೌಕಟ್ಟಿಗೆ ಹೊಸತನವನ್ನು ಕಲ್ಪಿಸಲು ಸಾಧ್ಯವೆನ್ನುವ ಅಂಶವನ್ನು ಈ ಕಾದಂಬರಿಗಳ ಆಂತರ್ಯವು ಧ್ವನಿಸುತ್ತದೆ.

* ಸಮಗ್ರವಾಗಿ ಮಹಿಳೆಯರಿಂದ ನಿರ್ಮಿತಿಗೊಂಡ ಕಾದಂಬರಿಗಳು ಸಾಮಾಜೀಕರಣಕ್ಕೆ ತೆರೆದುಕೊಂಡ ಕೌಟುಂಬಿಕ ವಿಪ್ಲವತೆಯನ್ನು ವೈವಾಹಿಕ ನೆಲೆಯಲ್ಲಿ ಅನಾವರಣಗೊಳಿಸುವ ಸಂರಚನೆಗಳಾಗಿವೆ.

ವ್ಯಾಪ್ತಿ

ಆರ್ಯಾಂಬರ ಜೀವನಕ್ಕೆ, ಸಾಹಿತ್ಯ ರಚನೆಗೆ, ಕಾದಂಬರಿ ವಸ್ತುಗಳಿಗೆ ಆದರ್ಶವಾಗಿ ಸ್ಫೂರ್ತಿಯನ್ನು ತುಂಬಿರುವ ವ್ಯಕ್ತಿಗಳು ಅವರ ಬರೆವಣಿಗೆ ಹಾದಿಗೆ ದಿಕ್ಸೂಚಿಗಳು ಹಾಗೂ ಅವರಿಗೆ ಗಾಢವಾಗಿ ಪ್ರಭಾವ ಬೀರಿರುವ ಸಹೋದರಿ ತ್ರಿವೇಣಿ, ಆರ್ಯಾಂಬರ ಸಾತ್ವಿಕ ಕುಟುಂಬದ ಅನುಸಂಧಾನ ಹೀಗೆ ಅವರ ಕಾದಂಬರಿಗಳ ಮೇಲಾಗಿರುವ ಪ್ರೇರಣೆ ಮುಂತಾದ ಅಂಶಗಳನ್ನು ಪ್ರಸ್ತುತ ಪಡಿಸಿದೆ. ಹಾಗೆಯೇ ತ್ರಿವೇಣಿಯವರಿಗೆ ಕೂಡಾ ಸಾಹಿತ್ಯ ಮತ್ತು ಸಾಹಿತ್ಯಿಕ ಸಂವೇದನೆ ಕರಗತವಾಗಿದ್ದವು. ಅವರ ಇಡೀ ಕುಟುಂಬವೇ ಪ್ರಸಿದ್ಧ ಲೇಖಕರ ಹಾಗೂ ವಿದ್ವಾಂಸರ ಹಿನ್ನೆಲೆಯನ್ನು ಹೊಂದಿದ್ದರಿಂದ ಹಾಗೂ ಸದಾ ಸಾಹಿತ್ಯ ಚರ್ಚೆ ವ್ಯಾಖ್ಯಾನಗಳೊಂದಿಗೆ ಬೆಳೆದಿರುವುದರಿಂದ ಅನಾಯಾಸವಾಗಿ ಸಾಹಿತ್ಯ ಕ್ಷೇತ್ರ ಪ್ರವೇಶಿಸಿದ್ದಾರೆ ಎಂಬುದನ್ನು ಅಧ್ಯಯನದಲ್ಲಿ ತಿಳಿಸಿದೆ.

ಆರ್ಯಾಂಬ ಹಾಗೂ ತ್ರಿವೇಣಿಯವರ ಕಾದಂಬರಿಗಳಲ್ಲಿ ಕಂಡುಬರುವ ಸಾಮಾಜಿಕ ಸಂವೇದನೆ ಅನುಭವಜನ್ಯವೋ, ಕಾಲ್ಪನಿಕವೋ ಯಾವ ನೆಲೆಯಲ್ಲಿ ಸಂವೇದನೆ ರೂಪುಗೊಂಡಿದೆ ಅವರ ಒಟ್ಟು ಅಭಿಪ್ರಾಯಗಳೇನು? ಅದನ್ನು ಚಿತ್ರಿಸುವ ಹಿನ್ನೆಲೆಯಲ್ಲಿನ ಕಲಾತ್ಮಕತೆ ಹೇಗೆ ಭಿನ್ನತೆ ಕಂಡಿದೆ? ಅದರ ಸಾರ್ಥಕ್ಯವೇನು? ಅವರ ನಿಲುವೇನು? ನೈಜವೋ, ಆರೋಪಿತವೋ ಇತ್ಯಾದಿ ವಿಚಾರಗಳನ್ನು ಚರ್ಚಿಸಿದೆ. ಒಂದು ವ್ಯಕ್ತಿ ಹುಟ್ಟಿನಿಂದ ಸಾವಿನವರೆಗೆ

ತನ್ನ ವೈಯಕ್ತಿಕ ಹಾಗೂ ಸಾರ್ವಜನಿಕ ಜೀವನದಲ್ಲಿ ಅನುಭವಿಸುವ ಸುಖ ದುಃಖಗಳ ಸಾರವೇ ಬದುಕು. ಹೀಗಿರುವಾಗ ಹೆಣ್ಣಿಗೂ ಒಂದು ಬದುಕಿದೆ. ವ್ಯಕ್ತಿತ್ವವಿದೆ, ಶಕ್ತಿಯಿದೆ ಇತರರಿಗಾಗಿ ತ್ಯಾಗಮಯಿಯಾಗಿ ಬದುಕಿದರೂ ತಾನು ತನ್ನ ಶಕ್ತಿಯನ್ನು ಸಮರ್ಥವಾದ ರೀತಿಯಲ್ಲಿ ಬಳಸಿಕೊಳ್ಳದಿದ್ದರೆ ಈ ನಮ್ಮ ಬದುಕಿಗೆ ಅರ್ಥವಿಲ್ಲ ಎಂಬ ಹೆಣ್ಣಿನ ಧ್ವನಿ ಕಾದಂಬರಿಗಳಲ್ಲಿ ಬಿಂಬಿತವಾಗಿರುವುದನ್ನು ಪ್ರತಿಬಿಂಬಿಸಿದೆ.

ಸಹೋದರಿಯರಿಬ್ಬರ ಸ್ತ್ರೀಪರ ಕಾಳಜಿಯಿಂದ ಬರೆವಣಿಗೆಯ ಮಹಾಪೂರ ಹರಿದಿದೆ. ಒಂದೊಂದು ಪಾತ್ರಗಳು ಸಮಾಜದ ಒಂದೊಂದು ಮುಖಗಳಾಗಿ ಕಂಡುಬರುತ್ತವೆ. ಈ ನಿಟ್ಟಿನಲ್ಲಿ ಅವರ ನಿಲುವುಗಳು ನೈಜವಾಗಿ ಚಿತ್ರಿಸಲ್ಪಟ್ಟಿವೆ. ಸಮಾಜವನ್ನು ಸೂಕ್ಷ್ಮದೃಷ್ಟಿಯಲ್ಲಿ ಗಮನಿಸುವಂತೆ ಮಾಡುತ್ತದೆ. ಆದ್ದರಿಂದ ಅವರ ಬರೆಹಗಳು ಸಾರ್ಥಕತೆಯನ್ನು ಕಂಡುಕೊಂಡಿವೆ. ಮಧ್ಯಮವರ್ಗದ ಸ್ಥಿತಿಗಳೇ ಕಾದಂಬರಿ ವಸ್ತುಗಳು ಸಂಸ್ಕೃತಿಯ ಕುರಿತು ಅಭಿವ್ಯಕ್ತಿಸುವ ಪರಿ ಹಾಗೆಯೇ ಇಬ್ಬರು ಒಂದೇ ಕುಟುಂಬದವರಾದ್ದರಿಂದ ಸಂಪ್ರದಾಯಸ್ಥರೇ, ಆಗಿದ್ದರೂ ದೇವರು ಧರ್ಮಗಳ ವಿಚಾರದಲ್ಲಿ ಕಂಡುಬರುವ ಸ್ವೀಕಾರ ಮನೋಭಾವ ವಿಶಾಲ ನೆಲೆಯಲ್ಲಿ ಚಿತ್ರಿತವಾಗಿದೆ.

ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳಲ್ಲಿ ವೈವಾಹಿಕಸ್ಥಿತಿಯ ಬಗ್ಗೆ ಇರುವ ಮನೋಗುಣ ವಿವಾಹದ ಬಗೆಗೆ ರಾಜಿ ಮನೋಭಾವ, ಸಾಂಪ್ರದಾಯಿಕತೆಗೆ ಶರಣಾಗುವ ಪ್ರಕ್ರಿಯೆ ವೈದಿಕ ಕುಟುಂಬದ ಹಿನ್ನೆಲೆಯಲ್ಲಿ ಬಂದಿರುವ ಇಬ್ಬರಿಗೂ ಈ ದಿಸೆಯಲ್ಲಿ ಸಿಕ್ಕಿರುವ ಕಾದಂಬರಿ ಸ್ವಾತಂತ್ರ್ಯದ ಬಳಕೆಯ ಹಿನ್ನೆಲೆಯಲ್ಲಿ ಸಾಮಾಜಿಕ ವ್ಯವಸ್ಥೆಯ ರಚನೆಯ ವಿವಿಧ ಪರಿಗಳು ಪರಿವರ್ತನೆಗಳು, ವಿವಾಹ ಸಂಸ್ಥೆಗೆ ಸದಸ್ಯರಾಗುವ ಅದಕ್ಕೆ ಸೇರ್ಪಡೆಯಾಗುವ ಅದರ ಸುತ್ತಮುತ್ತ ಚಿತ್ರಿಸಲ್ಪಟ್ಟ ಪಾತ್ರಗಳು ಎಂಬುದನ್ನು ತಿಳಿಸಿದೆ.

ಲೇಖಕಿಯರಿಬ್ಬರ ಕಾದಂಬರಿಗಳಲ್ಲಿ ಕಂಡುಬರುವ ಕೌಟುಂಬಿಕ ರಚನೆ ಅವಿಭಕ್ತ ಕುಟುಂಬವೇ, ವಿಭಕ್ತ ಕುಟುಂಬವೇ ಈ ಸಂದರ್ಭದಲ್ಲಿ ಪುರುಷರ ಪಾಲೆಷ್ಟು, ಸ್ತ್ರೀಪರ ಕಾಳಜಿಯೇನು, ಸ್ತ್ರೀಪುರುಷರ ಪಾತ್ರಗಳರಚನೆ ಕುಟುಂಬರಚನೆಗೆ ಇವರ ಆಧುನಿಕ ಮನೋಧೋರಣೆಗಳು, ಸಾಮಾಜಿಕ ದೃಷ್ಟಿಧೋರಣೆಗಳು, ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ವಿವಾಹ ಹಾಗೂ ಕೌಟುಂಬಿಕ ವ್ಯವಸ್ಥೆ ಏಕಮೇವ ಲಕ್ಷ್ಯವೆಂದು ಪರಿಗಣಿಸಲ್ಪಟ್ಟಿರುವುದರಿಂದ ಸಹೋದರಿಯರ ರಚನೆ ಈ ದಿಸೆಯಲ್ಲಿ ಸಾಗಿರುವ ಹೆಜ್ಜೆಗಳನ್ನು ಗುರುತಿಸಿದೆ.

ಬರೆಹಗಾರ್ತಿಯರ ಕೃತಿಗಳಲ್ಲಿ ಕಾಣಸಿಗುವ ವ್ಯವಸ್ಥೆಯಲ್ಲಿ ಸಾಮಾಜಿಕ ವಿನ್ಯಾಸದ ಪರ ಹಾಗೂ ವಿರೋಧ ವಿಚಾರಗಳು ವ್ಯವಸ್ಥೆಯ ಮಟ್ಟಿಗೆ ಅವರ ಅಭಿಪ್ರಾಯ, ವಿರೋಧದ ಬಗ್ಗೆ ಆಕ್ಷೇಪಣೆ ಹೇಗೆ ಕಂಡು ಬಂದಿದೆ. ಪ್ರತಿಭಟನೆ ಹೇಗೆ ವ್ಯಕ್ತವಾಗಿದೆ. ಸಾಮಾಜಿಕ ಕಾಳಜಿಯ ಬಗೆಗೆ ಅವರ ದಿಟ್ಟ ನಿಲುವುಗಳೇನು ಇತ್ಯಾದಿ ವಿಚಾರಗಳ ಬಗ್ಗೆ ಚಿಕಿತ್ಸಕ ದೃಷ್ಟಿಯಿದೆ. ಸಾಮಾಜಿಕ ಸ್ತರಗಳಿಗೆ ಸೂಕ್ತ ಸಂದರ್ಶನಗಳೊಂದಿಗೆ ವ್ಯವಸ್ಥೆಯ ಮಟ್ಟಿಗಿನ ಅಭಿಪ್ರಾಯಗಳ ಬಗ್ಗೆ ವಿಶದೀಕರಿಸಿದೆ.

ಇಬ್ಬರೂ ಸ್ತ್ರೀಯರೇ ಆಗಿರುವುದರಿಂದ ಸ್ತ್ರೀನಿಲುವುಗಳು, ಧೋರಣೆಗಳು, ವಿಚಾರ, ಸುಳುಹುಗಳು ಕರತಲಾಮಲಕವಾಗಿದೆ. ರಚನೆಗಳು ಸ್ತ್ರೀಕೇಂದ್ರೀತವಾದರೂ, ಭಿನ್ನಭಿನ್ನ ನೆಲೆಯಲ್ಲಿ ನಿಲ್ಲಿಸುತ್ತವೆ. ಸಮಾಜದ ಕನ್ನಡಿಯಂತೆ ಪ್ರತಿಬಿಂಬ ತೋರಿಸುತ್ತದೆ. ಹೆಣ್ಣಿನ ಜೀವನ ಸಾಮಾಜಿಕ ಸ್ತರವಿನ್ಯಾಸದಲ್ಲಿ ಕೆಳಮುಖವಾಗಿಯೇ ಇದೆ ಎಂಬ ಧ್ವನಿ ಇವರ ಕಾದಂಬರಿಗಳಲ್ಲಿದೆ. ಅಲ್ಲದೆ ಸ್ತ್ರೀಚಳುವಳಿಗಳೇ ಕಂಡುಬರದಂತಹ ಕಾಲದಲ್ಲಿ ಕಾದಂಬರಿ ಮುಖೇನ ಸ್ತ್ರೀಚಳುವಳಿಯನ್ನು ವ್ಯವಸ್ಥಿತ ಮಟ್ಟದಲ್ಲಿ ರೂಪಿಸಿದ ಇವರ ಸ್ತ್ರೀಪರ ನಿಲುವು ಕಾಳಜಿಗಳು ಸಮಾಜದ ಹಿನ್ನೆಲೆಯಲ್ಲಿ ಅಸಮಾನತೆಯ ಬೆನ್ನಲ್ಲಿ ಅವರು ಪರಿಸ್ಥಿತಿಗಳನ್ನು ಪ್ರತಿಬಿಂಬಿಸಿರುವ ರೀತಿ ನೀತಿಗಳು ಸ್ತ್ರೀವಾದಿ ಹಿನ್ನೆಲೆಯಲ್ಲಿ ಕಂಡುಬಂದಿದೆ.

ಮೌಲ್ಯ ವ್ಯಕ್ತಿಯ ವೈಯಕ್ತಿಕ, ಸಾಮಾಜಿಕ, ನೈತಿಕ ಇತ್ಯಾದಿ ಆಯಾಮಗಳನ್ನು ರೂಪುಗೊಳಿಸುವಲ್ಲಿ ಪ್ರೇರಕಶಕ್ತಿ, ಇಂತಹ ಹಿನ್ನೆಲೆಯಲ್ಲಿ ಸಾಮಾಜಿಕ ಸಂವೇದನೆಯ ಸ್ಥಿತ್ಯಂತರದ ನಿಟ್ಟಿನಲ್ಲಿ ಮೌಲ್ಯಗಳು ಸ್ವೀಕರಣವೋ, ತಿರಸ್ಕಾರವೋ ಹಾಗಿದ್ದಲ್ಲಿ ಆರ್ಯಾಂಬರ ದೃಷ್ಟಿಯಲ್ಲಿ ಹೊಂದಾಣಿಕೆ ತ್ರಿವೇಣಿಯವರ ದೃಷ್ಟಿಯಲ್ಲಿ ವಿರೋಧ ಹೀಗೆ ವ್ಯಕ್ತಿಗತವಾದ ಜೀವನಮೌಲ್ಯಗಳು ಕಾದಂಬರಿ ವಿನ್ಯಾಸದಲ್ಲಿ ಹೇಗೆ ಪ್ರತಿಬಿಂಬಿತವಾಗಿದೆ. ಮೌಲ್ಯಗಳು ಪರಂಪರಾಗತವಾದರೂ ಅವುಗಳ ಭಿನ್ನ ಅಳವಡಿಕೆಯಲ್ಲಿರುವ ಭಿನ್ನ ಪ್ರಕ್ರಿಯೆ ಮೊದಲಾದವುಗಳನ್ನು ಚಿತ್ರಿಸಲಾಗಿದೆ.

ಕನ್ನಡದಲ್ಲಿ ಸತ್ವಯುತವಾಗಿ ಬರೆಯುತ್ತಲೇ ಜನಪ್ರಿಯತೆಯನ್ನು ಪಡೆದ ಕಾದಂಬರಿಕಾರರ ಒಂದು ಪರಂಪರೆಯಿದೆ. ಕುವೆಂಪು, ಕಾರಂತ, ತ.ರಾಸು, ಭೈರಪ್ಪ ಇವರೆಲ್ಲ ಕನ್ನಡದ ಸತ್ವಯುತ ಕಾದಂಬರಿಕಾರರು. ಜೊತೆಗೆ ಇವರೆಲ್ಲ ಕನ್ನಡದ ಓದುಗರಿಗೆ ಚಿರಪರಿಚಿತರು. ಈ ಸಾಲಿಗೆ ಸೇರುವ ಮತ್ತಿಬ್ಬರು ತ್ರಿವೇಣಿ ಮತ್ತು ಆರ್ಯಾಂಬಪಟ್ಟಾಭಿಯವರು.

ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳನ್ನು ಅಧ್ಯಯನಕ್ಕಾಗಿ ಆರಿಸಿಕೊಂಡಿದ್ದಕ್ಕೆ ಅನೇಕ ಕಾರಣಗಳಿವೆ. ಇಬ್ಬರೂ ಮಹಿಳೆಯರು ಅದರಲ್ಲೂ ಕಬ್ಬಿನ ಜಿಲ್ಲೆ, ಮಧುರ ಮಂಡ್ಯದವರು. ಸಾಹಿತ್ಯ ಜನಪರ, ಜನಪ್ರಿಯವಾಗುತ್ತಿರುವ ಸಂದರ್ಭದಲ್ಲಿ ಬರೆಹಗಳ ಒಡನಾಟದಿಂದ ಸಾಮಾಜಿಕ ಕಾಳಜಿಗಾಗಿ, ಅದರಲ್ಲೂ ಮಹಿಳಾ ಪರವಾದ ನಿಲುವುಗಳಿಂದಾಗಿ ದನಿಯಾದವರು. ಈ ನಿಟ್ಟಿನಲ್ಲಿ ಈ ಪ್ರಬಂಧ ಒಂದು ಪ್ರಯತ್ನವಾಗಿದೆ.

ತ್ರಿವೇಣಿ, ಆರ್ಯಾಂಬರವರ ಕೃತಿಗಳಲ್ಲಿ ಮಹಿಳೆಯರ ಬದುಕನ್ನು ಕುರಿತು ವಿಶ್ಲೇಷಿಸುವ ಮಾನಸಿಕ ಯಾತನೆಯಿಂದ ನರಳುತ್ತಿರುವ ಮಹಿಳೆಯರ ಬಗೆಗೆ ಆಲೋಚನೆಗೆ ಹಚ್ಚುವ ರೀತಿ ಕಂಡುಬರುತ್ತದೆ. ಏಕೆಂದರೆ, "ಜಗತ್ತಿನಲ್ಲಿ ಯಾವುದೇ ಒಳ್ಳೆಯ ಸಾಹಿತ್ಯ ಸೃಷ್ಟಿಯಾಗಿದ್ದರೆ ಅದು ಸಂಘರ್ಷಗಳ ನಡುವೆ ಹುಟ್ಟಿದ ಸಾಹಿತ್ಯವಾಗಿದೆ. ಆದ್ದರಿಂದ ಬದುಕಿನ ಸಂಘರ್ಷದಲ್ಲಿ ಬರೆವಣಿಗೆ ಅನಿವಾರ್ಯವಾದಾಗ ಮಾತ್ರ ಉತ್ತಮ ಸಾಹಿತ್ಯ ಹುಟ್ಟಬಲ್ಲದು. ಈ ಲಕ್ಷಣ ಪ್ರಗತಿಶೀಲರಲ್ಲಿ ಕಾಣಿಸಿ ಬಂಡಾಯದವರೆಗೂ ಬೆಳೆದು ನಿಂತಿದೆ"

ಅಡಿಟಿಪ್ಪಣಿಗಳು

೧. ಉಲ್ಲೇಖ : ಸು.ರಂಗಸ್ವಾಮಿ, ಸಾಹಿತ್ಯ ಶ್ರೀಮಂತಿಕೆಯ ಆರ್ಯಾಂಬ ಪಟ್ಟಾಭಿ, ಉನ್ಮೀಲನ (ಶ್ರೀಮತಿ ಆರ್ಯಾಂಬ ಪಟ್ಟಾಭಿ ಅಭಿನಂದನಾ ಗ್ರಂಥ), ಸಂ. ಪ್ರೊ. ಸ.ನ. ಗಾಯತ್ರಿ ಮತ್ತು ಡಾ.ಎಸ್.ಡಿ. ಶಶಿಕಲಾ, ಸಂವಹನ ಪ್ರಕಾಶನ, ಮೈಸೂರು, ೨೦೦೨, ಪುಟ ೩೩

೨. ಡಾ. ಪ್ರಧಾನ್‌ಗುರುದತ್ತ : ತೌಲನಿಕ ಸಾಹಿತ್ಯ ಒಂದು ವಿವೇಚನೆ, ಸಂ. ಜಿ.ಎಸ್.ಭಟ್ಟ, ಮಹಾಕಾವ್ಯ ಒಂದು ಅವಲೋಕನ, ಪುಟ ೧

೩. ಅದೇ, ಪುಟ ೨

೪. ಡಾ. ಗೀತಾ ಪ್ರಸಾದ್ : ಆಧುನಿಕ ಮಹಿಳಾ ಅಭಿವ್ಯಕ್ತಿ, ಧಾತ್ರಿ ಪುಸ್ತಕ, ಬೆಂಗಳೂರು, ೨೦೦೯, ಪುಟ ೬

೫. ಡಾ. ಜಿ.ಎಸ್.ಅಮೂರ : ಕಾದಂಬರಿಯ ಜಾತಕ, ಸಂ. ಜಿ.ಜನಾರ್ಧನಭಟ್, ಸಾಹಿತ್ಯ ವಿಮರ್ಶೆ, ೨೦೦೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೨, ಪುಟ ೧೧

೬. ಪ್ರೊ. ಸಿ.ಎನ್.ರಾಮಚಂದ್ರನ್ : ತೌಲನಿಕ ಸಾಹಿತ್ಯ ಮತ್ತು ಇತರ ಲೇಖನಗಳು, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು, ೧೯೯೮, ಪುಟ ೧೩

೭. ಡಾ. ವಿಜಯಶ್ರೀ ಸಬರದ, ಅನುಪಮಾ ನಿರಂಜನ ಅವರ ಕಾದಂಬರಿಗಳು, ಒಂದು ಸಾಹಿತ್ಯದ ಅಧ್ಯಯನ, ಡಿವಿಕೆ ಮೂರ್ತಿ, ಮೈಸೂರು, ೧೯೯೪, ಪುಟ XI

ಅಧ್ಯಾಯ ೨

ಪ್ರೇರಣೆ ಮತ್ತು ಪ್ರಭಾವ

ಅಧ್ಯಾಯ ೨

ಪ್ರೇರಣೆ ಮತ್ತು ಪ್ರಭಾವ

"ಅಗತ್ಯತೆಗಳ ಪೂರೈಕೆಗಾಗಿ ವ್ಯಕ್ತಿ ಯಾವುದಾದರೊಂದು ನಿರ್ದಿಷ್ಟ ಗುರಿಯನ್ನು ಆಯ್ದುಕೊಂಡು ಅದನ್ನು ಸಾಧಿಸಲು ನಿರ್ದಿಷ್ಟ ಕಾರ್ಯವಿಧಾನ ಅನುಸರಿಸುವಂತೆ ಮಾಡುವ ಆಂತರಿಕ ಸ್ಥಿತಿಯೇ ಪ್ರೇರಣೆ"[1].

ಪ್ರೇರಣೆ ಎಂಬುದು ಒಂದು ಅಥವಾ ಅದಕ್ಕಿಂತ ಹೆಚ್ಚಿನ ಪರಿಣಾಮ ಉಂಟು ಮಾಡಲು ವ್ಯಕ್ತಿಯನ್ನು ಕ್ರಿಯಾಶೀಲನಾಗುವಂತೆ ಪ್ರಚೋದಿಸುವುದಾಗಿದೆ. ನಿರಂತರ ಚಲನಶೀಲ ಹಾಗೂ ಸಂಕೀರ್ಣ ಪ್ರಕ್ರಿಯೆಯಾಗಿದೆ ಮತ್ತು ಇದು ಪ್ರತಿಯೊಂದು ಜೀವಿಯಲ್ಲಿಯೂ ಕಂಡು ಬರುವ ಒಂದು ಸಾಮಾನ್ಯ ಲಕ್ಷಣವಾಗಿದೆ. ವರ್ತನೆಯನ್ನು ಹುರಿದುಂಬಿಸುವ, ಪೋಷಿಸುವ ಮತ್ತು ನಿರ್ದೇಶಿಸುವ ಸಂಕೀರ್ಣ ಆಂತರಿಕ ಪ್ರಕ್ರಿಯೆಗಳ ಸಂಯೋಜನೆಯಾಗಿದೆ.

ಪ್ರೇರಣೆಯ ಕಾರ್ಯಗಳು

* ವ್ಯಕ್ತಿಯನ್ನು ಕ್ರಿಯೆಯಲ್ಲಿ ತೊಡಗುವಂತೆ ಮಾಡುತ್ತದೆ. ಅದು ವ್ಯಕ್ತಿಯಲ್ಲಿ ಶಕ್ತಿಯನ್ನು ತುಂಬುತ್ತದೆ. ಅಂದರೆ ವ್ಯಕ್ತಿಯಲ್ಲಿ ಆತನಲ್ಲಿರುವ ಶಕ್ತಿಯನ್ನು ಬಿಡುಗಡೆ ಮಾಡಿ ಅವನು ಕ್ರಿಯಾಶೀಲನಾಗುವಂತೆ ಮಾಡುತ್ತದೆ.

* ವ್ಯಕ್ತಿಯ ಕ್ರಿಯೆಯನ್ನು ಅಥವಾ ಚಟುವಟಿಕೆಯನ್ನು ನಿರ್ದೇಶಿಸುತ್ತದೆ. ಅಥವಾ ಅದರಲ್ಲಿ ಆಸಕ್ತಿ ಉಳಿದುಕೊಳ್ಳುವಂತೆ ಮಾಡುತ್ತದೆ. ಗುರಿಯನ್ನು ತಲುಪುವ ಕಾರ್ಯಗತಿಯಲ್ಲಿ ಅವನು ಎಲ್ಲಾ ಸಾಧ್ಯ ಪರ್ಯಾಯಗಳನ್ನು ಪ್ರಯತ್ನಿಸಿ ನೋಡುತ್ತಾನೆ ಮತ್ತು ಅಂತಿಮವಾಗಿ ಸೂಕ್ತವಾದುದನ್ನು ಆಯ್ಕೆ ಮಾಡಿಕೊಳ್ಳುತ್ತಾನೆ.

* ವ್ಯಕ್ತಿಯು ಸಾಧಿಸಲು ರೂಪಿಸಿಕೊಂಡಿರುವ ಗುರಿಯ ಕಡೆ ಕೇಂದ್ರೀಕೃತವಾಗುತ್ತದೆ.

* ಪ್ರೇರಣೆಯು ಆಂತರೀಕವಾಗಿರಬಹುದು ಅಥವಾ ಬಾಹ್ಯವಾಗಿರಬಹುದು.

ಹಾಗೆಯೇ ಒಂದು ವ್ಯಕ್ತಿಯ ಮೇಲೆ ಕುಟುಂಬ, ಪರಿಸರ, ಸಮುದಾಯ, ಸಮಾಜ, ಸಂಸ್ಕೃತಿ, ಆರ್ಥಿಕತೆ, ವ್ಯವಸ್ಥೆ, ಪರಂಪರೆ ಹೀಗೆ ಹತ್ತು ಹಲವಾರು ಅಂಶಗಳು ಪ್ರಭಾವ ಬೀರಬಹುದು.

ಈ ವಿಷಯಗಳನ್ನು ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ಏಕೆ ಪ್ರಸ್ತುತಪಡಿಸಿದೆ ಎಂಬ ತುಟಿಯಂಚಿನ ಪ್ರಶ್ನೆಗೆ ನನ್ನ ಹೃದಯಾಂತರಾಳದ ಉತ್ತರ ಎಂದರೆ, ನಾನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕೃತಿಗಳ ಮಾಲೀಕರು, ಕರ್ತೃಗಳಾದ ಆರ್ಯಾಂಬ ಮತ್ತು ತ್ರಿವೇಣಿಯವರು ಮಾನವ ವರ್ತನೆಯನ್ನು ಮನೋವೈಜ್ಞಾನಿಕತೆಯಿಂದ ಅಭ್ಯಾಸ ಮಾಡಿ ಅದನ್ನೇ ತಮ್ಮ ಸಾಹಿತ್ಯ ಕೃಷಿಗೆ ವಸ್ತುವಾಗಿ ಮಾಡಿಕೊಂಡು ಯಶಸ್ಸನ್ನು ಪಡೆದಿರುವ ಪ್ರಬುದ್ಧೆಯರು. ಹಾಗಾಗಿ ಅವರ ಬರೆವಣಿಗೆಯ ಮೂಸೆಯಲ್ಲಿ **ಎರಡುಮುಖ. ಬೆಕ್ಕಿನಕಣ್ಣು, ದೂರದ ಬೆಟ್ಟ, ಮುಚ್ಚಿದ ಬಾಗಿಲು, ಶರಪಂಜರ**ದಂಥ ಯಶಸ್ವಿ ಕಾದಂಬರಿಗಳು ಮೂಡಿ ಬಂದಿರುವುದು. ಈ ಅಂಶವನ್ನು ಮನದಲ್ಲಿಟ್ಟುಕೊಂಡು ಭಿನ್ನ ದೃಷ್ಟಿಯಲ್ಲಿ ಪರ್ಯಾಲೋಚಿಸಿ ಇದನ್ನು ನಿರೂಪಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಯಾವುದೇ ವ್ಯಕ್ತಿಗಾಗಲೀ ಪ್ರೇರಣೆ ಮತ್ತು ಪ್ರಭಾವಗಳು ಇದ್ದಾಗಲೇ ಅವರಿಗೆ ಸಾಧನೆಯ ಮಾರ್ಗ ಗೋಚರವಾಗುವುದು. ಕೆಲವೊಮ್ಮೆ ನಮ್ಮ ಬದುಕೆ ನಮ್ಮನ್ನು ಪ್ರೇರೇಪಿಸಿ, ಪ್ರಭಾವಿಸಲೂಬಹುದು. ಹೀಗಿರುವಾಗ ಆರ್ಯಾಂಬರವರ ಜೀವನಕ್ಕೆ, ಸಾಹಿತ್ಯಕ್ಕೆ ಆದರ್ಶವಾಗಿ ಸ್ಫೂರ್ತಿಯನ್ನು ತುಂಬಿರುವ ವ್ಯಕ್ತಿಗಳು, ಅವರ ಸಾಹಿತ್ಯ ಪಥಕ್ಕೆ ಮಾರ್ಗದರ್ಶಕರು, ಈ ಹಿನ್ನೆಲೆಯಲ್ಲಿ ಸಹೋದರಿ ತ್ರಿವೇಣಿಯವರ ಪ್ರಭಾವ, ಕುಟುಂಬದ ಅನುಸಂಧಾನ ಹೀಗೆ ಅವರ ಕಾದಂಬರಿಗಳ ಮೇಲಾಗಿರುವ ಪ್ರೇರಣೆಯ ಅಂಶಗಳನ್ನು ಗುರುತಿಸುವ ಪ್ರಯತ್ನವಾಗಿದೆ.

"ಆರ್ಯಾಂಬರ ತಂದೆ ಬಿ.ಎಂ. ಕೃಷ್ಣಸ್ವಾಮಿ, ಬಿ.ಎಂ.ಶ್ರೀ ರವರ ತಮ್ಮ ಮಂಡ್ಯದಲ್ಲಿ ಪ್ರಸಿದ್ಧ ವಕೀಲರು ಹಾಗೂ ಜನಪ್ರಿಯ ವ್ಯಕ್ತಿ. ಅವರ ತಂದೆ ಬೆಳ್ಳೂರು ಮೈಲಾರಯ್ಯ, ತಾಯಿ ಭಾಗೀರಥಮ್ಮ ಅವರು ತೀರಿಕೊಂಡಾಗ ಆರ್ಯಾಂಬ ತುಂಬಾ ಚಿಕ್ಕವರಂತೆ, ಅವರ ನೆನಪು ಸಹ ಇಲ್ಲವಂತೆ ಆ ದಂಪತಿಗಳಿಗೆ ಐದು ಜನ ಮಕ್ಕಳು ಮೂರು ಗಂಡು, ಎರಡು ಹೆಣ್ಣು. ಬಿ.ಎಂ.ಶ್ರೀ ಎಲ್ಲರಿಗಿಂತ ಹಿರಿಯರು. ನಾಲ್ವಡಿ ಒಡೆಯರ್‌ರಿಂದ 'ರಾಜಸೇವಾಸಕ್ತ' ಪ್ರಶಸ್ತಿ ಪಡೆದವರು. ಆರ್ಯಾಂಬರ ತಂದೆ ಎಲ್ಲರಿಗಿಂತ ಕಿರಿಯರು. ಅವರ ತಂದೆ ಅಕ್ಕ ನಂಜಮ್ಮ 'ಹಾಸನದ ಸಮಾಜದ ನಂಜಮ್ಮ' ಎಂದೇ ಸಮಾಜ ಸೇವೆಗಾಗಿ ಪ್ರಸಿದ್ಧರು. ಹಲವಾರು ಸಂಸ್ಥೆಗಳಿಂದ ಸನ್ಮಾನಿತರು. ಆರ್ಯಾಂಬರ ತಂದೆಯ ಕಡೆಯ ಬಂಧುಗಳೆಲ್ಲಾ ವಿದ್ಯಾವಂತರು, ಸುಸಂಸ್ಕೃತರು. ಆಗಿನ ಕಾಲದಲ್ಲಿಯೇ ಅಮೇರಿಕಾದಲ್ಲಿ ವಿಜ್ಞಾನಿಗಳಾಗಿದ್ದರು ಅವರ ದೊಡ್ಡಪ್ಪನ ಮಕ್ಕಳು"[೨].

ಆರ್ಯಾಂಬರ ತಾಯಿ ತಂಗಮ್ಮ, ಅವರ ತಂದೆ ಶ್ರೀರಂಗಪಟ್ಟಣದಲ್ಲಿ ಪ್ರಸಿದ್ಧ ವಕೀಲರು ಹೆಸರು ನರಸಿಂಗರಾಯರು. ಶ್ರೀರಂಗಪಟ್ಟಣದ ಲೆಜಿಸ್ಲೇಟಿವ್ ಅಸೆಂಬ್ಲಿಗೆ ಚುನಾಯಿತರಾಗಿ ಊರಿಗೆ ಅಪಾರ ಸೇವೆ ಸಲ್ಲಿಸಿ, ನಾಲ್ವಡಿ ಕೃಷ್ಣರಾಜ ಒಡೆಯರ್‌ರಿಂದ ಅರಮನೆಯಲ್ಲಿ 'ರಾಜಸೇವಾಸಕ್ತ' ಬಿರುದು ಪಡೆದು ಸನ್ಮಾನಿತರಾದವರು. ತಾಯಿಯ ತಾಯಿ ಲಕ್ಷ್ಮೀದೇವಮ್ಮ ದೈವಭಕ್ತೆ, ವಿದ್ಯಾವಂತೆ. ಆರ್ಯಾಂಬರ ತಾಯಿ ತುಂಬಾ ಜಾಣೆ, ಆ ಕಾಲಕ್ಕೇ ಆಧುನಿಕ ಮೌಲ್ಯಗಳನ್ನು ಅಳವಡಿಸಕೊಂಡು ತುಂಬಾ ಸುಧಾರಿಸಿದ್ದರು. ಹೆಣ್ಣು ಮಕ್ಕಳ ವಿದ್ಯಾಭ್ಯಾಸ, ಆರ್ಥಿಕ ಸ್ವಾತಂತ್ರ್ಯಕ್ಕೆ ತುಂಬಾ ಪ್ರಾಮುಖ್ಯತೆ ಕೊಟ್ಟರು. ಏಳು ಜನ ಮಕ್ಕಳಲ್ಲಿ ಮೂರು ಹೆಣ್ಣು, ನಾಲ್ಕು ಗಂಡು. ಮೂರು ಜನರು ಪದವೀಧರರು. ಮೂಢನಂಬಿಕೆ, ಕುರುಡು ಸಂಪ್ರಾದಾಯಗಳೆಂದರೆ ಅವರು ಸಿಡಿದು ಬೀಳುತ್ತಿದ್ದರು.

"ತಾಯಿ ತಂಗಮ್ಮ ಮಂಡ್ಯದಲ್ಲಿ ತುಂಬಾ ಜನಪ್ರಿಯ ವ್ಯಕ್ತಿ. ಮಂಡ್ಯದಲ್ಲಿ ಮಹಿಳಾ ಸಮಾಜ ಸ್ಥಾಪಿಸಿ ಅದಕ್ಕೊಂದು ಕಟ್ಟಡ ಹೊಂದಲು ನೆರವಾದರು. ಬಹಳ ವರ್ಷ ಸಮಾಜದ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. ಸೊಗಸಾಗಿ ವೀಣೆ ನುಡಿಸುತ್ತಿದ್ದರು. ಇವರೆಲ್ಲರಿಗೆ ಅವರೇ ತಂದೆ ತಾಯಿ, ಗುರು ಮಾರ್ಗದರ್ಶಕರಾಗಿದ್ದರು. ಇವರ ಹವ್ಯಾಸಗಳನ್ನು ತುಂಬಾ ಪ್ರೋತ್ಸಾಹಿಸುತ್ತಿದ್ದರು. ಸಂಸಾರ ಮಕ್ಕಳ ವಿಚಾರವನ್ನೆಲ್ಲಾ ಅವರ ತಾಯಿಗೆ ವಹಿಸಿದ್ದರು. ಅವರ ತಂದೆ ವಕೀಲ ವೃತ್ತಿಯಲ್ಲಿ ನಿರತರಾಗಿದ್ದರು. ಸಹೋದರಿಯರಿಗೆ ಅಂದರೆ ಮಕ್ಕಳಿಗೆ ಬರೆಯಲು ತುಂಬಾ ಉತ್ತೇಜನ ಕೊಟ್ಟರು"[೩].

ಆರ್ಯಾಂಬರಿಗೆ ಕುಟುಂಬದ ಪ್ರಭಾವ ಎಷ್ಟಿತ್ತೆಂದರೆ, ೧೨-೦೩-೧೯೩೬ ರಲ್ಲಿ ಮಂಡ್ಯದ ಅವರ ಮನೆಯಲ್ಲೇ ಹುಟ್ಟಿದ ಆರ್ಯಾಂಬರವರು ಹೆಣ್ಣು ಮಕ್ಕಳಲ್ಲಿ ಕಡೆಯವರಾಗಿ ಇಬ್ಬರು ಅಕ್ಕಂದಿರು, ಇಬ್ಬರು ಅಣ್ಣಂದಿರು ಹಾಗೂ ಇಬ್ಬರು ತಮ್ಮಂದಿರು. ನಾಲ್ಕು ಜನ ಗಂಡು ಮಕ್ಕಳ ನಡುವೆ ಧೈರ್ಯ, ಸಾಹಸದಿಂದ ಬೆಳೆದವರು. ಹುಡುಗರೊಂದಿಗೆ ಆಟ, ಹೊರಗಿನ ವಾತಾವರಣದಲ್ಲೇ ದಿನ ಕಳೆದವರು.

ಹಿರಿಯರಿಂದ ಸಂಪೂರ್ಣ ಸ್ವಾತಂತ್ರ್ಯ, ಮುಕ್ತ ವಾತಾವರಣ, ಎಂಟನೇ ವಯಸ್ಸಿನಲ್ಲಿಯೇ ನಾಟಕಗಳಲ್ಲಿ ಅಭಿನಯಿಸಿದ್ದವರು. ಭಕ್ತ ಪ್ರಹ್ಲಾದ ನಾಟಕದಲ್ಲಿ ಪ್ರಹ್ಲಾದನಾಗಿ, ಶಕುಂತಲಾ ನಾಟಕದಲ್ಲಿ ಶಕುಂತಲೆಯಾಗಿ ಹೀಗೆ ಅನೇಕ ಕನ್ನಡ, ಇಂಗ್ಲಿಷ್ ನಾಟಕಗಳಲ್ಲಿ ನೃತ್ಯಗಳಲ್ಲಿ ಅಭಿನಯಿಸಿದ್ದಾರೆ. 'ಮಲ್ಲಿಮಲ್ಲಿ' ಹಾಸ್ಯ ನಾಟಕದಲ್ಲಿ ಬಜಾರಿ ಹೆಂಡತಿ ಮಲ್ಲಿಯ ಪಾತ್ರದಲ್ಲಿ ಹಲವಾರು ಪ್ರದರ್ಶನಗಳನ್ನು ನೀಡಿ ಪ್ರಸಿದ್ಧರು. ಮಂಡ್ಯದ ಸೆಂಟ್ ಜೋಸೆಫ್ ಕಾನ್ವೆಂಟ್‌ನಲ್ಲಿ ಪ್ರೌಢಶಾಲೆ ವಿದ್ಯಾಭ್ಯಾಸ. ಆಗಿನಿಂದಲೇ ಅಂಚೆ ಚೀಟಿ ಮತ್ತು ನಾಣ್ಯಗಳನ್ನು ಸಂಗ್ರಹಿಸುವ ಹವ್ಯಾಸ. ಈಗಲೂ ಈ ಹವ್ಯಾಸ ಮುಂದುವರಿಸಿದ್ದಾರೆ.

ಅನೇಕ ಹಿರಿಯ ಸಾಹಿತಿಗಳು, ಸಮೀಪ ಬಂಧುಗಳು, ಅವರ ಪುಸ್ತಕಗಳೆಲ್ಲಾ ಮನೆಯಲ್ಲಿದ್ದುದರಿಂದ ಓದುವ ಹವ್ಯಾಸ ಬೆಳೆಸಿಕೊಂಡರು. ಓದುತ್ತಾ ಹೋದಂತೆ ಬರೆಯುವ ಅಪೇಕ್ಷೆ ಮೊದಲಾಯಿತು. ಮೊದಲು ಬರೆದದ್ದು, ಕೆಲವು ಲೇಖನಗಳು, ಕಥೆಗಳು. ಪ್ರೌಢಶಾಲೆ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ಸಣ್ಣಕಥಾ ಸ್ಪರ್ಧೆ ಏರ್ಪಡಿಸಿದ್ದರು. ಅದರಲ್ಲಿ ಆರ್ಯಾಂಬರ ಕಥೆಗೆ (ಬೆಳ್ಳಿಬಟ್ಟಲು) ಮೊದಲನೇ ಬಹುಮಾನ ಸಿಕ್ಕಿತು. ಆಗ ಅವರ ವಯಸ್ಸು ಕೇವಲ ಹದಿನೈದು. ನಂತರ ಕೆಲವು ಕಥೆಗಳನ್ನು ಅದರಲ್ಲೂ ಪತ್ತೇದಾರಿ ಕಥೆಗಳನ್ನು ಬರೆದು ಪೆಟ್ಟಿಗೆಯಲ್ಲಿ ಮುಚ್ಚಿಟ್ಟರು.

ಆರ್ಯಾಂಬರಿಗೆ ಚಿಕ್ಕಂದಿನಿಂದಲೂ ಸಂಗೀತ, ನಾಟಕ, ಕ್ರೀಡೆ ಇತ್ಯಾದಿಗಳಲ್ಲಿ ಆಸಕ್ತಿ, ತಿಟ್ಟೇ ಕೃಷ್ಣಯ್ಯಂಗಾರ್‌ರವರು ಇವರ ಸಂಗೀತ ಗುರುಗಳು. ಹೆಚ್ಚು ಕಲಿಯಲು ಆಗಲಿಲ್ಲ ಎನ್ನುತ್ತಾರೆ. ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ಎರಡು ವರ್ಷ ವ್ಯಾಸಂಗ. ಎರಡು ವರ್ಷವೂ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಥಾಸ್ಪರ್ಧೆಗಳಲ್ಲಿ ಇವರ ಕಥೆಗಳಿಗೆ ಮೊದಲನೆಯ ಬಹುಮಾನ. ಇದರಿಂದ ಪ್ರೋತ್ಸಾಹ ಸಿಕ್ಕಿ ಬರೆವಣಿಗೆ ಮುಂದುವರಿಸಿದರು. ನಾಲ್ಕೈದು ಕಥೆಗಳು ಪ್ರಜಾವಾಣಿ, ತಾಯಿನಾಡು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು.

ಮಹಾರಾಜ ಕಾಲೇಜಿನಲ್ಲಿ ಎರಡು ವರ್ಷ ಮನಶ್ಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ವಿಷಯಗಳನ್ನು ವ್ಯಾಸಂಗ ಮಾಡಿದರು. ಆ ಸಂದರ್ಭಗಳಲ್ಲಿ ನಾಟಕ, ಕಾಲೇಜಿನ ಮನರಂಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಅಷ್ಟೇ ಅಲ್ಲದೆ 'ಸದೃಢ ದೇಹದಲ್ಲಿ ಸದೃಢ ಮನಸ್ಸಿರುತ್ತದೆ' ಎಂಬಂತೆ ಟೆನ್ನಿಸ್, ಟೇಬಲ್ ಟೆನ್ನಿಸ್ ಆಡುತ್ತಿದ್ದರು. ಅಲ್ಲದೆ ಪಂದ್ಯಾಟಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆಯುತ್ತಿದ್ದರು. ಹೀಗೆ ಒಂದು ವರ್ಷ ಮಂಡ್ಯದಿಂದ ಮೈಸೂರಿಗೆ ದಿನವೂ ರೈಲಿನಲ್ಲಿ ವ್ಯಾಸಂಗ ಸಲುವಾಗಿ ಪ್ರಯಾಣ ಮಾಡುತ್ತಿದ್ದರು.

ಒಂದು ವರ್ಷ ಮಹಾರಾಣಿ ಕಾಲೇಜಿನ ಹಾಸ್ಟೆಲ್‌ನಲ್ಲಿದ್ದರು. ಹಾಸ್ಟೆಲಿನ ಜೀವನ, ಎಲ್ಲಾ ಜಾತಿ, ವರ್ಗ, ಸ್ವಭಾವ ವಯಸ್ಸಿನ ಹುಡುಗಿಯರೊಡನೆ ಬೆರೆತು ಬದುಕುವ ವಿಭಿನ್ನ ರೀತಿಯ ಜೀವನ ವೈವಿಧ್ಯಮಯ ಅನುಭವಗಳು ಎಲ್ಲರೊಂದಿಗೆ ಹೊಂದಿ ಬಾಳುವ ಮನೋಧರ್ಮ ನೂರಾರು ಜನ ಹುಡುಗಿಯರ ಬದುಕು, ಸ್ವಭಾವ ಆರ್ಯಾಂಬರ ಬದುಕಿನ ಅನುಭವ ಪ್ರಪಂಚವನ್ನು ವಿಶಾಲಗೊಳಿಸಿತು. ಅವರಲ್ಲಿ ಅನುಭವದ ಬುತ್ತಿ ತುಂಬಿಕೊಂಡಿತು.

"ಕನ್ನಡದ ಅಧ್ಯಾಪಕರ ಪಾಠಪ್ರವಚನಗಳು ಆರ್ಯಾಂಬರಿಗೆ ಕನ್ನಡ ಭಾಷೆ ಸಾಹಿತ್ಯದ ಮೇಲಿದ್ದ ಅಪಾರ ಪ್ರೇಮ, ಅಭಿಮಾನವನ್ನು ಕಣ್ತೆರೆಸಿದವು ಎಂದು ಎಸ್.ವಿ. ಪರಮೇಶ್ವರಭಟ್ಟರು, ವೆಂಕಟರಾಮಪ್ಪ, ದೇಜಗೌ ಮುಂತಾದವರನ್ನು ಗುರುಪರಂಪರೆಯಲ್ಲಿ ನೆನಸುತ್ತಾರೆ"[೪]. ಅಲ್ಲದೆ ಆಗಾಗ್ಗೆ ಮೈಸೂರಿನಲ್ಲಿದ್ದ ಅಜ್ಜಿ ಮನೆಗೆ ಹೋಗುತ್ತಿದ್ದರು. ಅಜ್ಜಿ ಮನೆಯ ಹಿಂಭಾಗದಲ್ಲಿ ತ.ರಾ.ಸು. ಕುಟುಂಬ ವಾಸಿಸುತ್ತಿತ್ತು. ಅವರು ಬರೆದ 'ಹಂಸಗೀತೆ' ಆರ್ಯಾಂಬ ಓದಿದ ಮೊದಲನೆಯ ಕಾದಂಬರಿ. ಆರ್ಯಾಂಬರ ಮನಸ್ಸನ್ನು ಸೂರೆಗೊಂಡಿತು. ಇದು ಕಾದಂಬರಿ ಪ್ರಕಾರ ಆಕರ್ಷಿಸಲು ಕಾರಣವಾಯಿತು.

ಸಂಬಂಧಿಕರ ಪ್ರಭಾವ

ಬಿ.ಎಂ.ಶ್ರೀಯವರು ಆರ್ಯಾಂಬರ ತಂದೆಯ ಅಣ್ಣ, ಅವರು ತೀರಿಕೊಂಡಾಗ ಆರ್ಯಾಂಬರಿಗೆ ಒಂಬತ್ತು ವರ್ಷ. ಅವರು ಜೀವಂತವಾಗಿದ್ದಾಗ ಅವರ ದೊಡ್ಡತನ ತಿಳಿಯದಷ್ಟು ಚಿಕ್ಕವರು. ನಂತರ ಅವರ ಪುಸ್ತಕಗಳನ್ನು ಓದಿದಾಗ ಅವರ ವಿದ್ವತ್ತು ಆರ್ಯಾಂಬರ ಗಮನಕ್ಕೆ ಬಂದಿತ್ತು.

ಅಕ್ಕ ತ್ರಿವೇಣಿಯವರು ಇಂಗ್ಲಿಷ್ ಹಾಗೂ ಕನ್ನಡ ಪುಸ್ತಕಗಳನ್ನು ತುಂಬಾ ಓದುತ್ತಿದ್ದರು. "ಓದು ಈ ಪುಸ್ತಕ ತುಂಬಾ ಚೆನ್ನಾಗಿದೆ"[೫] ಎಂದು ಹೇಳಿ ಪುಸ್ತಕಗಳನ್ನು ಆರ್ಯಾಂಬರವರಿಗೆ ಕೊಡುತ್ತಿದ್ದರು. ಇದರಿಂದ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಯಿತು.

ತ್ರಿವೇಣಿಯವರು ಆರ್ಯಾಂಬರವರಿಗಿಂತ ಹತ್ತು ವರ್ಷ ದೊಡ್ಡವರು. ಬಹಳ ಪ್ರಭಾವ ಬೀರಿದ ವ್ಯಕ್ತಿ. ಅವರಾಗಲೇ ಸಾಕಷ್ಟು ಕಥೆ, ಕಾದಂಬರಿ ಬರೆದು ಜನಪ್ರಿಯತೆ ಸಂಪಾದಿಸಿದ್ದರು. ಸದಾ ಓದುವುದು, ಬರೆಯುವುದು ಅವರಿಗೆ ರೂಢಿಯಾಗಿತ್ತು. ಕೆಲವು ಕಥೆಗಳನ್ನು ಮಾತ್ರ ಬರೆದಿದ್ದ ಆರ್ಯಾಂಬರವರನ್ನು ಕಾದಂಬರಿ ಬರೆಯುವಂತೆ ಪ್ರೋತ್ಸಾಹಿಸಿದರು. ಒಂದು ಕಾದಂಬರಿ ಬರೆದು ಅದರ ಹಸ್ತ ಪ್ರತಿಯನ್ನು ತ್ರಿವೇಣಿಯವರ ಕೈಲಿಟ್ಟಾಗ, ಏನೆನ್ನುವರೊ ಎಂಬ ಹೆದರಿಕೆ. ಹಸ್ತ ಪ್ರತಿ ಓದಿ ಕೆಲವು ಕಡೆ ತಿದ್ದಿ ಸಲಹೆಗಳನ್ನು ಕೊಟ್ಟು ಅದಕ್ಕೆ 'ಹೊಂಗನಸು' ಎಂದು ನಾಮಕರಣ ಮಾಡಿ, ಆ ಪುಸ್ತಕದ ಪ್ರಕಟಣೆಗೂ ನೆರವಾದರು.

ಡಿ.ವಿ.ಕೆ. ಮೂರ್ತಿ ಒಂದೇ ವಾರದಲ್ಲಿ "ಕಾದಂಬರಿ ಲೇಖಕಿಯ ಮೊದಲನೇ ಪ್ರಯತ್ನ ಚೆನ್ನಾಗಿದೆ ಪ್ರಕಟಿಸುತ್ತೇನೆ"[೬]. ಎಂದು ಸಮ್ಮತಿಸಿ ಪ್ರಕಟಿಸಿದರು, ಹೀಗಾಗಿ ೧೯೬೧ ರಲ್ಲಿ ಆರ್ಯಾಂಬರ ಮೊದಲನೇ ಕಾದಂಬರಿ ಪ್ರಕಟವಾಯಿತು. ಆರ್ಯಾಂಬರ ನಾಲ್ಕನೇ ಕಾದಂಬರಿ

'ಎರಡು ಮುಖ' ಮನೋರೋಗಕ್ಕೆ ಸಂಬಂಧಿಸಿದ್ದು, ಆ ಕಾದಂಬರಿ ಪ್ರಕಟವಾಗುವುದರಲ್ಲೇ ತ್ರಿವೇಣಿ ತೀರಿಕೊಂಡರು. ಆ ಕಾದಂಬರಿಯನ್ನು ತ್ರಿವೇಣಿಯವರಿಗೆ ಅರ್ಪಣೆ ಮಾಡಿರುವುದು ಸಮಯೋಚಿತವಾಗಿದೆ.

ಈ ದಿಸೆಯಲ್ಲೇ ಸಹೋದರಿಯ ಬಗ್ಗೆ ಆರ್ಯಾಂಬರ ಗಮನಾರ್ಹ ಮಾತುಗಳು ನಾನು ಬಿ.ಎ. ನಲ್ಲಿ ಮನಶಾಸ್ತ್ರದ ವಿದ್ಯಾರ್ಥಿನಿ, ಆಗ ಮನೋರೋಗಗಳ ಬಗ್ಗೆ ಅಧ್ಯಯನ ಮಾಡುತ್ತಿದ್ದಾಗ Split Personality (ಒಡೆದ ವ್ಯಕ್ತಿತ್ವ) ಎಂಬ ಮನೋರೋಗ ನನ್ನ ಗಮನ ಸೆಳೆದಿದ್ದು, ಅದನ್ನೇ ಕಥಾವಸ್ತುವಾಗಿ ಆಯ್ಕೆ ಮಾಡಿ ಬರೆದ ಕಾದಂಬರಿ 'ಎರಡು ಮುಖ'. ಅದು ನಂತರ ಚಲನಚಿತ್ರವಾಯ್ತು. ರಾಜ್ಯ ಪ್ರಶಸ್ತಿ ಪಡೆಯಿತು. ಇದರಲ್ಲಿ ಅಕ್ಕನ ಪ್ರಭಾವ ನನ್ನ ಮೇಲೆ ಬಹಳವಾಗಿತ್ತು.

ತ್ರಿವೇಣಿ ನನಗೆ ಹಿರಿಯಕ್ಕ ಆದರ್ಶವ್ಯಕ್ತಿ, ಗುರುಕೂಡ ತುಂಬ ಒಳ್ಳೆಯ ಸ್ವಭಾವ ಅನೇಕರ ಬದುಕಿನಲ್ಲಿ ಅವಳು ನೆರವಾಗಿದ್ದಳು. ಮಾರ್ಗದರ್ಶನ ನೀಡಿದ್ದಳು. ಅವಳು ತೀರಿಕೊಂಡಾಗ ಮೂವತ್ತೈದು ವಯಸ್ಸು. "ಅವಳ ಪ್ರೋತ್ಸಾಹವಿಲ್ಲದಿದ್ದಲ್ಲಿ ನಾನು ಸಾಹಿತ್ಯ ಕ್ಷೇತ್ರ ಪ್ರವೇಶಿಸುತ್ತಿರಲಿಲ್ಲವೇನೋ, ಅವಳ ಕೆಲವು ಕಾದಂಬರಿಗಳಲ್ಲಿ ನನ್ನನ್ನು ಚಿತ್ರಿಸಿದ್ದಾಳೆ, ನಾನು ಅವಳ ಪ್ರೀತಿಯ ತಂಗಿಯಾಗಿದ್ದೆ"[2] ಎಂಬಿತ್ಯಾದಿ.

ವಾಣಿಯವರು ಆರ್ಯಾಂಬರ ತಾಯಿಯ ತಂಗಿ. ಆರ್ಯಾಂಬರ ತಾಯಿಗಿಂತ ಎರಡು ವರ್ಷ ಚಿಕ್ಕವರು. ಪ್ರೌಢಶಾಲೆ ಮೆಟ್ಟಲು ಹತ್ತಿದವರಲ್ಲ, ತುಂಬಿದ ಕುಟುಂಬ ಆದರೂ ಬರೆಯುವ ಉತ್ಸಾಹ, ಚಿಕ್ಕಂದಿನಲ್ಲೆ ಕಥೆ, ಕಾದಂಬರಿಗಳನ್ನೆಲ್ಲಾ ಬರೆದರು. ಅವರ ಪುಸ್ತಕಗಳನ್ನೆಲ್ಲಾ ಚಿಕ್ಕಂದಿನಲ್ಲೇ ಓದುವ ಅವಕಾಶ ಆರ್ಯಾಂಬರಿಗೆ ಸಿಕ್ಕಿತ್ತು. ಹಾಗೆಯೇ ರಾಜಲಕ್ಷ್ಮಿ ಎನ್ ರಾವ್ ಬಿ.ಎಂ.ಶ್ರೀಯವರ ಮೊಮ್ಮಗಳು. ಅವರ ಪುಸ್ತಕಗಳೂ ಆರ್ಯಾಂಬರ ಮೇಲೆ ಪ್ರಭಾವ ಬೀರಿದ್ದವು. ಪದವೀಧರಳಾದ ಮೇಲೆ ಒಂದು ವರ್ಷ ಖಾಸಗಿ ಪ್ರೌಢಶಾಲೆಯೊಂದರಲ್ಲಿ ಅಧ್ಯಾಪಕಿಯಾಗಿ ಕೆಲಸ ನಿರ್ವಹಿಸಿದರು.

ಟೆನ್ನಿಸ್, ಟೇಬಲ್ ಟೆನ್ನಿಸ್ ಆಡುತ್ತಿದ್ದರು. ಟೈಪಿಂಗ್, ಶಾರ್ಟ್‌ಹ್ಯಾಂಡ್ ಕಲಿತರು. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದರು. ಸಂಗೀತ ಕಛೇರಿಗಳಿಗೆ ಹೋಗುತ್ತಿದ್ದರು. ಈ ನಡುವೆ ಟೆನಿಸ್ ಆಟವಾಡುತ್ತಿದ್ದಾಗ ಶ್ರೀಪಟ್ಟಾಭಿರಾಮಯ್ಯನವರ ಪರಿಚಯವಾಯ್ತು, ಮದುವೆಯಾಗಲು ನಿಶ್ಚಯಿಸಿದಾಗ ಹಿರಿಯರಿಂದ ಪ್ರತಿಭಟನೆಯಾಗಲಿಲ್ಲ. ಈ ನಡುವೆ ಆರ್ಯಾಂಬರ ತಂದೆ ಇಲ್ಲದಿದ್ದರಿಂದ ತಾಯಿಯವರೇ ಮುಂದೆ ನಿಂತು ಮದುವೆ ಕಾರ್ಯ ನಿರ್ವಹಿಸಿದರು.

ಇಬ್ಬರು ಹೆಣ್ಣುಮಕ್ಕಳು ಪೂರ್ಣಿಮ, ಸಹನ ತುಂಬು ಕುಟುಂಬ, ಚಿಕ್ಕ ಕುಟುಂಬ, ಸುಖೀ ಕುಟುಂಬ ಅವರೇ ಹೇಳುವಂತೆ ವಯಸ್ಸಿನಲ್ಲೇ ಕಥೆಗಳನ್ನು ಬರೆಯುವುದರ ಮೂಲಕ ಸಾಹಿತ್ಯ ಕ್ಷೇತ್ರ ಪ್ರವೇಶ. ವಿವಾಹವಾದ ಮೇಲೆ ಬರೆದದ್ದು, ಮೊದಲನೆಯ ಕಾದಂಬರಿ 'ಹೊಂಗನಸು'. "ಇಬ್ಬರೇ ಮಕ್ಕಳು ಮನೆಗೆಲಸದ ಹೊರೆಯಿಲ್ಲ, ಮನೆಯಲ್ಲಿ ಶಾಂತವಾದ ವಾತಾವರಣ, ಅಕ್ಕನ ಪ್ರೋತ್ಸಾಹ ಮಾರ್ಗದರ್ಶನ ನನ್ನ ಸಾಹಿತ್ಯ ಜೀವನ ಮುಂದುವರಿಯಿತು. ವರ್ಷಕ್ಕೊಂದು ಕೃತಿ ಬರೆದೆ" ಎನ್ನುವಂಥವು.

ಅಂತೆಯೇ ಅನುಭವಗಳ ಅಭಿವ್ಯಕ್ತಿ, ಸಮಾಜದ ಸುಧಾರಣೆ, ಮಹಿಳಾ ಸಮಸ್ಯೆಗಳಿಗೆ ಪ್ರಾಮುಖ್ಯತೆ ಮೂಢನಂಬಿಕೆ ಅರ್ಥಹೀನ ಮೌಲ್ಯಗಳ ಪ್ರತಿಭಟನೆ, ಕಂಡದ್ದು, ಕೇಳಿದ್ದು, ನಡೆದ ಘಟನೆಗಳ ಆಧಾರದಲ್ಲಿ ಬರೆವಣಿಗೆ, ಮಾನವೀಯ ಮೌಲ್ಯಗಳಿಗೆ ಸಾಮಾಜಿಕ ಸಮಸ್ಯೆಗಳಿಗೆ, ಒಂಟಿತನದ ಶೋಧನೆಗೆ ಮಾನಸಿಕ ತುಮುಲಗಳಿಗೆ, ಮಹಿಳೆಯರ ಸಂವೇದನೆಗಳಿಗೆ ಪ್ರಾಮುಖ್ಯತೆ, ಸಾಹಿತ್ಯ ಸಮಾಜದ ಕೇವಲ ಪ್ರತಿಬಿಂಬವಲ್ಲ. ಇರುವ, ಇರಬೇಕಾದ, ಇರಬಹುದಾದ ಸಮಾಜವನ್ನು ಅದು ಚಿತ್ರಿಸಬೇಕು.

ಮಾನವೀಯ ಮೌಲ್ಯಗಳ ಬೆಳವಣಿಗೆ ಸಾಹಿತ್ಯದ ಗುರಿ ಬದುಕಿನಲ್ಲಿ ಉತ್ಸಾಹ, ಪ್ರೀತಿ, ಆಹಾರ, ಉಡುಪು ಸಮಾರಂಭಗಳಲ್ಲಿ ಭಾಗವಹಿಸುವಿಕೆ, ಓದು, ಬರೆವಣಿಗೆ ಪ್ರತಿಯೊಂದರಲ್ಲೂ ಆಸಕ್ತಿ. ಹೀಗೆ ಹತ್ತು ಹಲವಾರು ಚಟುವಟಕೆಗಳಲ್ಲಿ ಭಾಗಿಯಾಗಿ ಕ್ರಿಯಾಶೀಲವಾಗಿರುವ ಆರ್ಯಾಂಬರ ಮೇಲೆ ಅತಿ ಹೆಚ್ಚು ಪ್ರಭಾವ ಬೀರಿದ ವ್ಯಕ್ತಿಗಳೆಂದರೆ, ತಾಯಿ, ಅಕ್ಕ, ಮಂಡ್ಯದಲ್ಲಿ ಓದುತ್ತಿದ್ದಾಗ ಕನ್ನಡ ಭಾಷೆಯಲ್ಲಿ ಅಭಿಮಾನ ಮೂಡಿಸಿದ ಕನ್ನಡದ ಅಧ್ಯಾಪಕರು, ನಂತರ ಕಾಲೇಜಿನಲ್ಲಿ ಕೆಲವು ಅಧ್ಯಾಪಕರು, ಕೆಲವು ಹಿರಿಯ ಸಾಹಿತಿಗಳು.

ಇವೆಲ್ಲಕ್ಕೂ ಕಳಶವಿಟ್ಟಂತೆ ವಾಣಿಯವರು ಆರ್ಯಾಂಬರ ತಾಯಿಯ ತಂಗಿ ಪ್ರೌಢಶಾಲೆ ಮೆಟ್ಟಿಲು ಹತ್ತದೆ ಬರೆಯುವ ಉತ್ಸಾಹ ಬೆಳೆಸಿಕೊಂಡು ಚಿಕ್ಕಂದಿನಿಂದಲೇ ಹಲವಾರು ಕಾದಂಬರಿಗಳನ್ನು ಬರೆದಿದ್ದರು. ಅಲ್ಲದೆ ರಾಜಲಕ್ಷ್ಮಿ ಎನ್.ರಾವ್, ಬಿ.ಎಂ.ಶ್ರೀ ಮೊಮ್ಮಗಳು ಇವರ ಕಾದಂಬರಿಗಳ ಪ್ರಭಾವ ಬೀರಿದವು. ಅಶ್ವತ್ಥರು ಇವರ ಸಂಬಂಧಿ ಇವರ ಕಾದಂಬರಿಗಳಿಂದಲೂ ಪ್ರಭಾವಿತರಾಗಿದ್ದಾರೆ.

ಹೀಗೆ ಚಿಕ್ಕಂದಿನಿಂದಲೇ ಇವರಿಗೆ ಒಳ್ಳೆಯ ವಾತಾವರಣ, ಸಾಕಷ್ಟು ಪ್ರೋತ್ಸಾಹ, ವಿದ್ಯೆ, ಸಹಕಾರ, ಅವಕಾಶ ಹಿರಿಯರ ಶ್ರೀರಕ್ಷೆ ದೊರಕಿದುದರಿಂದ ಬರೆಯಲು ತೊಡಗಿದರು. ಬರೆವಣಿಗೆಯನ್ನು ಮೈಗೂಡಿಸಿಕೊಂಡರು, ಅಲ್ಲದೆ ಇವರನ್ನು ಕೈಹಿಡಿದ ಪತಿ ಶ್ರೀ ಪಟ್ಟಾಭಿರಾಮಯ್ಯರವರು ಕ್ರೀಡಾಕ್ಷೇತ್ರದಲ್ಲಿ ಅಂದರೆ ಟೆನಿಸ್ ಕ್ರೀಡೆಯಲ್ಲಿ ಒಳ್ಳೆಯ ಆಟಗಾರರು. ಸಮಾಜಶಾಸ್ತ್ರದ ಉಪನ್ಯಾಸಕರಾಗಿ ಆರ್ಯಾಂಬರನ್ನು ಹುರಿದುಂಬಿಸಿ ಪ್ರೋತ್ಸಾಹಿಸಿದ್ದಾರೆ. ಹಾಗೆಯೇ ಮಕ್ಕಳಾದ ಸಹನ, ಪೂರ್ಣಿಮಾ ಕೂಡಾ ತಾಯಿಗೆ ಬೆಂಗಾವಲಾಗಿದ್ದಾರೆ. ಅಂದರೆ ಇಡೀ ಕುಟುಂಬವೇ ಇವರು ಸಾಹಿತ್ಯಿಕ ಕ್ಷೇತ್ರದಲ್ಲಿ ಕೃಷಿ ಮಾಡಲು ಸಹಕರಿಸಿದೆ.

ಕೃತಿಗಳ ರಚನೆಗೆ ಪ್ರೇರಣೆ

ಹೊಂಗನಸು : ನಡೆದ ಘಟನೆಯ ಆಧಾರಿತ – ಪ್ರಥಮ ಕೃತಿ

ಆರಾಧನೆ : ಪ್ರಿಯಸಂಗಮ, ಕಣ್ಣೆದುರಿಗೆ ನಡೆದ ಕಥೆ

ಎರಡು ಮುಖ : ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದಾಗ ಮನಶಾಸ್ತ್ರದ ವಿದ್ಯಾರ್ಥಿ Split personality ಎಂಬ ಮನೋರೋಗ ಇವರ ಗಮನ ಸೆಳೆದು ಅದರ ಬಗ್ಗೆ ಸಾಮಾನ್ಯರಿಗೆ ಪರಿಚಯ ಮಾಡಿಕೊಡುವ ಉದ್ದೇಶದಿಂದ ಬರೆದದ್ದು, ಕಾದಂಬರಿಗೆ ಪ್ರೇರಣೆ ಮನಶಾಸ್ತ್ರದ ಅಧ್ಯಾಪಕರು ಮನೋರೋಗದ ಬಗ್ಗೆ ಪಾಠ ಮಾಡುವಾಗ ಹೇಳಿದ ಒಂದು ನಡೆದ ಕಥೆ.

ಈ ರೋಗಕ್ಕೆ ಸಿಲುಕಿ ನರಳುತ್ತಿದ್ದ ಇವರ ಸಮೀಪ ಬಂಧುವನ್ನು ಪ್ರತ್ಯಕ್ಷವಾಗಿ ಕಂಡದ್ದು (ಹದಿನಾರು ವರ್ಷದ ಹುಡುಗಿ). ಎರಡು ವಿಭಿನ್ನ ರೀತಿಯ ಒಂದೊಕ್ಕೊಂದು ಸಂಬಂಧವಿಲ್ಲದಂಥ ನಡೆವಳಿಕೆಯನ್ನು ವ್ಯಕ್ತಪಡಿಸುತ್ತಿದ್ದಳು. ಅದರಿಂದ ಲೇಖಕಿಗಾದ ವಿಶಿಷ್ಟ ಅನುಭವ.

ಬೀಸಿದ ಬಲೆ : 'Parent Trap' ಎನ್ನುವ ಇಂಗ್ಲಿಷ್ ಕಾದಂಬರಿ ಆಧಾರಿತ. ಮಕ್ಕಳೇ ದೂರವಾಗಿದ್ದ ತಂದೆ ತಾಯಿಯರನ್ನು ಒಂದುಗೂಡಿಸುವ ಕಥೆ

ಸವತಿಯ ನೆರಳು : 'Rebecca' ಇಂಗ್ಲೀಷ್ ಕಾದಂಬರಿ ಆಧಾರಿತ ಸಹೋದರಿ ತ್ರಿವೇಣಿಯವರು ಹತ್ತು ಹಲವಾರು ಇಂಗ್ಲೀಷ್ ಪುಸ್ತಕಗಳನ್ನು, ಕಾದಂಬರಿಗಳನ್ನು ಓದುತ್ತಿದ್ದುದರಿಂದ ಹಾಗೆಯೇ ಈ ಪುಸ್ತಕ ಚೆನ್ನಾಗಿದೆ ಓದು ಆರ್ಯಾಂಬರಿಗೆ ನೀಡುತ್ತಿದ್ದುದರಿಂದ ಆ ಪ್ರಭಾವ ಈ ಕಾದಂಬರಿಗಳ ಮೇಲಾಗಿದೆ.

ಬದುಕಿನ ಬವಣೆಯಲ್ಲಿ : ನಂಜನಗೂಡಿನಲ್ಲಿದ್ದ ೭೫ ವರ್ಷದ ಮುದುಕಿಯೊಬ್ಬರು ಆರ್ಯಾಂಬರ ಮನೆಗೆ ಬಂದು ಅವರ ಕಥೆ ಹೇಳಿ ಬರೆಸಿದ ಕಾದಂಬರಿ. ಅವರ ಸುದೀರ್ಘ ಹಾಗೂ ವಿಶಿಷ್ಟ ಅನುಭವಗಳ ಸರಮಾಲೆಯೇ ಈ ಕಾದಂಬರಿಗೆ ಪ್ರೇರಣೆ.

ಕಪ್ಪು ಬಿಳುಪು : ನಡೆದ ಕಥೆ ಗುಣಾವಗುಣಗಳ ಪರಾಮರ್ಶೆ, ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲಿ ಚಲನಚಿತ್ರವಾಗಿದೆ. ತೆಲುಗು ಚಿತ್ರ 'ಇದ್ದರು ಅಮ್ಮಾಯಲು' ಆಂಧ್ರಪ್ರದೇಶದ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದಿದೆ.

ಆ ಹಾಡು : ಟೀ ತೋಟದ ದಿನಗೂಲಿಗಳ ಹಾಗೂ ಮಾಲೀಕರ ಬದುಕು. ನೋವು ನಲಿವುಗಳು, ಸಂಘರ್ಷದ ಕಥಾವಸ್ತು.

ಮರಳಿಗೂಡಿಗೆ : ಕುಷ್ಠರೋಗಕ್ಕೆ ಸಂಬಂಧಿಸಿದ ಕಥೆ, ಬರೆಯುವುದಕ್ಕೆ ಮೊದಲು ಕುಷ್ಠರೋಗಲಾಯಗಳಿಗೆ ಭೇಟಿನೀಡಿ, ವೈದ್ಯರಿಂದ ರೋಗದ ಬಗ್ಗೆ, ಚಿಕಿತ್ಸೆ ಕುರಿತು ಮಾಹಿತಿ ಸಂಗ್ರಹಿಸಿ. ಕುಷ್ಠರೋಗಿಗಳನ್ನು ಸಮಾಜ ಯಾವ ರೀತಿ ಬಹಿಷ್ಕರಿಸಿದೆ, ದೂರವಿಟ್ಟಿದೆ ಎಂಬುದನ್ನು ಕಣ್ಣಾರೆ ಕಂಡು ತಿಳಿದು, ಮನಸ್ಸಿಗಾದ ಆಘಾತ, ನೋವುಗಳ ನಡುವೆ ಬರೆದ ಕಾದಂಬರಿಯಾಗಿದೆ.

ಅತ್ತು ನಗಿಸಿದಾಗ : ಸರ್ಕಸ್ ಕಾರ್ಮಿಕರ ಬದುಕಿನ ಚಿತ್ರಣ. ಕತ್ತಲಾದ ಮೇಲೆ ದೀಪದ ಬೆಳಕಿನಲ್ಲಿ ಸರ್ಕಸ್ ನೋಡಿ ಸಂತೋಷ ಪಡುತ್ತೇವೆ. ಆದರೆ, ಅವರ ಬದುಕಿನ ಸಮಸ್ಯೆಗಳ ಬಗ್ಗೆ, ಕಷ್ಟ–ನಷ್ಟಗಳ ಬಗ್ಗೆ ಯಾರೂ ಚಿಂತಿಸುವುದಿಲ್ಲ. ಜನರನ್ನು ನಗಿಸುವ ಬಫೂನ್ ಕಾದಂಬರಿಯ ನಾಯಕ. ನಿಜಜೀವನದಲ್ಲಿ ಆತ ದುಃಖಿ. ಎದೆತುಂಬ ನೋವು ಸಂಕಟವಿದ್ದರೂ ಅವೆಲ್ಲವನೂ ಮರೆತು ಜನರನ್ನು ನಗಿಸುತ್ತಾನೆ.

ಬೆಳಗಿನ ಹೊತ್ತು ಸರ್ಕಸ್ ಜನರ ಬದುಕು ಕಂಡಾಗ ಆದ ಅನುಭವ ಅಪಾರ. ಅನುಮತಿ ಪಡೆದು ಸರ್ಕಸ್‌ರವರ ಬದುಕನ್ನು ಕಣ್ಣಾರೆ ಕಾಣಲು ಬೆಳಿಗ್ಗೆ ಹತ್ತು ಗಂಟೆಗೆ ಸರ್ಕಸ್‌ಗೆ ಹೋದೆ (ಅಲ್ಲೇ ಹಿಂಭಾಗದಲ್ಲಿ ಅವರ ವಾಸ, ಗಂಡ, ಹೆಂಡತಿ, ಮಕ್ಕಳು ಎಲ್ಲರೂ ಸರ್ಕಸ್‌ನಲ್ಲಿ ದುಡಿಯುವವರೇ, ಕೆಲವರನ್ನು ಭೇಟಿ ಮಾಡಿದಾಗ ಅವರ ನೋವು, ಕಷ್ಟ ನಷ್ಟಗಳು ಅರಿವಾಯಿತು.

ಅದರಲ್ಲೂ ಬಫೂನ್ ಪಾತ್ರಧಾರಿಯ ನೋವಿನ ಕಥೆ ನನ್ನ ಗಮನ ಸೆಳೆಯಿತು. ಒಬ್ಬ ಬಫೂನ್‌ನ ಕಥೆಯನ್ನು 'ಅತ್ತು ನಗಿಸಿದಾಗ' ಕಾದಂಬರಿಯಲ್ಲಿ ಬರೆದಿರುವುದು) ಸರ್ಕಸ್ ನೋಡಲು ಬೆಳಿಗ್ಗೆ ಹೋದಾಗ ಅದರ ಮ್ಯಾನೇಜರ್ ನನಗೆ ಅನುಮತಿ ಮೊದಲು ನೀಡಲಿಲ್ಲ. ನಂತರ ಇವರು ಹೋಗಿರುವ ಉದ್ದೇಶ ತಿಳಿಸಿದ ಮೇಲೆ ಅನುಮತಿ ನೀಡಿ ಅವರೇ ಸರ್ಕಸ್‌ನ ಕಾರ್ಮಿಕರ ಪರಿಚಯ ಮಾಡಿಸಿ, ಅವರ ನಿವಾಸ ಸ್ಥಾನಕ್ಕೆ ಕರೆದೊಯ್ದು ವಿವರಿಸಿದರು.

ಪರಂಪರೆ : ತಾತ, ತಂದೆ, ಮಗ, ಮೂರು ಜನಾಂಗದ ಹೋಲಿಕೆ ವ್ಯತ್ಯಾಸ, Compartive study of three generations. ಆರ್ಯಾಂಬರವರ ತಾತನವರ ಕಥೆ (ತಾಯಿಯ ತಂದೆ), ನರಸಿಂಗರಾಯರು.

ಕಸ್ತೂರಿ : ಘಟನೆಯೊಂದರ ಆಧಾರಿತ ಕಾದಂಬರಿಯಾಗಿದೆ.

ಪ್ರೇಮಕಥೆ : The Influence of bad books on youth.

ಅಸಂಗತ : ಒಬ್ಬ ವ್ಯಕ್ತಿ, ಅದರಲ್ಲೂ ಮಹಿಳೆ ಗಂಡ, ಮಕ್ಕಳು ಯಾರಿಂದಲೂ ಏನನ್ನೂ ಕೊನೆಗೆ ಪ್ರೀತಿ ರಕ್ಷಣೆಯನ್ನು ನಿರೀಕ್ಷಿಸಬಾರದು. ಬದುಕು ಬಂದಂತೆ ತೆಗೆದುಕೊಳ್ಳಬೇಕು. ಪ್ರತಿಫಲಾಪೇಕ್ಷೆಯಿಟ್ಟುಕೊಳ್ಳಬಾರದು. ಇಲ್ಲದಿದ್ದರೆ ನೋವು, ನಿರಾಶೆ ಕಟ್ಟಿಟ್ಟ ಬುತ್ತಿ ಎನ್ನುವ ಸಂದೇಶ ನೀಡುವ ಕಾದಂಬರಿಯಾಗಿದೆ.

ಕಾಮನ ಬಿಲ್ಲು : Problems of working women ಕೆಲವು ಉದ್ಯೋಗಸ್ಥ ವಿವಾಹಿತ ಮಹಿಳೆಯರನ್ನು ಸಂದರ್ಶಿಸಿ ಬರೆದ ಕಾದಂಬರಿ. ಉದ್ಯೋಗಸ್ಥ ವಿವಾಹಿತ ಕೆಲವು ಮಹಿಳೆಯವರನ್ನು ಆರ್ಯಾಂಬರವರು ಸಂದರ್ಶಿಸಿದಾಗ ಅವರಿಗಾದ ಅನುಭವ ತುಂಬಾ ಅನಿರೀಕ್ಷಿತ.

ಉದ್ಯೋಗಸ್ಥ ಮಹಿಳೆಯರು ಆರ್ಥಿಕವಾಗಿ ಸ್ವತಂತ್ರರು. ಕೈತುಂಬಾ ಹಣ ಸಂಪಾದಿಸುತ್ತಾರೆ. ತಾವು ಸಂಪಾದಿಸಿದ ಹಣ ತಮಗೆ ಬೇಕೆಂದಂತೆ ಖರ್ಚು ಮಾಡುತ್ತಾರೆ. ಹಣಕ್ಕಾಗಿ ಗಂಡನ ಮುಂದೆ ಕೈ ಚಾಚಬೇಕಾಗಿಲ್ಲ. ಸುಖಿಗಳು ಎಂದೆಲ್ಲ ತಿಳಿದಿದ್ದ ಆರ್ಯಾಂಬರ ಭ್ರಮೆ ಅವರನ್ನು ಸಂದರ್ಶಿಸಿದಾಗ ತಿಳಿಯಿತು. "ಸಂಸಾರ, ಉದ್ಯೋಗ ಈ ಎರಡೂ ಕ್ಷೇತ್ರಗಳಲ್ಲಿ ಯಶಸ್ಸು ಪಡೆದು ಸಂತೋಷದಿಂದ ಬದುಕುವ ಮಹಿಳೆಯರು ಅತೀ ವಿರಳ ಎನ್ನಿಸಿತು ಈ ಅಂಶವೇ ಕಾದಂಬರಿಗೆ ಪ್ರೇರಣೆಯಾಯಿತು".

ವಿಶ್ವಧರ್ಮ : ಕಥಾನಾಯಕಿಯ ತಾಯಿ ಮನೆಗೆ ಬಂದು ಮಗಳ ಮದುವೆಯ ಬಗ್ಗೆ ತಿಳಿಸಿ ಕಾದಂಬರಿ ಬರೆಯುವಂತೆ ವಿನಂತಿಸಿಕೊಂಡರು. ಹಿಂದೂ ಮುಸ್ಲಿಂ ವಿವಾಹ ಅದರ ಪರಿಣಾಮ (ನಡೆದ ಕಥೆ) ಮುಸ್ಲಿಂ ವಿವಾಹ ಕಾನೂನು (ಈ ವಿಷಯಕ್ಕೆ ಸಂಬಂಧಿಸಿದ ಅನೇಕ ಕಾದಂಬರಿಯ ಕಥಾವಸ್ತು ಪುಸ್ತಕಗಳನ್ನು ಓದಿದರು) ಕಥಾವಸ್ತುವಿನ ಸವಾಲು ಈ ಕಾದಂಬರಿಯನ್ನು ರಚಿಸಲು ಪ್ರೇರಣೆಯಾಗಿದೆ.

ಅಪೂರ್ವ ಕಥೆ : ಸಂಪೂರ್ಣವಾಗಿ ಮೈಸೂರಿನಲ್ಲಿ ನಡೆದ ಕಥೆ ಕಥಾ ನಾಯಕಿ ಕಥೆ ಹೇಳಿ ಬರೆಯಲು ಪ್ರೇರೇಪಿಸಿದರು.

ಪ್ರಕೃತಿ ಪುರುಷ : ನಡೆದ ಘಟನೆ ಕಾದಂಬರಿಗೆ ಆಧಾರ.

ಬಸವಿ : ಮಹಿಳಾ ಸಮಸ್ಯೆಗಳ ಬಗ್ಗೆ ಆಸಕ್ತಿ ವಹಿಸಿರುವ ಆರ್ಯಾಂಬರು 'ದೇವದಾಸಿ' ಕುರಿತು ಬರೆದ ಕಾದಂಬರಿ 'ಬಸವಿ' ಆ ಪದ್ಧತಿಗೆ ಕಾರಣಗಳೇನು? ಬಸವಿ ಬಿಡುವುದು ಯಾತಕ್ಕೆ, ಹೇಗೆ? ಈ ಪದ್ಧತಿ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಕಾದಂಬರಿ. ಬೆಳಗಾಂ, ಹುಬ್ಬಳ್ಳಿ ಕಡೆಗಳಲೆಲ್ಲಾ ಸಂಚರಿಸಿ, ಕೆಲವು ಹಿರಿಯ ದೇವದಾಸಿಯರನ್ನು ಸಂದರ್ಶಿಸಿ ಧರ್ಮ, ಜಾತಿಯ ಹೆಸರಿನಲ್ಲಿ ಈ ಪದ್ಧತಿಯಲ್ಲಿ ಹೆಣ್ಣಿನ ಶೋಷಣೆ. ಅನೇಕ ಪುಸ್ತಕಗಳನ್ನು ಓದಿ ವಿಷಯ ಸಂಗ್ರಹಿಸಿದರು.

ಸುಮಾರು ಎರಡು ವರ್ಷಗಳ ಅಧ್ಯಯನದ ಪರಿಣಾಮವೇ ಈ 'ಬಸವಿ' ಇದರ ಬಗ್ಗೆ ಏನೂ ತಿಳಿಯದಿದ್ದ ಆರ್ಯಾಂಬರಿಗೆ ಕಾದಂಬರಿ ಬರೆಯಲು ಮಾಹಿತಿ ಸಂಗ್ರಹಿಸಲು ಹೊರಟಾಗ ವಿಶಿಷ್ಟ ಅನುಭವಗಳು ದೇವದಾಸಿಗಳ ನೋವು, ಅವರ ದಾರುಣ ಕಥೆಗಳು ವೃದ್ಧ ಬಸವಿಯರ ಬಡತನ, ರೋಗಗಳು, ಎಲ್ಲವುಗಳ ಬಗ್ಗೆ ಏಕಾಂಗಿಯಾಗಿ ಸವದತ್ತಿ ಎಲ್ಲಮ್ಮನ ಗುಡ್ಡ ಬಸವಿಯರ ಸಂದರ್ಶನ ಮಾಡಿದ್ದಾರೆ.

ತುಂಬು ಉತ್ಸಾಹದಿಂದ, ಆಸಕ್ತಿಯಿಂದ ವಿವರವಾಗಿ ಮಾಹಿತಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಕೆಲವು ಸಲ ತೊಂದರೆಯಾಗುತ್ತದೆ. ಆದರೂ ಕೆಲವೊಮ್ಮೆ ಅನೇಕ ಸಂದರ್ಭಗಳನ್ನು ಎದುರಿಸಿ ಮಾಹಿತಿ ಕಲೆ ಹಾಕಿದ್ದಾರೆ. ಇವೆಲ್ಲವೂ ಅವರ ವಂಶ ಪಾರಂಪರ್ಯವಾದ ಸಾಹಿತ್ಯ, ಪರಿಸರ ಸಹಜವಾಗಿ ಬಂದುದ್ದರ ಫಲ. ಸಾಹಿತ್ಯದ ಆರಾಧನೆ ಹಲವು ವಿಷಯಗಳಲ್ಲಿ ಆಸಕ್ತಿ.

ಇಷ್ಟೆಲ್ಲಾ ಪ್ರೇರಣೆ, ಪ್ರಭಾವಗಳಿಂದಲೇ ಆರ್ಯಾಂಬರವರು ಹುಟ್ಟಿದಂದಿನಿಂದ ನನ್ನದು ಸ್ವತಂತ್ರ ಜೀವನ ಯಾರೂ ಕಡಿವಾಣ ಹಾಕಲಿಲ್ಲ. ಕಂಡದ್ದು, ಉಂಡದ್ದು, ಬಯಸಿದ್ದು, ಬದುಕಿದ್ದು ಎಲ್ಲವೂ ಸಾಹಿತ್ಯದಲ್ಲಿ ಅಭಿವ್ಯಕ್ತಿಸುವ ಅಭಿಲಾಷೆ ಒಂಟತನದ ಭಯ, ಬೇಸರ ಎಂದೂ ನನ್ನನ್ನು ಕಾಡಿಲ್ಲ. ಕಾರಣ ಸದಾ ನನ್ನೊಂದಿಗಿದೆ ಸಾಹಿತ್ಯದ ಸಹವಾಸ ಎನ್ನುತ್ತಾರೆ.

ಇಂದಿನ ಜನಪ್ರಿಯ ಕಾದಂಬರಿಗಳ ದಾಳಿಯಲ್ಲಿ, ವಾಸ್ತವತೆಯ ಹಿನ್ನೆಲೆಯಲ್ಲಿ ಬದುಕಿನ ಸೂಕ್ಷ್ಮಗಳನ್ನು ವಿಮರ್ಶಾತ್ಮಕವಾಗಿ ಮನದಟ್ಟಾಗುವಂತೆ ರಚಿಸಿರುವ ಲೇಖಕಿಯರು ತುಂಬ ವಿರಳ. ಇಂತಹ ಅಪರೂಪದ ಪ್ರಮುಖ ಕಾದಂಬರಿಗಾರ್ತಿಯರಲ್ಲಿ ಆರ್ಯಾಂಬ ಒಬ್ಬರು.

ತ್ರಿವೇಣಿ

ಜಗತ್ತಿನಲ್ಲಿ ಜನಿಸಿದ ಪ್ರತಿಯೊಂದು ಜೀವರಾಶಿಯು ತನ್ನ ಜೀವಿತದ ಅವಧಿಯನ್ನು ಪೂರೈಸಿ ಜೀವನ ರಂಗದಿಂದ ನಿವೃತ್ತವಾಗುವ ವೇಳೆಗೆ ಒಂದಲ್ಲಾ ಒಂದು ರೀತಿಯಿಂದ ತನ್ನ ತನ್ನ ವ್ಯಾಪ್ತಿಯಲ್ಲಿ ಪ್ರಸಿದ್ಧಿ ಪಡೆದೇ ಕಣ್ಮರೆಯಾಗುತ್ತದೆ. ಕೆಲವರು ಹುಟ್ಟಿನಿಂದಲೇ ಪ್ರಸಿದ್ಧರಾಗುತ್ತಾರೆ. ಇನ್ನೂ ಕೆಲವರು ತಮ್ಮ ಸ್ವಯಂ ಪ್ರತಿಭೆಯಿಂದ ಪ್ರಸಿದ್ಧರಾಗುತ್ತಾರೆ. ಎರಡನೆಯ ಸಾಲಿಗೆ ಸೇರಿದ ಖ್ಯಾತಿ ತ್ರಿವೇಣಿಯವರದು.

ಕನ್ನಡದ ಕಣ್ವರೆಂದು ಖ್ಯಾತಿ ಪಡೆದಿರುವ ದಿವಂಗತ ಬಿ.ಎಂ.ಶ್ರೀ ರವರು ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶಾಶ್ವತವಾದ ಹಿರಿಯ ಸ್ಥಾನವನ್ನು ಗಳಿಸಿದವರಲ್ಲಿ ಒಬ್ಬರಾಗಿದ್ದಾರೆ. ಇಂತಹ ಹೆಸರಾಂತ ಪುಣ್ಯಜೀವಿಯ ಸೋದರರೆಂದು ಕರೆಸಿಕೊಳ್ಳುವ ಪುಣ್ಯ ದಿವಂಗತ ಬಿ.ಎಂ.ಕೃಷ್ಣಸ್ವಾಮಿರವರದು.

ಇವರ ಧರ್ಮಪತ್ನಿ ಶ್ರೀಮತಿ ತಂಗಮ್ಮರವರು ಸಹಾ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದ ಹೆಣ್ಣು. ಇವರ ಸೋದರಿ ಶ್ರೀಮತಿ ಸುಬ್ಬಮ್ಮರವರು ಉತ್ತಮ ಲೇಖಕಿಯೆಂದು ಕನ್ನಡಿಗರೆಲ್ಲರ ಅಭಿಮಾನ ಗಳಿಸಿರುವ ಇವರು 'ವಾಣಿ' ಎಂಬ ಕಾವ್ಯನಾಮವನ್ನು ಧರಿಸಿದ್ದಾರೆ. ತಮ್ಮ ಹಿರಿಯ ಸೋದರನ ಸಾಹಿತ್ಯಿಕ ವ್ಯವಸಾಯವನ್ನು ಕಂಡು ಕೃಷ್ಣಸ್ವಾಮಿರವರು ಸಂತಸಪಟ್ಟಂತೆಯೇ ತಮ್ಮ ಕಿರಿಯ ಸೋದರಿಯ ಸಾಹಿತ್ಯಿಕ ಪ್ರಗತಿಯನ್ನು ಕಂಡು ಶ್ರೀಮತಿ ತಂಗಮ್ಮರವರು ಸಂತಸ ಪಟ್ಟಿದ್ದಾರೆ.

ಹೀಗೆ ಸಾಹಿತ್ಯ ಸೇವೆಯಲ್ಲಿ ಹೆಸರು ಗಳಿಸಿದ ತಮ್ಮ ಸೋದರ ಸೋದರಿಯರ ನಡುವೆ ಸಹಜೀವನ ನಡೆಸಿದ ಕೃಷ್ಣಸ್ವಾಮಿ ಹಾಗೂ ತಂಗಮ್ಮರವರ ದಾಂಪತ್ಯದ ಜೀವನದಲ್ಲಿ ಎರಡನೆಯವಳಾಗಿ ಹುಟ್ಟಿದ ಹೆಣ್ಣು ಅನಸೂಯ. "ಅನಸೂಯ ಹುಟ್ಟಿನೊಂದಿಗೆ ಪ್ರಸಿದ್ಧಿಯ ನೆಳಲನ್ನು ಪಡೆದ ಪರಮ ಪುಣ್ಯಶಾಲಿನಿಯಾಗಿದ್ದಾಳೆ"[೧೦].

೦೧-೦೯-೧೯೨೮ ರಂದು ಮೈಸೂರಿನಲ್ಲಿ ಜನಿಸಿದ ಅನಸೂಯ ಈರ್ವರು ಸೋದರರು, ಹಿರಿಯ ಸೋದರಿ ಪ್ರಭಾವತಿಯ ಒಡನಾಟದೊಂದಿಗೆ ಶೈಶವಾವಸ್ಥೆಯನ್ನು ಪೂರ್ಣಗೊಳಿಸುವ ಕಾಲಕ್ಕೆ ಒಬ್ಬ ತಮ್ಮ ಹಾಗೂ ಒಬ್ಬಳು ತಂಗಿ (ಆರ್ಯಾಂಬ ಪಟ್ಟಾಭಿ) ಗೆ ಅಕ್ಕನಾಗಿದ್ದಳು. ಹತ್ತು ಮಕ್ಕಳನ್ನು ಹೆತ್ತರು ಹೆತ್ತಾಕೆಗೆ ತನ್ನ ಮಕ್ಕಳೆಲ್ಲರ ಬಗೆಗೂ ಒಂದೇ ರೀತಿಯ ವಾತ್ಸಲ್ಯವಿರುವುದು ಸಹಜ. ಆದರೆ, ತನ್ನೆಲ್ಲಾ ಸೋದರ ಸೋದರಿಯರಿಗಿಂತಲೂ ಹೆಚ್ಚಾಗಿ ತಂದೆ ತಾಯಿಯರ ಗಮನವನ್ನು ಸೆಳೆಯುವ ಸನ್ನಿವೇಶವೊಂದು ಅನಸೂಯರ ಜೀವನದಲ್ಲಿ ಏರ್ಪಟ್ಟಿತು.

ಎಂಟು ವರ್ಷದ ಬಾಲಕಿ ಅನಸೂಯಳಲ್ಲಿ ಆಸ್ತಮಾ ಕಾಯಿಲೆಯು ಕಾಣಿಸಿಕೊಂಡಿತು. ಕಾಯಿಲೆಯ ನಿವಾರಣೆಗಾಗಿ ದಿನನಿತ್ಯವೂ ನೋವನ್ನುಂಟು ಮಾಡುವ ಚುಚ್ಚುಮದ್ದಿನ ಪ್ರಯೋಗವು ಪ್ರಾರಂಭವಾದಾಗ ನೋವನ್ನು ಮರೆಸಲು ಮನೆಯವರು ಅನುಸೂಯಳಿಗೆ ಕಥೆ ಪುಸ್ತಕಗಳ ಲಂಚವನ್ನು ಧಾರಾಳವಾಗಿ ಕೊಡುತ್ತಿದ್ದರಂತೆ.

ಉತ್ತಮ ಆರೋಗ್ಯಭಾಗ್ಯವನ್ನು ಅನಸೂಯಾ ತಮ್ಮ ಬಾಳಿನಲ್ಲಿ ಎಂದೂ ಕಾಣಲಿಲ್ಲ. ಬಾಲ್ಯದಿಂದಲೇ ತೀವ್ರ ಆಸ್ತಮದಿಂದ ನರಳುತ್ತಿದ್ದ ಅನಸೂಯ ಆ ಕಾರಣದಿಂದಾಗಿ ಯಾವಾಗಲೂ ಇತರರಿಂದ ಬೇರೆಯಾಗಿ ಏಕಾಂಗಿಯಾಗಿರುತ್ತಿದ್ದರು. ಉಬ್ಬಸದಿಂದ ಉಸಿರಾಡಲು ಕಷ್ಟಪಡುತ್ತಾ, ನಿದ್ರೆಯಿಲ್ಲದೇ ಕಳೆದ ರಾತ್ರಿಗಳೆಷ್ಟೋ. ಅವರ ಕಥೆಯ ಪಾತ್ರವೊಂದು ಹೀಗೆ ಹೇಳುತ್ತದೆ. "ರಾತ್ರಿ ತಲೆದಿಂಬಿಗೆ ತಲೆಯಿಟ್ಟು ಸುಖವಾಗಿ ನಿದ್ರಿಸುವವರು ಎಷ್ಟು ಸುಖಿಗಳು"[೧೧]. ಇಂತಹ ತೀವ್ರ ಉಬ್ಬಸದೊಡನೆ ನೆಗಡಿಯೂ ಅವರನ್ನು ಸದಾ ಕಾಡುತ್ತಿತ್ತು.

ಅವರದೇ ಮತ್ತೊಂದು ಪಾತ್ರದ ಮೂಲಕ "ನನಗೆ ಮೂಗು ಒಣಗಿದ ದಿನವೇ ಜ್ಞಾಪಕವಿಲ್ಲ"[೧೨] ಎಂದು ತಮ್ಮ ಬಗ್ಗೆಯೇ ಅವರು ಹೇಳುತ್ತಾರೆ. ತಮ್ಮ ದುರ್ಬಲ ಆರೋಗ್ಯದ ಕಾರಣದಿಂದಾಗಿಯೇ ಶಾಲಾ ಕಾಲೇಜುಗಳ ದಿನಗಳಲ್ಲಿ ಅವರು ಆಟಪಾಠಗಳಲ್ಲಿ ಭಾಗವಹಿಸಲು

ಸಾಧ್ಯವಾಗುತ್ತಿರಲಿಲ್ಲ. ಸಹಜವಾಗಿಯೇ ಅವರು ಈ ಕಾರಣಗಳಿಂದಾಗಿ ಅಂತರ್ಮುಖಿಯಾಗಿ ತಮಗೆ ಬೇಕಾದ ತೃಪ್ತಿ ಮತ್ತು ಸಾಹಚರ್ಯವನ್ನು ಪುಸ್ತಕಗಳಲ್ಲಿ ಕಂಡುಕೊಳ್ಳಬೇಕಾಯಿತು. ಹೀಗೆ ತನ್ನ ಸಾಹಿತ್ಯಾಸಕ್ತಿಗೆ ನೀರೆರೆದ ಪೋಷಕರಿಂದ ವಯೋಮಾನಕ್ಕೆ ಮೀರಿದ್ದ ವಾಚನಾಭಿರುಚಿ, ಪುಸ್ತಕಪ್ರಿಯತೆ ಅನಸೂಯಾರ ಜೀವನದಲ್ಲಿ ಪ್ರಭಾವ ಬೀರಿತು.

ಮಂಡ್ಯದ ಮುನಿಸಿಪಲ್ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮುಗಿಸಿ, ನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮುಂದುವರಿಸಿ ಯಶಸ್ವಿಯಾದರು. ಕಾಲೇಜು ವಿದ್ಯಾಭ್ಯಾಸದ ದಿನಗಳಲ್ಲಿ ಇವರ ಸಾಹಿತ್ಯಾಸಕ್ತಿಯು ನೂತನ ದೃಷ್ಟಿಯ ಹಾದಿ ಹಿಡಿದಿತ್ತು. ಮಂಡ್ಯದ ಮಹಿಳಾ ಸಮಾಜದಲ್ಲಿ ಹಿಂದಿ ಭಾಷೆಯ ಅಧ್ಯಯನ ನಡೆಸುವ ಅವಧಿಯಲ್ಲಿ ಅನಸೂಯಾಳಿಗೆ ಹೆಚ್ಚು ಪರಿಚಯವಾದ ಗೆಳತಿ ಶ್ರೀಮತಿ ಎಂ.ಕೆ. ಇಂದಿರಾ. ಇಬ್ಬರ ಮನೆಯೂ ಸಮೀಪವೇ ಇದ್ದ ಕಾರಣ ಪರಸ್ಪರ ಪರಿಚಯ ಹೆಚ್ಚಲು ಸಾಧ್ಯವಾಗಿತ್ತು.

ಮೊಳಕಾಲಿನವರೆವಿಗೂ ಇಳಿದು ಬರುತ್ತಿದ್ದ ಇವರ ದಟ್ಟವಾದ ನೀಳ ಕೇಶರಾಶಿಯನ್ನು ಗಮನಿಸಿದ್ದ ಇವರ ಗೆಳತಿಯೊಬ್ಬರು ಇವರಿಗೆ ಎರಡು ಜಡೆ ಹಾಕಿಕೊಳ್ಳಲು ಸೂಚಿಸಿ, ತನಗೇನಾದರೂ ಅಷ್ಟೊಂದು ಒತ್ತಾದ ನೀಳ ಕೇಶರಾಶಿ ಇದ್ದಿದ್ದರೆ ನಿಜವಾಗಿಯೂ ತಾನು ಟೂ ವೇಣಿಯಾಗಿ ಬಿಡುತ್ತಿದ್ದುದಾಗಿ ತಿಳಿಸಿದರಂತೆ. ಆಗ ಅಲ್ಲೇ ಇದ್ದ ಎಂ.ಕೆ. ಇಂದಿರಾರವರು ಕೂಡಲೇ "ನಿಜ, ಎರಡೇಕೆ ಮೂರು ಜಡೆ ಹಾಕಿಕೊಂಡು 'ತ್ರಿವೇಣಿ'ಯಾಗಬಹುದು ನೀವು"[೧೩] ಎಂದು ಹೇಳಿದರಂತೆ. ಅನುಸೂಯ ತಟ್ಟನೆ ಇಂದಿರಾ ಅವರತ್ತ ತಿರುಗಿ, 'ಹೌದು, ಎಷ್ಟು ಚೆನ್ನ! ಎಂದು ನುಡಿದು, "ನಾನು ಮೂರು ಕಾಲಿನ ಒಂದೇ ಜಡೆ ಹಾಕಿಕೊಂಡು 'ತ್ರಿವೇಣಿ' ಆಗ್ತೇನೆ"[೧೪], ಎಂದು ತಿಳಿಸಿದರಂತೆ.

ಇಂದು ಕನ್ನಡದ ಜನಪ್ರಿಯ ಲೇಖಕಿಯಾಗಿರುವ ಶ್ರೀಮತಿ ಎಂ.ಕೆ. ಇಂದಿರಾರವರು ತಮ್ಮ ಆತ್ಮೀಯ ಗೆಳತಿ ಅನಸೂಯಾಳಿಗೆ ತುಂಬ ಅರ್ಥಗರ್ಭಿತವೂ, ಆಕರ್ಷಕವೂ ಆದ ಕಾವ್ಯನಾಮವೊಂದನ್ನು ಆಯ್ಕೆ ಮಾಡಿದ ಮೂಲ ವ್ಯಕ್ತಿಯಾಗಿದ್ದಾರೆ. ಅನಸೂಯಳ ಮುಂದಿನ ಸಾಹಿತ್ಯಿಕ ವ್ಯವಸಾಯವು ತ್ರಿವೇಣಿ ಎಂಬ ಕಾವ್ಯನಾಮದಿಂದಲೇ ಮುಂದುವರೆದು, ಜನತೆಯಲ್ಲೂ, ಮನೆಮಂದಿಯಲ್ಲೂ ತ್ರಿವೇಣಿ ಎಂಬ ಹೆಸರೇ ಶಾಶ್ವತವಾಗಿ ಉಳಿಯಲು ಪ್ರೇರಣೆಯಾಯಿತು.

೧೯೫೦ರ ನವೆಂಬರ್ ೩೦ ರಂದು ಹೈಸ್ಕೂಲ್‌ನಲ್ಲಿ ಉಪಾಧ್ಯಾಯರಾಗಿದ್ದ ಶ್ರೀಮಾನ್ ಎಸ್.ಎನ್. ಶಂಕರ್‌ರವರನ್ನು ಕೈಹಿಡಿದು ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಮನೆಯಲ್ಲಿ ಅಡುಗೆಯವರೂ, ಸುತ್ತು ಕೆಲಸಗಳಿಗೆ ಆಳುಕಾಳುಗಳು ಇದ್ದುದರಿಂದ ಗೃಹಕೃತ್ಯದ ಕೆಲಸಕಾರ್ಯಗಳೇನೂ ಅನಸೂಯಾಳ ಪಾಲಿಗೆ ಉಳಿಯುತ್ತಿಲ್ಲವಾದ್ದರಿಂದ ತಮ್ಮ ಲೇಖನ ವ್ಯವಸಾಯವನ್ನು ಮುಂದುವರೆಸಲು ನೆರವಾಯಿತು.

ಇಂಗ್ಲಿಷ್ ಸಾಹಿತ್ಯದಲ್ಲಿ ಹೆಚ್ಚಿನ ಪರಿಶ್ರಮ ಪಡೆದಿದ್ದ ಶಂಕರ್‌ರವರು ತಾವು ಓದಿದ ಉತ್ತಮ ಇಂಗ್ಲಿಷ್ ಸಾಹಿತ್ಯ ಕೃತಿಗಳ ಸನ್ನಿವೇಶಗಳನ್ನು ಪತ್ನಿಗೆ ತಿಳಿಸಿ, ಅವುಗಳನ್ನು ಓದಿ ಕನ್ನಡದಲ್ಲಿಯೂ ಅಂತೆಯೇ ನಿರೂಪಣೆಗಳನ್ನು ತರಲು ಸೂಚಿಸುತ್ತಿದ್ದರು. ತಮ್ಮ ಪತಿಯಿಂದ ದೊರೆಯುತ್ತಿದ್ದ ಇಂತಹ ಅಪೂರ್ವವಾದ ಸಹಕಾರವು ಅನಸೂಯಾಳ ಸಾಹಿತ್ಯ ಜೀವನಕ್ಕೆ ಉತ್ತಮವಾದ ಬುನಾದಿಯನ್ನು ಹಾಕಿತು. ಇದರ ಫಲಿತಾಂಶವೇ ಅನಸೂಯಾರವರ 'ಅಪಸ್ವರ' ಕಾದಂಬರಿ.

ಚೊಚ್ಚಲ ಕೃತಿ ಅಪಸ್ವರ ಪ್ರಕಟವಾಗದೇ ಇದ್ದಾಗ, ಶಂಕರ್‌ರವರ ಪ್ರಯತ್ನದ ಫಲವಾಗಿ ಇವರ ಎರಡನೆಯ ಬರೆಹ 'ಹೂವುಹಣ್ಣು' ಮೊದಲ ಕೃತಿಯಾಗಿ ಪ್ರಕಟವಾಯಿತು. ಹೀಗೆ ಶಂಕರ್‌ರವರ ಸಲಹೆಸೂಚನೆಯಂತೆ ರೂಪು ತಳೆದ ಹಲವಾರು ಕೃತಿಗಳು ಇವರಿಗೆ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿಕೊಟ್ಟು ಅನಸೂಯ 'ತ್ರಿವೇಣಿ'ಯಾಗಿ ಸಾಹಿತ್ಯಾಸಕ್ತರ ಚಿತ್ತದಲ್ಲಿ ಸುಳಿದಾಡಲು ಯಶಸ್ವಿ ಪ್ರೇರಕರಾದರು.

ತಮ್ಮ ಜೀವಿತದ ಅವಧಿಯಲ್ಲಿ ಮೊದಲ ಇಪ್ಪತ್ತೈದು ವರ್ಷಗಳನ್ನು ಕಳೆಯುವ ವೇಳೆಗಾಗಲೇ ತ್ರಿವೇಣಿಯವರು ವ್ಯಕ್ತಿ ಜೀವನದ ಅನೇಕ ಮುಖಗಳನ್ನು ಕಂಡು ಅನುಭವಿಸಿದ್ದರು. ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದ ಈಕೆ ಹುಟ್ಟಿನೊಂದಿಗೆ ಗೌರವದ ಬುತ್ತಿಯನ್ನು ಕಟ್ಟಿ ತಂದಿದ್ದರು. ಕಾಲೇಜು ವ್ಯಾಸಂಗದ ಆಕಾಂಕ್ಷೆಯು ಕೈಗೊಂಡಿತ್ತು. ಪ್ರೇಮಿಸಿದಾತನೇ ಕೈ ಹಿಡಿದು, ದಾಂಪತ್ಯ ಜೀವನವೂ ಸುಖಮಯವಾಗಿತ್ತು. ಚಿಕ್ಕದಾದ ಸಂಸಾರವನ್ನು ಚೊಕ್ಕವಾಗಿ ನಿರ್ವಹಿಸಿಕೊಂಡು ಉತ್ತಮ ಗೃಹಿಣಿಯೂ ಆಗಿದ್ದರು. ಸಾಹಿತ್ಯಾಭ್ಯಾಸದ ಅಭಿಲಾಷೆಯು ಕೈಗೂಡುವುದರೊಂದಿಗೆ, ಸಾಹಿತ್ಯ ಸೃಷ್ಟಿಯ ಕನಸೂ ನನಸಾಗಿದ್ದು, ಇವರ ಅನಿಸಿಕೆಗಳೆಲ್ಲವೂ ಬಹುಪಾಲು ಈಡೇರಿದಂತಾಗಿದ್ದುವು.

ಆದರೂ, ಅಂತರ್ಯದಲ್ಲಿ ಒಂದು ಅತೃಪ್ತ ಆಕಾಂಕ್ಷೆಯು ತವಕಿಸುತ್ತಲೇ ಇತ್ತು, ಅದೇ ಮಕ್ಕಳ ಹಂಬಲ. "ವಿವಾಹಾನಂತರ ತ್ರಿವೇಣಿಯವರ ಬದುಕು ಎಲ್ಲಾ ದೃಷ್ಟಿಗಳಿಂದಲೂ ತೃಪ್ತಿದಾಯಕವಾಗಿತ್ತು. ಅವರ ಸಾಹಿತ್ಯಿಕ ವ್ಯವಸಾಯವನ್ನು ಮೆಚ್ಚುವ ಹಾಗೂ ಪ್ರೋತ್ಸಾಹಿಸುವ ಪತಿ ಅವರ ಕೃತಿಗಳನ್ನು ಮೆಚ್ಚುವ ವ್ಯಾಪಕ ವಾಚಕವರ್ಗ, ವಾತ್ಸಲ್ಯಮಯಿ ತಾಯಿ, ಪ್ರೀತ್ಯಭಿಮಾನಗಳಿಂದ ಕಾಣುವ ಅತ್ತೆ ಮಾವಂದಿರು, ಸುಖಸಂತೋಷಗಳಿಂದ ಕೂಡಿದ ಇಂತಹ ಬದುಕಿಗೆ ಮತ್ತೇನು ಬೇಕು? ಆದರೆ ಇಂತಹ ಬದುಕಿನಲ್ಲೂ ಆಗಾಗ್ಗೆ ಒಂದು ಕೊರತೆ ತ್ರಿವೇಣಿಯವರನ್ನು ಕಾಡುತ್ತ, ಅವರ ಸಂತೋಷಕ್ಕೆ ಊನವನ್ನುಂಟು ಮಾಡುತ್ತಿತ್ತು. ಅದು ಮಕ್ಕಳ ಕೊರತೆಯಾಗಿತ್ತು"[೧೫].

ತ್ರಿವೇಣಿಯವರ ದುರ್ಬಲ ದೇಹಸ್ಥಿತಿಯಿಂದಾಗಿ ಮದುವೆಯಾದ ನಂತರ ತಮಗೆ ಮಕ್ಕಳು ಬೇಡವೆಂದು ದಂಪತಿಗಳು ನಿರ್ಧರಿಸಿದ್ದರು. ಆದರೆ ತ್ರಿವೇಣಿಯವರ ಮಾತೃಹೃದಯ ಸಂತಾನಕ್ಕಾಗಿ ಸದಾ ಹಂಬಲಿಸುತ್ತಿತ್ತು ಮತ್ತು ಈ ಸಂತಾನಭಾಗ್ಯಕ್ಕಾಗಿ ಅವರು ಯಾವುದೇ ಅಪಾಯವನ್ನು ಎದುರಿಸಲು ಸಿದ್ಧರಿದ್ದರು. ಮೊದಲನೆಯ ಮಗು ಹುಟ್ಟುವಾಗಲೇ ನಿರ್ಜೀವವಾಗಿತ್ತು. ಎರಡನೆಯ ಮತ್ತು ಮೂರನೆಯ ಮಕ್ಕಳೂ ಅದನ್ನೇ ಹಿಂಬಾಲಿಸಿದವು. ಮೂರನೆಯ ಗರ್ಭಪಾತದ ನಂತರ ತ್ರಿವೇಣಿಯವರು ಮಾನಸಿಕವಾಗಿ ಮತ್ತು ದೈಹಿಕವಾಗಿ ಎಷ್ಟು ಬಳಲಿದ್ದರೆಂದರೆ ಮತ್ತೊಂದು ಗರ್ಭಧಾರಣೆ ಅವರಿಗೆ ಮಾರಕವಾಗಬಹುದೆಂಬುದು ನಿಚ್ಚಳವಾಗಿತ್ತು.

ಭರಿಸಲಾಗದ ನೋವನ್ನು ತಾಳ್ಮೆಯಿಂದ ಸಹಿಸುವ ಶಕ್ತಿಯನ್ನು ಇವರು ಬಾಲ್ಯದಿಂದಲೂ ಪ್ರೀತಿಸುತ್ತಿದ್ದ ಸಾಹಿತ್ಯವು ಮಾತ್ರ ಕೊಡಲು ಸಮರ್ಥವಾಗಿತ್ತು. ನಿರೀಕ್ಷಿಸಿದ್ದ 'ಅತಿಥಿ ಬರಲಿಲ್ಲ' ಅತಿಥಿಯು ಇವರನ್ನು ನಿರಾಶೆಗೊಳಿಸಿದರೂ ಸಾಹಿತ್ಯದ ಗೆಳತಿಯು ಇವರನ್ನು ವಂಚಿಸಲಿಲ್ಲ. ಆದರೆ, ಯಾವುದೋ ಅವ್ಯಕ್ತ ಕಾರಣದಿಂದಾಗಿ ತಮ್ಮ ತಾಯ್ತನದ ಹಂಬಲವನ್ನು ತ್ರಿವೇಣಿ ನಿಗ್ರಹಿಸಲು ಅಶಕ್ತರಾದರು. ಶ್ರೀಸಾಯಿಬಾಬರವರ ಭಕ್ತಳಾಗಿ, ಅವರ ಅನುಗ್ರಹದಿಂದ ನಾಲ್ಕನೆಯ ಬಾರಿ ತಾವು ತಾಯಿಯಾಗಿಯೇ ಆಗುತ್ತೇನೆಂದು ನಂಬಿದರು.

ಅಂತೆಯೇ, ತಮ್ಮ ೩೫ನೆಯ ವರ್ಷದಲ್ಲಿ ಮದುವೆಯಾದ ೧೩ನೆಯ ವರ್ಷದಲ್ಲಿ ಒಂದು ಹೆಣ್ಣು ಮಗುವಿಗೆ ಜನ್ಮವಿತ್ತರು. ಪ್ರಸವವು ಶಸ್ತ್ರಚಿಕಿತ್ಸೆಯ ಮೂಲಕ ಸಾಧ್ಯವಾಯಿತು ಮತ್ತು ಅದನ್ನು ಸಹಿಸಿಕೊಳ್ಳುವಷ್ಟು ಅವರ ದೇಹ ಶಕ್ತವಾಗಿರಲಿಲ್ಲ. ಇನ್ನೂ ಹೆಸರಿಡದ ಮಗುವಿಗೆ ಕೇವಲ ಒಂಬತ್ತು ದಿನಗಳಾದಾಗ ತ್ರಿವೇಣಿಯವರು ಜುಲೈ ೨೯ ೧೯೬೩ರಂದು ಬದುಕನ್ನು ಕೊನೆಗಾಣಿಸಿದರು.

ಕೃತಿಗಳಿಗೆ ಪ್ರಭಾವ

ರಾಮಾಯಣ, ಮಹಾಭಾರತಗಳು ಪ್ರಾರಂಭದಿಂದಲೂ ನಮ್ಮ ಸಾಹಿತಿಗಳಿಗೆ ಸ್ಫೂರ್ತಿಯ ಕೇಂದ್ರವಾಗಿವೆ. ಅವುಗಳಲ್ಲಿ ರಾಮಾಯಣದ 'ಅಹಲ್ಯಾ ಶಾಪ ವಿಮೋಚನೆ'ಯ ಪ್ರಸಂಗವು ಒಂದು ಉತ್ತಮವಾದ ಸನ್ನಿವೇಶ. ಈ ಪ್ರಕರಣವನ್ನು ಅನೇಕ ಕವಿಗಳೂ, ಸಾಹಿತಿಗಳೂ ತಮ್ಮ ಕೃತಿಗಳಲ್ಲಿ ಅಳವಡಿಸಿಕೊಂಡು ಅದಕ್ಕೆ ಹೊಸರೀತಿಯ ಮೆರುಗನ್ನು ಕೊಟ್ಟಿದ್ದಾರೆ. ಕರ್ನಾಟಕ ಸಂಗೀತ ಪಿತಾಮಹರೆಂದು ಖ್ಯಾತವೆತ್ತಿರುವ ಶ್ರೀ ಪುರಂದರದಾಸರೂ ಸಹಾ ತಮ್ಮ ದೇವರನಾಮದಲ್ಲಿ ಈ ಸನ್ನಿವೇಶ ಚಿತ್ರಣವನ್ನು ನೆನಪು ಮಾಡಿಕೊಂಡಿರುವುದನ್ನು ಕಾಣಬಹುದು. "ಶಿಲೆಯ ಮೆಟ್ಟಿ ಕುಲಕೆ ತಂದೆ"[೧೬] ಎಂಬ ಒಂದು ವಾದದಲ್ಲಿ ಅಹಲ್ಯೆಯ ಪ್ರಕರಣದ ಸಮಗ್ರ ಚಿತ್ರಣವನ್ನು ದಾಸರು ಧ್ವನಿಪೂರ್ಣವಾಗಿ ಚಿತ್ರಿಸಿದ್ದಾರೆ.

ಕಥಾವಸ್ತುವಿನ ಬೆಳವಣಿಗೆ ಹಾಗೂ ಮುಕ್ತಾಯವನ್ನು ಗಮನಿಸಿದಾಗ ತ್ರಿವೇಣಿಯವರ 'ಸೋತುಗೆದ್ದವಳು' ಕಾದಂಬರಿಯೂ ಸಹ ಅಹಲ್ಯೆಯ ಶಾಪವಿಮೋಚನೆಯ ಪ್ರಸಂಗದ ಸ್ಫೂರ್ತಿಯಿಂದ ರಚಿತವಾಗಿರಬಹುದೆಂದು ಗೋಚರವಾಗುತ್ತದೆ.

ತಪೋಧನರೂ, ತೇಜಸ್ವಿಗಳೂ ಆಗಿದ್ದ, ಗೌತಮ ಮುನಿಗಳ ಕೈಹಿಡಿದಿದ್ದರೂ ಅಹಲ್ಯೆಯು ದೇವೇಂದ್ರನಲ್ಲಿ ಅನುರಕ್ತಳಾದಂತೆಯೇ, ವಿದ್ಯಾವಂತನೂ, ರೂಪವಂತನೂ ಆಗಿದ್ದ ಆನಂದನ ಕೈಹಿಡಿದಿದ್ದರೂ ಅವನ ಅಗಲಿಕೆಯ ಕಾಲದಲ್ಲಿ ಭಾರತಿಯು ಚಂದುವಿನಲ್ಲಿ ಅನುರಕ್ತಳಾಗುತ್ತಾಳೆ.

ಪತ್ನಿಯ ಅನುಚಿತ ವರ್ತನೆಯನ್ನು ಕಂಡು ಕುಪಿತರಾದ ಗೌತಮರು ಅವಳಿಗೆ ಶಿಲೆಯರೂಪವನ್ನು ಶಾಪವಾಗಿದ್ದರೆ, ಭಾರತೀಯ ಅತ್ತೆ ಮಾವಂದಿರು ಅವಳಿಗೆ ಶಿಲೆಯ ರೂಪಕ್ಕಿಂತಲೂ ನಿಷ್ಠುರವಾದ ನಿಕೃಷ್ಟವಾದ ಜೀವನವನ್ನು ವಿಧಿಸುತ್ತಾರೆ. ತನ್ನ ತಪ್ಪಿನ ಅರಿವಿದ್ದ ಅಹಲ್ಯೆಯು ಪತಿಯು ವಿಧಿಸಿದ ಶಾಪವನ್ನು ಅನಿವಾರ್ಯವಾಗಿ ಅನುಭವಿಸುತ್ತಾಳೆ. ಅದೇ ರೀತಿ ಭಾರತಿಯೂ ತನಗೆ ಉಂಟಾದ ಅಪಮಾನವನ್ನು ಸಹನೆಯಿಂದಲೇ ಅನುಭವಿಸುತ್ತಾಳೆ. ಹೆಂಡತಿಯ ಬಗ್ಗೆ ಅನುಕಂಪಕ್ಕೊಳಗಾದ ಗೌತಮರು ಅವರ ಕ್ಷುಲ್ಲಕ ಆಕಾಂಕ್ಷೆಯ ತಪ್ಪನ್ನು ಕ್ಷಮಿಸಿ ವಿಶಾಪವನ್ನು ಅನುಗ್ರಹಿಸುತ್ತಾರೆ.

ತನ್ನ ವೈಯಕ್ತಿಕ ಜೀವನದ ತಕ್ಕಡಿಯಲ್ಲೇ ಭಾರತಿಯ ಜೀವನವನ್ನು ತೂಗಿನೋಡಿ ಅದರಲ್ಲಿ ಲೋಪವೇನೂ ಇಲ್ಲವೆಂದು ನಿರ್ಧರಿಸಿದ ಆನಂದನು ಅವಳನ್ನು ಪರಿಗ್ರಹಿಸುತ್ತಾನೆ.

ಹೀಗೆ ಮೊದಲಿನಿಂದ ಕೊನೆಯವರೆಗೂ ಕಥಾವಸ್ತುವು ಪೌರಾಣಿಕ ಪ್ರಸಂಗ ಒಂದರ ಹಿನ್ನೆಲೆಯನ್ನೇ ಚಾಚೂತಪ್ಪದೆ ಅನುಸರಿಸಿಕೊಂಡು ಬಂದಿರುವ ಅಂಶವನ್ನು ಗುರುತಿಸಬಹುದು.

ವಿವಾಹಿತನಾದ ಗಂಡಸು ಬೇರೊಬ್ಬಳೊಂದಿಗೆ ಸಂಪರ್ಕ ಬೆಳೆಸಿದರೆ ಆಕ್ಷೇಪಣೆ ಇಲ್ಲ; ಅದೇ ರೀತಿ ವಿವಾಹಿತಳಾದ ಹೆಣ್ಣು ಬೇರೊಬ್ಬನೊಂದಿಗೆ ಸಂಪರ್ಕ ಬೆಳೆಸಿದ ಮಾತ್ರಕ್ಕೆ ಅವಳನ್ನು ಹೀನಾಯವಾಗಿ ಕಾಣಬೇಕೇಕೆ? ಎಂಬ ಪ್ರಶ್ನೆಯೇ ಈ ಕಾದಂಬರಿಯ ಮೂಲೋದ್ದೇಶವಾಗಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ.

"ತ್ರಿವೇಣಿಯವರ 'ವಸಂತಗಾನ' ಕಾದಂಬರಿಯನ್ನು ಗಮನಿಸಿದಾಗ, ವಾಸು ಅರುಂಧತಿ, ಸರಳ ರಾಜ್‌ಗೋಪಾಲ್ ಪರಸ್ಪರ ಸಂಧಿಸಿದಾಗ ವಾಸು ಹಾಗೂ ಸರಳೆಯ ಮನಸ್ಸಿನಲ್ಲಿ ಉಂಟಾಗುವ ಭಾವನೆಗಳ ಚಿತ್ರಣವು ಮಾತ್ರ ಸಹಜವಾಗಿ ಬೆಳೆದಿದ್ದು, ಕಾದಂಬರಿಯಲ್ಲಿ ಹೆಚ್ಚು ಗಮನ ಸೆಳೆಯುವ ಭಾಗವಾಗಿದೆ. ಈ ಕಾದಂಬರಿಯ ಹಿನ್ನೆಲೆಯಲ್ಲಿ "Full of Life" ಎಂಬ ಆಂಗ್ಲ ಕಾದಂಬರಿಯೊಂದರ ಪ್ರಭಾವ ಇರುವುದು"[೧೭].

೧೯೪೮ರಲ್ಲಿ ಬೆಳಕು ಕಂಡ ಕಾರಂತರ ಕಾದಂಬರಿ 'ಸನ್ಯಾಸಿ ಬದುಕು' ಇದರಲ್ಲಿ ಬರುವ 'ರುಕ್ಮಾಯಿ' ಅಥವಾ 'ಮಾಯಿ'ಯೇ 'ಕಾಶೀಯಾತ್ರೆ'ಯ ಪಾತಜ್ಜಿಯಾಗಿ ರೂಪುಗೊಂಡಿದೆಯೆಂಬುದರಲ್ಲಿ ಅನುಮಾನವೇ ಇಲ್ಲ. ಎರಡು ಕಾದಂಬರಿಗಳಲ್ಲೂ ಕಂಡುಬರುವ ಸಾಮ್ಯತೆಯನ್ನು ಗಮನಿಸಿದರೆ ಈ ಅಂಶವು ಸ್ಪಷ್ಟವಾಗುತ್ತದೆ.

- ಮಾಯಿಯು ಬ್ರಾಹ್ಮಣ ಸಮಾಜದ ಬಾಲವಿಧವೆ
  ಪಾತಜ್ಜಿಯೂ ಬ್ರಾಹ್ಮಣ ಸಮಾಜದ ಬಾಲವಿಧವೆ
- ಮಾಯಿಗೆ ದಿನ ನಿತ್ಯವೂ ಕೃಷ್ಣನ ದೇವಾಲಯದ ದರ್ಶನ ಒಂದು ನಿತ್ಯ ವಿಧಿ
  ಪಾತಜ್ಜಿಗೆ ನಂಜುಂಡೇಶ್ವರನ ದೇವಾಲಯದ ದರ್ಶನ ಒಂದು ನಿತ್ಯ ವಿಧಿ
- ಮಾಯಿಯು ತನ್ನ ದುಡಿಮೆಯ ಹಣವನ್ನು ಕಾಶೀಯಾತ್ರೆಯ ಹಂಬಲದಿಂದ ಬೇರೊಬ್ಬರಲ್ಲಿ ಕೂಡಿಟ್ಟಿರುತ್ತಾಳೆ.
  ಪಾತಜ್ಜಿ ಇಡೀ ಉದ್ದೇಶಕ್ಕಾಗಿ ತಾನೇ ಸಂಗ್ರಹಿಸಿರುತ್ತಾಳೆ.
- ಮಾಯಿಯು ಸುಮಿತ್ರೆಯ ಸಂಸಾರಕ್ಕೆ ನೆರವಾಗುತ್ತಾಳೆ
  ಪಾತಜ್ಜಿಯು ರಾಮಣ್ಣನ ಸಂಸಾರಕ್ಕೆ ನೆರವಾಗುತ್ತಾಳೆ

- ಜೂಜಿನ ಹವ್ಯಾಸದಿಂದಾಗಿ ಕಾರಂತರ ಶಂಕರರಾಯನು ತನ್ನ ಧಣಿಯ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾನೆ.

  ತಮ್ಮ ಮಗನ ಭವಿಷ್ಯದ ಸೂಕ್ತ ವ್ಯವಸ್ಥೆಗಾಗಿ ತ್ರಿವೇಣಿಯವರ ಸುಬ್ಬರಾಯ ಸೊಸೈಟಿಯ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾನೆ.

- ಹಣದ ಅಡಚಣೆಯಿಂದಾಗಿ ರಾಧೆಯ ಮದುವೆ ನಿಲ್ಲುವ ಸನ್ನಿವೇಶದಲ್ಲಿ ಮಾಯಿಯು ತನ್ನ ಕಾಶೀಯಾತ್ರೆಯ ಹಂಬಲವನ್ನು ಬದಿಗೊತ್ತಿ ತನ್ನಲ್ಲಿದ್ದ ಹಣವನ್ನು ಸುಮಿತ್ರೆಗೆ ಕೊಡುತ್ತಾಳೆ.

  ಮಂಗಳೆಯ ವಿವಾಹ ನಿಲ್ಲುವಂತಾದಾಗ, ಪಾತಜ್ಜಿಯು ತಾನು ಸಂಗ್ರಹಿಸಿದ್ದ ಹಣವನ್ನು ರಾಮಣ್ಣನಿಗೆ ಕೊಡುತ್ತಾಳೆ.

- ಮಾಯಿಯ ಕಾರ್ಯಕ್ಷೇತ್ರ ಉಡುಪಿ

  ಪಾತಜ್ಜಿಯ ಕಾರ್ಯಕ್ಷೇತ್ರ ನಂಜನಗೂಡು

ಶಂಕರರಾಯನ ಸನ್ಯಾಸ ಜೀವನ, ಹಿಮಾಲಯದ ಅನುಭವ ಅವನಿಗೆ ಜೊತೆಯಾದ ವಿದೇಶಿ ಪತ್ರಿಕೋದ್ಯಮಿ ಶ್ರೀಮತಿ ಎನ್ನಾಬ್ರೈಟ್ 'ಅವಳ' ಬೃಂದಾವನಂ ಕಲ್ಪನೆ... ಮುಂತಾದ ಕೆಲವಾರು ಭಾಗಗಳಿಂದ ಹೊರತಾಗಿ ಉಳಿಯುವ "ಕಾರಂತರ 'ಸನ್ಯಾಸಿಯ ಬದುಕು' ಸುಮಾರು ಹದಿನಾರು ವರ್ಷಗಳ ನಂತರ ತ್ರಿವೇಣಿಯವರ 'ಕಾಶೀಯಾತ್ರೆ'ಯಾಗಿ ರೂಪಾಂತರಗೊಂಡಿದೆ ಎಂಬುದರಲ್ಲಿ ಸಂದೇಹವೇ ಇಲ್ಲ".[೧೮]

ಕನ್ನಡ ಕಾದಂಬರಿ ಪ್ರಪಂಚಕ್ಕೆ ತ್ರಿವೇಣಿಯವರು ನೂತನ ಅನುಭವಗಳನ್ನು, ನೂತನ ಭಾವನಾ ಕ್ರಮಗಳನ್ನು ಪರಿಚಯಿಸಿದರು. ಅವರು ಕನ್ನಡದ ಪ್ರಥಮ ಲೇಖಕಿಯಲ್ಲದಿದ್ದರೂ ಅಪಾರ ಓದುಗ ವೃಂದವನ್ನು ಪಡೆದಿದ್ದ ಪ್ರಥಮ ಲೇಖಕಿ. ತಮ್ಮ ಸರಳ ಹಾಗೂ ನೇರ ನಿರೂಪಣೆಯಿಂದ ಅವರು ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯಾಗಿ ಬದುಕುವುದೆಂದರೆ ಏನೆಂದು ಓದುಗರಿಗೆ ಮನಗಾಣಿಸಿದರು.

ತಮ್ಮ ಪ್ರತಿಯೊಂದು ಕಾದಂಬರಿಯಲ್ಲಿ ಮತ್ತು ಸಣ್ಣಕತೆಯಲ್ಲಿ ಪತ್ನಿಯಾಗಿ, ಪ್ರೇಮಿಯಾಗಿ, ಗರ್ಭಿಣಿಯಾಗಿ, ಬಾಲವಿಧವೆಯಾಗಿ, ಸ್ತ್ರೀಯು ಅನುಭವಿಸುವ ಅಪೇಕ್ಷೆ ನಿರೀಕ್ಷೆಗಳನ್ನು, ಆಸೆ ನಿರಾಸೆಗಳನ್ನು, ನೋವು ನಲಿವುಗಳನ್ನು ಆಪ್ತವಾಗಿ ಇನ್ನಿಲ್ಲದಂತೆ ದಾಖಲಿಸಿದರು. ತ್ರಿವೇಣಿಯವರಷ್ಟು ಆಳವಾಗಿ ಮತ್ತು ವ್ಯಾಪಕವಾಗಿ ಬೇರೆ ಯಾವ ಲೇಖಕನೂ, ಲೇಖಕಿಯೂ ಬಸಿರು, ಪ್ರಸವ, ತಾಯ್ತನ ಮುಂತಾದ ಸ್ತ್ರೀಯ ಅವಸ್ಥಾಂತರಗಳನ್ನು ವಿಶ್ಲೇಷಿಸಿಲ್ಲ ಹಾಗೂ ಅಭಿವ್ಯಕ್ತಿಗೊಳಿಸಿಲ್ಲ.

ಸಹೋದರಿಯರಿಬ್ಬರನ್ನು ಈ ಹಂತಗಳಲ್ಲಿ ಗಮನಿಸಿದಾಗ ಇಬ್ಬರ ಜೀವನಗಳಲ್ಲೂ ಸಾಮ್ಯತೆ ಕಂಡುಬರುತ್ತದೆ. ಬಾಲ್ಯದಿಂದಲೇ ಸಾಹಿತ್ಯ ನಂಬಿರುವ ಬಂಧುಗಳು, ಸುಶಿಕ್ಷಿತ ಕುಟುಂಬದ ಹಿನ್ನೆಲೆ ಹೆಣ್ಣು ಮಕ್ಕಳಾದರೂ ವಿದ್ಯಾಭ್ಯಾಸಕ್ಕಿಲ್ಲದ ಅಡೆತಡೆ, ಕಾಲೇಜು ಜೀವನ, ಹಾಸ್ಟೆಲ್ ಬದುಕಿನ ಅನುಭವ, ಪ್ರೇಮವಿವಾಹಕ್ಕೆ ಅಸ್ತು ಅವರವರ ಬಾಳಿಗೆ ನೆರವಾಗುವ ಕೈಹಿಡಿದವರು ತ್ರಿವೇಣಿಯವರ ಪತಿ ಶಂಕರ್ ತ್ರಿವೇಣಿಗೆ ಪುಸ್ತಕದ ನೆರವನ್ನು ನೀಡುತ್ತಿದ್ದರು. ತ್ರಿವೇಣಿ ತನ್ನ ಸೋದರಿಗೆ ಅದನ್ನು ರವಾನಿಸಿದ್ದರು.

ಹೀಗೆ ಒಬ್ಬರಿಗೊಬ್ಬರು ಪ್ರಭಾವವನ್ನು ಬೀರಿದ್ದರು. ಪ್ರೇರಣೆ ನೀಡಿದ್ದವು ಆದರೆ, ಆರ್ಯಾಂಬರಿಗಿರದ ಎರಡು ನೋವುಗಳು ಬಹುಶಃ ತ್ರಿವೇಣಿಯವರನ್ನು ಮಾಗಿಸಿದವು ಎಂದರೆ ತಪ್ಪಾಗಲಾರದು.

೧. ಚಿಕ್ಕಂದಿನಿಂದಲೇ ಬಂದ ಅನಾರೋಗ್ಯ

೨. ಮಗುವಿನ ಹಂಬಲ

ಈ ವಿಷಯದಲ್ಲಿ ಆರ್ಯಾಂಬರವರು ಸುಖಿ, ಸದೃಢ ಆರೋಗ್ಯವಂತೆ ಹಾಗೂ ಇಬ್ಬರು ಮಕ್ಕಳ ತಾಯಿ. ಹೀಗೆ ಸಹೋದರಿಯರಿಬ್ಬರಿಗೂ, ಮನೆ, ಕುಟುಂಬ, ಪೋಷಕರು, ಬಂಧು ಬಾಂಧವರು, ಸಮಾಜ, ಅವರ ಸ್ಥಿತಿಗತಿಗಳೆಲ್ಲಾ ಪ್ರಭಾವವನ್ನು ಬೀರಿವೆ ಹಾಗೂ ಪ್ರೇರಣೆಯೂ ಆಗಿದೆ.

ಅಡಿಟಿಪ್ಪಣಿಗಳು

೧. ಡಾ. ಹೆಚ್.ವಿ. ವಾಮದೇವಪ್ಪ : ಶೈಕ್ಷಣಿಕ ಮನೋವಿಜ್ಞಾನ, ಶ್ರೇಯಸ್ ಪಬ್ಲಿಕೇಷನ್ಸ್, ದಾವಣಗೆರೆ, ೨೦೦೭, ಪುಟ, ೨೫೩

೨. ಪ್ರೊ. ಸ.ನ. ಗಾಯತ್ರಿ ಮತ್ತು ಡಾ.ಎಸ್.ಡಿ. ಶಶಿಕಲಾ : ಉನ್ಮೀಲನ ಸಂ. (ಶ್ರೀಮತಿ ಆರ್ಯಾಂಬ ಪಟ್ಟಾಭಿ ಅಭಿನಂದನಾ ಗ್ರಂಥ), ಸಂವಹನ ಪ್ರಕಾಶನ, ಮೈಸೂರು, ೨೦೦೨, ಪುಟ, ೩

೩. ಅದೇ, ಪುಟ ೪

೪. ಅದೇ, ಪುಟ ೪

೫. ಅದೇ, ಪುಟ ೫

೬. ಅದೇ, ಪುಟ ೬

೭. ಅದೇ, ಪುಟ ೬

೮ ಅದೇ, ಪುಟ ೮

೯ ಅದೇ, ಪುಟ ೧೦

೧೦ ಸುಧಾರ್ಥಿ : ತ್ರಿವೇಣಿ ಕೃತಿಗಳ ಒಳನೋಟ, ಪ್ರತಿಭಾ ಕಲಾ ಪರಿಷತ್, ಬೆಂಗಳೂರು, ೧೯೭೩, ಪುಟ ೨

೧೧ ಸಿ.ಎನ್. ರಾಮಚಂದ್ರನ್ : ತ್ರಿವೇಣಿ ಭಾರತೀಯ ಸಾಹಿತ್ಯ ನಿರ್ಮಾಪಕರು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೮, ಪುಟ ೩

೧೨ ಅದೇ, ಪುಟ ೩

೧೩ ಸುಧಾರ್ಥಿ : ತ್ರಿವೇಣಿ ಕೃತಿಗಳ ಒಳನೋಟ, ಪ್ರತಿಭಾ ಕಲಾ ಪರಿಷತ್, ಬೆಂಗಳೂರು, ೧೯೭೩, ಪುಟ ೬

೧೪ ಅದೇ, ಪುಟ ೬

೧೫ ಸಿ.ಎನ್. ರಾಮಚಂದ್ರನ್ : ತ್ರಿವೇಣಿ ಭಾರತೀಯ ಸಾಹಿತ್ಯ ನಿರ್ಮಾಪಕರು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೮, ಪುಟ ೭

೧೬ ಸುಧಾರ್ಥಿ : ತ್ರಿವೇಣಿ ಕೃತಿಗಳ ಒಳನೋಟ, ಪ್ರತಿಭಾ ಕಲಾ ಪರಿಷತ್, ಬೆಂಗಳೂರು, ೧೯೭೩, ಪುಟ ೧೪೯

೧೭ ಅದೇ, ಪುಟ ೧೯೮

೧೮ ಅದೇ, ಪುಟ ೨೦೧

ಅಧ್ಯಾಯ ೩

ಸಾಮಾಜಿಕ ಸಂವೇದನೆ ಮತ್ತು ಕಲಾತ್ಮಕತೆ

ಅಧ್ಯಾಯ ೩

ಸಾಮಾಜಿಕ ಸಂವೇದನೆ ಮತ್ತು ಕಲಾತ್ಮಕತೆ

ಅಂತರ್‌ಕ್ರಿಯೆಯ ಪರಿಸರದಲ್ಲಿನ ಭಾವನಾತ್ಮಕ ಬದಲಾವಣೆಗೆ ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಸಂವೇದನಾಶೀಲತೆ ಎಂದು World Reference dictionary ಯಲ್ಲಿ ವ್ಯಾಖ್ಯಾನಿಸಲಾಗಿದೆ.

ಕಲಾತ್ಮಕತೆ ಎಂಬುದು ಕಲೆಯ ಕುಸುರಿ, ಸ್ವರೂಪ, ರಚನೆಯ ವಿಸ್ತಾರದ ಆಳ, ಹರವು ಎಂದು ಅರ್ಥೈಸಲಾಗಿದೆ. ಈ ಹಿನ್ನೆಲೆಯಲ್ಲಿ ಆರ್ಯಾಂಬ ಹಾಗೂ ತ್ರಿವೇಣಿಯವರ ಕಾದಂಬರಿಗಳಲ್ಲಿ ಕಂಡು ಬರುವ ಸಾಮಾಜಿಕ ಸಂವೇದನೆ ಅನುಭವಜನ್ಯವೋ, ಕಾಲ್ಪನಿಕವೋ, ಯಾವ ನೆಲೆಯಲ್ಲಿ ಸಂವೇದನೆ ರೂಪುಗೊಂಡಿದೆ ಅವರ ಒಟ್ಟು ಅಭಿಪ್ರಾಯಗಳು, ಅದನ್ನು ಚಿತ್ರಿಸುವ ಹಿನ್ನೆಲೆಯಲ್ಲಿನ ಕಲಾತ್ಮಕತೆ ಹೇಗೆ ಭಿನ್ನತೆ ಕಂಡುಕೊಂಡಿದೆ, ಅದರ ಸಾರ್ಥಕ್ಯವೇನು? ಅವರ ನಿಲುವೇನು? ನೈಜವೋ, ಆರೋಪಿತವೋ ಇತ್ಯಾದಿ ವಿಚಾರಗಳನ್ನು ಎಳೆಎಳೆಯಾಗಿ ಚರ್ಚಿಸಲಾಗಿದೆ.

ಕಾದಂಬರಿಯೆಂದರೆ, ಜೀವನದ ಕಾಪಿರೈಟಿಂಗ್ ಅಲ್ಲ. ಆದ್ದರಿಂದಲೇ ಜೀವನದ ಮಹತ್ತನ್ನು ಅರ್ಥ ಮಾಡಿಕೊಡುವ ಅದರ ಒಂದಂಗದ ಅಥವಾ ಒಂದು ದೃಷ್ಟಿಕೋನದ ಸಂಕ್ಷೇಪ ಕಾದಂಬರಿಯಲ್ಲಾಗುತ್ತದೆ. ಎಲ್ಲಾ ಪ್ರಕರಣಗಳಿಂದ, ಪುಟಗಳಿಂದ ವಾಕ್ಯಗಳಿಂದ ಉತ್ತಮವಾಗಿ ಬರೆಯಲ್ಪಟ್ಟ ಕಾದಂಬರಿಯು ಮೂಲಭೂತವಾದ ಒಂದು ಇಷ್ಟಾತ್ಮಕ ಜೀವನಶಕ್ತಿಯನ್ನು ತಿರುತಿರುಗಿ ಮಾರ್ನುಡಿಯುತ್ತಿರಬೇಕಾಗುತ್ತದೆ.

ಲೇಖಕಿಯರಿಗೆ ಮಾನವರಲ್ಲಿ ಅವರ ಜೀವನದ ವ್ಯವಹಾರ, ವಿಚಾರ, ವೇದನೆ, ನಗುಗಳಲ್ಲಿ ಉಂಟಾದ ವಿಶೇಷ ಆಸಕ್ತಿಯೇ ಕಾದಂಬರಿಯಂಥ ಸಾಹಿತ್ಯರೂಪ ಬರಲು ಕಾರಣವಾಗಿದೆ. ಕಾದಂಬರಿಗಳ ಕಥಾವಸ್ತು ಮಾನವೀಯ ಜೀವನವೇ ಅಂದರೆ, ಮಾನವರೆಂದಷ್ಟೆ ಅಲ್ಲ; ಮಾನವೀಯತೆ ಕಂಡುಬರುವ ಅದನ್ನು ಕಾಣುವ ವ್ಯಕ್ತಿಗಳ ಆಯ್ಕೆ ಮಾಡಿಕೊಂಡು ಪ್ರತಿನಿಧಿಸುವಾಗ ಅದಕ್ಕಾಗಿ ಬೇರೆ ಬೇರೆ ಮಾರ್ಗಗಳನ್ನು ಅನುಸರಿಸುವಾಗ ಅದು ನವ, ಆಧುನಿಕವಾದರೆ ಜೀವನವನ್ನು ಕುರಿತು ಹೇಳುವಾಗ ಅದು ಪ್ರಾಚೀನವೇ ಆಗಿರುತ್ತದೆ.

ಹೀಗಿರುವಾಗ ಲೇಖಕಿಯರು ಚಿತ್ರಿಸುವ ಕಾದಂಬರಿಗಳಲ್ಲಿ ಕಂಡು ಬರುವ ಕಲಾತ್ಮಕ ಅಂಶಗಳನ್ನು ಈ ರೀತಿಯಾಗಿ ಗುರುತಿಸಬಹುದಾಗಿದೆ.

* ಪ್ರತಿಭೆ ಕಾದಂಬರಿಯಲ್ಲಿ ಪ್ರಪ್ರಥಮವಾಗಿ ಇರಲೇಬೇಕಾದ ಅಂಶ. ಅದಿಲ್ಲವಾದರೆ ಸಾಹಿತ್ಯ ನಿರ್ಮಾಣ ಅಸಾಧ್ಯ ಅಂದರೆ ತಮ್ಮ ಜ್ಞಾನ ಅನುಭವಗಳು ಸುಸ್ಪಷ್ಟ ಮತ್ತು ನಿರ್ದಿಷ್ಟ ರೂಪದಲ್ಲಿರಬೇಕು. ಚೇತನ, ಅಚೇತನ ವಸ್ತುಗಳ ಅಂತರಾಳಕ್ಕಿಳಿದು ಅವುಗಳ ಜೀವನಶಕ್ತಿಯನ್ನು ಗುರುತಿಸುವ ಶಕ್ತಿ ಮನಸ್ಸಿರುವುದು.

* ಪ್ರತಿಭೆಯ ಜೊತೆಯಲ್ಲಿ ಸಾಮಾಜಿಕ ಕಳಕಳಿ ಏಕೆಂದರೆ, ಪ್ರತಿಭೆ ಸ್ವಯಂಭೂ ಸ್ವಯಂಸ್ಫುರಿತವಾದರೂ ಅದರ ಯೋಗ್ಯವಾದ ಬೆಳವಣಿಗೆಗೆ ನಡುಕವಿಲ್ಲದ ನಡಿಗೆಗೆ ಔಚಿತ್ಯದ ಅರಿವಿಗೆ ಸಾಮಾಜಿಕ ಸಂವೇದನೆಗೆ ಕಳಕಳಿ ಅನಿವಾರ್ಯ. ಕಾದಂಬರಿಗಾರರು ಸಾಮಾಜಿಕ ಜೀವಿಗಳಾದ ಮೇಲೆ ಅಂದರೆ ಸಂಘಜೀವಿಗಳಾಗಿರುವಾಗ ಸಮಾಜದ ಆಗುಹೋಗುಗಳನ್ನು ಅರಿಯದೇ ಹೋದರೆ ಕಾದಂಬರಿ ಜೀವನ ಚಿತ್ರಣ, ದರ್ಶನ ಮತ್ತು ಅವುಗಳ ಸಮರ್ಥ ಅಭಿವ್ಯಕ್ತಿಯಲ್ಲಿ ಕೊರತೆಯನ್ನನುಭವಿಸಬೇಕಾಗುತ್ತದೆ. ಕೇವಲ ಒಂದೇ ವಿಷಯದಲ್ಲಿ ಆಸಕ್ತಿಯಿದ್ದ ಕಾದಂಬರಿಕಾರನ ಜೀವನದರ್ಶನ ಸಂಕುಚಿತವಾಗಿ ಉಳಿಯುವುದಷ್ಟೇ ಅಲ್ಲದೆ, ಸಾಹಿತ್ಯದುದ್ದೇಶಕ್ಕೂ ರೋಗವುಂಟಾಗುವ ಸಾಧ್ಯತೆ ಹೆಚ್ಚು.

ಜೀವನದ ಮೂಗಿನ ಹೊಳ್ಳೆಗಳಲ್ಲೇ ಉಸಿರಾಡಬೇಕಾದ ಕಾದಂಬರಿ ಅದರ ಸಮಗ್ರತೆಯನ್ನು ಅದರ ಸಂಕೀರ್ಣತೆಯೊಂದಿಗೆ ಗ್ರಹಿಸಬೇಕಾದುದು ಅಗತ್ಯ. ಜೀವನಕ್ಕೆ ಒಂದೇ ಮುಖ, ಒಂದೇ ಅವಸ್ಥೆ ಇರುವುದು ಅಸಾಧ್ಯವಾದ ಮೇಲೆ, ಕಾದಂಬರಿಯ ಆಸಕ್ತಿ ಹತ್ತು ಮುಖಗಳಲ್ಲಿ ವ್ಯಕ್ತವಾಗಬೇಕಾದುದು ಜೀವನನಿಷ್ಠವಾದ ಕಾದಂಬರಿಕಾರ ಅವಶ್ಯವಾಗಿ ನೆನಪಿಡಬೇಕಾದ ಅಂಶವಾಗಿರುವುದರಿಂದ ಲೇಖಕಿಯರಲ್ಲಿ ಅದು ಸಿದ್ಧಿಸಿದೆ.

* ಶಾಸ್ತ್ರಗಳಿಗಷ್ಟೇ ಸೀಮಿತವಾದ ಓದಿಗೂ ಅದರಾಚೆಯಿರುವ ಜೀವನಾನುಭವಕ್ಕೂ ಪ್ರತ್ಯಕ್ಷವಾಗುತ್ತದೆ. ಎಲ್ಲಾ ವರ್ಗದವರ, ಎಲ್ಲಾ ಅಂತಸ್ತುಗಳಲ್ಲಿರುವವರೊಂದಿಗೆ ಸಂಪರ್ಕವಿಟ್ಟುಕೊಂಡರೆ ಅವರಿದ್ದಂತೇ ಅವರನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ.

ಜನಸಂಪರ್ಕ ಅವರೊಂದಿಗಿನ ಸಂಭಾಷಣೆ, ವ್ಯವಹಾರಗಳು ಶಾಸ್ತ್ರಾಭ್ಯಾಸದಿಂದ ಬಂದ ಜ್ಞಾನವನ್ನು ಪರೀಕ್ಷೆಗೊಳಪಡಿಸುತ್ತದೆ. ಕಾರಣ ಶಾಸ್ತ್ರಾಭ್ಯಾಸಕ್ಕೂ ಸಹಾಯ ಮಾಡುತ್ತದೆ. ಕೇವಲ ಶಾಸ್ತ್ರಾಭ್ಯಾಸವೆಂದರೆ ಮರದ ಹಿಂದೆ ಕಾಣುವ ಆಕಾಶದಲ್ಲಿ ತೇಲುವ ಚಂದಿರನನ್ನು ಮಾತ್ರ

ನೋಡುತ್ತಾ ಕಾಲಕೆಳಗಿನ ತಿಪ್ಪೆಯನ್ನು ಮರೆತು ಆನಂದಿಸಿದಂತಾಗುತ್ತದೆ. ಶ್ರೀಮಂತರನ್ನು ಮಾತ್ರ ನೋಡಿ, ಸಮಾಜದ ಸ್ಥಿತಿಗತಿಗಳು ಸುಖಕರವಾಗಿದೆಯೆಂದು ಭಾವಿಸುವಂತಾಗುತ್ತದೆ. ಹೀಗಾಗುವುದರಿಂದ ನಮ್ಮ ಜ್ಞಾನ ದೋಷಯುಕ್ತವೆಂದಷ್ಟೇ ಆಗದೆ, ನಮಗಿದ್ದ ಜ್ಞಾನವೂ ಸುಳ್ಳಾಗುತ್ತದೆ. ಅವಾಸ್ತವವಾಗುತ್ತದೆ. ಆದುದರಿಂದ ಅಭಿವ್ಯಕ್ತ, ವಸ್ತುವು, ಅಸತ್ಯ, ಅಪಕ್ವ ಅಸಹ್ಯವಾಗುತ್ತದೆ ಅಥವಾ ಅಶಕ್ತ, ಅಪೂರ್ಣವಾಗಿ ಅಲಕ್ಷಿಸಲ್ಪಡುತ್ತದೆ. ಒಟ್ಟಿನಲ್ಲಿ ಕಾದಂಬರಿಕಾರನ ಶ್ರಮ ನಿರರ್ಥಕವಾಗುತ್ತದೆ. ಆ ಅವಘಡಕ್ಕೆ ಕೈ ಹಾಕದೆ ಲೇಖಕಿಯರೀರ್ವರೂ ಪ್ರತಿ ಅಂಶವನ್ನು ಸಮಾಜಮುಖಿಯಾಗಿ, ಸಂಘಜೀವಿಯಾಗಿ ಒಟ್ಟಾರೆ ಅನುಭವಿಸಿ ವೇದ್ಯವಾಗುವಂತೆ ರಚಿಸಿರುವುದು ಕಂಡು ಬರುತ್ತದೆ.

* ಕಾದಂಬರಿಕಾರರಿಗೆ ಉತ್ತಮವಾದ ಹೃದಯವಿಲ್ಲವಾದರೆ ಅದು ಶಕ್ತಿಯುತವಾದ ಭಾವನೆಗಳಿಂದ ತುಂಬಿಲ್ಲವಾದರೆ ವಿಷಯಗಳೆಲ್ಲ ನಿಷ್ಪ್ರಯೋಜಕ. ವಾಚಕರನ್ನು ಅಳಿಸಬೇಕೆಂದು ಇಚ್ಛಿಸುವ ಕಾದಂಬರಿಕಾರ ಮೊದಲು ತಾನು ಅಳಬೇಕಾಗುತ್ತದೆ. ಪಡೆಯುವವನು ಮೊದಲು ಕೊಡಲು ಕಲಿಯಬೇಕು ಎಂಬಂತೆ ಹೃದಯವೇನೋ ಸಂವೇದನೆಗೆ ಅವಶ್ಯ. ಆದರೆ ಎಲ್ಲ ತರಹದ ಸಂವೇದನೆಗಳೂ ಹೃದಯದ ಆರೋಗ್ಯಕರ ಬೆಳವಣಿಗೆಗೆ ಅನವಶ್ಯಕ. ಶುದ್ಧ ವೈಜ್ಞಾನಿಕವಾಗಿ ಹೃದಯಕ್ಕೆ ಎಲ್ಲದರ ಸಂಬಂಧವನ್ನೂ ಕಡಿದು ಮಾತನಾಡುವುದಿದ್ದರೆ, ಅದಕ್ಕೆ ಅನಿಸಿದ್ದೆಲ್ಲಾ ಸ್ವಾಗತಾರ್ಹವಾದೀತೇನೋ ಆದರೆ, ಸಾಹಿತ್ಯದಲ್ಲಿ, ಅಂತೇ ಜೀವನದಲ್ಲಿ ಸುಸಂಸ್ಕೃತದ ಹೃದಯದ ಆಳವಾದ, ಗಾಢವಾದ ಅನಿಸಿಕೆಗೆ ಮಾತ್ರ ಬೆಲೆ. ಎಲ್ಲರ ಕಣ್ಣುಗಳಿಗೆ ಎಲ್ಲವೂ ಕಾಣುತ್ತದೆ. ಆದರೆ ಒಳ್ಳೆಯವರು ಒಳ್ಳೆಯದನ್ನು ಮಾತ್ರ ಕಾಣಬೇಕು. ಸ್ಪಂದಿಸುವ, ಮಿಡಿಯುವ ಹೃದಯವಿರಬೇಕು. ಎಲ್ಲಾ ಸಹೃದಯರಿಗಿರುವಂತೆ, ಆದರೆ ಯೋಗ್ಯವಾದುದಕ್ಕೆ ಮಾತ್ರ ಅತ್ತು, ಸ್ಪಂದಿಸಿ, ಮಿಡಿದು ಉಳಿದದ್ದರಲ್ಲಿ ತಾಟಸ್ಥ್ಯವನ್ನೋ, ವಿರೋಧವನ್ನೋ ಕಲಿಯಬೇಕಾಗುತ್ತದೆ ಸಾಹಿತಿಯ ಹೃದಯ. ಸಾಹಿತಿಗೆ ಉತ್ತಮವಾದ ಹೃದಯವಿರಬೇಕು; ಹೃದಯಕ್ಕಿಂತಲೂ 'ಉತ್ತಮ' ಕ್ಕೆ ಅಲ್ಲಿ ಬೆಲೆ ಹೆಚ್ಚು ಎನ್ನುವುದನ್ನು ನೆನಪಿಟ್ಟುಕೊಳ್ಳಬೇಕು.

ಮತಿದರ್ಪಣೇ ಕವೀನಾಂ ವಿಶ್ವಂ ಪ್ರತಿಫಲತಿ – ಕಾರಣ ಮತಿವಂತನಾದ ಸಾಹಿತಿ ಶುಚಿಯಾದ ರುಚಿಯನ್ನು ರೂಪಿಸಿಕೊಂಡು ಜೀವನವನ್ನು ನೋಡಬೇಕಾಗುತ್ತದೆ. ಆಯ್ಕೆ ಮಾಡಿ ಪ್ರತಿಫಲಿಸಿಕೊಳ್ಳಬೇಕಾಗುತ್ತದೆ; ಸಮರ್ಥವಾಗಿ ತನಗಾಗಿಯೂ ಉಳಿದವರಿಗೂ ನಿವೇದಿಸಬೇಕಾಗುತ್ತದೆ.

ಅಮಿತವಾದ ಮನಃಶಕ್ತಿಯಿರುವುದೂ ಅಪೂರ್ವ ಮತ್ತು ಅಸಾಮಾನ್ಯವಾದ ಪ್ರತಿಭೆಯಿರುವುದೂ ರೂಪವುಳ್ಳ ಶರೀರದಲ್ಲೇ. ಆ ಶರೀರದ ಆಕಾರದ ಮೇಲೆ ಅವುಗಳನ್ನು ಅಳೆಯಲು ಹೊರಡುವುದು ನ್ಯಾಯವಾಗಲಾರದು. ರೂಪಕ್ಕೆ ಅರ್ಥ ಬರುವುದು ಅದು ಒಳಗೊಂಡ ಸತ್ವದ ಮೇಲೆ ಎನ್ನುವ ಮಾತು ಸರ್ವಮಾನ್ಯವಾದುದು. ಜೀವನದಲ್ಲಿ ರೂಪಕ್ಕೆ ಬೆಲೆ ಹೆಚ್ಚಾದಂತೆ, ಸಾಹಿತ್ಯದಲ್ಲಿ ರೂಪವೇ ಮುಖ್ಯವಾದರೆ ಅದೊಂದು ಅಕಾಲಿಕ ಅನಿರೀಕ್ಷಿತ ಮತ್ತು ಅಸ್ವೀಕಾರಾರ್ಹ. ಜೀವನವನ್ನು ಪ್ರತಿನಿಧಿಸುವ ಸಾಹಿತ್ಯ ಅದರ ದೋಷಗಳನ್ನೂ ಒಳಗೊಳ್ಳಬೇಕಾಗುವುದು ಅನಿವಾರ್ಯವಾದರೂ, ಜೀವನದರ್ಶನವನ್ನು ಒಳಗೊಳ್ಳಬೇಕಾದ ಸಾಹಿತ್ಯ ನಿರ್ದೋಷವಾಗಿರಬೇಕಾದುದೂ ಅನಿವಾರ್ಯವೇ ಆಗುತ್ತದೆ. ಸಾಹಿತ್ಯ ಅಥವಾ ಕಲೆಗಳ ವಿಷಯದಲ್ಲಿ ಜನರ ಒಲವು ಹೆಚ್ಚಾಗುತ್ತಾ ಹೋದಾಗ, ಸಾಹಿತ್ಯ ಜೀವನವನ್ನು ಪ್ರತಿನಿಧಿಸದೇ ಅದು ಜೀವನವನ್ನೇ ರೂಪಿಸತೊಡಗುತ್ತದೆ. ಆಗ ಸಾಹಿತಿ ಹೊಣೆರಹಿತನಾಗಲಾರ. ಜೀವನ ಕೆಟ್ಟಿದೆಯೆಂದರೆ ಅದಕ್ಕೆ ಕಾರಣ ನೀನು ಹಾಗೆಯೇ ಬೆಳೆಯಿಸಿದ್ದಿ! ಎಂದು ಉತ್ತರಿಸಬೇಕಾಗುತ್ತದೆ. ಆಕಾರಕ್ಕಿಂತ ಅಂತರಾಳಕ್ಕೆ ಹೆಚ್ಚು ಗಮನ ಕೊಡಬೇಕಾದುದು ಎಂಬ ವಿಷಯಕ್ಕೆ ಹೆಚ್ಚು ಗಮನಹರಿಸಿ ಕಾದಂಬರಿಗಾರ್ತಿಯರು ಕಾದಂಬರಿಯಲ್ಲಿ ಕಲಾತ್ಮಕತೆಯನ್ನು ಬಿಂಬಿಸಿದ್ದಾರೆ.

ಸಮಾಜದ ನಡುವೆ ನಿಂತು ಸಮಾಜಮುಖಿಯಾಗಿ ಸಮಾಜದರ್ಶನವನ್ನು ಕಾದಂಬರಿಗಳಲ್ಲಿ ಮಾಡಿಸಿದ್ದಾರೆ. ಒಲವು ಸ್ತ್ರೀಪರವಾದರೂ ಜೀವನವನ್ನು ಪ್ರಾಮಾಣಿಕವಾಗಿ ಅನುಕರಿಸಬೇಕು ಎಂಬ ನಿಲುವು ಇಬ್ಬರದ್ದು.

ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳನ್ನು ಅವಲೋಕಿಸಿದಾಗ ಸಾಮಾಜಿಕ ಜೀವನವನ್ನು ವಸ್ತುವಾಗಿರಿಸಿಕೊಂಡು ಸಂಸಾರದಲ್ಲಿ ಹೆಣ್ಣಿನ ಸ್ಥಾನಮಾನ, ಸೌಜನ್ಯತೆ, ಉದಾತ್ತತೆ ಹಾಗೆಯೇ ಗಂಡಿನ ಸ್ವಾರ್ಥತೆ, ಧೂರ್ತತನ, ಸಮಯಸಾಧಕ ಬುದ್ಧಿ ಹಾಗೂ ವಿಶ್ವಾಸಘಾತುಕತೆ ಇತ್ಯಾದಿ ಗಂಡು ಹೆಣ್ಣಿನ ಸ್ವಭಾವಗಳನ್ನು ವಿಶ್ಲೇಷಿಸುತ್ತಾ ಬಡತನ, ಅನಾಥಪ್ರಜ್ಞೆ, ಮಾನಸಿಕ ತುಮುಲ ಮೊದಲಾದ ಬದುಕಿನ ಸಮಸ್ಯೆಗಳನ್ನು ತಮ್ಮ ಬರೆವಣಿಗೆಯ ಮೂಲಕ ವ್ಯಕ್ತಪಡಿಸಿದ್ದಾರೆ.

ಒಬ್ಬ ವ್ಯಕ್ತಿ ಹುಟ್ಟಿನಿಂದ ಸಾವಿನವರೆಗೆ ಜೀವನದಲ್ಲಿ ಒಂದೊಂದು ಕ್ಷಣವೂ ಅನುಭವಿಸುವ ದುಃಖಗಳ ಸಾರವೇ ಬದುಕು. ಹೀಗಿರುವಾಗ ಹೆಣ್ಣಿಗೂ ಒಂದು ಬದುಕಿದೆ. ವ್ಯಕ್ತಿತ್ವವಿದೆ,

ಶಕ್ತಿಯಿದೆ. ಇತರರಿಗಾಗಿ ತ್ಯಾಗಮಯಿಯಾಗಿ ಬದುಕಿದರೂ ತಾನು ತನ್ನ ಶಕ್ತಿಯನ್ನು ಸಮರ್ಥವಾದ ರೀತಿಯಲ್ಲಿ ಬಳಸಿಕೊಳ್ಳದಿದ್ದರೆ ಈ ನಮ್ಮ ಬದುಕಿಗೆ ಅರ್ಥವಿಲ್ಲ ಎಂಬ ಹೆಣ್ಣಿನ ಧ್ವನಿ ಅವರ ಕಾದಂಬರಿಗಳಲ್ಲಿ ಪ್ರತಿಬಿಂಬಿಸುತ್ತದೆ.

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಎರಡನೆಯ ದರ್ಜೆಯ ವ್ಯಕ್ತಿತ್ವಕ್ಕೆ ಎರವಾಗಿ ತನ್ನ ಸ್ಥಾನಮಾನಗಳನ್ನು ಗೌಣವಾಗಿಸಿಕೊಳ್ಳುತ್ತಲೇ ಸಾಗಿದ್ದಾಳೆ. ಪುರುಷನಿಂದ ಕೇವಲ ಹೊಗಳಿಕೆಗೆ ಕಾರಣಳಾಗಿ ಪ್ರಾಯೋಗಿಕವಾಗಿ ಸಾಮಾಜಿಕ ಸ್ಥಾನ ಮಾನಗಳಿಂದ ದೂರವೇ ಉಳಿದಿದ್ದಾಳೆ. ವಿಶ್ವದ ಜನಸಂಖ್ಯೆಯಲ್ಲಿ ಶೇ. ೫೦ ರಷ್ಟು ಮಹಿಳೆಯರಿದ್ದರೂ ಪುರುಷನಿಗೆ ಹೋಲಿಸಿಕೊಂಡರೆ ಸ್ತ್ರೀಯು ಶೋಷಣೆಗೆ, ದೌರ್ಜನ್ಯಕ್ಕೆ, ನಿಂದನೆಗೆ ಒಳಗಾಗಿದ್ದಾಳೆ. ಬಹುಶಃ ಈ ಹಿನ್ನೆಲೆಯಲ್ಲಿ ಕೆದಕಿ ಅವಲೋಕಿಸಿದಾಗ ಮಹಿಳೆಯ ಅಂತಃಕರಣದಲ್ಲಿ ಇಲ್ಲವಾಗಿರುವ 'ಅಂತಃಶಕ್ತಿ'ಯೇ ಕಾರಣ ಎನ್ನುವ ಅಂಶ ಗೋಚರಿಸುತ್ತದೆ. ಪುರುಷನಿಗೆ ಸಮಾನವಾದ ಸ್ಥಾನಮಾನಗಳನ್ನು, ಹಕ್ಕುಗಳನ್ನು ಸವಲತ್ತುಗಳನ್ನು ಅನುಭವಿಸುವ ಸ್ವಾಭಿಮಾನ ಮತ್ತು ಕ್ರಿಯಾಶೀಲತೆ ಮಹಿಳೆಯರಲ್ಲಿ ಕಂಡು ಬರದಿರುವುದೇ ಆಗಿದೆ. ಪುರುಷನೊಂದಿಗೆ ಸರಿಸಮಾನವಾಗಿ ತನ್ನ ಹಕ್ಕು ಬಾಧ್ಯತೆಗಳಿಗಾಗಿ ಸಂಘರ್ಷಕ್ಕೆ ನಿಲ್ಲುವ ಹೋರಾಟಕ್ಕೆ ಸ್ತ್ರೀ ಎಂಬ ಪರಂಪರೆಯಿಂದ ಅವಳೊಳಗೆ ಹುದುಗಿ ಬಂದಿರುವ ಪುರುಷನೊಂದಿಗೆ ಕೀಳರಿಮೆ ಕಾರಣವೇನೋ ಎನಿಸುತ್ತದೆ. ಇಂತಹ ತನ್ನೊಳಗಿನ ಕೀಳರಿಮೆಯನ್ನು ಕಿತ್ತೊಗೆಯದ ಹೊರತು ಸಮಾನತೆಗಾಗಿ ಹೋರಾಡುವ ಅಂತಃಶಕ್ತಿ ಮಹಿಳೆಯರಲ್ಲಿ ಕ್ರಿಯಾಶೀಲಗೊಳ್ಳಲಾರದು.

"ಅಂತಃಶಕ್ತಿ ಎನ್ನುವ ಪ್ರಯೋಗಿಕ ಪದ ವ್ಯಕ್ತಿಯ ಮನಸ್ಸಿನ ಒಂದು ಗಟ್ಟಿತನದ ಭಾವ ತನ್ನನ್ನು ತಾನು ರಕ್ಷಿಸಿಕೊಳ್ಳಲು, ತನ್ನ ಸ್ವಾಭಿಮಾನವನ್ನು ಕಾಪಾಡಿಕೊಳ್ಳಲು ತನಗಾದ ಅವಮಾನ, ನಿಂದನೆ, ಅನ್ಯಾಯ ಅಸಮಾನತೆ ಇತ್ಯಾದಿಗಳನ್ನು ತನ್ನ ಸ್ವಶಕ್ತಿಯ ದೃಢನಿರ್ಧಾರದಿಂದ ಎದುರಿಸಿ ನಿಲ್ಲಬಹುದಾದ ಒಂದು ಮನಸ್ಥಿತಿ. ಒಟ್ಟಾರೆ ಅದೊಂದು ತನ್ನನ್ನು ತಾನು ಕಾಪಾಡಿಕೊಳ್ಳಲು ಬೇಕಾದ ಹೋರಾಟದ ಮನೋಭಾವ ಬಹುಪಾಲು ನಮ್ಮ ಮಹಿಳೆಯರಲ್ಲಿ ಹೋರಾಟ ಸಂಘರ್ಷ ಇತ್ಯಾದಿ ವಾಸ್ತವಾಂಶಗಳು ಕೇವಲ ಪುರುಷನಿಗೆ ಮಾತ್ರ ಎನ್ನುವ ಭೀತಿಯೊಂದಿಗಿನ ನಂಬಿಕೆ ಅವಳಲ್ಲಿ ಮನೋಭಾವನೆ ಹುಟ್ಟದಿರಲು ಕಾರಣವಾಗಿದೆ ಎಂಬ 'ವಿಜಯಲಕ್ಷ್ಮಿ ಮಾನಾಪುರ'ರವರ ಮಹಿಳಾ ಚಿಂತನೆಯನ್ನು ಪ್ರಸ್ತುತ ಗಮನಿಸಬಹುದಾಗಿದೆ".[೧]

ಇಂಥ ಪರಿಸ್ಥಿತಿಯಲ್ಲಿ ವಾಸ್ತವತೆಯ ಹಿನ್ನೆಲೆಯಲ್ಲಿ ಬದುಕಿನ ಸೂಕ್ಷ್ಮಗಳನ್ನು ವಿಮರ್ಶಾತ್ಮಕವಾಗಿ ಮನಮುಟ್ಟುವಂತೆ ರಚಿಸಿರುವ ಆರ್ಯಾಂಬ ಪಟ್ಟಾಭಿಯವರು ಹಾಗೆಯೇ ಸ್ವತಃ ಸ್ತ್ರೀಯಾಗಿರುವುದರಿಂದ ತ್ರಿವೇಣಿಯವರು ಸ್ತ್ರೀಸಂವೇದನೆಯನ್ನು ಯಾವ ರೀತಿಯ ಭಾವಾವೇಶವೂ ಇಲ್ಲದೆ ಅಭಿವ್ಯಕ್ತಿಸಿದ್ದಾರೆ.

ಆರ್ಯಾಂಬರ ಬಂಡಾಯದ 'ಸುಧಾ'ಳ ಮೂಲಕ ಸ್ತ್ರೀಬದುಕಿನ ಸಮಸ್ಯೆಯನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಗುರುತಿಸುವ ಸ್ತ್ರೀಸ್ವಾತಂತ್ರ್ಯವನ್ನು ಸಮಾನತೆ, ಸ್ವಾಭಿಮಾನದ ಪ್ರಶ್ನೆಗಳನ್ನು ಎತ್ತುತ್ತಾರೆ. 'ಯಜ್ಞಪಶು'ವಿನ ಕಾವೇರಿ ಈ ರೀತಿಯ ದಿಟ್ಟ ಪಾತ್ರದವಳೇ ಹೆಣ್ಣು ಗಂಡಿನಷ್ಟೇ ಸಮಾನಳು ಎಂಬ ಧೋರಣೆಯವಳೆ. ಅಂತೆಯೇ ತ್ರಿವೇಣಿಯವರ 'ಕೀಲುಗೊಂಬೆ'ಯ ಸೀತಾ 'ಮೊದಲಹೆಜ್ಜೆ'ಯ ನಾಯಕಿ.

ಕಾದಂಬರಿ ಎಂದರೆ ಕೌಟುಂಬಿಕ ಜೀವನದ ವಿಸ್ತಾರಾಂಶ ಜೀವನವೆಂಬುದು ಒಂದು ನಾಟಕ. ಕಾದಂಬರಿ ಆ ನಾಟಕದ ಕಥೆನ್ನು ಪಾತ್ರಗಳಿಂದ ಸೂಚಿಸಿ ನಡೆಸುವ ಚಿತ್ರಣ. ಹೆಣ್ಣಾಗಿ ಸ್ತ್ರೀವಾದಿಯಾಗಿ ಆರ್ಯಾಂಬರು ತಮ್ಮ ಕಾದಂಬರಿಗಳ ಚಿತ್ರಣದಲ್ಲಿ ಮಹಿಳೆಯರ ಪಾತ್ರಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದಾರೆ. ಅವರ ನೋವುನಲಿವುಗಳನ್ನು ಅರಿತು ಕಾದಂಬರಿಯ ಮೂಲಕ ಹೆಣ್ಣು ಹೆಚ್ಚು ಸದೃಢವಾಗಬೇಕೆಂಬ ವ್ಯಕ್ತಿತ್ವವನ್ನು ಪಡೆಯಬೇಕು. ಸಮಾಜವನ್ನು ಬೆಳೆಸುವ ವ್ಯಕ್ತಿಯಾಗಬೇಕು ಎಂಬುದನ್ನು ಕಾದಂಬರಿಗಳುದ್ದಕ್ಕೂ ಪ್ರತಿಬಿಂಬಿಸಿದ್ದಾರೆ. ಹೆಣ್ಣಿನ ಜೀವನದ ತುಮುಲಗಳನ್ನು ಕಲಾತ್ಮಕವಾಗಿ ಎಳೆಎಳೆಯಾಗಿ ಬಳಸುವಲ್ಲಿ ಸಫಲರಾಗಿದ್ದಾರೆ.

ಕಾದಂಬರಿಯು ನಮಗೆ ಕೊಡುವುದು ಸಮಾಜಸೃಷ್ಟಿಯ ಆದರ್ಶರೂಪದ ಪುನಃಸೃಷ್ಟಿ ಎನ್ನಬಹುದು. ಹೀಗಿರುವಾಗ ಪೆನ್ನು ಮಾಡಬೇಕಾದ ಕಾರ್ಯವನ್ನು ಪಿಕಾಸು ಮಾಡಬೇಕಾದದ್ದಿಲ್ಲ. ಸೂರ್ಯಕಾಂತಿಯು ಸೂರ್ಯನಂತೆ ಹೊಳೆಯಬೇಕಾದ್ದಿಲ್ಲ, ಸಕ್ಕರೆ ಜೇನಿನ ಸವಿ ಕದಿಯಬೇಕಾದ್ದಿಲ್ಲ. ರುಚಿಯ ಕಾರ್ಯದಲ್ಲಿ ಹಾಗಲಕಾಯಿಗೂ ಬೆಲೆಯುಂಟು ಇದು ಪ್ರಾಕೃತಿಕವಾಗಿ ನಿರೂಪಿತವಾದ ಸೃಷ್ಟಿ. ಅಂತೆಯೇ ಸಮಾಜದ ಪಾತ್ರಗಳು, ಸಂಬಂಧಗಳು ಕಾದಂಬರಿಯಲ್ಲಿ ವಿಭಿನ್ನ ರೀತಿಯಲ್ಲಿ ಚಿತ್ರಿತವಾಗುತ್ತವೆ. ಆ ಕಾರ್ಯವನ್ನು ಕಾದಂಬರಿಗಾರ್ತಿಯರು ಸಮಾಜಮುಖಿಯಾಗಿ ಚಿತ್ರಿಸಿದ್ದಾರೆ.

ಸಾಂಪ್ರದಾಯಿಕ ಕಥೆಯಲ್ಲಿ ಸಮಾಜದ ಜೊತೆ ಸಾವಯವ ಬಿರುಕು ಇರುವುದಿಲ್ಲ. ಕಾದಂಬರಿ ಹುಟ್ಟಿಕೊಳ್ಳುವುದೇ ಈ ಸಾವಯವ ಮೂಲ ನೆಲೆಯಲ್ಲಿ ಸಾಂಪ್ರದಾಯಿಕ ಕಥನದಲ್ಲಿ ಕಂಡು ಬರುವಂತೆ ಕಾದಂಬರಿಯಲ್ಲಿ ನಿರೂಪಣಾ ಪ್ರಜ್ಞೆಗೆ ತನ್ಮಯತೆಯ ಸ್ಥಿತಿ ಸಾಧ್ಯವಿರುವುದಿಲ್ಲ. ಸಾಂಪ್ರದಾಯಿಕ ಕಥನಗಳಲಿ ಸದ್ಯಕ್ಕಿರುವ ಗುಣ ಕಾಲಾತೀತವಾದದ್ದು.

ಪಾತ್ರಗಳ ವರ್ಣನೆಯ ಹಿಂದಿನ ಕಾರಣ ಹುಡುಕುವಿಕೆಯ ಹಿನ್ನೆಲೆಯಲ್ಲಿ ಕಾದಂಬರಿ ಭಿನ್ನವಾಗುತ್ತದೆ. ಕಾದಂಬರಿ ಪಾತ್ರ ನಿರ್ಮಾಣಕ್ಕೆ ವರ್ತನೆಗೆ ನಿರ್ಧಿಷ್ಟ ಕಾರಣಗಳನ್ನು ಹುಡುಕುವ ಕೆಲಸ ಮಾಡುತ್ತದೆ. ವರ್ತನೆಗಳ ಸಾಮಾಜಿಕ ಮೂಲವನ್ನು ಹುಡುಕುವುದೇ ಕಾದಂಬರಿಯ ಮುಖ್ಯ ಲಕ್ಷಣ ಎಂಬುದನ್ನು ಸ್ಪಷ್ಟೀಕರಿಸಿದ್ದಾರೆ. ಏಕೆಂದರೆ, ನಿಜವಾದ ಲೇಖಕ ಸಮಾಜವೇ. ಬರೆಹಗಾರ್ತಿಯರು ಅದರ ಕಾರ್ಯದರ್ಶಿಯಾಗುತ್ತಾರಷ್ಟೆ. "ಎರಡನೇ ಸಾಮ್ರಾಜ್ಯ ವ್ಯವಸ್ಥೆಯಲ್ಲಿನ ಒಂದು ಕುಟುಂಬದ ದೈಹಿಕ ಮತ್ತು ಸಾಮಾಜಿಕ ಚರಿತ್ರೆಯಾಗಿಸುತ್ತಾರೆ".[೨] ಸಮಾಜ ಮನುಷ್ಯನ ವಿಶ್ಲೇಷಣೆ ಎಂದೇ ವಿವರಿಸಿದ್ದಾರೆ.

'ಸಂಬಂಧಗಳು' ಕಾದಂಬರಿ ಈ ನಿಟ್ಟಿನಲ್ಲಿ ಹೆಣ್ಣಿನ ಧ್ವನಿಯಾಗಿದೆ. 'ಬಂಡಾಯ' ಸ್ತ್ರೀ ವಿಮೋಚನಾ ಬದುಕಿನ ಸಮಸ್ಯೆಯನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಗುರುತಿಸುವ ಕಾದಂಬರಿ ಸ್ತ್ರೀಸ್ವಾತಂತ್ರ್ಯ, ಸಮಾನತೆ, ಸ್ವಾಭಿಮಾನದ ಪ್ರಶ್ನೆಗಳನ್ನು ಎತ್ತುತ್ತದೆ. 'ಮೊದಲ ಹೆಜ್ಜೆ', 'ಕೀಲುಗೊಂಬೆ' ಕಾದಂಬರಿಗಳು ಹೆಣ್ಣಿಗೊಂದು, ಗಂಡಿಗೊಂದು ಸಾಮಾಜಿಕ ವರ್ತನೆ ಹಾಗೂ ನೈತಿಕ ಮಾನದಂಡಗಳನ್ನು ರೂಪಿಸುವ ಪುರುಷಕೇಂದ್ರಿತ ಸಮಾಜವನ್ನು ಉಗ್ರವಾಗಿ ಖಂಡಿಸುತ್ತದೆ.

ನಿರೂಪಣಾ ನೆಲೆಯಲ್ಲಿಯೂ ಗಮನಾರ್ಹ 'ಮೊದಲ ಹೆಜ್ಜೆ' ಅವರ ಇತರೆ ಕಾದಂಬರಿಗಳಂತೆ ಸರ್ವಜ್ಞ ಪ್ರಜ್ಞೆಯ ಪ್ರಥಮ ಪುರುಷ ದೃಷ್ಟಿಕೋನದಿಂದ ನಿರೂಪಿಸಲ್ಪಟ್ಟಿದ್ದರೆ ಈ ಕಾದಂಬರಿಯಲ್ಲಿ ಸೀಮಿತ ಪ್ರಜ್ಞೆಯ ಮೂವರು ಭಾಗಿದಾರಿ. ಉತ್ತಮ ಪುರುಷ ನಿರೂಪಕರಿದ್ದಾರೆ. ಉತ್ತಮ ಪುರುಷ ನಿರೂಪಣೆಯ ಒಂದು ಮುಖ್ಯ ಗುಣವೆಂದರೆ, ಅದರಿಂದಾಗಿ ನಮ್ಮ ನೈತಿಕ ತೀರ್ಮಾನಗಳಿಗೆ ಧಕ್ಕೆ ಬರದಂತೆ ನಾವು ನಿರೂಪಕನನ್ನು ಅರಿಯಲು ಮತ್ತು ಅನುಕಂಪದಿಂದ ನೋಡಲು ಸಾಧ್ಯವಾಗುತ್ತದೆ.

ತ್ರಿವೇಣಿಯವರ ಕಾದಂಬರಿ 'ಕಂಕಣ' 'ಮುಕ್ತಿ' ಒಂದು ವ್ಯಕ್ತಿಯಲ್ಲದೆ ಇಡೀ ಸಮಾಜದ ವಿಸ್ತೃತ ಚಿತ್ರಣ. ಅರ್ಥಾತ್ ಮೊದಲ ಬಾರಿಗೆ ಈ ಕಾದಂಬರಿಯಲ್ಲಿ ತ್ರಿವೇಣಿಯವರು ಒಂದು ವಿಶಾಲ ನೆಲೆಯಲ್ಲಿ ಸ್ವಾತಂತ್ರ್ಯೋತ್ತರ ಭಾರತದ ತೀವ್ರವಾಗಿ ಬದಲಾಗುತ್ತಿರುವ ಸಾಮಾಜಿಕ ಸ್ಥಿತ್ಯಂತರಗಳನ್ನು ಆ ಜೀವನ ಶೈಲಿಯನ್ನು ಸ್ತ್ರೀ ದೃಷ್ಟಿಕೋನದಿಂದ ದಾಖಲಿಸಲು ಪ್ರಯತ್ನಿಸುತ್ತಾರೆ.

ಸಹೋದರಿಯರ ವಸ್ತು ಹಾಗೂ ಪಾತ್ರಗಳ ವಲಯ ಸೀಮಿತ ಅವರ ಬಹುತೇಕ ಪಾತ್ರಗಳೆಲ್ಲವೂ ಮಧ್ಯಮವರ್ಗದ ನಗರವಾಸಿಗಳು ಹೀಗಿರುವಾಗ ಒಮ್ಮೊಮ್ಮೆ ಅನುಭವದ ಮೂಸೆಯಿಂದ ಕೆಲವು ವಿಚಾರಗಳು ನೈಜಕ್ಕೆ ಹತ್ತಿರವಾಗಿ ಕಂಡು ಬರುತ್ತದೆ. ವಿನಃ ಬಹುಮಟ್ಟಿಗೆ ಕಾಲ್ಪನಿಕವೇ ತ್ರಿವೇಣಿಯವರು 'ಹೂವು ಹಣ್ಣು' ಕಾದಂಬರಿಯನ್ನು ಚಿತ್ರಿಸುವಾಗ ವೇಶ್ಯೆಯ ಕಲ್ಪನೆಯೇ ಅವರಿಗೆ ತಿಳಿದಿರಲಿಲ್ಲವೆಂದು ಅವರ ಪತಿ ಶಂಕರ ಒಂದೆಡೆ ತಿಳಿಸಿದ್ದಾರೆ. ಆದರೆ ಆರ್ಯಾಂಬರವರು ಆ ಮಟ್ಟಿಗೆ ಮುಗ್ಧರಾಗದೆ 'ಬಸವಿ' ಕಾದಂಬರಿಗಾಗಿ ವೇಶ್ಯೆಯರ ಬದುಕನ್ನು ಕಣ್ಣಾರೆ ಕಂಡು ಕಾರ್ಯಕ್ಷೇತ್ರ ಮಾಡಿ ರಚಿಸಿದ್ದಾರೆ.

ಹಾಗೆಯೇ, ಇನ್ನೊಂದು ಮುಖ್ಯವಾದದ್ದು ಅವರ ಸೀಮಿತ ಪ್ರಪಂಚ ಆದರೂ ಬರೆವಣಿಗೆಯ ಶೈಲಿ ಸರಳ, ನೇರ, ದಿಟ್ಟವಾಗಿ ಕಲಾತ್ಮಕತೆಯಿಂದ ಕೂಡಿದೆ. ಸಾಮಾಜಿಕ ಸಂವೇದನೆ ಬಹುಮುಖಿಯಾಗಿ ಕಂಡಿದೆ ಎಂದು ಹೇಳಬಹುದು.

ಕಾದಂಬರಿಯ ಲಕ್ಷಣಗಳನ್ನು ಅಷ್ಟೇ ಅಚ್ಚುಕಟ್ಟಾಗಿ ತಮ್ಮ ರಚನೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಲೇಖಕಿಯರಿಬ್ಬರು ಅದು ಕಥಾವಸ್ತು, ಪಾತ್ರಗಳು, ಸಂಭಾಷಣೆ ಕಾಲ ಮತ್ತು ಸ್ಥಳ, ತಂತ್ರ ಮತ್ತು ಶೈಲಿ, ಜೀವನ ಸಿದ್ಧಾಂತ ಯಾವುದೇ ಆಗಿರಲಿ ಲೀಲಾಜಾಲವಾಗಿ ಬಳಸಿದ್ದಾರೆ. ಒಂದೊಂದನ್ನು ಸಂವೇದನೆ ಮತ್ತು ಕಲಾತ್ಮಕತೆಯ ಹಿನ್ನೆಲೆಯಲ್ಲಿ ಗಮನಿಸುತ್ತಾ ಹೋದಂತೆ ಕಾದಂಬರಿಯ ಆಳದ ಅರಿವಾಗುತ್ತದೆ.

ಕಥಾವಸ್ತು

ಕಾದಂಬರಿಗೊಂದು ಕತೆಯಿರಬೇಕು ಅದನ್ನು ಕಾದಂಬರಿಯ ವಸ್ತುವೆಂದು ಕರೆಯಬಹುದು. ಪ್ರಕೃತಿಸೃಷ್ಟಿ ಅನೇಕ ವಸ್ತುಗಳಲ್ಲಿ ಕೆಲವನ್ನೇ ಆಯ್ದುಕೊಂಡು ವ್ಯಕ್ತಿ ತನ್ನ ಜೀವನವನ್ನು ಹೇಗೆ ಸುಸಂಬದ್ಧ ಮತ್ತು ಸುಂದರ ಮಾಡಿಕೊಳ್ಳಲು ಯತ್ನಿಸುತ್ತಾನೊ ಹಾಗೇ ಸಾಹಿತಿಯಾದವನು ಮಾನವಜೀವನ ಮತ್ತು ಪ್ರಕೃತಿಗಳಿಂದ ಕಚ್ಚಾ ಸಾಮಾಗ್ರಿಗಳನ್ನು ಆಯ್ಕೆ ಮಾಡಿ, ಅವುಗಳ ಸಹಾಯದಿಂದ ನಿರ್ದಿಷ್ಟ ಉದ್ದೇಶವನ್ನು ಸಾಧಿಸಿಕೊಳ್ಳಬೇಕಾಗುತ್ತದೆ.

ಕಾದಂಬರಿಕಾರನು ಕತೆಯನ್ನು ನಂಬುವಂತೆಯೂ, ಮನವೊಲಿಸುವಂತೆಯೂ ಹೇಳಬೇಕಾಗುತ್ತದೆ. ಅದಕ್ಕೊಂದು ಆರಂಭ, ಬೆಳವಣಿಗೆ, ಅಂತ್ಯವೆಂಬುದಿದ್ದು, ಕೊನೆ ಆರಂಭಕ್ಕನುಸಾರವಾಗಿರಬೇಕಾಗುತ್ತದೆ. ಕತೆಯನ್ನು ಕಟ್ಟಿ ಕಾದಂಬರಿ ಬರೆಯಲಾಗುವುದಿಲ್ಲ. ಹಾಗೆ ಬರೆದರೆ ಅದು ಕಟ್ಟು ಕಾದಂಬರಿಯಾಗುತ್ತದೆ. ಇರುವ ಕತೆಯು ರಚನಾತ್ಮಕ ಕಲ್ಪನಾಲೋಕದಲ್ಲಿ ಇಲ್ಲದ, ಆದರೆ ಸಂಭವನೀಯವೆನ್ನುವ ಕತೆಯನ್ನು ಕಟ್ಟ ಬಯಸಿ ಕಟ್ಟುತ್ತದೆ. ಎಲುಬಿನ ಗೂಡಿಗೆ ಚರ್ಮ ಹೊದೆಸಿ ಸುಣ್ಣ ಬಳಿದರೆ ಸುಂದರವಾಗಲಾರದು ಅದರಂತೆ ಏನೋ ನೆಪಕ್ಕೆ ಮಾತ್ರ ಹೊಣೆಗಾರವಾಗಿರುತ್ತದೆ.

ವಾಸ್ತವಿಕತೆ, ಆದರೆ ಅದು ಮುಂದೆ ವಾಸ್ತವಿಕಕ್ಕೂ ವಾಸ್ತವಿಕವಾಗುವಂತೆ ಕಾದಂಬರಿಕಾರನ ಕಲ್ಪನೆಯ ಕುಲುಮೆಯಲ್ಲಿ ರೂಪ ತಳೆಯುತ್ತದೆ. ಆದ್ದರಿಂದಲೇ ಉತ್ತಮ ಕಥೆಯೆನ್ನುವುದು ಇರದೆ ಉತ್ತಮ ಕಾದಂಬರಿಯಿದೆಯೆನ್ನುತ್ತಾರೆ. ಹಾಗೆಂದ ಮಾತ್ರಕ್ಕೆ ಕಾದಂಬರಿ ಪ್ರಕಾರವು ಪ್ರಾಚೀನ ಕಥನ ಸಾಹಿತ್ಯದ ಮುಂದುವರಿಕೆಯಲ್ಲ.

ಆದ್ದರಿಂದಲೇ, ಡಿ.ಆರ್.ನಾಗರಾಜ್ ಗುರುತಿಸಿರುವಂತೆ ಸಾಂಪ್ರದಾಯಿಕ ಕಥನ ಮತ್ತು ಕಾದಂಬರಿಗಳ ನಡುವಿನ ವ್ಯತ್ಯಾಸವನ್ನು ಈ ರೀತಿ ಸಂಗ್ರಹಿಸಿದ್ದಾರೆ.

- ಸಾಂಪ್ರದಾಯಿಕ ಕಥೆಯಲ್ಲಿ ಸಮಾಜದ ಜೊತೆ ಸಾವಯವ ಬಿರುಕು ಇರುವುದಿಲ್ಲ. ಕಾದಂಬರಿ ಹುಟ್ಟಿಕೊಳ್ಳುವುದೇ ಈ ಸಾವಯವ ಬಿರುಕಿನ ಮೂಲನೆಲೆಯಲ್ಲಿ.
- ಸಾಂಪ್ರದಾಯಿಕ ಕಥನದಲ್ಲಿ ಕಂಡುಬರುವಂತೆ ಕಾದಂಬರಿಯಲ್ಲಿ ನಿರೂಪಣಾ ಪ್ರಜ್ಞೆಗೆ ತನ್ಮಯತೆಯ ಸ್ಥಿತಿ ಸಾಧ್ಯವಿರುವುದಿಲ್ಲ.
- ಸಾಂಪ್ರದಾಯಿಕ ಕಥನಗಳಲ್ಲಿ ಗದ್ಯಕ್ಕಿರುವ ಗುಣ ಕಾಲಾತೀತವಾದದ್ದು.

- ಪಾತ್ರಗಳ ವರ್ಣನೆಯ ಹಿಂದಿನ ಕಾರಣ ಹುಡುಕುವಿಕೆಯ ನೆಲೆಯಲ್ಲೂ ಕಾದಂಬರಿ ಭಿನ್ನವಾಗುತ್ತದೆ. ಕಾದಂಬರಿ ಪಾತ್ರ ನಿರ್ಮಾಣಕ್ಕೆ ವರ್ತನೆಗೆ ನಿರ್ದಿಷ್ಟ ಕಾರಣಗಳನ್ನು ಹುಡುಕುವ ಕೆಲಸ ಮಾಡುತ್ತದೆ. "ವರ್ತನೆಗಳ ಸಾಮಾಜಿಕ ಮೂಲವನ್ನು ಹುಡುಕುವುದೇ ಈ ಕಾದಂಬರಿಯ ಮುಖ್ಯಲಕ್ಷಣ".*

ಅದರಂತೆ, ಮುಗ್ಧತೆಯ ಕಾರಣದಿಂದಾದ ತಪ್ಪಿಗೆ ಮದುವೆಯಾಗದೆ ಒಂದು ಹೆಣ್ಣು ಮಗುವಿನ ತಾಯಿಯಾಗುವಂತಾದ ನಾಯಕಿ ಆ ಮಗುವಿನ ಭವಿಷ್ಯಕ್ಕಾಗಿ ತನ್ನ ಯೌವ್ವನದ ಕಾಲವನ್ನು ವಿಧವೆಯಂತೆ ಸವೆಸಿ, ತನ್ನ ಮಗಳಿಗೆ ಉನ್ನತ ಶಿಕ್ಷಣ ನೀಡಿ ಕಾಲೇಜು ಉಪನ್ಯಾಸಕಳನ್ನಾಗಿ ಮಾಡುವ ನಾಯಕ ನಾಯಕಿಯ ನಿಜಸಂಗತಿಗಳನ್ನು ತಿಳಿದು ಮದುವೆಯಾಗುವನು. ಮಗಳ ಮನಸ್ಸು ಸಂಘರ್ಷಕ್ಕೆಡೆಯಾದರೂ ಅದನ್ನು ಸರಿಯಾಗಿ ನಿಭಾಯಿಸುವ ಶಕ್ತಿ ನಾಯಕನಲ್ಲಿತ್ತು. ಮಗಳು ತನ್ನ ಮನೋಭಾವಕ್ಕೆ ಜೀವನ ಸಂದರ್ಭಕ್ಕೆ ಪ್ರೇಮಿಸಿದ ಪ್ರೇಮಿಯನ್ನು ಬಿಟ್ಟು ಪೋಷಿಸುವ ಗುಣವುಳ್ಳ ಪ್ರೊಫೆಸರ್‌ರವರನ್ನು ಜೀವನ ಸಂಗಾತಿಯಾಗಿ ಆಯ್ಕೆ ಮಾಡಿಕೊಳ್ಳುವಲ್ಲಿ ಸ್ವಂತಿಕೆಯನ್ನು ಸಾಧಿಸುವ ಕಥಾವಸ್ತುವುಳ್ಳದ್ದು, 'ಪ್ರಕೃತಿ ಪುರುಷ'.

ವೇಶ್ಯಾ ಪದ್ಧತಿಯಲ್ಲಿ ಸ್ತ್ರೀ ಸಮಸ್ಯೆಯೇನು? ಎಂಬುದನ್ನು ಸಮಾಜದ ದೂಷಣೆಗೆ ಗುರಿಯಾಗುವ ಹೆಣ್ಣಿನ ಅಂತರಂಗದ ಅಭಿವ್ಯಕ್ತಿಯನ್ನು ಲೇಖಕಿ 'ಬಸವಿ' ಕಾದಂಬರಿಯ ಮುಖಾಂತರ ಮಾಡಿದ್ದಾರೆ. ಗಂಡು ಹೆಣ್ಣಿನ ಸಂಬಂಧ ಚರ್ಚಿತವಾಗಿದೆ. ತಾಯಿ ಮಗನ ಬದುಕಿನ ವಿವರಗಳನ್ನು ಗಂಡು ಹೆಣ್ಣಿನ ಸಂಬಂಧದ ಸಂಕೀರ್ಣತೆಯನ್ನು ಚಿತ್ರಿಸುತ್ತಾರೆ. ನೈಜ ಘಟನೆಯನ್ನು ಬೆನ್ನೆಲುಬಾಗಿ ಹೊಂದಿರುವ ಉತ್ತರ ಕರ್ನಾಟಕ ಸೀಮೆಯ ಪರಿಸರ ಹೊಂದಿರುವ ಕಥಾವಸ್ತು ಇದಾಗಿದೆ.

'ಬಂಡಾಯ' ಮದುವೆಯ ಬದುಕಿನ ದುರಂತವನ್ನು ತನ್ನ ಅಕ್ಕನ ಬದುಕಿನಲ್ಲಿ ಕಂಡ ಸುಧಾ, ಜೀವನದಲ್ಲಿ ಮದುವೆಯನ್ನೇ ಮುಖ್ಯ ಗುರಿಯನ್ನಾಗಿ ಹೊಂದದೆ ಶಿಕ್ಷಕಿಯಾಗಿ, ಸಮಾಜ ಸೇವಕಿಯಾಗಿ ಹಳ್ಳಿಯಲ್ಲಿ ಮಾದರಿ ಬದುಕನ್ನು ಸಾಗಿಸುವಳು. ಕೌಟುಂಬಿಕ ಜೀವನಕ್ಕೆ ಒಗ್ಗದೆ ಸಾರ್ವಜನಿಕ ಸೇವೆಯಲ್ಲೇ ತನ್ನ ಅರ್ಥಪೂರ್ಣತೆಯನ್ನು ಕಂಡುಕೊಳ್ಳುವ ಕಥಾಹಂದರವುಳ್ಳದ್ದಾಗಿದೆ.

ಸಂಬಂಧದ ಅನುಬಂಧಗಳು ಕುಟುಂಬದಿಂದ ಕುಟುಂಬಕ್ಕೆ ಬದಲಾಗುತ್ತ ಹೋಗುತ್ತವೆ. ಒಂದೇ ರೀತಿ ಇರುವುದಿಲ್ಲ. ಹಾಗಾಗಿ ಪ್ರತಿಯೊಂದು ಕುಟುಂಬವು ತನ್ನದೇ ಆದ ಸ್ಥಾನಮಾನ, ರೀತಿ ನೀತಿಯನ್ನು ಅಳವಡಿಸಿಕೊಂಡು ಪ್ರತ್ಯೇಕತೆಯನ್ನು ಹೊಂದುವ ಕಥಾ ಜೀವಾಳದ 'ಸಂಬಂಧಗಳು'.

ಪ್ರತಿಯೊಬ್ಬ ವ್ಯಕ್ತಿಯ ಜೀವನವೂ ಗುರಿ ಪ್ರಧಾನವಾಗಿರಬೇಕು. ಗುರಿಯನ್ನು ಹೊಂದದ ಮನುಷ್ಯ ಮನುಷ್ಯನೇ ಅಲ್ಲ. ನಾವು ಭೂಮಿಯ ಮೇಲೆ ಜನಿಸಿರುವುದೇ ಒಂದು ಗುರಿಯನ್ನು ಸಾಧಿಸುವುದಕ್ಕಾಗಿ ಹುಟ್ಟಿದಾಗಿನಿಂದ ಮನುಷ್ಯ ಪ್ರಯತ್ನ ಮಾಡುವುದು ಗುರಿಯನ್ನು ಸಾಧಿಸಲೆಂದೇ, ಗುರಿಯು ಗರಿಚಾಚಿ ಹಾರಿದಾಗ ಅದನ್ನು ಹಿಡಿದು ತನ್ನ ಅಧೀನದಲ್ಲಿಟ್ಟುಕೊಂಡು ಯಶಸ್ಸನ್ನು ಸಾಧಿಸುವುದೇ ಪ್ರತಿಯೊಬ್ಬ ವ್ಯಕ್ತಿಯ ಗುರಿ. ಗುರಿ ಒಂದು ಸಾಧನೆಯ ಪ್ರತೀಕ ಎಂಬುದನ್ನು ಸಾಧಿಸುವ ವ್ಯಕ್ತಿಯ ಕಥಾ ಚಿತ್ರಣ 'ಗುರಿ'.

ಅವಿವಾಹಿತ ಯುವತಿ ಮೀನಾ ಗುಣವಂತೆ, ರೂಪವಂತೆ ದಿಟ್ಟತನದವಳು. ಇಂತಹ ಸ್ನೇಹಪೂರ್ಣ ಯುವತಿ ಜಯರಾಮುವಿನ ಜೀವನದಲ್ಲಿ ಪ್ರವೇಶಿಸಿ, ಹಳ್ಳಿಯಿಂದ ಪಟ್ಟಣಕ್ಕೆ ಬಂದು ಪಟ್ಟಣಿಗನಾಗಿದ್ದ ಜಯರಾಮುವನ್ನು ಪುನಃ ಹಳ್ಳಿಯ ದಾರಿಯತ್ತ ನಡೆಸುತ್ತಾಳೆ. ಹಳ್ಳಿಯಿಂದ ಪಟ್ಟಣಕ್ಕೆ ಹೋದ ಜನರು ಪುನಃ ಹಳ್ಳಿಗೆ ಬಂದಿರುವುದು ಅಪರೂಪ. ಆದರೆ, ಆರ್ಯಾಂಬರವರು ಮೀನಾಳಂತಹ ಗಟ್ಟಿಯಾದ ಪಾತ್ರವನ್ನು ಸೃಷ್ಟಿಸಿ, ಇಂತಹ ವ್ಯಕ್ತಿಗಳಿಂದ ಹಳ್ಳಿಯ ಸುಧಾರಣೆಯು ಆಗಬಹುದೆಂಬ ಸಾಧ್ಯತೆಯನ್ನು ತೋರಿಸಿದ್ದಾರೆ. ಮೀನಾ ಈ ವಿಷಯದಲ್ಲಿ ಗುರಿ ಮುಟ್ಟಿದಾಗ ಲೇಖಕಿ ಸಂತೃಪ್ತರಾಗುತ್ತಾರೆ.

ತನ್ನ ಜೀವನದಲ್ಲಿ ನಡೆದ ಘಟನೆಯನ್ನು ಕಾದಂಬರಿಯ ರೂಪದಲ್ಲಿ ರಚಿಸಿ ನನ್ನ ಕಥೆ ಎಲ್ಲಾ ಕಡೆಯು ಪ್ರಚಾರವಾಗಲಿ, ಎಲ್ಲರಿಗೂ ನಾನು ನನ್ನ ಪತಿಯನ್ನು ಸಾಯಿಸಲಿಲ್ಲ ಎಂಬುದು ತಿಳಿಯಲಿ ಎಂದು ವಿನಂತಿಸಿಕೊಂಡ ಶ್ರೀದೇವಿಯ ಕಥೆಗೆ ಕಾದಂಬರಿಯ ರೂಪನೀಡಿ ಆ ಹೆಣ್ಣಿನ ಬಾಳಿನ ಗೋಳಿನ ಕಥೆಯನ್ನು ಎಲ್ಲರಿಗೂ ತಿಳಿಯುವಂತೆ ಮಾಡಿರುವ ವಸ್ತುವೇ 'ಅಪೂರ್ವಕಥೆ'.

ಪ್ರೇಮ ಎಂಬ ಪದದ ಸುತ್ತ ಪ್ರಪಂಚವೇ ಸುತ್ತುತ್ತಿದೆ. ಪ್ರೇಮ ಎಂಬ ಪದ ಅಮರವಾದದ್ದು. ಇದಿಲ್ಲದಿದ್ದರೆ ಸಮಾಜ, ಕುಟುಂಬ ಯಾವುದೂ ಇಲ್ಲವಾಗುತ್ತಿತ್ತು. ಎಲ್ಲಾ ಸೊನ್ನೆಯಾಗುತ್ತಿತ್ತು. ಈ ಪ್ರೇಮ ಎನ್ನುವ ಪದದ ಜೊತೆಗೆ 'ಅಮರ' ಎಂಬ ಪದವನ್ನು ಸೇರಿಸಿ 'ಅಮರಪ್ರೇಮ' ದ ನವಿರಾದ ಕಥೆ ಹೆಣೆದಿದ್ದಾರೆ ಲೇಖಕಿ.

ಸಿರಿವಂತರು ಬಡವರಾದರೆ ಅವರ ಮನಸ್ಸಿನ ತಾಕಲಾಟ, ಸಂಸಾರವನ್ನು ನಿಭಾಯಿಸಿಕೊಂಡು ಹೋಗುವ ಕಷ್ಟದ ಪರಿಸ್ಥಿತಿ, ಅದಕ್ಕಾಗಿ ಬೇರೆಯವರ ಹಂಗಿನಲ್ಲಿ ಬದುಕುವ ಪರಿಸ್ಥಿತಿ ಹೆಣ್ಣು ಸ್ವಾಭಿಮಾನಿಯಾದರೂ ಬೇರೆಯವರಿಗಾಗಿ ತನ್ನ ಎಲ್ಲಾ ಭಾವನೆಗಳನ್ನು ಬಲಿಕೊಡಬೇಕಾಗಿ ಬರುವುದು ಎಂಬಂಥ ಕಥಾ ಹಿನ್ನೆಲೆಯುಳ್ಳ 'ಕಸ್ತೂರಿ' ಸಮಾಜವನ್ನು ಮೀರಿ ಬೆಳೆಯುವ ಹಂಬಲವಿದ್ದರೂ ಪ್ರಜ್ಞಾಪೂರ್ವಕತೆಯಿಂದ ಆರ್ಥಿಕ ಸ್ವಾತಂತ್ರ್ಯ ಬಯಸುವ ನಾಯಕಿ ಮದುವೆ ಬಂಧನವನ್ನು ಸರಿಸಿ, ಉದ್ಯೋಗವರಸಿ ಮನಸ್ಸಿಗೆ ಹಿಡಿಸಿದವನನ್ನೇ ವರಿಸಿದರೂ ಅವನ ಹಿಂದಿನ ಜೀವನದ ಸಂಶಯ ಸುಳಿಗೆ ಸಿಲುಕುವ ಕಥೆಯೇ 'ಸುಳಿ'. ಪ್ರೀತಿಸಿದ ವ್ಯಕ್ತಿಯಿಂದ ನಿರಾಕರಿಸಿಕೊಂಡು ಘಾಸಿಯಾಗಿ ಪುರುಷ ದ್ವೇಷಿಯಾದರೂ ಶ್ರೀಮಂತಿಕೆಯ ಅಮಲಿನಲ್ಲಿ ಓಲಾಡುವ ನಾಯಕಿ ಅವಳ ಬಾಲಿಶ ಮನೋಭಾವವನ್ನು ಬದಲಿಸಿದ ಸೇವಾ ಮನೋಭಾವಿಯ ಸುತ್ತ ಹೆಣೆದ ಕಥಾ ಹಂದರ 'ಬಲೆ'.

ವಿಶ್ವಧರ್ಮ ಅಂತಧರ್ಮೀಯ ವಿವಾಹವನ್ನು ಕುರಿತು ಹೇಳಹೊರಟ ಕೃತಿ. ಎಲ್ಲ ಧರ್ಮಕ್ಕಿಂತಲೂ ವಿಶಿಷ್ಟವಾದುದು. ವಿಶ್ವಧರ್ಮಕ್ಕೇರುವ ಅರ್ಹತೆ ಇರುವುದು ಪ್ರೇಮಕ್ಕೆ ಮಾತ್ರ ಎಂಬ ಕಥಾ ಚೌಕಟ್ಟು. ಅಕ್ಕರೆಯ ಮಗನಾಗಿ ಆದರ್ಶ ಗಂಡನಾಗಿ, ಉತ್ತಮ ಪ್ರಜೆಯಾಗಿ ಪ್ರೀತಿಯ ತಂದೆಯಾಗಿ 'ದೇವಮಾನವ' ನಾಗಿ ಚಿತ್ರಿತವಾಗಿರುವ ಕಥಾ ವಸ್ತು.

ಮಾನವ ಸಂಬಂಧಗಳಿಗಿಂತ ಮುಖ್ಯವಾಗಿ ಭಗವಂತನಲ್ಲಿ ಐಕ್ಯಗೊಳ್ಳುವುದರ ಮೂಲಕ 'ಸಾಕ್ಷಾತ್ಕಾರ' ಸಾಧಿಸುವುದು ಎಂಬುದನ್ನು ಸಾದರಪಡಿಸಿರುವ ಎಳೆ. ಹಳೆಯ ಸಂಪ್ರದಾಯಗಳಿಂದ ಹೊಸ ವಿಚಾರಗಳೆಡೆಗೆ ಸಾಗುವ ನಾವು ಅತ್ಯಂತ ಪ್ರೀತಿಸುವ ವಸ್ತುವಿಗಾಗಿ ಏನುಬೇಕಾದರೂ ಮಾಡಲು ಸಿದ್ಧರಾಗುತ್ತೇವೆ ಎಂಬುದು 'ಪರಂಪರೆ'ಯ ಕಥಾವಸ್ತು.

ದರ್ಪಿಷ್ಟ ತಂದೆಗೆ ಹೆದರಿ ಪ್ರೀತಿಸಿದವಳ ಕೈಬಿಡುವ ನಾಯಕನ ಧೋರಣೆಯನ್ನು ಧಿಕ್ಕರಿಸಿ ನಿಲ್ಲುವ ನೀಳ್ಗತೆ 'ಯಜ್ಞಪಶು' ಅಂತೆಯೇ 'ಸಾಕುಮಗ' ನೀಳ್ಗತೆಯೊಂದನ್ನೇ ಹಿಂದೆ ಎಳೆದಂತಿದೆ. ಸಾಕು ತಂದೆ ತಾಯಿಗಳು ಎಷ್ಟೇ ಚೆನ್ನಾಗಿ ಲಾಲಿಸಿದರೂ ಹೆತ್ತವಳನ್ನು ಹುಡುಕಿಕೊಂಡು ಹೋಗಿ ಅವನಾಸೆ ಫಲಿಸದೆ ಹಿಂತಿರುಗುವ ಕಥಾ ವಸ್ತು.

ಉದ್ಯೋಗಸ್ಥ ಮಹಿಳೆಯೊಬ್ಬಳ ಸುತ್ತ ಹೆಣೆದ ಕಥೆ 'ಕಾಮನಬಿಲ್ಲು', ಸಂಗೀತ ಕಲಾವಿದೆಯೊಬ್ಬಳ ಕಥೆ 'ಆರಾಧನೆ' 'ಬದುಕಿನ ಬವಣೆ' ಹೆಸರೇ ಸೂಚಿಸುವಂತೆ ಒಬ್ಬ ಹೆಣ್ಣಿನ

ಬದುಕಿನ ಕಷ್ಟಗಳ ಸರಪಳಿಗಳ ಸಂಕೋಲೆಗಳ ಚಿತ್ರಣ ಬದುಕಿನಲ್ಲಿ ಮುಗ್ಧ ಹೆಣ್ಣು ಮಗಳು ಅತ್ಯಾಚಾರಕ್ಕೆ ಬಲಿಯಾಗಿ ನೆಲೆಸಿಕ್ಕದಿದ್ದಾಗ ಕೊನೆಗೆ ವೇಶ್ಯಾವೃತ್ತಿಗೆ ಇಳಿಯುವಂತಹ ಅಮಾಯಕ ಸ್ಥಿತಿಯ ಕಥನವಾಗಿದೆ.

ಆಹಾರ ಹುಡುಕಲು ಗೂಡಿನಿಂದ ಹಾರಿಹೋದ ಹಕ್ಕಿ ಪುನಃ ಒಂದು ಗೂಡು ಸೇರಿಕೊಳ್ಳುವುದು ಪ್ರಕೃತಿನಿಯಮ. ಹಕ್ಕಿಯ ಈ ನಿಯಮವನ್ನು ಕಾದಂಬರಿಗಾರ್ತಿ ಹೆಣ್ಣಿನ ಬದುಕಿಗೆ ಆರೋಪಿಸಿ ಬರೆದ ಕಥಾಚಿತ್ರಣವೇ 'ಮರಳಿಗೂಡಿಗೆ'.

ವ್ಯಕ್ತಿಯ ಗುಣ ಸ್ವಭಾವವನ್ನು ಅನಾವರಣಗೊಳಿಸುವಂತಹ ಕಥೆಯೇ 'ಕಪ್ಪುಬಿಳುಪು' ವ್ಯಕ್ತಿ ಚಾರಿತ್ರ್ಯದ ಸುತ್ತ ಹೆಣೆದ ಕತೆಯ ಹಂದರವೇ 'ಸವತಿಯ ನೆರಳು'. ಪಂಜರದ ಗಿಣಿ ಸುಖವಾಗಿರಲು ಸಾಧ್ಯವೇ? ಸ್ವಾತಂತ್ರ್ಯವಿಲ್ಲದ ಬದುಕಿನಲ್ಲಿ ಸೊಗಸಿಲ್ಲ ಎಂಬುದನ್ನು ಚಿತ್ರಿಸಿರುವ ಆರ್ಯಾಂಬರ ಮೊದಲ ಕಾದಂಬರಿ ಕಥಾವಸ್ತುವೇ 'ಹೊಂಗನಸು'.

ಪೋಲಿಯೋ ಕಾಯಿಲೆಗೆ ಬಲಿಯಾಗಿ ಕಾಲನ್ನು ಕಳೆದುಕೊಂಡ ಹೆಣ್ಣೊಬ್ಬಳ ದಾರುಣ ಚಿತ್ರಣವೇ 'ಪ್ರಿಯಸಂಗಮ'. ಕೂಲಿಕಾರರ ಸಮಸ್ಯೆಗಳನ್ನೊಳಗೊಂಡ 'ಆ ಹಾಡು'. ತಂದೆಯನ್ನು ಕಳೆದುಕೊಂಡು ತಾಯಿ ತಮ್ಮ ತಂಗಿಯರ ಬದುಕಿಗೆ ಊರುಗೋಲಾಗಿ ನಿಂತು ತನ್ನನ್ನು ಪ್ರೀತಿಸಿದವ ವಂಚಿಸಿದರೂ ವಿಚಲಿತಳಾಗದೆ ಕರ್ತವ್ಯಕ್ಕೆ ಧ್ವನಿಕೊಟ್ಟ ನಾಯಕಿಯ ಕತೆ 'ಬೇವು ಬೆಲ್ಲ'.

ಸ್ವತಂತ್ರ ಹಕ್ಕಿಯಂತೆ ಆಡುತ್ತಾ ಬೆಳೆದ ಲತಾಳ ಪಾಲಿಗೆ ಮದುವೆ ಎಂಬುದು ಸೆರೆಮನೆ ವಾಸಕ್ಕಿಂತ ದುಸ್ತರವಾಗುವ ಚಿತ್ರಣ 'ನಿರ್ಣಯ'. ಹೀಗೆ ಒಂದಕ್ಕೊಂದು ವಿಭಿನ್ನ ಕಥಾವಸ್ತುಗಳನ್ನು ಆಯ್ಕೆ ಮಾಡಿಕೊಂಡು ಸಾಮಾಜಿಕ ಕಾದಂಬರಿ ರಚನೆ ಮಾಡಿರುವ ಆರ್ಯಾಂಬರವರು ಸಮಾಜಮುಖಿಯಾಗಿ ವಸ್ತುಗಳನ್ನು ಚಿತ್ರಿಸಿದ್ದಾರೆ.

ಬಾಳಸಂಗಾತಿಯನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿಲ್ಲದೆ ಇತರರ ನಿರ್ಬಂಧಕ್ಕೊಳಗಾಗಿ ತನಗಿಷ್ಟವಿಲ್ಲದವರನ್ನು ಮದುವೆಯಾಗುವ ಸ್ತ್ರೀಯರ ಕಥಾವಸ್ತು 'ಅಪಸ್ವರ' 'ಅಪಜಯ' ಕಾದಂಬರಿಗಳು ಚಿತ್ರಿಸುತ್ತವೆ. ವೇಶ್ಯಾ ಸಮಸ್ಯೆಯ ಸುತ್ತ ಹೆಣೆದಿರುವ ಕಥೆಯು ತಾಯಿಯ ದೃಷ್ಟಿಕೋನದ ಮೂಲಕ ನೋಡುವ ಕಥಾ ವಸ್ತುವಿರುವುದು. 'ಹೂವುಹಣ್ಣು'.

ಪಾರಂಪರಿಕ ವಿವಾಹದ ಚೌಕಟ್ಟಿನಲ್ಲಿ ಅಡಗಿರುವ ಅಸೀಮ ಕ್ರೌರ್ಯದ ವಸ್ತುವೇ 'ಕೀಲುಗೊಂಬೆ'. ಅಂತೆಯೇ ಹೆಣ್ಣಿಗೊಂದು ಗಂಡಿಗೊಂದು ಸಾಮಾಜಿಕ ವರ್ತನೆ ಹಾಗೂ ನೈತಿಕ ಮಾನದಂಡಗಳನ್ನು ರೂಪಿಸುವ ಪುರುಷಕೇಂದ್ರಿತ ಸಮಾಜದ ಸುತ್ತ ರಚಿತವಾಗಿರುವ ಕಥನವೇ 'ಮೊದಲಹೆಜ್ಜೆ'.

ಸಂಕ್ರಮಣ ಕಾಲದ ಈ ಸಮಾಜದ ಮೌಲ್ಯಗಳನ್ನು ಪರೀಕ್ಷಿಸುವ ಮಾನದಂಡ ವಿವಾಹವೆಂಬ ಸಾಮಾಜಿಕ ಸಂಸ್ಥೆಯ ವ್ಯಾಪ್ತಿಯಲ್ಲಿ ರಚಿತವಾಗಿರುವ ಸಂಕೀರ್ಣ ಕೃತಿ 'ಕಂಕಣ'. ಅದರ ಮುಂದುವರೆದ ಭಾಗ 'ಮುಕ್ತಿ'. ಕೃತಕ ಪ್ರೇಮದ ಸುತ್ತ ಹೆಣೆದ 'ಬೆಳ್ಳಿಮೋಡ'. ನವವಿವಾಹಿತ ದಂಪತಿಗಳ ನೋವು ನಲಿವುಗಳನ್ನು ಚಿತ್ರಿಸುವ 'ಬಾನುಬೆಳಗಿತು'.

ದಾಂಪತ್ಯ ಜೀವನದ ಹಾಗೂ ತಾಯ್ತನದ ಸುಖ ಸಂತೋಷಗಳನ್ನು ಕೀರ್ತಿಸುವ 'ವಸಂತಗಾನ'. ಪ್ರೇಮವಿದ್ದಲ್ಲಿ ಸತಿಪತಿಯರ ಸುಖಕ್ಕೆ ವಯಸ್ಸಿನ ಅಂತರವೇನೂ ಅಡ್ಡಿಯಾಗುವುದಿಲ್ಲವೆಂದು ಸಾರುವ 'ಹೃದಯಗೀತೆ'. ಕಾಶೀಯಾತ್ರೆ ಮಾಡಲು ತಾನು ಸಂಗ್ರಹಿಸಿಟ್ಟಿರುವ ಹಣವನ್ನೆಲ್ಲಾ ಬಡ ಹುಡುಗಿಯೊಬ್ಬಳ ಸುಖಕ್ಕಾಗಿ ದಾನ ಮಾಡುವ ಮುದುಕಿಯನ್ನು ಚಿತ್ರಿಸುವ 'ಕಾಶೀಯಾತ್ರೆ'. ವಿಧವಾ ವಿವಾಹದ ಸುತ್ತ ಚಿತ್ರಿತವಾದ 'ಹಣ್ಣೆಲೆ ಚಿಗುರಿದಾಗ'. ಹೀಗೆ ತ್ರಿವೇಣಿಯವರ ಕಾದಂಬರಿಗಳ ಕಥಾವಸ್ತುವು ಕೂಡಾ ಸಾಮಾಜಿಕ ಸಂವೇದನೆ ಹಾಗೂ ಕಲಾತ್ಮಕತೆಯಿಂದ ಕೂಡಿದವೇ ಆಗಿವೆ.

ಪಾತ್ರಗಳು

ಕಾದಂಬರಿಯಲ್ಲಿ ತಿಳಿಯುವ ಇನ್ನೊಂದು ಅಂಗವೆಂದರೆ ಪಾತ್ರಗಳು. ಆದರೆ ಚಿತ್ರಿತವಾದ ಪಾತ್ರಗಳು ಕೃತ್ರಿಮತೆಯಿಂದ ತುಂಬಿವೆಯೇ. ಸ್ವಾಭಾವಿಕವಾಗಿವೆಯೇ ಎನ್ನುವುದು ಎಲ್ಲರಿಗೂ ತಿಳಿಯುವುದಿಲ್ಲ. ಅಲ್ಲದೆ ಕಾದಂಬರಿಯಲ್ಲಿ ಸ್ಥಳಾವಕಾಶವು ಬೇಕಾದಷ್ಟು ಇರುವುದರಿಂದ ಒಂದು ಪಾತ್ರದ ವಿಕಾಸವಾಗಲೀ, ಹಲವು ಪಾತ್ರಗಳ ಭಾವ, ಕ್ರಿಯೆ ಚಿಂತನೆಗಳಾಗಲಿ ಬೇಕಾದಷ್ಟು ಸ್ಫುಟವಾಗಿ ದೊರಕುತ್ತವೆ. ಪಾತ್ರಗಳಿಗೆ ಕಾದಂಬರಿಗಳಲ್ಲಿ ಎಷ್ಟು ಪ್ರಾಶಸ್ತ್ಯವುಂಟೆಂದರೆ ಅದು ಪಾತ್ರ ಪ್ರಧಾನ ಕಾದಂಬರಿಯೇ ಆಗಬಹುದಾಗಿದೆ.

ತ್ರಿವೇಣಿಯವರ ಕಾದಂಬರಿಗಳು ಹೆಚ್ಚಾಗಿ ಕಥಾಪ್ರಧಾನವಾಗಿದ್ದರೆ 'ಹಣ್ಣೆಲೆ ಚಿಗುರಿದಾಗ' ಪಾತ್ರ ಪ್ರಧಾನವಾಗಿದೆ. ಆಧುನಿಕ ಕನ್ನಡ ಕಾದಂಬರಿಯ ಚಿರಕಾಲ ನೆನಪಿನಲ್ಲುಳಿಯುವ ಪಾತ್ರಗಳಲ್ಲಿ 'ರಾಯರು' ಪಾತ್ರವೂ ಒಂದು. ಅಂತೆಯೇ ರಾಯರ ಪತ್ನಿ ರಾಜಮ್ಮನ ಪಾತ್ರ

ತ್ರಿವೇಣಿಯವರ ಆದರ್ಶ ಸ್ತ್ರೀಯ ಪ್ರತಿರೂಪವೆಂಬಂತೆ ಕಾದಂಬರಿಯಲ್ಲಿ ಚಿತ್ರಿಸಲ್ಪಟ್ಟಿದೆ. ಅವಳ ಯೋಚನೆ, ಕಾರ್ಯ ಇಡೀ ಬದುಕು ಅವಳ ಗಂಡ, ಮಕ್ಕಳು ಮತ್ತು ಮೊಮ್ಮಕ್ಕಳಿಗಾಗಿ ತುಂಬಾ ಮೆಚ್ಚುಗೆಯಿಂದ ತ್ರಿವೇಣಿ ರಾಜಮ್ಮನ ಪಾತ್ರವನ್ನು ಚಿತ್ರಿಸಿರುತ್ತಾರೆ.

ಪಾತ್ರಗಳಲ್ಲಿ ಎರಡು ವಿಧ ಸಾದಾ ಪಾತ್ರಗಳು, ಸಂಕೀರ್ಣ ಪಾತ್ರಗಳು. ಪಾತ್ರ ಪ್ರಧಾನವಾದ ಕಾದಂಬರಿಗಳಲ್ಲಿ ಕೇವಲ ಈ ಸಾದಾ ಪಾತ್ರಗಳೇ ತುಂಬಿರಬೇಕೆಂದು ಅಭಿಪ್ರಾಯ ಪಡುತ್ತಾರೆ. ಸದಾ ಚಿಂತನೆಯಲ್ಲೇ ತೊಡಗಿ ವಿಚಾರ ಮಾಡುವುದಕ್ಕಿಂತಲೂ ಎಲ್ಲವನ್ನೂ ಬಹು ಹಗುರವಾಗಿ ತೆಗೆದುಕೊಳ್ಳುವ ವ್ಯಕ್ತಿಗಳನ್ನು ಸಾದಾ ಪಾತ್ರಗಳೆಂದು ಎಣಿಸುತ್ತಾರೆ.

ದಿನದ ವ್ಯವಹಾರಗಳಲ್ಲಿ ಜನಸಾಮಾನ್ಯರ ಮೆಚ್ಚುಗೆಯನ್ನು ಒಮ್ಮೆಲೆ ಪಡೆಯುವವರು ಸಾದಾ ವ್ಯಕ್ತಿಗಳೇ ಅವರೊಂದಿಗೆ ನಡೆದುಕೊಳ್ಳುವುದರಲ್ಲಿ ಯಾವ ತೊಂದರೆಯೂ ಉಂಟಾಗುವುದಿಲ್ಲ. ಬೇಕಾದರೆ ಕರೆಯಬಹುದು, ಬೇಡವಾದರೆ ಸುಮ್ಮನಿದ್ದು ಬಿಡಬಹುದು. ಯಾವುದಕ್ಕೂ ವಿಶೇಷ ಅರ್ಥ ಹಚ್ಚದೆ ಈ ಜನ ಉಳಿದವರಿಗೆ ತಮ್ಮನ್ನು ಬೇಕು ಬೇಕಾದಂತೆ ಘಟನೆಗಳನ್ನು ನಿರ್ಮಿಸುತ್ತ ಹೊರಡುತ್ತವೆ.

ಇಂಥ ಸಾದಾ ಪಾತ್ರಗಳು ಕಾದಂಬರಿಯ ಪಾತ್ರದಲ್ಲಿರುವ ಗುಣಗಳನ್ನು ವಿಕಾಸ ಮಾಡಿಕೊಳ್ಳಬೇಕೆಂದಾಗಲಿ, ಇಂಥ ಗುಣವೊಂದನ್ನು ಆರಿಸಿಕೊಳ್ಳಬೇಕೆಂದಾಗಲೀ ಅಥವಾ ತಮ್ಮ ವ್ಯಕ್ತಿತ್ವದ ಅಪರಿಚಿತ ಮುಖವೊಂದನ್ನು ತೋರಿಸಬೇಕೆಂದಾಗಲೀ ಇಲ್ಲ. ಇಂಥ ಪಾತ್ರಗಳು ಕ್ಷಣಕ್ಕೊಮ್ಮೆ ಭಾವಾವೇಗಕ್ಕೆ ಸಿಲುಕಿಯೋ ಅಥವಾ ಯಾವುದೋ ಒಂದು ಗುಣದೌನ್ನತ್ಯವನ್ನು ಮುಟ್ಟುವುದಕ್ಕಾಗಿಯೋ ಸಹಿಸಲಸದಳವಾದ ಕಷ್ಟ, ನೋವುಗಳನ್ನು ಅನುಭವಿಸುವ ಸಂಕೀರ್ಣ ಪಾತ್ರಗಳಂತೆ ನಮಗೆ ತಮ್ಮನ್ನು ತಿಳಿದುಕೊಳ್ಳಲು ಕಷ್ಟಕೊಡುವುದಿಲ್ಲ.

ಈ ಸಾದಾ ಪಾತ್ರಗಳು ಕಾಯಂ ಒಂದೇ ಮಾನಸಿಕ ಸ್ಥಿತಿಯನ್ನು ಕಾದುಕೊಂಡು ಅಲ್ಲೊಮ್ಮೆ, ಇಲ್ಲೊಮ್ಮೆ ಗಂಭೀರ ಮುಖದ ನಗೆಯಂತೆ ಹಸಿರು ಮರದಡಿಯಲ್ಲಿರುವ ಸರೋವರದ ತರಂಗದಂತೆ ಬದಲಾವಣೆಯನ್ನು ತೋರಬಹುದು. ಆರ್ಯಾಂಬರವರ ಇಂತಹ ಅನೇಕ ಸಾದಾ ಪಾತ್ರಗಳನ್ನು ತಮ್ಮ ಕಾದಂಬರಿಯಲ್ಲಿ ಚಿತ್ರಿಸಿರುತ್ತಾರೆ. 'ಪ್ರಕೃತಿ ಪುರುಷ'ದ ಲಕ್ಷ್ಮಿ 'ಸಂಬಂಧಗಳು' ಭಾಸ್ಕರ, 'ಕಸ್ತೂರಿ' ಶಿವಸ್ವಾಮಿ, 'ಸಾಕ್ಷಾತ್ಕಾರ'ದ ಮಾಲತಿ.

ಗಂಭೀರವಾಗಿ ವಿಚಾರ ಮಾಡುವವರನ್ನಾಗಲಿ, ಎಲ್ಲವನ್ನು ಸೂಕ್ಷ್ಮವಾಗಿ ನೋಡಿ ವಿಶ್ಲೇಷಿಸುವವರನ್ನಾಗಲಿ, ಒಂದನ್ನೇ ಬಹಳ ಹಚ್ಚಿಕೊಂಡು ನರಳುವವರನ್ನಾಗಲೀ, ಕಂಡರೆ

ನಮ್ಮ ಸಾಮಾಜಿಕ ಜೀವನದಲ್ಲಿ ಅವರನ್ನು ಮೆಚ್ಚಿದವರು ಬಹಳ ಕಡಿಮೆಯೇ. ಸಾಹಿತ್ಯದಲ್ಲಾದರೂ ಈ ಸಂಕೀರ್ಣ ಪಾತ್ರಗಳಿಗೆ ಕಿಮ್ಮತ್ತು ಹೆಚ್ಚು. ಇಂಥ ಪಾತ್ರಗಳ ಸೃಷ್ಟಿಯಲ್ಲಿ ಜೀವನದ ಮೂಲಭೂತ ಪ್ರಶ್ನೆಗಳು ಅನೇಕ ಸಾರಿ ಸಮಾನತೆಗೊಳ್ಳುವುದರಿಂದ ಕಾದಂಬರಿಕಾರನ ಜೀವನ ಸಿದ್ಧಾಂತದ ಪರೀಕ್ಷೆಯೂ ಆಗಿಬಿಡುವುದುಂಟು.

ಇಂತಹ ಪಾತ್ರಗಳನ್ನು ಚಿತ್ರಿಸುವಾಗ ಬರೆಹಗಾರರ ಕೊರತೆಗಳು ಸುಸ್ಪಷ್ಟವಾಗುವುದುಂಟು. ಸಂಕೀರ್ಣ ಪಾತ್ರಗಳ ವ್ಯವಹಾರಗಳೆಲ್ಲಾ ಹೆಚ್ಚಾಗಿ ಅವುಗಳ ಭಾವನೆ, ಚಿಂತನೆಗಳ ನೆರಳಾಗಿರುವುದರಿಂದ ಆ ಭಾವರೇಖೆಯನ್ನು ಬರೆದು ತೋರಿಸುವುದಕ್ಕೆ ಕುಸುರಿನ ಕೆಲಸದ ಕೌಶಲ್ಯ ಕಲಾನೈಪುಣ್ಯಗಳು ಬೇಕಾಗುತ್ತದೆ. ಜೀವನದ ಸಮಸ್ಯೆಗಳ ಪ್ರಥಃಕರಣ, ಸರಿತಪ್ಪುಗಳ ವಿಮರ್ಶೆ, ಪರಿಣಾಮಗಳನ್ನು ತಿಳಿಸುವ ಕೇವಲ ಸಂಕೇತಗಳಾಗಿ ಈ ಸಂಕೀರ್ಣ ಪಾತ್ರಗಳಿರುವುದರಿಂದ ಇವುಗಳಿಗೆ ಸಾಹಿತ್ಯ ಮೌಲ್ಯ ಹೆಚ್ಚು. ವಿಚಾರವಂತರು, ಕಲಾವಂತರು, ಕಲಾಕಾರರು ಜೀವನವನ್ನು ಆಟವೆಂದು ತಿಳಿದುಕೊಳ್ಳಲು ಆಸ್ಪದ ಕೊಡುವುದಿಲ್ಲ.

ಪಾತ್ರಗಳು ಕಾದಂಬರಿಕಾರನ ಕೈಗೊಂಬೆಗಳಾಗಕೂಡದು. ತನಗೆ ಸರಿಯಾಗಿ ಜೀರ್ಣವಾಗದ ವಿಚಾರವನ್ನು ತಾನೇ ಅನುಭವಿಸದ ಭಾವನೆಗಳನ್ನು ಹೇಳ ಹೊರಟ ಕಾದಂಬರಿಕಾರ ಈ ದೋಷವನ್ನು ತಪ್ಪದೆ ಮಾಡುತ್ತಾನೆ. ಪಾತ್ರಚಿತ್ರಣವನ್ನು ಎರಡು ವಿರುದ್ಧ ರೀತಿಗಳಿಂದ ಮಾಡಬಹುದು. ಒಂದನೆಯದು ಪ್ರತ್ಯಕ್ಷ ಅಥವಾ ವಿಶ್ಲೇಷಣಾತ್ಮಕ, ಎರಡನೆಯದು ಅಪ್ರತ್ಯಕ್ಷ ಅಥವಾ ನಾಟಕೀಯ.

ಮೊದಲನೆಯ ರೀತಿಯಲ್ಲಿ ಕಾದಂಬರಿಕಾರ ಹೊರಗೇ ನಿಂತು ಆ ಪಾತ್ರಗಳ ಭಾವದೊಲವು, ಉದ್ದೇಶ, ವಿಚಾರ, ಅನಿಸಿಕೆಗಳನ್ನು ಬಿಡಿಸಿಟ್ಟು ಅವುಗಳ ಬಗೆಗೆ ವಿವರಣೆ, ಟೀಕೆ ಟಿಪ್ಪಣಿ ನಿರ್ಣಯಾತ್ಮಕ ವಾಕ್ಯಗಳನ್ನು ಹೇಳುತ್ತಾ ಹೋಗುತ್ತಾನೆ.

ಎರಡನೆಯ ರೀತಿಯಲ್ಲಿ ಕಾದಂಬರಿಕಾರ ತನ್ನನ್ನು ತೀರಾ ಪ್ರತ್ಯೇಕವಾಗಿಟ್ಟುಕೊಂಡು ಪಾತ್ರಗಳು ಸ್ವತಃ ತಮ್ಮ ಮಾತು ಕೃತಿ ವಿಚಾರಗಳಿಂದ ತಮ್ಮನ್ನು ಸ್ಪಷ್ಟಪಡಿಸುವಂತೆ ಮಾಡುವುದಲ್ಲದೆ, ಉಳಿದ ಪಾತ್ರಗಳು ಪರಸ್ಪರರ ಜೀವನವನ್ನು ಒಬ್ಬರನ್ನು ಕುರಿತು ಮತ್ತೊಬ್ಬರು ಆಡುವ ಮಾತುಗಳಿಂದ ಸ್ಪಷ್ಟವಾಗುವಂತೆ ತೋರಿಸಿಕೊಡುತ್ತಾನೆ.

ಸಂಕೀರ್ಣ ಪಾತ್ರಗಳಲ್ಲಿ ಅಪಸ್ವರದ ಮೀರಾ, ಕೀಲುಗೊಂಬೆಯ ಸೀತಾ ಶರಪಂಜರದ ಕಾವೇರಿ, ಬೆಳ್ಳಿಮೋಡದ ಇಂದಿರಾ, ಹೂವುಹಣ್ಣುವಿನ ರಮಾ, ಕಂಕಣದಲ್ಲಿನ ರಮಾ, ಕಸ್ತೂರಿ, ವಲ್ಲಿ, ಸುಶೀಲಾ, ಅಂಬಿಕಾ, ಮುಕ್ತಿಯ ಅಮೃತಾ ಮರಳಿಗೂಡಿಗೆಯ ಅಪ್ಸರ, ಎರಡುಮುಖದ ಉಮಾ, ಬಸವಿಯ ರತ್ನಾ

ಕಾಲ ಮತ್ತು ಸ್ಥಳದ ಕಲ್ಪನೆ

ಕತೆಯ ರೀತಿ, ನೀತಿ ಪದ್ಧತಿ ಜೀವನ ಕ್ರಮಗಳನ್ನಲ್ಲದೆ ಸ್ವಾಭಾವಿಕ ಪ್ರಕೃತಿಯ ಹಿನ್ನೆಲೆ ಅಥವಾ ಪರಿಸರಗಳನ್ನು ಒಳಗೊಳ್ಳುತ್ತದೆ. ಕಾದಂಬರಿಗೆ ವಾಸ್ತವಿಕ ಅಂಶವನ್ನು ತರುವಾಗ ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಘಟನೆಗಳು ಸಂಭವಿಸಿದವು. ಪಾತ್ರಗಳು ಜೀವಿಸಿದವು ಎನ್ನುವುದನ್ನು ತೋರಿಸಿಕೊಡಬೇಕಾಗುತ್ತದೆ. ಕಾದಂಬರಿಯೊಂದನ್ನು ಎಷ್ಟೂ ದೊಡ್ಡದಾಗಿ ಬರೆಯಬಹುದು; ಎಷ್ಟೊತ್ತೂ ಓದಬಹುದು, ಎಲ್ಲಿಯೋ ಕುಳಿತೋ, ಮಲಗಿಯೋ ಓದಬಹುದು.

ಘಟನೆಗಳೇ ಪ್ರಧಾನವಾಗಿರುವ ಕಾದಂಬರಿಯಲ್ಲಿ ಕಥಾ ಚಿತ್ರಣದ ಕಾಲದ ನಿರ್ದಿಷ್ಟತೆಯು ಅವಶ್ಯವಿರುವುದಾದರೂ, ಕಡಿಮೆ ತ್ರಾಸದಾಯಕವಾಗಿರುವುದರಿಂದ ಕಾಲವೊಂದು ಸಾಹಿತಿಗಳ ವಿಶೇಷ ಲಕ್ಷ್ಯವಾಗಿ ಉಳಿಯುವುದಿಲ್ಲ. ಎಲ್ಲೆಲ್ಲಿ ಕಾಲ ಮತ್ತು ಸ್ಥಳದ ಪ್ರಶ್ನೆ ಕಾದಂಬರಿಯಲ್ಲಿ ಉದ್ಭೂತವಾಗುತ್ತದೆಯೋ ಅಲ್ಲೆಲ್ಲ ಅದು ಆ ಮಿತಿಯಲ್ಲಿ ವ್ಯಾಪಕತೆಯನ್ನೆಷ್ಟು ಪಡೆದಿದೆ ಎನ್ನುವುದು ಮುಖ್ಯವಾಗುತ್ತದೆ. ಕಣ್ಣು ಚಿಕ್ಕದಾದರೂ ಅದು ಆನೆಯನ್ನೂ, ಪರ್ವತ ಆಕಾಶಗಳನ್ನೂ ಕಾಣುವಂತೆ ಕಾಲ, ಸ್ಥಳಗಳ ಮಿತಿಯಲ್ಲೇ ವಿಶ್ವವ್ಯಾಪಕತೆ ಸರ್ವಸಾಮಾನ್ಯವನ್ನು ತೋರಿಸಿಕೊಡಬೇಕಾಗುತ್ತದೆ ಕಾದಂಬರಿಕಾರ.

ಜೀವನವನ್ನು ಕಾಲಕ್ಕೂ, ಸ್ಥಳಕ್ಕೂ, ಮಿತಪಡಿಸಿದರೆ ಸಂವಿಧಾನಕ್ಕೆ ಅವಶ್ಯವಾಗಿರುವ ಸಂಬಂಧಗಳನ್ನು ಯಶಸ್ವಿಯಾಗಿ ಕೊನೆಯವರೆಗೆ ಕಾದಂಬರಿಕಾರ ನಿರ್ವಹಿಸಬಲ್ಲ. ಅವನು ಜೀವನದ ವಿಷಯದಲ್ಲಿರುವ ತನ್ನ ಆಸಕ್ತಿಗೆ ಮತ್ತೆ ಸಂಬಂಧರಹಿತವಾದ ಭಾವನೆಗಳಿಗೆ ನಿರ್ದಿಷ್ಟ ರೂಪ ಕೊಡಬಲ್ಲರು.

ಕಾದಂಬರಿಕಾರ್ತಿಯರು ಐವತ್ತರ ದಶಕದಿಂದ ರಚನೆ ಮಾಡಿದರು ಎಂಬ ಅಂಶ ಗಮನದಲ್ಲಿರುವಂತೆ ಅವರ ಸ್ಥಳಗಳು ಸೀಮಿತ ಅಂದರೆ ಬೆಂಗಳೂರು, ಮೈಸೂರು ನಡುವಿನ

ಸ್ಥಳಗಳಲ್ಲೇ ಅವರ ಕಾದಂಬರಿಗಳು ಸುತ್ತುತ್ತವೆ. ಆಗೊಮ್ಮೆ, ಈಗೊಮ್ಮೆ ಬೊಂಬಾಯಿ, ಊಟಿ ಬಗ್ಗೆ ಪ್ರಸ್ತಾಪಬಂದಿದೆ ತಾವರೆಕೊಳದ ಮುಂಬೈ ಕಂಕಣ, ಊಟಿ, ಆರ್ಯಾಂಬರು ಉತ್ತರ ಕರ್ನಾಟಕದಲ್ಲಿ ಬಸವಿ ಬಗ್ಗೆ ಚಿತ್ರಿಸುತ್ತಾರೆ. ಉಳಿದಂತೆ ಗ್ರಾಮೀಣ ಪರಿಸರದ ಹಿನ್ನೆಲೆಯು ಕಾದಂಬರಿಗಳಲ್ಲಿ ಅಷ್ಟಕಷ್ಟೆ. ಹೆಚ್ಚಾಗಿ ಕಂಡುಬರುವುದು. ಮಧ್ಯಮವರ್ಗದ ಕುಟುಂಬಗಳ ಬಗ್ಗೆ ನಗರ ಪ್ರದೇಶಗಳಲ್ಲೆ ಬಹುಪಾಲು ಚಿತ್ರಿತವಾಗಿವೆ.

ತಂತ್ರ ಮತ್ತು ಶೈಲಿ

ಒಂದು ಕಾದಂಬರಿಯನ್ನು ಬರೆಯುವಾಗ ಅದರಲ್ಲಿಯ ಒಂದು ಪಾತ್ರವು ತನ್ನ ಆತ್ಮಕತೆಯನ್ನು ಹೇಳುವಂತಿರಬೇಕು ಅಥವಾ ಹೇಳುತ್ತಿರಬಹುದು. ದಿನಚರಿ ಪತ್ರಗಳ ಮುಖಾಂತರ ಒಂದು ಕತೆ ಬರೆಯಲ್ಪಟ್ಟಿರಬಹುದು. ತೃತೀಯ ಪುರುಷ ಏಕವಚನದಲ್ಲಿ ಲೇಖಕನೇ ಕತೆಯನ್ನು ಹೇಳಬಹುದು. ಪಾತ್ರಗಳನ್ನು ಸೃಷ್ಟಿಸಬಹುದು.

ಕಾದಂಬರಿಯನ್ನು ಬರೆಯುವ ಎರಡು ಸ್ಥೂಲ ಮಾರ್ಗಗಳಿವೆ. ಪ್ರತಿಯೊಂದಕ್ಕೂ ಅದರದೇ ಆದ ಗುಣ ದೋಷಗಳು ಇವೆ. ಪ್ರಥಮ ಪುರುಷದಲ್ಲಿ ಮತ್ತು ತೃತೀಯ ಪುರುಷದಲ್ಲಿ ಎರಡನೆಯ ವಿಧಾನದಲ್ಲಿ ಕಾದಂಬರಿಕಾರನು ತನಗೆ ಕತೆ ಹೇಳುವುದಕ್ಕೂ, ಪಾತ್ರಗಳನ್ನು ತಿಳಿಸುವುದಕ್ಕೂ ಅವಶ್ಯವಾದ ಎಲ್ಲವನ್ನು ಹೇಳಬಲ್ಲ. ಆದರೆ, ಇದು ಬರೆಹಗಾರನಿಂದ ಬಹಳಷ್ಟು ಇಚ್ಛೆಸುತ್ತದೆ ಪ್ರತಿಯೊಂದು ಪಾತ್ರದ ಅಂತರಂಗವನ್ನು ಪ್ರವೇಶಿಸಿ ಅವನಿಗನಿಸಿದಂತೆ ಅನಿಸಿಕೊಂಡು ಅವರಂತೆ ವಿಚಾರ ಮಾಡಬೇಕಾಗುತ್ತದೆ. ಒಂದು ವೇಳೆ ಲೇಖಕನಲ್ಲೇ ಆ ಅಂಶಗಳು ಇಲ್ಲವಾದರೆ ಆ ಪಾತ್ರಗಳನ್ನು ಓದುವವನಿಗೆ ಖಾತ್ರಿ ಎನಿಸುವಂತೆ ರಚಿಸಲಾರರು.

ಅಂತೆಯೇ, ಲೇಖಕಿಯರಿಬ್ಬರು ಸಾಮಾಜಿಕ ವಸ್ತುಗಳನ್ನು ಸಾಮಾಜಿಕ ಕಾದಂಬರಿಗಳನ್ನೇ ರಚಿಸಿರುವುದರಿಂದ ಕೆಲವೊಮ್ಮೆ ಪ್ರಥಮ ಪುರುಷದಿಂದಲೇ ನಿರೂಪಣೆ ಮಾಡಿದ್ದಾರೆ ಬರೆಹಗಾರ್ತಿಯರು ನಿರೂಪಕರಾಗಿ ರಚಿಸಿರುವ ಕಾದಂಬರಿಗಳೇ ಹೆಚ್ಚು ತ್ರಿವೇಣಿಯವರು 'ಮೊದಲ ಹೆಜ್ಜೆ' ಕಾದಂಬರಿಯನ್ನು ಉತ್ತಮಪುರುಷರೂಪದಲ್ಲಿ ನಿರೂಪಿಸುತ್ತಾರೆ.

ಆರ್ಯಾಂಬರು ಅಸಂಗತ ಕಾದಂಬರಿಯನ್ನು ನಿರೂಪಕರಿಂದಲೇ ಹೇಳಿಸುತ್ತಾರೆ. ಹಾಗೆಯೇ ಪಾತ್ರಗಳನ್ನೇ ಮುಖ್ಯವಾಗಿ ಮುಂದುವರೆಸುವ ರೀತಿಯಲ್ಲಿ ಪ್ರಸ್ತಾಪಿಸುತ್ತಾರೆ. ಸಂಭಾಷಣೆ ಶೈಲಿಯಿಂದಲೇ ಕಾದಂಬರಿ ಮುನ್ನಡೆಯುತ್ತದೆ.

ಸರಳವೂ, ನೇರವೂ ಆದ ಭಾಷೆಯನ್ನು ಬಳಸುವುದರಿಂದ ಕ್ಲಿಷೆ, ಶ್ಲೇಷೆಗಳು ಉಂಟಾಗುವುದಿಲ್ಲ. ಓದಿಸಿಕೊಂಡು ಹೋಗುವ ಕಲೆಯನ್ನು ಕರಗತ ಮಾಡಿಕೊಂಡಿರುವ ಲೇಖಕಿಯರು ನಿರೂಪಣಾ ಶೈಲಿಯನ್ನು ಮೈಗೂಡಿಸಿಕೊಂಡಿದ್ದಾರೆ. ಓದಿಸುವ ಗುಣದಲ್ಲೇ ಕಾದಂಬರಿ ರಚನೆಯನ್ನು ಪೂರೈಸಿದ್ದಾರೆ.

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಜೀವನ ಸಿದ್ಧಾಂತ

131095

ಕಾದಂಬರಿಯನ್ನು ಹೇಗೆ ಬರೆಯಬೇಕು ಎನ್ನುವುದಕ್ಕಿಂತ ಏಕೆ ಬರೆಯಬೇಕು ಎನ್ನುವ ಪ್ರಶ್ನೆಗೆ ಉತ್ತರ ಹುಡುಕಿದಾಗ ಓದುಗನಿಗಾಗಿ ಈ ಜೀವನ ಸಿದ್ಧಾಂತದ ಅವಶ್ಯಕತೆಯಿದೆ. ಏಕೆಂದರೆ ಸಮಾಜದ ಒಂದು ಅಂಗವಾಗಿ ಸಮಾಜದಲ್ಲಿ ನಡೆಯುವ ಘಟನೆಗಳಿಗೆ ಒಂದು ಆಕಾರ, ರೂಪಕೊಟ್ಟು ತಮ್ಮದೇ ಆದ ಕಾಲ, ಸ್ಥಳದಲ್ಲಿ ತಂತ್ರಶೈಲಿ ರೂಢಿಸಿಕೊಂಡು ರಚನೆ ಮಾಡುವ ರಚನೆಕಾರರು ಇಂಥ ಒಂದು ಉದ್ದೇಶಕ್ಕಾಗಿ ಬರೆಯುತ್ತಿದ್ದಾರೆ.

ಕಾದಂಬರಿಯು ನಾಟಕದಂತೆ ಜೀವನಕ್ಕೆ ಪ್ರತ್ಯಕ್ಷ ಬಂಧವುಳ್ಳದ್ದಾಗಿದೆ. ಸ್ತ್ರೀ ಪುರುಷರೂ ಅವರ ಪರಸ್ಪರ ಸಂಬಂಧಗಳು, ವಿಚಾರ ಭಾವನೆಗಳು, ಸ್ವಭಾವ ಸುಖ ದುಃಖಗಳು, ಅವರ ಹೋರಾಟ ಸೋಲು ಗೆಲುವುಗಳೊಂದಿಗೆ ಸಂಬಂಧವಿಟ್ಟುಕೊಂಡಿದೆ. ಆದ್ದರಿಂದ ಕಾದಂಬರಿಕಾರನ ಕಥಾವಸ್ತುವೇ ಜೀವನ. ಜೀವನವನ್ನು ಒಂದು ದೃಷ್ಟಿಯಿಂದ ಅಸಂಖ್ಯಾತ ದೃಷ್ಟಿಕೋನಗಳಿಂದ ಕಂಡು ನೇರವಾಗಿಯೋ, ಸೂಚ್ಯವಾಗಿಯೋ ಒಂದು ಸಲಹೆಯನ್ನು ಅಲ್ಲವಾದರೆ ಜೀವನವು ಅವನ ಮೇಲೆ ಉಂಟು ಮಾಡಿದ ಪ್ರಭಾವವನ್ನು ಹೇಳಬೇಕಾಗುತ್ತದೆ.

ಜೀವನ ಸಿದ್ಧಾಂತ ಪ್ರತ್ಯಕ್ಷವಾಗಿಯೇ ಅಂದರೆ ನೀತಿಶಾಸ್ತ್ರದಲ್ಲಿ ಹೇಳಿರುವಂತೆ ಹೇಳಲ್ಪಡದೆ, ಆದರೆ ಕಾಣಿಸುವಂತಲ್ಲ ಅನಿಸುವಂತೆ ಸಾಹಿತ್ಯದಲ್ಲಿ ಹೇಳಲ್ಪಡಬೇಕಾದುದು ಪರಿಣಾಮದ ದೃಷ್ಟಿಯಲ್ಲಿ ಮುಖ್ಯವಾದುದು. ಕಲಾತ್ಮಕ ರೂಪ ತಳೆದ ಪಾಪ ಪುಣ್ಯಗಳ ಸರಿತಪ್ಪುಗಳ ವಿಚಾರ ಮಾತ್ರ 'ಕಾಂತಾ ಸಮ್ಮತಿ' ದ್ವಾರಾ ಸಹೃದಯರನ್ನು ಮುಟ್ಟುತ್ತದೆ. ಅನ್ಯಾಯ ಅನೀತಿಯನ್ನು ಕಲಿಸಲು ಸಾಹಿತ್ಯವಿರುವುದಿಲ್ಲ. ನ್ಯಾಯ ನೀತಿಗಳನ್ನು ಕಲಿಸಲು ಶಾಸ್ತ್ರಗಳಿರುತ್ತವೆ.

ಅಂದ ಮೇಲೆ ಸಾಹಿತ್ಯದ ಅವಶ್ಯಕತೆ ಇರುವುದು ನ್ಯಾಯ ನೀತಿಗಳನ್ನು ಅದು ಜನರಲ್ಲಿ ಬಿತ್ತುವ ವಿಧಾನದಲ್ಲಿ ಎನ್ನುವುದು ಸ್ಪಷ್ಟ. ಈ ವಿಚಾರಗಳ ಕಲಾತ್ಮಕ ಅಭಿವ್ಯಕ್ತಿಯು ವ್ಯಕ್ತಿತ್ವದ ಮೂಲವಾದ ಭಾವನಾಂಶವನ್ನು ಅಲುಗಾಡಿಸುವುದರಿಂದ ಸಂಪೂರ್ಣ ವ್ಯಕ್ತಿತ್ವದ ಪ್ರಗತಿಪರ ಬದಲಾವಣೆಗೆ ಸಹಾಯಕವಾಗುತ್ತದೆ. ಕಾದಂಬರಿಕಾರನಿಗೆ ಆಸಕ್ತಿಯಿರುವುದೇ ಅವನು ಬರೆಯಲು ಕಾರಣವೆನ್ನುವುದು ಒಪ್ಪಿಕೊಳ್ಳುವುದಾದರೆ ಅವರ ಉದ್ಧಾರಕ್ಕೆ ಸಹಾಯವಾದ ಸತ್ವವನ್ನು ಮಾತ್ರ ಜೀವನ ದರ್ಶನ ಒಟ್ಟಾರೆಯಾಗಿ ಇಂದು ನಾವು ನಾಲ್ಕು ದಶಕಗಳಷ್ಟು ದೂರ ನಿಂತು ತ್ರಿವೇಣಿಯವರ ಕೃತಿಗಳನ್ನು ಒಟ್ಟಾರೆಯಾಗಿ ನೋಡುವಾಗ ಅವರ ನ್ಯೂನತೆಗಳು ಹಾಗೂ ಮಿತಿಗಳೇ ಎದ್ದು ಕಾಣುತ್ತದೆ.

ಮೊದಲನೆಯದಾಗಿ ಅವರ ಕತೆ, ಕಾದಂಬರಿಗಳ ವಸ್ತು ಹಾಗೂ ಪಾತ್ರಗಳ ಹರಹು ತುಂಬಾ ಸೀಮಿತ. ಅವರ ಎಲ್ಲಾ ಕತೆ, ಕಾದಂಬರಿಗಳ ಕೇಂದ್ರದಲ್ಲಿ ಸ್ತ್ರೀ ಇದ್ದಾಳೆ. ಪ್ರೇಮ ವಿವಾಹ ಮತ್ತು ಕುಟುಂಬ ಇವುಗಳಿಗೆ ಸಂಬಂಧಿಸಿದಂತೆ ಸ್ತ್ರೀಯ ಅಪೇಕ್ಷೆ, ನಿರೀಕ್ಷೆಗಳ ಮತ್ತು ಅನುಭವಗಳ ಸುತ್ತ ಅವರ ಎಲ್ಲಾ ಕೃತಿಗಳು ಹೆಣೆಯಲ್ಪಟ್ಟಿವೆ. ಆದ್ದರಿಂದ ಕೆಲವು ಕೃತಿಗಳನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ಕೃತಿಗಳನ್ನು ಕೌಟುಂಬಿಕ ಸಾಹಿತ್ಯವೆಂದು ಪರಿಗಣಿಸಬಹುದು.

ಅಲ್ಲದೆ ಅವರ ಪಾತ್ರಗಳೆಲ್ಲವೂ ನಗರಗಳಲ್ಲಿ ವಾಸಿಸುವ, ಸುಶಿಕ್ಷಿತ ಮಾಧ್ಯಮ ಅಥವಾ ಉಚ್ಚಮಾಧ್ಯಮ ವರ್ಗಕ್ಕೆ ಸೇರಿವರು. ಭೌಗೋಳಿಕವಾಗಿ ಕೂಡ ಕೃತಿಗಳ ಕಾರ್ಯಸ್ಥಳ ಹೆಚ್ಚಾಗಿ ಮೈಸೂರು, ಬೆಂಗಳೂರು ನಗರಗಳಿಂದ ಹೊರಗೆ ಹೋಗುವುದೇ ಇಲ್ಲ. 'ಅಪಸ್ವರ' 'ಬೆಳ್ಳಿಮೋಡ' ಮುಂತಾದ ಒಂದೆರಡು ಕಾದಂಬರಿಗಳಲ್ಲಿ ತ್ರಿವೇಣಿಯವರು ಗ್ರಾಮಜೀವನವನ್ನು ಚಿತ್ರಿಸಲು ಪ್ರಯತ್ನಿಸಿದ್ದಾರಾದರೂ ಆ ಪ್ರಯತ್ನದಲ್ಲಿ ಯಶಸ್ವಿಯಾಗಿಲ್ಲ.

ಆರ್ಯಾಂಬರವರು ಇದಕ್ಕೆ ಹೊರತಾಗಿಲ್ಲ, ಆದರೆ ತ್ರಿವೇಣಿಯವರಿಗಿಂತ ಅನುಭವದ ಮೂಸೆ ಹಿಗ್ಗಿದರೂ ಕಾಲ ವ್ಯಾಪ್ತಿ ಸಿಕ್ಕಿದರೂ ಯೋಚನಾ ಲಹರಿ ಹೆಚ್ಚೇನೂ ಇಲ್ಲ ಎಂದೇ ಹೇಳಬಹುದು. ಅಲ್ಲಲ್ಲಿ ಹೊಸ ಪ್ರಯತ್ನಕ್ಕೆ ಕೈ ಹಚ್ಚಿದರೂ ಅದು ಅಷ್ಟೇನೂ ಹೇಳಿಕೊಳ್ಳುವಂಥ ಮಟ್ಟಕ್ಕೆ ತಲುಪಿಲ್ಲ. ಸಹೋದರಿಯ ಹಾದಿಯೇ ಸುಗಮ. ಸುಕ್ಷೇಮ ಎಂಬಂತೆ ಸದ್ದಿಲ್ಲದೆ ಹಿಂದೆ ನಡೆದಿದ್ದಾರೆ. ಹಾಗಾಗಿ ಕಾರ್ಯವ್ಯಾಪ್ತಿ ಕಾರ್ಯಕ್ಷೇತ್ರ ಕಿರಿದಾಗಿಯೇ ಕಾಣುತ್ತದೆ. ಸಾಮಾಜಿಕ ಸಂವೇದನೆ ಮತ್ತು ಕಲಾತ್ಮಕತೆ ಎಂದು ಹೇಳುವಾಗ ಲೇಖಕಿಯರಿಬ್ಬರು ಸರಿಸಮಾನವಾಗಿಯೇ ತಮ್ಮ ಸ್ವಂತಿಕೆಯನ್ನು ಮೆರೆದಿದ್ದಾರೆ ಎಂದೇ ಅರ್ಥೈಸಬಹುದು.

ಅಡಿಟಿಪ್ಪಣಿಗಳು

೧. ಸಾಹಿತ್ಯ ಪ್ರಕಾರಗಳು : ಕಾದಂಬರಿಗಳು ಪುಟ ೩೧

೨. ಅದೇ ಪುಟ ೩೪

೩. ಟಿ.ಪಿ. ಅಶೋಕ : ಕಾದಂಬರಿ ಪ್ರಕಾರ, ಒಂದು ತಾತ್ವಿಕ ವಿವೇಚನೆ, ಸಾಹಿತ್ಯ ವಿಮರ್ಶೆ ೧೯೯೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ ೧೦೦.

ಅಧ್ಯಾಯ ೪

ಸಾಮಾಜಿಕ ರಚನೆ

ಅಧ್ಯಾಯ ೪

ಸಾಮಾಜಿಕ ರಚನೆ

ರಚನೆ ಎಂಬ ಪದವು ವಿವಿಧ ಭಾಗಗಳ ನಡುವಿನ ಕ್ರಮಬದ್ಧ ಜೋಡಣೆ ಎಂಬ ಅರ್ಥವನ್ನು ನೀಡುತ್ತದೆ. ಒಂದು ಕಟ್ಟಡಕ್ಕೆ ರಚನೆ ಇದೆ. ಒಂದು ಸಂಗೀತ ಸಂಮಿಶ್ರಣದಲ್ಲಿ ರಚನೆಯನ್ನು ಕಾಣಬಹುದು. ಒಂದು ಅಣು ರಚನೆಯನ್ನು ಹೊಂದಿದೆ. ಈ ಉದಾಹರಣೆಗಳಲ್ಲಿ ವಿವಿಧ ಭಾಗಗಳು ಕ್ರಮಬದ್ಧವಗಿ ಜೋಡಣೆಗೊಂಡಿರುವುವು. ಉದಾಹರಣೆಗೆ, ಒಂದು ಕಟ್ಟಡವು ಕಲ್ಲುಗಳು, ಇಟ್ಟಿಗೆ, ಮರಳು, ಸೀಮೆಂಟ್, ಮರ, ಕಬ್ಬಿಣ, ಗಾಜು ಮೊದಲಾದ ಹಲವು ಭಾಗಗಳನ್ನು ಹೊಂದಿದೆ. ಇವುಗಳನ್ನು ಒಟ್ಟಿಗೆ ರಾಶಿ ಹಾಕಿದರೆ ಕಟ್ಟಡವಾಗಲಾರದು. ಆದರೆ ಅವುಗಳನ್ನು ಕ್ರಮವರಿತು ಜೋಡಿಸಿದಾಗ ಮಾತ್ರ ಕಟ್ಟಡ ನಿರ್ಮಾಣವಾಗುವುದು.

ಒಂದು ಕಟ್ಟಡಕ್ಕೆ ರಚನೆಯಿರುವಂತೆ ಸಮಾಜವೂ ತನ್ನದೇ ಆದ ರಚನೆಯನ್ನು ಹೊಂದಿದೆ. ಇಲ್ಲಿ ವ್ಯಕ್ತಿಗಳೇ ರಚನೆಯ ವಿವಿಧ ಘಟಕಗಳು. ವ್ಯಕ್ತಿಗಳಿಗೆ ಜೀವವಿರುವುದಲ್ಲದೆ ಅವರಿಗೆ ಸಾಮಾಜಿಕ ರಚನೆಯಲ್ಲಿ ತಮ್ಮದೇ ಆದ ಸಾಮಾಜಿಕ ಅಂತಸ್ತು ಇರುವುದು ಸದಸ್ಯತ್ವದ ಬದಲಾವಣೆ ಸಾಮಾಜಿಕ ಚಲನೆ ಹಾಗೂ ಇವುಗಳಿಂದ ವ್ಯಕ್ತಿಗಳು ಬದಲಾವಣೆಗೆ ಸಿಲುಕಬಹುದಾದರೂ ಇಡೀ ರಚನೆಯು ತನ್ನ ನಿರಂತರತೆಯನ್ನು ಕಾಯ್ದುಕೊಳ್ಳುವುದು. ಉದಾಹರಣೆಗೆ, ಒಂದು ದೇಶ, ಆದಿವಾಸಿ ಸಮೂಹ, ಧಾರ್ಮಿಕ ಅಥವಾ ರಾಜಕೀಯ ಸಮೂಹ ಮತ್ತು ಕಾರ್ಮಿಕ ಸಮೂಹದ ಸದಸ್ಯರುಗಳು ಬದಲಾವಣೆಯಾಗಬಹುದಾದರೂ ಅವು ತಮ್ಮ ನಿರಂತರತೆಯನ್ನು ಕಾಯ್ದುಕೊಳ್ಳುತ್ತದೆ.

ಮಾನವ ಶರೀರವು ತನ್ನ ರಚನೆಯನ್ನು ಕಾಯ್ದುಕೊಳ್ಳುವಂತೆ ಸಮಾಜವು ತನ್ನ ರಚನೆಯನ್ನು ಉಳಿಸಿಕೊಳ್ಳುವುದು. ಸದಾ ಪರಿವರ್ತನೆಯಾಗುತ್ತಲೇ ಇರುವ ಅಣುಗಳನ್ನು ಹೊಂದಿದ್ದರೂ ಮಾನವ ಶರೀರದ ರಚನೆ ಒಂದೇ ತೆರನಾಗಿರುತ್ತದೆ. ಸಮಾಜದ ಬಗೆಗೂ ಈ ಮಾತು ನಿಜ. ಪಾತ್ರಗಳನ್ನು ನಿರ್ವಹಿಸುವ ವ್ಯಕ್ತಿಗಳು ಬದಲಾವಣೆಯಾಗಬಹುದಾದರೂ ಪಾತ್ರ ನಿರ್ವಹಣೆ ಅಗತ್ಯವಾದ್ದರಿಂದ ಸಮಾಜದ ರಚನೆ ನಿರಂತರವಾಗಿ ಮುಂದುವರಿಯುವುದು.

"ಸಾಂಸ್ಥಿಕ ನಿಯಮಗಳಿಂದ ನಿಯಂತ್ರಿತವಾದ ಅಥವಾ ಸ್ಪಷ್ಟವಾಗಿ ನಿರೂಪಿತವಾದ ಸಾಮಾಜಿಕ ಸಂಬಂಧಗಳಿಗೆ ಬದ್ಧವಾದ ವ್ಯಕ್ತಿಗಳ ಕ್ರಮವಾದ ಜೋಡಣೆಯನ್ನು 'ಸಾಮಾಜಿಕ ರಚನೆ' ಎನ್ನಬಹುದು. ಅಥವಾ ಸರಳವಾಗಿ ಹೇಳುವುದಾದರೆ, ಜನರ ನಡುವೆ ವಾಸ್ತವಿಕವಾಗಿ ಅಸ್ತಿತ್ವದಲ್ಲಿರುವ ಸಾಮಾಜಿಕ ಸಂಬಂಧಗಳ ವ್ಯವಸ್ಥೆಯನ್ನು ಸಾಮಾಜಿಕ ರಚನೆ ಎನ್ನಬಹುದು".*

ಸಮಾಜಗಳನ್ನು ಒಳಗೊಂಡಿರುವ ಪ್ರಮುಖ ಸಮೂಹಗಳು ಮತ್ತು ಸಂಸ್ಥೆಗಳ ಸಂಕೀರ್ಣವೇ ಸಾಮಾಜಿಕ ರಚನೆ. ವ್ಯಕ್ತಿಗಳಿಂದೊಡಗೂಡಿದ ಸಂಘಟಿತ ಸಮೂಹವೇ ಸಾಮಾಜಿಕರಚನೆ ಎನ್ನಿಸಿಕೊಳ್ಳುವುದು. ಒಟ್ಟಿನಲ್ಲಿ ಸಾಮಾಜಿಕ ರಚನೆ ಎಂಬ ಪದವನ್ನು ಪುನರಾವರ್ತನೆಯಾಗುತ್ತಿರುವ ಯಾವುದೇ ಸಾಮಾಜಿಕ ನಡತೆಯ ಮಾದರಿಯನ್ನು ಸಂಕೇತಿಸಲು ಉಳಿಸಲಾಗುತ್ತಿದೆ.

ಸಮಾಜವು ಜನರನ್ನೊಳಗೊಂಡಿರುವ ಬೃಹತ್ ಸಮೂಹ. ಇದರಲ್ಲಿ ಉಪ ಸಮೂಹ ಇಲ್ಲವೇ ಉಪಗುಂಪುಗಳಿವೆ. ಆರ್ಥಿಕ, ಧಾರ್ಮಿಕ, ಕೌಟುಂಬಿಕ ಮತ್ತಿತರೆ ಸಮೂಹಗಳು ಮತ್ತು ಸಂಘಗಳು ಈ ಬಗೆಯ ಉಪ ಗುಂಪುಗಳಾಗಿವೆ. ಅನ್ಯೋನ್ಯ ಪಾತ್ರ ನಿರ್ವಹಿಸುವ ವ್ಯಕ್ತಿಗಳು ಈ ಉಪಗುಂಪುಗಳಲ್ಲಿ ಸಂಘಟಿತರಾಗಿದ್ದಾರೆ. ಇದು ಯಾವುದೇ ವ್ಯಕ್ತಿಗಿಂತಲೂ ಹೆಚ್ಚು ಸಮಯ ಅಸ್ತಿತ್ವದಲ್ಲಿರುತ್ತದೆ. ಉದಾಹರಣೆಗೆ ಕುಟುಂಬವು ಗಂಡ ಅಥವಾ ಹೆಂಡತಿ ಸತ್ತ ನಂತರವೂ ಬದುಕುಳಿಯುವುದು. ಅದೇ ರೀತಿ ಒಂದು ಕುಟುಂಬದ ಸದಸ್ಯರು ವಾಸಿಸುತ್ತಿದ್ದ ಕಟ್ಟಡವು ಕುಸಿದಿದ್ದುದರಿಂದ ನಾಶವಾಗಬಹುದಾದರೂ ಕುಟುಂಬ ಎನ್ನುವುದು ಅದೇ ರೂಪದಲ್ಲಿ ಮುಂದುವರೆಯುತ್ತದೆ.

ವ್ಯಕ್ತಿಗಳ ಸ್ಥಾನ ಮತ್ತು ಪಾತ್ರಗಳು ಸಾಮಾಜಿಕ ರಚನೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ವ್ಯಕ್ತಿಗಳ ಆಸೆ, ಆಕಾಂಕ್ಷೆ, ನಿರೀಕ್ಷೆಗಳು ವೈವಿಧ್ಯಪೂರ್ಣವಾಗಿರುತ್ತವೆ. ಪಾತ್ರಧಾರಿಗಳು ಪಾತ್ರ ನಿರ್ವಹಣೆಯೊಂದಿಗೆ ಇತರರ ಬಗೆಗಿನ ಕರ್ತವ್ಯವನ್ನು ನಿರ್ವಹಿಸಬೇಕಾಗುವುದು. ಉದಾಹರಣೆಗೆ ಕುಟುಂಬದಲ್ಲಿ ಗಂಡನು ತನ್ನ ಪಾತ್ರ ನಿರ್ವಹಿಸುವುದರ ಜೊತೆಗೆ ಹೆಂಡತಿ, ಮಕ್ಕಳು ಮತ್ತು ಬಂಧುಗಳು ಇವರ ಬಗೆಗಿನ ತನ್ನ ಕರ್ತವ್ಯವನ್ನೂ ಪೂರೈಸಬೇಕಾಗುವುದು.

ಪಾತ್ರಗಳಿಗೆ ಮತ್ತು ಉಪಗುಂಪುಗಳಿಗೆ ಅನ್ವಯವಾಗುವ ನಿಯಮಗಳನ್ನು ಅವುಗಳಲ್ಲಿ ಎರಡು ವಿಧ. ೧. ನಿರ್ಬಂಧಕ ಅಥವಾ ಸಂಬಂಧಕ ನಿಯಮಗಳು ಮತ್ತು

೨. ಅಂಗೀಕಾರಾರ್ಹವಾದ ಅಥವಾ ಅಧಿಕಾರಯುಕ್ತ ನಿಯಮಗಳು.

ಸಾಮಾಜಿಕ ನಿಯಮಗಳು ಅವಶ್ಯಕವಾದ ಕರ್ತವ್ಯ ಅಥವಾ ಹೊಣೆಗಾರಿಕೆಯನ್ನು ನಿರ್ದಿಷ್ಟ ಪಡಿಸುತ್ತವೆ. ಆದರೆ ಈ ನಿಯಮಗಳು ಎಲ್ಲಾ ಪಾತ್ರಗಳಿಗೂ ಮತ್ತು ಉಪಗುಂಪುಗಳಿಗೂ ಒಂದೇ ರೀತಿ ಅನ್ವಯವಾಗದೆ. ಅವು ಪಾತ್ರಗಳಲ್ಲಿ ಮತ್ತು ಗುಂಪುಗಳಲ್ಲಿ ವಿಭಿನ್ನವಾಗಿರುತ್ತದೆ.

ಸಾಮಾಜಿಕ ರಚನೆ ಮತ್ತು ಸಾಮಾಜಿಕ ವ್ಯವಸ್ಥೆ ಈ ಎರಡು ಪರಿಕಲ್ಪನೆಗಳು ಪರಸ್ಪರ ಸಂಬಂಧಿಸಿವೆ. ಸಾಮಾಜಿಕ ವ್ಯವಸ್ಥೆಯು ಸಾಮಾಜಿಕ ರಚನೆಯು ಕಾರ್ಯಾತ್ಮಕ ವಿಷಯಕ್ಕೆ ಸಂಬಂಧಿಸಿದೆ. ಸಾಮಾಜಿಕ ರಚನೆ ಮತ್ತು ಸಾಮಾಜಿಕ ವ್ಯವಸ್ಥೆಯು ಕಾರ್ಯಪ್ರವೃತ್ತವಾಗಲು ಸಾಮಾಜಿಕ ರಚನೆಯು ಸಾಧನವಾಗಿರುತ್ತದೆ.

ಯಾವುದೇ ಸಾಮಾಜಿಕ ರಚನೆಯ ಮೌಲ್ಯವು ಅದು ಯಾವ ರೀತಿ ಕಾರ್ಯವನ್ನು ನಿರ್ವಹಿಸುತ್ತದೆ ಎಂಬುದನ್ನು ಆಧರಿಸಿದೆ. ಯಾವಾಗ ಸಾಮಾಜಿಕ ರಚನೆಯು ಸರಿಯಾದ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುವುದೋ ಆಗ ನಾವು ಅದನ್ನು ಮಾರ್ಪಾಡು ಮಾಡಲು ಪ್ರಯತ್ನಿಸುತ್ತೇವೆ. ಉದಾಹರಣೆಗೆ, ಕುಟುಂಬವು ತನ್ನ ಉದ್ದೇಶವನ್ನು ಪೂರೈಸಲು ವಿಫಲವಾದಾಗ ಅದನ್ನು ಮಾರ್ಪಡಿಸುತ್ತೇವೆ.

ಕಾರ್ಯವಿಲ್ಲದ ರಚನೆಯು ಉಪಯೋಗವಿಲ್ಲದ್ದು ಮತ್ತು ಕಾರ್ಯವು ಯಾವಾಗಲೂ ಸಾಮಾಜಿಕ ರಚನೆಯ ಮೂಲಕವೇ ರಚಿತವಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಸಾಮಾಜಿಕ ರಚನೆ ಮತ್ತು ಸಾಮಾಜಿಕ ವ್ಯವಸ್ಥೆಗಳೆರಡೂ ಜೊತೆ ಜೊತೆಯಾಗಿ ಹೋಗುತ್ತದೆ. ಸಾಮಾಜಿಕ ರಚನೆ ಮತ್ತು ಸಾಮಾಜಿಕ ವ್ಯವಸ್ಥೆಗಳ ನಡುವೆ ಬೇರೊಂದು ರೀತಿಯ ಸಂಬಂಧವಿದೆ. ನೆರವೇರಬೇಕಾದ ಕಾರ್ಯಗಳ ಸ್ವರೂಪವು ಸಾಮಾಜಿಕ ರಚನೆಯ ಮೇಲೆ ಪ್ರಭಾವ ಬೀರುತ್ತದೆ. ಹಾಗೆಯೇ ರಚನೆಯಿಂದ ಅದು ನಿರ್ವಹಿಸುವ ಕಾರ್ಯದ ಮೇಲೆ ಪ್ರಭಾವವನ್ನು ಬೀರುತ್ತದೆ.

ಸಾಮಾಜಿಕ ರಚನೆಯಲ್ಲಿ ಸಮಾಜ ಎಂದರೆ ನಾವೇ ತಾನೇ! ಎನ್ನಬಹುದು. ಈ ಹೊಸ ಅಲೆಗಳ ನಡುವೆ ನಾವು ಸಮಾಜದ ಪರಿಧಿಯ ಒಂದು ಬಿಂದುವಿನಷ್ಟೇ ಆಗಿರುತ್ತೇವೆ ಎನ್ನುವುದನ್ನು ಎಚ್ಚರದಿಂದ ಗುರುತಿಸಿಕೊಳ್ಳಬಹುದಾಗಿದೆ. ಸಾಮಾಜಿಕ ರಚನೆಯ ಅವಶ್ಯಕತೆಯನ್ನು ಎಲ್ಲರೂ ಒಪ್ಪುತ್ತಾರೆ. ನಮ್ಮ ಸಾಮಾಜಿಕ ಅಸಮತೆಯಲ್ಲಿ ಮುಖ್ಯವಾದ ಬೇರು ಲೈಂಗಿಕತೆಯಾಗಿದೆ. ಅದು ಸುಪ್ತವಾಗಿರುವ ತಾರತಮ್ಯ. ಆದರೆ ಹೆಣ್ಣಿನ ಮೇಲೆ ಪ್ರಕೃತಿ ಹೇರಿರುವ ದೌರ್ಬಲ್ಯಗಳು ಇದ್ದೇ ಇವೆ ಎನ್ನುವುದನ್ನೂ ಮರೆಯಲಾಗದು.

ಗಂಡು, ಹೆಣ್ಣಿನ ಅಸಮಾನತೆಯ ಮೂಲ ಕಾರಣಗಳೇ ಜೈವಿಕ ಅಂಶಗಳು ಎಂದರೆ ಗಂಡು ಹೆಣ್ಣಿನ ದೈಹಿಕ ಸ್ವರೂಪಕ್ಕೆ ಸಂಬಂಧಿಸಿದಂತೆ ಇರುವ ವಿಚಾರಗಳೇ. ಈ ವಿಚಾರಗಳಿಂದಾಗಿಯೇ ಅವರನ್ನು ತುಳಿಯುವ ಪ್ರಕ್ರಿಯೆ ನಡೆದಿದೆ. ಮದುವೆ, ತಾಯ್ತನ ಇವಿಷ್ಟೇ ಬದುಕಿನ ಪರಮಗುರಿಗಳು. ಮದುವೆ, ಕುಟುಂಬ ಇವುಗಳೇ ಸಾಮಾಜಿಕ ರಚನೆಯ ಮೂಲ ಬೇರುಗಳಾಗಿರುವಾಗ ಅದರ ಮೇಲಾಗುವ ಸಾಧಕ ಬಾಧಕಗಳನ್ನು ಗಮನದಲ್ಲಿಟ್ಟುಕೊಂಡೇ ಆಯ್ಕೆಯ ಕ್ರಿಯೆಗೆ ಮೊದಲಾಗಬೇಕು.

ಅತ್ಯವಶ್ಯಕವಾಗಿ ಗ್ರಹಿಸಬೇಕಾದ ಮತ್ತೊಂದು ವಿಚಾರವೆಂದರೆ ಸಾಮಾಜಿಕ ರಚನೆಗೆ ಸಂಬಂಧಿಸಿದಂತೆ ಆಲೋಚಿಸಿದಾಗ ಮುಖ್ಯವಾಗಿ ಎರಡು ಪ್ರಕ್ರಿಯೆಗಳು ಗೋಚರವಾಗುತ್ತದೆ. ಒಂದು ಪರಿಷ್ಕರಣೆ, ಎರಡನೆಯದು ಬದಲಾವಣೆ ಎಂದರೆ ಮೈಗೆ ಮುಳ್ಳು ಚುಚ್ಚಿದಂತಾಗುತ್ತದೆ. ನಾವು ವಾಸ್ತವದ ಸತ್ಯಗಳನ್ನು ಅರಿತುಕೊಂಡು ಕಾರ್ಯ ಪ್ರವೃತ್ತರಾದಲ್ಲಿ 'ಆಯ್ಕೆ' ನಮಗೆ ಕರತಲಾಮಲಕವಾಗುತ್ತದೆ. ಇಲ್ಲವಾದಲ್ಲಿ ಕೊರಗುವಿಕೆಯಲ್ಲೇ ಕೊನೆಗಾಣಬೇಕಾಗುತ್ತದೆ.

ಪರಿಷ್ಕರಣೆ ಮತ್ತು ಬದಲಾವಣೆಗಳಲ್ಲಿ ನಮ್ಮ ಆಯ್ಕೆ ಯಾವ ಮೂಲದಿಂದ ಆರಂಭವಾಗಬೇಕೆಂಬ ಪ್ರಶ್ನೆ ಎದುರಾಗುತ್ತದೆ. ವರಿಷ್ಕರೂ ಮನಸ್ಸಿಗೆ ಸಂಬಂಧಿಸಿದ್ದು, ಬದಲಾವಣೆ ಮನಸ್ಸಿನ ಕ್ರಿಯೆಯಿಂದ ಹಿಡಿದು ಬಹಿರಂಗದ ಎಲ್ಲಾ ಕ್ರಿಯೆಗಳಿಗೂ ಸಂಬಂಧಿಸಿದ್ದು, ಹೀಗಾಗಿ ಪರಿಷ್ಕರಣೆಯಿಂದಲೇ ಬದಲಾವಣೆಗೆ ಬರಬೇಕೆನಿಸುವುದು ಸಹಜ. ಆದರೆ ಎಲ್ಲವೂ ಇಡೀ ಸ್ವರೂಪದ್ದಾಗಿರುವುದಿಲ್ಲ.

ಕಾಲ ಸಂದರ್ಭ ಮತ್ತು ಕ್ಷೇತ್ರ ಅಥವಾ ವಿಷಯ ವಸ್ತು ಇವುಗಳಿಗೆ ಸಂಬಂಧಿಸಿದಂತೆ ಕೆಲವೊಮ್ಮೆ ಪರಿಷ್ಕರಣದಿಂದ ಬದಲಾವಣೆಗೆ ಬರುವ ಹಾಗೆ ಬದಲಾವಣೆಯಿಂದ ಪರಿಷ್ಕರಣಕ್ಕೂ ಬರಬೇಕಾಗುತ್ತದೆ. ಇಂಥ ಯಾವುದು ವ್ಯಕ್ತಿಗತ ಯಾವುದು ಸಾಮಾಜಿಕ, ಯಾವುದು ಕೌಟುಂಬಿಕ ಕೇಂದ್ರಬಿಂದುವಿನಿಂದ ಕಾಣಿಸಿಕೊಳ್ಳುವಂತಹದು ಎನ್ನುವುದಿಲ್ಲ ಗುರುತಿಸಿಕೊಂಡದ್ದೇ ಆದಲ್ಲಿ ಆಯ್ಕೆಯ ಮಾರ್ಗ ಸುಲಭ ಮತ್ತು ಸರಳ.

"ಸ್ತ್ರೀ ಪ್ರಕೃತಿಯ ಅತ್ಯಂತ ಶ್ರೇಷ್ಠ ಕೊಡುಗೆ, ಪ್ರಪಂಚದ ಅರ್ಧದಷ್ಟು ಜನಸಂಖ್ಯೆ ಸ್ತ್ರೀಯರದ್ದೇ. ಆದರೂ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಬಹಳಷ್ಟು ಅಡೆತಡೆಗಳನ್ನು ಎದುರಿಸುತ್ತಿರುವುದು ಕೆಲವೊಮ್ಮೆ ಅನಿವಾರ್ಯ ಮತ್ತೆ ಕೆಲವೊಮ್ಮೆ ಆಘಾತ ಮಗದೊಮ್ಮೆ ಸಹಜವೂ ಹೌದು. ೨೧ ನೇ ಶತಮಾನದತ್ತ ಹೆಜ್ಜೆ ಇಟ್ಟ ಇಂದಿನ ಮಹಿಳೆ ಈವರೆಗೆ ಸಾಧಿಸಿರುವುದೇನು? ಸಾಮಾಜಿಕವಾಗಿ ಮಾಡಬೇಕಾದುದೇನು? ಆಕೆಗಿರುವ ಸುರಕ್ಷಿತತೆ ಎಂತಹುದು? ಆಕೆಯನ್ನು ನಿರ್ಲಕ್ಷಿಸುತ್ತಿರುವುದಕ್ಕೆ ಯಾರು ಹೊಣೆ? ಆಕೆಯೇ? ಆಕೆಯ ಸಂಬಂಧಿಗಳೇ? ತಂದೆ ತಾಯಿಗಳೇ? ಸಮಾಜವೇ? ಸರ್ಕಾರವೇ? ಎಂಬೆಲ್ಲವುಗಳನ್ನು ವಿಚಾರ ಮಾಡುತ್ತಾ ಹೋದರೆ ಎಲ್ಲ ಸ್ತರಗಳಲ್ಲೂ ಎಲ್ಲರೂ ಸ್ತ್ರೀ ಎಂಬ ಶಕ್ತಿಯನ್ನು ನಿರ್ಲಕ್ಷಿಸಿರುವುದು ಕಂಡು ಬರುತ್ತದೆ".*

ಯಾವುದೇ ಸಮಾಜದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಶ್ರೀಮಂತಿಕೆಯನ್ನು ನಾಗರೀಕತೆಯ ಮುನ್ನಡೆಯನ್ನು ಪ್ರತಿನಿಧಿಸುವುದು ಆ ಸಮಾಜದಲ್ಲಿ ಸ್ತ್ರೀಗಿರುವ ಸ್ಥಾನಮಾನಗಳಿಂದ, ಇದರ ಜೊತೆಗೆ ಇನ್ನೋಂದು ಆಂಬೋಣವೆಂದರೆ, ಜಗತ್ತಿನ ಬಹುತೇಕ ಎಲ್ಲಾ ಕಡೆಗಳಲ್ಲೂ ಪುರುಷ ಪ್ರಾಧಾನ್ಯತೆಯೇ ಇರುವುದರಿಂದ ದುರ್ಬಲವಾದ ಸ್ತ್ರೀಯರ ಶೋಷಣೆ ನಿರಂತರವಾಗಿ ನಡೆಯುತ್ತಿದೆ ಎಂಬುದು ಎಷ್ಟು ಸತ್ಯವೋ ಸಹಜವೋ ತಿಳಿಯದು ಎಂದು ಹೇಳಲಾಗುವುದಿಲ್ಲ.

ವಿಶ್ವದಾದ್ಯಂತ ಸ್ತ್ರೀಯರ ಸ್ಥಾನಮಾನಗಳಿಗೆ ಹಾಗೂ ಇತ್ತೀಚೆಗೆ ನಡೆಯುತ್ತಿರುವ ಬದಲಾವಣೆಗಳಿಗೆ ಬಹುತೇಕ ಸ್ತ್ರೀಯರನ್ನೇ ಹೊಣೆಗಾರರನ್ನಾಗಿ ಮಾಡಿರುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಯರನ್ನು ಉತ್ತಮ ಸ್ಥಾನ ಕೊಟ್ಟು ಗೌರವಿಸಿರುವರಾದರೂ ಅವರನ್ನು ಪುರುಷರಿಗಿಂತ ಕೀಳಾಗಿ ಕಂಡಿರುವುದಕ್ಕೆ ನಮ್ಮ ಪವಿತ್ರ ಗ್ರಂಥಗಳಲ್ಲಿಯೇ ಸಾಕಷ್ಟು ಉಲ್ಲೇಖಗಳಿವೆ.

ಮಾನವನ ಇತಿಹಾಸವು ಇತ್ತೀಚಿನವರೆಗೂ ಪುರುಷ ಪ್ರಧಾನವಾದ ಇತಿಹಾಸವೇ ಆಗಿರುವುದರಿಂದ ಪುರುಷರು ತಮ್ಮ ಪ್ರಾಬಲ್ಯವನ್ನು ಮೆರೆಯುವ ದೃಷ್ಟಿಯಿಂದ ಸ್ತ್ರೀಯರ ಅನರ್ಹತೆಗಳನ್ನು ಎತ್ತಿ ತೋರಿಸುತ್ತಾ ಹೀಗೆಳೆದು ಖಂಡಿಸುತ್ತಾ ಬಂದಿರುವುದಂತೂ ಸತ್ಯ. ಇದುವರೆವಿಗೂ ಸ್ತ್ರೀಯರು ಪ್ರಕೃತಿ ಸಹಜವಾದ ಇತಿಮಿತಿಗಳಿಂದಾಗಿ ತಮಗೆ ನೀಡಲಾಗಿರುವ ದ್ವಿತೀಯ ದರ್ಜೆಯ ಸ್ಥಾನವನ್ನು ಮೌನವಾಗಿ ಒಪ್ಪಿಕೊಂಡೇ ಬಂದಿದ್ದಾರಾದರೂ ಇದೀಗ ಆಧುನಿಕ ನಾಗರಿಕತೆಯ ಬದಲಾವಣೆಗಳಿಂದ ಸ್ತ್ರೀಯರ ಜೀವನ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳಾಗುತ್ತಾ ನಡೆದಿದೆ ಎನ್ನಬಹುದು.

ಆಧುನಿಕತೆಯ ಹೆಸರಿನಲ್ಲಿ ಉದ್ಭವಿಸಿದ ಹೊಸ ಪರಿಸರ ಮತ್ತು ಪ್ರಕಾಶಮಾನಕ್ಕೆ ಬರುತ್ತಿರುವ ಅವಕಾಶಗಳ ಸರಮಾಲೆಯಿಂದಾಗಿ ಸ್ತ್ರೀಯರ ಆಂತರಿಕ ಸಾಮರ್ಥ್ಯದ ಪ್ರಭೆ ಬೆಳಕಿಗೆ ಬರುವುದರ ಜೊತೆಗೆ ಅವರ ಬಂಧನದ ವಿಮೋಚನೆಗೆ ಚಾಲನೆ ನೀಡಿದಂತಾಗಿದೆ.

ಸಂಪ್ರದಾಯ ಆಚರಣೆಗಳ ವಿಷಯದಲ್ಲಿ ದೇವರು, ಧರ್ಮಗಳ ವಿಚಾರದಲ್ಲಿ ಸ್ವೀಕರಿಸುವ ಮನೋಭಾವವೋ ನಿರಾಕರಿಸುವ ಮನೋಭಾವವೋ, ಅದು ಹೇಗೆ ರಚನೆಯಾಗಿದೆ ಸಾಮಾಜಿಕ ರಚನೆಯ ಕಾರ್ಯದಲ್ಲಿ ಆರ್ಯಾಂಬ, ತ್ರಿವೇಣಿಯವರ ಕಾದಂಬರಿಗಳಲ್ಲಿ ಯಾವ ಬಿಗಿಬಂಧವಿದೆ, ಯಾವ ಸ್ಥೂಲ ಚಿತ್ರಣವಿದೆ, ಆ ಕಾಲಕ್ಕೆ ಸಹೋದರಿಯರ ಧೋರಣೆಗಳು ಕಾದಂಬರಿಗಳಲ್ಲಿ ಹೇಗೆ ಚಿತ್ರಿತವಾಗಿದೆ ಎಂಬುದನ್ನು ಇಲ್ಲಿ ವಿಶ್ಲೇಷಣೆಗೆ ಗುರಿಪಡಿಸಲಾಗುವುದು.

ಸಮಾಜ ಬದಲಾಗಿದೆ ಅದರ ಜೊತೆ ಹೆಣ್ಣಿನ ಸ್ಥಾನಮಾನವೂ ಬದಲಾಗಬೇಕು ಪ್ರಗತಿಪರ ಸಮಾಜದ ಅಂಚಿನಲ್ಲಿ ಸಾಗುತ್ತಿರುವ ನಾವು ಹಳೆಯ ಗೊಡ್ಡು ಸಂಪ್ರದಾಯಗಳನ್ನು ತೊರೆದು ಅರ್ಥಪೂರ್ಣ ಜೀವನವನ್ನು ಸಾಗಿಸಬೇಕೆಂಬ ಧ್ಯೇಯವನ್ನು 'ಸಂಬಂಧಗಳು' ಕಾದಂಬರಿಯ 'ಭವಾನಿ' ಪಾತ್ರದ ಮುಖೇನ ಹೇಳಿಸಿ ಹಾಗೆಯೇ ಅವಳನ್ನು ನಡೆಯುವಂತೆ ಮಾಡುತ್ತಾರೆ ಆರ್ಯಾಂಬರವರು. ತಾಯಿಯಾಗಿದ್ದು ಮದುವೆಯಾದ ಸೀತೆ ಮರುಮದುವೆಯಾಗುವ ಮೂಲಕ ನವ ಸಮಾಜದಲ್ಲಿ ಹಿಂದಿನಿಂದ ನಡೆದುಬಂದ ಕಟ್ಟಳೆಯನ್ನು ಮುರಿಯುತ್ತಾರೆ 'ದೇವಮಾನವ' ಕಾದಂಬರಿಯ ನಾಯಕಿ.

ಸಂಬಂಧಗಳು ಮಾಯೆ ಎಲ್ಲ ಪ್ರೇಮಕ್ಕಿಂತ ಮಿಗಿಲಾದದ್ದು ಭಗವಂತನ ಪ್ರೇಮವೊಂದೆ. ಅವನೊಬ್ಬನೆ ಮಾನವನ ಪ್ರೀತಿಗೆ ಅರ್ಹ. ಆದ್ದರಿಂದ ಮಾನವ ಸಂಬಂಧಗಳಿಗಿಂತ ಮುಖ್ಯವಾಗಿ ಭಗವಂತನಲ್ಲಿ ಐಕ್ಯಗೊಳ್ಳುವುದರ ಮೂಲಕ ಸಾಕ್ಷಾತ್ಕಾರ ಸಾಧಿಸುವುದು ಉತ್ತಮವೆಂದು, ಮಾನವ ಸಂಬಂಧಗಳು ಇತ್ತೀಚೆಗೆ ಸಡಿಲಗೊಳ್ಳುತ್ತಿರುವುದನ್ನು ಅಂತಿಮವಾಗಿ ದೈವದ ಮೊರೆ ಹೋಗುವುದನ್ನು 'ಸಾಕ್ಷಾತ್ಕಾರ' ಕಾದಂಬರಿ ನಾಯಕಿ ಕಮಲಾಳ ಮೂಲಕ ಪ್ರತಿಪಾದಿಸಿದ್ದಾರೆ.

ಮದುವೆಯಾಗದೆ ಇಬ್ಬರೂ ಜೊತೆಯಲ್ಲಿರುವುದು ಸರಿ ಎಂದು ವಿಶ್ಲೇಷಿಸಿದ ಸಮಾಜವನ್ನು ಬಿಟ್ಟು ಹೊರಗೆ ಬದುಕಲು ಸಾಧ್ಯವಿಲ್ಲ ಎಂಬುದನ್ನು ಮನಗಂಡ ಇಬ್ಬರೂ ಬೇರೆ ಬೇರೆ ವಾಸ ಮಾಡುತ್ತಾರೆ 'ಅಸಂಗತ' ಕಾದಂಬರಿಯಲ್ಲಿ ಇಲ್ಲಿ ಒಬ್ಬರನ್ನೊಬ್ಬರು ಅಗಲುವ ಸಂದರ್ಭ ಬರುತ್ತದೆ ಇಬ್ಬರೂ ಪ್ರೇಮದ ಸುಳಿಯಲ್ಲಿ ಸಿಕ್ಕಿ ಅದರಲ್ಲಿ ಮುಳುಗದೇ ಮುನ್ನಡೆದಿದ್ದಾರೆ ಅಂದರೆ ಅವರಿಬ್ಬರೂ ಮಾನವ ಸಹಜ ತುಡಿತಗಳಿಗೆ ಒಳಗಾಗಿ ಆ ಬಂಧನವನ್ನು ಬಿಟ್ಟು ಬದುಕಲು ಸಾಧ್ಯ ಎಂಬುದನ್ನು ನಿರೂಪಿಸಿದ್ದಾರೆ. ಜೀವನದಲ್ಲಿ ಆತ್ಮಹತ್ಯೆಯೇ ಕೊನೆಯಲ್ಲ. ಸಮಸ್ಯೆಗಳನ್ನು ಎದುರಿಸಿ ಬದುಕುವುದೇ ನಿಜವಾದ ಜೀವನ. ಹೀಗೆ ಸಾಮಾಜಿಕ ರಚನೆಯಲ್ಲಿ ಸ್ತ್ರೀ ಪುರುಷರ ಪಾತ್ರಗಳನ್ನು ವಿಶ್ಲೇಷಿಸಿದ್ದಾರೆ.

ಸಮಾಜದ ದೌರ್ಜನ್ಯಗಳನ್ನು ಎತ್ತಿ ಹಿಡಿದು ನಮ್ಮ ವ್ಯವಸ್ಥೆಯ ಓರೆ ಕೋರೆಗಳನ್ನು ತಿದ್ದುವ ಪ್ರಯತ್ನದಲ್ಲಿ 'ಬದುಕಿನ ಬವಣೆಯಲ್ಲಿ' ಕಾದಂಬರಿ ಗಮನಾರ್ಹವಾದುದು. ತನ್ನ ದೇಹ ಹಾಗೂ ಮನಸ್ಸಿನ ಮೇಲೆ ಸಾರ್ವಭೌಮತ್ವವನ್ನು ಸಾಧಿಸಿಕೊಳ್ಳಬಲ್ಲ ಎದೆಗಾರಿಕೆ ಹೆಣ್ಣುಗಳಿಗೆ ಎಲ್ಲಿಯವರೆಗೆ ಬರುವುದಿಲ್ಲವೋ ಹಾಗೂ ಅಂತಹದೊಂದು ಆರೋಗ್ಯಕರವಾದ ವಾತಾವರಣ

ಸೃಷ್ಟಿಸುವ ಹೊಸದೊಂದು ಸಮಾಜದ ರಚನೆಯ ಕಾರ್ಯ ಎಲ್ಲಿಯವರೆಗೆ ನಡೆಯುವುದಿಲ್ಲವೋ ಅಲ್ಲಿಯವರೆಗೆ ಈ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಲೇ ಇರುತ್ತದೆ. ಅತ್ಯಾಚಾರ ಶೋಷಣೆಗಳು ನಡೆಯುತ್ತಲೇ ಇರುತ್ತವೆ. ಅಸಹಾಯಕ ಹೆಣ್ಣಿನ ಪರಿಸ್ಥಿತಿಯ ಬಗ್ಗೆ ಕ್ಷಣಕಾಲಕ್ಕಾದರೂ ಚಿಂತಿಸಬೇಕೆನ್ನುವ ಪ್ರಯತ್ನ 'ಬದುಕಿನ ಬವಣೆ'ಯಲ್ಲಿ ಕಾಣಸಿಗುತ್ತದೆ.

ಎಂಬತ್ತರ ದಶಕದಲ್ಲಿಯೇ ಅಂತರ್ಧರ್ಮೀಯ ವಿವಾಹ ಮತ್ತು ಅದರಿಂದಾಗುವ ಸಮಸ್ಯೆಗಳ ಸೂಕ್ಷ್ಮಾತಿಸೂಕ್ಷ್ಮ ಎಳೆಗಳನ್ನು ವಿವರ ವಿವರವಾಗಿ ನಿರೂಪಿಸುವಲ್ಲಿ ಎಲ್ಲಾ ಧರ್ಮಕ್ಕಿಂತಲೂ ವಿಶಿಷ್ಟವಾದುದು 'ವಿಶ್ವಧರ್ಮ' ಎಂದು ಸಾರುವಲ್ಲಿ ಆರ್ಯಾಂಬರ ಹೆಚ್ಚುಗಾರಿಕೆಯಿದೆ.

ತ್ರಿವೇಣಿಯವರು ಇದಕ್ಕೆ ಹೊರತಲ್ಲ. 'ಹಣ್ಣೆಲೆ ಚಿಗುರಿದಾಗ' ಕಾದಂಬರಿಯಲ್ಲಿ ರಾಯರ ಪತ್ನಿ 'ರಾಜಮ್ಮ'ನನ್ನು ಚಿತ್ರಿಸುವಾಗ ಸ್ತ್ರೀಯ ಬಗ್ಗೆ ತ್ರಿವೇಣಿಯವರ ದೃಷ್ಟಿಕೋನ ತುಂಬಾ ಪಾರಂಪರಿಕ ಮತ್ತು ಸಾಂಪ್ರದಾಯಕವೆಂದು ನಮಗೆ ತೋರಬಹುದು ಆದರೆ ಪುರುಷನಾಗಲೀ, ಸ್ತ್ರೀಯಾಗಲಿ, ತ್ರಿವೇಣಿಯವರು ಗೌರವಿಸುವುದು ಒಬ್ಬರ ತುಂಬು ಜೀವನವನ್ನು ಇತರರಿಗೆ ಮತ್ತು ತನಗೆ ಉಪಯುಕ್ತವಾಗಿ, ಅರ್ಥಪೂರ್ಣವಾಗಿ ಬಾಳಲ್ಪಟ್ಟ ಬದುಕನ್ನು ಮಾತ್ರ.

'ಕೀಲುಗೊಂಬೆ' ಕಾದಂಬರಿಯಲ್ಲಿ ತ್ರಿವೇಣಿಯವರು ಹೇಳುವ ಹಾಗೆ ಸ್ತ್ರೀಯರ ಹೀನಸ್ಥಿತಿಗೆ ಮುಖ್ಯ ಕಾರಣವೆಂದರೆ, "ನಮ್ಮ ಸಮಾಜದಲ್ಲಿ ಹೆಂಗಸಿಗೊಂದು ನ್ಯಾಯ, ಗಂಡಸಿಗೆ ಮತ್ತೊಂದೇ, ನ್ಯಾಯವಿರುವುದು ಗಂಡಸರ ವಿವಾಹೇತರ ಅನೈತಿಕ ವ್ಯವಹಾರಗಳು ದುರ್ಲಕ್ಷಿಸಲ್ಪಟ್ಟರೆ, ಪ್ರಕೃತಿಯೇ ಅಂತಹ ದುರ್ವ್ಯವಹಾರಗಳಿಗೆ ಹೆಂಗಸನ್ನು ಜವಾಬ್ದಾರಳನ್ನಾಗಿಸುತ್ತದೆ".

ಏಕೆಂದರೆ, ಚಿಕ್ಕ ವಯಸ್ಸಿನಲ್ಲಿ ಗಂಡ ಸತ್ತರೆ ಮದುವೆ ಮಾಡ್ಕೋಬಾರ್ದು ಹೆಣ್ಣು ಅಂತ ಕಾನೂನು ಮಾಡಿರುವ ಸಮಾಜದ ತಪ್ಪು. ಆ ಸಮಾಜವನ್ನು ಎದುರಿಸಿ ಅನಾಥೆಯನ್ನು ಸೌಭಾಗ್ಯವತಿಯನ್ನಾಗಿ ಮಾಡಲು ಹಿಂಜರಿಯುವ ಹೇಡಿ ಗಂಡಸಿನ ತಪ್ಪು. ಗಂಡಸು ಇನ್ನೂ ಮೃಗವಾಗಿಯೇ ಇದ್ದಾನೆ ಎನ್ನುವುದಕ್ಕೆ ಈಗಿನ ಸಮಾಜದ ಸ್ಥಿತಿಯೇ ಸಾಕ್ಷಿಯಾಗಿದೆ.

ಲೇಖಕಿ ಇಲ್ಲೊಂದು ಕಿವಿಮಾತು ತಿಳಿಸುವುದೇನೆಂದರೆ, ಕೇವಲ ಶಿಕ್ಷಣವೊಂದೇ ಮತ್ತು ಅದರಿಂದ ದೊರಕುವ ಆರ್ಥಿಕ ಸ್ವಾತಂತ್ರ್ಯ ಸ್ತ್ರೀಗೆ ಪರಾಧೀನತೆಯಿಂದ ಮುಕ್ತಿಕೊಡಬಲ್ಲದು. ಲೇಖಕಿಯು ಮುಂದುವರೆದು ಒಮ್ಮೆ ಸ್ತ್ರೀಗೆ ಉತ್ತಮ ಶಿಕ್ಷಣ ದೊರೆತರೆ, ಆಗ ಅವಳು ಪುರುಷರು ಅವಳಿಗಾಗಿ ಕಟ್ಟಿ ಬೆಳೆಸಿರುವ ಪಡಿಯಚ್ಚುಗಳ (ವಿಧೇಯ ಪತ್ನಿ, ತ್ಯಾಗಮಯಿ ತಾಯಿ ವಿನಾಶಕಾರಿ ಮೋಹಿನಿ ಇತ್ಯಾದಿ) ಮರ್ಮವನ್ನು ಅರಿಯಲು ಸಮರ್ಥಳಾಗುತ್ತಾಳೆ ಮತ್ತು ಕೂಡಲೇ ಅವುಗಳಿಂದ ಪಾರಾಗಲು ಶಕ್ತಳಾಗುತ್ತಾಳೆ.

ವಿದ್ಯೆ ಅವಳಿಗೊಂದು ರಕ್ಷಣೆ ಇದ್ದ ಹಾಗೆ. ಏಕೆಂದರೆ ನಮ್ಮ ಸಮಾಜದಲ್ಲಿ ಸೌಂದರ್ಯ ಮತ್ತು ಹಣ ಇವೆರಡಲ್ಲಿ ಒಂದಾದರೂ ಇರದಿದ್ದರೆ ಹೆಣ್ಣಿಗೆ ತನ್ನದೇ ಆದ ಒಂದು ವ್ಯಕ್ತಿತ್ವವಿಲ್ಲ. ತನ್ನ ಅನನ್ಯತೆಯ ಕಲ್ಪನೆಯೂ ಬರಲು ಸಾಧ್ಯವಿಲ್ಲವೆಂಬ ನಿಷ್ಠೂರ ಸತ್ಯವನ್ನು ಈ ಕಾದಂಬರಿ ನಮಗೆ ಮನಗಾಣಿಸುತ್ತದೆ.

ಸಹೋದರಿಯರಿಬ್ಬರು ಸ್ತ್ರೀಧೋರಣೆಯ ಸುತ್ತಲೆ ಕಾದಂಬರಿ ರಚನೆ ಮಾಡುವುದರೊಂದಿಗೆ, ಸಾಮಾಜಿಕ ಸಂವೇದನೆಯೊಂದಿಗೆ ಕಲಾತ್ಮಕತೆಯಲ್ಲೂ ವಿಭಿನ್ನತೆ ತೋರಿದ್ದಾರೆ ಕೆಲವೊಮ್ಮೆ ಅವರ ಅಭಿಪ್ರಾಯಗಳು ಅನುಭವಜನ್ಯವಾದರೂ ಮತ್ತೊಮ್ಮೆ ಕಾಲ್ಪನಿಕವೂ ಆಗುತ್ತದೆ. ಕೆಲವೆಡೆ ಲೇಖಕಿಯರಿಬ್ಬರ ಕಲ್ಪನಾ ಸಾಮ್ರಾಜ್ಯಕ್ಕೂ ವಾಸ್ತವಿಕ ಘಟನೆಗಳಿಗೂ ಹೊಂದಿಕೆಯಾಗದು, ಕೌಟುಂಬಿಕ ಸಂಬಂಧಗಳಾಚೆ ಅವರ ಬರೆಹ ಹಿಗ್ಗದು.

ಸ್ತ್ರೀಪರ ಕಾಳಜಿಯಿಂದ ಬರೆವಣಿಗೆಯ ಮಹಾಪೂರ ಹರಿದಿದೆ ಒಂದೊಂದು ಪಾತ್ರಗಳು ಸಮಾಜದ ಒಂದೊಂದು ಮುಖಗಳಾಗಿ ಕಂಡು ಬರುತ್ತವೆ. ಈ ನಿಟ್ಟಿನಲ್ಲಿ ಅವರ ನಿಲುವುಗಳು ನೈಜವಾಗಿ ಚಿತ್ರಿಸಲ್ಪಟ್ಟಿವೆ ಸಮಾಜವನ್ನು ಸೂಕ್ಷ್ಮದೃಷ್ಟಿಯಲ್ಲಿ ಗಮನಿಸುವಂತೆ ಮಾಡುತ್ತದೆ. ಆದ್ದರಿಂದ ಇವರ ಬರೆಹಗಳು ಸಾರ್ಥಕತೆಯನ್ನು ಕಂಡುಕೊಂಡಿವೆ ಸರಳವಾಗಿ ಹಾಗೂ ನೇರವಾಗಿ ಮೂಡಿಬಂದಿದೆ.

ಇಬ್ಬರು ಒಂದೇ ಕುಟುಂಬದವರಾಗಿದ್ದರಿಂದ ಹಾಗೂ ಸಂಪ್ರದಾಯಸ್ಥರೇ ಆಗಿದ್ದರು ದೇವರು, ಧರ್ಮಗಳ ವಿಷಯವಾಗಿ ರಾಜಿ ಮಾಡಿಕೊಳ್ಳುವುದಿಲ್ಲ, ಸ್ವೀಕರಿಸುವ ಮನೋಭಾವವೇ ಕಂಡು ಬರುತ್ತದೆ. ಕೆಲವೊಮ್ಮೆ ಆರ್ಯಾಂಬರು ಆ ಎಲ್ಲೆಯನ್ನು ದಾಟುವ ಪ್ರಯತ್ನವನ್ನು ಮಾಡುತ್ತಾರೆ ಅಲ್ಲದೆ ಸಹೋದರಿಯರ ಧೋರಣೆಗಳು ಒಂದೇ ದಾರಿಯಲ್ಲಿ ಸಾಗುತ್ತವೆ. ಏಕೆಂದರೆ ಅಕ್ಕನ ಹಾದಿ ಸುಗಮವಾಗಿರುವಾಗ ತಂಗಿ ಪಕ್ಕಕ್ಕೆ ಸರಿಯುವುದೆಂತು ಹಾಗಾಗಿ ಸುಗಮ ಪಥದಲ್ಲಿ ನಡೆದಿದ್ದಾರೆ. ಭಿನ್ನ ಭಿನ್ನ ನೆಲೆಯನ್ನು ವಿಶಾಲ ದೃಷ್ಟಿಯಲ್ಲಿ ಚಿತ್ರಿಸಿದ್ದಾರೆ.

'ವಿಶ್ವಧರ್ಮ' ಆರ್ಯಾಂಬರವರ ಕಾದಂಬರಿ ಹೆದ್ದಾರಿಯಲ್ಲೊಂದು ಮಹತ್ವದ ಮೈಲುಗಲ್ಲು. ಅಂತರ್ಧರ್ಮೀಯ ವಿವಾಹವನ್ನು ಕುರಿತು ಹೇಳಹೊರಟ ಕೃತಿ. ಇಲ್ಲಿನ ನಾಯಕಿ ಕಟ್ಟಾ ವೀರಶೈವ ಸಂಪ್ರದಾಯಸ್ಥ ತುಂಬು ಕುಟುಂಬದಲ್ಲಿ ಬೆಳೆದು ಬಂದ ಹೆಣ್ಣು ಮಗಳು. ತಂದೆಯನ್ನು ಕಳೆದುಕೊಂಡ ಕುಟುಂಬದ ಹೊಣೆಗಾರಿಕೆಯಲ್ಲ. ದರ್ಪಿಷ್ಟ ಬಲ ಸಹೋದರನ ಕೈಯಲ್ಲಿ, ತುಂಬು ಮನೆಯ ಯಜಮಾನಿಯಾಗಿಯೂ, ವಿಧವೆತನದಿಂದ ಈಗ ಎಲ್ಲವನ್ನು ಕಳೆದುಕೊಂಡಿರುವ ಅಸಹಾಯಕ ತಾಯಿ, ಮುಗ್ಧ ತಂಗಿ, ತಮ್ಮಂದಿರೇ ಅವಳ ಸುತ್ತ. ಕಾಲೇಜಿಗೆ ಸೇರುವುದು ಹೆಮ್ಮರ್ಗಾಲವಾದರೂ ವಿದ್ಯೆಯ ಸಲುವಾಗಿ ಊಟ ಬಿಟ್ಟು, ಹಠ ಮಾಡಿ ಕಾಲೇಜಿನ ಮೆಟ್ಟಿಲನ್ನು ಹತ್ತಿದ್ದು, ಮನೆಯವರ ವಿರೋಧವಿದ್ದರೂ ಗೆಳೆತನದ ಆಪ್ಯಾಯಮಾನತೆಯೇ ಮುಖ್ಯವಾಗಿ ಮುಸ್ಲಿಂ ಗೆಳತಿಯೊಂದಿಗೆ ಆತ್ಮೀಯ ಭಾವದ ಬೆಳವಣಿಗೆ ನಾಯಕಿಯ ಪಾತ್ರದಲ್ಲಿ ಬರುವ ಮುಖ್ಯ ಘಟನೆಗಳು.

ನಾಯಕ ಸಂಪ್ರದಾಯಸ್ಥನಾದರೂ ಆಧುನಿಕ ವಿಚಾರಗಳನ್ನು ಅರಗಿಸಿಕೊಂಡ ಸಿರಿವಂತ ಮುಸ್ಲಿಂ ಕುಟುಂಬದ ಕುಡಿ ಮೇಲಾಗಿ ವೈದ್ಯ ಇವನ ತಂಗಿಯೊಡನೆ ನಾಯಕಿಗಿದ್ದ ಆತ್ಮೀಯ ಸ್ನೇಹ ಕ್ರಮಕ್ರಮೇಣ ಇವನತ್ತಲೂ ಅವಳನ್ನು ಆಕರ್ಷಿಸುತ್ತದೆ. ಪ್ರೀತಿಯಾಗಿ ಗಟ್ಟಿಗೊಳ್ಳುತ್ತದೆ. ತಮ್ಮ ನಿಲುವನ್ನು ಮನೆಯಲ್ಲಿ ಮುಕ್ತವಾಗಿ ಹೇಳಿಕೊಳ್ಳುವ ಧೈರ್ಯವಿಲ್ಲದೆ ಇಬ್ಬರು ಮನೆಗಳಿಂದ ದೂರ ಹೋಗಿ ವಿವಾಹವಾಗುತ್ತಾರೆ.

ನಾಯಕಿಯ ಮನೆಯವರು ಈ ನೂತನ ದಂಪತಿಗಳನ್ನು ಧಿಕ್ಕರಿಸಿ ತಿರಸ್ಕರಿಸಿದರೆ ನಾಯಕನ ಮನೆಯಲ್ಲಿ ಹೃದ್ಯ ಸ್ವಾಗತವಂತೂ ದೊರೆಯುತ್ತದೆ. ಪ್ರೀತಿಗಾಗಿ ಜಾತಿ, ಮತ, ಧರ್ಮಗಳನ್ನು ದೂರೀಕರಿಸಿದ ಈ ದಂಪತಿಗಳು ಹಂತಹಂತವಾಗಿ ನಾಯಕಿಯ ಕುಟುಂಬದವರನ್ನು ಗೆದ್ದು ಎಲ್ಲಾ ಧರ್ಮಕ್ಕಿಂತಲೂ ವಿಶಿಷ್ಟವಾದುದು, ವಿಶ್ವಧರ್ಮಕ್ಕೇರುವ ಅರ್ಹತೆ ಇರುವುದು ಪ್ರೇಮಕ್ಕೆ ಮಾತ್ರ ಎಂಬುದನ್ನು ಸಾಬೀತುಗೊಳಿಸುತ್ತಾರೆ.

ಇಲ್ಲಿಯೂ ಗಂಡು ಹೆಣ್ಣಿನ ಪ್ರೀತಿ ಪ್ರೇಮಗಳು ವಿಶ್ವಾಸ ನಂಬಿಕೆಗಳ ಬೆಂಗಾವಲಿನಲ್ಲಿ ಸಹಜವಾಗಿ ಅರಳುವ ರೀತಿಯನ್ನೇ ಪ್ರತಿಪಾದಿಸಿದ್ದರೂ ಆರಿಸಿಕೊಂಡಿರುವ ಸಮಸ್ಯೆಯಲ್ಲಿ ಹೊಸತನವಿದೆ. ಇಂದಿಗೂ ಕೂಡ ಅಂತರ್ಜಾತಿಯ ವಿವಾಹವೇ ಒಂದು ಸವಾಲಾಗಿರುವಾಗ ಎಂಬತ್ತರ ದಶಕದಲ್ಲಿಯೇ ಅಂತರ್ಧರ್ಮೀಯ ವಿವಾಹ ಮತ್ತು ಅದರಿಂದುಂಟಾಗುವ ಸಮಸ್ಯೆಗಳ ಸೂಕ್ಷ್ಮಾತಿಸೂಕ್ಷ್ಮ ಎಳೆಗಳನ್ನು ವಿವರ ವಿವರವಾಗಿ ನಿರೂಪಿಸುವಲ್ಲಿ ಆರ್ಯಾಂಬರ ಹೆಚ್ಚುಗಾರಿಕೆಯಿದೆ.

ನೋಂದಾಯಿತ ವಿವಾಹವಾಗಿದ್ದರೂ ಕೂಡಾ ನಂತರ ತಮ್ಮ ವಿವಾಹವನ್ನು ಮಾನ್ಯ ಮಾಡುವ ಮುಸ್ಲಿಂ ಕುಟುಂಬದವರ ಕಾರಣಕ್ಕಾಗಿ ಆ ಕುಟುಂಬಕ್ಕೆ ಬಹಿಷ್ಕಾರ ಹಾಕಬೇಕೆಂದು ಚಿಂತಿಸುವ ವಿಧಾನ, ಅಕ್ಕ ಕೊಟ್ಟ ಕಳಂಕದಿಂದ ಸಹಜವಾಗಿಯೇ ತಂಗಿಯರ ವಿವಾಹಕ್ಕೆ ಅಡಚಣೆಗಳುಂಟಾಗುವುದು, ತಮಗೊದಗಿದ ಕಷ್ಟಕಾರ್ಪಣ್ಯಗಳ ಸಂದರ್ಭದಲ್ಲಿ ಜಾತಿಧರ್ಮಗಳನ್ನು ಲೆಕ್ಕಿಸದೇ ಒಂದು ಕಾಲದಲ್ಲಿ ತಾವು ತಿರಸ್ಕರಿಸಿದ್ದವರ ಬಳಿಯಲ್ಲೇ ಸಹಾಯ ಯಾಚಿಸಬೇಕಾಗಿ ಬರುವ ಸ್ಥಿತಿ ಮತ್ತು ಅದಕ್ಕೆ ಹೊಂದಿಕೊಳ್ಳುವ ಮಾನವ ಸಹಜ ಮನೋಧರ್ಮ ಇತ್ಯಾದಿಗಳು ಸುಂದರವಾಗಿ ನಿರೂಪಿತವಾಗಿದೆ ಆದರೂ ಇಂಥ ಸಮಸ್ಯಾತ್ಮಕ ಕಗ್ಗಂಟನ್ನು ಬಿಡಿಸಲು ಲೇಖಕಿ ಆಯ್ದುಕೊಂಡ ಹಾದಿ ತುಂಬ ಸರಳವಾಯಿತೇನೋ ಎಂಬ ಭಾವ ಮೂಡುತ್ತದೆ.

ಗಂಡ, ಮಗ, ಮಗಳು ಈ ಎಲ್ಲಾ ಸಂಬಂಧಗಳು ಮಾಯೆ ಎಲ್ಲಾ ಪ್ರೇಮಕ್ಕಿಂತ ಮಿಗಿಲಾದದ್ದು, ಭಗವಂತನ ಪ್ರೇಮವೊಂದೆ ಅವನೊಬ್ಬನೇ ಮಾನವನ ಪ್ರೀತಿಗೆ ಅರ್ಹ ಹೀಗೆ ಈ ಕಾದಂಬರಿಯಲ್ಲಿ ಮಾನವ ಸಂಬಂಧಗಳಿಗಿಂತ ಮುಖ್ಯವಾಗಿ ಭಗವಂತನಲ್ಲಿ ಐಕ್ಯಗೊಳ್ಳುವುದರ ಮೂಲಕ ಸಾಕ್ಷಾತ್ಕಾರ ಸಾಧಿಸುವುದು ಉತ್ತಮವೆಂದು ಲೇಖಕಿ ಕಮಲಾಳ ಪಾತ್ರದ ಮೂಲಕ ತಿಳಿಯಪಡಿಸುತ್ತಾರೆ.

ಪ್ರಸ್ತುತ ಕಾದಂಬರಿಯಲ್ಲಿ ಲೇಖಕಿ ಕಮಲಳ ಪಾತ್ರದ ಮೂಲಕ ಇಹಲೋಕದ ಸಂಬಂಧಗಳಿಗಿಂತ, ಅವುಗಳಿಂದುಂಟಾಗುವ ನೋವು ನಿರಾಸೆಗಳಿಗಿಂತ ಪರಮಾತ್ಮನನ್ನು ಆರಾಧಿಸುವುದು, ಅವನಲ್ಲಿ ಐಕ್ಯಗೊಳ್ಳುವುದೇ ಜೀವನದ ಸಾರವೆಂಬಂತೆ ಚಿತ್ರಿಸಿದ್ದಾರೆ. ಗೋಪಾಲನನ್ನು ಮದುವೆಯಾದ ಮೇಲೆ ಪರಮಸುಖಿಯಾಗಿದ್ದ ಕಮಲಳ ಬಾಳಿನಲ್ಲಿ ಮಾಲತಿಯ ಪ್ರವೇಶ ಮಾಡಿಸಿರುವ ಮೂಲಕ ಅತ್ಯಂತ ಸುಖವಾಗಿರುವಾಗ ಕಷ್ಟ ಬಂದೇ ಬರುತ್ತದೆ, ಸುಖದೊಂದಿಗೆ ದುಃಖ, ದುಃಖದೊಂದಿಗೆ ಸುಖ ಇದ್ದೇ ಇರುತ್ತದೆಂಬುದನ್ನು ತೋರಿಸುತ್ತಾರೆ.

ಮಾಲತಿ ತನ್ನ ಜೀವನದಲ್ಲಿ ಒಳ್ಳೆಯವಳಾಗಿ ಬದಲಾದ ವಿಷಯವನ್ನು ಕಮಲಳಿಗೆ ತಿಳಿಯುವ ಸನ್ನಿವೇಶವನ್ನು ಕೊಟ್ಟಿಲ್ಲ. ಜೊತೆಗೆ ಸ್ಕೂಟರ್ ಅಪಘಾತದಲ್ಲಿ ಕಾಲು ಕಳೆದುಕೊಂಡ ನಂತರ ಮಾಲತಿಯ ಬಗ್ಗೆ ನಮಗೆ ಏನೂ ತಿಳಿಸುವುದಿಲ್ಲ. ಮಾಲತಿಯ ಬಗ್ಗೆ ಅವಳ ಸಂಬಂಧಿಕರಂತೆ ಸಮಾಜವೂ ಒಳ್ಳೆಯ ಅಭಿಪ್ರಾಯ ಹೊಂದಿರುವುದಿಲ್ಲ.

ಮಾಲತಿ ಸನ್ಮಾರ್ಗದಲ್ಲಿ ನಡೆಯಲು ತೀರ್ಮಾನಿಸಿದ್ದನ್ನು ಗೋಪಾಲನಿಗೆ ಹೇಳುವ ಮೂಲಕವಷ್ಟೆ ತಿಳಿಸಿ ಕಮಲಳಿಗಾಗಲೀ, ಸಮಾಜಕ್ಕಾಗಲೀ ತಿಳಿಸದೆ ಮಾಲತಿ ಪಾತ್ರಕ್ಕೆ ಅನ್ಯಾಯ ಮಾಡಿರಬಹುದೆನಿಸುತ್ತದೆ. ಆದರೆ, ಸಂಸಾರ ಸಂಬಂಧಗಳ ಬಗ್ಗೆ ಕಮಲಳೊಡನೆ ಅವಳಾಡಿದ ಮಾತುಗಳು ಅವಳ ಅನುಭವದಿಂದ ಬಂದಿದ್ದು, ಕಾದಂಬರಿಯ ಕೊನೆಯಲ್ಲಿ ಕಮಲಳ ಜೀವನದಲ್ಲಿಯೇ ನಡೆಯುವ ಮೂಲಕ ಅವಳ ಮಾತುಗಳು ಮುಖ್ಯವೆನಿಸುತ್ತವೆ, ಸಾಕ್ಷಾತ್ಕಾರಕ್ಕೆ ದಾರಿಯಾಗುತ್ತವೆ.

ಕಷ್ಟಪಟ್ಟು ಸಾಕಿದ ತಾಯಿಯನ್ನು ಮರೆತು ಶ್ರೀಮಂತಿಕೆಗೆ ಆಸೆಪಡುವ ವಿವೇಕ ತಾಯಿಗೆ ಇಂಟರ್‌ವ್ಯೂಗೆ ಹೋಗುತ್ತೇನೆಂದು ಸುಳ್ಳು ಹೇಳಿ ಸುಧಾಳನ್ನು ಮದುವೆಯಾಗುವ ಮೂಲಕ ಪಲಾಯನವಾದಿ ಎನಿಸುತ್ತಾನೆ. ಆದರೂ ತಾಯಿಗೆ ಮತ್ತೆ ಮತ್ತೆ ಪತ್ರ ಬರೆಯುವುದು, ಅವಳನ್ನು ಬಂದು ನೋಡುವುದರ ಮೂಲಕ ನೆಂಟರ ಮೇಲೆ ಆಸೆ, ಅಕ್ಕಿ ಮೇಲೆ ಪ್ರೀತಿ ಎಂಬಂತೆ ಕಂಡು ಬರುತ್ತಾನೆ. ಒಟ್ಟಿನಲ್ಲಿ ಲೇಖಕಿ ಮಾನವ ಸಂಬಂಧಗಳು ಇತ್ತೀಚೆಗೆ ಸಡಿಲಗೊಳ್ಳುತ್ತಿರುವುದು ಅಂತಿಮವಾಗಿ ದೈವದ ಮೊರೆ ಹೋಗುವುದನ್ನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

'ಪರಂಪರೆ' ಎಂಬ ಕಾದಂಬರಿಯ ಶೀರ್ಷಿಕೆಯೇ ಒಂದು ಮನೆತನದ ರೂಢಿ ಸಂಪ್ರದಾಯವನ್ನು ತಿಳಿಸುತ್ತದೆ. ಕಾದಂಬರಿಯ ವಿಶ್ವನಾಥಯ್ಯ, ನರಸಿಂಹ, ವಿಶ್ವನಾಥ ಈ ಮೂವರು ವ್ಯಕ್ತಿಗಳ ತಲೆಮಾರಿನ ಕಥೆಯನ್ನೊಳಗೊಂಡಿದೆ. ವಿಶ್ವನಾಥಯ್ಯನಂತೆ ನರಸಿಂಹ ಕಟ್ಟಾ ಸಂಪ್ರದಾಯಸ್ಥನಾಗಿ, ಮೈಸೂರಿನಲ್ಲಿ ಲಾಯರ ವೃತ್ತಿ ಕೈಗೊಳ್ಳಬಹುದಾಗಿದ್ದರೂ ಊರಿನ ಮೇಲಿನ ಅಭಿಮಾನದಿಂದ ತಂದೆಯ ಮಾತಿನಂತೆ ಶ್ರೀರಂಗಪಟ್ಟಣದಲ್ಲೇ ಜೀವನ ನಡೆಸುತ್ತಾನೆ.

ಲೇಖಕಿಯು, ನರಸಿಂಹನು ಬಾಲ್ಯದಲ್ಲಿರುವಾಗ ಆತನಿಗೆ ಯಾರೋ ಮದ್ದು ಹಾಕಿದ ಘಟನೆಯನ್ನು ತಂದಿರುವುದು ವೈಜ್ಞಾನಿಕವಾಗಿ ನಂಬುವುದಕ್ಕಾಗದಿದ್ದರೂ, ಹಳ್ಳಿಯ ಜೀವನದಲ್ಲಿ ನಂಬುವವರಿರುವುದರಿಂದ ನಂಬಿದ್ದಾರೆನಿಸುತ್ತದೆ. ಅಲ್ಲದೇ ಇಡೀ ಕಾದಂಬರಿ ಹಳ್ಳಿಯ ಜೀನವದೊಂದಿಗೆ ಪ್ರಾರಂಭವಾಗಿ ಅಲ್ಲಿಯೇ ಮುಕ್ತಾಯಗೊಳ್ಳುತ್ತದೆ. ಅಷ್ಟು ಬುದ್ಧಿವಂತನಾದ ನರಸಿಂಹ ಹೆಂಡತಿ ಜಾನಕಿಗೆ ಮಕ್ಕಳಾಗಲಿಲ್ಲವೆಂದು ಅವಳಿಗೆ ನೋವಾಗುವಂತೆ ಮಾತನಾಡುವುದು ಮಾನವ ಸಹಜ ದೌರ್ಬಲ್ಯವೆಂಬಂತೆ ಚಿತ್ರಿಸಿದ್ದಾರೆ.

ನಮಗೆ ಈ ಪರಂಪರೆ ಅಪ್ಪ ಹಾಕಿದ ಆಲಕ್ಕೆ ನೇತು ಹಾಕಿಕೊಳ್ಳುವುದನ್ನು ಪ್ರಬಲವಾಗಿ ವಿರೋಧಿಸಿದನು ವಿಶ್ವೇಶ್ವರ ತಾತನ ಹೆಸರನ್ನೇ ಹೊಂದಿದ್ದರೂ ಸ್ವಭಾವಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಾನೆ. ಮತ್ತು ಆಧುನಿಕ ರೀತಿಯ ಚಿಂತನೆಗಳು, ಆಲೋಚನೆಗಳು ಚಿಕ್ಕ ವಯಸ್ಸಿನಿಂದಲೂ ಕಂಡುಬರುತ್ತದೆ. ಪಾರ್ವತಿ ಗೌರಿಯರನ್ನು ಶಾಲೆ ಬಿಡಿಸಿದಾಗ ವಿದ್ಯಾಭ್ಯಾಸ ಪುರುಷರಷ್ಟೇ ಸ್ತ್ರೀಯರಿಗೆ ಅಗತ್ಯವೆನ್ನುವುದು ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಹೆಣ್ಣು ಮಕ್ಕಳಿಗೆ ಮದುವೆ ಮಾಡಬಾರದೆಂದು ಹೇಳುವುದನ್ನು ಗಮನಿಸಬಹುದು.

ಅಲ್ಲದೆ ಲಾಯರ್ ಆಗದೆ ಡಾಕ್ಟರ್ ಆಗುವುದು. ಬೊಂಬಾಯಿಯಲ್ಲಿ ಕೆಲಸಕ್ಕೆ ಸೇರಿಕೊಳ್ಳುವುದು, ದೇವರಲ್ಲಿನ ನಂಬಿಕೆ ಆಡಂಬರದ ಬದುಕನ್ನು ವಿರೋಧಿಸುವುದು, ಅನ್ಯಜಾತಿಯ ಹುಡುಗಿಯನ್ನು ಪ್ರೇಮಿಸಿ ವಿವಾಹವಾಗುವುದು ಇವೆಲ್ಲಕ್ಕಿಂತ ಮುಖ್ಯವಾಗಿ ಸಮುದ್ರದಾಚೆಯ ದೇಶಗಳಿಗೆ ಹೋಗುವುದು, ಮದ್ಯಮಾಂಸ ಸೇವಿಸುವುದು, ಅಪಚಾರವೆಂದು ನಂಬಿದ್ದ ಜನರ ನಡುವೆ ಇಂಗ್ಲೆಂಡಿಗೆ ಹೋಗುವುದು ಇವೆಲ್ಲಾ ವಿಶ್ವನಾಥನ ಪರಂಪರೆ ವಿರೋಧಿತನವನ್ನೂ ಆಧುನಿಕ ರೀತಿಯ ಚಿಂತನೆಗಳನ್ನು ತೋರಿಸುತ್ತದೆ.

ಲಕ್ಷ್ಮಿದೇವಮ್ಮ ಕಟ್ಟಾ ಸಂಪ್ರದಾಯಸ್ಥಳಾಗಿದ್ದರೂ ಗಂಡನ ಸಲಹೆಯಂತೆ ಮಗನ ಮೇಲಿನ ಪ್ರೀತಿಯಿಂದ ಅವನ ವಿವಾಹಕ್ಕೆ ಹೋಗುತ್ತಾಳೆ ಇಂಗ್ಲೆಂಡಿಗೆ ಹೋಗಲು ಒಪ್ಪಿಗೆಯಿತ್ತರೂ ಮಗ ಮತ್ತೆ ತನ್ನ ಬಳಿಗೆ ಬರಲಾರನೆಂದು ತಿಳಿದಾಗ ಆ ಕೊರಗಿನಲ್ಲಿಯೇ ಸಾಯುತ್ತಾಳೆ. ಏನೆಲ್ಲಾ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದ ನರಸಿಂಹರಾಯರು ಮಗನ ವಿಚಾರದಲ್ಲಿ ಹೆಂಡತಿಗೆ ತಿಳಿವಳಿಕೆ ಮೂಡಿಸಿ, ಆಕಸ್ಮಿಕವಾಗಿ ಅವರೂ ಪರಿಸ್ಥಿತಿಗನುಗುಣವಾಗಿ ಹೊಂದಿಕೊಳ್ಳುತ್ತಾರೆ. ಲೇಖಕಿ ಕಟ್ಟಾ ಸಂಪ್ರದಾಯವಾದಿಗಳ ಜೀವನದಲ್ಲೇ ಹೊಸ ರೀತಿಯ ಕ್ರಾಂತಿಯನ್ನು ವಿಶ್ವನಾಥನ ಮೂಲಕ ಮಾಡಿಸಿದ್ದಾರೆ.

ಈ ಕಾದಂಬರಿಯು ಹಳೆಯ ಪರಂಪರೆಯಿಂದ ಹೊಸ ವಿಚಾರಗಳೆಡೆಗೆ ಸಾಗಿದೆ ಹಳ್ಳಿಯ ಜೀವನ ನಗರ ಜೀವನವನ್ನು ತಿಳಿಸುತ್ತದೆ. ನಾವು ಅತ್ಯಂತ ಪ್ರೀತಿಸುವ ವಸ್ತುವಿಗಾಗಿ ಏನುಬೇಕಾದರೂ ಮಾಡಲು ಸಿದ್ಧರಾಗುತ್ತೇವೆಂಬುದನ್ನು ಲಕ್ಷ್ಮೀದೇವಮ್ಮ ನರಸಿಂಹರಾಯರ ಮೂಲಕ ಲೇಖಕಿ ತಿಳಿಸಿದ್ದಾರೆ.

'ಮುಕ್ತಿ' ಕಾದಂಬರಿಯಲ್ಲಿ 'ಕಂಕಣ' ದಲ್ಲಿ ಪರಿಚಯಿಸಿದ ಆರು ಜನ ಗೆಳತಿಯರ ಕಥೆಯನ್ನೇ ಮುಂದುವರಿಸುತ್ತದೆ. ಆದರೆ 'ಮುಕ್ತಿ' ಯಲ್ಲಿ ಮೊದಲಿನ ಕಾದಂಬರಿಯ ಸೂಕ್ಷ್ಮ ಕೌಶಲ್ಯವಿಲ್ಲ ಈ ಕೃತಿಯ ಕೇಂದ್ರದಲ್ಲಿಯೂ ವೈವಾಹಿಕ ಸಮಸ್ಯೆಯಿದ್ದರೂ ಕೃತಿಯಲ್ಲಿ ಹೆಚ್ಚಾಗಿ ನೇರ ಹೇಳಿಕೆಗಳನ್ನು ಹಾಗೂ ಚರ್ಚೆಯನ್ನು ನಾವು ಕಾಣುತ್ತೇವೆ.

ಪ್ರಾರಂಭದಲ್ಲಿ 'ಮುಕ್ತಿ' ರಮಾ, ವಲ್ಲಿ, ಸುಶೀಲಾ ಮತ್ತು ಅಂಬಿಕಾ ಇವರುಗಳ ಕಥೆಯನ್ನು ಆತುರಾತುರವಾಗಿ ಮುಗಿಸಿ, ಅನಂತರ ಅಮೃತಾಳ ಕಥೆಯೊಂದನ್ನೇ ವಿಸ್ತಾರವಾಗಿ ನಿರೂಪಿಸುತ್ತದೆ. ತನ್ನ ಕುಟುಂಬ ರಕ್ಷಣೆಗಾಗಿ ಕುರುಡನೊಬ್ಬನನ್ನು ಮದುವೆಯಾಗುವ ರಮಾ ಅನಂತರ, ನಿಧಾನವಾಗಿ ತನ್ನ ಗಂಡನಿಗೆ ತನ್ನ ಬಗ್ಗೆ ಇರುವ ಅಭಿಮಾನ ಹಾಗೂ ಅವನ ಹೃದಯ ವೈಶಾಲ್ಯದಿಂದಾಗಿ ಅವನನ್ನು ಪ್ರೀತಿಸಲು ಪ್ರಾರಂಭಿಸುತ್ತಾಳೆ.

ತನ್ನ ಸಂಗೀತದ ಮೇಷ್ಟ್ರರೊಡನೆ ಓಡಿ ಹೋಗುವ ವಲ್ಲಿ, ಸ್ವಲ್ಪ ಕಾಲದಲ್ಲಯೇ ತನ್ನ ದುಡುಕಿಗೆ ಪಶ್ಚಾತ್ತಾಪ ಪಡುತ್ತಾ, ತಾನೇ ಒಂದು ಕೆಲಸವನ್ನು ಹುಡುಕಿಕೊಳ್ಳುತ್ತಾಳೆ. ಅವಳ ಗಂಡನು ತನ್ನ ಖರ್ಚಿಗೆ ಅವಳನ್ನೇ ಆಶ್ರಯಿಸಬೇಕಾಗುವುದರಿಂದ ಅವನ ವರ್ತನೆಯೂ ಸುಧಾರಿಸುತ್ತದೆ. ತಾನು ಅವನತಿಯ ಹಾದಿಯಲ್ಲಿ ಬಹುವೇಗದಿಂದ ಸಾಗುತ್ತಿದ್ದೇನೆಂಬ ಅರಿವಿದ್ದರೂ ತನ್ನ ದೇಹವನ್ನು ಬೇಕಾದವರೊಡನೆ ಮಾರಿಕೊಳ್ಳುತ್ತಾ ಸುಖದಿಂದಿದ್ದು, ಬೇರೆಲ್ಲವನ್ನೂ ಮರೆಯಲು ಸುಶೀಲ ಪ್ರಯತ್ನಿಸುತ್ತಾಳೆ ಉಳಿದವರೆಲ್ಲರಿಗಿಂತಲೂ ಅದೃಷ್ಟಶಾಲಿಯಾದ ಅಂಬಿಕಾ ತನ್ನೆರಡು ಮುದ್ದು ಮಕ್ಕಳೊಡನೆ ಸುಖದಿಂದ ಸಂಸಾರ ಸಾಗಿಸುತ್ತಾಳೆ.

ತನ್ನ ಎರಡನೆಯ ತಮ್ಮನಿಗೆ ಮದುವೆಯಾದರೂ ತನ್ನ ಕಪ್ಪು ಬಣ್ಣದಿಂದಾಗಿ ಅಮೃತಾ ಅವಿವಾಹಿತಳಾಗಿಯೇ ಉಳಿಯುತ್ತಾಳೆ. ಒಬ್ಬನಾದ ನಂತರ ಮತ್ತೊಬ್ಬ ವರಮಹಾಶಯನಿಂದ ತಿರಸ್ಕರಿಸಲ್ಪಟ್ಟು, ಆ ಕಾರಣದಿಂದ ತನ್ನ ಹೊಸ ಅತ್ತಿಗೆಯ ತಿರಸ್ಕಾರಕ್ಕೂ ಗುರಿಯಾದ ನಂತರ ಅಮೃತಾ ಟೈಪಿಂಗ್ ಮತ್ತು ಶಾರ್ಟ್‌ಹ್ಯಾಂಡ್ ಕಲಿತು ಅವಳ ಇಬ್ಬರು ಅಣ್ಣಂದಿರು ಕೆಲಸ ಮಾಡುತ್ತಿರುವ ಮುಂಬಯಿಗೆ ಬರುತ್ತಾಳೆ. ಅಲ್ಲಿ ಒಂದು ಪತ್ರಿಕಾಲಯದಲ್ಲಿ ಟೈಪಿಸ್ಟ್ ಆಗಿ ಕೆಲಸಕ್ಕೆ ಸೇರಿ ಕೇಶವ್ ಮರಾಠೆಯೆಂಬ ತರುಣನ ಪರಿಚಯ ಮಾಡಿಕೊಳ್ಳುತ್ತಾಳೆ.

ಬಹುಬೇಗ ಪರಿಚಯ ಪ್ರೇಮಕ್ಕೆ ತಿರುಗಿ ಅವರಿಬ್ಬರೂ ವಿವಾಹವಾಗುವ ಯೋಚನೆಯಲ್ಲಿರುವಾಗ ಮರಾಠೆಗೆ ಮೊದಲೇ ಮದುವೆಯಾಗಿದೆಯೆಂದು ಅವಳಿಗೆ

ಗೊತ್ತಾಗುತ್ತದೆ. ಅವನ ಹೆಂಡತಿ ಕ್ಷಯರೋಗಿಯಾಗಿ ಬಹಳ ಕಾಲದಿಂದ ಸ್ಯಾನಿಟೋರಿಯಮ್‌ನಲ್ಲಿ ಇದ್ದಾಳೆಂದು ತಿಳಿದು ಬಂದ ನಂತರ ಅವಳಿರುವ ತನಕ ಕೇಶವ್‌ನನ್ನು ಮದುವೆಯಾಗದಿರಲು ಅವಳು ನಿರ್ಧರಿಸುತ್ತಾಳೆ. ಕೇಶವ್ ಮರಾಠೆಯ ಹೆಂಡತಿಯ ಸಾವಿನಿಂದ ಮತ್ತು ಪ್ರಾಯಶಃ ಅಮೃತಾ, ಕೇಶವ್ ಇವರ ಮದುವೆಯಾಗಹುದೆಂಬ ಸೂಚನೆಯಿಂದ ಕಾದಂಬರಿ ಮುಕ್ತಾಯವಾಗುತ್ತದೆ. ಹೀಗೆ ಆರು ಜನ ಗೆಳತಿಯರು ವೈವಾಹಿಕ ಸಮಸ್ಯೆಯಿಂದ ತಮ್ಮದೇ ಆದ ಮಾರ್ಗಗಳಲ್ಲಿ 'ಮುಕ್ತಿ'ಯನ್ನು ಪಡೆಯುತ್ತಾರೆ.

ರಾಯರ ಪತ್ನಿ ರಾಜಮ್ಮನ ಪಾತ್ರ ತ್ರಿವೇಣಿಯವರ 'ಆದರ್ಶ ಸ್ತ್ರೀ' ಯ ಪ್ರತಿರೂಪವೆಂಬಂತೆ ಕಾದಂಬರಿಯಲ್ಲಿ ಚಿತ್ರಿಸಲ್ಪಟ್ಟಿದೆ. ತನ್ನ ಮುಪ್ಪಿನಲ್ಲಿಯೂ ಇಪ್ಪತ್ತು ವರ್ಷದ ತರುಣಿಯಂತೆ ರಾಜಮ್ಮ ಬೆಳಗಿನಿಂದ ಮಧ್ಯರಾತ್ರಿಯವರೆಗೆ ಕೆಲಸಕಾರ್ಯಗಳಲ್ಲಿ ನಿರತಳಾಗಿರುತ್ತಾಳೆ. ರಾಯರ ವಿಲಕ್ಷಣ ಸ್ವಭಾವದ ಅರಿವು ಅವಳಿಗಿದೆ. ಅದರೂ ಅವಳಿಗೆ ರಾಯರ ಬಗ್ಗೆ ಪ್ರೀತಿ, ಗೌರವಗಳಿವೆ. ಅವಳ ಯೋಚನೆ, ಕಾರ್ಯ, ಇಡೀ ಬದುಕು ಅವಳ ಗಂಡ, ಮಕ್ಕಳು ಮತ್ತು ಮೊಮ್ಮಕ್ಕಳಿಗಾಗಿ ಹೀಗೆ ತುಂಬಾ ಮೆಚ್ಚುಗೆಯಿಂದ ತ್ರಿವೇಣಿರವರು ರಾಜಮ್ಮನ ಪಾತ್ರವನ್ನು ಚಿತ್ರಿಸುತ್ತಾರೆ.

ನೋಡಿದವರೆಲ್ಲರಲ್ಲೂ ಗೌರವ, ಭಕ್ತಿ ಮೂಡಿಸುವಂತಹ ವ್ಯಕ್ತಿತ್ವ ರಾಜಮ್ಮನದು ಅಷ್ಟೇನೂ ಎತ್ತರವಲ್ಲದ ನಿಲುವು ಕೊಂಚಸ್ಥೂಲಕಾಯ ತಿಳಿಯಾದ ಮೈಬಣ್ಣ ಎಳೆಯ ಮಗುವಿಗಿರುವಂತಹ ದುಂಡು ಮುಗ್ಧ ಮುಖ, ಕೆನ್ನೆಯ ತುಂಬ ಅರಿಶಿನ, ಹಣೆಯ ಮೇಲೆ ಅಗಲವಾದ ಅಡ್ಡ ಕುಂಕುಮ, ತಲೆಯ ತುಂಬಾ ಗೌರಿಯ ಪ್ರಸಾದದ ಹೂವು, ಮೈತುಂಬಾ ಸೆರಗು, ಎರಡು ಕೈಗಳಲ್ಲಿಯೂ ಝುಣಗುಟ್ಟುವ ಕೆಂಪು ಗಾಜಿನ ಬಳೆಗಳು, ಕಾಲಂದುಗೆ, ಬಂಗಾರದ ಬಂದಿ ಇವುಗಳಿಂದ ಅಲಂಕೃತರಾದ ರಾಜಮ್ಮನನ್ನು ನೋಡಿದರೆ ಪೂರ್ಣ ಚಂದ್ರನನ್ನು ನೋಡಿದ ತೃಪ್ತಿ, ಆಹ್ಲಾದ ಉಂಟಾಗುತ್ತಿತ್ತು.

ರಾಜಮ್ಮನ ಪಾತ್ರವನ್ನು ಹೀಗೆ ಚಿತ್ರಿಸುವಾಗ ಸ್ತ್ರೀಯ ಬಗ್ಗೆ ತ್ರಿವೇಣಿಯವರ ದೃಷ್ಟಿಕೋನ ತುಂಬಾ ಪಾರಂಪರಿಕ ಮತ್ತು ಸಾಂಪ್ರದಾಯಕವೆಂದು ನಮಗೆ ತೋರಬಹುದು. ಆದರೆ, ಪುರುಷನಾಗಲೀ, ಸ್ತ್ರೀಯಾಗಲೀ ತ್ರಿವೇಣಿಯವರು ಗೌರವಿಸುವುದು ಒಬ್ಬನ / ಳ ತುಂಬು ಜೀವನವನ್ನು ಇತರರಿಗೆ ಮತ್ತು ತನಗೆ ಉಪಯುಕ್ತವಾಗಿ ಅರ್ಥಪೂರ್ಣವಾಗಿ ಬಾಳಲ್ಪಟ್ಟ ಬದುಕನ್ನು

ಭಾರತೀಯ ಸಮಾಜದಲ್ಲಿ ಸಿಕ್ಕಿ ತೊಳಲಾಡಿ ಸಂಗ್ರಹಣಶೀಲ ಸಮಾಜವೊಂದು (Acquistive Society) ಅತೃಪ್ತಿಯನ್ನು ಹಾಗೂ ಹೆಚ್ಚು ಹೆಚ್ಚು ವಸ್ತುಗಳಿಗಾಗಿ ದುರಾಸೆಯನ್ನು ನಿರ್ಮಿಸುವಂತೆಯೇ ಅನೇಕ ಸಮಸ್ಯೆಗಳನ್ನು ಹುಟ್ಟು ಹಾಕುತ್ತದೆ. ಇಂದು ಪೌರ್ವಾತ್ಮ ಹಾಗೂ ಪಾಶ್ಚಿಮಾತ್ಯ ಎಲ್ಲಾ ಸಂಗ್ರಹಣ ಶೀಲ ಸಮಾಜಗಳನ್ನು ಕಾಡುತ್ತಿರುವ ಒಂದು ಮುಖ್ಯ ಸಮಸ್ಯೆಯೆಂದರೆ ನಿರುದ್ಯೋಗ ಸಮಸ್ಯೆ.

ಭಾರತೀಯ ಸಮಾಜದಲ್ಲಿ ಸಿಕ್ಕಿ ತೊಳಲಾಡುವ ಎಲ್ಲಾ ಸ್ತ್ರೀಯರ ಪರವಾಗಿ ಅಮೃತಾ ಮಾತನಾಡುತ್ತಾಳೆ. ಇಂತಹ ಹೆಪ್ಪುಗಟ್ಟುವ ದುರಂತವನ್ನು ಇಂತಹ ಛಿದ್ರ ವ್ಯಕ್ತಿತ್ವದ ಬದುಕನ್ನು ತ್ರಿವೇಣಿಯವರಷ್ಟು ಸಮಕಾಲೀನ ಸ್ಥಿತಿಗತಿಗಳಿಗೆ ಸೂಕ್ಷ್ಮವಾಗಿ ಸ್ಪಂದಿಸಬಲ್ಲ ಲೇಖಕಿ ಮಾತ್ರ ಗುರುತಿಸಬಲ್ಲರು ಮತ್ತು ದಾಖಲಿಸಬಲ್ಲರು.

ಬಹಳ ವೇಗವಾಗಿ, ಕೃಷಿಯನ್ನಾಧರಿಸಿದ ವ್ಯವಸ್ಥೆಯಿಂದ ಕೈಗಾರೀಕೃತ ಮತ್ತು ವಾಣಿಜ್ಯಾಧಾರಿತ ಆರ್ಥಿಕ ವ್ಯವಸ್ಥೆಯ ದಿಕ್ಕಿನಲ್ಲಿ ಸಾಗುತ್ತಿರುವ ಸಂಕ್ರಮಣ ಸಮಾಜಕ್ಕೆ ತನ್ನದೇ ಆದ ಹಾಸ್ಯಾಸ್ಪದ ಮುಖಗಳು ಇರುತ್ತವೆ. ಅಂತಹ ಸಮಾಜವು ಜನ್ಮ ಕೊಡುವ ನವಶ್ರೀಮಂತ ವರ್ಗಕ್ಕೆ ಅಧಿಕಾರ ಹಾಗೂ ಸಂಪತ್ತುಗಳಿರುತ್ತವೆ. ಆದರೆ ಸಂಸ್ಕೃತಿ ಇರುವುದಿಲ್ಲ.

ಈ ವರ್ಗವು ಆದಷ್ಟು ಬೇಗ ಸುಸಂಸ್ಕೃತರಾಗಿ ಸಮಾಜದಲ್ಲಿ ತಮ್ಮ ಸ್ಥಾನಮಾನಗಳನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಾರೆ. (ಇವರುಗಳ ದೃಷ್ಟಿಯಲ್ಲಿ 'ಉಚ್ಚ ಸಂಸ್ಕೃತಿಯೆಂದರೆ ಇಂಗ್ಲಿಷ್ ಮತ್ತು ಸಾಹಿತ್ಯಿಕ (ಅಥವಾ ಮೇಲ್ವರ್ಗದ) ಕನ್ನಡ ಮಾತನಾಡುವುದು, ಡೈನಿಂಗ್ ಟೇಬಲ್ ಮೇಲೆ ಊಟ ಮಾಡುವುದು, ಚಾಕು ಚಮಚಗಳನ್ನು ಉಪಯೋಗಿಸುವುದು ಇತ್ಯಾದಿ. ಒಬ್ಬ ಹಿರಿಯ ಅಧಿಕಾರಿಯ ಹೆಂಡತಿಗೆ ಇಂಗ್ಲೀಷ್‌ಗಿಂತಲೂ ರಂಗೋಲಿ ಹಾಕುವುದರಲ್ಲಿ ಹೆಚ್ಚು ಆಸಕ್ತಿ. ರಮಾ ಅವಳಿಗೆ ಇಂಗ್ಲೀಷ್ ಹೇಳಿಕೊಡಲು ಬಂದಾಗಲೆಲ್ಲಾ ಅವಳು ರಮಾಳೊಡನೆ ಅವರಿವರ ಬಗ್ಗೆ ಕಾಡು ಹರಟೆ ಹೊಡೆಯುವುದರಲ್ಲೇ ಕಳೆಯುತ್ತಾಳೆ.

ಬಸವಯ್ಯನ ಕಥೆಯೂ ಇದೇ ಬಡತನದಲ್ಲಿ ಹುಟ್ಟಿದ ಬಸವಯ್ಯ ಅನಂತರ ಸಾಕಷ್ಟು ಸಂಪತ್ತು ಗಳಿಸಿ ಸಮಾಜದ ಗಣ್ಯವಲಯಗಳಲ್ಲಿ ಓಡಾಡುತ್ತಾನೆ. ಅವನ ಹೆಂಡತಿ ಒಂದು ಚಿಕ್ಕ ಹಳ್ಳಿಯಿಂದ ಬಂದವಳಾದ್ದರಿಂದ ಅವಳಿಗೆ ಇಂಗ್ಲೀಷ್ ಬರುವುದಿಲ್ಲ ಮತ್ತು ಅವಳು ಮಾತನಾಡುವುದು ಗ್ರಾಮ್ಯ ಕನ್ನಡ. ಇವಳಿಗೆ ಇಂಗ್ಲೀಷ್ ಮತ್ತು ಶುದ್ಧ ಕನ್ನಡ ಎರಡನ್ನೂ ರಮಾ ಹೇಳಿಕೊಡಬೇಕಾಗುತ್ತದೆ. ಆದರೆ, ಈ ಕೆಲಸ ಎಷ್ಟು ನಿಷ್ಫಲದಾಯಕವೆಂದರೆ ಈ ಕೆಲಸ ಮಾಡಬೇಕಾಗಿ ಬಂದ ರಮಾ ತನ್ನ ಹಣೆಯ ಬರಹವನ್ನು ಹಳಿದುಕೊಳ್ಳುತ್ತಾಳೆ.

ಹೆಣ್ಣು ಅಧಃಪತನಕ್ಕಿಳಿಯಲು ಪುರುಷರು ಹಾಗೂ ಸಮಾಜವೇ ಕಾರಣ. ಸಮಾಜದ ದೃಷ್ಟಿಯಲ್ಲಿ ಒಬ್ಬ ವ್ಯಕ್ತಿಯ ಯೋಗ್ಯತೆಯನ್ನು ನಿರ್ಧರಿಸುವದಕ್ಕೂ, ಒಬ್ಬ ವ್ಯಕ್ತಿಯ ದೃಷ್ಟಿಯಿಂದ ಸಮಾಜದ ಯೋಗ್ಯತೆಯನ್ನು ನಿರ್ಧರಿಸುವುದಕ್ಕೂ ಬಹಳ ಅಂತರವಿರುತ್ತದೆ. ಸಮಾಜದ ಅನುಭವವು ಒಬ್ಬನ ಯೋಗ್ಯತೆಯನ್ನು ನಿರ್ಧರಿಸುವಂತೆ ಒಬ್ಬನ ಅನುಭವವು ಸಮಾಜದ ಯೋಗ್ಯತೆಯನ್ನು ನಿರ್ಧರಿಸುವುದು ಸರ್ವಸಮ್ಮತವಾಗಲಾರದು.

ಸಾಮಾಜಿಕ ಕಳಕಳಿಯ ಆಶಯ ಹೊಂದಿದ ಅನೇಕ ಕಾದಂಬರಿಗಳೇ ಇವರ ಲೇಖನಿಯಿಂದ ಬಂದಿವೆ. ಅಂತೆಯೇ ಕುಟುಂಬ ಜೀವನಗಳನ್ನು ಒಳಗೊಂಡಂಥವುಗಳು ಆದರೆ ಕುಟುಂಬ ಜೀವನದ ವಸ್ತುವಿಗೆ ಮಾತ್ರ ಸೀಮಿತಗೊಳ್ಳದೆಯೇ ಸಾಮಾಜಿಕ ಜೀವನದತ್ತ, ಅಲ್ಲಿಯ ಜ್ವಲಂತ ಸಮಸ್ಯೆಗಳತ್ತ ಗಮನ ಹರಿಸಿದ್ದಾರೆ.

ಲೇಖಕಿಯರು ಸಮಾಜವನ್ನು ನೋಡುವ ದೃಷ್ಟಿಕೋನ ಪ್ರಮುಖವಾಗಿ ಮೂರು ರೀತಿಯದು. ಈ ಸಮಾಜದ ಸಾಂಪ್ರದಾಯಿಕ ನೆಲೆಗಳಲ್ಲಿ ಬೆಳೆದು ವ್ಯವಸ್ಥೆಯನ್ನು ವೈಭವೀಕರಿಸುವಂತಹದು. ಈ ವ್ಯವಸ್ಥೆಯಲ್ಲಿಯೇ ಸುಧಾರಣೆ ಕಂಡುಕೊಳ್ಳಲು ಹೋಗಿ ದ್ವಂದ್ವ ಸ್ಥಿತಿಯಲ್ಲಿ ಬೀಳುವಂತಹದು. ಸಂಪೂರ್ಣ ಈ ವ್ಯವಸ್ಥೆಯನ್ನೇ ವಿರೋಧಿಸಿ ಹೊಸ ವ್ಯವಸ್ಥೆಯ ನಿರ್ಮಾಣಕ್ಕಾಗಿ ಸೈದ್ಧಾಂತಿಕವಾಗಿ ಆಲೋಚಿಸುವುದು.

ಮೂರು ರೀತಿಗಳಲ್ಲಿ ಆರ್ಯಾಂಬ, ತ್ರಿವೇಣಿಯವರ ಕಾದಂಬರಿಗಳಲ್ಲಿ ಎರಡು ರೀತಿಯ ಗುಣಲಕ್ಷಣಗಳಿವೆ. ಅವರ ಪ್ರಾರಂಭದ ಕಾದಂಬರಿಗಳು ಈ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ಬಯಸುವ ಕೌಟುಂಬಿಕ ಜೀವನವನ್ನು ವೈಭವೀಕರಿಸುವ ಕೃತಿಗಳಾದರೆ ನಂತರ ಹೊಸ ವ್ಯವಸ್ಥೆಯ ರಚನೆಗಾಗಿ ಸೈದ್ಧಾಂತಿಕ ಹೋರಾಟವಿದೆ.

ಸಾಮಾಜಿಕ ರಚನೆಯನ್ನು ಸಾಮಾಜಿಕ ವಿಷಯವನ್ನಾರಿಸಿಕೊಂಡು ಬರೆದಾಕ್ಷಣ ಅದರಲ್ಲಿ ಸಾಮಾಜಿಕ ಪ್ರಜ್ಞೆ ಇರುತ್ತದೆಯೆಂದು ಅರ್ಥವಲ್ಲ. ಆ ಸಾಮಾಜಿಕ ಬದುಕಿನ ಬಗೆಗೆ ತೀವ್ರ ಕಳಕಳಿ ಸಮಾಜದಲ್ಲಿ ಬದುಕುವ ಬಹುಸಂಖ್ಯಾತ ಸಾಮಾನ್ಯ ಜನತೆಯ ಆಶೋತ್ತರಗಳನ್ನು ಅಲ್ಲಿ ಸೈದ್ಧಾಂತಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ ನಿಜವಾದ ಸಾಮಾಜಿಕ ಪ್ರಜ್ಞೆಯಿಂದ ಕೂಡಿದ ಕೃತಿಗಳಾಗುತ್ತದೆ.

ಸಮಾಜದಿಂದಲೇ ವ್ಯಕ್ತಿ ಬೆಳೆಯುತ್ತಾನೆ. ಜನಸಮುದಾಯದ ಬೆಳವಣಿಗೆಯೇ ಸಾಮಾಜಿಕ ಬೆಳವಣಿಗೆಯಾಗುತ್ತದೆ. ಹೀಗಾಗಿ ವ್ಯಕ್ತಿ ಮತ್ತು ಸಮಾಜದ ನಡುವೆ ಅವಿನಾಭಾವ ಸಂಬಂಧವಿದೆ. ಆದ್ದರಿಂದ ಪ್ರತಿಯೊಂದು ವ್ಯಕ್ತಿಗೂ ಸಮಾಜದ ಅಂದರೆ ಸಾಮಾಜಿಕ

ಜನಜೀವನದ ಪ್ರಭಾವ ಇದ್ದೇ ಇರುತ್ತದೆ. ಸಮಾಜದ ಬಗೆಗೆ ಚಿಂತಿಸುವುದೆಂದರೆ ಅಲ್ಲಿನ ಜನಸಮುದಾಯದ ಬಗೆಗೆ ಚಿಂತಿಸುವುದು ಎಂದರ್ಥವಾಗುತ್ತದೆ. ಹೀಗಾಗಿ ಜನಸಮುದಾಯದ ಪ್ರಜ್ಞಾಪೂರ್ವಕವಾದ ಸೂಕ್ಷ್ಮ ಅಧ್ಯಯನವೇ ಸಾಮಾಜಿಕ ಪ್ರಜ್ಞೆಯೆಂದು ಸಾಮಾಜಿಕ ರಚನೆಯಲ್ಲಿ ಕಂಡುಬರುತ್ತದೆ.

ಅಡಿಟಿಪ್ಪಣಿಗಳು

೧. ಸಂ. ಎನ್.ದೊಡ್ಡಸಿದ್ದಯ್ಯ, ಸಮಾಜಶಾಸ್ತ್ರದ ಮೂಲತತ್ವಗಳು ಘಟಕ ೪, ಕ.ರಾ.ಮು.ವಿ., ಮೈಸೂರು, ೧೯೯೬, ಪುಟ ೩೧

೨. ಪ್ರೊ. ಹೆಚ್.ಎಂ. ವಸಂತಮ್ಮ : ಸಾಮಾಜಿಕ ಬದಲಾವಣೆ ಮತ್ತು ಸ್ತ್ರೀ, ಉನ್ಮೀಲನ, (ಶ್ರೀಮತಿ ಆರ್ಯಾಂಬ ಪಟ್ಟಾಭಿ ಅಭಿನಂದನಾ ಗ್ರಂಥ); ಸಂ. ಪ್ರೊ. ಸ.ನ. ಗಾಯತ್ರಿ ಮತ್ತು ಡಾ.ಎಸ್.ಡಿ. ಶಶಿಕಲಾ, ಸಂವಹನ ಪ್ರಕಾಶನ, ಮೈಸೂರು, ೨೦೦೨, ಪುಟ ೨೪೩

೩. ಬಿ.ಪಿ. ಆಶಾಕುಮಾರಿ : ಆರ್ಯಾಂಬ ಅವರ ಸಾಹಿತ್ಯ, ಉನ್ಮೀಲನ (ಶ್ರೀಮತಿ ಆರ್ಯಾಂಬ ಪಟ್ಟಾಭಿ ಅಭಿನಂದನಾ ಗ್ರಂಥ); ಸಂ. ಪ್ರೊ. ಸ.ನ. ಗಾಯತ್ರಿ ಮತ್ತು ಡಾ.ಎಸ್.ಡಿ. ಶಶಿಕಲಾ, ಸಂವಹನ ಪ್ರಕಾಶನ, ಮೈಸೂರು, ೨೦೦೨, ಪುಟ ೧೧೦

೪. ಸಿ.ಎನ್. ರಾಮಚಂದ್ರನ್ : ತ್ರಿವೇಣಿ ಭಾರತೀಯ ಸಾಹಿತ್ಯ ನಿರ್ಮಾಪಕರು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೮, ಪುಟ ೧೯

ಅಧ್ಯಾಯ ೫

ವೈವಾಹಿಕ ವ್ಯವಸ್ಥೆ

ಅಧ್ಯಾಯ ೫

ವೈವಾಹಿಕ ವ್ಯವಸ್ಥೆ

ಸಮಾಜ ಸಾಮೂಹಿಕ ಸಂಬಂಧಗಳ ಬಲೆಯಾಗಿದೆ. ಸಮಾಜದ ರಚನೆಗೆ ಅನ್ಯೋನ್ಯ ಸಂಬಂಧವುಳ್ಳ ಮತ್ತು ಅನೇಕ ಕ್ರಿಯೆಗಳ ಕೇಂದ್ರಗಳಾದ ಸಂಸ್ಥೆಗಳು ಆಧಾರಗಳಾಗಿರುತ್ತವೆ. ಅಂತಹವುಗಳಲ್ಲಿ ವಿವಾಹದಂಥ ಸಂಸ್ಥೆ ವ್ಯಕ್ತಿಗಳ ಮೂಲಭೂತ ಅವಶ್ಯಕತೆಗಳನ್ನು ತೃಪ್ತಿಪಡಿಸಲು ಬೇಕಾದ ಮಾಧ್ಯಮವಾಗಿದೆ.

ಲೈಂಗಿಕ ಬಯಕೆ ವ್ಯಕ್ತಿಗಳಿಗೆ ಸಹಜವಾದುದು. ಆದರೆ, ಪ್ರತಿಯೊಬ್ಬ ವ್ಯಕ್ತಿ ತನಗಿಷ್ಟ ಬಂದ ರೀತಿಯಲ್ಲಿ ಲೈಂಗಿಕ ಜೀವನ ನಡೆಸಿದರೆ ಅದರಿಂದ ವ್ಯಕ್ತಿಗಳ ವೈಯಕ್ತಿಕ ಹಾಗೂ ಸಾಮಾಜಿಕ ಶಿಸ್ತು ಹಾಳಾಗಿ, ಸಮಾಜದ ಸಮತೂಕ ತಪ್ಪುತ್ತದೆ. ಕೇವಲ ಲೈಂಗಿಕ ತೃಪ್ತಿಗಾಗಿ ಮಾತ್ರ ಸ್ತ್ರೀ, ಪುರುಷರು ಕ್ಷಣಿಕವಾದ ಸಂಬಂಧಗಳನ್ನು ಬೆಳೆಸಿಕೊಂಡರೆ ಸಮಾಜಕ್ಕೆ ಅಪಾಯವುಂಟಾಗುತ್ತದೆ. ಕಾರಣ ಅವರು ತಮ್ಮ ಈ ಲೈಂಗಿಕ ಸಂಪರ್ಕದ ಫಲವಾಗಿ ಉಂಟಾಗುವ ಪರಿಣಾಮಗಳನ್ನು ಗಮನಿಸದೆ, ಕುಟುಂಬ ಹಾಗೂ ಮಕ್ಕಳ ಪೋಷಣೆಯ ಹೊಣೆಯನ್ನು ಹೊತ್ತುಕೊಳ್ಳದೆ ಹಾಗೂ ಯಾವ ನಿಯಮಕ್ಕೂ ಒಳಗಾಗದೆ ಇನ್ನೂ ಹೆಚ್ಚು ಸಾಮಾಜಿಕ ಸಮಸ್ಯೆಗಳು ಉಂಟಾಗಲು ಕಾರಣರಾಗಬಹುದು.

ಆದ್ದರಿಂದ, ಸಮಾಜ ವಿವಾಹ ಸಂಸ್ಥೆಯ ಮೂಲಕ ಈ ತರಹದ ಸಂಬಂಧಗಳನ್ನು ನಿಯಂತ್ರಿಸಿ ಕ್ರಮಪಡಿಸುತ್ತದೆ. ವಿವಾಹ ಬಹುಮುಖ್ಯವಾದ ಮತ್ತು ಸಾರ್ವತ್ರಿಕವಾದ ಸಂಸ್ಥೆಯಾಗಿದೆ. ಇದನ್ನು ಎಲ್ಲಾ ಕಾಲದಲ್ಲಿಯೂ ಎಲ್ಲಾ ಸಮಾಜಗಳಲ್ಲಿಯೂ ನೋಡಬಹುದು. ಎಲ್ಲಾ ಸಮುದಾಯಗಳಲ್ಲಿ ಈ ವ್ಯವಸ್ಥೆ ಒಂದಲ್ಲ ಒಂದು ರೂಪದಲ್ಲಿರುವುದನ್ನು ಕಾಣಬಹುದು.

ಬಾಲ್ಯ, ಯೌವ್ವನ ಹಾಗೂ ವೃದ್ಧಾಪ್ಯದಂತೆ ವಿವಾಹವು ಮಾನವನ ಜೀವನದಲ್ಲಿ ಸಹಜವಾದ ವ್ಯವಸ್ಥೆಯಾಗಿದೆ. ವಿವಾಹ ಮತ್ತು ಕುಟುಂಬ ವಿಭಿನ್ನವಾದ ವ್ಯವಸ್ಥೆಗಳಾಗಿವೆ. ವಿವಾಹ ಒಂದು ಸಂಸ್ಥೆಯಾಗಿದೆ ಮತ್ತು ಕುಟುಂಬ ಈ ಸಂಸ್ಥೆಯನ್ನು ಒಳಗೊಂಡ ಸಂಘವಾಗಿದೆ. "ವಿವಾಹ ಮತ್ತು ಕುಟುಂಬ ಜೈವಿಕ ಆಧಾರದ ಮೇಲೆ ಕಟ್ಟಲ್ಪಟ್ಟ ಸಾಂಸ್ಕೃತಿಕ ರಚನೆಗಳಾಗಿವೆ"[೧].

ಈ ನಿಟ್ಟಿನಲ್ಲಿ ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳಲ್ಲಿ ವೈವಾಹಿಕ ಸ್ಥಿತಿಯ ಬಗ್ಗೆ ಇರುವ ಮನೋಗುಣ, ವಿವಾಹದ ಬಗೆಗೆ ರಾಜಿ ಮನೋಭಾವ ಸಾಂಪ್ರದಾಯಿಕತೆಗೆ ಶರಣಾಗುವ ಪ್ರಕ್ರಿಯೆ, ವೈದಿಕ ಕುಟುಂಬದ ಹಿನ್ನೆಲೆಯಲ್ಲಿ ಬಂದಿರುವ ಇಬ್ಬರಿಗೂ ಈ

ದಿಸೆಯಲ್ಲಿ ಸಿಕ್ಕಿರುವ ಕಾದಂಬರಿ ಸ್ವಾತಂತ್ರ್ಯದ ಬಳಿಕೆಯ ಹಿನ್ನೆಲೆಯಲ್ಲಿ ಸಾಮಾಜಿಕ ವ್ಯವಸ್ಥೆಯ ರಚನೆಯ ವಿವಿಧ ಪರಿಗಳು, ಪರಿವರ್ತನೆಗಳು ಮುಂತಾದವು ಒಳಪಟ್ಟಿವೆ.

ಸೋದರಿಯರಿಬ್ಬರ ಪ್ರತಿಯೊಂದು ಕಾದಂಬರಿಗಳು ವೈವಾಹಿಕ ವ್ಯವಸ್ಥೆಯ ಆಸುಪಾಸಿನಲ್ಲಿಯೇ ರಚನೆಗೊಂಡಿವೆ. ವಿವಾಹಸಂಸ್ಥೆಗೆ ಸದಸ್ಯರಾಗುವ ಅದಕ್ಕೆ ಸೇರ್ಪಡೆಯಾಗುವ ಅದರ ಸುತ್ತಮುತ್ತ ಚಲಿಸುವ ಪಾತ್ರಗಳೇ ಚಿತ್ರಿಸಲ್ಪಟ್ಟಿವೆ ಎಂಬುದನ್ನು ಮನಗಾಣಬಹುದು.

ಭಾರತೀಯ ಸಮಾಜದಲ್ಲಿ ವಿವಾಹವೆಂಬ ಸಂಸ್ಥೆಯನ್ನು ಸ್ತ್ರೀ ದೃಷ್ಟಿಕೋನದಿಂದ ನೋಡಿದಾಗ ಸ್ತ್ರೀ ಶೋಷಣೆಗೆ ಹಾಗೂ ಸ್ತ್ರೀಯ ವ್ಯಕ್ತಿತ್ವದ ನಾಶಕ್ಕೆ ಈ ಕೆಳಗಿನ ಕೆಲವು ಕಾರಣಗಳು ಕಂಡುಬರುತ್ತದೆ.

* ಹೆಣ್ಣಿಗೆ ತನ್ನ ಪತಿಯ ಆಯ್ಕೆಯ ಬಗ್ಗೆ ಏನೂ ಸ್ವಾತಂತ್ರ್ಯವಿಲ್ಲ
* ಆರ್ಥಿಕವಾಗಿ ಅವಳು ಅಸ್ವಾತಂತ್ರ್ಯಳು
* ಅವಳು ಕೌಟುಂಬಿಕವಾಗಿ ಹಾಗೂ ಕುಟುಂಬದ ಹೊರಗೆ ಲೈಂಗಿಕ ಶೋಷಣೆಗೆ ಒಳಗಾಗುತ್ತಾಳೆ
* ಅವಳಿಗೆ ತನ್ನದೇ ಆದ ವೃತ್ತಿ ಜೀವನವಿದ್ದರೆ ಅವಳ ಕೌಟುಂಬಿಕ ಜೀವನ ಹಾಗೂ ವೃತ್ತಿ ಜೀವನಗಳ ನಡುವೆ ಘರ್ಷಣೆಯುಂಟಾಗುತ್ತದೆ.
* ವಿಧವೆಗೆ ಪುನರ್ವಿವಾಹದ ಹಕ್ಕಿಲ್ಲ.

ಆರ್ಯಾಂಬ ಹಾಗೂ ತ್ರಿವೇಣಿಯವರ ಒಂದೊಂದು ಕಾದಂಬರಿಗಳೂ ಮೇಲಿನ ಕಷ್ಟ ಕೋಟಲೆಗೊಳಗಾಗುವ ಸ್ತ್ರೀಯ ದಯನೀಯ ಬದುಕನ್ನು ದಾಖಲಿಸುತ್ತವೆ. ವಿವಾಹ ಎಂಬ ವ್ಯವಸ್ಥೆಯ ವಿರುದ್ಧವೇ ಗಿರಕಿ ಹೊಡೆಯುವ ಪಾತ್ರಗಳ ಸುತ್ತ ಹೆಣೆದಿರುವ ಕಥಾ ಹಂದರವನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದರೆ ತಪ್ಪಾಗಲಾರದು.

ಲಾಕ್ಷಣಿಕವಾಗಿ ವಿವಾಹ ಎಂಬುದನ್ನು ಗಮನಿಸಿದಾಗ ಮೊದಲ ಹಂತಕ್ಕೆ ಕಂಡು ಬರುವ ಅಂಶ ವಿವಾಹವು ಸಾರ್ವತ್ರಿಕ ಸಂಸ್ಥೆಯಾಗಿದೆ ಎಂಬುದು. ಇದೊಂದು ಹೆಣ್ಣಿನ ದೃಷ್ಟಿಯಲ್ಲಿ ರಕ್ಷಣೆ, ಭದ್ರತೆ ಎಂದೂ ಕೂಡಾ ಪ್ರತಿಬಿಂಬಿಸಲಾಗುತ್ತದೆ. ಆದ್ದರಿಂದಲೇ ವಿವಾಹ ಒಂದು ರೀತಿ ಕಡ್ಡಾಯವಾಗಿದೆ. ಹೊಣೆಗಾರಿಕೆ ಕಡಿಮೆ ಮಾಡಿಕೊಳ್ಳುವ ದೃಷ್ಟಿಯಿಂದ ತಂದೆ ತಾಯಿಯರು ಮಕ್ಕಳನ್ನು 'ಮದುವೆ' ವ್ಯವಸ್ಥೆಗೆ ದೂಡುತ್ತಾರೆ.

ಈ ದೃಷ್ಟಿಯಲ್ಲಿ ಗಮನಿಸಬಹುದಾದ ತ್ರಿವೇಣಿಯವರ 'ಕಂಕಣ' ಕಾದಂಬರಿಯ ಆರು ಜನ ಗೆಳತಿಯರಲ್ಲಿ ಮದುವೆಯೆಂಬ ಸಂಸ್ಥೆಯೊಡನಾಗುವ ಹೋರಾಟದಲ್ಲಿ ಯಶಸ್ವಿಯಾಗುವವಳೆಂದರೆ 'ಅಂಬಿಕಾ' ಶ್ರೀಮಂತ ಕುಟುಂಬದ ಹಿನ್ನೆಲೆಯಿದ್ದರೂ ಅವಳಿಗೆ ಬದುಕಿನ ಬಗ್ಗೆ ಏನೂ ತನ್ನದೇ ಆದ ಮಹತ್ವಾಕಾಂಕ್ಷೆಯಾಗಲೀ, ನಿರೀಕ್ಷೆಯಾಗಲೀ ಇಲ್ಲ.

ಎಲ್ಲಾ ಭಾರತೀಯ ನಾರಿಯರಂತೆ ತನಗೂ ತನ್ನ ಪತಿಯನ್ನು ಆರಿಸುವ ಸ್ವಾತಂತ್ರ್ಯವಿಲ್ಲವೆಂಬುದನ್ನು ಒಪ್ಪಿಕೊಂಡು ಅವಳು ತನ್ನ ತಂದೆ–ತಾಯಿಯರ ಆಯ್ಕೆಯಲ್ಲಿಯೇ ತೃಪ್ತಿ ಕಾಣುತ್ತಾಳೆ. ನಿಧಾನವಾಗಿ ಈ ಮದುವೆ ಎಂಬ ಜೂಜಿನಲ್ಲಿ ತಾನು ಗೆದ್ದಿದ್ದೇನೆಂದು ಅವಳಿಗೆ ಅರಿವಾಗುತ್ತದೆ. ತನ್ನ ಗಂಡನೊಡನೆ ಆರೋಗ್ಯಪೂರ್ಣ ಸಂಬಂಧವನ್ನು ಸ್ಥಾಪಿಸಿಕೊಂಡು ಮಕ್ಕಳನ್ನು ಪ್ರೀತಿಸುತ್ತಾ, ತೃಪ್ತಿಯಿಂದ ಸಾಂಸಾರಿಕ ಜೀವನವನ್ನು ನಡೆಸುತ್ತಾಳೆ.

ವಿವಾಹದ ಬಹುಮುಖ್ಯವಾದ ಜೈವಿಕ ಉದ್ದೇಶ ಲೈಂಗಿಕ ತೃಪ್ತಿ ಎಂಬುದನ್ನು ಗಮನಿಸಿದಾಗ ತ್ರಿವೇಣಿಯವರ 'ಕೀಲುಗೊಂಬೆ' "ಪಾರಂಪಾರಿಕ ವಿವಾಹದ ಚೌಕಟ್ಟಿನಲ್ಲಿ ಅಡಗಿರುವ ಆಸೀಮ ಕ್ರೌರ್ಯವನ್ನು ಸಫಲವಾಗಿ ದಾಖಲಿಸುತ್ತದೆ"[೨].

ಕಾದಂಬರಿಯ ಮುಖ್ಯ ಪಾತ್ರವಾದ ಸೀತಾ ಕೆಳಮಧ್ಯಮ ವರ್ಗದ ಬಡ ತಂದೆ ತಾಯ್ಗಳ ಮಗಳು ತನ್ನ ವಯಸ್ಸಾದ ಅಜ್ಜಿಯ ಒತ್ತಾಯದಿಂದಾಗಿ ತಂದೆ ಸೀತಾ ಇನ್ನೂ ೧೬ ವರ್ಷ ದಾಟದ ಹುಡುಗಿಯಾಗಿರುವಾಗಲೇ ಅವಳಿಗೆ ಗಂಡು ನೋಡಲು ಪ್ರಾರಂಭಿಸುತ್ತಾನೆ. 'ಯೋಗ್ಯ' ವರನಿಗೆ ಬೇಕಾದ ವರದಕ್ಷಿಣೆ ಕೊಡಲು ಸಾಧ್ಯವಿರದ ಅವನಿಗೆ ಕೊನೆಗೆ ೨೫ ವರ್ಷದ ಹೈಸ್ಕೂಲ್ ಶಿಕ್ಷಕ ನರಸಿಂಹಯ್ಯನೊಡನೆ ಸೀತಾಳ ಮದುವೆಯನ್ನು ನಿಶ್ಚಯಿಸುತ್ತಾನೆ.

ಸಾಕಷ್ಟು ಸುಶಿಕ್ಷಿತನಾಗಿದ್ದರೂ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಬೆಳೆದ ನರಸಿಂಹಯ್ಯನಿಗೆ ಹೆಂಡತಿಯೆಂದರೆ ಸಂಬಳ ಬೇಡದೆ ದಿನದಲ್ಲಿ ದುಡಿಯುವ ಕೆಲಸದಾಳು ಮತ್ತು ರಾತ್ರಿಯಲ್ಲಿ ಸದಾ ಸಿದ್ಧವಿರುವ ವೇಶ್ಯೆ. ನಿಷೇಕ ಪ್ರಸ್ತದ ರಾತ್ರಿ ನರಸಿಂಹಯ್ಯನ ಮೃಗೀಯ ವರ್ತನೆಯಿಂದಾಗಿ ಸಂಭೋಗವೆಂದರೆ ಅತೀವ ತಾಳ್ಮೆಯಿಂದ ಸಹಿಸಬೇಕಾಗಿ ಬಂದ ಕಠಿಣ ಶಿಕ್ಷೆಯೆಂದು ಸೀತಾ ಭಾವಿಸುವಂತಾಗುತ್ತದೆ.

ಗಂಡನ ಎಲ್ಲೆಯಿಲ್ಲದ ಲೈಂಗಿಕ ತೃಷೆಯಿಂದಾಗಿ ಅನೇಕ ಸಲ ಗರ್ಭಪಾತ ಅನುಭವಿಸುವ ಸೀತಾ ಕೊನೆಗೆ ಮಧುವಿಗೆ ಜನ್ಮ ನೀಡುತ್ತಾಳೆ. ಬಹುಬೇಗ ಅವಳು ಅಸ್ಥಿಪಂಜರದಂತಾಗಿ, ಆಸ್ಪತ್ರೆಗೆ ಆಗಿಂದಾಗ್ಗೆ ಹೋಗಿ ಅಲ್ಲಿ ಸ್ವಲ್ಪ ಕಾಲವಿದ್ದು ಚೇತರಿಸಿಕೊಂಡಾಗ ನಂತರ ಮನೆಗೆ ಮರಳುವುದು ಅವಳ ಬದುಕಿನ ನಿಯತಕ್ರಮವಾಗುತ್ತದೆ. ಆದರೆ, ಮನೆಗೆ ಸೀತಾ ಬಂದ ಕೂಡಲೇ ಮತ್ತೆ ನರಸಿಂಹಯ್ಯ ಲೈಂಗಿಕ ಸುಖಕ್ಕಾಗಿ ಅವಳನ್ನು ಬಲತ್ಕರಿಸುವುದು ಮೊದಲೇ ದುರ್ಬಲಳಾದ ಸೀತಾ ಈ ಘರ್ಷಣೆಯನ್ನು ತಾಳಲಾರದೆ ಬದುಕನ್ನು ಕೊನೆಗಾಣಿಸುತ್ತಾಳೆ.

ವಿವಾಹವು ಸಂತಾನೋತ್ಪತ್ತಿ ಮತ್ತು ತಾಯ್ತನಕ್ಕೆ ಒಪ್ಪಿಗೆ ನೀಡುತ್ತದೆ. ಅಂದರೆ, ಮೂವತ್ತು ವರ್ಷಗಳ ದುರ್ಭರ ವೈವಾಹಿಕ ಜೀವನದ ನಂತರ ಒಮ್ಮೆ ದೀರ್ಘಾವಧಿಯ ಚಿಕಿತ್ಸೆಗಾಗಿ ಸೀತಾ ಆಸ್ಪತ್ರೆಗೆ ಸೇರಿದಾಗ ಅಲ್ಲಿ ಅವಳು ಹೊಸದೇ ಆದ ಒಂದು ಲೋಕವನ್ನು ಕಾಣುತ್ತಾಳೆ. ಅಲ್ಲಿ ಸಮಾಜದ ವಿವಿಧ ಸ್ತರಗಳಿಂದ ಬಂದಿರುವ ವಿವಿಧ ಬಗೆಯ ಸ್ತ್ರೀಯರನ್ನು ನೋಡುತ್ತಾಳೆ. ಅವರೆಲ್ಲರೂ ಒಂದಲ್ಲಾ ಒಂದು ಬಗೆಯಲ್ಲಿ ಪುರುಷ ಪ್ರಭುತ್ವಕ್ಕೆ ಬಲಿಯಾದವರೇ.

ನರಸಮ್ಮ ತನಗೆ ಆಗ ತಾನೇ ಹುಟ್ಟಿದ ಹೆಣ್ಣು ಮಗುವನ್ನು ಕೊಂದು ಅನಂತರ ಸಾಯಲು ಸಿದ್ಧಳಾಗುತ್ತಾಳೆ. ಕಾರಣ ಅವಳಿಗೆ ಈಗಾಗಲೇ ನಾಲ್ಕು ಹೆಣ್ಣು ಮಕ್ಕಳಿದ್ದಾರೆ. ಈಗಲಾದರೂ ಗಂಡು ಮಗುವಾಗದೇ ಹೋದರೆ ಅವಳು ಆಸ್ಪತ್ರೆಯಿಂದ ಮನೆಗೆ ಬರಬೇಕಾಗಿಲ್ಲವೆಂದು ಅವಳ ಗಂಡ ಮತ್ತು ಅತ್ತೆಮಾವಂದಿರು ಅವಳಿಗೆ ಎಚ್ಚರಿಕೆಯನ್ನಿತ್ತಿದ್ದಾರೆ. ಅರ್ಥಾತ್, ಈಗ ಅವಳ ಇಡೀ ಬದುಕು ಗಂಡು ಮಗು ಆಗುವುದನ್ನು ಅವಲಂಬಿಸಿದೆ.

ದುರದೃಷ್ಟವಶಾತ್, ಅವಳಿಗೆ ಈ ಬಾರಿಯೂ ಹೆಣ್ಣು ಮಗುವಾಗುತ್ತದೆ ಪರಿಣಾಮತಃ ಅವಳ ಗಂಡ ಅವಳನ್ನು ಹೊರಹಾಕಿ ಇನ್ನೊಂದು ಮದುವೆಯನ್ನು ಮಾಡಿಕೊಳ್ಳಬಹುದು. ಸರಳಮ್ಮನೆಂಬುವಳು ಒಂಬತ್ತನೆಯ ಮಗುವಿಗೆ ಜನ್ಮವಿತ್ತ ನಂತರ ಇನ್ನು ಮುಂದೆ ಮಕ್ಕಳಾಗದಂತೆ ತಾನೇ ಟ್ಯುಬೆಕ್ಟಮಿ ಆಪರೇಷನ್ ಮಾಡಿಸಿಕೊಂಡಿದ್ದಾಳೆ. ಕಾರಣವೇನೆಂದರೆ ಅಷ್ಟೇನೂ ಆದಾಯವಿಲ್ಲದ ಅವಳ ಗಂಡನಿಗೆ ಸಾಧ್ಯವಿದ್ದಷ್ಟೂ ಮಕ್ಕಳಾಗಬೇಕೆಂಬ ಆಸೆ.

"ಸ್ತ್ರೀಯರ ಇಂತಹ ಹೀನಸ್ಥಿತಿಗೆ ಮುಖ್ಯ ಕಾರಣವೆಂದರೆ ನಮ್ಮ ಸಮಾಜದಲ್ಲಿ ಹೆಂಗಸಿಗೊಂದು ನ್ಯಾಯ, ಗಂಡಸಿಗೆ ಮತ್ತೊಂದೇ ನ್ಯಾಯವಿರುವುದು. ಗಂಡಸರ ವಿವಾಹೇತರ ಅನೈತಿಕ ವ್ಯವಹಾರಗಳು ದುರ್ಲಕ್ಷಿಸಲ್ಪಟ್ಟರೆ ಪ್ರಕೃತಿಯೇ ಅಂತಹ ದುರ್ವ್ಯವಹಾರಗಳಿಗೆ ಹೆಂಗಸನ್ನು ಜವಾಬ್ದಾರಳನ್ನಾಗಿಸುತ್ತದೆ"[3].

ಆರ್ಯಾಂಬರ 'ಆರಾಧನೆ' ಯ ಭವಾನಿ ವಿವಾಹ ವ್ಯವಸ್ಥೆಯೊಳಗೆ ಸಿಲುಕಿ ತನ್ನ ಕಲಾವಿದ ಜೀವನಕ್ಕೆ ತಿಲಾಂಜಲಿಯಿಡುವ ಪರಿಸ್ಥಿತಿ ವೈವಾಹಿಕ ಬದುಕಿನ ಹತ್ತು ವರ್ಷಗಳಲ್ಲಿ ಐದು ಮಕ್ಕಳ ತಾಯಾದಳು. ವೀಣೆಯಿಲ್ಲದೆ ಬದುಕಲು ಸಾಧ್ಯವಿಲ್ಲವೆಂದು ನಂಬಿದ್ದ ಭವಾನಿ ಕ್ರಮೇಣ ಸಾಧನೆಗಿಂತ ಸಂಸಾರದ ಬಲವಾದ ಸೆಳೆತಕ್ಕೆ ಸಿಕ್ಕಿಬಿದ್ದಳು, ಕೊನೆಗೆ ವೀಣೆಯನ್ನು ಅತ್ತಿಗೆಗೊಪ್ಪಿಸಿ, ಸಂಸಾರಕ್ಕೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಳು.

ತ್ರಿವೇಣಿಯವರ 'ಬೆಳ್ಳಿಮೋಡ' ದಲ್ಲಿ ನಾಯಕಿಯ ತಾಯಿ ಅವರ ವಯಸ್ಸಿನಲ್ಲಿ ಅನಿರೀಕ್ಷಿತವಾಗಿಯೂ ಮಗನೊಬ್ಬನಿಗೆ ತಾಯಿಯಾಗುವುದು ಈ ಮೇಲೆ ಹೇಳಿದ ಲಕ್ಷಣಕ್ಕೆ ಹೊಂದುತ್ತದೆ.

ದಾಂಪತ್ಯವನ್ನು ಭದ್ರಪಡಿಸುವುದೇ ವಿವಾಹದ ಮೂಲಭೂತ ಉದ್ದೇಶವಾಗಿದೆ. ಮದುವೆಯಾಗದ ಹೆಣ್ಣನ್ನು ಜನ ನೋಡುವ ರೀತಿ ಹಾಗೂ ವೈವಾಹಿಕ ಬದುಕಿನ ಸುಂದರ ಕನಸನ್ನು ಕಾಣುವ ಹೆಣ್ಣಿನ ತುಮುಲ ಆರ್ಯಾಂಬರವರ 'ಕಾಮನಬಿಲ್ಲು' ವಿನಲ್ಲಿ ಕಂಡುಬರುತ್ತದೆ. ನಾಯಕಿ ಭಾರತೀಯ ಮದುವೆಯ ಹಂಬಲವನ್ನು ದೀರ್ಘವಾಗಿ ವಿವರಿಸಿದ್ದಾರೆ. 'ಹೆಣ್ಣಿನ ಸುಖದಿಂದ ವಂಚಿತನಾದ ಗಂಡು ವೇಶ್ಯೆಯ ಮನೆಗೆ ಹೋಗುತ್ತಾನೆ. ಚಿಂತೆ ಮರೆಯಲು ಮದ್ಯಪಾನದ ಮೊರೆ ಹೋಗುತ್ತಾನೆ. ಆದರೆ, ಹೆಣ್ಣು ಜಾರಿದಾಗ 'ನೀತಿಗೆಟ್ಟವಳು' ಎನಿಸಿಕೊಂಡು ಅವಿವಾಹಿತ ತರುಣಿಯರ ಬಾಳು ಕೊನೆಗೊಂಡಂತೆ ಸಮಾಜದ ಕಣ್ಣಿಗೆ ಕಾಣುವ ತಪ್ಪೆಲ್ಲ ಹೆಣ್ಣಿನದೆ. ಇಂತಹ ಪರಿಸ್ಥಿತಿಯಿರುವಾಗ ಭಾರತಿ ವಿವಾಹಾಪೇಕ್ಷೆಗೆ ಒಳಗಾಗುವುದು ಸಹಜವೇ ಆಗಿದೆ.

ಹಾಗಾಗಿ, ತನ್ನ ಗಂಡ, ಮಗನ ಬದುಕಿನಲ್ಲಿ ಸಾರ್ಥಕತೆಯನ್ನು ಕಾಣಲು ತವಕಿಸುವ ಭಾರತಿ, ಒಳ್ಳೆಯ ಪತ್ನಿಯಾಗಿ ಒಳ್ಳೆಯ ತಾಯಿಯಾಗಿ ಹುಟ್ಟಿದ ಹಾಗೂ ಮೆಟ್ಟಿದ ಮನೆಗೆ ಕೀರ್ತಿ ತಂದರೆ ಅದರಲ್ಲಿಯೇ ತನ್ನ ಬದುಕಿನ ಪರಿಪೂರ್ಣತೆ ಎಂದು ನಂಬಿದ್ದವಳು. ಬಾಲ್ಯದಿಂದಲೂ ಪ್ರೀತಿಯೆಂಬುದನ್ನೇ ಕಂಡರಿಯದ ಭಾರತಿ ಈ ಪ್ರೀತಿ, ವಿಶ್ವಾಸಗಳನ್ನು ತನ್ನ ಗಂಡ ಮತ್ತು ಮಗುವಿಗೆ ಸಮೃದ್ಧಿಯಾಗಿ ನೀಡುವ ಹಾಗೂ ಅನುಭವಿಸುವ ಅಪೇಕ್ಷೆ ಹೊತ್ತಿದ್ದಳು. ತನಗೆ ಬಾಳುಕೊಟ್ಟ ಶೇಖರನ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದಳು. ಗಂಡನ ಪ್ರೀತಿ ದೊರೆತಾಗ ತೃಪ್ತಳಾದಳು.

ತ್ರಿವೇಣಿಯವರ 'ಬಾನು ಬೆಳಗಿತು' ಇದಕ್ಕೆ ಪೂರಕವಾಗಿದೆ. ತರುಣ ಪೀಳಿಗೆಯ ದಂಪತಿಗಳು ವಿವಾಹದ ಹೊಸದರಲ್ಲಿ ಮಿತಿಮೀರಿದ ಉತ್ಸಾಹದಿಂದ ವರ್ತಿಸಿ, ಕಾಲಕ್ರಮೇಣ

ದೈಹಿಕ, ಮಾನಸಿಕ ಆಕರ್ಷಣೆಯನ್ನೂ ಕಳೆದುಕೊಂಡರು ಬಹುಬೇಗ ಜೀವನದಲ್ಲಿ ನಿರಾಸೆಗೊಂಡರು, ದಾಂಪತ್ಯವನ್ನು ಭದ್ರಪಡಿಸಲು ವಿವಾಹ ಮುಖ್ಯ ಎಂಬುದನ್ನು ಕಲ್ಯಾಣಿ ರಾಮನಾಥನ ಪಾತ್ರ ಚಿತ್ರಣಗಳು ನಿರೂಪಿಸುತ್ತವೆ.

ಗಂಡನ ಸಂಪಾದನೆಯು ಸಂಸಾರ ನಿರ್ವಹಣೆಗೆ ಸಾಕಾಗುವಂತಿದ್ದು, ನೆಮ್ಮದಿಯ ಜೀವನ ಸಾಗಿಸುವ ಅವಕಾಶವಿದ್ದರೂ ಕೇವಲ ಹವ್ಯಾಸಕ್ಕೋಸ್ಕರ ಉದೋಗವನ್ನವಲಂಭಿಸಿ ಉದ್ಯೋಗದ ನಿಜವಾದ ಅಗತ್ಯವಿರುವವರು ನಿರುದ್ಯೋಗಿಗಳಾಗಲು ಕಾರಣರಾಗುವಂತ ವ್ಯಕ್ತಿಗಳ ಚಿತ್ರಣವು ಕಲ್ಯಾಣಿಯ ಪಾತ್ರದ ಮೂಲಕ ರೂಪುತೆಳೆದಿದೆ. ಈ ಸಮಸ್ಯೆಯನ್ನು ಬಗೆಹರಿಸುವ ಮಾರ್ಗವನ್ನು ರಾಮನಾಥನು ಕೈಗೊಂಡ ಕ್ರಮ ಮೂಲಕ ಚಿತ್ರಿಸಿದ್ದಾರೆ.

ಸ್ತ್ರೀಯರಿಗೆ ಆರ್ಥಿಕ, ಸಾಮಾಜಿಕ ಹಾಗೂ ಔದ್ಯೋಗಿಕ ಸ್ವಾತಂತ್ರ್ಯದ ಅಗತ್ಯವಿರುವುದು ನಿಜವಾದರೂ, ಅದು ಎಲ್ಲಾ ಹೆಂಗಸರಿಗೂ ಆಜನ್ಮಸಿದ್ಧಹಕ್ಕೇನೂ ಅಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲದೆ ಕೆಲವೊಂದು ಸಾಮಾಜಿಕ ಸಮಸ್ಯೆಯ ಬಗ್ಗೆ ಕಿರುನೋಟ ಹರಿಸಿ, ಅದರ ಬಗ್ಗೆ ತಮ್ಮದೆ ಆದ ಪರಿಹಾರ ಮಾರ್ಗವನ್ನೂ ಸೂಚಿಸಿರುವ ಲೇಖಕಿ ದಾಂಪತ್ಯವನ್ನು ವಿವಾಹ ಭದ್ರಪಡಿಸುತ್ತದೆ ಎಂಬ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಏಕೆಂದರೆ, ಸ್ತ್ರೀ ಎಂದರೆ, ತಾಯಿಯಾಗುವುದಕ್ಕಾಗಿಯೇ, ಜನ್ಮ ತಾಳಿರುವವಳು ಮತ್ತು ಅವಳು ಬದುಕಿನುದ್ದಕ್ಕೂ ತಾಯ್ತನಕ್ಕಾಗಿ ಹಾಗೂ ಮಕ್ಕಳಿಗಾಗಿ ಹಂಬಲಿಸುತ್ತಾಳೆ. ಸ್ತ್ರೀಯೆಂದರೆ ಒಂದು ಅಕ್ಷಯ ಗರ್ಭಕೋಶ, ಫಲಶಕ್ತಿಯ ದೇವತೆ ಹೀಗಿರುವಾಗ ವಿವಾಹವೆಂಬ ವೇದಿಕೆಯಲ್ಲಿ ದಾಂಪತ್ಯದ ಪಾತ್ರವೇ ಮಕ್ಕಳ ಪಾಲನೆಪೋಷಣೆ ಮಾಡುವುದು ಇದರಲ್ಲಿ ಎರಡು ಮಾತಿಲ್ಲ. ಆರ್ಥಿಕ ರಚನೆಗೆ ಭದ್ರವಾದ ತಳಪಾಯ ಹಾಕಿಕೊಡುತ್ತದೆ.

ಸಮಾಜಗಳಲ್ಲಿ ಮುಖ್ಯವಾಗಿ ಆರ್ಥಿಕ ರಚನೆ ಸ್ತ್ರೀ ಪುರುಷರ ಸಹಕಾರ ಬೇಕೇಬೇಕಾಗುವ ರೀತಿಯಲ್ಲಿ ವ್ಯವಸ್ಥಿತವಾಗಿರುತ್ತದೆ. ಅಂದರೆ, ಅದರ ಭದ್ರತೆ ಸ್ತ್ರೀ ಪುರುಷರ ಸಹಾಯ ಹಾಗೂ ಸಹಕಾರವನ್ನು ಅವಲಂಬಿಸಿರುತ್ತದೆ. ಆದ್ದರಿಂದ, ಅವರು ಸಮಾಜದಿಂದ ಒಪ್ಪಿಕೊಳ್ಳಲಾದ ಸ್ಥಾಯಿಯಾಗಿರುವ ಪರಸ್ಪರ ಸಂಬಂಧಗಳನ್ನು ಬೆಳೆಸಿಕೊಳ್ಳಬೇಕು. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಅವರು ಮದುವೆ ಮಾಡಿಕೊಳ್ಳಬೇಕಾದುದು ಅನಿವಾರ್ಯ. ಹೀಗೆ ಆರ್ಥಿಕ ರಚನೆಗೆ ಭದ್ರವಾದ ತಳಪಾಯವನ್ನು ಒದಗಿಸುವುದು ಮತ್ತು ಅದರ ಕಾರ್ಯಗಳು ಸುಸೂತ್ರವಾಗಿ ನಡೆಯುವಂತೆ ಮಾಡುವುದು ವಿವಾಹದ ಉದ್ದೇಶವಾಗುತ್ತದೆ.

ಇದೇ ದೃಷ್ಟಿಕೋನದಲ್ಲಿ ಆರ್ಯಾಂಬ ಹಾಗೂ ತ್ರಿವೇಣಿಯವರ ಕಾದಂಬರಿಗಳನ್ನು ಅವಲೋಕಿಸಿದಾಗ ತನ್ನ ಬಾಳ ಸಂಗಾತಿಯನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿಲ್ಲದೆ ತನ್ನ ಅಸಹಾಯಕ ಪರಿಸ್ಥಿತಿಯಿಂದಾಗಿ ಇತರರ ನಿರ್ಬಂಧಕ್ಕೊಳಗಾಗಿ ತನಗಿಷ್ಟವಿಲ್ಲದವರನ್ನು ಮನಸ್ಸಿಲ್ಲದ ಮನಸ್ಸಿನಿಂದ ಮದುವೆಯಾಗುವ 'ಮೀರಾ'ಳನ್ನು 'ಅಪಸ್ವರ' ಮತ್ತು 'ಅಪಜಯ' ಕಾದಂಬರಿಗಳಲ್ಲಿ ಗಮನಿಸಬಹುದು.

ಭಿನ್ನ ಜೀವನ ಶೈಲಿಗಳನ್ನು, ಮುಖಾಮುಖಿಯಾಗುವ ಜೀವನ ಕ್ರಮಗಳನ್ನು ಪ್ರಬಲ ವ್ಯಕ್ತಿತ್ವವನ್ನುಳ್ಳ ಎರಡು ಪಾತ್ರಗಳನ್ನು ಮತ್ತು ಎರಡು ಮೌಲ್ಯ ವ್ಯವಸ್ಥೆಗಳನ್ನು ತುಲನಾತ್ಮಕವಾಗಿ ಪರೀಕ್ಷಿಸುವ ಈ ಕಾದಂಬರಿಗಳು ತ್ರಿವೇಣಿಯವರ ಕಾದಂಬರಿಯ ಪಟ್ಟಿಯಲ್ಲಿವೆ.

"ಒಂದು ವಿಷಮ ದಾಂಪತ್ಯವು ಹೇಗೆ ಗಂಡ, ಹೆಂಡತಿ ಇಬ್ಬರನ್ನು ಸಮವಾಗಿ ದುಃಖಕ್ಕೀಡು ಮಾಡುತ್ತದೆಂಬುದನ್ನು ಪರಿಣಾಮಕಾರಿಯಾಗಿ ದಾಖಲಿಸಿದ್ದಾರೆ"[೪]. ಸಾಮರಸ್ಯವಿಲ್ಲದ ಸಂಸಾರ ಶಾಮು ಮತ್ತು ಮೀರಾಳನ್ನು ಬಲಿ ತೆಗೆದುಕೊಂಡಿತು. ಸಂಕ್ರಮಣ ಕಾಲದ ಈ ಸಮಾಜದ ಮೌಲ್ಯಗಳನ್ನು ಪರೀಕ್ಷಿಸುವ ಮಾನದಂಡ ವಿವಾಹವೆಂಬ ಸಾಮಾಜಿಕ ಸಂಸ್ಥೆಯ ಚೌಕಟ್ಟಿನಲ್ಲೇ ಚಿತ್ರಿತವಾಗಿರುವ 'ಕಂಕಣ'.

ಸ್ತ್ರೀ ಮತ್ತು ವಿವಾಹ ವ್ಯವಸ್ಥೆಯ ಬಗ್ಗೆ ಕಾದಂಬರಿ ಒತ್ತುಕೊಡುವುದು ವಿವಾಹ ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಪುರುಷನ ಯಜಮಾನಕ್ಕೆ ಮತ್ತು ಅಂತಹ ಯಜಮಾನ್ಯದಿಂದ ಸ್ತ್ರೀಗೆ ಮುಕ್ತಿ ದೊರಕುವ ಸಾಧ್ಯತೆಗಳ ಬಗ್ಗೆ 'ಮುಕ್ತಿ'. ವಿಧವಾ ವಿವಾಹದ ಸುತ್ತ ಹೆಣೆದಿರುವ 'ಹಣ್ಣೆಲೆ ಚಿಗುರಿದಾಗ' ಆರ್ಯಾಂಬರ 'ಪ್ರಕೃತಿ ಪುರುಷ', 'ಸಂಬಂಧಗಳು', 'ದೇವಮಾನವ'.

ಮದುವೆಯೆನ್ನುವುದಕ್ಕೆ ಯಾವುದೇ ಹೊರಗಿನ ಆಕರ್ಷಣೆಗಿಂತ ಅಂತರಂಗದ ಗುಣ ಸ್ವಭಾವ ಮುಖ್ಯವೆಂದು ಸಾರುವ ಆರ್ಯಾಂಬರ 'ಪತಿತ ಪಾವನ' 'ಪ್ರಕೃತಿ ಪುರುಷ'. ಎಂಬತ್ತರ ದಶಕದಲ್ಲಿಯೇ ಅಂತಃಧರ್ಮೀಯ ವಿವಾಹ ಮತ್ತು ಅದರಿಂದ ಉಂಟಾಗುವ ಸಮಸ್ಯೆಗಳ ಸೂಕ್ಷ್ಮಾತೀಸೂಕ್ಷ್ಮ ಎಳೆಗಳನ್ನು ನಿರೂಪಿಸುವ 'ವಿಶ್ವಧರ್ಮ'.

ಆರ್ಯಾಂಬರ 'ಅಪೂರ್ವ ಕಥೆ' ಶ್ರೀದೇವಿ ವಿವಾಹವಾಗಿ ಅನುಭವಿಸಿದ ನರಕಯಾತನೆಯನ್ನು ನೆನಪಿಸಿಕೊಂಡರೆ ವಿವಾಹವೇ ಒಂದು ಗಲ್ಲುಶಿಕ್ಷೆ ಎಂಬ ಸ್ಥಿರಭಾವನೆ. 'ಗುರಿ'ಯ ಮೀನ ಜಯರಾಮ ರಿಜಿಸ್ಟ್ರಾರ್ ಮದುವೆಯಾಗಿ ಆನಂತರ ಕುಟುಂಬದವರನ್ನು

ವಿಶ್ವಾಸಕ್ಕೆ ತೆಗೆದುಕೊಂಡು ಸಾಂಪ್ರದಾಯಿಕವಾಗಿ ವಿವಾಹವಾಗುವುದು. ಹೀಗೆ ವೈವಾಹಿಕ ವ್ಯವಸ್ಥೆಯ ಎಳೆ ಎಳೆಯನ್ನು ಬಿಡಿಸುತ್ತಾ ಹೋಗುತ್ತವೆ. ವಿವಾಹ ವ್ಯವಸ್ಥೆಯ ಪದರ ಪದರಗಳು ಭಿನ್ನ. ಸೂಕ್ಷ್ಮ.

ಎಲ್ಲಕ್ಕಿಂತ ಮುಖ್ಯವಾದ ಉದ್ದೇಶ "ಮಾನವ ಕುಟುಂಬ ಹಾಗೂ ಇತರ ಸ್ಥಾಯಿಯಾದ ಸಮೂಹಗಳ ಉಳಿವು ಮತ್ತು ಮುಂದುವರಿಯುವಿಕೆಗೆ ಸಹಾಯ ಮಾಡುವುದೇ ಆಗಿದೆ"*. ಈ ಉದ್ದೇಶವನ್ನು ಸಾಧಿಸಬೇಕಾದರೆ ಸ್ತ್ರೀ ಪುರುಷರು ಅಥವಾ ಪುರುಷ ಹಾಗೂ ಸ್ತ್ರೀಯರ ಸಮೂಹಗಳು ಸಾರ್ವತ್ರಿಕ ಅನುಮತಿ ಮೇರೆಗೆ ಸಾಮಾಜಿಕವಗಿ ಒಪ್ಪಿಕೊಳ್ಳಲಾದ ಕ್ರಮದಲ್ಲಿ ಮದುವೆಯಾಗಿ ತಮ್ಮದೇ ಆದ ಕುಟುಂಬಗಳನ್ನು ಸ್ಥಾಪಿಸಿ ಸರಿಯಾದ ಕ್ರಮದಲ್ಲಿ ಮಕ್ಕಳನ್ನು ಪಡೆದು ಮತ್ತು ಅವರು ಸೇರಿಸುವ ಸಮೂಹಗಳ ನಿರೀಕ್ಷೆಗಳಿಗನುಗುಣವಾಗಿ ಮಕ್ಕಳನ್ನು ಬೆಳೆಸಬೇಕು.

ಬೇರೆ ಮಾತುಗಳಲ್ಲಿ ಹೇಳಬೇಕಾದರೆ "ಸಂಸ್ಕೃತಿಯ ಫಲಗಳ ರಕ್ಷಣೆ, ಬೆಳವಣಿಗೆ ಹಾಗೂ ಸಂಸ್ಕೃತಿ ಮತ್ತು ಕುಲದ ಹೆಸರು ಹಾಗೂ ಆಸ್ತಿಯನ್ನು ಮುಂದಿನ ಪೀಳಿಗೆಗೆ ರವಾನಿಸುವುದು"*. ವಿವಾಹದ ಇನ್ನೊಂದು ಪ್ರಮುಖ ಉದ್ದೇಶವಾಗಿದೆ.

ಇದು ತಂದೆ ತಾಯಿಗಳು ಮಕ್ಕಳಿಗೆ ಸರಿಯಾದ ರಕ್ಷಣೆ ಹಾಗೂ ತರಬೇತನ್ನು ಒದಗಿಸುವ ಜವಾಬ್ಧಾರಿಯನ್ನು ಹೊತ್ತುಕೊಳ್ಳುವಂತೆ ಮಾಡುತ್ತದೆ. ಮಕ್ಕಳು ಮತ್ತು ಸಮಾಜದ ಸಾಂಸ್ಕೃತಿಕ ಮೌಲ್ಯಗಳನ್ನು ಅರಿತು ಆ ಮೂಲಕ ತಮ್ಮ ಸಮಾಜದ ಹಾಗೂ ಸಂಸ್ಕೃತಿಯ ಮುನ್ನಡೆ ಮತ್ತು ಪ್ರಗತಿಗಾಗಿ ತಮ್ಮ ತಮ್ಮ ಕೊಡುಗೆಗಳನ್ನು ನೀಡಲು ಶಕ್ತರಾಗುವ ತೆರದಲ್ಲಿ ತಂದೆ-ತಾಯಿಗಳು ಅವರನ್ನು ಬೆಳೆಸಿ ತರಬೇತನ್ನು ನೀಡಿ ಸಮಾಜಯೋಗ್ಯರನ್ನಾಗಿಸಬೇಕು.

ಸಂಕ್ಷೇಪವಾಗಿ ಭರವಸೆಯನ್ನು ಕೊಡುತ್ತದೆ. ೧. ಜೈವಿಕ (ಅಂದರೆ ಲೈಂಗಿಕ ತೃಪ್ತಿ) ಮತ್ತು ೨. ಮಾನಸಿಕ (ಅಂದರೆ ಮಕ್ಕಳನ್ನು ಪಡೆಯುವುದರಿಂದ ಉಂಟಾಗುವ ಮನಶ್ಶಾಂತಿ) ಮಾನವ ಕುಲ ಹಾಗೂ ಸಂಸ್ಕೃತಿಯ ಉಳಿವು ಮತ್ತು ಮುನ್ನಡೆ ಮಕ್ಕಳ ಲಾಲನೆ, ಪಾಲನೆ, ಹೆಚ್ಚಾದ ಸಹಕಾರ ಕುಟುಂಬ ಸ್ಥಾಪನೆ ಇತ್ಯಾದಿಗಳು ವಿವಾಹದ ಎತರ ಬಹುಮುಖ್ಯವಾದ ಸಾಮಾಜಿಕ ಉದ್ದೇಶಗಳಾಗಿವೆ.

ಈ ಉದ್ದೇಶಗಳು ಕೆಲವು ಲಕ್ಷಣಗಳನ್ನು ಸ್ಪಷ್ಟವಾಗಿ ತೋರುತ್ತವೆ. ಈ ಮಾನದಂಡಗಳನ್ನು ಇಟ್ಟುಕೊಂಡು ಸಹೋದರಿಯರ ಕಾದಂಬರಿಗಳನ್ನು ಹಾಗೂ ತುಲನಾತ್ಮಕವಾಗಿ ವಿಶ್ಲೇಷಣೆಗೊಳಪಡಿಸಿದಾಗ ಕೆಲವು ಸಾಮ್ಯತೆ, ಭಿನ್ನತೆಗಳು ಕಂಡುಬರುತ್ತದೆ.

ವಿವಾಹವೆಂದರೆ, ಒಬ್ಬ ಪುರುಷ ಹಾಗೂ ಒಬ್ಬ ಸ್ತ್ರೀಗೆ ಇರುವ ಸಂಬಂಧಗಳು ಇಲ್ಲಿ ಪುರುಷರಿಗೆ ಪತಿಯ ಪಾತ್ರ, ಸ್ತ್ರೀಗೆ ಪತ್ನಿಯ ಪಾತ್ರ. ವಿವಾಹ ಇವರಿಬ್ಬರ ಲೈಂಗಿಕ ಬಯಕೆಗಳಲ್ಲಿ ಹೊಂದಾಣಿಕೆ ಬರುವಂತೆ ಮಾಡುತ್ತದೆ. ಇದು ತಮ್ಮ ವಿಭಿನ್ನ ಅಪೇಕ್ಷೆಗಳನ್ನು ಈಡೇರಿಸಿಕೊಳ್ಳಲು ಅವರನ್ನು ಶಕ್ತರನ್ನಾಗಿಸುತ್ತದೆ. ಯಾರು ಯಾರನ್ನು ಮದುವೆಯಾಗಬೇಕು ಮತ್ತು ಎಷ್ಟು ಜನರನ್ನು ಮದುವೆಯಾಗಬಹುದು ಎಂಬುದನ್ನು ಆಯಾ ಸಮಾಜಗಳಲ್ಲಿ ಪ್ರಧಾನವಾಗಿರುವ ಪದ್ಧತಿಗಳು ನಿರ್ಧರಿಸುತ್ತವೆ.

ಈ ಲಕ್ಷಣದ ಹಿನ್ನೆಲೆಯಲ್ಲಿ ಗಮನಿಸಿದರೆ ತ್ರಿವೇಣಿಯವರ ಕಾದಂಬರಿಗಳು ಹಾಗೂ ಆರ್ಯಾಂಬರ ಕಾದಂಬರಿಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ವಿವಾಹ ಎಳೆ ಪ್ರತಿ ಕಾದಂಬರಿಯಲ್ಲೂ ಕಂಡುಬರುತ್ತದೆ. ಹಾಗೂ ಅದರ ಸುತ್ತ ಪಾತ್ರಗಳು ಸುತ್ತುತ್ತದೆ. ಇವರ ಕಾದಂಬರಿ ವಸ್ತುಗಳಲ್ಲಿ ವಿವಾಹ ಪ್ರಧಾನ ಪಾತ್ರವಹಿಸುತ್ತದೆ ಎಂದರೆ ತಪ್ಪಲ್ಲ.

ಆರ್ಯಾಂಬರ ಕಾದಂಬರಿಯಾದ 'ಅಸಂಗತ' ದಲ್ಲಿ ಭಾರತೀಯ ಸಂಸ್ಕೃತಿಯ ಮಡಿವಂತಿಕೆ ಹೋಗಬೇಕು. ಅತಿಯಾದ ಬಿಗಿ, ಬಂಧನಗಳಿಂದ ಅನೇಕ ವೇಳೆ ನಮ್ಮ ಸಹಜ ವ್ಯಕ್ತಿತ್ವ ಮರೆಯಾಗುವುದೂ ಉಂಟು. ವಯಸ್ಸಿಗೆ ಸಹಜವಾದ ವೈಚಾರಿಕತೆ ಬೆಳೆಯುವುದಿಲ್ಲ ಎಂಬುದು ರತ್ನಳ ಚಿಂತನಲಹರಿಯನ್ನು ಎತ್ತಿ ಹಿಡಿಯುತ್ತದೆ ಹಾಗೂ ಆಕೆಗಿರುವ ಸ್ತ್ರೀಪರ ಕಾಳಜಿಯನ್ನು ಗಮನಿಸಬಹುದು. ರತ್ನಳ ಪ್ರಕಾರ ಮದುವೆ ಎನ್ನುವುದು ದೈಹಿಕ ಸಂಬಂಧ ಹೊಂದಲು ಲೈಸೆನ್ಸ್ ಪಡೆದಂತೆ, ಅಷ್ಟೇ ಅಲ್ಲ ಸಂಸಾರದ ಸುಭದ್ರತೆಗೆ ಮಕ್ಕಳ ಪೋಷಣೆಗೆ ಎಂಬುದು.

ಹೀಗೆ ಅನೇಕ ಸಲ ನಿರೂಪಕನಿಗೂ, ರತ್ನಾಳಿಗೂ ಮದುವೆ ವಿಚಾರದ ಬಗ್ಗೆ ಮತ್ತು ಸಾವಿನ ವಿಚಾರದ ಬಗ್ಗೆ ಚರ್ಚೆಗಳು ನಡೆಯುತ್ತಿರುತ್ತದೆ. ಇದರಿಂದ ಇಬ್ಬರೂ ಆತ್ಮೀಯರಾಗುತ್ತಾರೆ. ಕೊನೆಗೆ ಮೈಮನಗಳು ಒಂದಾಗಿ ಪ್ರಣಯಿಗಳಾಗುತ್ತಾರೆ. ಅವರಿಬ್ಬರ ದೃಷ್ಟಿಯಲ್ಲಿ ಮದುವೆ ಅನಿವಾರ್ಯವಲ್ಲ. ಇದರಿಂದ ಇವರಿಬ್ಬರ ಸಂಬಂಧದ ಬಗ್ಗೆ ಊರಿಗೆ ಊರೇ ಮಾತಾಡಿಕೊಳ್ಳುತ್ತದೆ.

ಮದುವೆಯಾಗದೆ ಇಬ್ಬರೂ ಜೊತೆಯಲ್ಲಿರುವುದು ಸರಿಯೆನ್ನಿಸಿದ್ದರೂ, ಸಮಾಜವನ್ನು ಬಿಟ್ಟು ಹೊರಗೆ ಬದುಕಲು ಸಾಧ್ಯವಿಲ್ಲ ಎಂಬುದನ್ನು ಮನಗಂಡು ಇಬ್ಬರೂ ಬೇರೆ ಬೇರೆ ವಾಸ ಮಾಡುತ್ತಾರೆ. ಇಲ್ಲಿ ಕಾದಂಬರಿಗಾರ್ತಿ ರತ್ನಳ ಮೂಲಕ ಹೇಳಿಸಿರುವ ಮತ್ತು ಮನುಷ್ಯ ಸಂಘಜೀವಿ ಎಂಬುದನ್ನು ನಿರೂಪಿಸುತ್ತದೆ. ಅಂದರೆ ನಾವು ಬದುಕಿದರೂ ಸಮಾಜದಲ್ಲೇ, ಸತ್ತರೂ ಸಮಾಜದಲ್ಲೇ ಎನ್ನುವ ರತ್ನಳ ಮುಂದಾಲೋಚನೆಯನ್ನು ಉದ್ದೇಶಪೂರ್ವಕವಾಗಿ

ಅಳವಡಿಸಿಕೊಂಡಿದ್ದಾರೆ ಅನ್ನಿಸುತ್ತದೆ. ಕೊನೆ ಘಟ್ಟದಲ್ಲಿ ರತ್ನಳ ವರ್ಗಾವಣೆಯಿಂದಾಗಿ ಇಬ್ಬರೂ ಒಬ್ಬರನ್ನೊಬ್ಬರು ಅಗಲುವ ಸಂದರ್ಭ ಬರುತ್ತದೆ. ಇಬ್ಬರೂ ಪ್ರೇಮದ ಸುಳಿಯಲ್ಲಿ ಸಿಕ್ಕಿ ಅದರಲ್ಲಿ ಮುಳುಗದೇ ಮುನ್ನಡೆದಿದ್ದಾರೆ. ಅಂದರೆ ಅವರಿಬ್ಬರೂ ಮಾನವ ಸಹಜ ತುಡಿತಗಳಿಗೆ ಒಳಗಾಗಿ ಆ ಬಂಧನವನ್ನು ಬಿಟ್ಟು ಬದುಕಲು ಸಾಧ್ಯ ಎಂಬುದನ್ನು ನಿರೂಪಿಸಿದ್ದಾರೆ. "ಜೀವನದಲ್ಲಿ ಆತ್ಮಹತ್ಯೆ ಕೊನೆಯಲ್ಲ, ಸಮಸ್ಯೆಗಳಿಗೆ ವಿವಾಹವೇ ಪರಿಹಾರವಲ್ಲ"* ಎಂಬುದನ್ನು ತಿಳಿಸುತ್ತಾರೆ.

ಈ ವಿವಾಹ ಬಂಧನ ಸಾಧಾರಣವಾಗಿ ಬಲಯುತವಾಗಿರುತ್ತದೆ ಮತ್ತು ಸ್ಥಿರವಾಗಿರುತ್ತದೆ, ಕಾರಣ ಇದು ಕೇವಲ ಲೈಂಗಿಕ ಅವಶ್ಯಕತೆಗಳ ಮೇಲೆ ಆಧಾರಿತವಾಗಿರುವುದಿಲ್ಲ ವ್ಯಕ್ತಿ ಈ ಅವಶ್ಯಕತೆಗಳನ್ನು ವಿವಾಹವಿಲ್ಲದೆಯೇ ಇನ್ನೂ ಚೆನ್ನಾಗಿ ಈಡೇರಿಸಿಕೊಳ್ಳಬಲ್ಲ. ಮಕ್ಕಳು ದಂಪತಿಗಳಾಗಿರುವ ಪ್ರೇಮ ಬಾಳ್ವೆಯ ಹೋರಾಟದಲ್ಲಿ ಪರಸ್ಪರ ಸಹಾಯ ಹಾಗೂ ಸಹಕಾರ ಮುಂತಾದ ಅವಕಾಶಗಳು ವಿವಾಹ ಬಂಧನವನ್ನು ಬಲಪಡಿಸುತ್ತದೆ.

ಒಬ್ಬ ಪುರುಷ ಹಾಗೂ ಸ್ತ್ರೀ ಪತಿ ಪತ್ನಿಯರಾಗಿ ಲೈಂಗಿಕ ಹಾಗೂ ಇತರ ಸಂಬಂಧಪಟ್ಟ ಸಾಮಾಜಿಕ ಹಾಗೂ ಆರ್ಥಿಕ ಸಂಬಂಧಗಳನ್ನು ಬೆಳೆಸಲು ಸಮರ್ಥರಾಗುವಂತೆ ಮಾಡುತ್ತದೆ. ಇದಕ್ಕೆ ಸಾಮಾಜಿಕ ಹಾಗೂ ಧಾರ್ಮಿಕ ಒಪ್ಪಿಗೆ ಇರುವುದರಿಂದ ಸ್ಥಾಯಿಯಾಗಿರುತ್ತದೆ. ಹಿಂದೆ ವಿವಾಹ ಆಧಾರವಾಗಿದ್ದರು ಮತ್ತು ವಿವಾಹ ಬಂಧನ ಭದ್ರವಾಗಿರಲು ಹಾಗೂ ಬಲವಾಗಿರಲು ಮುಖ್ಯವಾದ ಕಾರಣವಾಗಿದ್ದಿತು. ಉದಾಹರಣೆಗೆ, ಹಿಂದೂಗಳಲ್ಲಿ ವಿವಾಹ ಒಂದು ಸಂಸ್ಕಾರವಾಗಿದೆ. ಈ ಬಂಧನ ಮಾರ್ಪಡಿಸಲಾಗದಂತಹದು. ಅಂದರೆ ಇದು ಗಂಡನಾಗಲಿ ಹೆಂಡತಿಯಾಗಲಿ ಸತ್ತು ಹೋದರೂ ಇರುತ್ತದೆ.

ಆರ್ಯಾಂಬರ 'ಕಾಮನಬಿಲ್ಲು' ಮದುವೆಯಾಗದ ಹೆಣ್ಣನ್ನು ಜನ ನೋಡುವ ರೀತಿ ಹಾಗೂ ವೈವಾಹಿಕ ಬದುಕಿನ ಸುಂದರ ಕನಸನ್ನು ದೀರ್ಘವಾಗಿ ವಿವರಿಸಿದ್ದಾರೆ. ಹೆಣ್ಣಿನ ಸುಖದಿಂದ ವಂಚಿತನಾದ ಗಂಡು ವೇಶ್ಯೆಯ ಮನೆಗೆ ಹೋಗುತ್ತಾನೆ. ಚಿಂತೆ ಮರೆಯಲು ಮದ್ಯಪಾನದ ಮೊರೆ ಹೋಗುತ್ತಾನೆ. ಆದರೆ, ಹೆಣ್ಣು ಜಾರಿದಾಗ ನೀತಿಗೆಟ್ಟವಳು ಎನಿಸಿಕೊಂಡ ಅವಿವಾಹಿತರ ತರುಣಿಯರ ಬಾಳು ಕೊನೆಗೊಂಡಂತೆ ಸಮಾಜದ ಕಣ್ಣಿಗೆ ಕಾಣುವ ತಪ್ಪೆಲ್ಲ ಹೆಣ್ಣಿನದೇ. ಯಾಕೀ ಪಕ್ಷಪಾತ? ಇಂತಹ ಹೆಣ್ಣಿನ ನೂರೆಂಟು ಸಮಸ್ಯೆಗಳೆಲ್ಲ ಕಾನೂನಿನಿಂದ ನಿವಾರಣೆಯಾಗುವುದು ಸಾಧ್ಯವೇ ಇಲ್ಲ.

ಪು. ೮೦

ಮೊದಲು ಮೂಲಭೂತವಾಗಿ ಸಮಾಜದ ದೃಷ್ಟಿಕೋನ ಬದಲಾಗಬೇಕು ಎನ್ನುವಲ್ಲಿ ಸಮಾಜದಲ್ಲಿ ಹೆಣ್ಣು ಗಂಡಿನ ನಡುವೆ ಇರುವ ತಾರತಮ್ಯ. ಹೆಣ್ಣಿಗೆ ಮದುವೆಯ ಅನಿವಾರ್ಯತೆ ವ್ಯಕ್ತವಾಗುತ್ತದೆ. ಒಂದು ವೇಳೆ ಆಕೆ ತಾಯಿಯಾಗುವುದು ತಡವಾದಾಗ ಕೂಡ ಜನ ಅವಳನ್ನು ನೋಡುವ ಬಗೆ, ತಾಯಿಯಾದ ನಂತರ ತನ್ನ ಮಗುವಿನ ಬಗ್ಗೆ ಆಕೆ ವಹಿಸುವ ಕಾಳಜಿ, ಮಗುವಿಗೆ ತಂದೆ ತಾಯಿಗಳ ಪ್ರೀತಿಯ ಅಗತ್ಯತೆ ತಿಳಿಸುತ್ತಾರೆ.

"ಹುಡುಗಿಯರು ಅವಿವಾಹಿತರಾಗಿಯೇ ಉಳಿಯುತ್ತಿರುವುದಕ್ಕೆ ಹಿನ್ನೆಲೆಯಾಗಿ ತರುಣರ ನಿರುದ್ಯೋಗ ಸಮಸ್ಯೆಯೇ ಇದೆಯಲ್ಲವೇ? ಉದ್ಯೋಗವಿಲ್ಲದ ಯಾವ ತರುಣ ವಿವಾಹವಾಗಲು ಒಪ್ಪುತ್ತಾನೆ. ಅವನಿಗೆ ಉದ್ಯೋಗ ಸಿಕ್ಕುವುದು ತಡವಾದಂತೆ, ಹುಡುಗಿಯರಿಗೆ ಮದುವೆಯಾಗುವುದೂ ಸಹಜವಾಗಿಯೇ ತಡವಾಗುತ್ತದೆ. ಇನ್ನು ಕೆಲವು ತಮ್ಮ ಊರನ್ನು ನೆಚ್ಚಿಕೊಂಡಿದ್ದರೆ ಆಗುವುದಿಲ್ಲ ಎಂದರಿತು ಹೊರಗಿನ ಊರುಗಳಿಗೆ ಕೆಲಸ ಅರಸಿಕೊಂಡು ಹೋಗುತ್ತಾರೆ. ಅಲ್ಲಿ ಕೆಲಸ ಸಿಕ್ಕಿದ ಮೇಲೆ ಅವರು ತಮ್ಮ ಆಫೀಸಿನಲ್ಲಿಯೇ ಕೆಲಸ ಮಾಡುವ ಹುಡುಗಿಯರೊಡನೆ ಓಡಾಡುತ್ತಾರೆ. ಆ ಹುಡುಗಿಯರೂ ನಮ್ಮಂತೆಯೇ ಮದುವೆ ಮದುವೆಯಿಲ್ಲದೆ ಮನೆಯಲ್ಲಯೇ ಕುಳಿತಿರಲು ಬೇಸರವಾಗಿ ಕೆಲಸಗಳಿಗೆ ಸೇರಿಕೊಂಡಿರುತ್ತಾರೆ. ಹುಡುಗ ಹುಡುಗಿಯರಿಬ್ಬರಿಗೂ ವಯಸ್ಸಾಗಿರುತ್ತದೆ. ಲೈಂಗಿಕ ಜೀವನದ ಸಂಪೂರ್ಣ ರಹಸ್ಯ ಅವರಿಗೆ ಗೊತ್ತು ಹೀಗಾಗಿ ಸಂಸಾರದ ಜವಾಬ್ದಾರಿ ಹೊರದೆ ಸುಖ ಸಿಗುವುದಾದರೆ ಯಾಕೆ ಹೀಗೇ ಇರಬಾರದು ಎನ್ನುವ ಮನೋಧರ್ಮ ಇಬ್ಬರಲ್ಲಿಯೂ ಬೆಳೆದು ಬರುತ್ತದೆ"[೫].

ಸಂಪ್ರದಾಯ ಅಥವಾ ಕಾನೂನು ಅಥವಾ ಎರಡೂ ವಿವಾಹವನ್ನು ಅಂಗೀಕರಿಸುತ್ತದೆ. ನಿಯಂತ್ರಿಸುತ್ತದೆ ಮತ್ತು ಕ್ರಮಪಡಿಸುತ್ತದೆ ಇದು ಅವಶ್ಯಕ ಕಾರಣ ಸಮಾಜವು ಮಕ್ಕಳು ನ್ಯಾಯ ಧರ್ಮ ಸಮಾತವಾದ ವಿವಾಹದಿಂದ ಹುಟ್ಟಿದವರೋ ಅಥವಾ ಹುಟ್ಟಿರದವರೋ ಎಂಬ ಸಮಸ್ಯೆಯನ್ನು ಹಾಗೂ ಆಸ್ತಿಯ ಉತ್ತರಾಧಿಕಾರತ್ವ ಅಧಿಕಾರ ಇತ್ಯಾದಿ ಪ್ರಶ್ನೆಗಳನ್ನು ಬಗೆಹರಿಸಬೇಕು. ದಂಪತಿಗಳಿಗೆ ತಮ್ಮ ಲೈಂಗಿಕ ಬಯಕೆಗಳನ್ನು ಪೂರೈಸಲು ಹಾಗೂ ಸಂತಾನೋತ್ಪತ್ತಿ ಮಾಡಲು ಸಮಾಜ ಕೊಟ್ಟ ಅನುಮತಿಯೇ ವಿವಾಹ.

ಲೋಕ ನೀತಿಗಳಿಂದ ಸೃಷ್ಟಿಸಲ್ಪಟ್ಟ, ನಿಷೇಧ ನಿಯಮಗಳಿಂದ ವಿವರಿಸಲಾದ ಸಮಾಜದಿಂದ ಒಪ್ಪಿಕೊಳ್ಳಲಾದ ಮತ್ತು ಸಂಸ್ಕೃತಿಯಿಂದ ಜಾರಿಗೆ ತರಲಾದ ಸಂಸ್ಥಾಯಿಕ ಸಂಬಂಧವೇ ವಿವಾಹ ಎಂಬುದಾಗಿ ಹೇಳುತ್ತಾರೆ. ಸರಳ ಸಮಾಜಗಳಲ್ಲಿ ಸಂಪ್ರದಾಯಗಳು

ವ್ಯಕ್ತಿಗಳ ಲೈಂಗಿಕ ಚಟುವಟಿಕೆಗಳನ್ನು ನಿಯಂತ್ರಿಸಿ ನಿರ್ದೇಶಿಸುವಷ್ಟು ಬಲವಾಗಿದೆ. ಆದರೆ ಆಧುನಿಕ ಸಮಾಜಗಳಲ್ಲಿ ವಿವಾಹ ಶಾಸನಗಳು ಬೇಕಾಗಿವೆ ಮತ್ತು ಅವು ವಿವಾಹ ಸಂಪ್ರದಾಯಗಳಿಗೆ ಪೂರಕವಾಗಿರಬೇಕಾಗಿವೆ.

ಸ್ವಾತಂತ್ರ್ಯೋತ್ತರ ಭಾರತೀಯ ಸಮಾಜವು ಪುರುಷ ಪ್ರಧಾನವಾಗಿರುವುದರಿಂದ, ಚಾಲ್ತಿಯಲ್ಲಿರುವ ನಿರ್ಧರಿಸಲ್ಪಟ್ಟ ವಿವಾಹಗಳು ಈ ಪ್ರಾಧಾನ್ಯತೆಯನ್ನೇ ಮುಂದುವರಿಸುತ್ತವೆ. ಸ್ತ್ರೀಯನ್ನು ನೋಡಿ ಅಪೇಕ್ಷಿಸಿ ಆಯ್ಕೆ ಮಾಡುವವನು ಗಂಡು. ಹೆಣ್ಣಾದರೋ ನಿಷ್ಕ್ರಿಯವಾಗಿದ್ದು, ಆರಿಸಲ್ಪಡುವವಳು ಅನೇಕ ಗಂಡುಗಳು ಅಮೃತಾಳ ವಧುಪರೀಕ್ಷೆಯನ್ನು ನಡೆಸುತ್ತಾರೆ ಮತ್ತು ಆನಂತರ ನಾನಾ ಕಾರಣಗಳಿಗಾಗಿ ಅವಳನ್ನು ತಿರಸ್ಕರಿಸುತ್ತಾರೆ. ಅವಳ ಬಣ್ಣ ಕಪ್ಪು, ವರನಿಗೆ ಮದುವೆಯಾಗಲಿರುವ ತಂಗಿಯೊಬ್ಬಳಿದ್ದಾಳೆ, ಮಾವನ ಖರ್ಚಿನಲ್ಲಿ ತಾನು ವಿದೇಶಕ್ಕೆ ಹೋಗಿ ಓದಬೇಕು ಇತ್ಯಾದಿ ಕಾರಣಗಳಿಗಾಗಿ ಗಂಡು ಹೇಗೆ ಇರಲಿ ಅವನ ಬಣ್ಣ ಬಿಳಿಯಿರಲಿ, ಕಪ್ಪಿರಲಿ, ಅವನು ಕುರುಡನಿರಲಿ ಅಥವಾ ಸುಂದರನಾಗಿರಲಿ, ಹೆಣ್ಣಿಗೆ ತನ್ನನ್ನು ಮದುವೆಯಾಗುವವನ ವಿಷಯದಲ್ಲಿ ಯಾವ ರೀತಿಯ ಆಯ್ಕೆಯ ಸ್ವಾತಂತ್ರ್ಯವೂ ಇಲ್ಲ. ಆದರೆ ಸ್ವತಃ ಕಪ್ಪು ಬಣ್ಣದವನಾಗಿದ್ದು, ಕುರೂಪಿಯಾಗಿರುವ ಗಂಡು ತನ್ನ ಹೆಂಡತಿ ಸುರಸುಂದರಿಯಾಗಿರಬೇಕೆಂದು ಅಪೇಕ್ಷಿಸುತ್ತಾನೆ.

ಒಮ್ಮೆ ಆರು ಮಕ್ಕಳಿರುವ ವಿಧುರನೊಬ್ಬನು ತನ್ನ ಅರ್ಧ ವಯಸ್ಸು ಆಗಿಲ್ಲದ ಅಮೃತಾಳನ್ನು ಮದುವೆಯಾಗುವುದು ತನ್ನ ಹಕ್ಕೆಂದೇ ವಾದಿಸುತ್ತಾನೆ. ಹೆಣ್ಣಿನ ಮದುವೆಯನ್ನು ಕುರಿತು ಗಂಡಿಗಿರುವ ಇಂತಹ ನಿಲುವನ್ನು ಮುದುಕಿಯೊಬ್ಬಳು ಹೀಗೆ ಸಂಗ್ರಹವಾಗಿ ದಾಖಲಿಸುತ್ತಾಳೆ. "ಸರಿಯಾದ ವರ ಎಂದರೇನಮ್ಮ? ಹೊಟ್ಟೆಗೆ ಬಟ್ಟೆಗೆ ನೆಮ್ಮದಿಯಾಗಿದ್ದರೆ ಸಾಲದೇ?... ಹೆಣ್ಣು ಹುಡುಗಿಯರಿಗೆ ಸರಿಯಾದ ವಯಸ್ಸಿಗೆ ಮದುವೆ ಮಾಡಿ ಬಿಡಬೇಕು"[೬].

ವಿವಾಹಕ್ಕೆ ಅಂಗೀಕಾರ ಅವಶ್ಯಕ. ಆದ್ದರಿಂದ ಸಾಮಾಜಿಕ ಒಪ್ಪಿಗೆಯನ್ನು ಪಡೆಯಲು ಇದು ಸಂಸ್ಕಾರ ಪದ್ದತಿ ಸಂಪ್ರದಾಯ ಇತ್ಯಾದಿ ಪ್ರಮಾಣಬದ್ಧ ರೀತಿಗಳನ್ನು ಹೊಂದಿದೆ. ವಿವಾಹಗಳನ್ನು ಬಹು ವೈಭವಯುತವಾಗಿ ಅಥವಾ ಸರಳವಾದ ಕ್ರಮದಲ್ಲಿ ಆಚರಿಸಬಹುದು. ಒಂದು ವಿವಾಹ ಜರುಗಿತ್ತು. ಒಂದು ನೂತನ ಕುಟುಂಬ ಸ್ಥಾಪಿತವಾಯಿತು ಎಂಬುದನ್ನು ಬಹಿರಂಗಪಡಿಸಿ ಸಾಮಾಜಿಕ ಒಪ್ಪಿಗೆಯನ್ನು ಪಡೆಯಲೋಸುಗ ವಿವಾಹ ಸಮಾರಂಭ, ಭೋಜನ, ಮೆರವಣಿಗೆ ಮತ್ತಿತರ ಸಂಸ್ಕಾರಗಳನ್ನು ಏರ್ಪಡಿಸಲಾಗುತ್ತದೆ.

ಒಂದು ಸಮಾಜದ ಸದಸ್ಯರಿಗೆ ಯಾರು ಯಾರನ್ನು ಮದುವೆಯಾದರು ಎಂಬುದನ್ನು ತಿಳಿಯಪಡಿಸಲಾಗುತ್ತದೆ. ಆದ್ದರಿಂದ ಸಂಸ್ಕಾರವಿಲ್ಲದೆ ದಾಖಲು ಕಛೇರಿಯಲ್ಲಿ ರುಜು ಮಾಡುವುದರ ಮೂಲಕ ಮದುವೆಯಾಗುವಾಗಲೂ ಸಾಕ್ಷಿಗಳು ಇರಬೇಕಾದುದು ಅವಶ್ಯಕ. ಕೆಲವು ಸಲ ಪ್ರಾರ್ಥನೆ ಹಾಗೂ ಇತರೆ ಧಾರ್ಮಿಕ ವಿಧಿಗಳ ಮೂಲಕ ದೈವಿಕ ಒಪ್ಪಿಗೆಗಳನ್ನು ಪಡೆಯಲು ಯತ್ನಿಸಲಾಗುತ್ತದೆ. ಉದಾಹರಣೆಗೆ, ಹಿಂದೂಗಳಲ್ಲಿ ಕನ್ಯಾದಾನ ಪಾಣಿಗ್ರಹಣ, ಮಾಂಗಲ್ಯಧಾರಣೆ, ಹೋಮ, ಸಪ್ತಪದಿ ಇತ್ಯಾದಿ ವೈವಾಹಿಕ ಸಂಸ್ಕಾರಗಳಿಗೆ ಸಂಕೇತಾರ್ಥಕ ಪ್ರಾಮುಖ್ಯತೆ ಇದೆ.

ತರುಣ ಪೀಳಿಗೆಯ ದಂಪತಿಗಳು ವಿವಾಹದ ಹೊಸದರಲ್ಲಿ ಮಿತಿಮೀರಿದ ಉತ್ಸಾಹದಿಂದ ವರ್ತಿಸಿ ಕಾಲಕ್ರಮೇಣ ಮಾನಸಿಕ ಆಕರ್ಷಣೆಯನ್ನು ಕಳೆದುಕೊಂಡು ಬಹುಬೇಗ ಜೀವನದಲ್ಲಿಯೇ ನಿರಾಸಕ್ತರಾಗುವರೆಂಬುದರ ಚಿತ್ರಣವು ಸಹಜವಾಗಿ ಮೂಡಿಬಂದಿದೆ. ಗಂಡನ ಸಂಪಾದನೆಯು ಸಂಸಾರ ನಿರ್ವಹಣೆಗೆ ಸಾಕಾಗುವಂತಿದ್ದು, ನೆಮ್ಮದಿಯ ಜೀವನ ಸಾಗಿಸುವ ಅವಕಾಶವಿದ್ದರೂ ಕೇವಲ ಹವ್ಯಾಸಕ್ಕೋಸ್ಕರ ಉದ್ಯೋಗವನ್ನವಲಂಭಿಸಿ, ಉದ್ಯೋಗದ ನಿಜವಾದ ಅಗತ್ಯವಿರುವವರು ನಿರುದ್ಯೋಗಿಗಳಾಗಲು ಕಾರಣರಾಗುವಂಥ ವ್ಯಕ್ತಿಗಳ ಚಿತ್ರಣವು ಕಲ್ಯಾಣಿಯ ಪಾತ್ರದ ಮೂಲಕ ರೂಪುತಳೆದಿದೆ. ಈ ಸಮಸ್ಯೆಯನ್ನು ಬಗೆಹರಿಸುವ ಮಾರ್ಗವನ್ನು ರಾಮನಾಥನು ಕೈಗೊಂಡ ಕ್ರಮದ ಮೂಲಕ ಚಿತ್ರಿಸಿದ್ದಾರೆ. ಸ್ತ್ರೀಯರಿಗೆ ಆರ್ಥಿಕ ಸಾಮಾಜಿಕ ಹಾಗೂ ಔದ್ಯೋಗಿಕ ಸ್ವಾತಂತ್ರ್ಯದ ಅಗತ್ಯವಿರುವುದು ನಿಜವಾದರೂ, ಅದು ಎಲ್ಲಾ ಹೆಂಗಸರಿಗೂ ಆಜನ್ಮಸಿದ್ಧಹಕ್ಕೇನೂ ಅಲ್ಲವೆಂಬ ಅಂಶವನ್ನು ಇಲ್ಲಿ ಲೇಖಕಿಯು ಸ್ಪಷ್ಟವಾಗಿ ಎತ್ತಿ ತೋರಿಸಿದ್ದಾರೆ.

ಶ್ರೀಮಂತ ಕಾಫಿ ಪ್ಲಾಂಟರ್ ಅವರಿಗೆ ಒಬ್ಬಳೇ ಮಗಳು ಎಲ್ಲಾ ಆಸ್ತಿಗೂ ಅವಳೇ ಹಕ್ಕುದಾರಳೆಂದು ಭಾವಿಸಿದ ಯುವಕನೊಬ್ಬ ಅವಳೊಂದಿಗೆ ಪ್ರೇಮದ ನಾಟಕವಾಡುತ್ತಾನೆ. ಅವಳಿಗೊಬ್ಬ ತಮ್ಮ ಹುಟ್ಟಿ ಬರುತ್ತಾನೆ. ಇದರ ನಂತರ ಇವನ ವರ್ತನೆಯೇ ಬದಲಾಗುತ್ತದೆ. ತಾನು ಮದುವೆಯಾಗುತ್ತೇನೆಂದು ಹೇಳಿದ್ದೆಲ್ಲಾ ನಿಜವಲ್ಲ ಅನ್ನುತ್ತಾನೆ. ಈ ಮಧ್ಯೆ ಅವನು ಬಿದ್ದು ನಡೆಯಲಾಗದಂತಹ ಸ್ಥಿತಿ ತಲುಪುತ್ತಾನೆ. ಅಂದರೆ ಮತ್ತಷ್ಟು ದಿನ ಇವರ ಮನೆಯಲ್ಲೇ ಉಳಿಯಬೇಕಾಗುತ್ತದೆ. ನಾಯಕಿ ತನಗೆ ಮೋಸ ಮಾಡಿದವನು ಎಂಬುದನ್ನು ಮನಸ್ಸಿಗೆ ತಂದುಕೊಳ್ಳದೆ ಅವನ ಉಪಚಾರದಲ್ಲಿ ತೊಡಗುತ್ತಾಳೆ. ಆಗ ಅವಳ ಮನದ ಎತ್ತರ ಅವನಿಗೆ ತಿಳಿಯುತ್ತದೆ. ಮತ್ತೆ ಮದುವೆಯಾಗುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ನಾಯಕಿ ತಿರಸ್ಕರಿಸುತ್ತಾಳೆ. ತ್ರಿವೇಣಿಯವರ ಕಾದಂಬರಿ 'ಬೆಳ್ಳಿಮೋಡ'ದಲ್ಲಿ.

ವಿವಾಹ ಪತಿಪತ್ನಿಯರಿಗೆ ಹಾಗೂ ಅವರ ಮಕ್ಕಳಿಗೆ ಕೆಲವು ಹೊಸ ಹಕ್ಕು ಹಾಗೂ ಕರ್ತವ್ಯಗಳನ್ನು ನೀಡುತ್ತದೆ ಮತ್ತು ನಿಗಧಿಪಡಿಸುತ್ತದೆ. ಉದಾಹರಣೆಗೆ, ಪಿತೃಪ್ರಧಾನ ಕುಟುಂಬದಲ್ಲಿ ಪತ್ನಿ ಹಾಗೂ ಮಕ್ಕಳನ್ನು ರಕ್ಷಿಸುವುದು ಪತಿಯ ಕರ್ತವ್ಯವಾಗುತ್ತದೆ. ಆದರೆ ಪತ್ನಿ ಮತ್ತು ಮಕ್ಕಳು ಅವನಿಗೆ ವಿಧೇಯರಾಗಿರಬೇಕು. ಇಂದು ಈ ಹಕ್ಕು ಹಾಗೂ ಕರ್ತವ್ಯಗಳಲ್ಲಿ ಕೆಲವು ಗಮನಾರ್ಹವಾದ ಬದಲಾವಣೆಗಳಾಗಿವೆ. ಆದರೂ ಅವು ಮುಂದುವರಿಯುತ್ತಿದೆ ಮತ್ತು ಅವುಗಳಿಗೆ ಹೊಸ ಅರ್ಥಗಳನ್ನು ಸೇರಿಸಲಾಗಿದೆ. ವಿವಾಹ ದಂಪತಿಗಳಿಗೆ ಇರಬೇಕಾದ ಪರಸ್ಪರ ಬಾಂಧವ್ಯವನ್ನು ಹಾಗೂ ಅವರಿಗೂ ಅವರ ಸಂಬಂಧಗಳಿಗೂ ಮಕ್ಕಳಿಗೂ ಹಾಗೂ ಸಮಾಜಕ್ಕೂ ಇರುವ ಸಂಬಂಧವನ್ನು ವಿವರಿಸಿ ನಿಯಂತ್ರಿಸುತ್ತದೆ.

ಆರ್ಯಾಂಬರ 'ಸುಳಿ' ಕಾದಂಬರಿಯಲ್ಲಿ ಈ ಆರ್ಥಿಕ ಸ್ವಾತಂತ್ರ್ಯ ಬಯಸುವ ನಾಯಕಿ ಮದುವೆ ಬಂಧನವನ್ನು ತಾತ್ಕಾಲಿಕವಾಗಿ ನಿರಾಕರಿಸಿ ತನ್ನ ತಾಯಿ ಅಣ್ಣರ ವಿರೋಧದ ನಡುವೆ ಬ್ಯಾಂಕ್ ಉದ್ಯೋಗಿಯಾಗುತ್ತಾರೆ. ಸ್ವಂತ ಗಳಿಕೆ ಬದುಕನ್ನು ಬಿಚ್ಚುಗಣ್ಣಿನಿಂದ ನೋಡುವ ಕೆಚ್ಚು ಕೊಡುತ್ತದೆ. ತನ್ನೊಂದಿಗೆ ಹೆಚ್ಚು ಆತ್ಮೀಯತೆ ತೋರುವ ಸಹೋದ್ಯೋಗಿಯೆಡೆಗೆ ಆಕರ್ಷಣೆಯೂ ಉಂಟಾಗುತ್ತದೆ.

ಆಕರ್ಷಣೆ ಪ್ರೀತಿಯ ಘಟ್ಟ ಮುಟ್ಟಿದ ಬಳಿಕ ಆತ ವಿಚ್ಛೇದಿತನೆಂದು ತಿಳಿದು ಅದರ ಕಾರಣ ಅರಿತಾಗ ತನ್ನ ಪ್ರೀತಿಯಲ್ಲಿ ಕುಂದು ತೋರಲಾಗದೆ ಅವನನ್ನೇ ಮನೆಯವರ ವಿರೋಧದ ನಡುವೆಯೂ ವಿವಾಹ ಆಗುವ ಧೈರ್ಯವನ್ನು ತೋರುತ್ತಾಳೆ. ಅವರ ದಾಂಪತ್ಯ ಪಕ್ವಗೊಳ್ಳುವ ಕಾಲದಲ್ಲಿ ಗಂಡನ ಮತ್ತು ಆತನ ಮೊದಲನೇ ಹೆಂಡತಿಯ ಸಂಬಂಧ ಮತ್ತೆ ಮುಂದುವರಿದಿದೆಯಾ ಎಂಬ ಸಂಶಯದ ಸುಳಿಗೆ ಸಿಲುಕುತ್ತಾಳೆ. ತನ್ನ ಸಂಶಯಕ್ಕೆ ಪುಷ್ಟಿ ನೀಡುವ ಅನೇಕ ಘಟನೆಗಳಿಂದ ವಿಹ್ವಲಗೊಂಡು ತಾನೂ ವಿಚ್ಛೇದನ ಬಯಸುತ್ತಾಳೆ. ಹೇಳಬೇಕಾದ ಸತ್ಯವನ್ನು ಕಡೇ ಹಂತದವರೆಗೂ ಹೇಳಲಾರದೆ ತೊಳಲಾಡುವ ನಾಯಕ ಅಂತ್ಯದಲ್ಲಿ ಅವಳ ಸಂಶಯದ ಸುಳಿ ನಿರಾಧಾರವಾದುದೆಂದು ನಿರೂಪಿಸುತ್ತಾನೆ.

ಆದರೂ, ವಿವಾಹ ಪೂರ್ವದಲ್ಲಿ ನಾಯಕಿ ಕೈಗೊಳ್ಳುವ ದಿಟ್ಟ ನಿರ್ಧಾರಗಳು ತನ್ನ ಮಹಿಳಾ ಸಹೋದ್ಯೋಗಿಗಳೊಡನೆ ಪ್ರೀತಿ, ಪ್ರಣಯ, ವಿವಾಹ, ಸ್ತ್ರೀ ಸ್ವಾತಂತ್ರ್ಯ ಆರ್ಥಿಕ ಸ್ವಾತಂತ್ರ್ಯ ಇತ್ಯಾದಿಗಳ ಬಗೆಗೆ ಮುಕ್ತವಾಗಿ ಚರ್ಚಿಸುವ ರೀತಿ ತನ್ನ ಮೊದಲ ಪತ್ನಿ ವಿವಾಹಕ್ಕೆ ಮೊದಲೇ ಬೇರೊಬ್ಬನಲ್ಲಿ ಅನುರಕ್ತಳಾಗಿದ್ದಳೆಂದು, ಇನ್ನೂ ಕೂಡ ಆತನಿಗಾಗಿ ಜೀವ ಕೊಡಲು ಸಿದ್ಧಳಾಗಿದ್ದಳೆಂದು ತನ್ನನ್ನು ಮಲತಾಯಿಯ ಬಲವಂತದ ಹಿಡಿತಕ್ಕೆ ಸಿಲುಕಿ

ವಿವಾಹವಾದಳೆಂದು ತಿಳಿದಾಗ ಅವಳ ಬಗೆಗೆ ವಿಚ್ಛೇದನ ನೀಡಿ ಅವಳು ಪ್ರೀತಿಸಿದವನನ್ನು ಮದುವೆಯಾಗಲು ಸಹಾಯ ಮಾಡುವ ನಾಯಕನ ಹೃದಯವಂತಿಕೆ ನಾಯಕ ನಾಯಕಿಯರಿಬ್ಬರೂ ಪರಸ್ಪರ ಅರಿತು ಚರ್ಚೆ ಮಾಡಿ ಸಾಕಷ್ಟು ಆಲೋಚಿಸಿದ ನಂತರವೇ ವಿವಾಹವಾಗಲು ತೆಗೆದುಕೊಳ್ಳುವ ನಿರ್ಧಾರಗಳು ಇಂಥ ಕಡೆಯಲ್ಲಿ ವಿವಾಹದ ವ್ಯವಸ್ಥೆಯೇ ಸನ್ನಿವೇಶವನ್ನು ತೆರೆದಿಡುತ್ತದೆ. ವಿವಾಹ ಒಂದು ಮುಖ್ಯವಾದ ಸಂಸ್ಥೆಯಾಗಿರುವುದರಿಂದ ಮೂಲಭೂತವಾದ ಕಾರ್ಯಗಳನ್ನು ಮಾಡುತ್ತದೆ.

ವಿವಾಹ ಸಾರ್ವತ್ರಿಕವಾಗಿರುವ ಹಾಗೂ ಸಹಜವಾಗಿರುವ ಲೈಂಗಿಕ ಪ್ರವೃತ್ತಿಯನ್ನು ವ್ಯವಸ್ಥಿತಗೊಳಿಸುತ್ತದೆ. ಮತ್ತು ನಿಯಂತ್ರಿಸುತ್ತದೆ. ಈ ಪ್ರವೃತ್ತಿ ಪ್ರಾಣಿಗಳಲ್ಲಿ ತಾತ್ಕಾಲಿಕವಾಗಿರುತ್ತದೆ. ಆದರೆ ಇದು ಮಾನವರಲ್ಲಿ ಸರ್ವದಾ ಚುರುಕಾಗಿರುತ್ತದೆ. ಆದ್ದರಿಂದ ಇದನ್ನು ನಿಯಂತ್ರಿಸಬೇಕು ಮತ್ತು ಮಿತವಾದ ರೀತಿಯಲ್ಲಿ ತೃಪ್ತಿಪಡಿಸಬೇಕು. ಇಲ್ಲದಿದ್ದರೆ ಇದು ವ್ಯಕ್ತಿಯನ್ನು ನಾಶಪಡಿಸುತ್ತದೆ. ಅತೀವವಾದ ಲೈಂಗಿಕ ತೃಪ್ತಿ ಅಥವಾ ಸುಖಾನುಭವವನ್ನು ತ್ಯಜಿಸಬೇಕು. ಕಾರಣ ಅದು ವ್ಯಕ್ತಿಯ ಮೇಲೆ ಕೆಟ್ಟ ಪರಿಣಾಮವನ್ನು ಬೀರಿ ಅವರ ಶಾರೀರಿಕ, ಮಾನಸಿಕ ಹಾಗೂ ನೈತಿಕ ಆರೋಗ್ಯವನ್ನು ಹಾಳು ಮಾಡುತ್ತದೆ ಮತ್ತು ಹೀಗೆ ಸಮಾಜವನ್ನು ನಾಶ ಮಾಡುತ್ತದೆ.

ಏಕೆಂದರೆ ವ್ಯಕ್ತಿಗಳು ಸಮಾಜದ ಅವಿಭಾಜ್ಯವಾದ ಅಂಗಗಳಾಗಿರುತ್ತಾರೆ. ಇಷ್ಟು ಮಾತ್ರವಲ್ಲದೆ ಲೈಂಗಿಕ ಪ್ರವೃತ್ತಿಯೇ ಗುರಿಯಲ್ಲ ಅದು ಒಂದು ಗುರಿಸಾಧನೆಗಾಗಿ ಇರುವ ಮಾಧ್ಯಮ ಮಾತ್ರ. ಮಾನವ ಕುಲದ ರಕ್ಷಣೆ ಮುನ್ನಡೆಯೇ ಗುರಿ. ಸಮಾಜಕ್ಕೆ ಒಳ್ಳೆಯ ಸದಸ್ಯರನ್ನು ಸೃಷ್ಟಿಸಬೇಕಾದರೆ ಈ ಪ್ರವೃತ್ತಿಯನ್ನು ನಿಯಂತ್ರಿಸಬೇಕು. ಆದ್ದರಿಂದ ಸಮಾಜ ಅದನ್ನು ವಿವಾಹ ಸಂಸ್ಥೆಯ ಮೂಲಕ ನಿಯಂತ್ರಿಸುತ್ತದೆ.

'ಕೀಲುಗೊಂಬೆ' ಕಾದಂಬರಿಯು ಸ್ತ್ರೀಯನ್ನು ಪುರುಷವರ್ಗವು ಲೈಂಗಿಕವಾಗಿ ಹೇಗೆ ಶೋಷಿಸುತ್ತವೆ ಅಥವಾ ದೌರ್ಜನ್ಯವೆಸಗುತ್ತದೆ ಎಂಬುದನ್ನು ಸೀತಾಳ ಪಾತ್ರ ಹೇಳುತ್ತದೆ. ೨೫ ವರ್ಷದ ಶಿಕ್ಷಕನಿಗೆ ಸೀತಾಳನ್ನು ಕೊಟ್ಟು ಮದುವೆಯನ್ನು ಮಾಡುತ್ತಾರೆ. ವಿದ್ಯಾವಂತನಾಗಿದ್ದರೂ ಸಹಾ ಅವನು ಬೆಳೆದು ಬಂದ ವ್ಯವಸ್ಥೆಯಲ್ಲಿ ಅವನಿಗೆ ಹೆಣ್ಣೆಂದರೆ ಸಂಬಳ ನೀಡದೆ ದುಡಿಯುವ ಆಳು ಹಾಗೂ ಲೈಂಗಿಕ ತೃಷೆ ತೀರಿಸಲು ಇರುವ ಒಂದು ವಸ್ತು ಮಾತ್ರ. ಇವನ ಅತೀ ಲೈಂಗಿಕ ತೃಷೆಯಿಂದಾಗಿ ಅವಳಿಗೆ ಮೇಲಿಂದ ಮೇಲೆ ಗರ್ಭಪಾತಗಳು ಆದರಿಂದಾಗಿ ಅವಳಲ್ಲಿ ಉಂಟಾದ ನಿಶ್ಯಕ್ತಿ ಇದರ ಮಧ್ಯೆ ಒಂದು ಗಂಡು ಮುಗುವಿಗೆ ಜನ್ಮವೀಯುತ್ತಾಳೆ.

ಇದು ಅವಳ ಬದುಕಿನ ಆಶಾಕಿರಣವಾಗುತ್ತದೆ. ವಯಸ್ಸಾದಂತೆ ಮಗ ಮಧುವಿಗೆ ತನ್ನ ತಂದೆಯು ನನ್ನ ತಾಯಿಗೆ ಕೊಡುವ ಲೈಂಗಿಕ ಹಿಂಸೆ ಅರಿವಿಗೆ ಬರುತ್ತದೆ. ಇದನ್ನು ಮಗ ಪ್ರತಿಭಟಿಸುತ್ತಾನೆ. ತಂದೆ ಮಕ್ಕಳ ಘರ್ಷಣೆಯನ್ನು ಸಹಿಸಿಕೊಳ್ಳಲಾರದಷ್ಟು ಶಕ್ತಿ ಇರದಿದ್ದ ಸೀತಾಳ ಬದುಕು ಅಂದೇ ಕೊನೆಯಾಗುತ್ತದೆ.

'ದೇವ ಮಾನವ' ಕಾದಂಬರಿಯಲ್ಲಿ ಸೀತಾಳ ಪಾತ್ರದ ಮೂಲಕ ಆರ್ಯಾಂಬ ದಾಂಪತ್ಯ ಜೀವನದ ಬಗ್ಗೆ ಹೇಳುತ್ತಾ ಪತಿ ಪಶುವಾಗಿ ದಾನವನಂತೆ ವರ್ತಿಸಿ, ಕೈಹಿಡಿದ ಪತ್ನಿಗೆ ನರಕ ಜೀವನ ದರ್ಶನ ಮಾಡಿಸಿದರೆ ಅವನನ್ನು ದೈವ ಎನ್ನುವ ನಾಲಿಗೆಗೆ ಹುಳು ಬಿದ್ದೀತು. ಹಿಂದೂ ಧರ್ಮದ ಪ್ರಕಾರ ವಿವಾಹ ಒಂದು ಸಂಸ್ಕಾರವಷ್ಟೆ. ಅದು ಧಾರ್ಮಿಕ ಕರ್ಮ, ದಾಂಪತ್ಯ ಜೀವನದಲ್ಲಿ ಪ್ರೀತಿ ಇಲ್ಲದೆ ಹೋದರೆ ಅದೊಂದು ರೀತಿಯ ವ್ಯಭಿಚಾರವೆಂದೇ ನನ್ನ ಸಿದ್ಧಾಂತ. ನನ್ನದೂ ಇದೇ ಬಗೆಯ ದಾಂಪತ್ಯವೆಂದು ಹೇಳಿಕೊಳ್ಳಲು ನಾನು ಎಂದು ಹಿಂತೆಗೆಯುವುದಿಲ್ಲ. ಕಟ್ಟಿಕೊಂಡ ಗಂಡನನ್ನು ಬಿಟ್ಟುಹೋಗುವ ಧೈರ್ಯವಿಲ್ಲದಿದ್ದರೂ ಇವರನ್ನು ಪ್ರೀತಿಸುವುದು, ಸದ್ಭಾವನೆಗಳಿಂದ ನೋಡುವುದು ನನ್ನಿಂದ ಸಾಧ್ಯವಾಗಲಿಲ್ಲ ಎನ್ನುವ ಮೂಲಕ ನರಸಿಂಹನ ಕ್ರೂರ ಸ್ವಭಾವವನ್ನು ಚಿತ್ರಿಸುತ್ತಾರೆ.

ಸಂಬಂಧಗಳನ್ನು ವ್ಯವಸ್ಥಿತಗೊಳಿಸುತ್ತದೆ ಕೆಲವು ನಿಯಮ ಹಾಗೂ ನಿಷೇಧಗಳ ಮೂಲಕ ಇದು ಪತಿ ಪತ್ನಿಯರಿಗೆ ಹಾಗೂ ಅವರಿಗೆ ಮತ್ತು ಇತರರಿಗೂ ಇರಬೇಕಾದ ಸಂಬಂಧಗಳನ್ನು ನಿರ್ಧರಿಸುತ್ತದೆ. ಪ್ರತಿ ಸಮಾಜದಲ್ಲೂ ಪತಿ ಅಥವಾ ಪತ್ನಿ ಅನ್ಯ ವ್ಯಕ್ತಿಯೊಂದಿಗೆ ಲೈಂಗಿಕ ಸಂಬಂಧ ಬೆಳೆಸುವುದನ್ನು ತಡೆಗಟ್ಟುವ ಗಮ್ಯ ಗಮನ ವಿಧಿ ಅಥವಾ ನಿಬಂಧನೆಗಳು ಎಂದು ಕರೆಯಲಾದ ಕೆಲವು ಸಾಮಾನ್ಯ ನಿಯಮಗಳಿರುತ್ತದೆ. ಉದಾಹರಣೆಗೆ, ಒಬ್ಬ ವಿವಾಹಿತ ವ್ಯಕ್ತಿಗೆ ಅವನ ಅಥವಾ ಅವಳ ಬಾಳ ಸಂಗಾತಿಯಲ್ಲದ ಅನ್ಯ ವ್ಯಕ್ತಿಯೊಡನೆ ಇರುವ ಲೈಂಗಿಕ ಸಂಬಂಧಗಳನ್ನು ವ್ಯಭಿಚಾರ ಎಂದು ಕರೆಯಲಾಗುತ್ತದೆ. ಅದೇ ರೀತಿ ತಂದೆ ಮತ್ತು ಮಗಳ ತಾಯಿ ಮಗನ ಅಥವಾ ಅಣ್ಣ ತಂಗಿ ಅಕ್ಕ ತಮ್ಮನ ಲೈಂಗಿಕ ಸಂಬಂಧಗಳಿಗೆ ಅಗಮ್ಯ ಗಮನವೆಂದು ಹೆಸರನ್ನು ಕೊಡಲಾಗಿದೆ. ಈ ತರಹದ ಸಂಬಂಧಗಳನ್ನು ಯಾವ ಸಮಾಜದಲ್ಲಿಯೂ ಒಪ್ಪಿಕೊಳ್ಳಲಾಗುವುದಿಲ್ಲ.

ಆರ್ಯಾಂಬರ 'ಗುರಿ'ಯಲ್ಲಿ ಮೀನ ಅವಿವಾಹಿತ ಯುವತಿ, ಗುಣವಂತೆ, ರೂಪವಂತೆ, ದಿಟ್ಟತನದವಳು ಇಂತಹ ಸ್ನೇಹಪೂರ್ಣ ಯುವತಿ, ಜಯರಾಮುವಿನ ಜೀವನದಲ್ಲಿ ಪ್ರವೇಶಿಸಿ ಹಳ್ಳಿಯಿಂದ ಪಟ್ಟಣಕ್ಕೆ ಬಂದು ಪಟ್ಟಣಿಗನಾಗಿದ್ದ ಜಯರಾಮುವನ್ನು ಪುನಃ ಹಳ್ಳಿಯ

ದಾರಿಯತ್ತ ನಡೆಸುತ್ತಾಳೆ. ಮೀನ ಜಯರಾಮು ರಿಜಿಸ್ಟರ್ ಮುದುವೆಯಾಗುತ್ತಾರೆ. ಜಯರಾಮುವಿನ ತಂದೆ ಪುಟ್ಟಯ್ಯರವರು ತೀರಿಕೊಂಡಾಗ ಜಯರಾಮು ಮೀನಳನ್ನು ಹಳ್ಳಿಗೆ ಸ್ನೇಹಿತೆಯಂತೆ ಕರೆದುಕೊಂಡು ಹೋಗುವ ಮೂಲಕ ಪುನಃ ಓದುಗರನ್ನು ಹಳ್ಳಿಯತ್ತ ಲೇಖಕಿ ಕೊಂಡೊಯ್ಯುತ್ತಾರೆ.

ಹಳ್ಳಿಯ ಜೀವನ ಮೀನಳನ್ನು ಆಕರ್ಷಿಸುತ್ತದೆ. ಮನೆ ಮಂದಿಗೆಲ್ಲಾ ಮೀನ ಮೆಚ್ಚುಗೆ ಆಗುತ್ತಾಳೆ. ಅದರಲ್ಲೂ ಅವಳು ಜಯರಾಮುವಿನ ಮನೆಯವರೆಲ್ಲರ ನಡುವೆ ಈ ಬಗ್ಗೆ ಚರ್ಚೆ ಆದಾಗ ಆಡಿದ ಮಾತು ಎಲ್ಲರಿಗೂ ಮೆಚ್ಚುಗೆಯಾಗುತ್ತದೆ. ನಗರಗಳಲ್ಲಿ ದುಡಿಯೋದು ನಾವೆಲ್ಲ ಹೊಟ್ಟೆಪಾಡಿಗಾಗಿ ಕೇವಲ ಜೀವನ ನಿರ್ವಹಣೆಗಾಗಿ ನೀವು ಕಲಿತಿರುವ ವಿದ್ಯೆಯನ್ನೇ ನಿಮ್ಮ ತೋಟದ ಪ್ರಗತಿಗಾಗಿ, ಹಳ್ಳಿಯವರ ಸುಧಾರಣೆಗಾಗಿ ಉಪಯೋಗಿಸಿದರೆ ನೀವು ಕಲಿತ ವಿದ್ಯೆ ಇನ್ನೂ ಹೆಚ್ಚು ಸಾರ್ಥಕವಾಗುತ್ತದೆ ಎಂದು ಮೀನ ಹೇಳುವ ಮಾತು ಅರ್ಥಪೂರ್ಣವಾಗಿದೆ.

'ಯೋಚನೆ ಮಾಡಬೇಡಿ, ನಾನು ನಿಮ್ಮ ಮಗನ ಮನಸ್ಸು ಬದಲಾಯಿಸೋ ಹಾಗೆ ಮಾಡ್ತೀನಿ ಎಂಬ ಮೀನಾಳ ದೃಢವಾದ ಮಾತು ಅವಳ ಪಾತ್ರವನ್ನು ಮತ್ತಷ್ಟು ಗಟ್ಟಿಯಾಗಿಸುತ್ತದೆ ಆಡಿದ್ದನ್ನು ನಡೆಸುವ ಚಾತುರ್ಯವುಳ್ಳ ಮೀನ ಜಯರಾಮುವಿನ ಮನೆಯವರ ಮನಸ್ಸು ಗೆದ್ದು ಅವರಿಬ್ಬರೂ ಹಳ್ಳಿಯಲ್ಲೇ ಎಲ್ಲರ ಸಮ್ಮುಖದಲ್ಲಿ ಪುನಃ ಸಾಂಪ್ರದಾಯಿಕವಾಗಿ ಮದುವೆ ಎಂಬ ಪವಿತ್ರ ಬಂಧನದ ಗಂಟು ಮತ್ತಷ್ಟು ಗಟ್ಟಿಗೊಳ್ಳುತ್ತದೆ.

ವಿವಾಹದ ಮತ್ತೊಂದು ಮುಖ್ಯವಾದ ಕಾರ್ಯವೆಂದರೆ ಇದು ಸಂತಾನೋತ್ಪತ್ತಿಗೆ ಸಾಕಷ್ಟು ಅವಕಾಶಗಳನ್ನು ಉಂಟುಮಾಡಿಕೊಡುತ್ತದೆ ಮತ್ತು ಹೀಗೆ ಮಾನವ ಕುಲ ಅಳಿಯದೆ ಉಳಿದು ಮುಂದುವರಿಯಲು ಸಹಾಯ ಮಾಡುತ್ತದಲ್ಲದೆ ಒಂದು ನೂತನ ಕುಟುಂಬವನ್ನು ಸ್ಥಾಪಿಸಲು ಮೂಲಾಧಾರವಾಗುತ್ತದೆ. ರಕ್ತ ಸಂಬಂಧಿಗಳ ಆಧಾರದ ಮೇಲೆ ಇದು ವಂಶ ಶ್ರೇಣಿ, ಕುಲ-ಗೋತ್ರ, ಪಿತ್ರಾರ್ಜಿತ ಮತ್ತು ಹೊಸದಾಗಿ ಹುಟ್ಟಿದ ಮಕ್ಕಳ ಉತ್ತರಾಧಿಕಾರವನ್ನು ನಿಶ್ಚಯಿಸಿ ಕ್ರಮಪಡಿಸುತ್ತದೆ. ಇದು ಸಮಾಜದಲ್ಲಿ ವ್ಯಕ್ತಿಯ ಸ್ಥಾನವನ್ನು ಉತ್ತಮಪಡಿಸುತ್ತದೆ. ಉದಾಹರಣೆಗೆ, ಕೊರಿಯನ್ನರಲ್ಲಿ ಮತ್ತು ಹಿಂದುಗಳಲ್ಲಿ ವ್ಯಕ್ತಿ ಮದುವೆಯಾದ ನಂತರ ಗಣ್ಯನಂತಾಗುತ್ತಾನೆ. ವಿವಾಹವಾಗದೆ ಪುರುಷ ಅಥವಾ ಸ್ತ್ರೀ ಅರ್ಧ ಪುರುಷ ಅಥವಾ ಅರ್ಧ ಸ್ತ್ರೀಯಾಗಿ ಇರುತ್ತಾರೆ. ಆದಿಯಾಗಿ ಸಮಾಜಗಳಲ್ಲಿ ಒಬ್ಬ ವ್ಯಕ್ತಿಗೆ ಎಷ್ಟು ಪತ್ನಿಯರಿದ್ದಾರೆ ಎಂಬುದರ ಮೇಲೆ ಅವನ ಸ್ಥಾನಮಾನಗಳನ್ನು ನಿರ್ಧರಿಸಲಾಗುತ್ತದೆ.

ಮೈಸೂರಿನಲ್ಲಿ ವ್ಯಾಸಂಗ ನಡೆಸಿ ಪದವೀಧರನಾದ ಮೋಹನನು ವಿದೇಶ ವ್ಯಾಸಂಗಕ್ಕೆ ಶಿಫಾರಸ್ಸು ಪಡೆಯಲು ಚಿಕ್ಕಮಗಳೂರಿನ ಸಮೀಪವಿದ್ದ ಶ್ರೀಯುತ ಸದಾಶಿವರಾಯರ ಮನೆಗೆ ಬರುತ್ತಾನೆ. ಇಲ್ಲಿ ರಾಯರ ಮಗಳು ಇಂದಿರೆಯ ಪರಿಚಯವಾಗುತ್ತದೆ. ಇವನು ಬಂದ ಕೆಲಸ ಕೈಗೂಡದೆ ಹಿಂತಿರುಗುತ್ತಾನೆ.

ಮೋಹನನ ರೂಪ, ಗುಣ ಹಾಗೂ ವಿದ್ಯೆಯನ್ನು ನೋಡಿ ಮೆಚ್ಚಿದ ರಾಯರ ಹೆಂಡತಿ ಲಲಿತಮ್ಮನಿಗೆ ಇವನನ್ನೇ ಅಳಿಯನನ್ನಾಗಿ ಮಾಡಿಕೊಳ್ಳುವ ಹಂಬಲ, ಆದರೆ ರಾಯರಿಗೇಕೋ ಇದು ಇಷ್ಟವಿರುವುದಿಲ್ಲ. ಹೆಂಡತಿಯ ಒತ್ತಾಯಕ್ಕೆ ಸಮ್ಮತಿಸುತ್ತಾರೆ. ಮೋಹನನೊಂದಿಗೆ ಇಂದಿರೆಯ ಮದುವೆ ಗೊತ್ತಾಗುತ್ತದೆ. ಭಾವೀ ದಂಪತಿಗಳು ಏಕಾಂತದಲ್ಲಿ ಸಂಧಿಸಿ ಪರಸ್ಪರ ಸಲ್ಲಾಪ ನಡೆಸಿ ಹರ್ಷಿಸುತ್ತಾರೆ. ಇಂದಿರೆಯು ಮೋಹನನ ಅಪೇಕ್ಷೆಯಂತೆ ಅವನ ವಿದೇಶ ವ್ಯಾಸಾಂಗದ ನಂತರವೇ ವಿವಾಹವಾಗಲು ಸಮ್ಮತಿಸುತ್ತಾಳೆ.

ಮೋಹನನನ್ನು ಸದಾಶಿವರಾಯರು ಸ್ವಂತ ಖರ್ಚಿನಲ್ಲಿ ಅಮೆರಿಕಾಗೆ ಕಳಿಸುತ್ತಾರೆ. ನಲವತ್ತೇಳರ ಇಳಿವಯಸ್ಸಿನಲ್ಲಿ ಲಲಿತಮ್ಮ ಪುನಃ ಗರ್ಭಿಣಿಯಾಗುತ್ತಾರೆ. ದುರ್ಬಲರಾಗಿದ್ದ ಈಕೆಯು ಏಳನೆಯ ತಿಂಗಳಿಗೆ ಗಂಡು ಮಗುವಿಗೆ ಜನ್ಮ ನೀಡುತ್ತಾರೆ. ಇಂದಿರಳಿಗೆ ತಮ್ಮನೊಬ್ಬನು ಹುಟ್ಟಿದ ಸಂಗತಿಯು ಮೋಹನನಿಗೆ ತಲುಪುತ್ತದೆ. ಈ ಸುದ್ದಿಯೊಂದಿಗೆ ತನ್ನ ಸಂತೋಷ ಸೂಚಿಸಿದ ಅವನು ಬಹಳ ಸಂಕ್ಷಿಪ್ತವಾಗಿ ಮರುಪತ್ರ ಬರೆಯುತ್ತಾನೆ. ಅನಾರೋಗ್ಯಕ್ಕೆ ಒಳಗಾದ ಲಲಿತಮ್ಮನು ಇಂದಿರಾಳ ವಿವಾಹಕ್ಕೆ ಮೊದಲೇ ಕಾಲವಾಗುತ್ತಾಳೆ. ತನ್ನ ವಿದ್ಯಾಭ್ಯಾಸ ಪೂರೈಸಿದ ಮೋಹನನು ಭಾರತಕ್ಕೆ ಹಿಂತಿರುಗುತ್ತಾನೆ. ಇವನನ್ನು ಎದುರುಗೊಳ್ಳಲು ರಾಯರೊಂದಿಗೆ ಇಂದಿರಳೂ ರೈಲ್ವೆ ನಿಲ್ದಾಣಕ್ಕೆ ಬಂದಿರುತ್ತಾಳೆ.

ರೈಲಿನಿಂದಿಳಿದ ಮೋಹನನನ್ನು ನೋಡಿದೊಡನೆಯೇ ಅವನ ಬಗೆಗೆ ಏನೋ ಅವ್ಯಕ್ತವಾದ ನಿರಾಸಕ್ತಿಯುಂಟಾಗುತ್ತದೆ. ಎಲ್ಲರೂ ಬೆಳ್ಳಿಮೋಡಕ್ಕೆ ಬರುತ್ತಾರೆ. ಅಂದು ಸಂಜೆ ಇಂದಿರಳೊಂದಿಗೆ ತೋಟದಲ್ಲಿ ತಿರುಗಾಡಲು ಹೋಗಿದ್ದ ಮೋಹನನು ತಾನು ಅವಳನ್ನು ವಿವಾಹವಾಗಲು ಅಪೇಕ್ಷೆ ಪಡದಿರುವ ವಿಚಾರವನ್ನು ತಿಳಿಸುತ್ತಾನೆ. ಇವನ ಮನೋಭಾವವನ್ನು ಊಹಿಸಿದ ಇಂದಿರೆಯು ನಿರಾಶಳಾಗುತ್ತಾಳೆ. ಈ ಸನ್ನಿವೇಶದಲ್ಲಿ ಅವಳಿಂದ ಪ್ರತಿಭಟನೆ ಹಾಗೂ ರೋಷವನ್ನು ನಿರೀಕ್ಷಿಸಿದ್ದ ಮೋಹನನು ಅವಳ ಮೌನವನ್ನು ಗಮನಿಸಿ ಮಾತನಾಡಲು ಪ್ರಯತ್ನಿಸುತ್ತಾನೆ. ಇವನೊಂದಿಗೆ ಮಾತನಾಡಲು ಇಚ್ಛಿಸದ ಇಂದಿರೆಯು ಮನೆಯ ಕಡೆ ಸಾಗುತ್ತಾಳೆ. ಅವಳನ್ನು ಹಿಂಬಾಲಿಸಿ ಬಂದ ಮೋಹನನು ಆಕಸ್ಮಿಕವಾಗಿ ಇಪ್ಪತ್ತೈದು ಅಡಿಗಳ ಹಳ್ಳ ಒಂದಕ್ಕೆ ಬೀಳುತ್ತಾನೆ. ಗಾಯಗೊಂಡ ಇವನಿಗೆ ಇಂದಿರಳ ಮನೆಯಲ್ಲಿ ಉಪಚಾರ ನಡೆಯುತ್ತದೆ.

ಇಂದಿರಾಳ ಮನೆಯಲ್ಲಿ ಆಶ್ರಯ ಪಡೆದಿದ್ದ ಅವಧಿಯಲ್ಲಿ ಮೋಹನನ ಮನೋಭಾವವೇ ಬದಲಾಗಿ ಅವಳನ್ನು ವಿವಾಹವಾಗುವ ನಿರ್ಧಾರವನ್ನು ತಿಳಿಸುತ್ತಾನೆ. ಆದರೆ, ಇಂದಿರಾಳು ಒಪ್ಪುವುದಿಲ್ಲ. ಈ ವೇಳೆಗೆ ಮೋಹನನಿಗೆ ಬೊಂಬಾಯಿಯಲ್ಲಿ ಕೆಲಸ ಸಿಗುತ್ತದೆ. ಮದುವೆಯ ಬಗ್ಗೆ ಪ್ರಸ್ತಾಪಿಸಿದ ರಾಯರಿಗೆ ನಾನು ಅವರನ್ನು ಮದುವೆಯಾಗಲಾರೆ ಎಂದು ತಿಳಿಸುತ್ತಾಳೆ, ಇಂದಿರೆಯ ಯಾವ ವಿಚಾರವನ್ನೂ ಅರಿಯದ ಸದಾಶಿವರಾಯರಿಗೆ ಇದರಿಂದ ಆಶ್ಚರ್ಯವಾಗುತ್ತದೆ. ಮೋಹನನನ್ನು ಅಗಲಲಿದ್ದ ಇಂದಿರೆಯು ತನ್ನ ಪಾಲಿನ ಬೆಳ್ಳಿಯೆಲ್ಲಾ ಕರಗಿ ಮೋಡ ಮಾತ್ರ ಉಳಿದಿದೆ ಎಂದು ವಿಷಾದ ಪಡಿಸುತ್ತಾಳೆ.

ಪಾರಂಪಾರಿಕ ವಿವಾಹದ ಚೌಕಟ್ಟಿನಲ್ಲಿ ಅಡಗಿರುವ ಅಸೀಮ ಕ್ರೌರ್ಯವನ್ನು ಸಫಲವಾಗಿ ದಾಖಲಿಸುವ ಕಾದಂಬರಿ 'ಕೀಲುಗೊಂಬೆ' ಮುಖ್ಯ ಪಾತ್ರ ಸೀತಾ ಕೆಳಮಧ್ಯಮ ವರ್ಗದ ಬಡ ತಂದೆತಾಯ್ಗಳ ಮಗಳು ತನ್ನ ವಯಸ್ಸಾದ ಅಜ್ಜಿಯ ಒತ್ತಾಯದಿಂದಾಗಿ ತಂದೆ ಸೀತಾ ಇನ್ನೂ ಹತ್ತು ದಾಟದ ಹುಡುಗಿಯಾಗಿರುವಾಗಲೇ ಅವಳಿಗೆ ಗಂಡು ನೋಡಲು ಪ್ರಾರಂಭಿಸುತ್ತಾನೆ. 'ಯೋಗ್ಯ' ವರನಿಗೆ ಬೇಕಾದ ವರದಕ್ಷಿಣೆ ಕೊಡಲು ಸಾಧ್ಯವಿರದ ಅವನಿಗೆ ವರನ್ವೇಷಣೆಯಲ್ಲಿ ಮತ್ತೆ ಮತ್ತೆ ಅನೇಕ ವಿಧದ ಅಪಮಾನವನ್ನು ಸಹಿಸಬೇಕಾಗುತ್ತದೆ. ಕೊನೆಗೆ ೨೫ ವರ್ಷದ ಹೈಸ್ಕೂಲ್ ಶಿಕ್ಷಕ ನರಸಿಂಹಯ್ಯನೊಡನೆ ಸೀತಾಳ ಮದುವೆಯನ್ನು ನಿಶ್ಚಯಿಸುತ್ತಾನೆ.

ಸಾಕಷ್ಟು ಸುಶಿಕ್ಷಿತನಾಗಿದ್ದರೂ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಬೆಳೆದ ನರಸಿಂಹಯ್ಯನಿಗೆ ಹೆಂಡತಿಯೆಂದರೆ ಸಂಬಳ ಬೇಡದೆ ದಿನದಲ್ಲಿ ದುಡಿಯುವ ಕೆಲಸದಾಳು ಮತ್ತು ರಾತ್ರಿಯಲ್ಲಿ ಸದಾ ಸಿದ್ಧವಿರುವ ವೇಶ್ಯೆ. ನಿಷೇಕಪ್ರಸ್ತದ ರಾತ್ರಿ ನರಸಿಂಹಯ್ಯನ ಮೃಗೀಯ ವರ್ತನೆಯಿಂದಾಗಿ ಸಂಭೋಗವೆಂದರೆ ಅತೀವ ತಾಳ್ಮೆಯಿಂದ ಸಹಿಸಬೇಕಾದ ಒಂದು ಕಠಿಣ ಶಿಕ್ಷೆಯೆಂದು ಸೀತಾ ಭಾವಿಸುವಂತಾಗುತ್ತದೆ.

ಗಂಡನ ಎಲ್ಲೆಯಿಲ್ಲದ ಲೈಂಗಿಕ ತೃಷೆಯಿಂದಾಗಿ ಅನೇಕ ಸಲ ಗರ್ಭಪಾತವನ್ನನುಭವಿಸುವ ಸೀತಾ ಕೊನೆಗೆ ಮಧುವಿಗೆ ಜನ್ಮ ನೀಡುತ್ತಾಳೆ. ಬಹುಬೇಗ ಅವಳು ಅಸ್ಥಿಪಂಜರದಂತಾಗಿ, ಆಸ್ಪತ್ರೆಗೆ ಆಗಿಂದಾಗ್ಗೆ ಹೋಗಿ ಅಲ್ಲಿ ಸ್ವಲ್ಪ ಕಾಲವಿದ್ದು, ಚೇತರಿಸಿಕೊಂಡ ನಂತರ ಮನೆಗೆ ಮರಳುವುದು ಅವಳ ಬದುಕಿನ ನಿಯತಕ್ರಮವಾಗುತ್ತದೆ. ಇಂತಹ ಕತ್ತಲೆಯಲ್ಲಿಯೂ ಅವಳಿಗಿರುವ ಒಂದು ಆಶಾಕಿರಣವೆಂದರೆ ಸದೃಢವಾಗಿ ಬೆಳೆಯುತ್ತಿರುವ ತನ್ನ ತಾಯಿಯನ್ನು ತುಂಬಾ ಪ್ರೀತಿಸುವ ಅವಳ ಮಗ ಮಧು. ವಯಸ್ಸಾದಂತೆಲ್ಲಾ ಮಧುವಿಗೆ ತನ್ನ ತಂದೆಯಿಂದ ತಾಯಿಯ ಮೇಲಾಗುತ್ತಿರುವ ಕ್ರೌರ್ಯದ ಅರಿವಾಗುತ್ತದೆ. ಪರಿಣಾಮ ದಿನಗಳೆದಂತೆ ಅವನು ತಂದೆಯನ್ನು ಹೆಚ್ಚು ಹೆಚ್ಚು ದ್ವೇಷಿಸಲು ಪ್ರಾರಂಭಿಸುತ್ತಾನೆ.

ಒಮ್ಮೆ ದೀರ್ಘಕಾಲ ಆಸ್ಪತ್ರೆಯಲ್ಲಿದ್ದ ನಂತರ ಮನೆಗೆ ಮರಳುವಾಗ ಇನ್ನೊಂದು ಗರ್ಭಧಾರಣೆ ಮಾರಕವಾಗಬಹುದೆಂದು ವೈದ್ಯರು ಸೀತಾಳಿಗೆ ಎಚ್ಚರಿಕೆ ನೀಡುತ್ತಾರೆ. ಆದರೆ, ಮನೆಗೆ ಬಂದ ಸೀತಾ ಕೂಡಲೇ ಮತ್ತೆ ನರಸಿಂಹಯ್ಯ ಲೈಂಗಿಕ ಸುಖಕ್ಕಾಗಿ ಅವಳನ್ನು ಬಲತ್ಕರಿಸುತ್ತಾನೆ. ಅವರಿಬ್ಬರ ಕೂಗಾಟದಿಂದ ಎಚ್ಚೆತ್ತ ಮಧು ತನ್ನ ತಾಯಿಯ ಎಲ್ಲಾ ಕಷ್ಟ ಕಾರ್ಪಣ್ಯಗಳಿಗೂ ಅವನೇ ಕಾರಣವೆಂದು ತಂದೆಯನ್ನು ಪ್ರತಿಭಟಿಸುತ್ತಾನೆ. ಮೊದಲೇ ದೈಹಿಕವಾಗಿ ದುರ್ಬಲಳಾದ ಸೀತಾ ಈ ತಂದೆ ಮಕ್ಕಳ ತೀವ್ರ ಘರ್ಷಣೆಯನ್ನು ತಾಳಲಾರದೆ ಕುಸಿದು ಬಿದ್ದು ತನ್ನ ಬದುಕನ್ನು ಕೊನೆಗಾಣಿಸುತ್ತಾಳೆ.

ವಿವಾಹದ ವ್ಯವಸ್ಥೆಯಲ್ಲಿ ಹೆಂಗಸಿಗೆ ಗಂಡನೇ ದೇವರು, ಗಂಡನ ಸೇವೆ ಮಾಡುವುದೇ ಹೆಂಗಸಿನ ಧರ್ಮ. ಪತಿಯೇ ಪರದೈವ ಇತ್ಯಾದಿ ಮದುವೆಯಾದ ನಂತರ ಗಂಡನ ಬಳಿಗೆ ರಾತ್ರಿ ಹೋಗಲು ತುಂಬಾ ಹೆದರುತ್ತಿದ್ದ ಸೀತೆಗೆ ಅವಳ ತಾಯಿ ಹೀಗೆ ಬುದ್ಧಿವಾದ ಹೇಳುತ್ತಾಳೆ.

"ಸೀತೂ, ಗಂಡಾಂದ್ರೆ ಪ್ರತ್ಯಕ್ಷ ದೇವರು ತಿಳಿಯಿತೇ?

'ಹೂಂ'

'ಮತ್ತೆ, ನಿನ್ನ ಗಂಡ ಹೇಳಿದ ಹಾಗೆ ಕೇಳು, ಮೊಂಡುತನ, ಹಠ ಮಾಡಬೇಡ'

'ನಾನು ಯಾವಾಗಲಾದರೂ ಹಠ ಮಾಡಿರೋದನ್ನ ನೀನಿ ನೋಡಿದೀಯಮ್ಮಾ?'

ಸೀತೆಗೆ ತಾಯಿಯ ಮಾತುಗಳು ಅರ್ಥವಾಗಿರಲಿಲ್ಲ"[2].

ಇಂತಹ ತರಬೇತಿ ಹಾಗೂ ಪ್ರೋತ್ಸಾಹ ಪಡೆದ ಸೀತಾ ಗಂಡನ ಕೋಣೆಯನ್ನು ಪ್ರವೇಶಿಸಿದ ಕೂಡಲೇ ಅವನ ಕ್ರೂರ ಆಕ್ರಮಣಕ್ಕೊಳಗಾಗುತ್ತಾಳೆ, ಭೀತಿಯಿಂದ ಗಡಗಡನೆ ನಡುಗುವ ಸೀತಾ ರಾತ್ರಿಯಲ್ಲಿ ಕೋಣೆಯಿಂದ ಹೊರಗಡೆ ಬಂದು ತಾಯಿಯ ಬಳಿ ಮಲಗುತ್ತಾಳೆ.

ಈ ಸಂಗತಿಯನ್ನು ಕೇಳಿದ ನರಸಿಂಹಯ್ಯನ ತಾಯಿ ತನ್ನ ಅನುಭವವನ್ನು ಸ್ಮರಿಸುತ್ತಾಳೆ. "ಮೊದಲ ರಾತ್ರಿ ನಾನು ಹಠ ಮಾಡಿ ಯಜಮಾನರಿಂದ ಹೊಡೆತ ತಿಂದಿದ್ದೆ, ಆಗ ನನ್ನ ಬಳೆಗಳೆಲ್ಲಾ ಒಡೆದು ಹೋಗಿದ್ದವು"[3].

ಪೀಳಿಗೆಯಿಂದ ಪೀಳಿಗೆಗೆ ಸ್ತ್ರೀಯರೊಡನೆ ಇದೇ ರೀತಿ ಅಮಾನುಷ ರೀತಿಯಲ್ಲಿ ವರ್ತಿಸಲಾಗುತ್ತಿದೆ. ಎಲ್ಲಿ ಮತ್ತು ಎಂದು ಇಂತಹ ಲಿಂಗಭೇದವನ್ನಾಧರಿಸಿದ ಪಕ್ಷಪಾತಕ್ಕೆ ಕೊನೆ? ಈ ಪ್ರಶ್ನೆಗೆ ಉತ್ತರವನ್ನು ಕೊಡಲು ಮತ್ತು ಸ್ತ್ರೀ ಸಮಸ್ಯೆಗಳಿಗೆ ಕೆಲವು ಸಾಧ್ಯ ಪರಿಹಾರಗಳನ್ನು ಸೂಚಿಸಲು ಕಾದಂಬರಿಕಾರ್ತಿ ಕಾದಂಬರಿಯ ಕೊನೆಯ ಭಾಗದಲ್ಲಿ ಬರುವ ಆಸ್ಪತ್ರೆಯ ದೃಶ್ಯಗಳನ್ನು ಉಪಯೋಗಿಸಿಕೊಳ್ಳುತ್ತಾರೆ.

ತ್ರಿವೇಣಿಯವರ 'ಮೊದಲಹೆಜ್ಜೆ' ಕಾದಂಬರಿಯಲ್ಲಿ, ಕಪ್ಪು ಬಣ್ಣದ ಮತ್ತು ಅಷ್ಟೇನೂ ಓದಿರದ ಬಡ ಹುಡುಗಿಗೆ ಸಹಜವಾಗಿಯೇ ಇಂದಿನ ಪುರುಷ ಪ್ರಧಾನ ಹಾಗೂ ಅರ್ಥ ಪ್ರಧಾನವಾದ ಸಮಾಜದಲ್ಲಿ ಮದುವೆಯಾಗುವುದು ಕಷ್ಟ. ಅನೇಕ ವರಮಹಾಶಯರಿಂದ ತಿರಸ್ಕರಿಸಲ್ಪಟ್ಟ ನಂತರ ಅವಳು ತನ್ನ ಹಣೆಯ ಬರಹವು ಇಷ್ಟೇ ಎಂದು ತಿಳಿದು ತನ್ನ ತಂಗಿಯ ಮದುವೆಯನ್ನು ಮಾಡಿ ಮುಗಿಸಲು ಸೂಚಿಸುತ್ತಾಳೆ. (ಅಕ್ಕನಿಗೆ ಮದುವೆಯಾಗದೆ ತಂಗಿಗೆ ಆಗುವುದು ಇಂದಿಗೂ ಅಕ್ಕನ ವ್ಯಕ್ತಿತ್ವಕ್ಕೊಂದು ಕುಂದು ಎಂದು ಭಾವಿಸಲಾಗುತ್ತದೆ)

ತಂಗಿಯ ಮದುವೆಯಾದ ನಂತರ ಅವಳಿಗೆ (ಅಕ್ಕನಿಗೆ) ಮತ್ತೊಂದು ವಿಧದ ಯಾತನೆ, ತನಗಿಲ್ಲದ ವೈವಾಹಿಕ ಸುಖವನ್ನು ತನ್ನ ತಂಗಿ ಅನುಭವಿಸುವುದಕ್ಕೆ ಸಾಕ್ಷಿಯಾಗುವ ಯಾತನೆ ಕಾಡುತ್ತದೆ. ಈ ಸಂದರ್ಭದಲ್ಲಿ ಲೇಖಕಿಯು (ಅವಳು ಸ್ತ್ರೀಯಾದುದರಿಂದ) ಅತ್ಯಂತ ವೇದಕವಾಗಿ ಯೌವನಕ್ಕೆ ಕಾಲಿಟ್ಟಿರುವ, ಆದರೆ ಮದುವೆಯಾಗದ ಹೆಣ್ಣಿನ ಹಂಬಲಗಳನ್ನು ಹಾಗೂ ನಿರಾಸೆಯನ್ನು ಅಭಿವ್ಯಕ್ತಗೊಳಿಸುತ್ತಾರೆ.

ಆರ್ಯಾಂಬರ 'ಅಪೂರ್ವ ಕಥೆ'ಯ ಶ್ರೀದೇವಿಯನ್ನು ವಿವಾಹವಾಗಲು ಇಚ್ಛಿಸಿ ಅವಳೊಡನೆ ಈ ವಿಷಯವನ್ನು ಪ್ರಸ್ತಾಪಿಸಿದಾಗ, ಅವಳು ಹೇಳುವ ಮಾತು ವಿವಾಹದ ಬಗ್ಗೆ ಆ ಹೆಣ್ಣಿಗೆ ಮೂಡಿದ ಭಾವನೆಗಳು ಅವಳು ಹೇಳುವ ಮಾತು ನನ್ನ ಪಾಲಿಗಂತೂ 'ಮದುವೆ' ಎನ್ನುವ ಪದವೇ ಎದೆ ನಡುಗಿಸುತ್ತದೆ. ಎಂಬ ವಾಕ್ಯ ಅವಳು ವಿವಾಹಿತಳಾಗಿ ಅನುಭವಿಸಿದ ನರಕಯಾತನೆಯನ್ನು ಪರಿಚಯಿಸುತ್ತದೆ.

ಇದಕ್ಕೆ ವೈರುಧ್ಯವಾಗಿ 'ಪತಿತಪಾವನ' ಕಾದಂಬರಿಯ ಗೌರಿ ವಿಷಯದಲ್ಲಿ ನಾಯಕ ಆನಂದನ ಸ್ವಭಾವವನ್ನು ಮದುವೆ ಎನ್ನುವುದಕ್ಕೆ ಯಾವುದೇ ಹೊರಗಿನ ಆಕರ್ಷಣೆಗಳಿಗಿಂತ ಅಂತರಂಗದ ಗುಣಸ್ವಭಾವ ಮುಖ್ಯವೆಂದು ಕಾದಂಬರಿ ಚಿತ್ರಿಸುತ್ತದೆ.

ವಿವಾಹವೆಂಬ ಸಾಮಾಜಿಕ ಸಂಸ್ಥೆಯನ್ನು ಎದುರಿಸಿ, ಒಂದಲ್ಲ ಒಂದು ಕಾರಣಕ್ಕೆ ಸೋಲುವ ಆರು ಜನ ಗೆಳತಿಯರಲ್ಲಿ ಮೊದಲು ತನ್ನ ಬದುಕನ್ನು ಭಯಂಕರವಾಗಿ ಕೊನೆಗಾಣಿಸಿಕೊಂಡವಳು ಕಸ್ತೂರಿ. ಗೆಳತಿಯರೆಲ್ಲರೂ ಒಮ್ಮೆ ಊಟಿಗೆ ಪ್ರವಾಸಕ್ಕೆ ಹೋದಾಗ ಅಂಬಿಕೆಯ ಅಣ್ಣನ ಕೃತಕ ಪ್ರೇಮದ ಆಶ್ವಾಸನೆಗಳಿಗೆ ಅವಳು ಬಲಿಯಾಗುತ್ತಾಳೆ. ಕಸ್ತೂರಿಯ ಮದುವೆಯು ಇನ್ನೊಬ್ಬನೆಡನೆ ನಡೆಯಲು ನಿಷ್ಕರ್ಷಿಸಲ್ಪಟ್ಟಾಗ ಅವಳು ಅಂಬಿಕೆಯ ಅಣ್ಣನಿಗೆ ದೀರ್ಘ ಪತ್ರವೊಂದನ್ನು ಬರೆದು ಅದರಲ್ಲಿ ತನ್ನ ಭಾವನೆಗಳನ್ನು ಸ್ಪಷ್ಟವಾಗಿ ತೋಡಿಕೊಳ್ಳುತ್ತಾಳೆ.

ಭಾವನಾ ಶೂನ್ಯವಾಗಿ ಅವನು ಆ ಪ್ರೇಮಪತ್ರವನ್ನು ತನ್ನ ತಂಗಿ ಅಂಬಿಕಾಗೆ ತೋರಿಸುವುದೇ ಅಲ್ಲದೆ ಕಸ್ತೂರಿಯನ್ನು ನೀತಿಗೆಟ್ಟವಳು ಎಂದು ಪ್ರಚಾರ ಮಾಡುತ್ತಾನೆ. ಆ ಕಾರಣದಿಂದಾಗಿ ಎಲ್ಲರೂ ಅವಳನ್ನು ದೂರ ಮಾಡುತ್ತಾರೆ. ತನ್ನ ಕುಟುಂಬಕ್ಕಾಗಿ ಈ ಅಪಕೀರ್ತಿಯನ್ನು ತಾಳಲಾರದೆ ರೈಲಿನಡಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಕಸ್ತೂರಿ ತ್ರಿವೇಣಿಯವರ ಕಾದಂಬರಿಗಳಲ್ಲಿ ಪ್ರೇಮದ ಹೆಸರಿನಲ್ಲಿ ಪುರುಷರಿಂದ ವಂಚಿಸಲ್ಪಡುವ ಅಭಾಗಿನಿಯರ ಸಾಲಿನಲ್ಲಿ ಇವಳು ಒಬ್ಬಳು.

ತನ್ನ ಕಪ್ಪು ಬಣ್ಣದಿಂದಾಗಿ ಬಹುಕಾಲ ಮದುವೆಯಾಗದೇ ಉಳಿಯುವ ವೇದವಲ್ಲಿ ಕೊನೆಗೆ ತನ್ನ ಸಂಗೀತದ ಶಿಕ್ಷಕನೊಡನೆ ಓಡಿ ಹೋಗುತ್ತಾಳೆ. ಅವನು ಕ್ರಿಶ್ಚಿಯನ್ ಕೂಡಾ ಆದ್ದರಿಂದ ಅವಳ ತಂದೆ, ತಾಯಿಯರು ಅವಳೊಡನೆಯೇ ಸಂಪೂರ್ಣವಾಗಿ ತಮ್ಮ ಸಂಬಂಧವನ್ನು ಕಡಿದುಕೊಳ್ಳುತ್ತಾರೆ. ಮೊದಮೊದಲ ಸಂಭ್ರಮದ ಅನಂತರ ತನ್ನ ಗಂಡನ ನಿಜವಾದ ವ್ಯಕ್ತಿತ್ವ ಅವಳಿಗೆ ಗೊತ್ತಾಗುತ್ತದೆ. ಅವನು ಹೆಣ್ಣು, ಹೆಂಡಗಳ ದಾಸನೆಂದು ತನ್ನ ಹಳೆಯ ಸಂಬಂಧಗಳನ್ನೆಲ್ಲವನ್ನು ತೊರೆದಿರುವುದರಿಂದ ಕೊನೆಗೆ ತಾನೇ ಒಂದು ಕೆಲಸಕ್ಕೆ ಸೇರಿ ತನ್ನ ಗಂಡನನ್ನು ಪೋಷಿಸಲು ಅವಳು ನಿರ್ಧರಿಸುತ್ತಾಳೆ. ಅಮೃತಳಾದರೂ ಇತ್ತ ಕೆಲಸವೂ ಇಲ್ಲದೆ, ಅತ್ತ ಮದುವೆಯೂ ಆಗದೆ ನೀರಸ ಬದುಕನ್ನು ಕಳೆಯುತ್ತಾಳೆ. ಮದುವೆಯಾಗದ ಸುಶೀಲೆಯಾದರೂ ಗಂಡುಗಳ ಅಹಂನಿಂದ ರೋಸಿ ಹೋಗಿ ಕೊನೆಗೆ ಸಿಕ್ಕಿದ ಗಂಡಿನೊಂದಿಗೆ ಹೋಗಲು ಪ್ರಾರಂಭಿಸುತ್ತಾಳೆ.

ಆರು ಜನ ಗೆಳತಿಯರಲ್ಲಿ ಮದುವೆಯೆಂಬ ಸಂಸ್ಥೆಯೊಡನಾಗುವ ಹೋರಾಟದಲ್ಲಿ ಯಶಸ್ವಿಯಾಗುವವಳೆಂದರೆ ಅಂಬಿಕಾ ಒಬ್ಬಳೆ. ಅವಳು ಶ್ರೀಮಂತಳು ಹಾಗೂ ಅವಳಿಗೆ ಬದುಕಿನ ಬಗ್ಗೆ ಏನೂ ತನ್ನದೇ ಆದ ಮಹತ್ವಾಕಾಂಕ್ಷೆಯಾಗಲೀ, ನಿರೀಕ್ಷೆಯಾಗಲೀ ಇಲ್ಲ. ಎಲ್ಲ ಭಾರತೀಯ ನಾರಿಯಂತೆ ತನಗೂ ತನ್ನ ಪತಿಯನ್ನು ಆರಿಸುವ ಸ್ವಾತಂತ್ರ್ಯವಿಲ್ಲವೆಂಬುದನ್ನು ಒಪ್ಪಿಕೊಂಡು ತನ್ನ ತಂದೆತಾಯಿಯರ ಆಯ್ಕೆಯಲ್ಲಿಯೇ ತೃಪ್ತಿ ಕಾಣುತ್ತಾಳೆ. ನಿಧಾನವಾಗಿ ಈ ಮದುವೆಯೆಂಬ ಜೂಜಿನಲ್ಲಿ ತಾನು ಗೆದ್ದಿದ್ದೇನೆಂದು ಅವಳಿಗೆ ಅರಿವಾಗುತ್ತದೆ. ತನ್ನ ಗಂಡನೊಂದಿಗೆ ಆರೋಗ್ಯಪೂರ್ಣ ಸಂಬಂಧವನ್ನು ಸ್ಥಾಪಿಸಿಕೊಂಡು ತನ್ನ ಮಕ್ಕಳನ್ನು ಪ್ರೀತಿಸುತ್ತಾ, ತೃಪ್ತಿಯಿಂದ ಸಂಸಾರಿಕ ಜೀವನವನ್ನು ನಡೆಸುತ್ತಾಳೆ.

ಪ್ರೇಮ ಹಾಗೂ ಮದುವೆ ಇವುಗಳೊಡನಾಗುವ ರಮಾಳ ಸಂಘರ್ಷ ಹೆಚ್ಚು ಸಂಕೀರ್ಣವಾಗದೆ ದುರಂತ ಪೂರ್ಣವಾಗಿದೆ. ಶಿಕ್ಷಣವನ್ನು ಮುಗಿಸಿದ ಕೂಡಲೇ ರಮಾ ಒಂದು ಟ್ಯೂಟೋರಿಯಲ್ ಕಾಲೇಜಿನಲ್ಲಿ ಅಧ್ಯಾಪಕಿಯಾಗಿ ಸೇರುತ್ತಾಳೆ. ಅವಳೊಬ್ಬಳ ಸಂಬಳ ಸಂಸಾರದ ಮತ್ತು ಅವರ ತಮ್ಮ ತಂಗಿಯರ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ತನ್ನ ಕಾಲೇಜಿನಲ್ಲಿ ಹಗಲು ದುಡಿದು, ರಾತ್ರಿ ಶಾಲೆಯಲ್ಲಿ ಓದು ಮುಂದುವರಿಸುತ್ತಿರುವ ವಿಶಿಷ್ಟ ವ್ಯಕ್ತಿಯ ಪರಿಚಯ ಅವಳದಾಗುತ್ತದೆ. ನಿಧಾನವಾಗಿ ಪರಸ್ಪರ ಪ್ರೇಮ ಬೆಳೆದು ಅವರಿಬ್ಬರೂ ಮದುವೆಯಾಗಲು ನಿರ್ಧರಿಸುತ್ತಾರೆ.

ಆದರೆ, ತಮ್ಮ ಜವಾಬ್ದಾರಿಗಳು ಮುಗಿಯುವ ತನಕ ಅವರು ಕಾಯಬೇಕು. ಅಷ್ಟರಲ್ಲಿಯೇ ತಮ್ಮ ಬಡತನದಿಂದ ಬೇಸತ್ತು, ಚಿಕ್ಕಪುಟ್ಟ ಕಳ್ಳತನ ಪ್ರಾರಂಭಿಸುತ್ತಾನೆ ಮತ್ತು ತಂಗಿಯೊಬ್ಬಳು ಕೆಟ್ಟ ದಾರಿಯನ್ನು ಹಿಡಿಯುತ್ತಾಳೆ. ಕರ್ತವ್ಯ ಪ್ರಜ್ಞೆಯಿಂದ ತನ್ನ ಕುಟುಂಬದ ಒಳಿತಿಗಾಗಿ ತನ್ನ ಸುಖವನ್ನು ಬಲಿಕೊಡಲು ನಿರ್ಧರಿಸಿ ರಮಾ ತುಂಬಾ ಆಸ್ತಿಯುಳ್ಳ ಒಬ್ಬ ಕುರುಡನನ್ನು ಮದುವೆಯಾಗಲು ನಿರ್ಧರಿಸುತ್ತಾಳೆ. ಅವನು ಇವರ ತಂಗಿಯರ ಮದುವೆ ಮಾಡಲು ಮತ್ತು ಬದುಕಿನಲ್ಲಿ ಭದ್ರವಾಗಿ ನಿಲ್ಲಲು ಸಹಾಯ ಮಾಡಲು ಒಪ್ಪುತ್ತಾನೆ. ಹೀಗೆ ಇಂದಿನ ಭಾರತೀಯ ಸಮಾಜದಲ್ಲಿರುವ ಕಠೋರ ವೈವಾಹಿಕ ವ್ಯವಸ್ಥೆಯಿಂದಾಗಿ ಅಂಬಿಕಾಳನ್ನು ಹೊರತುಪಡಿಸಿದರೆ ಉಳಿದ ಗೆಳತಿಯರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಬದುಕಿನಲ್ಲಿ ತೀವ್ರ ಸೋಲನ್ನನುಭವಿಸಿರುತ್ತಾರೆ.

ತನ್ನ ಎರಡನೆಯ ತಮ್ಮನಿಗೆ ಮದುವೆಯಾದರೂ ತನ್ನ ಕಪ್ಪು ಬಣ್ಣದಿಂದಾಗಿ ಅಮೃತ ಅವಿವಾಹಿತಳಾಗಿಯೇ ಉಳಿಯುತ್ತಾಳೆ. ಒಬ್ಬನಾದ ನಂತರ ಮತ್ತೊಬ್ಬ ವರಮಹಾಶಯನಿಂದ ತಿರಸ್ಕರಿಸಲ್ಪಟ್ಟು ಆ ಕಾರಣದಿಂದ ತನ್ನ ಹೊಸ ಅತ್ತಿಗೆಯ ತಿರಸ್ಕಾರಕ್ಕೂ ಗುರಿಯಾದ ನಂತರ ಅಮೃತ ಟೈಪಿಂಗ್ ಮತ್ತು ಶಾರ್ಟ್‌ಹ್ಯಾಂಡ್ ಕಲಿತು ಅವಳ ಇಬ್ಬರೂ ತಮ್ಮಂದಿರು ಕೆಲಸ ಮಾಡುತ್ತಿರುವ ಮುಂಬೈಗೆ ಬರುತ್ತಾಳೆ. ಅಲ್ಲಿ ಒಂದು ಪತ್ರಿಕಾಲಯದಲ್ಲಿ ಟೈಪಿಸ್ಟ್ ಆಗಿ ಸೇರಿ ಕೇಶವ್ ಮರಾಠೆ ಎಂಬ ತರುಣನ ಪರಿಚಯ ಮಾಡಿಕೊಳ್ಳುತ್ತಾಳೆ. ಬಹುಬೇಗ ಪರಿಚಯ ಪ್ರೇಮಕ್ಕೆ ತಿರುಗಿ ಅವರಿಬ್ಬರೂ ವಿವಾಹ ಮಾಡಿಕೊಳ್ಳುವ ಯೋಚನೆಯಲ್ಲಿರುವಾಗ ಮರಾಠೆಗೆ ಈ ಮೊದಲೇ ಮದುವೆಯಾಗಿದೆ ಎಂದು ಅವಳಿಗೆ ಗೊತ್ತಾಗುತ್ತದೆ. ಅವನ ಹೆಂಡತಿ ಕ್ಷಯ ರೋಗಿಯಾಗಿ ಬಹಳ ಕಾಲದಿಂದಲೂ ಸ್ಯಾನಿಟೋರಿಯಂನಲ್ಲಿ ಇದ್ದಾಳೆಂದು ತಿಳಿದ ಬಂದ ನಂತರ ಅವಳಿರುವ ತನಕ ಕೇಶವನನ್ನು ಮದುವೆಯಾಗದಿರಲು ಅವಳು ನಿರ್ಧರಿಸುತ್ತಾಳೆ. ಕೇಶವ್ ಮರಾಠೆಯ ಹೆಂಡತಿಯ ಸಾವಿನಿಂದ ಪ್ರಾಯಶಃ ಅಮೃತ ಕೇಶವ್

ಮದುವೆಯಾಗಬಹುದೆಂಬ ಸೂಚನೆಯಿಂದ ಕಾದಂಬರಿ ಮುಕ್ತಾಯವಾಗುತ್ತದೆ. ಹೀಗೆ ಆರು ಜನ ಗೆಳತಿಯರು ವೈವಾಹಿಕ ಸಮಸ್ಯೆಯಿಂದ ತಮ್ಮದೇ ಆದ ಮಾರ್ಗಗಳಲ್ಲಿ ಮುಕ್ತಿಯನ್ನು ಪಡೆಯುತ್ತಾರೆ.

ವಾಸ್ತವಾಂಶವೇನೆಂದರೆ, ಸ್ತ್ರೀ ಪುರುಷ ಸಂಬಂಧಗಳ ಬಗ್ಗೆ ಮತ್ತು ವಿವಾಹ ವ್ಯವಸ್ಥೆಯ ಬಗ್ಗೆ ಬಹುತೇಕ ಸ್ವಾತಂತ್ರ್ಯೇತರ ಕಾಲದ ಲೇಖಕರಂತೆ ತ್ರಿವೇಣಿಯವರಿಗೂ ತೀವ್ರ ಸಂಧಿಗ್ಧತೆಯಂತೆ ತ್ರಿವೇಣಿರವರ ದೃಷ್ಟಿಯಲ್ಲಿ ಆದರ್ಶ ಸ್ತ್ರೀ ಎಂದರೆ ಮದುವೆಯಾಗಿ ಮಕ್ಕಳನ್ನು ಪ್ರೀತಿ ಎಚ್ಚರಗಳಿಂದ ಬೆಳೆಸುವ ಗೃಹಿಣಿ ಎಂಬುದು ನಿಜ. ಕಂಕಣ ಮತ್ತು ಮುಕ್ತಿ ಕಾದಂಬರಿಗಳಲ್ಲಿ ಬರುವ ಆರು ಸ್ತ್ರೀ ಪಾತ್ರಗಳಲ್ಲಿ ಬದುಕಿನಲ್ಲಿ ಸುಖಿಯಾಗಿರುವವಳು ಒಬ್ಬಳೇ, ತನ್ನದೇ ಆದ ಯಾವ ಆಕಾಂಕ್ಷೆಗಳೂ ಇಲ್ಲದೆ, ಮತ್ತು ಬದುಕಿನಲ್ಲಿ ತನ್ನ ಪಾಲಿಗೆ ಬಂದಿದ್ದರಲ್ಲಿಯೇ ತೃಪ್ತಿ ಪಡುವ 'ಅಂಬಿಕಾ' 'ಅಪಜಯ' ಕಾದಂಬರಿಯ ಹೆಸರೇ ಕೃತಿಯ ನಾಯಕಿ ಮೀರಾ ಗೃಹಿಣಿಯ ಪಾತ್ರದಲ್ಲಿ ಬದುಕಿನಲ್ಲಿ ಹೇಗೆ ಸೋಲುತ್ತಾಳೆ ಎಂಬುದನ್ನು ಸೂಚಿಸುತ್ತದೆ.

ಈ ಅಂಶವನ್ನೇ ಸಮರ್ಥಿಸುವ ಮತ್ತೊಂದು ಅಂಶವೆಂದರೆ, ತಮ್ಮ ಗಂಡಂದಿರ ವಿಲಕ್ಷಣ ಗುಣ ಸ್ವಭಾವಗಳ ಹೊರತಾಗಿಯೂ ಯಾರೂ 'ಹಣ್ಣೆಲೆ ಚಿಗುರಿದಾಗ' ಕಾದಂಬರಿಯ ರಾಜಮ್ಮನಂತೆ ಎಲ್ಲವನ್ನೂ ಸಹಿಸುತ್ತಾ ತನ್ನ ಕುಟುಂಬವನ್ನು ಉಳಿಸಿ, ಬೆಳೆಸುತ್ತಾರೋ ಅಂತಹ ಸ್ತ್ರೀಯರ ಬಗ್ಗೆ ತ್ರಿವೇಣಿಯವರಿಗೆ ಅಪಾರ ಗೌರವವಿದೆ. ತ್ರಿವೇಣಿಯವರ ಕಾದಂಬರಿಗಳಲ್ಲಿ ವೈವಾಹಿಕ ವ್ಯವಸ್ಥೆಯನ್ನು ತಿರಸ್ಕರಿಸುವ ಸ್ತ್ರೀ ಪಾತ್ರಗಳೆಲ್ಲವೂ ಹೆಚ್ಚು ಕಡಿಮೆ ದುಃಖಕ್ಕೀಡಾಗುತ್ತವೆ. ಕಂಕಣದ ಸುಶೀಲ, ಮೊದಲ ಹೆಜ್ಜೆಯ ನಾಯಕಿ, ಆರ್ಯಾಂಬರ ಸಾಕ್ಷಾತ್ಕಾರದ ಮಾಲತಿ.

ಅಡಿಟಿಪ್ಪಣಿಗಳು

೧. ಎಸ್.ವಿ. ಪಾಟೀಲ ೧೯೭೬, ಸಮಾಜ ಪ್ರಾಸ್ತಾವಿಕ ವಿಶ್ಲೇಷಣೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪುಟ ೨

೨. ಸಿ.ಎನ್. ರಾಮಚಂದ್ರನ್ : ತ್ರಿವೇಣಿ (ಭಾರತೀಯ ಸಾಹಿತ್ಯ ನಿರ್ಮಾಪಕರು), ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೯, ಪುಟ ೧೭

೩. ಅದೇ, ಪುಟ ೧೯

೪. ಅದೇ, ಪುಟ ೧೧

೫. ತ್ರಿವೇಣಿ, ಮುಕ್ತಿ, ಮೀರಾ ಪ್ರಕಾಶನ, ಮೈಸೂರು ಪುಟ ೯೯

೬. ಅದೇ, ಪುಟ ೧೦೨

೭. ತ್ರಿವೇಣಿ : ಕೀಲುಗೊಂಬೆ, ಮೀರಾ ಪ್ರಕಾಶನ, ಮೈಸೂರು, ಪುಟ ೩೯–೪೦

೮. ಅದೇ, ಪುಟ ೪೮

ಅಧ್ಯಾಯ ೬
ಕೌಟುಂಬಿಕ ರಚನೆ

ಅಧ್ಯಾಯ ೬

ಕೌಟುಂಬಿಕ ವ್ಯವಸ್ಥೆ

ಕುಟುಂಬವು ಒಂದು ಸಾರ್ವತ್ರಿಕವಾದ ಸಾಮಾಜಿಕ ಸಂಸ್ಥೆಯಾಗಿದೆ. ಕುಟುಂಬವು ಮಾನವನ ಸಾಮಾಜಿಕ ಜೀವನದ ತಳಹದಿಯಾಗಿದೆ. ಕುಟುಂಬವಿಲ್ಲದೆ ಸಮಾಜವು ಇರಲಾರದು. ಕುಟುಂಬವೇ ಮಗುವಿನ ಪ್ರಪ್ರಥಮ ಸಾಮಾಜಿಕ ಪರಿಸರ ಹಾಗೂ ಸಮೂಹ, ನವಜಾತ ಶಿಶುವಿಗೆ ಸಂಸ್ಕಾರ ನೀಡುವುದು, ಶಿಕ್ಷಣ ಕೊಡುವುದು ಅವನನ್ನು ಸಮಾಜದ ಸದಸ್ಯನನ್ನಾಗಿ ಮಾಡುವುದು ಕುಟುಂಬವೇ ಆಗಿದೆ. ನಮ್ಮ ಸಾಮಾಜಿಕ ಜೀವನಕ್ಕೆ ಒಂದು ನೆಲೆಯನ್ನು ಹಾಗೂ ಸ್ಥಿರತೆಯನ್ನು ಕೊಡುವುದು ಕೂಡ ಕುಟುಂಬವೇ ಆಗಿರುವುದು. ಕುಟುಂಬವು ಇತರೆ ಸಂಸ್ಥೆಗಳಿಗಿಂತ ಹೆಚ್ಚು ಶಾಶ್ವತವೂ ಮತ್ತು ಪ್ರಭಾವಿಯೂ ಆಗಿರುವುದು.

ಸಮಾಜದ ಐತಿಹಾಸಿಕ ಬೆಳವಣಿಗೆಯ ಎಲ್ಲಾ ಹಂತಗಳಲ್ಲಿಯೂ ಎಲ್ಲಾ ಸಮಾಜಗಳಲ್ಲಿಯೂ ಅಸ್ತಿತ್ವದಲ್ಲಿತ್ತು. ನಾಗರಿಕ, ಅನಾಗರಿಕ ಮತ್ತು ಹಿಂದುಳಿದ ಮುಂದುವರೆದ ಎಂಬ ಬೇಧವಿಲ್ಲದೆ ಎಲ್ಲಾ ಸಮಾಜಗಳಲ್ಲಿಯೂ ಅದು ಕಂಡುಬರುವುದು. ಕುಟುಂಬವು ಸಾರ್ವತ್ರಿಕವಾಗಿರಲು ಅದು ಪೂರೈಸುವ ಮಾನವನ ಮೂರು ಅತಿ ಅಗತ್ಯಗಳಾದ ಲೈಂಗಿಕ ತೃಪ್ತಿ, ಸಂತಾನಾಭಿಲಾಷೆ ಮತ್ತು ಆರ್ಥಿಕ ಬಯಕೆಗಳೆ ಕಾರಣವಾಗಿದೆ ಎನ್ನಬಹುದು.

"ನಿರ್ದಿಷ್ಟ ಲೈಂಗಿಕ ಸಂಬಂಧಗಳನ್ನು ಹೊಂದಿರುವ ಸಂತಾನೋತ್ಪತ್ತಿಗೆ ಅವಕಾಶವುಳ್ಳ ಹಾಗೂ ಪಡೆದ ಸಂತಾನವನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊತ್ತ ಒಂದು ಸಮೂಹಕ್ಕೆ ಕುಟುಂಬ ಎನ್ನಬಹುದು. ಗಂಡ, ಹೆಂಡತಿ ಮತ್ತು ಮಕ್ಕಳನ್ನೊಳಗೊಂಡಿರುವ ಜೈವಿಕ ಸಾಮಾಜಿಕ ಘಟಕವೇ ಕುಟುಂಬ ಎನಿಸುವುದು".[೧]

ಸಂತತಿ ಸಹಿತವಾಗಿ ಇಲ್ಲವೇ ಸಂತತಿ ರಹಿತವಾಗಿ ಗಂಡಹೆಂಡಿರು ಕೂಡಿ ಆಗಿರುವ ಅಥವಾ ಸ್ತ್ರೀ ಇಲ್ಲವೆ ಪುರುಷನೋರ್ವನೆ ತನ್ನ ಮಕ್ಕಳನ್ನೊಡಗೂಡಿ ಆಗಿರುವ ಮತ್ತು ಹೆಚ್ಚು ಕಡಿಮೆ ದೀರ್ಘಕಾಲ ಬಾಳುವ ಸಂಘವೇ ಕುಟುಂಬವಾಗಬಹುದು. ರಕ್ತ ಸಂಬಂಧ ಹೊಂದಿರುವ ಮತ್ತು ನಿರ್ದಿಷ್ಟ ಲೈಂಗಿಕ ಸಂಬಂಧ ಹೊಂದಿರುವ ಒಂದು ವ್ಯವಸ್ಥಿತವಾದ ಪ್ರಾಥಮಿಕ ಸಮೂಹ ಎನಿಸುವುದು.

ಇವುಗಳೆನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಲೇಖಕಿಯರಿಬ್ಬರ ಕಾದಂಬರಿಗಳಲ್ಲಿ ಕಂಡು ಬರುವ ಕೌಟುಂಬಿಕ ರಚನೆ, ಅವಿಭಕ್ತ ಕುಟುಂಬವೇ, ವಿಭಕ್ತ ಕುಟುಂಬವೇ ಈ ಸಂದರ್ಭದಲ್ಲಿ ಪುರುಷರ ಪಾಲೆಷ್ಟು, ಸ್ತ್ರೀಪರ ಕಾಳಜಿಯೇನು, ಸ್ತ್ರೀ ಪುರುಷರ ಪಾತ್ರಗಳ ರಚನೆ, ಕುಟುಂಬ ರಚನೆಗೆ ಇವರ ಆಧುನಿಕ ಮನೋಧೋರಣೆಗಳು, ಸಾಮಾಜಿಕ ಧೋರಣೆಗಳು, ಈ ನಿಲುವಿನಲ್ಲಿ ಗಮನಿಸುವ ಅಂಶಗಳನ್ನು ಅಭ್ಯಸಿಸಲಾಗಿದೆ. "ಕಾದಂಬರಿ ಎಂದರೆ ಕೌಟುಂಬಿಕ ಜೀವನದ ವಿಸ್ತಾರಾಂಶ"[೨].

ಆರ್ಯಾಂಬರ 'ಸಂಬಂಧಗಳು' ಕಾದಂಬರಿ ಹೆಣ್ಣಿನ ಜೀವನದ ಸಮರವನ್ನು ನಿರೂಪಿಸುತ್ತದೆ. ಈ ಸಂಬಂಧದ ಅನುಬಂಧಗಳು ಕುಟುಂಬದಿಂದ ಕುಟುಂಬಕ್ಕೆ ಬದಲಾಗುತ್ತಾ ಹೋಗುತ್ತದೆ. ಒಂದೇ ರೀತಿ ಇರುವುದಿಲ್ಲ. ಹಾಗಾಗಿ ಪ್ರತಿಯೊಂದು ಕುಟುಂಬವು ತನ್ನದೇ ಆದ ಸ್ಥಾನಮಾನ, ರೀತಿ ನೀತಿಗಳನ್ನಳವಡಿಸಿಕೊಂಡು ಪ್ರತ್ಯೇಕತೆಯನ್ನು ಹೊಂದಿರುತ್ತದೆ.

ಕುಟುಂಬದ ಆಧಾರಸ್ತಂಭಗಳಾದ ಹೆಣ್ಣು ಗಂಡು ಇಂತಹ ಕುಟುಂಬದ ದಾರಿ ದೀಪಗಳಾದರೂ, ಮುಖ್ಯವಾಗಿ ತನ್ನ ಸಹೃದಯತೆ, ಸಹನೆ ಮತ್ತು ತ್ಯಾಗದಿಂದ ಆ ಕುಟುಂಬದ ಒಳಿತಿಗಾಗಿ ಶ್ರಮಿಸುವವಳು ಹೆಣ್ಣೆ. ಅವಳ ನೋವುಗಳ ಬಗ್ಗೆ ಯಾರಿಗೂ ಕಾಳಜಿ ಇಲ್ಲ. ಅವಳಿಂದ ಸೇವೆ ಪಡೆಯಲು ಮಾತ್ರ ಕುಟುಂಬದ ಸದಸ್ಯರು ಹಾತೊರೆಯುತ್ತಿರುತ್ತಾರೆ. ಇದು ಯಾವುದೇ ಕುಟುಂಬದ ಸಾಮಾನ್ಯ ದೃಶ್ಯ. ಇಂತಹ ಕುಟುಂಬದ ದೃಶ್ಯವನ್ನು ತಮ್ಮ ಕಾದಂಬರಿ 'ಸಂಬಂಧಗಳು' ಮೂಲಕ ಆರ್ಯಾಂಬ ಪಟ್ಟಾಬಿರವರು ಓದುಗರಿಗೆ ನೀಡಿದ್ದಾರೆ.

ಸಾಂಪ್ರದಾಯಿಕ ಕೌಟುಂಬಿಕ ಬದುಕಿನಿಂದ ದೂರಸಾಗಿದ್ದ ಸುಧಾ 'ಬಂಡಾಯ' ಕಾದಂಬರಿಯಲ್ಲಿ ಕುಟುಂಬ ಯೋಜನೆಯ ಅರಿವೇ ಇಲದ ಪುಟ್ಟಯ್ಯರವರು ಮತ್ತು ಅವರ ಪತ್ನಿ ನಂಜಮ್ಮರವರಿಗೆ ಹತ್ತು ಮಕ್ಕಳಾದದ್ದನ್ನು ತಿಳಿಸುವ 'ಗುರಿ' ಕಾದಂಬರಿ.

ತ್ರಿವೇಣಿಯವರು ತಮ್ಮ ಬರೆವಣಿಗೆಯ 'ಹಣ್ಣೆಲೆ ಚಿಗುರಿದಾಗ' ಅವಿಭಕ್ತ ಕುಟುಂಬದ ನೆಲೆಯಲ್ಲಿ ಚಿತ್ರಿತವಾದ ಕಾದಂಬರಿ ಕೌಟುಂಬಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಕುಟುಂಬದ ಸಂಬಂಧಿಗಳನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಕುಟುಂಬದ ಸದಸ್ಯೆಯಾದ ಹೆಂಡತಿಯಿಂದ ಕಾಯಾ, ವಾಚಾ, ಮನಸ್ಸಾ ಸಂಪೂರ್ಣ ಪತಿ ನಿಷ್ಠೆಯನ್ನು ಗಂಡನು ಅಪೇಕ್ಷಿಸುತ್ತಾನೆ. ಮತ್ತು ಅಂತಹ ನಿಷ್ಠೆಯನ್ನು ಅವಳ ಮೇಲೆ ಹೇರುತ್ತಾನೆ. ಆದರೆ, ಅದೇ ನಿಷ್ಠೆಯನ್ನು ಗಂಡನಿಂದ ಅಪೇಕ್ಷಿಸುವ ಯಾವ ಹಕ್ಕು ಹೆಂಡತಿಗಿಲ್ಲ. ಈ ವಿಧದ ಪುರುಷ ನಿರ್ಮಿತ ಪಕ್ಷಪಾತ ಪೂರ್ಣ ವಿಧಿ ವಿಧಾನಗಳನ್ನು ತ್ರಿವೇಣಿ ತಮ್ಮ ಪ್ರತಿಯೊಂದು ಕಾದಂಬರಿಗಳಲ್ಲಿಯೂ ಪ್ರತಿಭಟಿಸುತ್ತಾರೆ.

"ತ್ರಿವೇಣಿಯವರ ಹೆಚ್ಚಿನ ಕತೆ, ಕಾದಂಬರಿಗಳ ವಸ್ತು, ವಿವಾಹ ಹಾಗೂ ಕೌಟುಂಬಿಕ ಜೀವನ ಅಥವಾ ವಿಷಮ ವಿವಾಹ ಮತ್ತು ಕೌಟುಂಬಿಕ ಅಸಾಂಗತ್ಯ, ಆರ್ಷೇಯ ಹಿಂದೂ ವೈವಾಹಿಕ ಚೌಕಟ್ಟಿನಲ್ಲಿ ಸ್ತ್ರೀಯ ತೊಳಲಾಟ, ಅವಳ ಶೋಷಣೆ ಹಾಗೂ ಅವಳ ಅಸಮಾನತೆ ಇವುಗಳನ್ನು ಲೇಖಕಿ ಅನೇಕ ನೆಲೆಗಳಲ್ಲಿ ವಿಶ್ಲೇಷಿಸುತ್ತಾರೆ ಮತ್ತು ಅತ್ಯಂತ ಪರಿಣಾಮಕಾರಿಯಾಗಿ ದಾಖಲಿಸುತ್ತಾರೆ".[೩]

ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ವಿವಾಹ ಹಾಗೂ ಕೌಟುಂಬಿಕ ವ್ಯವಸ್ಥೆ ಏಕಮೇವ ಲಕ್ಷ್ಯವೆಂದು ಪರಿಗಣಿಸಲ್ಪಟ್ಟಿರುವುದರಿಂದ ಸಹೋದರಿಯರ ರಚನೆ ಇಂತಹ ದಿಸೆಯಲ್ಲಿ ಸಾಗಿರುವುದು ಗಮನೀಯ ಅಂಶವಾಗಿದೆ.

ಕುಟುಂಬವು ವಿಶೇಷ ಲಕ್ಷಣಗಳಿಂದ ಕೂಡಿರುವ ಒಂದು ಸಂಘಟನೆಯಾಗಿದೆ. ಇದಕ್ಕಿಂತ ಪುಟ್ಟ ಹಾಗೂ ಅನೇಕ ಬೃಹತ್ ಸಮೂಹ, ಸಂಘಟನೆಗಳಿರಬಹುದಾದರೂ ಕುಟುಂಬದ ಸ್ಥಾನವು ಅತ್ಯಂತ ಮಹತ್ವದ್ದಾಗಿದೆ. ಸಮಾಜದಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿರುವ ಕುಟುಂಬದ ಲಕ್ಷಣಗಳು ಹಲವಾರು ಇವುಗಳಲ್ಲಿ ಮೊದಲನೆಯದು

ಇಂದು ಕುಟುಂಬವು ಸರ್ವ ವ್ಯಾಪಕವಾದ ಒಂದು ಸಂಸ್ಥೆಯಾಗಿದೆ. ಕುಟುಂಬವಿಲ್ಲದೆ ಯಾವುದೇ ದೇಶ, ಸಮಾಜ, ಸಮುದಾಯವಿಲ್ಲ. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಎಲ್ಲಾ ನಾಗರೀಕತೆಗಳಲ್ಲಿಯೂ ಕುಟುಂಬವು ಕಂಡು ಬರುತ್ತದೆ. ಕುಟುಂಬವಿಲ್ಲದೆ ಯಾವ ಸಂಸ್ಕೃತಿಯನ್ನು ನಾವು ಕಾಣಲಾರೆವು.

ಮಾನವನ ಜೈವಿಕ ಭಾವನೆಗಳಾದ ಲೈಂಗಿಕಾಂಕ್ಷೆ, ಸಂತಾನೋತ್ಪತ್ತಿ, ದಾಂಪತ್ಯ ಪ್ರೇಮ ರಕ್ಷಣೆ ಮುಂತಾದವುಗಳಿಂದ ಕುಟುಂಬ ರಚನೆಯಾಗಿದೆ. ಮಾನವ ಸಹಜ ಭಾವನೆಗಳಾದ ಪ್ರೀತಿ, ತ್ಯಾಗ ಅನುಕಂಪ, ಸಹಕಾರ ನೋವು, ನಲಿವುಗಳು ಕುಟುಂಬಕ್ಕೆ ಆಧಾರ ಮಾತ್ರವಾಗಿರದೇ ಅದಕ್ಕೊಂದು ಮೆರುಗನ್ನಿತ್ತಿದೆ. ಇದು ಕುಟುಂಬದಲ್ಲಿ ಕಾಣುವ ವಿಶೇಷ ಭಾವನಾತ್ಮಕ ಕ್ರಿಯೆಗಳು.

ಜೈವಿಕ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ಕುಟುಂಬವು ಚಿಕ್ಕ ಸಾಮಾಜಿಕ ವ್ಯವಸ್ಥೆಯಾಗಿದೆ. ಗಂಡ, ಹೆಂಡತಿ, ಮಕ್ಕಳು ಮತ್ತು ರಕ್ತ ಸಂಬಂಧಿಗಳನ್ನೊಳಗೊಂಡ ಕುಟುಂಬವು ಚಿಕ್ಕ ಗಾತ್ರವನ್ನು ಹೊಂದಿದೆ. ಅದರ ಸದಸ್ಯತ್ವ ಸೀಮಿತವಾದದ್ದು.

ನವಜಾತ ಶಿಶುವಿನ ಮೇಲೆ ಮೊಟ್ಟಮೊದಲು ಪ್ರಭಾವ ಬೀರುವ ಅತೀ ಮುಖ್ಯ ಪರ್ಯಾವರಣವೇ ಕುಟುಂಬ. ಮಗುವಿನ ವ್ಯಕ್ತಿತ್ವ ರೂಪಿತವಾಗುವುದು ಮತ್ತು ನಡತೆ ಗುಣಗಳು ಬೆಳೆದು ಬರುವುದು ಕುಟುಂಬದಲ್ಲಿ ಮಗುವಿಗೆ ಮನೆಯೇ ಮೊದಲ ಶಾಲೆ, ತಾಯಿಯೇ ಮೊದಲ ಗುರು. ಮಗುವಿನ ಶಾರೀರಿಕ, ಮಾನಸಿಕ, ನೈತಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಅವಕಾಶ ಒದಗಿಸುವುದು ಕುಟುಂಬ. ಮಗುವನ್ನು ಸಾಮಾಜಿಕ ಜೀವನಕ್ಕೆ ಅಣಿಗೊಳಿಸುವ ಹೊಣೆ ಕುಟುಂಬದ್ದು. ಕುಟುಂಬವು ಮಗುವಿಗೆ ಸಾಮಾಜೀಕರಣದ ದೀಕ್ಷೆಯನ್ನು ನೀಡುವುದು.

ಕುಟುಂಬವು ಸಾಮಾಜಿಕ ಜೀವನದ ಆಧಾರ ಕೇಂದ್ರ. ಉಳಿದೆಲ್ಲಾ ಸಾಮಾಜಿಕ ಸಂಘಟನೆಗಳಿಗೆ ಕುಟುಂಬವು ಕೇಂದ್ರ ಬಿಂದುವಿನಂತಿದೆ. ಕುಟುಂಬದಲ್ಲಾಗಬಹುದಾದ ಏರುಪೇರು ಸಮಾಜದ ಇತರ ಘಟಕಗಳು ಅಥವಾ ಸಂಸ್ಥೆಗಳಲ್ಲಿನ ಪರಿವರ್ತನೆಗೆ ಕಾರಣವಾಗುವುದು. ಹಾಗೆಯೇ ಸಮಾಜದ ಇತರ ಕ್ಷೇತ್ರಗಳಲ್ಲಿನ ಪರಿವರ್ತನೆಗಳು ಕುಟುಂಬದ ಮೇಲೆ ಪ್ರಭಾವ ಬೀರುತ್ತವೆ.

ಕುಟುಂಬದ ಸದಸ್ಯರುಗಳು ಹೆಚ್ಚು ಹೊಣೆಗಾರಿಕೆಯನ್ನು ಹೊಂದಿರುತ್ತಾರೆ. ಕುಟುಂಬದ ದೈನಂದಿನ ವ್ಯವಹಾರಗಳಲ್ಲಿ ಮಾತ್ರವಲ್ಲದೆ ಯಾವುದೇ ಅಪಾಯ, ಬಿಕ್ಕಟ್ಟು, ದುರಂತದ ಸಂದರ್ಭಗಳಲ್ಲಿಯೂ ಕುಟುಂಬದ ಸದಸ್ಯರು ಜವಾಬ್ದಾರಿಯಿಂದ ವರ್ತಿಸುವರು. ಬಿಕ್ಕಟ್ಟುಗಳ ಸಂದರ್ಭದಲ್ಲಿ ಜನರು ತಮ್ಮ ದೇಶಕ್ಕಾಗಿ ಕೆಲಸ ಮಾಡಬಹುದು. ಹೋರಾಟ ಮಾಡಬಹುದು ಮತ್ತು ಪ್ರಾಣ ಬಿಡಬಹುದು. ಆದರೆ ಅವರು ತಮ್ಮ ಕುಟುಂಬಗಳಿಗಾಗಿ ಜೀವನಪರ್ಯಂತ ಹೋರಾಟ ಮಾಡುವರು ಮತ್ತು ಶ್ರಮಿಸುವರು.

ಕುಟುಂಬವನ್ನು ಸಂಸ್ಥೆ ಮತ್ತು ಸಂಘ ಎಂದು ಎರಡು ರೀತಿಯಲ್ಲಿ ಅರ್ಥೈಸಬಹುದು ಕುಟುಂಬವನ್ನು ಸಂಸ್ಥೆ ಎಂದು ಪರಿಗಣಿಸಿದಾಗ ಅದು ಸಾರ್ವತ್ರಿಕವಾಗಿರುವುದು ಹಾಗೂ ಶಾಶ್ವತವಾಗಿರುವುದು ಗಮನಕ್ಕೆ ಬರುವುದು. ಕುಟುಂಬವನ್ನು ಒಂದು ಸಂಘ ಎಂಬುದಾಗಿ ಪರಿಗಣಿಸಿದಾಗ ಅದು ಅಶಾಶ್ವತ ರೂಪದಲ್ಲಿರುವುದು ಗೋಚರವಾಗುವದು. ಯಾವುದಾದರೂ ನಿರ್ದಿಷ್ಟ ಕುಟುಂಬವು ಕಾರಣಾಂತರಗಳಿಂದ (ವಿವಾಹ ವಿಚ್ಛೇದನ, ವಿರಸ, ಪತ್ನಿ ಅಥವಾ ಪತಿಯ ಸಾವು ಇತ್ಯಾದಿ) ವಿಘಟಿತವಾಗಬಹುದಾದರೂ ಸಂಸ್ಥೆಯ ರೂಪದಲ್ಲಿರುವ ಕುಟುಂಬವಂತೂ ಎಲ್ಲೆಡೆಯಲ್ಲಿಯೂ ಮುಂದುವರಿಯುವುದು ನಿಶ್ಚಿತ.

ಈ ಎಲ್ಲಾ ಲಕ್ಷಣಗಳನ್ನೇ ಆಧಾರವಾಗಿಟ್ಟುಕೊಂಡೇ ಬರೆಹಗಾರ್ತಿಯರು ತಮ್ಮ ರಚನೆಗಳನ್ನು ನೀಡಿರುವರು. ಕುಟುಂಬದ ಮೂಲಭೂತ ಲಕ್ಷಣಗಳ ಸುತ್ತಮುತ್ತಲೇ ಪ್ರತಿಯೊಂದು ಕಾದಂಬರಿಯು ಅನಾವರಣವಾಗಿರುವುದು.

ಕುಟುಂಬವು ಒಂದು ಪ್ರಮುಖ ಸಂಸ್ಥೆಯಾಗಿರುವುದರಿಂದ ಹಲವಾರು ಮುಖ್ಯ ಕಾರ್ಯಗಳನ್ನು ನಿರ್ವಹಿಸುವುದು. ನಾಗರಿಕತೆಯು ವಿಕಸಿಸುತ್ತಾ ಬಂದಂತೆಲ್ಲಾ ಕುಟುಂಬದ ಪಾತ್ರದಲ್ಲಿ ಮತ್ತು ಕಾರ್ಯಗಳಲ್ಲಿ ಹಲವಾರು ಬದಲಾವಣೆಗಳು ಸಂಭವಿಸುತ್ತಾ ಬಂದಿದ್ದರೂ ಕುಟುಂಬದ ಕಾರ್ಯ ಪ್ರಾಮುಖ್ಯತೆ ಇಂದಿಗೂ ಕಡಿಮೆಯಾಗಿಲ್ಲ. ಆದಾಗ್ಯೂ ಆಧುನಿಕ ಕುಟುಂಬದ ಕಾರ್ಯಕ್ಷೇತ್ರವು ಮಾತ್ರ ಸಂಕುಚಿತವಾಗುತ್ತಿದೆ ಎಂಬ ಮಾತು ನಿಜ. ಕುಟುಂಬದ ಅತಿ ಅಗತ್ಯದ ಕಾರ್ಯಗಳನ್ನು ಪ್ರಾಥಮಿಕ ಅಥವಾ ಮುಖ್ಯ ಕಾರ್ಯಗಳೆಂದು ಕರೆಯಬಹುದು.

ಮಾನವನ ಲೈಂಗಿಕಾಪೇಕ್ಷೆಯನ್ನು ಒಂದು ನಿರ್ಧಿಷ್ಟ ರೀತಿಯಲ್ಲಿ ನಿಯಂತ್ರಿಸದಿದ್ದರೆ, ಅದರಿಂದ ಸಮಾಜ ಅಸ್ತವ್ಯಸ್ತಗೊಳ್ಳುತ್ತದೆ. ಅವನ ಲೈಂಗಿಕಾಸಕ್ತಿಯನ್ನು ಸಮರ್ಥ ರೀತಿಯಲ್ಲಿ ನಿಯಂತ್ರಿಸುವ ಕಾರ್ಯಗಳನ್ನು ಕುಟುಂಬ ಮಾಡುತ್ತದೆ. ಕುಟುಂಬದ ಸದಸ್ಯರ ಮೇಲೆ ನಿರ್ದಿಷ್ಟ ರೀತಿಯಲ್ಲಿ ವಿಧಿನಿಷೇಧಗಳನ್ನು ಹೇರಿ ತನ್ಮೂಲಕ ವ್ಯಕ್ತಿಯ ಸಂಬಂಧಗಳನ್ನು ಲೈಂಗಿಕ ಬಯಕೆಗಳನ್ನು ನಿರ್ಧರಿಸುತ್ತದೆ. ತಂದೆ, ತಾಯಿ, ಮಕ್ಕಳು, ಒಡಹುಟ್ಟಿದವರು ಮುಂತಾದವರಲ್ಲಿ ಲೈಂಗಿಕ ಸಂಬಂಧವನ್ನು ನಿಷೇಧಿಸುವುದರ ಮೂಲಕ ಕುಟುಂಬ ಮಾನವನ ಲೈಂಗಿಕಾಸಕ್ತಿಗೆ ಸಂಸ್ಕೃತಿಯ ಮೆರುಗನ್ನಿಸುತ್ತದೆ. ಈ ವ್ಯಾಪ್ತಿಯಲ್ಲಿ ಚಿತ್ರಿತವಾಗಿರುವ 'ಕೀಲುಗೊಂಬೆ' ಆರ್ಯಾಂಬರ 'ಸವತಿಯ ನೆರಳು'.

ಸಂತಾನೋತ್ಪತ್ತಿ ಕೇವಲ ಲೈಂಗಿಕ ಪ್ರಕ್ರಿಯೆಯಾಗದೇ ಸಾಮಾಜಿಕ ಜವಾಬ್ದಾರಿಯೂ ಆಗಿದೆ. ಯಾವ ಸಮಾಜವೇ ಅಗಲಿ ನಿರಂತರವಾಗಿ ಅಸ್ತಿತ್ವದಲ್ಲಿರಲು ಈ ಸಂತಾನೋತ್ಪತ್ತಿಯ ಬಯಕೆಯೇ ಕಾರಣ. 'ಮಕ್ಕಳೇ ಮನೆಗೆ ಮಾಣಿಕ್ಯ' ಎನ್ನುವ ಭಾರತೀಯ ನಂಬಿಕೆಗಳು ಕುಟುಂಬದಲ್ಲಿ ಮಕ್ಕಳ ಪ್ರಾಧಾನ್ಯತೆಯನ್ನು ಎತ್ತಿ ತೋರಿಸುತ್ತದೆ. ಆದರೆ ಹುಟ್ಟಿದ ಮಕ್ಕಳಿಗೆ ಸಾಮಾಜಿಕ ಮನ್ನಣೆ, ಕಾನೂನಿನ ರಕ್ಷಣೆ ಮುಂತಾದವುಗಳು ಕುಟುಂಬದಿಂದಲೇ ದೊರಕುತ್ತದೆ. ಸಮಾಜವನ್ನು ಜೀವಂತವಾಗಿ ಇಟ್ಟಿರುವುದು ಕುಟುಂಬವೇ ಎಂದು ಹೇಳಬಹುದು. ಇಂತಹ ಪರಿಕಲ್ಪನೆಯ ತ್ರಿವೇಣಿಯವರ 'ವಸಂತಗಾನ' ಆರ್ಯಾಂಬರ 'ಕಾಮನಬಿಲ್ಲು'.

ಮಕ್ಕಳನ್ನು ಸಾಕಿ ಸಲಹುವುದು, ಲಾಲನೆ ಪೋಷಣೆಗೈಯುವುದು ಕುಟುಂಬದ ಮುಖ್ಯ ಕಾರ್ಯ. ನವಜಾತ ಶಿಶುವು ಹುಟ್ಟಿದ ಬಹುಕಾಲದವರೆಗೂ ಅಸಹಾಯಕವಾಗಿಯೇ ಇರುವುದೆಂಬುದರ ಹಿನ್ನೆಲೆಯಲ್ಲಿ ಅವುಗಳನ್ನು ಬೆಳೆಸುವ ಕುಟುಂಬದ ಹೊಣೆಗಾರಿಕೆಯ ಮಹತ್ವ ವೇದ್ಯವಾಗುವುದು. ಕಾಯಿಲೆಗಳಿಗೆ ತುತ್ತಾಗಿ ಶಿಶುಗಳು ಮರಣವನ್ನಪ್ಪದಂತೆ

ಕುಟುಂಬವು ಅವುಗಳಿಗೆ ರಕ್ಷಣೆ ನೀಡುವುದು ಮಕ್ಕಳನ್ನು ಸಾಕಿ ಸಲಹಿ ಅವುಗಳನ್ನು ಸಮಾಜದ ಸತ್ಪ್ರಜೆಗಳನ್ನು ಮಾಡುವ ಹೊಣೆ ಕುಟುಂಬದ್ದು. ಈ ನಿಟ್ಟಿನಲ್ಲಿ ಆರ್ಯಾಂಬರ 'ಬಸವಿ' ಬದುಕಿನ ಬವಣೆಯಲ್ಲಿ ತ್ರಿವೇಣಿಯವರ 'ಹೂವು ಹಣ್ಣು'.

ಸಾಮಾಜಿಕರಣವು ಕುಟುಂಬದ ಅತಿಮುಖ್ಯ ಕರ್ತವ್ಯಗಳಲ್ಲೊಂದು ಯಾವ ಪೂರ್ವಾಗ್ರಹಗಳು ಇಲ್ಲದೆ ವ್ಯಕ್ತಿ ಕುಟುಂಬದಲ್ಲಿ ಜನಿಸುತ್ತಾನೆ. ಅವನನ್ನು ಪಂಡಿತನನ್ನಾಗಿಸುವ ಅಥವಾ ಕಳ್ಳನನ್ನಾಗಿಸುವ ಹೊಣೆಗಾರಿಕೆಯನ್ನು ಕುಟುಂಬ ಹೊತ್ತಿರುತ್ತದೆ. ವ್ಯಕ್ತಿಯಲ್ಲಿ ಸ್ವಾರ್ಥ, ತ್ಯಾಗ, ಪ್ರೇಮ, ದ್ವೇಷ ತನ್ನದು ಮತ್ತು ಇತರರದು ಎನ್ನುವ ಭಾವನೆಯನ್ನು ಕುಟುಂಬ ಬೆಳೆಸುತ್ತದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಸಂಬಂಧಗಳ ಮಧುರತೆ ಮತ್ತು ಮಹತ್ವ ಇವುಗಳನ್ನು ಕುಟುಂಬ ತಿಳಿಸಿಕೊಡುತ್ತದೆ. ಈ ಪ್ರತಿಯೊಂದು ಸಂಬಂಧಗಳ ವ್ಯಕ್ತಿಯಲ್ಲಿ ವಿಶಿಷ್ಟ ಸಂವೇದನೆಗಳನ್ನು ರೂಪುಗೊಳಿಸುತ್ತದೆ.

ವ್ಯಕ್ತಿ ತಂದೆಯಾಗಿ, ತಾಯಿಯಾಗಿ ಹೆಂಡತಿಯಾಗಿ, ಗಂಡನಾಗಿ, ಸೋದರ ಸೋದರಿಯಾಗಿ ಅನೇಕ ವಿವಿಧ ಪಾತ್ರಗಳನ್ನು ಅವುಗಳ ಜವಾಬ್ದಾರಿಯನ್ನು ಅರಿತು ನಡೆಯಲು ಕುಟುಂಬದ ಮೂಲಕವೇ ಸಿದ್ಧರಾಗುತ್ತಾರೆ. ಇಂದೂ ಕೂಡ ಪ್ರತಿಯೊಂದು ಮಗುವು ತನ್ನನ್ನು ಕುಟುಂಬದ ಮೂಲಕವೇ ಗುರುತಿಸಿಕೊಳ್ಳುತ್ತದೆ. ಇದೇ ಹಾದಿಯಲ್ಲಿ ಆರ್ಯಾಂಬರ 'ಪರಂಪರೆ' ತ್ರಿವೇಣಿಯವರ 'ಹಣ್ಣೆಲೆ ಚಿಗುರಿದಾಗ' ಚಿತ್ರಣವಾಗಿದೆ.

ಕುಟುಂಬವು ಭಾವನಾತ್ಮಕ ಅವಶ್ಯಕತೆಗಳನ್ನು ಪೂರೈಸುವ ಒಂದು ಮುಖ್ಯ ನೆಲೆ. ಮಾನವನ ಪ್ರೇಮ, ಕಾಮ, ಸ್ವಾರ್ಥ, ತ್ಯಾಗ, ಸ್ನೇಹ, ದ್ವೇಷ ಮುಂತಾದ ಭಾವನಾತ್ಮಕ ಅವಶ್ಯಕತೆಗಳನ್ನು ಸಮರ್ಥವಾಗಿ ಪೂರೈಸುತ್ತದೆ. ಆಧುನಿಕ ಕುಟುಂಬವು ಇನ್ನೂ ಉಳಿದಿರಬೇಕಾದರೆ ಈ ಭಾವನಾತ್ಮಕ ಅವಶ್ಯಕತೆಗಳ ಪೂರೈಕೆಯೇ ಕಾರಣವೆಂದು ಹೇಳಬಹುದು.

ಅವಶ್ಯಕತೆಗಳನ್ನು ಹಣಕೊಟ್ಟರೆ ಪೂರೈಸಬಲ್ಲ ಅನೇಕ ವ್ಯವಸ್ಥೆಗಳಿದ್ದರೂ ಪ್ರೀತಿ, ಪ್ರೇಮ ಇವುಗಳನ್ನು ನೀಡುವ ಏಕೈಕ ವ್ಯವಸ್ಥೆ ಎಂದರೆ ಕುಟುಂಬ ತಾಯಿ ಮಕ್ಕಳ ನಿರ್ವಾಜ್ಯ ಪ್ರೇಮ, ಗಂಡ ಹೆಂಡಿರ ಆಕರ್ಷಣೆ ಮತ್ತು ಜವಾಬ್ದಾರಿ ಇವುಗಳು ಕುಟುಂಬದಲ್ಲಿಲ್ಲದೆ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ ತ್ರಿವೇಣಿಯವರ 'ಹೃದಯಗೀತೆ' ಆರ್ಯಾಂಬರ 'ಸಂಬಂಧಗಳು'.

ಕುಟುಂಬದ ಮಾಧ್ಯಮಿಕ ಕರ್ತವ್ಯಗಳು ವೈವಿಧ್ಯಪೂರ್ಣವಾಗಿದೆ. ಸಮಾಜದ ರಚನೆ ಮತ್ತು ಅವಶ್ಯಕತೆಗಳನ್ನಾಧರಿಸಿ ಅವು ಬದಲಾವಣೆ ಹೊಂದುತ್ತಾ ಹೋಗುತ್ತವೆ. ಆಹಾರ ಸಂಗ್ರಹಣೆಯ ಪುರಾತನ ಯುಗದಿಂದ ಪ್ರಾರಂಭಿಸಿ, ಕೈಗಾರಿಕಾ ಕ್ರಾಂತಿಯ ಪುಸ್ತಕದ ಯುಗದವರೆಗೆ ಕುಟುಂಬ ಈ ಕರ್ತವ್ಯಗಳನ್ನು ನಿರ್ವಹಿಸುತ್ತಾ ಬಂದಿದೆ.

ಪುರಾತನ ಕುಟುಂಬ ಸ್ವಯಂಪೂರ್ಣ ಉತ್ಪಾದನಾ ಘಟಕವಾಗಿದ್ದಿತು. ಕುಟುಂಬದ ಅವಶ್ಯಕತೆಗಳನ್ನು ಪೂರೈಸಲು ಪ್ರತಿಯೊಬ್ಬ ಸದಸ್ಯರೂ ಕುಟುಂಬದಲ್ಲಿಯೇ ದುಡಿಯುತ್ತಿದ್ದರು. ಭಾರತೀಯ ಅವಿಭಕ್ತ ಕುಟುಂಬ ಇದಕ್ಕೆ ಅತ್ಯುತ್ತಮ ಉದಾಹರಣೆ. ಆದರೆ, ಕೈಗಾರಿಕಾ ಕ್ರಾಂತಿಯ ನಂತರ ಈ ಚಿತ್ರ ಬದಲಾಗಿದೆ. ಔದ್ಯೋಗಿಕ ಕ್ರಾಂತಿಗೂ ಪೂರ್ವದಲ್ಲಿ ಸ್ತ್ರೀ ಪುರುಷರ ನಡುವೆ ಸ್ಪಷ್ಟ ಶ್ರಮ ವಿಭಜನೆಯೂ ಇದ್ದು, ಪುರುಷರು ಹೊಲ ಗದ್ದೆಗಳಲ್ಲಿ ದುಡಿಯುತ್ತಿದ್ದರೆ, ಸ್ತ್ರೀಯರು ಗೃಹಕೃತ್ಯಗಳಲ್ಲಿ ಮಗ್ನರಾಗುತ್ತಿದ್ದರು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಕುಟುಂಬವು ತನ್ನ ಆರ್ಥಿಕ ಪ್ರಾಮುಖ್ಯತೆಯನ್ನು ಬಹಳಷ್ಟು ಕಳೆದುಕೊಂಡಿದೆ. ಕುಟುಂಬದ ಹೊರಗಡೆ ಇಂದು ಸದಸ್ಯರು ದುಡಿಯುವುದೇ ಅಧಿಕವಾಗಿದೆ.

ನಗರಗಳಲ್ಲಿ ಈ ಸ್ಥಿತಿ ಹೆಚ್ಚಾಗಿ ಕಂಡು ಬರಬಹುದಾದರೆ, ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಇಂದಿಗೂ ಕುಟುಂಬವು ತನ್ನ ಆರ್ಥಿಕ ಮಹತ್ವವನ್ನು ಸ್ವಲ್ಪ ಮಟ್ಟಿಗೆ ಉಳಿಸಿಕೊಂಡಿದೆ. ತ್ರಿವೇಣಿರವರು 'ಅಪಸ್ವರ'ದ ಶ್ಯಾಮ, ಆರ್ಯಾಂಬರ 'ಗುರಿ'ಯ ಮೀನ ಈ ವ್ಯಾಪ್ತಿಗೆ ಸೇರಿದ ಪಾತ್ರಗಳಾಗಿ ಕಂಡುಬರುತ್ತಾರೆ. ಪಟ್ಟಣದ ವಾತಾವರಣಕ್ಕೆ ಒಗ್ಗದೆ ಹಳ್ಳಿಯಲ್ಲಿಯೇ ತನ್ನ ವ್ಯವಸಾಯ ಕಾರ್ಯಗಳಲ್ಲಿ ಮುಳುಗಿ ಆರ್ಥಿಕವಾಗಿ ಸಬಲನಾಗಿರುವ ಶ್ಯಾಮ. ಪಟ್ಟಣದಲ್ಲಿದ್ದರೂ ಹಳ್ಳಿಗೆ ತನ್ನ ಪತಿ ಜಯರಾಮನನ್ನು ಕರೆದುಕೊಂಡು ಹೋಗುವ ಮೀನ ಇವರಿಬ್ಬರೂ ಸಮಾನವಾಗಿ ಕಾಣುತ್ತಾರೆ.

ಶಿಕ್ಷಣವು ಕುಟುಂಬದ ಬಹು ಮುಖ್ಯ ಕರ್ತವ್ಯವಾಗಿದೆ. ಕುಟುಂಬವೇ ಮೊದಲ ಶಾಲೆ, ತಾಯಿಯೇ ಅದರ ಮೊದಲ ಗುರು. ಆಧುನಿಕ ಶಿಕ್ಷಣವು ಅತ್ಯಂತ ಕ್ಲಿಷ್ಟವಾದ ಶಿಕ್ಷಣವಾಗಿದೆ. ಔಪಚಾರಿಕ ಶಿಕ್ಷಣ ವ್ಯಕ್ತಿಗೆ ಕುಟುಂಬದಲ್ಲಿ ಪೂರ್ಣವಾಗಿ ದೊರೆಯಲಾರದು. ಹೀಗಾಗಿ ಅತಿ ಚಿಕ್ಕ ವಯಸ್ಸಿನಲ್ಲಿ ಮಕ್ಕಳು ಶಿಕ್ಷಣಕ್ಕಾಗಿ ಮನೆಯಿಂದ ಹೊರಬೀಳುತ್ತಾರೆ. ಆದರೂ ಉತ್ತಮ ಶಿಕ್ಷಣಾವಕಾಶಗಳನ್ನು ಒದಗಿಸಿಕೊಡುವಲ್ಲಿ ಕುಟುಂಬದ ಹೊಣೆಗಾರಿಕೆಯೇನು ಕಡಿಮೆ ಇಲ್ಲ. ಔಪಚಾರಿಕ ಶಿಕ್ಷಣವು ಶಿಕ್ಷಣ ಸಂಸ್ಥೆಗಳಿಂದ ದೊರೆತರೆ ಅನೌಪಚಾರಿಕ ಶಿಕ್ಷಣವು ಕುಟುಂಬದಿಂದಲೇ ದೊರಕುತ್ತಿದೆ. ಇಂದಿಗೂ ಅನೇಕ ಕುಟುಂಬಗಳಲ್ಲಿ ಮಾತಾ ಪಿತೃಗಳು ತಮ್ಮ ಮಕ್ಕಳಿಗೆ ತಮ್ಮ ಅನುವಂಶಿಕ ವೃತ್ತಿಯ ಬಗ್ಗೆ ಶಿಕ್ಷಣ ಕೊಡುವ ಕ್ರಮವಿದೆ.

ಇಂದಿನ ಆಧುನಿಕ ಸಮಾಜದಲ್ಲಿ ಮಾತ್ರ ಪ್ರತ್ಯೇಕ ಶೈಕ್ಷಣಿಕ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿದ್ದು, ಕುಟುಂಬವು ತನ್ನ ಸಾಂಪ್ರದಾಯಿಕ, ಶೈಕ್ಷಣಿಕ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದೆ. ಆರ್ಯಾಂಬರ 'ಪ್ರಕೃತಿ ಪುರುಷ' ಕಾದಂಬರಿಯ ಮಂಗಳಾ, ತ್ರಿವೇಣಿಯವರ 'ಮುಕ್ತಿ'ಯ ಅಮೃತಾ ಈ ತೆರನಾದ ಕಾರ್ಯದಲ್ಲಿ ತೊಡಗುವವರು. ತಮ್ಮ ಶಿಕ್ಷಣಕ್ಕಾಗಿ, ಉದ್ಯೋಗಕ್ಕಾಗಿ ಪರವೂರಿಗೆ ಹೋಗಿ ನೆಲೆ ನಿಲ್ಲುವ ಹಂತದಲ್ಲಿರುವವರು.

ಕುಟುಂಬವು ಹಿರಿಯರನ್ನು ಮತ್ತು ಕಿರಿಯರನ್ನು ಧಾರ್ಮಿಕ ರೀತಿ ನೀತಿಗಳಿಗೆ ಸಜ್ಜುಗೊಳಿಸುವ ವೈಶಿಷ್ಟಪೂರ್ಣ ಸಾಮಾಜಿಕ ವ್ಯವಸ್ಥೆಯಾಗಿದೆ. ಪ್ರತಿಯೊಂದು ಸಾಮಾಜಿಕ ವ್ಯವಸ್ಥೆಯಲ್ಲಿಯೂ ಈ ಧಾರ್ಮಿಕ ಕರ್ತವ್ಯಗಳು ಮಹತ್ತರ ಪಾತ್ರ ವಹಿಸುತ್ತದೆ. ಒಳ್ಳೆಯದು ಮತ್ತು ಕೆಟ್ಟದ್ದು, ಪಾಪ ಪುಣ್ಯ, ನ್ಯಾಯ ಅನ್ಯಾಯ, ಸತ್ಯ ಪ್ರಾಮಾಣಕತೆ ಮುಂತಾದ ಮಾನವೀಯ ಮೌಲ್ಯಗಳನ್ನು ಕುಟುಂಬ ಧಾರ್ಮಿಕ ಕರ್ತವ್ಯಗಳಾಗಿ ಬೋಧಿಸುತ್ತದೆ. ಮೂರ್ತಿ ಪೂಜೆ, ಧಾರ್ಮಿಕ ಸಮಾರಂಭಗಳು ಮುಂತಾದವುಗಳ ಬಗ್ಗೆ ಚಿಕ್ಕಂದಿನಿಂದಲೇ, ವ್ಯಕ್ತಿಗೆ ತರಬೇತಿ ಕೊಡಲಾಗುತ್ತದೆ.

ಆಧುನಿಕ ಕುಟುಂಬಗಳಲ್ಲಿ ಧಾರ್ಮಿಕ ಕರ್ತವ್ಯಗಳು ಕ್ಷೀಣವಾಗುತ್ತಾ ಬರುತ್ತಿದೆ. ಹಳ್ಳಿಗಳಲ್ಲಿ ಮತ್ತು ನಗರಗಳಲ್ಲಿ ಧಾರ್ಮಿಕ ವಿಧಿಗಳು ಕೇವಲ ಸಂಪ್ರದಾಯಗಳಾಗಿ ಉಳಿದುಕೊಂಡು ಬಂದಿವೆ. ಆರ್ಯಾಂಬರ 'ಪರಂಪರೆ', ತ್ರಿವೇಣಿಯವರ 'ಹಣ್ಣೆಲೆ ಚಿಗುರಿದಾಗ' ಈ ನಿಟ್ಟಿನಲ್ಲಿ ಸಿದ್ಧವಾಗಿದೆ.

ಪ್ರಾಚೀನ ಕುಟುಂಬ ಮನೋರಂಜನೆಯ ಕೇಂದ್ರವಾಗಿದ್ದರು. ಗಂಡ ಮತ್ತು ಹೆಂಡತಿ ಪ್ರೇಮ ಮಗುವಿನ ತೊದಲ ನುಡಿ, ಹಿರಿಯರ ಹಿತನುಡಿ, ಪರಸ್ಪರ ಆತ್ಮೀಯ ಮಾತುಕತೆ, ಕಾವ್ಯವಾಚನ, ಧರ್ಮಗ್ರಂಥಗಳ ಪಠನ ಹಾಡುವುದು, ಭಜನೆ ಮಾಡುವುದು ನರ್ತಿಸುವುದು, ಆಟವಾಡುವುದು, ಬಂಧುಗಳನ್ನು ಭೇಟಿ ಮಾಡುವುದು, ಸಾಮಾಜಿಕ ಹಾಗೂ ಧಾರ್ಮಿಕ ಸಮಾರಂಭಗಳನ್ನು ನಡೆಸುವುದು ಮುಂತಾದ ಚಟುವಟಿಕೆಗಳ ಮೂಲಕ ಕುಟುಂಬದ ಸದಸ್ಯರು ಮಾನಸಿಕ ನೆಮ್ಮದಿ ಪಡೆಯುತ್ತಾರೆ. ಆದರೆ, ಈ ರೀತಿಯ ಮನರಂಜನೆಯ ಆಧುನಿಕ ಕುಟುಂಬಗಳಲ್ಲಿ ಕಂಡುಬರುವುದಿಲ್ಲ. ಚಲನಚಿತ್ರ, ಕ್ಲಬ್, ಉಪಹಾರ ಗೃಹಗಳು ಮತ್ತು ಪ್ರದರ್ಶನಗಳು, ನೃತ್ಯಗೃಹಗಳು ಮುಂತಾದವುಗಳಲ್ಲಿ ವ್ಯಕ್ತಿ ಇಂದು ಹೆಚ್ಚು ಕಾಲವನ್ನು ಕಳೆಯುತ್ತಾನೆ.

ಒಟ್ಟಿನಲ್ಲಿ ಇಂದಿನ ಆಧುನಿಕ ಸಮಾಜದಲ್ಲಿ ಮನೋರಂಜನೆ ನೀಡಲು ಸ್ಥಾಪಿತವಾಗಿರುವ ಅನೇಕ ವ್ಯಾಪಾರ ಸಂಸ್ಥೆಗಳು ಕುಟುಂಬದಿಂದಲೇ ಈ ಕಾರ್ಯಗಳನ್ನು ಕಸಿದುಕೊಳ್ಳುತ್ತಿದೆ. ಆದ್ದರಿಂದ ಹಣ ಮತ್ತು ಕುಟುಂಬದ ಹೊರಗಡೆಯಲ್ಲಿಯೇ ಮನೋರಂಜನೆ ಪಡೆಯುವ ಪ್ರವೃತ್ತಿ ಇಂದು ಹೆಚ್ಚುತ್ತವೆ. ಈ ಅಂಶಗಳು ತ್ರಿವೇಣಿರವರ 'ಬಾಳು ಬೆಳಗಿತು', ಆರ್ಯಾಂಬರ

'ಕಪ್ಪು ಬಿಳುಪು' ಕಾದಂಬರಿಯಲ್ಲಿ ಕಂಡುಬರುತ್ತವೆ. ಹೀಗೆ ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಕುಟುಂಬವನ್ನು ವಿಶ್ಲೇಷಿಸಿದಾಗ ಹೊರಹೊಮ್ಮುವ ವಿಷಯಗಳು ಹತ್ತು ಹಲವು. ಈ ಅಂಶಗಳನ್ನು ಪರಿಗಣಿಸಿ ತ್ರಿವೇಣಿರವರ ಕಾದಂಬರಿಗಳನ್ನು ವಿಶ್ಲೇಷಿಸಿದಾಗ ಕುಟುಂಬದ ಒಳ ಹೊರ ಹರಿವಿನಲ್ಲೇ ಕಾದಂಬರಿಗಳ ರಚನೆ ಇರುವುದು ಮನದಟ್ಟಾಗುತ್ತದೆ.

ಈ ನಿಟ್ಟಿನಲ್ಲಿ ಆರ್ಯಾಂಬರ ಕಾದಂಬರಿಗಳಾಗಲೀ, ತ್ರಿವೇಣಿರವರ ಕಾದಂಬರಿಗಳಾಗಲೀ ಹೊರತಾಗಿಲ್ಲ. ಇವರ ಕಾದಂಬರಿಗಳು ಕೌಟುಂಬಿಕ ವ್ಯವಸ್ಥೆ, ಕುಟುಂಬ ರಚನೆ, ಸಾಂಸಾರಿಕ ಪಾತ್ರ ರಚನೆಗಳ ಸುತ್ತ ಮುತ್ತಲೇ ಹೆಣೆದುಕೊಂಡಿವೆಯೇ ಹೊರತು ಅವುಗಳಿಂದ ಹೊರ ಉಳಿದಿಲ್ಲ.

ಆರ್ಯಾಂಬರ ಕಾದಂಬರಿಗಳಲ್ಲಿ ಕುಟುಂಬ

ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ರಾಜನ ಪಾಲಿಗೆ ತಂದೆ ಶಿವರಾಮಯ್ಯರವರೇ ತಾಯಿಯೂ ಆಗಿದ್ದಾರೆ. ತಂದೆಯ ಅಕ್ಕರೆಯ ಪೋಷಣೆಯಲ್ಲಿ ಶೈಶವ ಕಳೆದು, ಯೌವನದ ಹೊಸ್ತಿಲಲ್ಲಿ ಕಾಲಿಡುವ ರಾಜ. ಇವಳ ಬಾಳಿಗೊಂದು ಬೆಳಕು ತರುವವಳು ಕಮಲ. ಅಕ್ಕರೆಯ ಮಗ ರಾಜನಿಗೆ ಕಮಲಾಳನ್ನು ಸೊಸೆಯಾಗಿ ತರಲು ತಂದೆಗೆ ಇಷ್ಟವಿಲ್ಲ. ಏಕೆಂದರೆ ರಾಯರಿಗೆ ಮಗನ ಮೇಲಿನ ಪ್ರೀತಿ ಒಂದೆಡೆಯಾದರೆ, ಇನ್ನೊಂದು ಕಾರಣ ತಮ್ಮ ಸೊಸೆಯಾಗುವವಳು ಖಾಸಗಿ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿರುವುದು. ಶಿವರಾಮಯ್ಯರವರ ಪ್ರಕಾರ ನರ್ಸ್ ಕೆಲಸ ಮಾಡುವದೆಂದರೆ ಕೀಳು ದರ್ಜೆಯ ಕೆಲಸ ಮಾಡಿದಂತೆ ಎಂಬುದು. ಆದರೆ, ಕಮಲಾಳನ್ನು ಪ್ರೀತಿಸಿರುವ ರಾಜ, ತಂದೆಯ ಮಾತಿಗೆ ವಿರುದ್ಧವಾಗಿ ನಡೆದು ಕಮಲಾಳನ್ನು ಮದುವೆಯಾಗಲು ಹೊರಟಾಗ ರಾಯರು ಇಷ್ಟವಿಲ್ಲದಿದ್ದರೂ ಮುಂದೆ ನಿಂತು ಮದುವೆ ಮಾಡುತ್ತಾರೆ. ಹೀಗೆ ಸಾಗುವ ಕುಟುಂಬದ ಕಥಾ ಹಿನ್ನೆಲೆಯೇ 'ಹೊಂಗನಸು'.

ಗಂಗಳಿಗೆ ರೂಪ, ವಿದ್ಯೆ, ಗುಣ ಎಲ್ಲವೂ ಇದೆ ಆದರೆ, ಬಾಲ್ಯದಲ್ಲಿಯೇ ಬಂದ ಪೋಲಿಯೋ ಕಾಯಿಲೆ ಅವಳ ಕಾಲನ್ನು ಕಸಿದುಕೊಂಡಿದೆ. ಗಂಗಳಿಗೆ ಎಲ್ಲರಂತೆ ತಾನೂ ಮದುವೆಯಾಗಿ ಗಂಡನಿಗೆ ಪ್ರೀತಿಯ ಮಡದಿಯೆನಿಸಬೇಕು, ಮುದ್ದು ಮಕ್ಕಳಿಗೆ ಮಮತೆಯ ತಾಯಾಗಬೇಕು. ತನ್ನ ಬಾಳ್ವೆ ಪೂರ್ಣವಾಗಬೇಕೆಂದೆಲ್ಲಾ ಕನಸು ಕಾಣುತ್ತಿದ್ದಾಳೆ. ಆದರೆ,

ಕುಂಟಿಯಾದ ತನ್ನನ್ನು ಯಾರು ಮದುವೆಯಾಗುತಾರೆನ್ನುವ ಕಟು ಸತ್ಯ ಅರಿವಾದಂತೆಲ್ಲಾ ಅವಳ ಕನಸಿನ ಮನೆ ಕುಸಿಯುತ್ತದೆ. ಆಗ ಗಂಗ ತನ್ನಂತೆ ಪೋಲಿಯೋ ಕಾಯಿಲೆಗೆ ಬಲಿಯಾಗಿರುವ ನೂರಾರು ಜನರಿಗೆ ವೈದ್ಯಳಾಗಿ ಸೇವೆ ಸಲ್ಲಿಸಬೇಕೆಂದು ನಿರ್ಧರಿಸುತ್ತಾಳೆ. ಇದನ್ನು ಒಪ್ಪಿ ಸಹಕರಿಸುವ ಕುಟುಂಬದ 'ಪ್ರಿಯ ಸಂಗಮ'.

ತಂದೆಯನ್ನು ಕಳೆದುಕೊಂಡು ತಬ್ಬಲಿಯಾಗಿರುವ ನಾಯಕಿ ರಮಾಳಿಗೆ ಒಂದು ಕಡೆ ಹೃದಯದ ದುರ್ಬಲತೆಯಿಂದ ನರಳುತ್ತಿರುವ ತಾಯಿಯ ಸೇವೆ ಮಾಡಬೇಕಾಗಿದೆ. ಇನ್ನೊಂದು ಕಡೆ ತಂಗಿ, ತಮ್ಮಂದಿರ ಪಾಲನೆ ಮಾಡುವ ಜವಾಬ್ದಾರಿಯೂ ಇದೆ. ಇವೆಲ್ಲದರ ಜೊತೆಗೆ ಕೆಲಸದ ಒತ್ತಡ ಬೇರೆ. ಹೀಗೆ ಬಡತನದ ಬೇಸರ, ನೀರಸದ ಬಾಳು, ಬೆಳಗಿನಿಂದ ರಾತ್ರಿಯವರೆಗೂ ದುಡಿತ ಇವೆಲ್ಲರಿಂದ ಬೇಸತ್ತ ರಮಾಳಿಗೆ ಬದುಕು ಬರಿ ಶೂನ್ಯವೆನಿಸಿದೆ. ಆದರೂ ಅವಳಿಗೆ ತಾನೂ ಸಹ ಎಲ್ಲಾ ಹುಡುಗಿಯರಂತೆ ಬೆಲೆಬಾಳುವ ಬಟ್ಟೆಗಳನ್ನು ಧರಿಸಿ, ಕೃತಕ ಅಲಂಕಾರ ಸಾಮಾಗ್ರಿಗಳಿಂದ ದೇಹ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಬೇಕೆಂಬ ಆಸೆ ಇದೆ.

ರಮಾ ಕಾಲೇಜು ಸೇರುವ ಅಗತ್ಯ ಎಲ್ಲ ಅವಕಾಶದಿಂದಲೇ ವಂಚಿತಳಾದರೂ, ಟೈಪ್‌ರೈಟಿಂಗ್, ಶಾರ್ಟ್‌ಹ್ಯಾಂಡ್ ಕಲಿತಿದ್ದರಿಂದ ಮಾವ ರಂಗಣ್ಣನ ಸಹಾಯದಿಂದಾಗಿ ಕೆಲಸಕ್ಕೆ ಸೇರುತ್ತಾಳೆ. ಆಕೆ ಕೆಲಸಕ್ಕೆ ಸೇರಿದ ಕೆಲವು ದಿನಗಳಲ್ಲಿಯೇ ಅವಳ ತಾಯಿ ಸಾವನ್ನಪ್ಪುತ್ತಾಳೆ. ತಾಯಿಯ ಅನಿರೀಕ್ಷಿತ ಸಾವಿನಿಂದ ಭಯ ಭೀತಿ ಹುಟ್ಟಿಸುವ ಸನ್ನಿವೇಶದಲ್ಲಿ ಆ ರಾತ್ರಿ ಎದುರಿಸಿದಾಗ ರಮ ತತ್ತರಿಸಿ ಹೋಗುತ್ತಾಳೆ. ಆ ಸನ್ನಿವೇಶ ರಮಾಳ ಮಾನಸಿಕ ಸ್ವಸ್ಥತೆಯನ್ನು ಪಲ್ಲಟಗೊಳಿಸುತ್ತದೆ. ಇದರ ಪರಿಣಾಮವಾಗಿ 'ಒಡೆದ ವ್ಯಕ್ತಿತ್ವ' ಎನ್ನುವ ಮನೋರೋಗಕ್ಕೆ ಬಲಿಯಾಗುವ ರಮಾಳ ಕುಟುಂಬದ ದುಃಸ್ಥಿತಿಯ ಕುರಿತ 'ಎರಡು ಮುಖ'.

ಸಾಲದ ಹೊರೆಯನ್ನು ತಾಳಲಾರದೆ ಇದ್ದ ನಾಲ್ಕು ಎಕರೆ ಭೂಮಿಯನ್ನು ಮಾರಿ ಮುಂದೇನು? ಎಂಬ ಚಿಂತೆಯಲ್ಲಿ ಮುಳುಗಿ ಗೆಳೆಯನ ಮಾತಿನಂತೆ ಪರವೂರಿಗೆ ಸೇರಿ ಬಡತನದಲ್ಲೆ ಬೆಂದು ನೋಯುವ ಅಹುಜಾ ಸಂಸಾರದ ಕಥೆಯುಳ್ಳ 'ಆ ಹಾಡು'.

ಬಾಲ್ಯದಿಂದಲೂ ಮನದಲ್ಲಿ ಪ್ರೀತಿಯ ಬೀಜ ನೆಟ್ಟು ಅದು ಮೊಳಕೆಯೊಡೆದು, ಚಿಗುರಿ, ಹೆಮ್ಮರವಾದಾಗ ಅದರ ಬುಡಕ್ಕೆ ಕೊಡಲಿಯೇಟು ಹಾಕಿ, ದೂರ ಸರಿದ ಪ್ರಭಾಕರ ಮೋಸಗಾರ

ಕಪಟ ಮನಸ್ಸಿನ 'ದೂರದ ಬೆಟ್ಟ ನುಣ್ಣಗೆ' ಎಂಬ ಗಾದೆಯಂತೆ ಶ್ರೀಮಂತ ರೋಗಿಷ್ಠೆಯನ್ನು ಹಣದಾಸೆಗಾಗಿ ಮದುವೆಯಾದಾಗ ಇದರಿಂದ ನೊಂದರೂ ತೋರಗೊಡದೆ ತನ್ನ ಜವಾಬ್ದಾರಿಯನ್ನು ಕಳೆದುಕೊಂಡು ಸ್ವತಂತ್ರ್ಯಳಾಗಿ ಬದುಕು ಬಯಸುವ ರಾಧಾಳ ಬದುಕಲ್ಲಿ ವಿದುರ ರಾಜಣ್ಣನ ಆಗಮನವಾಗುವ ಕೌಟುಂಬಿಕ ವಿಸ್ತಾರದ 'ಬೇವು ಬೆಲ್ಲ'.

ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ನಿದರ್ಶನಕ್ಕೆ ತಕ್ಕಂತೆ ಶಾಂತಮ್ಮ ಲತಾಳ ಬಾಳಿಗೆ ಹಿಂಸಿಸುವ ಮುಳ್ಳಾಗಿ ಕಂಡುಬರುತ್ತಾಳೆ. ಬಡ ಹೆಣ್ಣನ್ನು ಮೆಚ್ಚಿ ಮದುವೆಯಾದ ಗಂಡ ಶಿವಪ್ರಸಾದ ಅಮ್ಮನಿಗೆ ತಕ್ಕ ಸುಪುತ್ರ. ಶಾಂತಮ್ಮ ಹಬ್ಬಿಸಿದ ಸಂಶಯದ ಮುಳ್ಳು ಅವರಿಬ್ಬರ ನಡುವೆ ಅಶಾಂತಿಯನ್ನು ತರುತ್ತದೆ. ತೀರಾ ಹದಗೆಟ್ಟ ತನ್ನ ಬದುಕನ್ನು ಸರಿಪಡಿಸಲಾಗದೆ ಒದ್ದಾಡುವ ತುಮುಲ ದ್ವಂದ್ವದಲ್ಲಿರುವ ಲತಾಳಲ್ಲಿ ಪ್ರತಿಭಟನಾ ಮನೋಭಾವ ಬರುವಂತೆ ಮಾಡುವ ಶೋಭಾಳ ಪ್ರಯತ್ನ ಕಂಡುಬರುತ್ತದೆ. ಡಾ॥ ಮುರುಳಿಯೊಂದಿಗೆ ಲತಾಳಿಗೆ ಇರಬಹುದಾದ ಸಂಬಂಧ ಸ್ನೇಹದ್ದಾದರೂ ಅದಕ್ಕಿಂತ ಮಿಗಿಲಾಗಿ ಊಹಿಸಿ, ಸಂಶಯಿಸುವ ಗಂಡ ಅತ್ತೆಯ ಬಗ್ಗೆ ಲತಾ ರೋಸಿ ಹೋಗಿರುತ್ತಾಳೆ. ಮುರುಳಿ ಮತ್ತು ಲತಾಳ ನಡುವಿನ ಸಂಬಂಧ ಸ್ನೇಹವೆಂದು, ಪವಿತ್ರವೆಂದು ಸಾಧಿಸಿದರೂ ಕೊನೆಗೆ ಎಲ್ಲವನ್ನೂ ಧಿಕ್ಕರಿಸಿ, ಮುರುಳಿಯ ಕಡೆ ತನ್ನ ನಿಷ್ಠೆ ಬದಲಾಯಿಸಿ, ಕುಟುಂಬವನ್ನು ಬಿಟ್ಟು ಹೋಗುವ ಲತಾಳ ಬದುಕಿನ 'ನಿರ್ಣಯ'.

ನಾಗುವಂತಹ ಹೆಣ್ಣಿನ ಬದುಕಿನ ಕಷ್ಟಗಳ, ಸರಪಳಿಗಳ ಸಂಕೋಲೆಗಳ ಚಿತ್ರಣವಿರುವ ಬದುಕಿನಲ್ಲಿ ಮುಗ್ಧ ಹೆಣ್ಣು ಮಗಳು ಅತ್ಯಾಚಾರಕ್ಕೆ ಬಲಿಯಾಗಿ ನೆಲೆ ಸಿಗದಿದ್ದಾಗ, ಕೊನೆಗೆ ವೇಶ್ಯಾ ವೃತ್ತಿಗೆ ಇಳಿಯುವಂತಹ ಅಮಾಯಕ ಸ್ಥಿತಿಯನ್ನು ಮನಕರಗಿಸುವ ನಾಗು, ಜೀವನದುದ್ದಕ್ಕೂ ಕಠಿಣತೆಯ ಶೃಂಖಲೆಯನ್ನು ತೊಟ್ಟು ಸಮಾಜದ ಪುರುಷ ವಿಕೃತ್ವವನ್ನು ಎದುರಿಸಲು ಅಸಮರ್ಥಳಾಗಿ ಕುಟುಂಬದ ಆಚೆಯೇ ಇರುವಂಥ ಸ್ಥಿತಿಯ 'ಬದುಕಿನ ಬವಣೆ'ಯಲ್ಲಿದೆ.

ಆಹಾರ ಹುಡುಕಲು ಗೂಡಿನಿಂದ ಹಾರಿ ಹೋದ ಹಕ್ಕಿ, ಪುನಃ ಬಂದು ಗೂಡು ಸೇರಿಕೊಳ್ಳುವುದು ಪ್ರಕೃತಿಯ ನಿಯಮ. ಇದೆ ಜೀವನ ಕ್ರಮ. ಹಕ್ಕಿಯ ಈ ನಿಯಮವನ್ನು ಕಾದಂಬರಿಕಾರ್ತಿ ಒಬ್ಬ ಹೆಣ್ಣಿನ ಬದುಕಿಗೆ ಆರೋಪಿಸಿದ್ದಾರೆ. ಹಾರಿ ಹೋದವಳು ಹಿಂತಿರುಗಿ ಬರಲೇ ಬೇಕಾಯಿತು. ಇಂತಹ ಸ್ಥಿತಿಗೆ ಕಾರಣಳಾದವಳು ಕಾದಂಬರಿಯ ನಾಯಕಿ 'ಅಪ್ಸರ'.

ಹೆಸರೇ ಸೂಚಿಸುವಂತೆ ಈಕೆಯ ಸೌಂದರ್ಯ ಪ್ರಮುಖ ಸ್ಥಾನ ಪಡೆದುಕೊಂಡಿದೆ. ಈಕೆಯ ರೂಪರಾಶಿಯ ಸುತ್ತ ಹೆಣೆದುಕೊಂಡು ಬೆಳೆಯುತ್ತಾ ಹೋಗಿ ಕುಷ್ಠ ರೋಗದ ಜಾಡ್ಯಕ್ಕೆ ಒಳಗಾಗಿ ದುಃಖಾಂತ್ಯವಾಗುವ 'ಮರಳಿಗೂಡಿಗೆ'.

ಒಂದೇ ರೂಪ ಎರಡು ಗುಣ ಎಂಬಂತೆ ಇದ್ದರೂ ಮಧ್ಯಮ ಕುಟುಂಬದ ವತ್ಸಲಾ, ಸಿರಿವಂತ ಕುಟುಂಬದ ಚಂದ್ರ ಇಬ್ಬರೂ ಸೇರಿ ನಡೆಸುವ ಹುಸಿಯಾಟದಲ್ಲಿ ಗೆಲ್ಲುವ ವತ್ಸಲಾ, ಸೋಲುವ ಚಂದ್ರ ಇಂತಹ ಕೌಟುಂಬಿಕ ಪಾತ್ರಗಳಿರುವ 'ಕಪ್ಪು ಬಿಳುಪು'.

ವ್ಯಕ್ತಿ ಚಾರಿತ್ರ್ಯದ ಸುತ್ತ ನಿಂತು ರೂಪ, ಐಶ್ವರ್ಯ, ನಾಗರೀಕತೆಗಳಿಗಿಂತ ಮಿಗಿಲಾದುದು, ವ್ಯಕ್ತಿಯ ಸದ್ಗುಣಗಳು ಎಂಬ ಧೋರಣೆ ಹೆಣ್ಣೇ ಆಗಲೀ, ಗಂಡೇ ಆಗಲಿ ನೈತಿಕತೆಯನ್ನು ಮರೆತು ಸ್ವೇಚ್ಛಾ ರೀತಿಯ ಬದುಕು ನಡೆಸುವುದು ಕಳಂಕವೇ ಸರಿ ಎನಿಸುತ್ತದೆ. ಆಗ ಅವರಿಗೆ ಬದುಕುವ ಅರ್ಹತೆಯೇ ಇಲ್ಲವಾಗುತ್ತದೆ. ಆಧುನಿಕ ಸಮಾಜದಲ್ಲಿ ಕುಟುಂಬದ ಸ್ವರೂಪ ದಿನದಿಂದ ದಿನಕ್ಕೆ ಪರಿವರ್ತನೆ ಹೊಂದುತ್ತಿದೆ. ಈ ಆಧುನಿಕತೆ ಮತ್ತು ನಾಗರಿಕತೆಯ ಹೆಸರಲ್ಲಿ ತಮ್ಮ ಸಂಸ್ಕೃತಿ ಮತ್ತು ಆದರ್ಶಗಳನ್ನು ಮರೆಯುತ್ತಿದ್ದಾರೆ. ಆಗ ಕೌಟುಂಬಿಕ ಜೀವನದಲ್ಲಿ ನೆಮ್ಮದಿ, ಭರವಸೆಗಳು ಸಹಜವಾಗಿ ಇಲ್ಲವೆಂಬಂತೆ ಕುಟುಂಬ ದುರಂತವನ್ನು ಚಿತ್ರಿಸಿರುವ 'ಸವತಿಯ ನೆರಳು'.

ಬಡತನದ ಬೇಗೆಯಲ್ಲಿ ಬೆಂದರೂ ಸಾಕಷ್ಟು ಸಿರಿವಂತನಾದ ಕೃಷ್ಣನ ಸ್ನೇಹ, ಪ್ರೇಮಕ್ಕೆ ತಿರುಗಿದರೂ ತಂದೆಯ ಹಠಕ್ಕೆ ಬಲಿಯಾಗಿ ತನ್ನ ಪ್ರೇಮವನ್ನು ವೈಫಲ್ಯಕ್ಕೆ ಕೊಂಡೊಯ್ಯುವಂತೆ ಮಾಡಿಕೊಂಡರು ಮತ್ತೊಂದು ಬಲಿಪಶುವಾಗಲೂ ಒಪ್ಪದೆ ಸೆಟೆದು ನಿಂತು ಕೃಷ್ಣನ ತಂದೆ ರಾಮಯ್ಯರವರ ಕುಟುಂಬಕ್ಕೆ ಸೆಡ್ಡು ಹೊಡೆಯುವ ಕಾವೇರಿಯ 'ಯಜ್ಞಪಶು'.

ಹೆತ್ತವಳು ಬೇರೆಯಾದರೂ ಮಗನಿಗಿಂತಲೂ ಹೆಚ್ಚಾಗಿ ನೋಡಿಕೊಳ್ಳುವ ಅನಂತಯ್ಯ ಮತ್ತು ಭವಾನಮ್ಮರ ಪ್ರೀತಿಯ ಹೊರತಾಗಿಯೂ ಹುಟ್ಟಿಸಿದವಳನ್ನು ಹುಡುಕಿಕೊಂಡು ಹೋದರೂ ತನ್ನದೇ ಆದ ಕುಟುಂಬವನ್ನು ನಿರ್ಮಾಣ ಮಾಡಿಕೊಂಡು ಅದರೊಳಗೆ ಸತೀಶನನ್ನು ಬಿಟ್ಟುಕೊಳ್ಳಲಾಗದ್ದನ್ನು ಗ್ರಹಿಸಿ ಮತ್ತೆ ಸಾಕು ಮಗನಾಗಿ ಬಂದು ತನ್ನ ಕುಟುಂಬವನ್ನು ಸೇರುವ 'ಸಾಕು ಮಗ'.

ಚಿಕ್ಕ ವಯಸ್ಸಿನಲ್ಲಿಯೇ ಸಂಗೀತಕ್ಕೆ ಮಾರು ಹೋಗಿದ್ದ ಭವಾನಿಗೆ ಜನರೊಡನೆ ಬೆರೆಯುವುದಾಗಲಿ, ಅಲಂಕರಿಸಿಕೊಳ್ಳುವುದಾಗಲಿ, ಮನೆ ಕೆಲಸದಲ್ಲಾಗಲಿ, ಹಾಸ್ಯ, ಮಾತುಕತೆ ಹೊರಗಿನ ಸುತ್ತಾಟ ಹೀಗೆ ಯಾವುದರಲ್ಲಿಯೂ ಆಸಕ್ತಿ ಇರದ ಭವಾನಿಗೆ ಪ್ರಾಪ್ತ

ವಯಸ್ಕಳಾದಾಗ ಭವಾನಿಗೆ ಸಂಗೀತದಲ್ಲಿ ಸ್ವಲ್ಪ ಮಟ್ಟಿನ ಅಭಿರುಚಿಯುಳ್ಳ ಪ್ರಭಾಕರನೆಂಬ ವರನನ್ನು ಹುಡುಕಿ ಮದುವೆ ಮಾಡಿದರು. ಸಂಸಾರದ ನಿರ್ವಹಣೆಯ ಒತ್ತಡದಲ್ಲೂ ವೀಣೆಯನ್ನು ಮರೆಯುವುದು ಅವಳಿಗೆ ಸುಲಭದ ವಿಷಯವಾಗಿರಲಿಲ್ಲ. ಇದರ ಜೊತೆಗೆ ಗಂಡನನ್ನು ಮೆಚ್ಚಿಸುವುದು ಅವಳಿಗೆ ಅತೀ ಮುಖ್ಯವಾಗಿತ್ತು. ವೀಣೆಯ ಆಸಕ್ತಿಯಲ್ಲಿ ಕೈ ಹಿಡಿದ ಗಂಡನ ಯೋಗಕ್ಷೇಮವನ್ನು ಮರೆಯುವಂತಾಯಿತು. ಇದರಿಂದ ಇಬ್ಬರ ನಡುವೆ ವೈಮನಸ್ಸು ಉಂಟಾಯಿತು. ಹೀಗಾಗಿ ಭವಾನಿಯ ಮನಸ್ಸು ಎರಡು ಸೆಳೆತಗಳ ಎಳೆತಕ್ಕೆ ಸಿಕ್ಕಿಕೊಂಡಿತು. ಒಂದು ಸಂಸಾರದ ಸೆಳೆತ ಮತ್ತೊಂದು ಸಂಗೀತದ ಸೆಳೆತ. ಆದರೆ, ಸಂಸಾರಕ್ಕೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ ಕೌಟುಂಬಿಕ ಕಥನದ 'ಆರಾಧನೆ'.

ದುಶ್ಚಟಗಳಿಗೆ ಬಲಿಯಾಗಿದ್ದ ನರಸಿಂಹನನ್ನು ವಿವಾಹವಾಗಿ ವೈಧವ್ಯ ಪಟ್ಟ ಅಲಂಕರಿಸಿದ ಸೀತಾಳ ಬಾಳಲ್ಲಿ ಮಂಗಳಕರವಾಗಿ ಬಂದ ಕೃಷ್ಣ, ಸೀತಾಳನ್ನು ಒಪ್ಪಿ ಮರುವಿವಾಹವಾದರೂ, ತಂದೆಯನ್ನೇ ಹೋಲುವ ಮಗಳನ್ನು ದೂರವಿರಿಸಿದ್ದ, ಸೀತಾ ಗೀತಾಳ ನಡುವೆ ಬಂದ ಕೃಷ್ಣ ಕುಟುಂಬದ ಸೌಹಾರ್ದ ಕಾಪಾಡಿದ 'ದೇವ ಮಾನವ'.

ಮನುಷ್ಯ ಸಂಬಂಧಗಳೆಲ್ಲ ಮಾಯೆ ಅದರಾಚೆಗೆ ಇರುವ ಭಗವಂತನ ಸಾಕ್ಷಾತ್ಕಾರವೇ ಅಂತಿಮ ಎಂಬುದನ್ನು ಬಲವಾಗಿ ನಂಬಿದ ಕಮಲಾಳಾ ಜೀವನದಲ್ಲಿ ಕಂಡುಂಡ ನೋವು ನಲಿವುಗಳನ್ನು ದಾಖಲಿಸಿ, ಕುಟುಂಬದ ಸರಿದೂಗುವಿಕೆಗೆ ಹಂಬಲಿಸಿ, ಪತಿಯನ್ನು ಕಳೆದುಕೊಂಡು ಮಗನನ್ನು ದೂರ ಮಾಡಿಕೊಂಡು ತೊಳಲಾಡುವ 'ಸಾಕ್ಷಾತ್ಕಾರ'.

ಮೂರು ತಲೆಮಾರುಗಳ ಕುಟುಂಬದಿಂದ ಕುಟುಂಬಕ್ಕೆ ಭಿನ್ನವಾಗಿ ತೆರೆದುಕೊಳ್ಳುವ ವಿಶ್ವನಾಥಯ್ಯ, ನರಸಿಂಹ, ವಿಶ್ವನಾಥ ಇವರ ಕೌಟುಂಬಿಕ ವಿಸ್ತಾರದ 'ಪರಂಪರೆ'.

ಡಾಕ್ಟರ್ ಆಗಬೇಕೆಂದು ಆಸೆಯಿದ್ದರೂ, ತಂದೆಯ ಸಾವಿನಿಂದ ಕಂಗೆಟ್ಟ ಕಸ್ತೂರಿ ಹಾಗೂ ಅವಳ ಕುಟುಂಬ ಅನಿವಾರ್ಯವಾಗಿ ಶ್ಯಾಮನ ಜೊತೆ ಇರಬೇಕಾದ ದುಸ್ಥಿತಿ ಬಂದು ಶಿವಸ್ವಾಮಿಯನ್ನು ಪ್ರೀತಿಸಿದರೂ ಶ್ಯಾಮನನ್ನು ತಿರಸ್ಕರಿಸಿ, ಆದರೆ, ಶಿವಸ್ವಾಮಿಯ ಪ್ರೀತಿ ತನ್ನ ಕಡೆ ಇಲ್ಲವೆಂದು ತಿಳಿದ ಮೇಲೆ ಮೋಹದಿಂದ ಹೊರಬಂದು ಕುಟುಂಬವನ್ನು ಕೈಹಿಡಿದು ಬಡತನದಿಂದ ಕಾಪಾಡಿದ ಶ್ಯಾಮನನ್ನೇ ವರಿಸುವ 'ಕಸ್ತೂರಿ'.

ಸುತ್ತಮುತ್ತ ಸಾವಿನ ಸುದ್ದಿಗಳಿಂದ ವಿಚಲಿತನಾದ ನಿರೂಪಕ ಸಂಸಾರಿಯಾಗದೇ ಕುಟುಂಬ ನಿರ್ವಹಣೆ ಸ್ವೀಕರಿಸದೇ, ವಿಭಿನ್ನವಾಗಿ ಬದುಕಲು ಮುನ್ನುಗ್ಗಿ ಸಮಾಜದ ನಡುವೆ

ಬದುಕಬೇಕೆಂಬ ವಸ್ತು ಸ್ಥಿತಿಯ ಅರಿವಿಗೆ ಒಳಗಾಗುವ 'ಅಸಂಗತ'. ತಂದೆ ಬರೆಯುತ್ತಿದ್ದ ಕಾಮವಸ್ತು ವಿಷಯದ ಪುಸ್ತಕಕ್ಕೆ ಮಾರು ಹೋಗಿ ಜೀವನವನ್ನು ಕೊನೆಗಾಣಿಸಿಕೊಳ್ಳಲು ಹೊರಟು ಬದಲಾಗಿ ಕುಟುಂಬದೊಡನೆ ಸೇರಿಕೊಳ್ಳುವ 'ಪ್ರೇಮಕಥೆ'.

ಭಾರತದಲ್ಲಿ ಕೃಷಿಗೆ ಮೂಲಸ್ಥಾನ ಅನ್ನದೇವರು ಎನ್ನುವ ರೈತ ಪ್ರಧಾನವಾದ ದೇಶ, ಇತ್ತೀಚಿಗೆ ಹಳ್ಳಿಗಳಲ್ಲಿನ ಬದುಕು ಕಡಿಮೆಯಾಗಿ ಪಟ್ಟಣದ ಆಕರ್ಷಣೆಗೆ ಹೆಚ್ಚಾಗುತ್ತಿದ್ದರೂ, ಅದಕ್ಕೆ ಹೊರತಾಗಿ ಹಳ್ಳಿಯನ್ನೇ ತಮ್ಮ ಸುಖದ ನೆಲೆವೀಡೆಂದು ಭಾವಿಸುವ ವ್ಯಕ್ತಿಗಳಿಗೇನೂ ಕೊರತೆ ಇಲ್ಲ ಇಂತಹ ಒಂದು ಕುಟುಂಬದ ಪರಿಚಯವೇ 'ಗುರಿ'.

ಹೆಣ್ಣು ಆಸೆ ಆಕಾಂಕ್ಷೆಗಳನ್ನು ತನ್ನ ಹೃದಯದಲ್ಲಿ ತೆಗೆದುಕೊಂಡು ಅದು ಸಾಕಾರವಾಗುವ ನಿರೀಕ್ಷೆಯನ್ನು ಹೊತ್ತಿರುತ್ತಾಳೆ. ಅದು ಸಾಮಾನ್ಯವಾಗಿ ಏರುಪೇರಾಗುವುದಿಲ್ಲ. ಆದರೆ, ಬದುಕು ಜಟಕಾಬಂಡಿ, ವಿಧಿ ಅದರ ಸಾಹೇಬ ಎಂಬಂತೆ ಬದುಕಿನಲ್ಲಿ ನಮಗರಿಯದಂತೆ ವಿಧಿಯ ಚೆಲ್ಲಾಟದಿಂದ ಯಾವ ರೀತಿಯ ತಿರುವು ಎದುರಾಗಿ ನಾವು ಎಂತಹ ಅನಿರೀಕ್ಷಿತ ಸಂಕಟಕ್ಕೆ ಗುರಿಯಾಗುತ್ತೇವೆಯೋ ಎಂಬ ಅಂಶವುಳ್ಳ ಶ್ರೀದೇವಿ ಕುಟುಂಬ ಕಥೆಯ 'ಅಪೂರ್ವ ಕಥೆ'.

ಪ್ರೇಮ ಎಂಬ ಪದದ ಸುತ್ತ ಪ್ರಪಂಚವೇ ಸುತ್ತುತ್ತಿದೆ. ಪ್ರೇಮ ಎಂಬ ಪದ ಅಮರವಾದುದು. ಈ ಪದ ಒಂದಿಲ್ಲದಿದ್ದರೆ, ಸಮಾಜ, ಕುಟುಂಬ ಯಾವುದೂ ಇಲ್ಲವಾಗುತ್ತಿತ್ತು ಎಂಬುದನ್ನು ಸವಿತಾಳ ಕುಟುಂಬದೊಂದಿಗೆ ಸಮೀಕರಿಸುವ 'ಅಮರ ಪ್ರೇಮ'.

ಮದುವೆಯಾಗದೆ ಹೆಣ್ಣು ಮಗುವೊಂದರ ತಾಯಿಯಾಗುವ ಕಮಲ ತನ್ನದಲ್ಲದ ತಪ್ಪಿಗಾಗಿ ವೈಧವ್ಯದ ಬಾಳು ಬದುಕಬೇಕಾಯಿತು. ಈ ನಡುವೆ ಅಲ್ಲಿಗೆ ಆಗಮಿಸಿದ ಶಾಮಣ್ಣ ಮೇಷ್ಟ್ರು ಅವಳ ಕಥೆಯನ್ನು ಕೇಳಿ ತಾಯಿ ಕಮಲ ಹಾಗೂ ಮಗಳು ಮಂಗಳಾ ನಡುವೆ ಸುವರ್ಣ ಸೇತುವೆಯಾಗಿ ಕುಟುಂಬದ ಜವಾಬ್ದಾರಿ ನಿಭಾಯಿಸುವ 'ಪ್ರಕೃತಿ ಪುರುಷ'. ಕುಟುಂಬವೊಂದನ್ನು ಕಟ್ಟಿಕೊಳ್ಳಲಾಗದೆ ವೇಶ್ಯಾವೃತ್ತಿನ್ನವಲಂಬಿಸಿ, ತನ್ನ ಮಗನನ್ನು ವೈದ್ಯಳನ್ನಾಗಿ ಮಾಡಿ ಜೀವನದ ಏಳು ಬೀಳುಗಳನ್ನೆದುರಿಸುವ ಮಗನ ಕುಟುಂಬ ನಿರ್ವಹಣೆಗೆ ಶ್ರಮಿಸುವ 'ಬಸವಿ'.

ನಗರವನ್ನು ಬಿಟ್ಟು ಹಳ್ಳಿಗೆ ಬಂದು ವೈದ್ಯಕೀಯ ಮಾಡುವ ಶ್ರೀಮಂತ ಆದರ್ಶ ಯುವಕ ಆನಂದ ಹಳ್ಳಿಯ ಬಡ ನರ್ಸ್ ಗೌರಿಯಲ್ಲಿದ್ದ ಗುಣ ವಿಶೇಷಕ್ಕೆ ಮಾರು ಹೋಗಿ ಮದುವೆಯಾಗುವ ನಂತರ ಸಮಸ್ಯೆಗಳನ್ನು ಪರಿಹರಿಸಿ, ಕುಟುಂಬ ರಚಿಸಿಕೊಳ್ಳುವಲ್ಲಿ ಮುಂದಾಗುವ 'ಪತಿತ ಪಾವನ'.

'ಅಪಸ್ವರ' ಕಾದಂಬರಿಯ ನಾಯಕಿ ಮೀರಾ ಬಾಲ್ಯದಲ್ಲಿಯೇ ತಂದೆ ತಾಯಿಯನ್ನು ಕಳೆದುಕೊಂಡು ದೊಡ್ಡಪ್ಪನ ಆಶ್ರಯದಲ್ಲಿ ಮೈಸೂರಿನಲ್ಲಿ ಬೆಳೆಯುತ್ತಾಳೆ. ಮೇಧಾವಿ ಹಾಗೂ ಅಧ್ಯಯನ ಶೀಲೆಯಾದ ಮೀರಾ ತುಂಬಾ ಓದಿ ಮುಂದೆ ಡಾಕ್ಟರ್ ಆಗುವ ಕನಸು ಕಾಣುತ್ತಾಳೆ. ಈ ಕನಸನ್ನು ದೊಡ್ಡಪ್ಪನ ಮಗ ಸ್ವತಃ ವೈದ್ಯಕೀಯ ವಿದ್ಯಾರ್ಥಿಯಾದ ಗೋಪಾಲ್ ಉತ್ತೇಜಿಸುತ್ತಾನೆ. ಆದರೆ, ಇಂಟರ್‌ಮೀಡಿಯಟ್ ಪರೀಕ್ಷೆಯಾದ ಕೂಡಲೇ ಇಚ್ಛೆಯಿಲ್ಲದಿದ್ದರೂ ಮೀರಾ ರಾಮು ಎಂಬ ಶ್ರೀಮಂತ ರೈತನನ್ನು ಮದುವೆಯಾಗಬೇಕಾಗುತ್ತದೆ. ವಿವಾಹ ನಂತರ ತನ್ನ ಗಂಡನ ಹಳ್ಳಿಗೆ ಮೀರಾ ಬಂದಾಗ ಅಲ್ಲಿಯ ಗ್ರಾಮೀಣ ಬದುಕಿಗೆ ಅವಳು ಹೊಂದಿಕೊಳ್ಳಲು ಅಸಮರ್ಥಳಾಗುತ್ತಾಳೆ.

ಬದುಕಿಗೆ ಏನಾದರೂ ಒಂದು ಅರ್ಥವನ್ನು ಕೊಡಲು ಅವಳು ಅಲ್ಲಿಯ ಹೆಂಗಸರಿಗೆ ಓದು ಬರಹ ಕಲಿಸಲು ಪ್ರಯತ್ನಿಸಿ, ಆ ಪ್ರಯತ್ನದಲ್ಲಿ ಸೋಲುತ್ತಾಳೆ. ತನಗೊಗ್ಗದ ಗ್ರಾಮೀಣ ಬದುಕಿಗೂ ತನಗೂ ಇರುವ ಒಂದೇ ಕೊಂಡಿಯಾದ ತನ್ನ ಚಿಕ್ಕಮಗಳು ಯೋಗ್ಯ ಸಮಯದಲ್ಲಿ ಚಿಕಿತ್ಸೆ ದೊರೆಯದೆ ಕಾಯಿಲೆಯಿಂದ ಸತ್ತಾಗ ಮೀರಾಳ ಸಹನ ಶಕ್ತಿ ಕೊನೆಗೊಳ್ಳುತ್ತದೆ. ತನ್ನ ದಾಂಪತ್ಯ ಜೀವನವನ್ನು ತೊರೆದು ಮತ್ತೆ ಅವಳು ಮೈಸೂರಿಗೆ ಹೋಗಿ ವೈದ್ಯಕೀಯ ಶಿಕ್ಷಣವನ್ನು ಪಡೆಯಲು ನಿರ್ಧರಿಸುತ್ತಾಳೆ. ಅದೃಷ್ಟವಶಾತ್ ಅವಳ ಗಂಡ ರಾಮು ಅವಳ ನಿರ್ಧಾರವನ್ನು ಅರ್ಥ ಮಾಡಿಕೊಳ್ಳುತ್ತಾನೆ. ಮತ್ತು ಅವಳಿಗೆ ವೈದ್ಯಕೀಯ ಶಿಕ್ಷಣವನ್ನು ಕೊಡಿಸುವ ಜವಾಬ್ದಾರಿಯನ್ನು ಹೊರಲು ಸಿದ್ದನಾಗುತ್ತಾನೆ. ಆದರೆ ಕುಟುಂಬವನ್ನು ಉಳಿಸಿಕೊಳ್ಳಲು ವಿಫಲನಾಗುತ್ತಾನೆ. ಸಾಮರಸ್ಯವಿಲ್ಲದ ಸಂಸಾರ ಇಬ್ಬರನ್ನೂ ಬಲಿತೆಗೆದುಕೊಂಡಿತ್ತು.

'ಅಪಸ್ವರ' ಕಾದಂಬರಿಯ ಮುಂದಿನ ಭಾಗವಾದ 'ಅಪಜಯ' ಯಾಂತ್ರಿಕವಾಗಿದೆ. ತನ್ನ ಸುದೀರ್ಘ ವೈದ್ಯಕೀಯ ಶಿಕ್ಷಣದ ಅವಧಿಯಲ್ಲಿ ತನ್ನ ಗಂಡನನ್ನು ತಾನು ಸಾಂಸಾರಿಕ ಸುಖದಿಂದ ವಂಚಿಸಿದ್ದೇನೆಂದು ಮೀರಾ ಭಾವಿಸುತ್ತಾಳೆ. ಆದ್ದರಿಂದ, ಹಳ್ಳಿಯ ಜೀವನಕ್ಕೆ ಒಗ್ಗುವಂತಹ ಒಬ್ಬಳನ್ನು ಮದುವೆಯಾಗಲು ಶಾಮುವನ್ನು ಒತ್ತಾಯಿಸುತ್ತಾಳೆ. ತನ್ನ ಶಿಕ್ಷಣ ಮುಗಿದ ನಂತರ ತಾನೂ ಜನರ ಸೇವೆ ಮಾಡಲು ಶಾಮುವಿನ ಹಳ್ಳಿಗೆ ಹಿಂದಿರುಗುತ್ತಾಳೆ. ಆದರೆ ದುರದೃಷ್ಟವಶಾತ್ ಶಾಮುವಿನ ಎರಡನೇ ಹೆಂಡತಿಯು ಆ ಮನೆಯಲ್ಲಿ ಮೀರಾಳಿಗಿರುವ ಆದರ ಸಮ್ಮಾನಗಳನ್ನು ಸಹಿಸುವುದಿಲ್ಲ. ಮೀರಾಳ ಮೇಲಿನ ಅಸೂಯೆಯಿಂದ ಅವಳು

ಮೀರಾಳ ಬದುಕನ್ನು ಮನೆಯಲ್ಲಿ ಹಾಗೂ ಹೊರಗೆ ಅಸಹನೀಯವಾಗಿಸುತ್ತಾಳೆ. ಕೊನೆಗೆ ತನ್ನ ಪತಿಯೊಡನೆ ತಾನು ಸಂತೋಷದಿಂದಿರಲು ನಡೆಸಿದ ಪ್ರಯತ್ನದಲ್ಲಿ ಸೋಲನ್ನೊಪ್ಪಿಕೊಂಡು ಮೀರಾ ಮೈಸೂರಿಗೆ ಹಿಂತಿರುಗುತ್ತಾಳೆ. ಕುಟುಂಬವನ್ನು ಸರಿಮಾಡಿಕೊಳ್ಳುವುದರಲ್ಲಿ ಸೋಲುತ್ತಾಳೆ.

'ಹೂವು ಹಣ್ಣು' ತ್ರಿವೇಣಿಯವರ ಕಾದಂಬರಿಗಳಲ್ಲೊಂದು. ವಾಸು ಒಬ್ಬ ಬಡ ಗುಮಾಸ್ತ. ಅವನ ಅಕಾಲಿಕ ಮೃತ್ಯುವಿನಿಂದ ಕಾದಂಬರಿ ಪ್ರಾರಂಭವಾಗುತ್ತದೆ. ಅವನ ಸಾವಿನಿಂದಾಗಿ ಇಪ್ಪತ್ತೊಂದು ವರ್ಷದ ಅವನ ಹೆಂಡತಿ ರಮಾ ಮತ್ತು ನಾಲ್ಕು ವರ್ಷದ ಮಗಳು ಶೀಲಾ ಅನಾಥರಾಗುತ್ತಾರೆ. ರಮಾ ಸಂಸಾರವನ್ನು ಸಾಗಿಸಲು ಪತಿಯ ಸಾವಿನ ನಂತರ ಒಂದಲ್ಲಾ ಒಂದು ಚಿಕ್ಕಪುಟ್ಟ ಕೆಲಸವನ್ನು ಮಾಡಿ ಮರ್ಯಾದೆಯಿಂದ ಜೀವಿಸಲು ಪ್ರಯತ್ನಿಸುತ್ತಾಳೆ. ಆದರೆ, ಎಲ್ಲೆಡೆಯು ಅವಳಿಗೆ ಕೆಲಸ ಕೊಡುವವರು ಅವಳ ದೇಹಕ್ಕಾಗಿ ಹಸಿದಿರುತ್ತಾರೆ.

ತನ್ನೆಲ್ಲಾ ಪ್ರಯತ್ನಗಳಲ್ಲಿ ಸೋತು ರಮಾ ತನ್ನ ದೇಹವನ್ನೇ ಮಾರಿಕೊಂಡು ಬದುಕಲು ನಿರ್ಧರಿಸುತ್ತಾಳೆ. ಆದರೆ, ತನ್ನ ಮಗಳಾದರೂ ಉತ್ತಮ ಶಿಕ್ಷಣ ಪಡೆದು ಮರ್ಯಾದೆಯಿಂದ ಬಾಳಬೇಕೆಂದು ದೃಢ ನಿಶ್ಚಯ ಮಾಡಿ ಮಗಳನ್ನು ಒಂದು ಕಾನ್ವೆಂಟ್ ಶಾಲೆಗೆ ಸೇರಿಸಿ, ಮನಸ್ಸನ್ನು ಕಲ್ಲು ಮಾಡಿಕೊಂಡು ಅವಳ ಬದುಕಿನಿಂದ ಸಂಪೂರ್ಣವಾಗಿ ದೂರವಾಗುತ್ತಾಳೆ. ಶೀಲಾ ಸುಶಿಕ್ಷಿತ ಸುಂದರ ತರುಣಿಯಾಗಿ ಬೆಳೆದಂತೆ ರಮಾ ದೈಹಿಕವಾಗಿ ಹಾಗೂ ಮಾನಸಿಕವಾಗಿ ಕ್ಷೀಣಿಸುತ್ತಾ ಹೋಗುತ್ತಾಳೆ. ಶೀಲಾ ತನ್ನ ಕಾಲೇಜು ಅಧ್ಯಾಪಕನನ್ನೇ ಪ್ರೀತಿಸಿ ಮದುವೆಯಾದಾಗ ಈ ಸುದ್ದಿ ತಿಳಿದ ರಮಾ ತನ್ನ ತ್ಯಾಗ ಸಾರ್ಥಕವಾಯಿತೆಂದು ಸಂತಸ ಪಡುತ್ತಾಳೆ. ಒಮ್ಮೆ ದುರದೃಷ್ಟವಶಾತ್ ಶೀಲಾ ತನ್ನ ತಾಯಿಯ ಪಕ್ಕದ ಮನೆಗೆ ವಾಸಿಸಲು ಬರುತ್ತಾಳೆ. ಇದರಿಂದಾಗಿ ಶೀಲಾಳ ಚಿಕ್ಕ ಮಗಳು ಮತ್ತು ರಮಾ ನಡುವೆ ಗಾಢ ಸ್ನೇಹ ಬೆಳೆಯಲು ಪ್ರಾರಂಭಿಸುತ್ತದೆ.

ರಮಾ ತನ್ನ ತಾಯಿಯೆಂದು ಗೊತ್ತಿಲ್ಲದ ಶೀಲಾ ಒಂದು ಕೀಳು ವೇಶ್ಯೆಯೊಡನೆ ತನ್ನ ಮಗಳ ಸ್ನೇಹವನ್ನು ಸಹಿಸಲಾರದೇ ಬೇರೊಂದೆಡೆ ಮನೆ ಮಾಡಲು ನಿರ್ಧರಿಸುತ್ತಾಳೆ. ಇದು ಗೊತ್ತಾದ ಕೂಡಲೇ ರಮಾ ತನ್ನ ಮಗಳ ಸುಖ ಜೀವನಕ್ಕೆ ಯಾವ ರೀತಿಯಲ್ಲೂ ಅಡ್ಡಿಯಾಗದಿರಲು ನಿಶ್ಚಯಿಸಿ, ಇದ್ದಕ್ಕಿದ್ದಂತೆ ಒಂದು ದಿನ ಬೇರೆಲ್ಲಿಗೋ ಹೊರಟು ಹೋಗುತ್ತಾಳೆ. ಹೀಗೆ ಕುಟುಂಬ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗದ ಅಸಹಾಯಕ ಹೆಣ್ಣೊಬ್ಬಳ ಚಿತ್ರಣ ಇದಾಗಿದೆ.

ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿ ಸ್ಫುರದ್ರೂಪಿ ವಿದ್ಯಾವಂತ ತರುಣಿ ಭಾರತಿ ಸೋದರಮಾವನ ಓಡಾಟದಿಂದಾಗಿ ಅನುರೂಪನಾದ ಆನಂದನ ಮಡದಿಯಾಗುತ್ತಾಳೆ. ವಿವಾಹವಾದ ತರುಣದಲ್ಲೇ ಆನಂದನು ತನ್ನ ಮುದ್ದಿನ ಮಡದಿ, ತಾಯಿ ಹಾಗೂ ತಂದೆಯನ್ನು ಅಗಲಿ ಎರಡು ವರ್ಷಗಳ ವಿಶೇಷ ವ್ಯಾಸಂಗಕ್ಕಾಗಿ ಲಂಡನ್ನಿಗೆ ಹೋಗುತ್ತಾನೆ.

ಆ ವರ್ಷದ ಬೇಸಿಗೆಯ ರಜೆಯಲ್ಲಿ ಭಾರತಿಯ ಅತ್ತೆ ವೇದಮ್ಮನ ಕಿರಿಯ ಸೋದರ ಚಂದು ಬೆಂಗಳೂರಿಗೆ ಬರುತ್ತಾನೆ. ಚಂದು ಒಬ್ಬ ಕಲಾವಿದ. ಇವನ ಪರಿಚಯವು ಭಾರತಿಗೆ ತನ್ನ ಮದುವೆಯಲ್ಲೇ ಆಗಿರುತ್ತದೆ. ನೋಡಲು ಆಕರ್ಷಕವಾದ ರೂಪವಿರುವ ಚಂದುವು ಆನಂದನಿಗಿಂತ ಸ್ವಲ್ಪ ದೊಡ್ಡವನು. ಭಾರತಿಗೆ ಚಂದುವನ್ನು ಕಂಡರೆ ಏನೋ ಒಂದು ರೀತಿಯ ಜಿಗುಪ್ಸೆ. ಆದರೆ ಅತ್ತೆಯ ಸ್ವಂತ ಸೋದರನೆಂಬ ಕಾರಣದಿಂದ ಅಗತ್ಯ ಬಿದ್ದಾಗ ಸೌಜನ್ಯಕ್ಕಾಗಿ ಅವನನ್ನು ಮಾತನಾಡಿಸುತ್ತಾಳೆ. ಕೆಲವು ದಿನಗಳು ಕಳೆಯುವುದರೊಳಗಾಗಿ ಭಾರತಿ ಹಾಗೂ ಚಂದುವಿನ ನಡುವೆ ಸಲಿಗೆ ಬೆಳೆಯುತ್ತದೆ.

ಭಾರತಿಯ ಜಾಗೃತ ಚಿತ್ತವು ವಿರೋಧಿಸಿದರೂ ಸುಪ್ತಚೇತನವು ಸಹಜವಾಗಿ ಬಯಕೆಯನ್ನು ಕೆರಳಿಸುತ್ತದೆ. ತನಗೆ ಇಷ್ಟವಿಲ್ಲದಿದ್ದರೂ ಭಾರತಿಯು ಚಂದುವಿನ ಬಯಕೆಯ ಕರೆಗೆ ಓಗೊಡುತ್ತಾಳೆ. ಮನಸ್ಸಿಗೆ ಬೇಡದ್ದನ್ನು ಮೈ ಬಯಸುತ್ತದೆ. ಭಾರತಿ ಪತಿತಳಾಗುತ್ತಾಳೆ. ಇವಳಲ್ಲಿ ಪೂರ್ಣವಾಗಿ ಅನುರಕ್ತನಾಗಿದ್ದ ಚಂದುವು ಇವಳನ್ನು ತನ್ನೊಂದಿಗೇ ಬರಲು ಒತ್ತಾಯಿಸುತ್ತಾನೆ. ತನ್ನ ಕಲುಷಿತ ದೇಹವನ್ನು ಪುನಃ ಆನಂದನಿಗೆ ಒಪ್ಪಿಸಲು ಇಷ್ಟ ಪಡದ ಭಾರತಿಯು ಚಂದುವಿನ ಹಿಂದೆ ಹೋಗಲು ಸಮ್ಮತಿಸುತ್ತಾಳೆ. ಹಾಗೆ ಹೋಗುವುದು ಯುಕ್ತವೇ ಎಂಬ ಆಂತರಿಕ ತೊಳಲಾಟವು ಪ್ರಾರಂಭವಾದಾಗ ಪುನಃ ಮನಸ್ಸನ್ನು ಬದಲಿಸುತ್ತಾಳೆ. ಆದರೆ ಅವಳಿಗಾಗಿ ಹಂಬಲಿಸುತ್ತಿದ್ದ ಚಂದುವು ಹಗಲಿನಲ್ಲೇ ಅಡುಗೆಯ ಮನೆಯಲ್ಲಿ ಅವಳನ್ನು ತಬ್ಬಿ ಹಿಡಿದು ತನ್ನೊಂದಿಗೆ ಬರುವಂತೆ ಮನ ಒಲಿಸಲು ಪ್ರಯತ್ನಿಸುತ್ತಾನೆ.

ಭಾರತಿಯು ಚಂದುವಿನ ತೋಳತೆಕ್ಕೆಯಲ್ಲಿರುವಾಗಲೇ ವೇದಮ್ಮನವರು ಒಳಗೆ ಬರುತ್ತಾರೆ. ಮಗನಿಗಿಂತ ಹೆಚ್ಚು ಅಭಿಮಾನದಿಂದ ಸಾಕಿದ್ದ ಚಂದು ಮಗಳಿಗಿಂತ ಮಿಗಿಲಾಗಿ ಮುದ್ದಿಸಿದ್ದ ಸೊಸೆ ಪರಸ್ಪರ ಆಲಿಂಗನದಲ್ಲಿರುವುದನ್ನು ನೋಡಿ ಆಕೆ ಕ್ರೋಧತಪ್ತಳಾಗುತ್ತಾಳೆ. ಭಾರತಿಯ ವ್ಯಭಿಚಾರದ ವಿಚಾರವು ಅವಳ ತವರಿನವರಿಗೂ ತಲುಪುತ್ತದೆ. ಅವಳಿಗೆ ಆಶ್ರಯ ನೀಡಲು ನಿರಾಕರಿಸುತ್ತಾರೆ. ತಮಗೆ ಇಷ್ಟವಿಲ್ಲದಿದ್ದರೂ ಆನಂದನು ಹಿಂತಿರುಗುವವರೆವಿಗೂ ಅವಳು ತಮ್ಮಲ್ಲಿಯೇ ಉಳಿಯಲು ಅವಳ ಅತ್ತೆ ಮಾವಂದಿರು ಒಪ್ಪುತ್ತಾರೆ.

ಎರಡು ವರ್ಷಗಳ ವ್ಯಾಸಂಗದ ನಂತರ ಆನಂದನು ಬೆಂಗಳೂರಿಗೆ ಹಿಂದಿರುಗುತ್ತಾನೆ. ಬಂದೊಡನೆಯೇ ತನ್ನ ಮುದ್ದಿನ ಮಡದಿಯ ಮೋಹದ ದೇಹವನ್ನು ನೋಡಲು ಬಯಸಿದ್ದ ಆನಂದನಿಗೆ ನಿರಾಶೆ ಕಾದಿರುತ್ತದೆ. ತಾನು ದುಡುಕಿ ಮಾಡಿದ ದ್ರೋಹದಿಂದಾಗಿ, ಅತ್ತೆ ಮಾವನ ಅನಾದರಣೆಗೊಳಗಾಗಿದ್ದ ಭಾರತಿಯು ಆನಂದನು ಬರುವ ವೇಳೆಗೆ ಎಲುಬಿನ ಗೂಡಾಗಿರುತ್ತಾಳೆ. ಆನಂದನಿಗೆ ಎಲ್ಲಾ ವಿಚಾರಗಳೂ ತಿಳಿಯುತ್ತವೆ. ಅವನಿಗೆ ಬೇರೆ ಮದುವೆ ಮಾಡುವ ಸಿದ್ಧತೆ ನಡೆದಿರುತ್ತದೆ. ಆದರೆ, ಇಂಗ್ಲೆಂಡಿನಲ್ಲಿದ್ದಾಗ ತನ್ನ ದೈಹಿಕ ಬಯಕೆಯನ್ನು ತಡೆಹಿಡಿಯಲಾರದೆ ಅಲ್ಲಿನ ಹೆಂಗಸೊಬ್ಬಳೊಂದಿಗೆ ಸಂಪರ್ಕ ಬೆಳೆಸಿ ಬಂದಿದ್ದ ಆನಂದನು ತನ್ನಂತೆಯೇ ಭಾರತಿಯನ್ನೂ ಮಾನವೀಯತೆಯ ದೃಷ್ಟಿಯಿಂದ ನೋಡಿ ಅವಳ ತಪ್ಪನ್ನು ಕ್ಷಮಿಸುತ್ತಾನೆ.

ಜೀವನದಲ್ಲಿ ಆಕಸ್ಮಿಕವಾಗಿ ಎಡವಿ ಸೋಲನ್ನನುಭವಿಸಿದ್ದ ಭಾರತಿಯು ಆನಂದನ ಔದಾರ್ಯದ ಫಲವಾಗಿ ಪುನಃ ಗೆಲುವನನ್ನುಭವಿಸುತ್ತಾಳೆ. ಕುಟುಂಬದಿಂದ ಬಂದು, ಉತ್ತಮ ಕುಟುಂಬ ಸೇರಿ ತನ್ನ ಕುಟುಂಬ ನಿರ್ಮಾಣದ ಹೊತ್ತಿನಲ್ಲಿ ಸಣ್ಣ ತಿರುವಿನೊಂದಿಗೆ ನುಸುಳಿ ಮತ್ತೆ ಪುನಃ ಕುಟುಂಬ ನಿರ್ಮಾಣ ಮಾಡಿಕೊಳ್ಳುವ ವಸ್ತು ವಿಷಯದಿಂದ ಕೂಡಿರುವುದು 'ಸೋತು ಗೆದ್ದವಳು' ಕಾದಂಬರಿಯ ವಿಶೇಷವಾಗಿದೆ.

ಬ್ಯಾಂಕೊಂದರಲ್ಲಿ ಉದ್ಯೋಗಿಯಾಗಿದ್ದ ಮಧ್ಯಮವರ್ಗದ ಸಂಸಾರಿ ವೆಂಕಟೇಶಯ್ಯ ಮೈಸೂರಿನಲ್ಲಿ ವಾಸವಾಗಿರುವ ಇವನದು ತಾಯಿ, ಹೆಂಡತಿ, ಮೂರು ಹೆಣ್ಣು ಮಕ್ಕಳು ಹಾಗೂ ಗಂಡು ಮಕ್ಕಳಿಂದ ತುಂಬಿದ ಸಂಸಾರ ಹಿರಿಯ ಮಗಳಾದ ಸೀತುವಿಗೆ ಹದಿಮೂರು ವರ್ಷದ ವೇಳೆಗೆ ಮದುವೆ ಮಾಡುತ್ತಾನೆ. ಹಾಸನದಲ್ಲಿ ಉಪಾಧ್ಯಾಯ ವೃತ್ತಿಯಲ್ಲಿದ್ದ ನರಸಿಂಹಯ್ಯನು ಸೀತೆಯ ಕೈಹಿಡಿಯುತ್ತಾನೆ. ನರಸಿಂಹಯ್ಯನ ತಂದೆಯದು ಅವಿಭಕ್ತ ಕುಟುಂಬ, ಅವರ ತಂದೆ ನಾಲ್ಕೈದು ಜನ ಅಣ್ಣತಮ್ಮಂದಿರು ಮತ್ತು ಅವರ ಹೆಂಡತಿ ಮಕ್ಕಳು ಎಲ್ಲರೂ ಒಟ್ಟಿಗೆ ಇರುತ್ತಾರೆ.

ತುಂಬಿದ ಮನೆಗೆ ಸೊಸೆಯಾಗಿ ಬಂದ ಸೀತುವನ್ನು ಅವಳ ಅತ್ತೆ ಕಾವೇರಮ್ಮನವರು ಅಕ್ಕರೆಯಿಂದಲೇ ನೋಡಿಕೊಳ್ಳುತ್ತಾರೆ. ಗಂಡನ ಮನೆಗೆ ಬಂದ ಆರು ತಿಂಗಳಿನಲ್ಲೇ ಸೀತೆಯು ಗರ್ಭಿಣಿಯಾಗುತ್ತಾಳೆ. ನರಸಿಂಹಯ್ಯನಿಗೆ ಇದು ಇಷ್ಟವಿರುವುದಿಲ್ಲ. ಆದರೆ ಅವನ ಅಜ್ಜ ಶ್ರೀಕಂಠಯ್ಯನಿಗೆ ಕನಕಾಭಿಷೇಕ ಮಾಡಿಸಿಕೊಳ್ಳುವ ಹಂಬಲವಿರುತ್ತದೆ. ನಿಶ್ಶಕ್ತಿಯಿಂದ ಬಳಲುತ್ತಿದ್ದ ಸೀತೆಗೆ ಗರ್ಭಸ್ರಾವವಾಗುತ್ತದೆ. ಕನಕಾಭಿಷೇಕದ ಕನಸು ಕಾಣುತ್ತಿದ್ದ ಶ್ರೀಕಂಠಯ್ಯನಿಗೆ ನಿರಾಶೆಯಾಗುತ್ತದೆ. ಒಂದೆರಡು ತಿಂಗಳಿನಲ್ಲೇ ಸೀತೆಯು ಚೇತರಿಸಿಕೊಳ್ಳುತ್ತಾಳೆ. ಆದರೆ ಪುನಃ

ನಾಲ್ಕೈದು ಸಲ ಗರ್ಭಸ್ರಾವವಾಗುತ್ತದೆ. ಏಳನೆಯ ಸಲ ಸೀತೆಯು ಗರ್ಭಧರಿಸಿದಾಗ ಮನೆಯಲ್ಲಿ ಎಲ್ಲರ ಒತ್ತಾಯಕ್ಕೂ ಮಣಿದು ನರಸಿಂಹಯ್ಯನು ಹೆಂಡತಿಯನ್ನು ತವರಿಗೆ ಕಳಿಸಲು ಒಪ್ಪುತ್ತಾನೆ. ಮೈಸೂರಿನಲ್ಲಿ ತಾಯಿಯ ಮನೆಯಲ್ಲಿ ಒಳ್ಳೆಯ ಆರೈಕೆ ಪಡೆದ ಸೀತೆಯು ಗಂಡು ಮಗುವಿನ ತಾಯಿಯಾಗುತ್ತಾಳೆ.

ಮಗನು ಹುಟ್ಟಿದ ಸಂಭ್ರಮದಲ್ಲಿ ನರಸಿಂಹಯ್ಯನು ಹೆಂಡತಿಯೊಂದಿಗೆ ಸಂತೋಷದಿಂದಿರುತ್ತಾನೆ. ತವರಿನಿಂದ ತುಮಕೂರಿಗೆ ಬಂದನಂತರ ಸೀತಳ ಜೀವನವು ಪುನಃ ಮೊದಲಿನ ದಾರಿಯನ್ನೇ ಹಿಡಿಯುತ್ತದೆ. ಮತ್ತೆ ಕೆಲವು ಸಲ ಗರ್ಭಸ್ರಾವವಾದ ನಂತರ ಅವಳ ದೇಹಸ್ಥಿತಿಯು ತೀರಹದಗೆಡುತ್ತದೆ. ಈ ವೇಳೆಗೆ ಬೆಳೆದು ದೊಡ್ಡವನಾಗಿದ್ದ ಮಗನ ವಿದ್ಯಾಭ್ಯಾಸಕ್ಕಾಗಿ ನರಸಿಂಹಯ್ಯನ ಸಂಸಾರವು ಬೆಂಗಳೂರಿಗೆ ಬಂದಿರುತ್ತದೆ. ತಂದೆಯ ಮನೋಭಾವವನ್ನು ವಿರೋಧಿಸುವ ಮಧುಸೂದನನು ತಾಯಿಯ ಪರವಾಗಿ ವಾದಿಸುತ್ತಾನೆ. ಇದು ನರಸಿಂಹಯ್ಯನಿಗೆ ಅಸಹನೀಯವಾಗಿದ್ದರೂ, ಮಗನನ್ನು ಎದುರಿಸಲಾರದೆ ಸುಮ್ಮನಾಗುತ್ತಾನೆ. ಇವರ ಮನೆಯಲ್ಲಿ ಕೆಲಸ ಮಾಡಲು ಬರುವ ರೋಹಿಣಿಯು ಮನೆಯಲ್ಲಿ ಎಲ್ಲಿರಿಗೂ ಅಚ್ಚು ಮೆಚ್ಚಿನವಳಾಗುತ್ತಾಳೆ. ಮಧುವಿಗೂ ರೋಹಿಣಿಗೂ ಪರಸ್ಪರ ಅವ್ಯಕ್ತ ಆಕರ್ಷಣೆಯೊಂದು ಬೆಳೆದಿರುತ್ತದೆ. ಆದರೆ ಅವಳ ವಿವಾಹವು ಬೇರೊಬ್ಬನೊಂದಿಗೆ ನಡೆದ ಮೇಲೆ ಮಧುವಿಗೆ ಇದರ ಅನುಭವವಾಗುತ್ತದೆ.

ಮತ್ತೊಮ್ಮೆ ತೀರಾ ನಿಶ್ಶಕ್ತಿಗೊಳಗಾದ ತಾಯಿಯನ್ನು ಮಧುವು ಆಸ್ಪತ್ರೆಗೆ ಸೇರಿಸುತ್ತಾನೆ. ಅಲ್ಲಿ ಸೀತಮ್ಮನಿಗೆ ಹಲವಾರು ರೋಗಿಗಳ ಜೀವನದ ಪರಿಚಯವಾಗುತ್ತದೆ. "ಮತ್ತೊಮ್ಮೆ ಗರ್ಭ ಧರಿಸಿದರೆ ತನ್ನ ಜೀವನಕ್ಕೆ ಅಪಾಯ"[೨] ಎಂಬ ಎಚ್ಚರಿಕೆಯೊಂದಿಗೆ ಸೀತಮ್ಮ ಮನೆಗೆ ಬರುತ್ತಾಳೆ ಮತ್ತೆ ಇವಳ ದೇಹಸುಖವನ್ನು ಬಯಸಿದ ನರಸಿಂಹಯ್ಯನನ್ನು ಅವನ ಮಗನೇ ಪ್ರತಿಭಟಿಸುತ್ತಾನೆ. ಪುನಃ ಅಸ್ವಸ್ಥಳಾದ ಸೀತಮ್ಮ ಕೆಲವೇ ದಿನಗಳಲ್ಲಿ ಕಾಲವಾಗುತ್ತಾಳೆ. ಕುಟುಂಬವೊಂದರ ದುರಂತತೆಯ ಪ್ರತೀಕವಾಗುತ್ತಾಳೆ, 'ಕೀಲುಗೊಂಬೆ'ಯ ಸೀತ.

ಶಾಲಾ ಮಾಸ್ತರರಾಗಿದ್ದ ವೆಂಕಟರಮಣಯ್ಯನವರು ಮೊದಲ ಮಗಳು ಬಣ್ಣದಲ್ಲಿ ಸ್ವಲ್ಪ ಕಪ್ಪು. ಇದೇ ಇವಳ ಜೀವನದಲ್ಲಿ ಒಂದು ಕವಲುದಾರಿಯಾಗುತ್ತದೆ. ಇವಳ ತಂಗಿ ಮಣಿ ಬಣ್ಣ ಹಾಗೂ ರೂಪಿನಲ್ಲಿ ಲಕ್ಷಣವಾದ ಹೆಣ್ಣು, ಮಣಿಗೆ ಮದುವೆಯಾಗಿ ಗಂಡನ ಮನೆ ಸೇರಿದರೂ ಸಹ 'ಕಪ್ಪು ಹುಡುಗಿ'ಗೆ ಮದುವೆಯಾಗುವುದಿಲ್ಲ. ಬಡವರ ಮನೆಯಲ್ಲಿ ಹುಟ್ಟಿದ ತಪ್ಪಿಗಾಗಿ

ಎಳೆಯ ವಯಸ್ಸಿನಿಂದಲೂ ಇವಳ ಜೀವನದಲ್ಲಿ ನಿರಾಶೆ, ತಾತ್ಸಾರ ಜಿಗುಪ್ಸೆಯೇ ಮನೆಮಾಡಿಕೊಂಡಿರುತ್ತದೆ. ಬುದ್ಧಿ ತಿಳಿದಂದಿನಿಂದಲೂ ಮನೆಯಲ್ಲಿ ದುಡಿಮೆಯೊಂದೇ ಇವಳ ಪಾಲಿಗೆ ಬಂದಿರುತ್ತದೆ. ತಾಯಿಯ ಒಂದೆರಡು ಬಾಣಂತನದ ನಂತರ ಮಣಿಯ ಬಾಣಂತನಕ್ಕಾಗಿ ಬೆಂಗಳೂರಿಗೆ ಹೋಗುತ್ತಾಳೆ. ಅಲ್ಲಿ ತಂಗಿಯ ಮನೆಯ ಸಮೀಪವೇ ವಾಸಿಸಿದ್ದ ಶಿವಸ್ವಾಮಿಯು ಇವಳ ಮೇಲೆ ಕಣ್ಣು ಹಾಕುತ್ತಾನೆ.

ಜೀವನದಲ್ಲಿ ಯಾರನ್ನೂ ಪ್ರೇಮಿಸಿಯೇ ಅನುಭವವಿಲ್ಲದ ಈ 'ಕಪ್ಪು ಹುಡುಗಿ'ಯು ಇವನ ಪ್ರಯತ್ನಕ್ಕೆ ಕ್ರಮೇಣ ತಲೆಬಾಗುತ್ತಾಳೆ. ಅವಳ ಬದುಕಿಗೆ ಒಂದು ರೂಪುಕೊಡಲು ಅವಳ ತಂದೆ ತಾಯಿ ಪ್ರಯತ್ನಿಸಿ ವಿಫಲರಾಗಿರುತ್ತಾರೆ. ಮದುವೆಯ ಸಂತೆಯಲ್ಲಿ ಕಪ್ಪು ತೊಗಲಿನ ಅವಳ ಶರೀರಕ್ಕೆ ಯಾರೂ ಬೆಲೆಕಟ್ಟಿರುವುದಿಲ್ಲ. ಅವಳ ಆತುರದ ಕಣ್ಣಿಗೆ ಕಾಮಿಯೇ ಪ್ರೇಮಿಯಾಗಿ ಕಾಣಿಸುತ್ತಾನೆ.

ತನ್ನ ಬಾಳನ್ನು ತಾನೇ ರೂಪಿಸಿಕೊಳ್ಳಲು ನಿರ್ಧರಿಸಿದ ಅವಳು ಶಿವಸ್ವಾಮಿಯೊಂದಿಗೆ ಸ್ನೇಹ ಬಯಸುತ್ತಾಳೆ. ಅಳುಕುತ್ತಲೇ ಅವಳು ಜೀವನದಲ್ಲಿ 'ಮೊದಲಹೆಜ್ಜೆ' ಇಡುತ್ತಾಳೆ. ಆದರೆ ಅಲ್ಲಿಯೇ ತಪ್ಪಿ, ಎಡವಿ ಮುಗ್ಗರಿಸುತ್ತಾಳೆ. ಇವಳ ದೇಹದ ಸವಿಯನ್ನು ಅನುಭವಿಸಿದ ಶಿವಸ್ವಾಮಿಯು ತಲೆತಪ್ಪಿಸಿಕೊಳ್ಳುತ್ತಾನೆ. ಇವನ ಸಂಪರ್ಕದ ಪಾಪದ ಫಲವನ್ನು ಹೊತ್ತ 'ಕಪ್ಪು ಹುಡುಗಿ'ಯು ಬೀದಿಯ ಪಾಲಾಗಿ, ಆಸ್ಪತ್ರೆಯಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ. ಇವಳ ಜೀವನವನ್ನು ಸೂಕ್ಷ್ಮವಾಗಿ ತಿಳಿದು ಅಲ್ಲಿನ ದಾದಿಯೊಬ್ಬಳು "ಹೊಲಸನ್ನು ತಿಂದು ಹಸಿವನ್ನು ಅಡಗಿಸುವ ಪ್ರಯತ್ನ ಮಾಡಬಾರದಮ್ಮ"[೫] ಎಂದು ತಿಳಿವಳಿಕೆ ನೀಡುತ್ತಾಳೆ. ಸಮಾಜದ ದೃಷ್ಟಿಯಲ್ಲಿ ಕಳಂಕದಿಂದ ಹುಟ್ಟಿರುವ ತನ್ನ ಮಗುವಿನ ಭವಿಷ್ಯವನ್ನು ಕುರಿತು ಚಿಂತಿಸಿದ ಕಪ್ಪು ಹುಡುಗಿಯು ಸಾವೇ ಅದಕ್ಕೆ ಸೂಕ್ತ ಪರಿಹಾರವೆಂದು ನಿರ್ಧರಿಸಿ ಮಗುವನ್ನು ಕೊಲೆ ಮಾಡಿ, ಪೊಲೀಸರ ವಶವಾಗುತ್ತಾಳೆ.

ಮೈಸೂರಿನ ಕಾಲೇಜೊಂದರಲ್ಲಿ ವ್ಯಾಸಂಗ ನಡೆಸುತ್ತಿದ್ದ ತರುಣಿಯರು ಪದ್ಮಿನಿ ಹಾಗೂ ಗೀತ, ಒಂದೂವರೆ ವರ್ಷಗಳಿಂದ ಒಟ್ಟಿಗೆ ವ್ಯಾಸಂಗ ನಡೆಸಿದ್ದರೂ, ಇಬ್ಬರಿಗೂ ಪರಸ್ಪರರಲ್ಲಿ ಸಲಿಗೆ-ಪರಿಚಯ ಬೆಳೆದಿರುವುದಿಲ್ಲ. ಒಮ್ಮೆ ಗೀತಳ ಅನಾರೋಗ್ಯದ ನಿಮಿತ್ತ ಇಬ್ಬರಲ್ಲೂ ಪರಿಚಯ ಬೆಳೆದು ಆತ್ಮೀಯರಾಗುತ್ತಾರೆ. ಹದಿನೆಂಟರ ಹರೆಯದ ಪದ್ಮಿನಿಯು ಗೀತಳ ತಂದೆ ಕೇಶವಮೂರ್ತಿಯಲ್ಲಿ ಅನುರಕ್ತಳಾಗಿ ಅವನನ್ನೇ ವಿವಾಹವಾಗುವ ನಿರ್ಧಾರ ಮಾಡುತ್ತಾಳೆ.

ಪು. ೧೧೫

ಸುಮಾರು ನಲವತ್ತೈದು ವರ್ಷಗಳ ಪ್ರಾಯದ ಈತನು ಹದಿಮೂರು ವರ್ಷಗಳ ಹಿಂದೆ ವಿಧುರನಾಗಿದ್ದವನು ಪುನರ್ವಿವಾಹವಾಗದೆ ವಿಧವೆಯೊಬ್ಬಳ ಸಹವಾಸದಲ್ಲಿರುತ್ತಾನೆ. ಸಮಾಜದ ದೃಷ್ಟಿಯಲ್ಲಿ ಈತನು ತನ್ನ ಹೆಂಡತಿಯನ್ನು ಕೊಲೆ ಮಾಡಿದನೆಂಬ ಆರೋಪವೂ ಇರುತ್ತದೆ. ಇಂಥ ವ್ಯಕ್ತಿಯಲ್ಲಿ ಅನುರಕ್ತಳಾದ ಮಗಳ ಮನಸ್ಸನ್ನು ತಿದ್ದಲಾರದ ತಂದೆ ತಾಯಿಗಳು ಅವಳ ಅಭಿಲಾಷೆಯಂತೆಯೇ ವಿವಾಹ ನಡೆಸುತ್ತಾರೆ. ಇದು ಕೂಡ ಕೌಟುಂಬಿಕ ಸಮಸ್ಯೆಯುಳ್ಳ ಕಾದಂಬರಿ 'ಹೃದಯಗೀತೆ'ಯಾಗಿದೆ.

ಬೇರೆ ಬೇರೆ ಕುಟುಂಬಗಳಲ್ಲಿ ಭಿನ್ನ ಭಿನ್ನ ಬದುಕಿನಲ್ಲಿರುವ ಕಸ್ತೂರಿ, ಅಂಬಿಕ, ವೇದವಲ್ಲಿ, ರಮಾ, ಸುಶೀಲ, ಅಮೃತ ಈ ಆರು ಜನರೂ ಬೇರೆ ಬೇರೆ ಮನೋಭಾವದ ತರುಣಿಯರು. ಪದವಿ ತರಗತಿಯ ಪರೀಕ್ಷೆ ಮುಗಿದು ಕಾಲೇಜಿಗೆ ರಜೆ ಬಂದಾಗ ಎಲ್ಲರೂ ಅಂಬಿಕಳ ಚಿಕ್ಕಪ್ಪನ ಮನೆ ಇದ್ದ 'ಊಟಿ'ಗೆ ಪ್ರವಾಸ ಹೋಗುತ್ತಾರೆ. ಕಾಲೇಜಿನ ಹುಡುಗರನ್ನೆಲ್ಲಾ ಕಿರುಬೆರಳಿನಲ್ಲಿ ಕುಣಿಸುತ್ತಿದ್ದ ಕಸ್ತೂರಿಯು ಅಂಬಿಕಳ ಚಿಕ್ಕಪ್ಪನ ಮಗ ಸುರೇಶನಿಗೆ ಮರುಳಾಗುತ್ತಾಳೆ. ಇವಳೊಂದಿಗೆ ಸ್ನೇಹ ಬೆಳೆಸಿದ ಸುರೇಶನು ಮುಂದೆ ವಿವಾಹವಾಗಲು ನಿರಾಕರಿಸಿದಾಗ ಅಪಮಾನಕ್ಕೆ ಅಂಜಿದ ಕಸ್ತೂರಿಯು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಕಸ್ತೂರಿ ಸಾವಿಗೆ ಕಾರಣವನ್ನು ರಮಳ ಮೂಲಕ ತಿಳಿದ ಅಂಬಿಕಳು ಸುರೇಶನ ಬಗ್ಗೆ ಜಿಗುಪ್ಸೆಗೊಳಗಾಗುತ್ತಾಳೆ. ತಂದೆ ಇಲ್ಲದ ರಮೆಯು ಪದವೀಧರಳಾದ ನಂತರ ಉದ್ಯೋಗವನ್ನು ಅರಸಿ, ತನ್ನ ತಾಯಿ, ತಮ್ಮಂದಿರು ಹಾಗೂ ತಂಗಿಯರನ್ನು ಸಾಕುವ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿರುತ್ತದೆ. ಇವಳಿಗೆ ಕೂಡಲೇ ಕೆಲಸ ಸಿಗದೆ ಅನೇಕ ತೊಂದರೆಗಳನ್ನೆದುರಿಸುತ್ತಾಳೆ. ಈ ವೇಳೆಗೆ ಅಂಬಿಕಳ ವಿವಾಹವಾಗಿ ಅವಳು ಕಲ್ಕತ್ತೆಗೆ ಹೋಗುತ್ತಾಳೆ. ಇನ್ನೊಬ್ಬಳು ಗೆಳತಿ ಸುಶೀಲಳ ಜೀವನವು ಒಂದು ರೀತಿಯ ದುರಂತಕ್ಕೆ ಸಿದ್ಧವಾಗಿರುತ್ತದೆ. ಇವಳಿಗೆ ಗೊತ್ತಾಗಿದ್ದ ಶೇಷಾದ್ರಿಗೆ ಸಿಗಬೇಕಾಗಿದ್ದ ಉದ್ಯೋಗವು ಬೇರೊಬ್ಬ ನಿವೃತ್ತ ಅಧ್ಯಾಪಕನ ಪಾಲಾದುದರಿಂದ ನಿರಾಶನಾದ ಶೇಷಾದ್ರಿಯು ದೇಶಾಂತರ ಹೋಗುತ್ತಾನೆ. ಈ ವೇಳೆಗೆ ರಮೆಗೆ ಕೋಚಿಂಗ್‌ಕ್ಲಾಸ್ ಒಂದರಲ್ಲಿ ಉದ್ಯೋಗ ದೊರೆತು, ಅಲ್ಲಿಗೆ ಬರುತ್ತಿದ್ದ ಹಿರಿಯ ವಿದ್ಯಾರ್ಥಿ ನಾಗೇಂದ್ರನೊಂದಿಗೆ ಪರಿಚಯ ಬೆಳೆದಿರುತ್ತದೆ. ದೇಶಾಂತರ ಹೋಗಿದ್ದ ಶೇಷಾದ್ರಿಯು ಸನ್ಯಾಸಿಯಾದನೆಂಬ ವಿಚಾರ ತಿಳಿದ ಸುಶೀಲಳು ಕೆಲಸಕ್ಕೆ ಸೇರಿ ಸ್ವೇಚ್ಛಾ ಜೀವನ ಪ್ರಾರಂಭಿಸುತ್ತಾಳೆ. ತನಗಿಂತ ಕಡಿಮೆ ಓದಿದವನೂ ಬಡವನು ಆಗಿದ್ದ ನಾಗೇಂದ್ರನನ್ನು ವರಿಸಲು ರಮಳು ನಿರ್ಧರಿಸುತ್ತಾಳೆ.

ಈ ವೇಳೆಗೆ ವೇದವಲ್ಲಿಯು ಸಂಗೀತದ ಶಿಕ್ಷಕನೊಂದಿಗೆ ಓಡಿಹೋಗಿ, ಅವನಿಂದ ವಂಚನೆಗೊಳಗಾಗಿ ತಂದೆಯ ನಿಷ್ಠೂರಕ್ಕೆ ಗುರಿಯಾಗಿರುತ್ತಾಳೆ. ರೂಪವತಿಯಲ್ಲವೆಂಬ ಕಾರಣದಿಂದ ಗಂಡುಸಿಗದೆ ಮನೆಯಲ್ಲೇ ಉಳಿದ ಅಮೃತಳು ತಂದೆತಾಯಿಗಳನ್ನು ಒತ್ತಾಯಿಸಿ ತಮ್ಮನಿಗೆ ವಿವಾಹ ಮಾಡಿಸುತ್ತಾಳೆ. ಒಟ್ಟಿಗೆ ವ್ಯಾಸಂಗ ನಡೆಸಿದ ಗೆಳತಿಯರ ಜೀವನವು ಒಂದೊಂದು ರೀತಿಯಲ್ಲಿ ರೂಪಗೊಂಡಿದುದರ ಬಗ್ಗೆ ರಮಳು ಯೋಚಿಸುತ್ತಿರುತ್ತಾಳೆ. ಈ ವೇಳೆಗೆ ಬೆಳೆದು ಪ್ರಾಯಕ್ಕೆ ಬಂದಿದ್ದ ಇವಳ ತಂಗಿ ಜಾನಕಿಯು ಸಹವಾಸ ದೋಷದ ಫಲವಾಗಿ ಚಿತ್ರನಟಿಯಾಗುವ ಹುಚ್ಚಿನಿಂದ ಅಡ್ಡ ಹಾದಿ ಹಿಡಿಯುವುದರಲ್ಲಿ ಅವಳ ತಮ್ಮನೂ ಸಹ ಸಣ್ಣ ಪುಟ್ಟ ಕಳ್ಳತನ ಪ್ರಾರಂಭಿಸಿ ಮನೆಗೆ ದೂರು ತರುವಂತಾಗುತ್ತಾನೆ. ಇದೆಲ್ಲದಕ್ಕೂ ರಮೆಯ ಸಂಸಾರದ ದಾರಿದ್ರ್ಯವೇ ಕಾರಣವಾಗಿರುತ್ತದೆ.

ಬಡತನದ ನಿವಾರಣೆಗಾಗಿಯೇ ಯೋಚಿಸುತ್ತಿದ್ದ ರಮೆಗೆ ಇದನ್ನೆಲ್ಲಾ ವ್ಯವಸ್ಥೆಗೊಳಿಸುವ ಮಾರ್ಗವೊಂದು ಆಕಸ್ಮಿಕವಾಗಿ ಒದಗುತ್ತದೆ. ತನ್ನ ಕುಟುಂಬದ ಒಳಿತಿಗಾಗಿ ಕಂಕಣಬದ್ಧಳಾಗಿದ್ದ ರಮೆಯು, ತಾನು ಮೆಚ್ಚಿ ವರಿಸಲು ನಿರ್ಧರಿಸಿದ್ದ ನಾಗೇಂದ್ರನನ್ನು ತೊರೆದು ಕುರುಡನಾಗಿದ್ದ ಸಾಹುಕಾರನ ಕೈ ಹಿಡಿಯುವ ನಿರ್ಧಾರ ಮಾಡುತ್ತಾಳೆ. ತನ್ನ ಕುಟುಂಬದ ರಕ್ಷಣೆಗಾಗಿ ಮುನ್ನುಗ್ಗುತ್ತಾಳೆ 'ಕಂಕಣ' ತೊಡುತ್ತಾಳೆ.

ಅಮೃತಳ ತಮ್ಮನ ಹೆಂಡತಿ ರತ್ನಳು ರೂಪವತಿಯಾದರೂ, ಒರಗೆಯವರೊಂದಿಗೆ ಹೊಂದಿಕೊಂಡು ಹೋಗುವ ಗುಣವು ಅವಳಲ್ಲಿರುವುದಿಲ್ಲ. ಇದರಿಂದ ಅಮೃತಳ ಮನಸ್ಸಿಗೆ ಬೇಸರವಾಗಿರುತ್ತದೆ. ಈ ವೇಳೆಗೆ ಐದು ವರ್ಷಗಳ ನಂತರ ಕಲ್ಕತ್ತೆಯಿಂದ ಅಂಬಿಕೆಯು ಮೈಸೂರಿಗೆ ಬಂದಿರುತ್ತಾಳೆ. ಅವಳಿಗೆ ಎರಡು ಹೆಣ್ಣು ಮಕ್ಕಳಿರುತ್ತವೆ. ತನ್ನನ್ನು ತೊರೆದು ಬೇರೊಬ್ಬ ಧನಿಕನ ಕೈಹಿಡಿಯಲಿದ್ದ ರಮೆಗೆ ನಾಗೇಂದ್ರನು ನೆನಪಿನ ಕಾಣಿಕೆ ಕೊಟ್ಟು ಬೀಳ್ಕೊಡುತ್ತಾನೆ. ಕಡೂರಿನಲ್ಲಿ ರಮೆಯ ವಿಹಾಹ ನಡೆಯುತ್ತದೆ. ಮದುವೆಗೆ ಬಂದಿದ್ದ ಏಕೈಕ ಗೆಳತಿ ಅಮೃತಳು ರಮೆಯ ಗಂಡನ ಔದಾರ್ಯವನ್ನು ಕಂಡು ಸಮಾಧಾನ ಹೊಂದುತ್ತಾಳೆ.

ಮೈಸೂರಿಗೆ ಹಿಂದಿರುಗಿದ ನಂತರ ತಂದೆ ತಾಯಿಗಳನ್ನು ಒತ್ತಾಯಿಸಿ, 'ಟೈಪಿಂಗ್' ಕಲಿಯಲು ಪ್ರಾರಂಭಿಸುತ್ತಾಳೆ. ಅಲ್ಲಿನ ಶಿಕ್ಷಕ ಸುಂದರರಾಯನ ಮಗಳು ಸರಯೂಳೊಂದಿಗೆ ಅಮೃತಳ ಸೋದರ ವಿಠಲನ ವಿವಾಹವಾಗುತ್ತದೆ. ವಿಠಲನ ವಿವಾಹಕ್ಕೆ ಬಂದಿದ್ದ ರಮೆಯ ಜೀವನವು ನೆಮ್ಮದಿಯಿಂದ ಕೂಡಿರುತ್ತದೆ. ತನ್ನ ಕುಟುಂಬದ ಏಳಿಗೆಗಾಗಿ ಅವಳು ತೊಟ್ಟಿದ್ದ

ಕಂಕಣವು ಸಾರ್ಥಕವಾಗಿರುತ್ತದೆ. ವಿಠಲನ ಸಂಸಾರದೊಂದಿಗೆ ಬೊಂಬಾಯಿ ಸೇರಿದ ಅಮೃತಳು ಪತ್ರಿಕಾಲಯವೊಂದರಲ್ಲಿ ಉದ್ಯೋಗಿಯಾಗುತ್ತಾಳೆ. ಅಲ್ಲಿನ ಸಹೋದ್ಯೋಗಿ ಕೇಶವಮೂರ್ತಿಯೊಂದಿಗೆ ಸಲಿಗೆ ಬೆಳೆದು ಇಬ್ಬರೂ ವಿವಾಹದ ನಿರ್ಧಾರ ಮಾಡುತ್ತಾರೆ.

ಈ ವೇಳೆಗಾಗಲೇ ವಿವಾಹಿತನಾಗಿದ್ದ ಕೇಶವಮೂರ್ತಿಯು ಕ್ಷಯರೋಗಿಯಾದ ತನ್ನ ಹೆಂಡತಿಯು ಬೆಂಗಳೂರಿನಲ್ಲಿರುವ ವಿಚಾರವನ್ನು ತಿಳಿಸುತ್ತಾನೆ. ಒಬ್ಬಳು ಬದುಕಿದ್ದಾಗಲೇ ಅವಳ ಗಂಡನೊಂದಿಗೆ ಬೇರೊಬ್ಬಳು ಸೇರುವುದನ್ನು ವಿರೋಧಿಸುವ ಅಮೃತಳು ವಿವಾಹಕ್ಕೆ ನಿರಾಕರಿಸುತ್ತಾಳೆ. ಅದೇ ವೇಳೆಗೆ ಕೇಶವಮೂರ್ತಿಯು ರೋಗಿಷ್ಠ ಹೆಂಡತಿಯು ಕಾಲವಾಗಿ ಅವನು ತನ್ನ ಹಿಂದಿನ ವಿವಾಹ ಬಂಧನದಿಂದ ಮುಕ್ತನಾಗಿ ಅಮೃತಳನ್ನು ಸೇರುತ್ತಾನೆ. ಅಮೃತಳಿಗೆ ಕುಟುಂಬದಲ್ಲಿದ್ದ ಕಿರಿಕಿರಿಗೆ 'ಮುಕ್ತಿ' ಸಿಗುತ್ತದೆ.

ಶ್ರೀಮಂತ ಕಾಫಿ ಪ್ಲಾಂಟರ್ ಅವರಿಗೆ ಒಬ್ಬಳೇ ಮಗಳು ಎಲ್ಲಾ ಆಸ್ತಿಗೂ ಅವಳೇ ಹಕ್ಕುದಾರಳೆಂದು ಭಾವಿಸಿದ ಯುವಕನೊಬ್ಬ ಅವಳೊಂದಿಗೆ ಪ್ರೇಮದ ನಾಟಕವಾಡುತ್ತಾನೆ. ಅವಳಿಗೊಬ್ಬ ತಮ್ಮ ಹುಟ್ಟಿ ಬರುತ್ತಾನೆ. ಇದರ ನಂತರ ಇವನ ವರ್ತನೆಯೇ ಬದಲಾಗುತ್ತದೆ. ತಾನು ಮದುವೆಯಾಗುತ್ತೇನೆಂದು ಹೇಳಿದ್ದೆಲ್ಲ ನಿಜವಲ್ಲ ಅನ್ನುತ್ತಾನೆ. ಈ ಮಧ್ಯೆ ಅವನು ಬಿದ್ದು ನಡೆಯಲಾಗದ ಸ್ಥಿತಿ ತಲುಪುತ್ತಾನೆ. ಅಂದರೆ ಮತ್ತಷ್ಟು ದಿವಸ ಇವರ ಮನೆಯಲ್ಲೇ ಉಳಿಯಬೇಕಾಗುತ್ತದೆ. ನಾಯಕಿ ತನಗೆ ಮೋಸ ಮಾಡಿದವನಿವನು ಎಂಬುದನ್ನು ಮನಸ್ಸಿಗೆ ತಂದುಕೊಳ್ಳದೆ ಅವನ ಉಪಚಾರದಲ್ಲಿ ತೊಡಗುತ್ತಾಳೆ. ಆಗ ಅವಳ ಮನದ ಎತ್ತರ ಅವನಿಗೆ ತಿಳಿಯುತ್ತದೆ. ಮತ್ತೆ ಮದುವೆಯಾಗುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ನಾಯಕಿ ತಿರಸ್ಕರಿಸುತ್ತಾಳೆ. ಹೀಗೆ ಸದಾಶಿವರಾಯರ ಕುಟುಂಬದೊಳಗೆ ಅನಿರೀಕ್ಷಿತವಾಗಿ ಪ್ರವೇಶಿಸಿ ಕಾವೇರಿಯ ಮನಕಲಕುವ ಸ್ಥಿತಿಯಿರುವ ಕಾದಂಬರಿ 'ಬೆಳ್ಳಿಮೋಡ'.

ಹೆಚ್ಚು ಆದಾಯವಿಲ್ಲದ ಮಾಸ್ತರ ಕೆಲಸವೇ ಸುಬ್ಬಣ್ಣನವರ ಉದ್ಯೋಗವಾಗಿದ್ದರೂ, ಅವರಿಗೆ ಮನೆಯ ತುಂಬ ಮಕ್ಕಳು ಐದು ಜನ ಹೆಣ್ಣುಮಕ್ಕಳು. ಒಬ್ಬ ಗಂಡುಮಗು ಹಾಗೂ ಹೆಂಡತಿ ಇಷ್ಟು ಜನಗಳಿಗೆ ಒಪ್ಪತ್ತು ಊಟ ಕಾಣಿಸುವುದೇ ಸುಬ್ಬಣ್ಣನವರಿಗೆ ತಲೆನೋವಿನ ಸಂಗತಿ ಅನಿರೀಕ್ಷಿತವಾಗಿ ಅವರ ಶ್ರೀಮಂತ ಬಂಧುಗಳೊಬ್ಬರಿಂದ ಅವರಿಗೆ ಒಂದು ಪತ್ರ ಬರುತ್ತದೆ.

ಮಕ್ಕಳಿಲ್ಲದ ಸಾಹುಕಾರ್ ರಾಮಸ್ವಾಮಯ್ಯನವರು ಸುಬ್ಬಣ್ಣನವರ ಮಕ್ಕಳ ಪೈಕಿ ಯಾರನ್ನಾದರೂ ದತ್ತು ತೆಗೆದುಕೊಳ್ಳುವ ನಿರ್ಧಾರಮಾಡಿ ಸುಬ್ಬಣ್ಣನವರ ಅಭಿಪ್ರಾಯ ಕೇಳಿರುತ್ತಾರೆ. ಗಂಡ ಹೆಂಡತಿ ಈ ವಿಚಾರವಾಗಿ ಚರ್ಚಿಸಿ ತಮ್ಮ ಐದು ಹೆಣ್ಣುಮಕ್ಕಳ ಪೈಕಿ

ಒಬ್ಬಳಾದರೂ ಚೆನ್ನಾಗಿ ತಿಂದುಂಡು ಒಳ್ಳೆಯ ಬಟ್ಟೆ ತೊಟ್ಟು ನೆಮ್ಮದಿಯ ಜೀವನ ಸಾಗಿಸುವ ಅವಕಾಶವೊದಗಿರುವಾಗ, ತಾವೇಕೆ ತಪ್ಪಿಸಬೇಕೆಂದು ನಿರ್ಧರಿಸಿ ಸ್ವಲ್ಪ ದೃಢಕಾಯಳಾಗಿದ್ದ ಮಗಳು ಸರೋಜಿನಿಯನ್ನು ದತ್ತುಕೊಡಲು ತೀರ್ಮಾನಿಸುತ್ತಾರೆ.

ಸರೋಜಿನಿಯು ನಾಗಮ್ಮ ಹಾಗೂ ರಾಮಸ್ವಾಮಯ್ಯನವರ ಸಾಕುಮಗಳಾಗಿ ಮೈಸೂರಿಗೆ ಬರುತ್ತಾಳೆ. ರಾಮಸ್ವಾಮಯ್ಯನವರಿಗೆ ಹೆಚ್ಚಾಗಿ ಅಕ್ಕರಾಸ್ಥೆ ಇಲ್ಲದಿದ್ದರೂ ನಾಗಮ್ಮನವರ ಅಭಿಮಾನದಿಂದ ಸರೋಜಳಿಗೆ ಒಂದು ರೀತಿಯ ನೆಮ್ಮದಿಯ ಜೀವನ ದೊರೆಯುತ್ತದೆ. ಆದರೆ ಹೆತ್ತವರ ಪ್ರೇಮಕ್ಕೆ ಎರವಾಗಿ ಹೊಸರೀತಿಯ ಶಿಸ್ತಿನ ವಾತಾವರಣದಕ್ಕೆ ಬೇಗ ಹೊಂದಿಕೊಳ್ಳಲಾಗದಿದ್ದ ಸರೋಜಿನಿಯು ಸಂಕೋಚ ಹಾಗೂ ಸ್ವಾಭಿಮಾನದಲ್ಲೇ ಬೆಳೆಯುತ್ತಾಳೆ.

ಮಗಳ ಮೂಲಕ ತಮ್ಮ ದಾರಿದ್ರ್ಯವನ್ನು ಪರಿಹರಿಸಿಕೊಳ್ಳಬಹುದೆಂಬ ದೂರದ ಆಸೆಯಿಂದಿದ್ದ ತಂದೆತಾಯಿಗಳ ಅಭಿಲಾಷೆಯು ಸರೋಜಿನಿಯ ಸಂಕೋಚ ಪ್ರವೃತ್ತಿ ಹಾಗೂ ರಾಮಸ್ವಾಮಯ್ಯನವರ ಕೃಪಣತೆಯಿಂದಾಗಿ ಕನಸಿನ ಮಾತಾಗುತ್ತದೆ. ತಮಗೆ ನೆರವು ನೀಡಲು ನಿರಾಕರಿಸಿದ ಮಗಳ ಬಗ್ಗೆ ಅವಳನ್ನು ಹೆತ್ತ ತಂದೆತಾಯಿಗಳೇ ನಿಷ್ಠೂರವಾಗಿ ವರ್ತಿಸುತ್ತಾರೆ. ಕಾಲೇಜು ವ್ಯಾಸಂಗ ಪ್ರಾರಂಭಿಸಿದ ಸರೋಜಿನಿಗೆ ಹಿಂದೆ ಅವಳಿಗೆ ಮನೆ ಮಠದ ಉಪಾಧ್ಯಾಯನಾಗಿದ್ದ ಮಾಧವನ ಸಂಪರ್ಕ ದೊರೆಯುತ್ತದೆ.

ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದ ಮಾಧವನಿಲ್ಲಿ ಸರೋಜಿನಿಗೆ ಅಭಿಮಾನ ಹುಟ್ಟುತ್ತದೆ. ಅವಳ ಸಾಕುತಂದೆಗೆ ಇಷ್ಟವಿಲ್ಲದಿದ್ದರೂ ನಾಗಮ್ಮನವರ ಒಪ್ಪಿಗೆ ಪಡೆದ ಸರೋಜಿನಿ ಮಾಧವ ವಿವಾಹವಾಗುವ ನಿರ್ಧಾರ ಮಾಡುತ್ತಾರೆ. ಯಾವ ಕುಟುಂಬಕ್ಕೆ ಸೇರಿದವಳು ನಾನು ಎಂಬ ಜಿಜ್ಞಾಸೆಯ ವಸ್ತುವೇ 'ಅವಳಮನೆ'.

'ತಾವರೆಕೊಳ' ನಾಯಕ ರಮೇಶ ವೈದ್ಯಕೀಯ ವಿದ್ಯಾರ್ಥಿ. ಕೊನೆಯ ವರ್ಷದಲ್ಲಿರುವಾಗ ಅತ್ಯಂತ ಪ್ರೀತಿಸುತ್ತಿದ್ದ ಅವನ ಅತ್ತಿಗೆ ಮರಣ ಹೊಂದುತ್ತಾರೆ. ಅತ್ತಿಗೆಯನ್ನು ಬದುಕಿಸಿಕೊಳ್ಳಲಾಗದ ವೈದ್ಯಕೀಯದ ಮೇಲೆಯೇ ಅವನಿಗೆ ಬೇಸರವಿರುತ್ತದೆ. ಅಷ್ಟಲ್ಲದೆ ಜೀವನದ ಮೇಲಿದ್ದ ಆಸಕ್ತಿಯೇ ಕಡಿಮೆಯಾಗಿ ಮಂಕಾಗುತ್ತಾನೆ. ಮನೆಯವರೆಲ್ಲರೂ ಬದಲಾವಣೆಗಾಗಿ ಮುಂಬಯಿಯಲ್ಲಿರುವ ಅಣ್ಣ ಶೇಷಾದ್ರಿಯ ಗೆಳೆಯನ ಮನೆಗೆ ನಾಲ್ಕು ದಿವಸ ಕಳುಹಿಸುವುದೆಂದು ನಿರ್ಧರಿಸುತ್ತಾರೆ. ಶೇಷಾದ್ರಿ ಒಳ್ಳೆಯ ಪ್ರಾಕ್ಟೀಸು ಇರುವ ವೈದ್ಯ. ಅವನ ಹೆಂಡತಿ ರತ್ನ ಮತ್ತು ಚಿಕ್ಕ ಮಗಳು ಆಶಾ ಇದಿಷ್ಟೇ ಅವರ ಕುಟುಂಬ.

ಮೊದಮೊದಲು ನಿರಾಸಕ್ತನಾಗಿದ್ದ ಅವನು ರತ್ನಳ ಪ್ರೀತಿವಿಶ್ವಾಸದಿಂದ ಕೊಂಚ ಕೊಂಚ ಸುಧಾರಿಸುತ್ತಾನೆ. ಇಬ್ಬರೂ ಒಬ್ಬರಿಗೊಬ್ಬರು ತಮಗೇ ತಿಳಿಯದಂತೆ ಹತ್ತಿರಾಗುತ್ತಾರೆ. ರತ್ನ ಇದರಿಂದ ಬಿಡಿಸಿಕೊಳ್ಳುವ ಸಲುವಾಗಿ ನಳಿನಿ ಎಂಬ ಹುಡುಗಿಯನ್ನು ಪರಿಚಯ ಮಾಡಿಸುತ್ತಾಳೆ. ಆದರೆ ರಮೇಶ ಅವಳೊಂದಿಗೆ ಹೆಚ್ಚಿನ ಗೆಳೆತನವನ್ನು ಬಯಸುವುದಿಲ್ಲ. ಯಾವುದೇ ಅನಾಹುತ ನಮ್ಮಿಬ್ಬರ ಮಧ್ಯೆ ನಡೆಯುವ ಮುನ್ನ ದೂರಾಗಬೇಕೆಂದು ನಿರ್ಧರಿಸಿ ತಾನು ಊರಿಗೆ ಹೋಗುವ ಆಸೆಯನ್ನು ವ್ಯಕ್ತಪಡಿಸುತ್ತಾನೆ. ಶೇಷಾದ್ರಿ ತಾನು ಊರಿನಲ್ಲಿರದ ಕಾರಣ ಹಿಂತಿರುಗಿದ ಮೇಲೆ ಹೋಗು ಎನ್ನುತ್ತಾನೆ. ಹಾಗಾಗಿ ಅವನು ಮತ್ತೆ ಉಳಿಯಬೇಕಾಗುತ್ತದೆ.

ಈ ಸಂದರ್ಭದಲ್ಲಿ ಮಗು ಕಾಯಿಲೆ ಬೀಳುತ್ತದೆ. ರತ್ನ ರಮೇಶನ ಮೇಲೆ ಬಿಟ್ಟು ಯಾವುದೋ ಸಮಾರಂಭಕ್ಕೆ ಹೋಗಿರುತ್ತಾಳೆ. ಅಷ್ಟರಲ್ಲಿ ಮಗುವಿಗೆ ಡಿಫ್ತೀರಿಯಾ ಆಗಿರುವುದನ್ನು ಗಮನಿಸಿ ಪ್ರಥಮ ಚಿಕಿತ್ಸೆ ಕೊಟ್ಟು ಆಸ್ಪತ್ರೆಗೆ ಸೇರಿಸಿರುತ್ತಾನೆ. ಹಾಗಾಗಿ ಮಗು ಪ್ರಾಣಾಪಾಯದಿಂದ ಪಾರಾಗುತ್ತದೆ. ಅಂದರೆ, ಮತ್ತೆ ಅವನು ವೈದ್ಯಕೀಯ ರಂಗಕ್ಕೆ ಮರಳುವಂತಾಗುತ್ತದೆ. ಇಲ್ಲಿಗೆ ರತ್ನಳಿಗೂ ಸಮಾಧಾನ ಮತ್ತು ಸಂತೋಷ ಎರಡೂ ಆಗುತ್ತದೆ. ಅವನು ಮತ್ತೆ ಜೀವನ್ಮುಖಿಯಾಗಬೇಕಾದ್ದೇ ರತ್ನಳಿಗೆ ಬೇಕಾದದ್ದು, ಹೀಗೆ ತನ್ನ ಕುಟುಂಬವನ್ನು ರಕ್ಷಿಸಿಕೊಂಡು ಇನ್ನೊಂದು ಕುಟುಂಬದ ಕುಡಿಯನ್ನು ಮನೋನಿಲಯಕ್ಕೆ ತಂದ ರತ್ನಳ ಕಥೆಯೇ ಜೀವಾಳ.

ಹರೆಯದ ಯುವತಿ ಸರಳಾ ಪದವೀಧರೆ, ಮಕ್ಕಳಿಲ್ಲದ ರಂಗಸ್ವಾಮಿ ಹಾಗೂ ಪಂಕಜಮ್ಮನವರಿಗೆ ಇವಳು ಸಾಕುಮಗಳು. ಹಳ್ಳಿಯೊಂದರಲ್ಲಿ ವಾಸವಾಗಿದ್ದ ಸರಳಳ ತಾಯಿ ತಂದೆಯವರು ಅವಳ ಎರಡನೆಯ ವಯಸ್ಸಿನಲ್ಲೇ ಅವಳನ್ನು ಪಂಕಜಮ್ಮನವರಿಗೆ ದತ್ತು ಕೊಟ್ಟಿರುತ್ತಾರೆ. ಅವಳ ಪದವಿ ಪರೀಕ್ಷೆಯು ಮುಗಿದ ಕೆಲವು ದಿನಗಳ ನಂತರ ಪಂಕಜಮ್ಮನು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೆ ಮಕ್ಕಳಾಗುವುದೆಂಬ ಆಸೆಯಿಂದ ಅಸ್ಪತ್ರೆಗೆ ಸೇರುತ್ತಾರೆ. ಇದೇ ವೇಳೆಗೆ ಒಂಬತ್ತು ಮಕ್ಕಳನ್ನು ಹೆತ್ತು ಮುಂದೆ ಮಕ್ಕಳಾಗದಂತೆ ತಡೆಯಲು ಶಸ್ತ್ರಚಿಕಿತ್ಸೆಗಾಗಿ ಸರೋಜನೆಂಬ ಗೃಹಿಣಿಯು ಅಲ್ಲಿಗೆ ಸೇರುತ್ತಾಳೆ. ಸರಳೆಯನ್ನು ಅವಳ ಸೋದರತ್ತೆಯ ಮಗ ರಾಜಗೋಪಾಲನಿಗೆ ಕೊಡುವ ಮಾತುಕತೆ ನಡೆದಿರುತ್ತದೆ. ಅವನು ವಿಮಾನ ಚಾಲಕನಾಗಿದ್ದ ಕಾರಣ ಆ ಪ್ರಯತ್ನವು ಮುರಿದುಬೀಳುತ್ತದೆ.

ಸರೋಜಮ್ಮನ ಸೋದರ ವಾಸು ಅಕ್ಕನ ಮನೆಯಲ್ಲೇ ಬೆಳೆದು ಪದವೀಧರನಾಗಿ ಕಾಲೇಜು ಅಧ್ಯಾಪಕನಾಗಿರುತ್ತಾನೆ. ಸರೋಜಮ್ಮನ ಮಗಳು ಅರುಂಧತಿಯನ್ನು ವಾಸುವಿಗೆ

ಕೊಡುವ ಸನ್ನಾಹ ನಡೆದು ಅವನು ಒಪ್ಪದಿದ್ದ ಕಾರಣ ಪ್ರಯತ್ನವು ಮುರಿದು ಬಿದ್ದಿರುತ್ತದೆ. ಆಸ್ಪತ್ರೆಯಲ್ಲಿ ಸಂಧಿಸಿದ ವಾಸು ಸರಳೆ ಪರಸ್ಪರ ಅನುರಕ್ತರಾಗುತ್ತಾರೆ. ಹಿರಿಯರ ಒಪ್ಪಿಗೆಯಿಂದ ವಿವಾಹವೂ ನಡೆಯುತ್ತದೆ. ಹೊಸ ಸಂಸಾರದಲ್ಲಿ ನೂತನ ದಂಪತಿಗಳ ಜೀವನವು ಹರ್ಷದಿಂದ ಪ್ರಾರಂಭವಾಗುತ್ತದೆ. ಸರಳೆಯು ಗರ್ಭಿಣಿಯಾದಾಗ ಅವಳ ಮನಸ್ಸು ಬಹಳ ಸೂಕ್ಷ್ಮವಾಗುತ್ತದೆ. ಗಂಡನ ಪ್ರತಿಯೊಂದು ಚಲನವಲನದಲ್ಲೂ ಅವಳು ಸಂಶಯ ವ್ಯಕ್ತಪಡಿಸುತ್ತಾಳೆ.

ವಾಸುವು ತನ್ನ ಅಕ್ಕನ ಮಗಳು ಅರುಂಧತಿಯೊಡನೆ ಸೇರಿ ಮಾತನಾಡಿದರೆ ಇವಳಿಗೆ ಬೇಸರ, ಜಿಗುಪ್ಸೆ, ಆತಂಕ, ಕಳವಳ ಇದಕ್ಕೆ ಪ್ರತೀಕಾರ ಎನ್ನುವಂತೆ ಅವಳು ಅವಿವಾಹಿತನಾಗಿದ್ದ ರಾಜಗೋಪಾಲನೊಂದಿಗೆ ಸೇರಿ ಸಲುಗೆಯಿಂದ ಮಾತನಾಡುತ್ತಾಳೆ. ಇದನ್ನು ಗಮನಿಸಿದ ವಾಸುವಿಗೆ ಅಸಮಾಧಾನವಾಗುತ್ತದೆ. ದಿನ ತುಂಬಿದ ನಂತರ ಸರಳೆಯು ಗಂಡುಮಗುವಿನ ತಾಯಿಯಾಗುತ್ತಾಳೆ. ಇವಳನ್ನು ನೋಡಲು ಆಸ್ಪತ್ರೆಗೆ ಬರುತ್ತಿದ್ದ ರಾಜಗೋಪಾಲ ಅರುಂಧತಿ ಪರಸ್ಪರ ಆಕರ್ಷಿತರಾಗಿ ವಿವಾಹವಾಗುವ ನಿರ್ಧಾರ ತಾಳುತ್ತಾರೆ. ಕುಟುಂಬದ ನಿರ್ಮಾಣಕ್ಕೆ ಪ್ರೀತಿ, ಪ್ರೇಮವೇ ಅಡಿಗಲ್ಲು ಎಂಬುದನ್ನು ಸಾಬೀತುಪಡಿಸುವ 'ವಸಂತಗಾನ'.

ಶ್ರೀರಂಗಪಟ್ಟಣದಲ್ಲಿ ವಾಸವಾಗಿದ್ದ ಇಳಿವಯಸ್ಸಿನ ಹೆಂಗಸು ಪಾತಮ್ಮ ಊರಿನ ಎಲ್ಲ ಮನೆಗಳಲ್ಲೂ ಅವಲಕ್ಕಿ, ಮೆಣಸಿನಪುಡಿ ಕುಟ್ಟಿಕೊಂಡು ಜೀವನ ನಿರ್ವಹಿಸುತ್ತಿದ್ದ ಬಾಲವಿಧವೆ 'ಕಾಶೀಯಾತ್ರೆ' ಮಾಡಬೇಕೆಂಬುದು ಇವಳ ಜೀವನದ ಪರಮೋದ್ದೇಶ ಇದಕ್ಕಾಗಿಯೇ ತನ್ನ ಶ್ರಮದ ದುಡಿಮೆಯಲ್ಲಿ ಬಹುಭಾಗವನ್ನು ಮುಡುಪಾಗಿಟ್ಟುಕೊಂಡಿರುತ್ತಾಳೆ. ಇವಳು ವಾಸವಾಗಿದ್ದ ವಠಾರದಲ್ಲೇ ನೆಲೆಸಿದ್ದ ರಾಮಣ್ಣನ ಪತ್ನಿ ಸುಂದರಮ್ಮನು ಕಾಲವಾಗಿ ಅವರ ಮಗಳು ನಾಲ್ಕು ವರ್ಷದ ಶ್ಯಾಮಲೆಯು ತಬ್ಬಲಿಯಾದಾಗ ಪಾತಜ್ಜಿಯು ಅವಳಿಗೂ ಅವಳ ತಂದೆಗೂ ನೆರವು ನೀಡುತ್ತಾಳೆ. ರಾಮಣ್ಣ ಪುನರ್ವಿವಾಹವಾಗುತ್ತಾನೆ. ಅವನ ಹೊಸ ಹೆಂಡತಿ ಸುಶೀಲಮ್ಮನಿಗೆ ಶ್ಯಾಮಲಳ ಬಗ್ಗೆ ಅಭಿಮಾನವಿರುವುದಿಲ್ಲ. ಪಾತಜ್ಜಿಯ ಒತ್ತಾಯದಿಂದ ಬಹಳ ಬೇಗ ಶ್ಯಾಮಲೆಯ ವಿವಾಹವಾಗುತ್ತದೆ. ಹೆಣ್ಣು ಮಗುವೊಂದಕ್ಕೆ ಜನ್ಮ ನೀಡಿದ ಶ್ಯಾಮಲೆ ಕೆಲವೇ ದಿನಗಳಲ್ಲಿ ಕಾಲವಾಗುತ್ತಾಳೆ.

ಶ್ಯಾಮಲೆಯ ಮಗಳು ಮಂಗಳೆಯನ್ನು ಸಾಕುವ ವಿಚಾರದಲ್ಲಿ ಸಮಸ್ಯೆಯುಂಟಾಗುತ್ತದೆ. ಮಗುವಿನ ತಂದೆಗೆ ಎಳೆಯ ಮಗುವನ್ನು ಸಾಕುವ ಚೈತನ್ಯವಿಲ್ಲ ರಾಮಣ್ಣನಿಗಾಗಲೀ, ಸುಶೀಲಮ್ಮನಿಗಾಗಲೀ ಈ ಜವಾಬ್ದಾರಿ ಹೊರಲು ಇಷ್ಟವಿರಲಿಲ್ಲ. ಆದರೆ ಮಗುವಿನ ತಂದೆಯು ಮಗುವನ್ನು ಸಾಕಲು ನನಗೆ ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ ನಂತರ ಮಂಗಳೆಯು ಅನಿವಾರ್ಯವಾಗಿ ತಾತನ ಮನೆಯಲ್ಲೇ ಉಳಿದು ಬೆಳೆಯುತ್ತಾಳೆ. ಎರಡನೆಯ ಹೆಂಡತಿಯಲ್ಲಿ

ರಾಮಣ್ಣನಿಗೆ ನಾಲ್ಕಾರು ಮಕ್ಕಳಾಗಿ ಸಂಸಾರದೊಂದಿಗೇ ಸಾಲವೂ ಬೆಳೆಯುತ್ತದೆ. ಹೆಚ್ಚು ವಿದ್ಯಾಭ್ಯಾಸವಿಲ್ಲದ ಗಂಡುಮಕ್ಕಳು ಎಲ್ಲೆಲ್ಲೋ ಸಣ್ಣಪುಟ್ಟ ಕೆಲಸಗಳನ್ನು ಹಿಡಿದು ಮನೆಯಿಂದ ದೂರವಾಗುತ್ತಾರೆ. ಈ ವೇಳೆಗೆ ಅನಿರೀಕ್ಷಿತವಾಗಿ ರಾಮಣ್ಣ ಅನಾರೋಗ್ಯಕ್ಕೆ ತುತ್ತಾಗುತ್ತಾನೆ. ಇವನ ಆರೋಗ್ಯವನ್ನು ಸುಧಾರಿಸುವ ಜವಾಬ್ದಾರಿಯು ಯೌವ್ವನದ ಹೊಸಿಲಿನಲ್ಲಿದ್ದ ಮಂಗಳೆಯ ಪಾಲಿಗೆ ಬರುತ್ತದೆ.

ಹಣದ ಅಡಚಣೆ ಇದ್ದರೂ ಸಹ ಅವಳು ಬಹಳ ಪ್ರಯಾಸದಿಂದಲೇ ಅಜ್ಜನಿಗೆ ವೈದ್ಯೋಪಚಾರ ನಡೆಸುತ್ತಾಳೆ. ಈ ಸನ್ನಿವೇಶದಲ್ಲಿ ತರುಣ ವೈದ್ಯ ನರಹರಿಗೂ ಮಂಗಳೆಗೂ ಪರಿಚಯ ಬೆಳೆದು ಇಬ್ಬರೂ ಅನುರಾಗಕ್ಕೆ ಒಳಗಾಗುತ್ತಾರೆ. ಮಂಗಳೆಯ ಮನೆಯ ವಿಚಾರವನ್ನೆಲ್ಲಾ ಗ್ರಹಿಸಿದ ನರಹರಿಯು ಅವಳನ್ನೇ ವಿವಾಹವಾಗಲು ನಿರ್ಧರಿಸುತ್ತಾನೆ. ಇವನ ತಂದೆ ಸುಬ್ಬರಾಯರು ಮಗನ ಶ್ರೇಯೋಭಿವೃದ್ಧಿಗಾಗಿ, ತಾವು ಕೆಲಸ ಮಾಡುತ್ತಿದ್ದ ಸೊಸೈಟಿಯಿಂದ ಹಣವನ್ನು ಅಕ್ರಮವಾಗಿ ಉಪಯೋಗಿಸಿಕೊಂಡಿರುತ್ತಾರೆ. ಕೆಲವೇ ದಿನಗಳಲ್ಲಿ ಆ ಹಣವನ್ನು ಹಿಂದಕ್ಕೆ ಸಲ್ಲಿಸಬೇಕಾಗುತ್ತದೆ.

ಎರಡು ಸಾವಿರ ರೂಪಾಯಿಗಳ ಅವಶ್ಯಕತೆಯಿಂದಾಗಿ ನರಹರಿಗೆ ಶ್ರೀಮಂತರೊಬ್ಬರ ಮಗಳನ್ನು ವಿವಾಹ ಮಾಡಿಸಿ ವರದಕ್ಷಿಣೆಯ ರೂಪದಲ್ಲಿ ಹಣವನ್ನು ಸಂಗ್ರಹಿಸಿ ಗೌರವವನ್ನು ಉಳಿಸಿಕೊಳ್ಳುವ ಯೋಚನೆ ಈತನದು. ಈ ವಿಚಾರ ತಿಳಿದ ನರಹರಿ ಚಿಂತೆಗೊಳಗಾಗುತ್ತಾನೆ. ಹಣ ತುಂಬದಿದ್ದರೆ ತಂದೆಯು ಜೈಲಿಗೆ ಹೋಗಬೇಕು. ಬಡತನದಲ್ಲಿರುವ ತಾನು ಪ್ರೀತಿಸಿರುವ ಮಂಗಳೆಯ ಮನೆಯವರಿಗೆ ಹಣಕೊಡುವ ಚೈತನ್ಯವಿಲ್ಲ. ಹೀಗಾಗಿ ಮಂಗಳೆ ಹಾಗೂ ನರಹರಿಯ ವಿವಾಹವು ಮುರಿದು ಬೀಳುವ ಸ್ಥಿತಿಗೆ ಬರುತ್ತದೆ. ನಾಳೆಯೇ ಹಣವನ್ನು ಸೊಸೈಟಿಗೆ ಕಟ್ಟಬೇಕು. ಮಂಗಳೆಯ ತಾತ ರಾಮಣ್ಣನಿಗೆ ಹಣವನ್ನು ಹೊಂದಿಸುವುದು ಸಾಧ್ಯವಾಗಿಲ್ಲ. ಅಂದು ಸಂಜೆ ಮಂಗಳ ಹಾಗೂ ನರಹರಿ ಸಂಧಿಸುತ್ತಾರೆ. ಹಣವನ್ನು ರಾಮರಾಯರ ಮಗಳನ್ನೇ ನರಹರಿಯು ಮದುವೆಯಗುವುದು ಸೂಕ್ತವೆಂದು ಇಬ್ಬರೂ ತೀರ್ಮಾನಿಸುತ್ತಾರೆ. ಮಂಗಳೆಯೊಡನೆ ಅವಳ ಮನೆಗೆ ಬಂದಿದ್ದ ನರಹರಿಯು ಹೊರಡುವ ವೇಳೆ ಸಮೀಪಿಸುತ್ತದೆ. ನರಹರಿಯ ನಿರ್ಧಾರವನ್ನು ಅರ್ಥಮಾಡಿಕೊಂಡ ಪಾತಜ್ಜಿಯು, ತಾನು ಕಾಶೀಯಾತ್ರೆಗಾಗಿ ಸಂಗ್ರಹಿಸಿದ್ದ ಹಣದಲ್ಲಿಯೇ ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತಾಳೆ.

ಪಾತಜ್ಜಿಯಿಂದ ದೊರೆತ ಈ ಆಕಸ್ಮಿಕ ನೆರವಿನಿಂದಾಗಿ ನರಹರಿಗೆ ಮಾತೇ ಹೊರಡುವುದಿಲ್ಲ. ನರಹರಿ ಅದೆಷ್ಟೋ ಹೊತ್ತು ಶಿಲಾಪ್ರತಿಮೆಯಂತೆ ನಿಂತಿರುತ್ತಾನೆ. ಅಂದರೆ ಕುಟುಂಬದಿಂದ ಆಗುವ ಸುಖ ದುಃಖಗಳು ಹೇಗೆ ವ್ಯಕ್ತಿಯ ಜೀವನದಲ್ಲಿ ಪರಿಣಾಮ ಬೀರುತ್ತದೆ ಎಂಬುದನ್ನು ಚಿತ್ರಿಸುವ ವಸ್ತುವೇ 'ಕಾಶೀಯಾತ್ರೆ'.

ಮೈಸೂರಿನಲ್ಲಿ ಉದ್ಯೋಗಿಯಾಗಿದ್ದ ಅನಂತನ ಸೋದರಿ ಕಲ್ಯಾಣಿ, ಇವಳ ಅತ್ತಿಗೆ ವತ್ಸಲೆಯ ತವರೂರು ಬೆಂಗಳೂರು. ವತ್ಸಲೆಯ ಅಣ್ಣ ಸುಬ್ಬರಾಮುವಿಗೆ ಉಡುಪಿಯ ಹೆಣ್ಣಿನೊಂದಿಗೆ ವಿವಾಹ ನಿಶ್ಚಯವಾಗುತ್ತದೆ. ಬೆಂಗಳೂರಿನಿಂದ ಉಡುಪಿಗೆ ಹೊರಟ ಸುಬ್ಬರಾಮುವಿನ ಮದುವೆಯ ದಿಬ್ಬಣವು ಮೈಸೂರಿಗೆ ಎರಡು ದಿನ ಮೊದಲೇ ಪ್ರಯಾಣ ಬೆಳೆಸುತ್ತದೆ. ಇವರೊಂದಿಗೆ ವತ್ಸಲೆ, ಅನಂತ ಹಾಗೂ ಕಲ್ಯಾಣಿ ಸೇರಿಕೊಳ್ಳುತ್ತಾರೆ.

ಉಡುಪಿಯಲ್ಲಿ ಸುಬ್ಬರಾಮುವಿಗೆ ವಿವಾಹ ನಡೆಯುತ್ತದೆ. ಮದುವೆಯ ದಿಬ್ಬಣದೊಂದಿಗೆ ಬಂದಿದ ಸುಬ್ಬರಾಮುವಿನ ಗೆಳೆಯ ರಾಮನಾಥನು ಕಲ್ಯಾಣಿಯನ್ನು ಕಂಡು ಆಕರ್ಷಿತನಾಗುತ್ತಾನೆ. ಕೆಲವು ದಿನಗಳ ನಂತರ ಇವರು ವಿವಾಹವಾಗುತ್ತಾರೆ. ಬೆಂಗಳೂರು ಸೇರಿದ ಕಲ್ಯಾಣಿ, ರಾಮನಾಥರ ಜೀವನವು ತುಂಬ ಉತ್ಸಾಹದಿಂದ ಪ್ರಾರಂಭವಾಗುತ್ತದೆ. ಆದರೆ ದಿನಕಳೆದಂತೆ ಈ ಉತ್ಸಾಹವು ಕುಗ್ಗಿ ಮನೆಯಲ್ಲಿ ಹೊತ್ತು ಕಳೆಯುವುದೇ ಕಲ್ಯಾಣಿಗೆ ಒಂದು ಸಮಸ್ಯೆಯಾಗುತ್ತದೆ.

ವಿದ್ಯಾವತಿಯಾಗಿದ್ದ ಈಕೆಯು ಉದ್ಯೋಗಕ್ಕೆ ಸೇರುವ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾಳೆ. ತನ್ನ ಸಂಸಾರಕ್ಕೆ ಇವಳ ದುಡಿಮೆಯ ನೆರವಿನ ಅಗತ್ಯವಿಲ್ಲದ್ದನ್ನು ಗಮನಿಸಿದ ರಾಮನಾಥನು ಇದಕ್ಕೆ ಸಮ್ಮತಿಸುವುದಿಲ್ಲ. ಆದರೆ ಅವಳ ಒತ್ತಾಯವು ಜಾಸ್ತಿಯಾದಾಗ ಅನಿವಾರ್ಯವಾಗಿ ಒಪ್ಪಿಗೆ ನೀಡುತ್ತಾನೆ. ಉದ್ಯೋಗಕ್ಕೆ ಸೇರಿದ ಕಲ್ಯಾಣಿಯು ದಿನಕಳೆದಂತೆ ಕೃಶಳಾಗುತ್ತಾಳೆ.

ಮನೆಯ ಕೆಲಸಕಾರ್ಯಗಳಲ್ಲಾಗಲೀ ಗಂಡನೊಂದಿಗೆ ಸಲಿಗೆಯಿಂದಿರುವುದರಲ್ಲಾಗಲೀ ಆಸಕ್ತಿಯೇ ಇಲ್ಲವಾಗುತ್ತದೆ. ಇವಳ ಈ ರೀತಿಯ ನಿರಾಸಕ್ತ ಮನೋಭಾವಕ್ಕೆ ಮನೆಯ ಕೆಲಸಕಾರ್ಯಗಳಲ್ಲಾಗಲೀ ಗಂಡನೊಂದಿಗೆ ಸಲಿಗೆಯಿಂದಿರುವುದರಲ್ಲಾಗಲೀ ಆಸಕ್ತಿಯೇ ಇಲ್ಲವಾಗುತ್ತದೆ. ಇವಳ ಈ ರೀತಿಯ ನಿರಾಸಕ್ತ ಮನೋಭಾವಕ್ಕೆ ಅವಳ ಶ್ರಮದ ದುಡಿಮೆಯೇ ಕಾರಣವೆಂದು ತಿಳಿದ ರಾಮನಾಥನು ಒತ್ತಾಯಪಡಿಸಿ ಅವಳನ್ನು ಕೆಲಸದಿಂದ ಬಿಡಿಸುತ್ತಾನೆ. ತನ್ನ ಗಂಡನ ಈ ರೀತಿಯ ಒತ್ತಾಯದ ವರ್ತನೆಯನ್ನು ವಿರೋಧಿಸಿದ ಕಲ್ಯಾಣಿಯು ತವರು ಮನೆಗೆ ಹೊರಟು ಹೋಗುತ್ತಾಳೆ.

ರಾಮನಾಥನಿಂದ ಎಲ್ಲ ವಿಚಾರಗಳನ್ನೂ ತಿಳಿದ ಅವಳ ತವರುಮನೆಯವರು ಅವನ ಸಲಹೆಯಂತೆ ಕಲ್ಯಾಣಿಯನ್ನು ತಾತ್ಸಾರವಾಗಿ ಕಾಣಲು ಪ್ರಾರಂಭಿಸುತ್ತಾರೆ. ಇದರಿಂದ ಜಿಗುಪ್ಸೆಗೊಂಡ ಕಲ್ಯಾಣಿಯು ಆತ್ಮಹತ್ಯೆಗೆ ಯೋಚಿಸಿ, ಅಂಜಿಕೆಯಿಂದ ಹಿಮ್ಮೆಟ್ಟುತ್ತಾಳೆ. ಅನಾರೋಗ್ಯದಿಂದ ಬಳಲಿದ ಇವಳು ವೈದ್ಯರಲ್ಲಿಗೆ ಹೋದಾಗ ಗರ್ಭಿಣಿಯೆಂಬ ಅಂಶ ವ್ಯಕ್ತವಾಗುತ್ತದೆ. ಹೆರಿಗೆಯ ಸಮಯದಲ್ಲಿ ಸಾವಿಗೆ ತುತ್ತಾಗುವೆನೆಂಬ ಅಂಜಿಕೆಗೊಳಗಾದ ಕಲ್ಯಾಣಿಯು ಗಂಡನನ್ನು ಕಾಣುವ ಹಂಬಲದಿಂದ ಅನಂತನೊಂದಿಗೆ ಬೆಂಗಳೂರಿಗೆ ಪ್ರಯಾಣ ಮಾಡುತ್ತಾಳೆ. ಇದೇ ವೇಳೆಗೆ ಇವಳನ್ನು ನೋಡಲು ಮೈಸೂರಿಗೆ ಧಾವಿಸಿದ ರಾಮನಾಥನು ಕಲ್ಯಾಣಿಯನ್ನು ಕಾಣದೆ ಕಳವಳಕ್ಕೊಳಗಾಗುತ್ತಾನೆ. ಗಾಬರಿಗೊಂಡಿದ್ದ ಅಳಿಯನಿಗೆ ಕಲ್ಯಾಣಿಯು ಬೆಂಗಳೂರಿಗೆ ಪ್ರಯಾಣ ಮಾಡಿದ ವಿಚಾರವನ್ನು ಅವನ ಅತ್ತೆ ಮಾವ ತಿಳಿಸುತ್ತಾರೆ. ಹೀಗೆ ಕಲ್ಯಾಣಿ ರಾಮನಾಥರ ಕುಟುಂಬದ ಕತೆಯೇ 'ಬಾಳು ಬೆಳಗಿತು'.

'ಹಣ್ಣೆಲೆ ಚಿಗುರಿದಾಗ' ಕಾದಂಬರಿಯ ವಸ್ತು ರಾಯರು ಮತ್ತು ಅವರ ಅವಿಭಕ್ತ ಕುಟುಂಬ ವೃತ್ತಿಯಿಂದ ವಕೀಲರಾದ ರಾಯರು ನಿವೃತ್ತರಾಗಿದ್ದಾರೆ. ಅವರಿಗೀಗ ಎಪ್ಪತ್ತು ವರ್ಷ. ಅವರ ಆರು ಮಕ್ಕಳಲ್ಲಿ ಮೊದಲಿನ ನಾಲ್ಕು ಗಂಡು ಮಕ್ಕಳಿಗೆ ಮದುವೆಯಾಗಿ ಅವರೆಲ್ಲಾ ತಮ್ಮ ತಮ್ಮ ವೃತ್ತಿಯಲ್ಲಿ ಯಶಸ್ವಿಯಾಗಿದ್ದಾರೆ. ಕೊನೆಯ ಮಗ ಮತ್ತು ಮಗಳಿಗೆ ಇನ್ನೂ ಮದುವೆಯಾಗಬೇಕು. ರಾಯರು ವಿಲಕ್ಷಣ ಮತ್ತು ದರ್ಪ ಸ್ವಭಾವದವರಾಗಿ ಇತ್ತೀಚೆಗೆ ಮರೆಗೂಳಿಗಳಾಗಿದ್ದರೂ ಅವರ ಪತ್ನಿ ರಾಜಮ್ಮ ಮಕ್ಕಳು, ಮೊಮ್ಮಕ್ಕಳಿಂದ ತುಂಬಿದ ಆ ದೊಡ್ಡ ಕುಟುಂಬವನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾರೆ.

ಕಾದಂಬರಿಯ ಪೂರ್ವಾರ್ಧವು ಪ್ರಮುಖವಾಗಿ ರಾಯರ ಪಾತ್ರವನ್ನು ಬೆಳೆಸಿದರೆ ಅದರ ಉತ್ತರಾರ್ಧವು ಎರಡು ಗಂಭೀರ ವಿಷಯಗಳನ್ನೊಳಗೊಂಡಿದೆ. ರಾಯರ ಕೊನೆಯ ಮಗ ನಾಟಕದಲ್ಲಿ ಕೆಲಸ ಮಾಡುವ ಮಹತ್ವಾಕಾಂಕ್ಷೆಯ ಸಖಿಯೊಬ್ಬಳನ್ನು ಪ್ರೇಮಿಸಿ, ಅವಳನ್ನು ಮದುವೆಯಾಗಲಿಚ್ಛಿಸುತ್ತಾನೆ. ರಾಯರು ನಾಟಕದ ಕೆಲಸವು ಗೌರವಯುತವಲ್ಲವೆಂದು ಆ ಮದುವೆಯನ್ನು ವಿರೋಧಿಸುತ್ತಾನೆ. ಆದರೆ ಮಗನು ತಂದೆಯ ವಿರೋಧವನ್ನು ಲೆಕ್ಕಿಸದೆ ಅವಳನ್ನೇ ಮದುವೆಯಾಗಿ ಮನೆಬಿಟ್ಟು ಹೋಗುತ್ತಾನೆ. ಈ ಮಧ್ಯದಲ್ಲಿ ಮದುವೆಯಾದ ಕೆಲವು ತಿಂಗಳುಗಳಲ್ಲೇ ವಿಧವೆಯಾದ ರಾಯರ ಮಗಳು ಕಿರುವಯಸ್ಸಿನಲ್ಲೇ ವಿಧುರನಾದ ಒಬ್ಬನನ್ನು ಪ್ರೇಮಿಸಿ ಮದುವೆಯಾಗಲು ಸಿದ್ಧಳಿದ್ದಾಳೆ ಸಂಪ್ರದಾಯಸ್ಥರಾದ ರಾಯರು ಸ್ತ್ರೀಯ ಪುನರ್ವಿವಾಹವನ್ನು ಒಪ್ಪಲಾಗದೆ ಮಗಳ ವಿಚಾರವನ್ನೂ ವಿರೋಧಿಸುತ್ತಾರೆ. ಆದರೆ

ಮಗಳಾದರೋ ತನ್ನ ಅಣ್ಣನಂತೆ ತಂದೆಯ ಭಾವನೆಗಳಿಗೆ ನೋವುಂಟು ಮಾಡಲಿಚ್ಚಿಸದೆ ಅವಿವಾಹಿತಳಾಗಿಯೇ ಉಳಿಯಲು ನಿರ್ಧರಿಸುತ್ತಾಳೆ. "ಮಗಳ ಈ ತ್ಯಾಗವು ನಿಧಾನವಾಗಿ ಮುಪ್ಪಿನ ತಂದೆಯ ಕಣ್ತೆರೆಸಿ ಅವರು ಪ್ರಪಂಚವನ್ನು ಒಂದು ಹೊಸ ದೃಷ್ಟಿಕೋನದಿಂದ ನೋಡುವಂತೆ ಮಾಡುತ್ತದೆ".[೬] ರಾಯರು ಕೊನೆಗೆ ತಮ್ಮ ಮನಸ್ಸು ಬದಲಾಯಿಸಿ ಮಗಳ ಪುನರ್ವಿವಾಹಕ್ಕೆ ಒಪ್ಪಿ ಆಶೀರ್ವಾದ ಮಾಡುತ್ತಾರೆ.

ವಾಮನರಾಯನ ಏಕಮಾತ್ರ ಪುತ್ರಿ ಭವಾನಿ ತಾಯಿಯನ್ನೇ ಕಾಣದ ತಬ್ಬಲಿ ಹೆಣ್ಣು. ಯಾವಾಗಲೂ ಒಂದು ರೀತಿಯ ಗಾಂಭೀರ್ಯದಿಂದಿರುತ್ತಿದ್ದ ತಂದೆಯಿಂದ ಇವಳಿಗೆ ತನ್ನ ಬಂಧು ಬಳಗದವರ ಬಗ್ಗೆ ಕೂಡ ಯಾವ ವಿಚಾರವೂ ತಿಳಿದಿರುವುದಿಲ್ಲ. ಇವಳ ತಾಯಿಯ ನೆನಪಿಗಾಗಿ ಉಳಿದಿದ್ದ ಸೈಗಾಲನ ಗ್ರಾಮಫೋನ್ ರೆಕಾರ್ಡ್‌ಗಳನ್ನು ಮಾತ್ರ ಭವಾನಿ ನೋಡಿರುತ್ತಾಳೆ. ಇದರ ಹೊರತು ಅವರ ಮನೆಯಲ್ಲಿ ಭವಾನಿಯ ತಾಯಿಗೆ ಸಂಬಂಧಿಸಿದಂತೆ ಯಾವ ಕುರುಹೂ ಉಳಿದಿರುವುದಿಲ್ಲ. ವಿಚಿತ್ರ ಸ್ವಭಾವದ ತಂದೆಯ ಆಶ್ರಯದಲ್ಲೇ ಬೆಳೆದು ಬಂದಿದ್ದ ಭವಾನಿಯು ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಪ್ರಾರಂಭಿಸುತ್ತಾಳೆ.

ಮೈಸೂರಿನ ಹಾಸ್ಟೆಲಿನಲ್ಲಿ ಮಗಳನ್ನು ಬಿಡಲು ಅಪೇಕ್ಷಿಸದ ವಾಮನರಾಯನು ಪ್ರತಿದಿನವೂ ಅವಳು ಮಂಡ್ಯದಿಂದ ಮೈಸೂರಿಗೆ ರೈಲಿನಲ್ಲಿ ಪ್ರಯಾಣ ಮಾಡಲು ಸಮ್ಮತಿಸುತ್ತಾನೆ. ಕಾಲೇಜು ವ್ಯಾಸಂಗದ ದಿನಗಳಲ್ಲಿ ಭವಾನಿಯು ತನ್ನ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದ ಜಗನ್ನಾಥನನ್ನು ಪ್ರೀತಿಸುತ್ತಾಳೆ. ಮಗಳ ಈ ಆಯ್ಕೆ ತಂದೆಗೆ ಇಷ್ಟವಿರುವುದಿಲ್ಲ. ಆದರೆ, ಕೊನೆಗೆ ಅವಳ ಅಪೇಕ್ಷೆಯಂತೆ ಜಗನ್ನಾಥನೇ ಅವಳ ಕೈ ಹಿಡಿಯುತ್ತಾನೆ. ಮನೆಗೆ ಬಂದ ಸೊಸೆಯ ಬಗ್ಗೆ ವಿಮಲಮ್ಮನಿಗೆ ಏನೋ ಒಂದು ಬಗೆಯ ಅಸಮಾಧಾನ. ಒಮ್ಮೆ ಅನಿರೀಕ್ಷಿತವಾಗಿ ಭವಾನಿಯನ್ನು ಕಾಣಲು ಬಂದ ಅವಳ ಸೋದರಮಾವ ವಿಶ್ವನಾಥನಿಂದ ಅವಳ ತಾಯಿ ವನಜಳ ಪೂರ್ವ ವೃತ್ತಾಂತವು ತಿಳಿಯುತ್ತದೆ.

ವಿವಾಹ ಪೂರ್ವದಲ್ಲೇ ತನ್ನ ಸಹಪಾಠಿ ಶ್ರೀಕಂಠನಲ್ಲಿ ಅನುರಕ್ತಳಾಗಿದ್ದ ಹೆಣ್ಣು ವನಜ. ಅವನು ಸೊಗಸಾಗಿ ಹಾಡಬಲ್ಲನೆಂಬುದೇ ಅವಳ ಅನುರಾಗಕ್ಕೆ ಪ್ರಬಲ ಕಾರಣವಾಗುತ್ತದೆ. ಶ್ರೀಕಂಠನಲ್ಲಿ ಅನುರಕ್ತಳಾಗಿದ್ದ ವನಜಳು ವಾಮನರಾಯನ ಮಡದಿಯಾಗುತ್ತಾಳೆ. ಮೊದಲ ಹೆರಿಗೆಗೆ ತವರಿಗೆ ಬಂದಾಗ ಪುನಃ ಶ್ರೀಕಂಠನ ಸಾಮಿಪ್ಯ ಬಯಸುತ್ತಾಳೆ. ಈ ಅನೀತಿಯ ವ್ಯವಹಾರವನ್ನು ಗಮನಿಸಿದ ವಾಮನರಾಯನು ಅವಳನ್ನು ಅಂಕೆಯಲ್ಲಿಡಲು ಬಯಸುತ್ತಾನೆ. ಗಂಡನ ಸ್ವಭಾವದ ಅರಿವಿದ್ದ ವನಜಳು ತನ್ನ ಒಡವೆ, ವಸ್ತ್ರಗಳೊಂದಿಗೆ ಶ್ರೀಕಂಠನನ್ನು ಸೇರಿ

ಪು. ೧೨೫

ಊರನ್ನೇ ಬಿಡುತ್ತಾಳೆ. ಎಳೆವಯಸ್ಸಿನ ತನ್ನ ಮಗಳೊಂದಿಗೆ ವಾಮನರಾಯನು ಮಂಡ್ಯದಲ್ಲಿ ನೆಲೆಸುತ್ತಾನೆ. ದಿನಕಳೆದಂತೆ ಭವಾನಿಯು ಬೆಳೆದು ಕಾಲೇಜಿನ ಮೆಟ್ಟಿಲು ಹತ್ತಿದರೂ ಅವಳಿಗೆ ತನ್ನ ತಾಯಿಯ ಬಗ್ಗೆ ಈ ಯಾವ ವಿಚಾರಗಳೂ ತಿಳಿದಿರುವುದಿಲ್ಲ. ವನಜಳು ಕಾಲವಾದ ನಂತರ ಭವಾನಿಗೆ ಈ ವಿಚಾರಗಳೆಲ್ಲ ತಿಳಿಯುತ್ತವೆ.

ಭವಾನಿಯ ತಾಯಿಯ ಚಾರಿತ್ರ್ಯವು ಶುದ್ಧವಾದುದಲ್ಲವೆಂಬ ಕಾರಣದಿಂದ ವಿಮಲಮ್ಮನು ಸೊಸೆಯನ್ನು ನಿಷ್ಠುರವಾಗಿ ಕಾಣಲು ಪ್ರಾರಂಭಿಸುತ್ತಾಳೆ. ಹೆಂಡತಿಯ ಬಗ್ಗೆ ಅನುಕಂಪದಿಂದಿದ್ದ ಜಗನ್ನಾಥನು ತಾಯಿಯನ್ನು ಸಮಾಧಾನಗೊಳಿಸುವ ನೆಪದಲ್ಲಿ ಭವಾನಿಯನ್ನು ಮಂಡ್ಯಕ್ಕೆ ಕಳಿಸಿ, ಅನಂತರ ಮೈಸೂರಿನಲ್ಲಿ ಮಾಡಿದ್ದ ತನ್ನ ಸ್ವಂತ ಮನೆಗೆ ಅವಳನ್ನು ಕರೆಸಿಕೊಳ್ಳುತ್ತಾನೆ ಹೀಗೆ ಭವಾನಿ ಕುಟುಂಬವೊಂದು ರಚನೆಯಾಗುತ್ತದೆ. ಇಂತಹ ಕುಟುಂಬಗಳ ಮೇಲೆ ಅನೇಕ ಅಂಶಗಳು ಪ್ರಭಾವ ಬೀರುತ್ತದೆ.

ಕೈಗಾರಿಕ ಕ್ರಾಂತಿಯಿಂದಾಗಿ ಆರ್ಥಿಕ ವ್ಯವಸ್ಥೆಯಲ್ಲಿ ಗಣನೀಯ ಬದಲಾವಣೆಗಳಾದುವು. ಇದರಿಂದ ಆರ್ಥಿಕ ಕಾರ್ಯಗಳು ನಶಿಸಿಹೋದವು. ವಸ್ತುಗಳು ಉತ್ಪಾದನೆಯಲ್ಲಿ ಕುಟುಂಬದ ಸ್ಥಾನದಲ್ಲಿ ಕಾರ್ಖಾನೆಗಳು ನಿರ್ಮಾಣವಾದುವು. ದೈಹಿಕ ಶ್ರಮದ ಬದಲು ಯಂತ್ರಗಳು ಕಾರ್ಯೋನ್ಮುಖವಾದವು. ಗೃಹಕೈಗಾರಿಕೆಗಳು ಕರಕುಶಲ ಕೈಗಾರಿಕೆಗಳು ಮೂಲೆಗುಂಪಾದವು. ಔದ್ಯೋಗಿಕ ವ್ಯವಸಾಯ ಕುಟುಂಬದ ಸದಸ್ಯರನ್ನು ಕಾರ್ಖಾನೆಗಳಲ್ಲಿ ಯಂತ್ರಗಳಂತೆ ದುಡಿಯುವಂತೆ ಮಾಡಿತು. ಜನರ ಕಾರ್ಯಕ್ಷೇತ್ರ ಬದಲಾಯಿತು. ಕುಟುಂಬವು ಉತ್ಪಾದನಾ ಕೇಂದ್ರಗಳಿಂದ ಬಳಕೆಯ ಘಟಕ ಮಾತ್ರವಾಗಿ ಪರಿವರ್ತಿತವಾಯಿತು. ಸ್ತ್ರೀಪುರುಷರೆನ್ನುವ ಭೇದವಿಲ್ಲದೆ ಆರ್ಥಿಕ ಸ್ವಾವಲಂಬನೆ ದುಸ್ಸಾಧ್ಯವೆನಿಸಿತು.

ನಗರೀಕರಣವು ಕುಟುಂಬದ ಕಾರ್ಯಸ್ವರೂಪಗಳನ್ನು ಬದಲಿಸಿದೆ. ದಿನೇ ದಿನೇ ಕುಟುಂಬದ ಗಾತ್ರ ಚಿಕ್ಕದಾಗುತ್ತಾ ಹೋಗಿದೆ. ಅವಿಭಕ್ತ ಕುಟುಂಬಗಳು ನಗರದಲ್ಲಿ ಕಾಣುವುದೇ ವಿರಳ. ಸಾಮಾಜಿಕ ಚಲನೆಯ ತೀವ್ರತೆ ಕುಟುಂಬವನ್ನು ಅಸ್ಥಿರಗೊಳಿಸಿದೆ. ನಗರದ ಅನಾಮಿಕ ಪ್ರಪಂಚದಲ್ಲಿ ವ್ಯಾಪಾರ, ಮನೋರಂಜನೆ, ಲೈಂಗಿಕ ಸಂಬಂಧಗಳು ಅಡೆತಡೆಗಳಿಲ್ಲದೆ ಸಾಗುತ್ತಿವೆ.

ಪ್ರಜಾಪ್ರಭುತ್ವವು ವ್ಯಕ್ತಿಯ ಸ್ವಾತಂತ್ರ್ಯಕ್ಕೆ ವಿಶೇಷ ಆದ್ಯತೆ ನೀಡಿದೆ. ಇದರಿಂದ ಸ್ತ್ರೀಯರು ಈಗ ಪುರುಷರಂತೆ ಸ್ವತಂತ್ರರೇ ಅಲ್ಲದೆ ಸರಿಸಮಾನ ಹಕ್ಕುಳ್ಳವರಾಗಿದ್ದಾರೆ. ಈವರೆಗೂ ಈಗ ಆಸ್ತಿಯ ಮೇಲೆ ಹಕ್ಕನ್ನು ಸ್ಥಾಪಿಸುವುದರ ಜೊತೆಗೆ ಆರ್ಥಿಕವಾಗಿ ಸರ್ವತಂತ್ರ ಸ್ವಾತಂತ್ರ್ಯರಾಗಿದ್ದಾರೆ. ಮತದಾನ ಹಕ್ಕನ್ನು ಪಡೆದಿರುವ ಸ್ತ್ರೀ ರಾಜಕೀಯ ಅಧಿಕಾರವನ್ನು

ಹೊಂದಿದ್ದಾರೆ. ಕಾನೂನಿನ ದೃಷ್ಟಿಯಲ್ಲಿ ಸ್ತ್ರೀ ಇಂದು ಪುರುಷನಿಗೆ ಸಮಾನಳು. ಸ್ತ್ರೀಯರ ಬದಲಾದ ಸಾಮಾಜಿಕ ಸ್ಥಾನಮಾನವು ಕೌಟುಂಬಿಕ ಸಂಬಂಧಗಳ ಮೇಲೆ ಮಹತ್ತರ ಪ್ರಭಾವವನ್ನುಂಟು ಮಾಡಿದೆ.

ನೈತಿಕತೆ ಮತ್ತು ಧಾರ್ಮಿಕ ನಂಬಿಕೆಗಳು ಇಂದು ಕುಟುಂಬದ ಸದಸ್ಯರ ಮೇಲಿನ ತಮ್ಮ ಪ್ರಭಾವ ಹಾಗೂ ನಿಯಂತ್ರಣಗಳನ್ನು ಕಳೆದುಕೊಳ್ಳುತ್ತಿವೆ. ಇಂದಿನ ಆಧುನಿಕ ಸಮಕಾಲೀನ ಸಮಾಜವು ಧಾರ್ಮಿಕತೆಯಿಂದ ಲೌಕಿಕತೆಯತ್ತ ಹೆಚ್ಚು ಹೆಚ್ಚು ಹೊರಳುತ್ತಿದೆ. ಕುಟುಂಬದ ಧಾರ್ಮಿಕ ಕಾರ್ಯಗಳು ಈಗ ಕಡಿಮೆಯಾಗುತ್ತಿವೆ. ಧಾರ್ಮಿಕ ಮನೋಭಾವ, ದೃಷ್ಟಿಕೋನ, ನಂಬಿಕೆ ಆದರ್ಶಗಳು ಕುಟುಂಬದೊಂದಿಗೆ ಹಾಸುಹೊಕ್ಕಾಗಿದ್ದ ಕಾಲ ಇದೀಗ ಮುಗಿದಿದೆ. ಲೈಂಗಿಕ ಕ್ರಿಯೆಯು ಅಸಹ್ಯವಾದುದು. ಅಶ್ಲೀಲವಾದುದು ಹಾಗೂ ಅದೊಂದು ಪಾಪಕೃತ್ಯ ಎಂಬ ಸಾಂಪ್ರದಾಯಿಕವಾದುವನ್ನು ಇಂದು ಯಾರೂ ಒಪ್ಪಲಾರರು. ವಿವಾಹವಂತೂ ಈಗ ಸ್ತ್ರೀ ಪುರುಷರ ನಡುವಿನ ನಾಗರೀಕ ಒಪ್ಪಂದವಾದಂತಿದ್ದು, ತನ್ನ ಧಾರ್ಮಿಕ ಪಾವಿತ್ರ್ಯವನ್ನೂ ಕಳೆದುಕೊಂಡಿದೆ.

ಇಂದು ನಮ್ಮ ದೈನಂದಿನ ವ್ಯವಹಾರಗಳಲ್ಲಿ ಆಚಾರ ವಿಚಾರಗಳಲ್ಲಿ ಭಾಷಣ ಲೇಖನಗಳಲ್ಲಿ ವ್ಯಕ್ತಿ ವಾದದ ಬೆಳವಣಿಗೆಯು ವಿವಾಹ ಮತ್ತು ವಿವಾಹಪೂರ್ವ ಪ್ರೇಮ ಇವುಗಳ ಮೇಲೆ ವ್ಯಾಪಕ ಪರಿಣಾಮ ಬೀರಿತು ಕುಟುಂಬದ ಸದಸ್ಯರುಗಳು ತಮ್ಮ ವ್ಯಕ್ತಿಗತ ಪ್ರವೃತ್ತಿಗನುಸರಿಸಿ ನಡೆದುಕೊಳ್ಳುವುದು ಇಂದು ಕಂಡುಬರುತ್ತಿದೆ. ಕೌಟುಂಬಿಕ ನಿರೀಕ್ಷೆಗಳ ಬಗ್ಗೆ ಕುಟುಂಬದ ಸಾಂಪ್ರದಾಯಕ ಆಚರಣೆಗಳ ಬಗ್ಗೆ ಇಂದು ಅದರ ಸದಸ್ಯಯರು ಪೂರ್ಣ ಅನಾಸಕ್ತರಾಗಿರುವರು. ವ್ಯಕ್ತಿವಾದ ಪ್ರಭಾವದಿಂದಾಗಿ ಇಂದಿನ ಯುವಕ ಯುವತಿಯರು ತಮ್ಮ ಜೀವನ ಸಂಗಾತಿಗಳನ್ನು ತಾವೇ ಆಯ್ಕೆ ಮಾಡಿಕೊಳ್ಳುವರು. ಈ ಆಯ್ಕೆಯಲ್ಲಿ ಇತರ ಅಂಶಗಳಿಗಿಂತ ಕ್ಷಣಿಕ ಪ್ರೇಮ ಹಾಗೂ ಲೈಂಗಿಕ ಪ್ರೀತಿ ಇವು ಪ್ರಧಾನವಾಗಿದೆ. ಈ ಆಯ್ಕೆಯು ವಿವಾಹ ವಿಚ್ಛೇದನದಲ್ಲಿ ಪರ್ಯಾವಸನವಾಗುವುದೂ ಉಂಟು. ಹೀಗೆ ವಿವಾಹ ಬಂಧನವು ದುರ್ಬಲವಾಗಿರುವುದರಿಂದ ಕೇಂದ್ರ ಕುಟುಂಬವು ಹೆಚ್ಚು ಅಭದ್ರವಾಗಿದೆ.

ಔದ್ಯೋಗಿಕ ಕ್ರಾಂತಿಯಿಂದಾಗಿ ಸ್ತ್ರೀಯರಿಗೆ ಅನೇಕ ಆರ್ಥಿಕ ಅವಕಾಶಗಳು ಮುಕ್ತವಾಗಿ ನೀಡಲ್ಪಟ್ಟವು. ಸ್ತ್ರೀಯರು ಇಂದು ಆಸ್ತಿಗೆ ಒಡೆಯರಾಗಿದ್ದಾರೆ. ಕಾರ್ಯಾಲಯಗಳಲ್ಲಿ ಕಾರಕೂನರಾಗಿದ್ದಾರೆ. ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿದ್ದಾರೆ. ಶಾಲೆ, ಕಾಲೇಜುಗಳಲ್ಲಿ ಅಧ್ಯಾಪಕಿಯರುಗಳಾಗಿದ್ದಾರೆ. ರಾಜಕೀಯದಲ್ಲಿ ಪ್ರತಿಷ್ಠಿತ ಸ್ಥಾನಗಳಿಸಿದ್ದಾರೆ. ಪುರುಷರಂತೆ ಅವರು ಆರ್ಥಿಕವಾಗಿ ಸ್ವಾತಂತ್ರರು, ಸ್ವಾವಲಂಬಿಗಳು, ಸಣ್ಣಪುಟ್ಟ ವಸ್ತುಗಳನ್ನು ಕೊಂಡುಕೊಳ್ಳಲು

ಪುರುಷರೆದುರು ಹಲ್ಲುಕಿರಿಯಬೇಕಾದ ಅಗತ್ಯ ಅವರಿಗಿಲ್ಲ. 'ಒಲೆಗೆ ಸ್ತ್ರೀ ಹೊಲಕ್ಕೆ ಪುರುಷ' ಎಂಬ ಹಳೆಯ ಕಾಲದ ಮನೋಭಾವಕ್ಕೆ ಇಂದು ಯಾವ ಅರ್ಥವೂ ಉಳಿದಿಲ್ಲ. ಸ್ತ್ರೀಯರು ತಮ್ಮ ವ್ಯಕ್ತಿತ್ವದ ಬೆಳವಣಿಗೆಯ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಿರುವರು.

ಪ್ರಜಾಸತ್ತಾತ್ಮಕ ಮೌಲ್ಯಗಳು, ವ್ಯಕ್ತಿವಾದದ ಪ್ರಭಾವ, ಶಿಕ್ಷಣದ ಸಾರ್ವತ್ರಿಕ ಪ್ರಕರಣ, ಏಕರೀತಿಯ ಹಾಗೂ ಪಕ್ಷಪಾತರಹಿತ ಕಾನೂನಿನ ಜಾರಿ ಮುಂತಾದ ಅಂಶಗಳು ಸ್ತ್ರೀಯರ ಅಂತಸ್ತುಗಳನ್ನು ಸುಧಾರಣೆ ಗಳಿಸುವಲ್ಲಿ ಸಫಲವಾದವು. ಪಾಶ್ಚಿಮಾತ್ಯ ದೇಶಗಳಲ್ಲಂತೂ ಉಗ್ರಗಾಮಿಗಳಾದ ಸ್ತ್ರೀಯರು ಸ್ತ್ರೀ ಸ್ವಾತಂತ್ರ್ಯದ ಆಂದೋಲನವನ್ನು ಹುಟ್ಟು ಹಾಕಿದ್ದಾರೆ.

ಸ್ತ್ರೀ ಪುರುಷರಲ್ಲಿ ಬೇಧವೆನುಸುವ ನೈತಿಕ ನಿಯಮಾವಳಿಗಳನ್ನು ಅವರು ಬಿಂಬಿಸಿದ್ದರು. ಈ ಆಂದೋಲನದಿಂದಾಗಿ ಮತ್ತು ಸ್ತ್ರೀಯರ ಸಾಮಾಜಿಕ ಅಂತಸ್ತಿನಲ್ಲಿ ಉಂಟಾದ ಬದಲಾವಣೆಯಿಂದಾಗಿ ಕುಟುಂಬದಲ್ಲಿನ ಸ್ತ್ರೀ ಪುರುಷ ನಡುವಿನ ಸಂಬಂಧಗಳು ಬದಲಾದವು. ಪರಿಣಾಮವಾಗಿ ಕುಟುಂಬದಲ್ಲಿ ತಿಕ್ಕಾಟಗಳು ಮತ್ತು ಸಂಘರ್ಷಗಳನ್ನು ಕಾಣಬಹುದು.

ಕುಟುಂಬದ ಗಾತ್ರವು ಇಂದು ಗಣನೀಯವಾಗಿ ಚಿಕ್ಕದಾಗಿದೆ. ನಗರಗಳಲ್ಲಂತೂ ಅವಿಭಕ್ತ ಕುಟುಂಬಗಳು ಕಾಣಸಿಗಲಾರವು. ಕುಟುಂಬವೆಂದರೆ ಇಂದು ಅವಿಭಕ್ತ ಕುಟುಂಬವೇ ಆಗಿದೆ. ಮಕ್ಕಳ ಜನನದ ಇಳಿಮುಖ ಇದಕ್ಕೆ ಮುಖ್ಯ ಕಾರಣವಾಗಿದೆ.

ಹಿಂದಿನ ಸಾಂಪ್ರದಾಯಿಕ ಕುಟುಂಬಕ್ಕಿಂತ ಹೆಚ್ಚಾಗಿ ಇಂದಿನ ಆಧುನಿಕ ಕುಟುಂಬವು ವಿವಾಹ ವಿಚ್ಛೇದನದ ಸವಾಲನ್ನು ಎದುರಿಸಬೇಕಾಗಿದೆ. ಪತಿ ಪತ್ನಿಯರ ವಿರಸ ಶಾಶ್ವತ ಅಥವಾ ತಾತ್ಕಾಲಿಕ ವಿಯೋಗ ಪ್ರತ್ಯೇಕತೆ ಇವು ಪಾಶ್ಚಿಮಾತ್ಯ ಕುಟುಂಬಗಳಲ್ಲಿ ಎದ್ದು ಕಾಣುವ ಲಕ್ಷಣಗಳಾಗಿವೆ. ಇಂದು ವಿವಾಹ ಎಂಬುದು ಒಂದು ನಾಗರೀಕ ಒಪ್ಪಂದವಿದ್ದಂತೆ. ಆದರೆ ಅದು ಪವಿತ್ರವಾದ ಧಾರ್ಮಿಕ ವಿಧಿಯಾಗಿ ಉಳಿದಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಂತೂ ಮೊದಲ ನೋಟಕ್ಕೆ ಪ್ರಣಯ, ನಂತರ ವಿಚ್ಛೇನ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಅಮೇರಿಕಾದಲ್ಲಿ ಶೇಕಡ ೨೫% ರಷ್ಟು ವಿವಾಹಗಳು ವಿಚ್ಛೇದನದಲ್ಲಿ ಪರ್ಯವಸಾನಗೊಳ್ಳುತ್ತವೆ. ಎಂದು ತಿಳಿದು ಬಂದಿದೆ.

ಭಾರತದಂತಹ ರಾಷ್ಟ್ರದಲ್ಲಿ ವಿವಾಹ ವಿಚ್ಛೇದನವು ಅತ್ಯಧಿಕ ಪ್ರಮಾಣ ಮುಟ್ಟಿದೆ ವಿಛಿದ್ರಗೊಳ್ಳುತ್ತಿರುವ ಕುಟುಂಬದಲ್ಲಿ ವ್ಯಕ್ತಿಗಳು ಅಸ್ವಸ್ಥರಾಗಿರುತ್ತಾರೆ. ದೈಹಿಕಾಕರ್ಷಣೆ ಮತ್ತು ಆರ್ಥಿಕಾಕರ್ಷಣೆಯಿಂದ ಭ್ರಮನಿರಶನ ಹೊಂದಿದೊಡನೆಯೇ ಬೇರೆಯಾಗಲು ತವಕಿಸುತ್ತಾರೆ. ಹೀಗೆ ವಿವಾಹ ವಿಚ್ಛೇದನದ ಪ್ರಕರಣಗಳು ಹೆಚ್ಚುತ್ತಿದ್ದು ಕುಟುಂಬದ ಆಸ್ತಿಭಾರವೇ ಕುಸಿಯುತ್ತಿದೆ.

ಸದಸ್ಯರುಗಳ ನಡುವಿನ ಸಂಬಂಧಗಳು ಭದ್ರವಾಗಿಲ್ಲದೆ ಇರುವುದರಿಂದ ಭಾವನಾತ್ಮಕತೆ ಮಾಯವಾಗುತ್ತಿರುವುದಿರಂದ ವೈಚಾರಿಕತೆಯ ಪ್ರಭಾವ ಹೆಚ್ಚುತ್ತಿರುವುದರಿಂದಾಗಿ ಕುಟುಂಬದಲ್ಲಿ ಆಗಾಗ್ಗೆ ಕ್ಷುಲಕಕಾರಣಗಳು ತಿಕ್ಕಾಟ ಘರ್ಷಣೆಗಳು ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಹೆಚ್ಚಿವೆ. ಪರಸ್ಪರ ವಿಶ್ವಾಸದ ಅಭಾವ ಅನಿಯಮಿತ ಲೈಂಗಿಕ ಸಂಬಂಧಗಳು ಕುಟುಂಬದ ಅಸ್ಥಿರತೆಗೆ ಕಾರಣವಾಗಿದೆ. ಸುಲಭವಾಗಿ ದೊರಕುವ ಆಧುನಿಕತೆಯ ಸೋಗಿನಲ್ಲಿ ಕಂಡುಬರುವ ನನ್ನ ಸತ್ಯ ಕಾಮಸಂಬಂಧಗಳು ವ್ಯಕ್ತಿಯನ್ನು ಅಸ್ಪಷ್ಟಗೊಳಿಸುತ್ತದೆ.

ಕುಟುಂಬದ ಸದಸ್ಯಯರು ತಮ್ಮ ಬಹುಪಾಲು ಸಮಯವನ್ನು ಹೊರಗಡೆ ಕಳೆಯುತ್ತಾರೆ. ಸಡಿಲುಗೊಂಡ ಸಾಮಾಜಿಕ ನಿಯಮಗಳು ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆ ಅವ್ಯವಸ್ಥಿತ ಸಂಘ ಜೀವನದಿಂದ ಕುಟುಂಬ ಶಿಥಿಲಗೊಳ್ಳುತ್ತಿದೆ. ಒಟ್ಟಿನಲ್ಲಿ ಆರ್ಥಿಕ, ಶೈಕ್ಷಣಿಕ ಮನೋರಂಜನಾತ್ಮಕ ರಕ್ಷಣಾತ್ಮಕ ಮುಂತಾದ ಕಾರ್ಯಗಳು ಕುಟುಂಬೇತರ ಸಂಸ್ಥೆಗಳಿಗೆ ವರ್ಗಾವಣೆಯಾಗುತ್ತಿರುವ ಹಿನ್ನೆಲೆಯಲ್ಲಿಯೇ ಇಂದಿನ ಆಧುನಿಕ ಕುಟುಂಬ ತನ್ನ ಸ್ವಾವಲಂಬನೆಯನ್ನು ಕಳೆದುಕೊಳ್ಳುತ್ತಿವೆ ಎಂದು ಹೇಳಬಹುದು.

ಹೀಗೆ ಆರ್ಯಾಂಬ ಮತ್ತು ತ್ರಿವೇಣಿಯವರ ಸಾಹಿತ್ಯದ ಒಂದು ಮುಖ. ಅಷ್ಟೇ ದೃಢವಾದ ಮತ್ತು ತರ್ಕಶುದ್ಧವಾದ ಮತ್ತೊಂದು ಮುಖವೂ ಅದಕ್ಕಿದೆ. ಮನೆ, ವಿವಾಹ, ಕುಟುಂಬ ಈ ವ್ಯವಸ್ಥೆಯನ್ನು ಅನುಮೋದಿಸುತ್ತಲೇ ಈ ವ್ಯವಸ್ಥೆಯಲ್ಲಿ ಸ್ತ್ರೀಗೆ ಸಮಾನ ಸ್ಥಾನವಿರಬೇಕೆಂದು ಮತ್ತು ಅವಳಿಗೂ ಆಯ್ಕೆಯ ಸ್ವಾತಂತ್ರ್ಯವಿರಬೇಕೆಂದು ಪ್ರಬಲವಾಗಿ ತ್ರಿವೇಣಿ ವಾದಿಸುತ್ತಾರೆ. ಪ್ರತಿಯೊಂದು ಕಾದಂಬರಿಯಲ್ಲಿಯೂ ಪುರುಷರಿಂದ ಸ್ತ್ರೀಯರಿಗೆ ಆಗುತ್ತಿರುವ ಶೋಷಣೆಯ ಕರಾಳ ಮುಖಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಸ್ತ್ರೀಯರಿಗೆ ವಿದ್ಯಾಭ್ಯಾಸ ಅನಗತ್ಯವೆಂಬ ಭಾವನೆಯಿಂದಾಗಿ ವಿವಾಹ ವ್ಯವಸ್ಥೆಯಲ್ಲಿ ತಮ್ಮ ಬಾಳಸಂಗಾತಿಯನ್ನು ಆರಿಸುವುದರ ಹಕ್ಕು ಸ್ತ್ರೀಯರಿಗಿಲ್ಲದಿರುವುದು. ವರದಕ್ಷಿಣೆಯ ಪದ್ಧತಿ ಇತ್ಯಾದಿ. ಲೈಂಗಿಕ ಕ್ಷೇತ್ರದಲ್ಲಿ ಸ್ತ್ರೀಯರನ್ನು ಕೇವಲ ಕಾಮಪೂರ್ತಿಯ ಸರಕುಗಳೆಂದು ಪುರುಷರು ಪರಿಗಣಿಸುವುದು.

ಕುಟುಂಬ ವ್ಯವಸ್ಥೆಯಲ್ಲಿ ಹೆಂಡತಿಯು ಗಂಡನಿಗೆ ಸಂಪೂರ್ಣವಾಗಿ ಅಡಿಯಾಳಾಗಿರಬೇಕೆಂಬ ಆಲೋಚನಾ ಕ್ರಮದಿಂದಾಗಿ ಇತ್ಯಾದಿ. ಸ್ತ್ರೀಯೊಬ್ಬಳು ಗೃಹಿಣಿಯಾಗಿರಲಿ, ಪ್ರೇಮಿಯಾಗಿರಲಿ ಅಥವಾ ತಾಯಿ ಮಗಳಾಗಿರಲಿ ಅವಳಿಗೆ ಪ್ರೀತಿ, ಸ್ನೇಹ ಮತ್ತು ಗೌರವ ಇವು ದೊರಕಲೇ ಬೇಕು ಎಂದು ತ್ರಿವೇಣಿ ಅತ್ಯಂತ ಕಾಳಜಿಯಿಂದ

ಸಮಾಜವನ್ನು ಆಗ್ರಹಿಸುತ್ತಾರೆ. ಅರ್ಥಾತ್ ತ್ರಿವೇಣಿಯವರ, ಆರ್ಯಾಂಬರ ಆದರ್ಶ ಕುಟುಂಬ ಮಾತ್ರವಲ್ಲ. ಪತಿಪತ್ನಿಯರಿಬ್ಬರಿಗೂ ಸಮಾನ ಹಕ್ಕು ಬಾಧ್ಯತೆಗಳು ಮತ್ತು ಜವಾಬ್ದಾರಿಗಳಿರುವ ಕುಟುಂಬವಾಗಿದೆ.

ಅಡಿಟಿಪ್ಪಣಿಗಳು

೧. ಡಾ. ಹೆಚ್.ಎಲ್.ವೆಂಕಟೇಶ್ : ಸಾಮಾಜಿಕ ಸಂಸ್ಥೆಗಳು ಮತ್ತು ಸಾಮಾಜೀಕರಣ, ಸಂ. ಡಾ. ಆರ್.ಎನ್.ಹಾದಿಮನಿ : ಸಮಾಜಶಾಸ್ತ್ರದ ಮೂಲತತ್ವಗಳು, ಪೂರ್ಣಿಮ ಪ್ರಿಂಟರ್ಸ್, ಬೆಂಗಳೂರು, ೨೦೦೬, ಪುಟ ೧೨

೨. ಸುಧಾಹರೀಶ್ : ಆರ್ಯಾಂಬ ಅವರ ಸಾಹಿತ್ಯ, ಉನ್ಮೀಲನ (ಶ್ರೀಮತಿ ಆರ್ಯಾಂಬ ಪಟ್ಟಾಭಿ ಅಭಿನಂದನಾ ಗ್ರಂಥ), ಸಂ. ಪ್ರೊ. ಸ.ನ. ಗಾಯತ್ರಿ ಮತ್ತು ಡಾ.ಎಸ್.ಡಿ. ಶಶಿಕಲಾ ಸಂವಹನ ಪ್ರಕಾಶನ, ಮೈಸೂರು, ೨೦೦೨, ಪುಟ ೪೯

೩. ಸಿ.ಎನ್. ರಾಮಚಂದ್ರನ್ : ತ್ರಿವೇಣಿ ಭಾರತೀಯ ಸಾಹಿತ್ಯ ನಿರ್ಮಾಪಕರು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೯, ಪುಟ ೧೦

೪. ಸುಧಾರ್ಥಿ : ತ್ರಿವೇಣಿ ಕೃತಿಗಳ ಒಳನೋಟ, ಪ್ರತಿಭಾ ಕಲಾ ಪರಿಷತ್, ಬೆಂಗಳೂರು, ೧೯೭೩, ಪುಟ ೧೬೬

೫. ಸಿ.ಎನ್. ರಾಮಚಂದ್ರನ್ : ತ್ರಿವೇಣಿ ಭಾರತೀಯ ಸಾಹಿತ್ಯ ನಿರ್ಮಾಪಕರು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೯, ಪುಟ

೬. ಸಿ.ಎನ್. ರಾಮಚಂದ್ರನ್ : ತ್ರಿವೇಣಿ ಭಾರತೀಯ ಸಾಹಿತ್ಯ ನಿರ್ಮಾಪಕರು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೯, ಪುಟ

ಅಧ್ಯಾಯ ೭

ವ್ಯವಸ್ಥೆ ಮತ್ತು ವಿರೋಧ

ಅಧ್ಯಾಯ ೭

ವ್ಯವಸ್ಥೆ ಮತ್ತು ವಿರೋಧ

ಅನ್ಯೋನ್ಯ ಕ್ರಿಯೆಗಳ ಕ್ರಮಬದ್ಧವಾದ ಏರ್ಪಾಡೇ ವ್ಯವಸ್ಥೆಯಾಗಿರುತ್ತದೆ. ಪರಸ್ಪರರಿಗೆ ಅನ್ಯೋನ್ಯ ಸಂಬಂಧಗಳ ಜಾಲವೇ ಸಮಾಜ. ಬಹುಸಂಖ್ಯಾತ ವ್ಯಕ್ತಿಗಳು ಒಟ್ಟಾರೆಯಾಗಿ ಇಟ್ಟುಕೊಂಡಿರುವ ಸಾಂಸ್ಕೃತಿಕ ನಿಯಮ ಹಾಗೂ ಅರ್ಥಗಳಿಗೆ ಅನುಗುಣವಾಗಿ ಪರಸ್ಪರ ಪ್ರತಿಸ್ಪಂದಿಸುವುದೇ ಸಾಮಾಜಿಕ ವ್ಯವಸ್ಥೆ. ಇದಕ್ಕೆ ವ್ಯತಿರಿಕ್ತವಾಗಿ ನಡೆಯುವುದೇ ಸಾಮಾಜಿಕ ವಿರೋಧ.

"ಸಾಮಾಜಿಕ ವ್ಯವಸ್ಥೆಯ ಅಂಗಭಾಗಗಳೆಂದರೆ ವ್ಯಕ್ತಿಗಳು ಈ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಪಾತ್ರವಿರುತ್ತದೆ. ಅವನು ಅನ್ಯೋನ್ಯ ಸಂಬಂಧಗಳಲ್ಲಿ ಭಾಗಿಯಾಗಿರುತ್ತಾನೆ. ಇತರ ವ್ಯಕ್ತಿಗಳ ಇತರ ವರ್ತನೆಯ ಮೇಲೆ ಪ್ರಭಾವ ಬೀರುವಂತವನಾಗಿರುತ್ತಾನೆ. ಇತರರ ವರ್ತನೆಗಳಿಂದ ಪ್ರಭಾವಿತನಾಗಿರುತ್ತಾನೆ. ವ್ಯಕ್ತಿಗಳ ಮತ್ತು ಗುಂಪುಗಳ ವರ್ತನೆ ಯಾವಾಗಲೂ ಸಾಮಾಜಿಕ ಸಂಸ್ಥೆಗಳಿಂದ ನಿಯಂತ್ರಿತವಾಗಿರುತ್ತದೆ. ವಿವಿಧ ಗುಂಪುಗಳು ಸ್ವತಂತ್ರವಾಗಿ ಪ್ರತ್ಯೇಕಿತ ರೀತಿಯಲ್ಲಿ ಕಾರ್ಯನಿರ್ವಹಿಸಲಾರವು. ಯಾವುದೇ ಒಂದು ವರ್ಗೀಕೃತ ವ್ಯವಸ್ಥೆಯ ಸಂಗತ ಭಾಗಗಳಾಗಿ ಮಾತ್ರ ಅವು ಕಾರ್ಯನಿರ್ವಹಿಸಬಲ್ಲವು ಸಾಮಾಜಿಕ ನಿಯಮಗಳಿಗೆ ಅವು ಬದ್ಧವಾಗಿರಲೇಬೇಕು. ಈ ಗುಂಪುಗಳ ಅನ್ಯೋನ್ಯ ಕ್ರಿಯೆಯ ಹಾಗೂ ಅಂತರ್ ಸಂಬಂಧಗಳ ಮೂಲಕ ಒಂದು ವ್ಯವಸ್ಥೆ ವಿನ್ಯಾಸಗೊಳ್ಳುತ್ತದೆ. ಅದನ್ನೇ ಸಾಮಾಜಿಕ ವ್ಯವಸ್ಥೆ ಎನ್ನಬಹುದು".[೧]

ಅನೇಕ ಅಂಶಗಳ ಕ್ರಮಬದ್ಧ ವ್ಯವಸ್ಥಿತ ಏರ್ಪಾಡಾಗಿರುವುದರಿಂದ ಸಾಮಾಜಿಕ ವ್ಯವಸ್ಥೆಯನ್ನು ಒಂದು ಸಂಘಟನೆ ಎನ್ನಬಹುದು. ಆದರೆ ಸಂಘಟನೆಯ ರೀತಿಗಿಂತ ಭಿನ್ನವಾಗಿ ಇದು ತನ್ನ ಅಂಗಗಳ ಅನ್ಯೋನ್ಯ ಕ್ರಿಯೆ ಹಾಗೂ ಕಾರ್ಯಾತ್ಮಕ ಅಂತರ್ ಸಂಬಂಧಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ. ಸಾಮಾಜಿಕ ವ್ಯವಸ್ಥೆಯೊಳಗೆ ಅನೇಕ ಉಪವ್ಯವಸ್ಥೆಗಳಿರುತ್ತವೆ. ಕೌಟುಂಬಿಕ ವ್ಯವಸ್ಥೆ, ವೈವಾಹಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ ಇತ್ಯಾದಿ ಈ ಎಲ್ಲಾ ಉಪವ್ಯವಸ್ಥೆಗಳಲ್ಲಿಯೂ ಅನ್ಯೋನ್ಯ ಕ್ರಿಯೆಗೆ ಒಳಗಾಗುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಕಾರ್ಯವನ್ನು ನಿರ್ವಹಿಸಬೇಕಾಗಿರುತ್ತದೆ.

ಸಾಮಾಜಿಕ ವ್ಯವಸ್ಥೆಯು ಹಲವಾರು ವ್ಯಕ್ತಿಗಳ ಅನ್ಯೋನ್ಯ ಕ್ರಿಯೆಗಳನ್ನು ಆಧರಿಸಿದೆ. ಯಾವಾಗ ಅನೇಕ ವ್ಯಕ್ತಿಗಳ ಕ್ರಿಯೆ ಮತ್ತು ಪ್ರತಿಕ್ರಿಯೆಯಂತಹ ಅನ್ಯೋನ್ಯ ಕ್ರಿಯೆಗಳು ಒಂದು ವ್ಯವಸ್ಥೆಯನ್ನು ಸೃಷ್ಟಿಸುತ್ತವೆ. ಇಂತಹ ವ್ಯವಸ್ಥೆಯನ್ನು ಸಾಮಾಜಿಕ ವ್ಯವಸ್ಥೆ ಎಂಬುದಾಗಿ ಕರೆಯುತ್ತಾರೆ. ಸಾಮಾಜಿಕ ವ್ಯವಸ್ಥೆಯು ಒಬ್ಬ ವ್ಯಕ್ತಿಯ ಕ್ರಿಯೆಯಿಂದ ಸೃಷ್ಟಿಯಾಗಲಾರದು. ಸಾಮಾಜಿಕ ವ್ಯವಸ್ಥೆಯು ಸೃಷ್ಟಿಯಾಗಲು ಅನೇಕ ವ್ಯಕ್ತಿಗಳ ಅನ್ಯೋನ್ಯ ಕ್ರಿಯೆಗಳು ಅಗತ್ಯವಾಗುತ್ತದೆ.

ಸಾಮಾಜಿಕ ವ್ಯವಸ್ಥೆಯು ಅರ್ಥಪೂರ್ಣ ಅನ್ಯೋನ್ಯ ಕ್ರಿಯೆಗಳ ಸಂಘಟನೆಯಾಗಿದೆ. ಗೊತ್ತು ಗುರಿಯಿಲ್ಲದ, ಅರ್ಥಪೂರ್ಣವಲ್ಲದ ಅನ್ಯೋನ್ಯ ಕ್ರಿಯೆಗಳು ಸಾಮಾಜಿಕ ಸಂಬಂಧಗಳನ್ನು ಸೃಷ್ಟಿಸುತ್ತವೆ. ಸಂಪ್ರದಾಯಗಳು, ಪದ್ಧತಿಗಳು, ನೈತಿಕ ನಿಯಮಗಳು, ಕಾನೂನುಗಳು, ಸಂಸ್ಥೆಯಂತಹುಗಳಲ್ಲಿ ಸಾಮಾಜಿಕ ಸಂಬಂಧಗಳ ಅಭಿವ್ಯಕ್ತಿಯನ್ನು ಕಾಣಬಹುದು. ಸಾಮಾಜಿಕ ವ್ಯವಸ್ಥೆಯು ಕ್ರಮವಾಗಿ ವ್ಯವಸ್ಥೆಗೊಳಿಸಲಾದ ಅನೇಕ ಸಾಮಾಜಿಕ ಸಂಬಂಧಗಳ ಅಭಿವ್ಯಕ್ತಿಯನ್ನು ಬಿಂಬಿಸುತ್ತವೆ.

ಅಂಗಭಾಗಗಳಾದ ಸಂಸ್ಥೆಗಳು, ಪದ್ಧತಿಗಳು, ಸಂಪ್ರದಾಯಗಳು, ಕ್ರಮಗಳು ಮತ್ತು ಕಾನೂನುಗಳು ಯಾವ ಯಾವ ರೀತಿಯಲ್ಲಿಯೂ ಸಂಘಟಿತವಾದರೆ ಸಾಮಾಜಿಕ ವ್ಯವಸ್ಥೆಯಾಗಲಾರದು. ಸಾಮಾಜಿಕ ವ್ಯವಸ್ಥೆಯ ಒಂದು ಸ್ಥಿತಿ ಉಂಟಾಗುವುದು ಅಂಗಭಾಗಗಳು ಸಮಗ್ರ ರೀತಿಯಲ್ಲಿ ವ್ಯವಸ್ಥೆಗೊಂಡಾಗ ಮಾತ್ರ. ಸಾಮಾಜಿಕ ವ್ಯವಸ್ಥೆಯಲ್ಲಿ ಅನ್ಯೋನ್ಯ ಕ್ರಿಯೆ ನಡೆಸುವ ಅಂಗಭಾಗಗಳಲ್ಲಿ ಕ್ರಮಬದ್ಧತೆಯಿರುತ್ತದೆ. "ಕಾರ್ಯಾತ್ಮಕ ಸಂಬಂಧಗಳ ಆಧಾರದ ಮೇಲೆ ಸಾಮಾಜಿಕ ವ್ಯವಸ್ಥೆಯ ಭಾಗಗಳು ಪರಸ್ಪರ ಸಂಬಂಧಿತವಾಗಿರುತ್ತದೆ".[೨]

ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರತಿಯೊಂದು ಅಂಗಕ್ಕೂ ನಿರ್ದೇಶಿತ ಪಾತ್ರವಿರುತ್ತದೆ. ಈ ಪಾತ್ರವನ್ನು ಅದು ನಿಯಮಾನುಸಾರವಾಗಿ ನಿರ್ವಹಿಸುತ್ತದೆ. ಇಂತಹ ವಿವಿಧ ಅಂಗಗಳು ಕಾರ್ಯಾತ್ಮಕ ಸಂಬಂಧಗಳ ಮೇಲೆ ಒಗ್ಗೂಡಿರುತ್ತವೆ. ನಿಜವಾದ ಅರ್ಥದಲ್ಲಿ ಸಾಮಾಜಿಕ ವ್ಯವಸ್ಥೆಯು ಪರಸ್ಪರ ಅವಲಂಬಿತ ಮತ್ತು ಅನ್ಯೋನ್ಯ ಕ್ರಿಯೆ ನಡೆಸುವ ಘಟಕಗಳ ಏರ್ಪಾಡೇ ಆಗಿದೆ. ಈ ರೀತಿಯಾದ ಕಾರ್ಯಾತ್ಮಕ ಸಂಬಂಧಗಳನ್ನು ಸಾಮಾಜಿಕ ವ್ಯವಸ್ಥೆಯ ಪರಿಕಲ್ಪನೆಯಲ್ಲಿ ಅತ್ಯಂತ ಮಹತ್ವದ ಸ್ಥಾನ ನೀಡಿದ್ದಾರೆ.

ಸಾಮಾಜಿಕ ವ್ಯವಸ್ಥೆಯು ಸಾಂಸ್ಕೃತಿಕ ವ್ಯವಸ್ಥೆಯ ಜೊತೆ ನಿಕಟವಾದ ಸಂಬಂಧವನ್ನು ಹೊಂದಿದೆ. ಸಂಸ್ಕೃತಿಯು ಸಮಾಜದಲ್ಲಿರುವ ವ್ಯಕ್ತಿಗಳ ಅಂತರ್ ಸಂಬಂಧಗಳು ಮತ್ತು ಅನ್ಯೋನ್ಯ ಪ್ರಕ್ರಿಯೆಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸುತ್ತವೆ. ಅಂತರ್ ಸಂಬಂಧಗಳು ಮತ್ತು ಅನ್ಯೋನ್ಯ ಕ್ರಿಯೆಗಳನ್ನಲ್ಲದೆ ಇವುಗಳ ಮಧ್ಯೆ ಸಮತೋಲನ ಸ್ಥಿತಿ ಮತ್ತು ಅನ್ಯೋನ್ಯ ಸಂಬಂಧಗಳನ್ನು ಕಾಪಾಡುತ್ತವೆ.

ಪು. ೧೭

ಯಾವುದೇ ಸಾಮಾಜಿಕ ವ್ಯವಸ್ಥೆಯು ನಿರ್ದಿಷ್ಟ ಕಾಲ, ನಿರ್ದಿಷ್ಟ ಸ್ಥಳ ಮತ್ತು ನಿರ್ದಿಷ್ಟ ಸಮಾಜಕ್ಕೆ ಸಂಬಂಧಿಸಿದೆ. ಅದರ ಅರ್ಥ ಸಾಮಾಜಿಕ ವ್ಯವಸ್ಥೆಯು ಎಲ್ಲಾ ಕಾಲಗಳಲ್ಲೂ ಎಲ್ಲಾ ಭೂ ಪ್ರದೇಶಗಳಲ್ಲೂ ಹಾಗೂ ಎಲ್ಲಾ ಸಮಾಜದಲ್ಲೂ ಒಂದೇ ಆಗಿರುವುದಿಲ್ಲ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಕಾಲ ಬದಲಾದಂತೆ ಸಾಮಾಜಿಕ ವ್ಯವಸ್ಥೆಯು ಬದಲಾಗುತ್ತದೆ. ಕೆಲವು ಧರ್ಮಗಳಲ್ಲಿ ವ್ಯವಸ್ಥೆ ಸ್ಥಗಿತವಾಗಿರುತ್ತದೆ, ಚಲನಾಶೀಲವಾಗಿರುತ್ತದೆ. ಈ ಬದಲಾವಣೆಯಿಂದಾಗಿ ಸಾಮಾಜಿಕ ಸಮತೋಲನ ಕಳೆದುಹೋಯಿತು ಎಂಬ ಅರ್ಥದಲ್ಲಿ ಕೆಲವು ಸಂದರ್ಭಗಳಲ್ಲಿ ಸಮತೋಲನಕ್ಕೆ ಧಕ್ಕೆಯುಂಟಾಗುವುದು. ಸಾಮಾಜಿಕ ಬದಲಾವಣೆಗಳುಂಟಾದಾಗ್ಯೂ ಸಾಮಾಜಿಕ ವ್ಯವಸ್ಥೆಯು ನಿರಂತರವಾಗಿ ಮುಂದುವರಿಯುತ್ತದೆ. ಗಂಡ ಹೆಂಡಿರ ಪಾತ್ರಗಳಲ್ಲಿ ಅನೇಕ ಬದಲಾವಣೆಗಳುಂಟಾಗಬಹುದು. ರೂಢಿಯಲ್ಲಿ ಬದಲಾವಣೆಗಳುಂಟಾದರೂ ಕೌಟುಂಬಿಕ ವ್ಯವಸ್ಥೆಯು ಕೊನೆಗೊಂಡಿಲ್ಲ. ಸಾಮಾಜಿಕ ವ್ಯವಸ್ಥೆಯ ಸ್ವ ಹೊಂದಾಣಿಕೆ ಮಾಡಿಕೊಳ್ಳುವ ಗುಣವನ್ನು ಹೊಂದಿದೆ.

ಬರೆಹಗಾರ್ತಿಯರಿಬ್ಬರ ಕಾದಂಬರಿಗಳಲ್ಲಿ ಕಾಣಸಿಗುವ ವ್ಯವಸ್ಥೆಯಲ್ಲಿ ಸಾಮಾಜಿಕ ವಿನ್ಯಾಸದ ಪರ ಹಾಗೂ ವಿರೋಧ ವಿಚಾರಗಳು ವ್ಯವಸ್ಥೆಯ ಮಟ್ಟಿಗೆ ಅವರ ಅಭಿಪ್ರಾಯ, ವಿರೋಧದ ಬಗ್ಗೆ ಆಕ್ಷೇಪಣೆ ಹೇಗೆ ಕಂಡು ಬಂದಿದೆ? ಪ್ರತಿಭಟನೆ ಹೇಗೆ ವ್ಯಕ್ತವಾಗಿದೆ? ಸಾಮಾಜಿಕ ಕಾಳಜಿಯ ಬಗೆಗೆ ಅವರ ದಿಟ್ಟ ನಿಲುವುಗಳೇನು? ಇತ್ಯಾದಿ ವಿಚಾರಗಳ ಬಗ್ಗೆ ಚಿಕಿತ್ಸಕ ದೃಷ್ಟಿ ಬೀರಬೇಕಾಗುತ್ತದೆ.

ಪ್ರತಿಯೊಂದು ಸಮಾಜವು ತನ್ನದೇ ಆದಂತಹ ಶ್ರೇಣಿ ವ್ಯವಸ್ಥೆಯನ್ನು ಹೊಂದಿರುತ್ತದೆ. ಈ ಶ್ರೇಣಿ ವ್ಯವಸ್ಥೆಯಲ್ಲಿ ವ್ಯಕ್ತಿಗಳ ಸ್ಥಾನಮಾನವು ಮೇಲುಕೀಳು, ಹೆಚ್ಚುಕಡಿಮೆ ಎಂಬುದಾಗಿ ನಿರ್ಧರಿಸಲಾಗಿರುತ್ತದೆ. ಸ್ತರವಿನ್ಯಾಸ ಎಂಬ ಪರಿಕಲ್ಪನೆಯನ್ನು ಭೂಗರ್ಭಶಾಸ್ತ್ರದಲ್ಲಿ ಮೊದಲಬಾರಿಗೆ ಉಪಯೋಗಿಸಲಾಗಿದೆ. ಅಲ್ಲಿ ಮಣ್ಣು ಅಥವಾ ಶಿಲೆಯ ಭಿನ್ನ ಪದರಗಳನ್ನು ಹೊಂದಿರುವ ಸ್ತರವಿನ್ಯಾಸ ವ್ಯವಸ್ಥೆ ಇದೆ. ವ್ಯಕ್ತಿಗಳನ್ನು ಅವರು ಪಡೆದಿರುವ ಸಾಮಾಜಿಕ ಅಂತಸ್ತಿನ ಮತ್ತು ನಿರ್ವಹಿಸುವ ಪಾತ್ರಗಳ ಆಧಾರದ ಮೇಲೆ ಶ್ರೇಷ್ಠಕನಿಷ್ಠ, ಮೇಲುಕೀಳು, ಉಚ್ಚನೀಚ ಎಂದು ವರ್ಗೀಕರಿಸುವ ವ್ಯವಸ್ಥೆಗೆ ಸಾಮಾಜಿಕ ಸ್ತರವಿನ್ಯಾಸವೆಂದು ಹೆಸರು. ಈ ಸ್ತರೀಕರಣದಿಂದಾಗಿ ಸಾಮಾಜಿಕ ರಚನೆಯಲ್ಲಿ ವ್ಯಕ್ತಿಗಳ ಅಂತಸ್ತುಗಳು ನಿಗದಿತವಾಗಿರುತ್ತವೆ. ಸಾಮಾಜಿಕ ಸ್ತರವಿನ್ಯಾಸ ವ್ಯವಸ್ಥೆಯಲ್ಲಿ ಕೆಳಗಿನ ವರ್ಗದವರಿಗೆ ಹೋಲಿಸಿದಾಗ ಮೇಲಿನ ಸ್ತರದ ವರ್ಗದವರಿಗೆ ಹೆಚಿನ ಪ್ರತಿಷ್ಠೆ, ಅಧಿಕಾರಗಳು ಮತ್ತು ಮಾನ್ಯತೆ, ಆದ್ಯತೆಗಳು ಇರುತ್ತವೆ.

ಸಮಾಜದಲ್ಲಿನ ಸದಸ್ಯರೆಲ್ಲಾ ಸಮನರಾಗಿರುವಂತಹ ಸಮಾನತಾ ಸಮಾಜದ ಕನಸನ್ನು ಪ್ರಸ್ತುತ ಸಮಾಜದಲ್ಲಿ ನಾವು ಕಾಣುತ್ತೇವೆ. ಅಂತಹ ಸಮಾಜದಲ್ಲಿ ವ್ಯಕ್ತಿಗಳನ್ನು ಪ್ರತಿಷ್ಠೆಯುಳ್ಳವರು, ಪ್ರತಿಷ್ಠೆ ಇಲ್ಲದವರು ಎಂದು ವರ್ಗೀಕರಿಸಲಾಗುವುದಿಲ್ಲ. ಯಾರೂ ಸಹ ಹೆಚ್ಚಿನ ಸ್ಥಾನಮಾನವನ್ನು ಹೊಂದಿದ್ದೇನೆಂದು ಸಂತುಷ್ಟನಾಗಿರಲು ಸಾಧ್ಯವಿಲ್ಲ. ಗೌರವವೇ ಇಲ್ಲದಂತಹ ಗೌಣಸ್ಥಾನದಲ್ಲಿ ಇರುವೆನೆಂಬ ಭಾವನೆ ಯಾರಿಗೂ ಬರುವುದಿಲ್ಲ.

ಉನ್ನತ ಅಂತಸ್ತಿನಲ್ಲಿ ಇರುವವರನ್ನು ಕಂಡು ಕೆಳ ಅಂತಸ್ತಿನಲ್ಲಿರುವವರು ಗೌರವ ಮತ್ತು ಮೆಚ್ಚುಗೆ ಅಥವಾ ಅಸೂಯೆ ಮತ್ತು ಅಸಮಾಧಾನಗಳನ್ನು ತೋರಿಸುವಂತಹ ಪರಿಸ್ಥಿತಿ ಉದ್ಭವವೇ ಆಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಶ್ರೀಮಂತರು ಮತ್ತು ಬಡವ, ಹೊಂದಿರುವವರು ಮತ್ತು ಹೊಂದಿಲ್ಲದಿರುವವರು ಎಂಬುದು ಗತಿಸಿದ ಸಂಗತಿಯಾಗುತ್ತದೆ. ಜನರಿಗೆ ಅಧಿಕಾರ ಎಂಬ ನುಡಿಗಟ್ಟು ಸಮಾನತಾ ಸಮಾಜದಲ್ಲಿ ವಾಸ್ತವತೆಯನ್ನು ಕಾಣುತ್ತದೆ. ಮನುಷ್ಯರು ಸಮಾಜದಲ್ಲಿನ ಸಹಚರರ ದೃಷ್ಟಿಯಲ್ಲಿಯೂ ಮತ್ತು ದೇವರ ದೃಷ್ಟಿಯಲ್ಲಿಯೂ ಸಮಾನರೂ ಆಗಿರುತ್ತಾರೆ ಇಂತಹ ಸಮಾನತಾ ಸಮಾಜದ ಕನಸು ಕನಸಾಗಿಯೇ ಉಳಿಯುವುದು ನಿಜ.

ಪ್ರತಿಯೊಂದು ಸಂಕೀರ್ಣ ಸಮಾಜದ ಸಾಮಾನ್ಯ ಲಕ್ಷಣವೆಂದರೆ ಸಾಮಾಜಿಕ ಸ್ತರವಿನ್ಯಾಸವೇ ಆಗಿದೆ. ವ್ಯಕ್ತಿಗಳ ಮತ್ತು ಸಾಮಾಜಿಕ ಸಮೂಹಗಳ ನಡುವೆ ಅಧಿಕಾರ ಮತ್ತು ಪ್ರತಿಷ್ಠೆಗಳು ಅಸಮಾನವಾಗಿ ವಿತರಿಸಲ್ಪಟ್ಟಿವೆ, ಕೆಲವು ವ್ಯಕ್ತಿ ಅಥವಾ ಗುಂಪುಗಳು ತಮ್ಮ ಅಭಿಲಾಷೆಯನ್ನು ಇತರರ ಮೇಲೆ ಒಪ್ಪಿಗೆ ಪಡೆದು ಅಥವಾ ಪಡೆಯದೆ ಹೇರುವುದೇ ಅಧಿಕಾರವಾಗಿರುತ್ತದೆ.

ಶ್ರೀಮಂತ ಮತ್ತು ಬಡವ ಮೇಲು ಕೀಳು ಅಧಿಕಾರ ಹೊಂದಿರುವವರು ಮತ್ತು ಅಧಿಕಾರ ಹೊಂದಿಲ್ಲದಿರುವವರು ಇತ್ಯಾದಿಗಳ ನಡುವಿನ ತಾರತಮ್ಯವು ಸಾಮಾಜಿಕ ಸ್ತರವಿನ್ಯಾಸದ ಮಹತ್ವದ ಭಾಗಗಳಾಗಿವೆ. ಅಸಮಾನತೆಯು ಎಲ್ಲಾ ಬಗೆಯ ಮಾನವ ಸಮಾಜಗಳಲ್ಲೂ ಇದೆ. ಸಂಪತ್ತು ಮತ್ತು ಆಸ್ತಿಗಳಲ್ಲಿ ಅಂತಹ ವ್ಯತ್ಯಾಸಗಳು ವಾಸ್ತವಿಕವಾಗಿ ಕಂಡು ಬರದಂತಹ ಸರಳ ಸಮುದಾಯಗಳಲ್ಲೂ ಸಹ ವ್ಯಕ್ತಿಗಳ ನಡುವೆ, ಸ್ತ್ರೀಪುರುಷರ ನಡುವೆ ಯುವಕರ ಮತ್ತು ವಯೋವೃದ್ಧರ ನಡುವೆ ಅಸಮಾನತೆ ಕಂಡು ಬರುತ್ತಿತ್ತು. ಒಬ್ಬ ವ್ಯಕ್ತಿಯು ಇತರರಿಗಿಂತ ಹೆಚ್ಚಿನ ಮಟ್ಟದ ಸ್ಥಾನಮಾನವನ್ನು ಹೊಂದಿರಬಹುದು. ಈ ಅಸಮಾನತೆಯನ್ನು ವಿವರಿಸಲು ಸಾಮಾಜಿಕ ಸ್ತರವಿನ್ಯಾಸದ ಅಸ್ತಿತ್ವದ ಪ್ರಾಮುಖ್ಯವನ್ನು ಹೇಳುತ್ತಾರೆ “ಜನರ ವಿವಿಧ ಗುಂಪುಗಳ ನಡುವಿನ ರಾಚನಿಕ ಅಸಮಾನತೆಯನ್ನು ಸಾಮಾಜಿಕ ಸ್ತರವಿನ್ಯಾಸ ಎಂದು ಹೇಳಬಹುದು”.[೩]

ಪು. ೧೩೪

ಸಾಮಾಜಿಕ ಅಸಮಾನತೆ ಹಾಗೂ ಸಾಮಾಜಿಕ ಸ್ತರವಿನ್ಯಾಸಗಳ ನಡುವೆ ಇರುವ ಭಿನ್ನತೆಯನ್ನು ಕಂಡುಕೊಳ್ಳುವುದು ಮುಖ್ಯವಾಗಿದೆ. ಸಾಮಾಜಿಕ ಅಸಮಾನತೆ ಎನ್ನುವ ಪದ ಸರಳ ಅರ್ಥದಲ್ಲಿ ಸಾಮಾಜಿಕವಾಗಿ ಸೃಷ್ಟಿಗೊಂಡ ಅಸಮಾನತೆಗಳ ಅಸ್ತಿತ್ವಕ್ಕೆ ಸಂಬಂಧಿಸಿದ್ದಾಗಿದೆ. ಇನ್ನೊಂದೆಡೆ ಸಾಮಾಜಿಕ ಸ್ತರವಿನ್ಯಾಸವು ಸಾಮಾಜಿಕ ಅಸಮಾನತೆಯ ಒಂದು ನಿರ್ದಿಷ್ಟ ಪ್ರಕಾರವಾಗಿದೆ. ಅಂದರೆ ಸಾಮಾಜಿಕ ಗುಂಪುಗಳು ಒಂದರ ಮೇಲೊಂದರಂತೆ ಸ್ಥಾನೀಕರಣಗೊಂಡಿರುತ್ತದೆ.

ಸ್ಥಾನೀಕರಣ ಸಮಾಜದಲ್ಲಿನ ವ್ಯಕ್ತಿಗಳು ಹೊಂದಿರುವ ಅಧಿಕಾರ ಪ್ರತಿಷ್ಠೆ ಮತ್ತು ಸಂಪತ್ತಿನ ಪ್ರಮಾಣವನ್ನು ಆಧರಿಸುತ್ತದೆ. ಒಂದು ಸಮೂಹ ಅಥವಾ ಸ್ತರಗಳಿಗೆ ಸೇರಿರುವ ವ್ಯಕ್ತಿಗಳು ತಮ್ಮ ಗುಂಪು ಅಥವಾ ಸ್ತರದ ಸಾಮಾನ್ಯ ಹಿತಾಸಕ್ತಿಗಳು ಮತ್ತು ಅನನ್ಯತೆಯ ಬಗೆಗೆ ಅರಿವನ್ನು ಹೊಂದಿರುತ್ತಾರೆ. ಅವರು ಒಂದೇ ವಿಧವಾದ ಜೀವನಶೈಲಿಯನ್ನು ಹೊಂದಿದವರಾಗಿದ್ದು, ಇದು ಕೆಲಮಟ್ಟಿಗೆ ಅವರನ್ನು ಇತರ ಸಾಮಾಜಿಕ ಸ್ತರಗಳ ಸದಸ್ಯರಿಂದ ಬೇರ್ಪಡಿಸುತ್ತದೆ. ಜಾತಿ ವ್ಯವಸ್ಥೆಯು ಸಾಮಾಜಿಕ ಸ್ತರವಿನ್ಯಾಸ ವ್ಯವಸ್ಥೆಗೆ ಒಂದು ಉದಾಹರಣೆಯಾಗಿದೆ.

ಸಂರಚಿತ ಸಾಮಾಜಿಕ ಅಸಮಾನತೆಯು ನಮ್ಮ ಅಸ್ತಿತ್ವದ ಬಹುತೇಕ ಎಲ್ಲಾ ರಂಗಗಳಲ್ಲಿಯೂ ಪ್ರತಿಬಿಂಬಿಸಿದೆ. ನಾವು ಯಾರನ್ನು ವಿವಾಹವಾಗುತ್ತೇವೆ, ನಾವು ಹೇಗೆ ಉಡುಗೆಗಳನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ನಮ್ಮ ಆಹಾರ ಯಾವುದಾಗಿರಬೇಕು, ನಮ್ಮ ಹಾವಭಾವ ಹಾಗೂ ಮಾತುಗಳು ಹೇಗಿರಬೇಕು ಮುಂತಾದ ಸಂಗತಿಗಳ ಮೇಲೆ ಇದು ಪ್ರಭಾವ ಉಂಟುಮಾಡುತ್ತದೆ. ಸ್ತರವಿನ್ಯಾಸವು ನಮ್ಮ ಜೀವನದಲ್ಲಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತದೆ. ಆದಾಗ್ಯೂ ನಾವು ಅನೇಕ ಸಂದರ್ಭಗಳಲ್ಲಿ ವರ್ಗ ಅಥವಾ ಜಾತಿಯ ಪಾತ್ರವನ್ನು ಗೌಣವಾಗಿ ಪರಿಗಣಿಸುತ್ತೇವೆ ಅಥವಾ ನಿರಾಕರಿಸುತ್ತೇವೆ ನಾವು ಎಷ್ಟೋ ಬಾರಿ ನಮ್ಮನ್ನು ಜಾತಿರಹಿತ ಅಥವಾ ವರ್ಗರಹಿತ ಜನರೆಂದು ಕರೆದುಕೊಳ್ಳುವುದುಂಟು.

ಭಿನ್ನತೆಯು ಪ್ರಕೃತಿಯ ನಿಯಮ. ಈ ಭಿನ್ನತೆಯು ಮಾನವ ಸಮಾಜದ ಮಟ್ಟಿಗೂ ಸತ್ಯ ಮಾನವ ಸಮಾಜವು ಏಕರೂಪವಾಗಿರದೆ ಸಂಕೀರ್ಣತೆಯಿಂದ ಕೂಡಿದೆ. ವ್ಯಕ್ತಿಗಳು ಒಬ್ಬರಿಗಿಂತ ಒಬ್ಬರು ಹಲವು ರೀತಿಗಳಲ್ಲಿ ಭಿನ್ನರಾಗಿರುತ್ತಾರೆ. ಮಾನವ ಜೀವಿಗಳು ಅವರ ಶಾರೀರಿಕ ಸ್ವರೂಪಕ್ಕೆ ಸಂಬಂಧಿಸಿದಂತೆ ಸಮಾನರಾಗಿದ್ದಾರೆ. ಆದರೆ ವ್ಯಕ್ತಿಗಳ ಭೌತಿಕ ಹೊರನೋಟ, ಅವರ ಬೌದ್ಧಿಕ, ನೈತಿಕ, ಪಾರಮಾರ್ಥಿಕ, ಮಾನಸಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಮತ್ತು ಇತರ ವಿಚಾರಗಳು ಭಿನ್ನವಾಗಿವೆ. ಇಬ್ಬರು ವ್ಯಕ್ತಿಗಳು ತದ್ರೂಪವಾಗಿ ಇರಲು ಸಾಧ್ಯವಿಲ್ಲ. ವೈವಿಧ್ಯತೆ ಮತ್ತು ಅಸಮಾನತೆಗಳು ಸಮಾಜದಲ್ಲಿ ಅಂತರ್ಗತವಾಗಿರುತ್ತವೆ. ಆದ್ದರಿಂದ ಮಾನವ ಸಮಾಜವು ಎಲ್ಲಾ ಕಡೆಗಳಲ್ಲೂ ಸ್ತರವಿನ್ಯಾಸಗೊಂಡಿದೆ.

ಶ್ರೇಷ್ಠತೆ, ಕನಿಷ್ಠತೆ ಮತ್ತು ಸಮಾನತೆ ಅಂಶಗಳ ಆಧಾರದ ಮೇಲೆ ಎಲ್ಲಾ ಸಮಾಜಗಳು ತಮ್ಮ ಸದಸ್ಯರನ್ನು ಶ್ರೇಣೀಕೃತ ರೀತಿಯಲ್ಲಿ ಇಟ್ಟಿರುತ್ತವೆ. ಜನರನ್ನು ಸ್ತರಗಳು ಅಥವಾ ಪದರಗಳಲ್ಲಿ ಅನುಗೊಳಿಸುವುದನ್ನೇ ಸ್ತರವಿನ್ಯಾಸ ಎಂದು ಕರೆಯಲಾಗಿದೆ. ಮೇಲಿನ ಸ್ತರದಲ್ಲಿರುವ ವ್ಯಕ್ತಿಗಳು ಕೆಳಗಿನ ಸ್ತರದ ವ್ಯಕ್ತಿಗಳಿಗಿಂತ ಹೆಚ್ಚಿನ ಅಧಿಕಾರ, ಸವಲತ್ತು ಹಾಗೂ ಪ್ರತಿಷ್ಠೆಗಳನ್ನು ಹೊಂದಿರುತ್ತಾರೆ.

ಎಲ್ಲಾ ಸಮಾಜಗಳು ಸದಸ್ಯರು ವಹಿಸುವ ಪಾತ್ರಗಳಿಗನುಗುಣವಾಗಿ ಅವರನ್ನು ವ್ಯತ್ಯಾಸಮಾಡುತ್ತವೆಯಲ್ಲದೆ ಭಿನ್ನವಾಗಿ ಪಾತ್ರಗಳನ್ನು ಮೌಲ್ಯೀಕರಿಸುತ್ತವೆ. ಕೆಲವು ಪಾತ್ರಗಳು ಇತರ ಪಾತ್ರಗಳಿಗಿಂತಲೂ ಸಾಮಾಜಿಕವಾಗಿ ಹೆಚ್ಚು ಮೌಲ್ಯವುಳ್ಳದ್ದು ಎಂದು ಪರಿಗಣಿತವಾಗಿದೆ. ಅತಿ ಹೆಚ್ಚು ಗಣ್ಯಪಾತ್ರಗಳನ್ನು ನಿರ್ವಹಿಸುವ ವ್ಯಕ್ತಿಗಳು ಅತೀ ಹೆಚ್ಚು ಗೌರವಾರ್ಹರಾಗಿರುತ್ತಾರೆ ಹೀಗೆ ಸ್ತರ ವಿನ್ಯಾಸವು ಸರಳವಾಗಿ ಇತರರಿಗಿಂತ ಮೇಲಿನ ಶ್ರೇಣಿಗೆ ಬರಲು ಯತ್ನಿಸುವ ಕೆಲವು ಜನರ ಭಿನ್ನತೆಯ ಅಂತರ್‌ಕ್ರಿಯೆ.

"ಸಾಮಾಜಿಕ ಸ್ತರವಿನ್ಯಾಸವು ಅಧಿಕಾರ, ಆಸ್ತಿ, ಸಾಮಾಜಿಕ ಮೌಲ್ಯೀಕರಣ ಮತ್ತು ಏಣಿ ಶ್ರೇಣಿಯನ್ನು ಒಳಗೊಂಡಿರುವ ಯಾವುದೇ ಸಾಮಾಜಿಕ ಸಮೂಹ ಅಥವಾ ಸಮಾಜದ ವ್ಯವಸ್ಥೆಯನ್ನು ಸೂಚಿಸುತ್ತದೆ".[೪]

ಸ್ತರವಿನ್ಯಾಸವು ಎಲ್ಲಾ ಸಮಾಜಗಳಲ್ಲಿ ಕಂಡುಬರುವ ಅಂತಸ್ತುಗಳನ್ನು ಶ್ರೇಣೀಕೃತಗೊಳಿಸುವ ಪ್ರಕ್ರಿಯೆಯಾಗಿದೆ. ಅಂತಸ್ತಿನ ಅಸಮಾನತೆಯು ಸಾಮಾಜಿಕ ಸ್ತರವಿನ್ಯಾಸದ ಒಂದು ವಿಶಿಷ್ಟ ಲಕ್ಷಣ. ಎಲ್ಲಿ ಸಾಮಾಜಿಕ ಸ್ತರವಿನ್ಯಾಸವಿದೆಯೋ ಅಲ್ಲಿ ಸಾಮಾಜಿಕ ಅಸಮಾನತೆಯೂ ಇರುತ್ತದೆ. ಹೆಚ್ಚು ಅಥವಾ ಕಡಿಮೆ ಅಂತಸ್ತುಗಳ ಏಣಿ ಶ್ರೇಣಿಯಲ್ಲಿ ವ್ಯಕ್ತಿಗಳು ಮತ್ತು ಸಮೂಹಗಳು ಶ್ರೇಣೀಕೃತಗೊಳ್ಳುತ್ತವೆ. ಪ್ರಕ್ರಿಯೆಯನ್ನು ಸ್ತರವಿನ್ಯಾಸ ಎಂದು ಕರೆಯಲಾಗಿದೆ.

ಸಮಾಜದಲ್ಲಿನ ಸದಸ್ಯರ ಪರಸ್ಪರ ಕ್ರಿಯೆಯಿಂದ ಸಾಮಾಜಿಕ ಸ್ತರವಿನ್ಯಾಸವು ಉದ್ಭವಿಸುತ್ತದೆ. ಸಮಾಜದಲ್ಲಿನ ಜನರು ಬಹು ದೀರ್ಘ ಕಾಲದವರೆಗೆ ಪರಸ್ಪರ ಒಡನಾಡುವುದರಿಂದ ಅವರು ಪರಸ್ಪರ ವ್ಯತ್ಯಾಸಗೊಂಡಿರುವ ಸಮೂಹಗಳು ಹಾಗೂ ವ್ಯಕ್ತಿಗಳನ್ನು ಹೋಲಿಸಿ ಶ್ರೇಣಿಗೊಳಿಸುವ ಪ್ರಯತ್ನ ಮಾಡುತ್ತಾರೆ. ಅವರ ಸಾಪೇಕ್ಷ ಅರ್ಹತೆಯ ನಿರ್ದಿಷ್ಟ ಮಾನದಂಡಗಳಿಗನುಗುಣವಾಗಿ ನಿರ್ಧರಿಸಲ್ಪಡುತ್ತದೆ. ಪಾತ್ರಗಳು ಭಿನ್ನಭಿನ್ನವಾಗಿ ವಿಕಾಸಗೊಳ್ಳುತ್ತವೆ, ವಿಧಿತವಾಗುತ್ತವೆ ಮತ್ತು ಮೌಲ್ಯಮಾಪಿತವಾಗುತ್ತವೆ.

ಕೆಲವು ಪಾತ್ರಗಳು ಇತರ ಪಾತ್ರಗಳಿಗಿಂತ ಹೆಚ್ಚಿನ ಗೌರವ ಹಾಗೂ ಸಾಮಾಜಿಕ ಮೌಲ್ಯಗಳೊಂದಿಗೆ ಹೆಚ್ಚು ಪ್ರಮುಖವಾದುದೆಂದು ಪರಿಗಣಿತವಾಗಿರುವವಲ್ಲದೆ ಈ ಪಾತ್ರಗಳನ್ನು ತುಂಬಿದ ವ್ಯಕ್ತಿಗಳು ಆ ಮೂಲಕ ಇತರೆ ಪಾತ್ರಗಳಿಗಿಂತ ಆದ್ಯತೆ, ಗೌರವ ಹಾಗೂ ಹೆಚ್ಚಿನ ಪ್ರತಿಫಲ ಪಡೆಯುತ್ತಾರೆ. ಈ ರೀತಿ ಶಾಶ್ವತಮಟ್ಟದಲ್ಲಿ ಶ್ರೇಣೀಕೃತವಾದ ಗುಂಪುಗಳನ್ನು ಸ್ತರೀಕೃತ ಗುಂಪುಗಳೆಂದು ಕರೆಯಬಹುದು. ಯಾವುದೇ ಸಮಾಜದಲ್ಲಿನ ಜನಸಮುದಾಯವು ಬಹುಸಂಖ್ಯೆಯ ಇಂತಹ ಗುಂಪುಗಳಾಗಿ ಶ್ರೇಣೀಕೃತಗೊಂಡಾಗ ಆ ಸಮಾಜ ಅತ್ಯಂತ ಸ್ತರೀಕೃತ ಸಮಾಜವಾಗಿ ರೂಪುಗೊಳ್ಳುತ್ತದೆ.

ಸ್ತರವಿನ್ಯಾಸವು ಸಾಮಾಜಿಕವಾದುದೇ ವಿನಃ ಜೈವಿಕ ಕಾರಣಗಳಿಂದ ಉಂಟಾಗಿರುವ ಅಸಮಾನತೆಯನ್ನು ಪ್ರತಿನಿಧಿಸುವುದಿಲ್ಲ. ಜೈವಿಕ ಗುಣಗಳು ಸಾಮಾಜಿಕ ಶ್ರೇಷ್ಠತೆ ಮತ್ತು ಕನಿಷ್ಠತೆಯನ್ನು ತಾವಾಗಿಯೇ ನಿರ್ಧರಿಸಲಾರವು. ಜೈವಿಕ ಗುಣಗಳು ಸಾಮಾಜಿಕ ಮಾನ್ಯತೆ ಮತ್ತು ಪ್ರಾಮುಖ್ಯತೆಯನ್ನು ಪಡೆದಾಗ ಸಾಮಾಜಿಕ ಸ್ಥಾನಮಾನಗಳನ್ನು ನಿಗದಿ ಪಡಿಸುವಾಗ ನಿರ್ಧಾರಕ ಅಂಶಗಳಾಗಬಲ್ಲವು. ಸಾಮಾಜಿಕ ಸ್ತರವಿನ್ಯಾಸವು ಸಾಮಾಜಿಕ ನಿಯಮಗಳಿಂದ ಮತ್ತು ಕಟ್ಟಳೆಗಳಿಂದ ನಿಬಂಧಿಸಲ್ಪಟ್ಟಿದೆ. ಅಡಚಣೆಯನ್ನೊಡ್ಡುವ ವಿವಿಧ ಅಂಶಗಳಿಂದಾಗಿ ಅಸ್ಥಿರವಾಗಬಹುದು ಮತ್ತು ಸಮಾಜದ ಇತರ ವ್ಯವಸ್ಥೆಗಳು ಅಂದರೆ ಕೌಟುಂಬಿಕ, ವೈವಾಹಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಮತ್ತು ಇತರೆ ಸಂಸ್ಥೆಗಳ ಜೊತೆ ನಿಕಟ ಸಂಬಂಧವನ್ನು ಹೊಂದಿರುತ್ತದೆ.

ಸಾಮಾಜಿಕ ಸ್ತರವಿನ್ಯಾಸದ ಇನ್ನೊಂದು ಆಧಾರ ಲಕ್ಷಣವೆಂದರೆ ಸರ್ವವ್ಯಾಪಕತೆ, ಸ್ತರವಿನ್ಯಾಸವಿಲ್ಲದಿರುವ ಸಮಾಜವನ್ನು ನಾವು ಕಾಣಲು ಸಾಧ್ಯತೆ ಇಲ್ಲ. ಇಂದಿನ ದಿನಗಳಲ್ಲಿ ಜಗತ್ತಿನಾದ್ಯಂತ ಆಹಾರ ಮತ್ತು ಸೇವೆಗಳ ವಿತರಣೆಯ ವಿಧಾನಗಳ ಬಗ್ಗೆ ಅತೃಪ್ತಿಯ ಅಭಿಪ್ರಾಯವಿರುವುದನ್ನು ಕಾಣಬಹುದು ಎಲ್ಲೆಡೆಯೂ ಇರುವ ಈ ಅತೃಪ್ತಿಯೇ ಈ ಸರ್ವವ್ಯಾಪಕತೆಗೂ ಒಂದು ನಿದರ್ಶನ. ಕೆಲವು ವ್ಯವಸ್ಥೆಗಳಲ್ಲಿ ಸ್ತರವಿನ್ಯಾಸಕ್ಕೆ ಆಧಾರ ವಯಸ್ಸು ಮತ್ತು ಲಿಂಗ ಆಗಿರುತ್ತದೆ. ಇದಲ್ಲದೆ ಬೇರೆ ಮಾನದಂಡಗಳಿರುವ ಸ್ತರವಿನ್ಯಾಸ ವ್ಯವಸ್ಥೆಯನ್ನು ಗುರ್ತಿಸುವುದು ಅಗತ್ಯ ಹಾಗೆಯೇ ಅಧಿಕಾರ, ಆಸ್ತಿ, ಪ್ರತಿಷ್ಠೆಗಳ ಅಸಮಾನತೆಗೆ ಮಾನ್ಯತೆ ನೀಡಿ ಸ್ತರವಿನ್ಯಾಸ ರೂಪುಗೊಂಡಿರುವುದರ ಸರ್ವವ್ಯಾಪಕತೆಯನ್ನು ಗುರುತಿಸುವುದು ಅಷ್ಟೇ ಅಗತ್ಯ.

ಸ್ತರವಿನ್ಯಾಸವು ತನ್ನದೇ ಆದ ಪರಿಣಾಮಗಳಿಗೆ ಕಾರಣವಾಗಿದೆ. ಸ್ತರವಿನ್ಯಾಸದ ಕಾರಣದಿಂದಾಗಿ ಮಾನವ ಜೀವನದಲ್ಲಿ ದುರ್ಲಭವಾದಂತಹ ವಸ್ತುಗಳು ಜನರಲ್ಲಿ ಅಸಮಾನವಾಗಿ ಹಂಚಲ್ಪಟ್ಟಿದೆ. ಸ್ತರವಿನ್ಯಾಸವು ಎರಡು ಮುಖ್ಯ ಪರಿಣಾಮಗಳಿಗೆ

ಕಾರಣವಾಗಿದೆ. 'ಜೀವನದ ಅವಕಾಶಗಳು' ಮತ್ತು 'ಜೀವನದ ಶೈಲಿಗಳು' ಜೀವನದ ಅವಕಾಶಗಳು ಎಂಬ ಕಲ್ಪನೆಯು ಶಿಶು ಮರ್ತ್ಯತೆ ಆಯುಸ್ಸು, ದೈಹಿಕ ಹಾಗೂ ಮಾನಸಿಕ ಆರೋಗ್ಯ, ಮಕ್ಕಳಿಲ್ಲದಿರುವಿಕೆ, ವೈವಾಹಿಕ ಸಂಘರ್ಷ, ದಾಂಪತ್ಯ ವಿರಸ ಮತ್ತು ವಿವಾಹ ವಿಚ್ಛೇದನ ಮೊದಲಾದ ಅಂಶಗಳನ್ನು ಒಳಗೊಂಡಿದೆ.

'ಜೀವನ ಶೈಲಿಗಳು' ಎಂಬ ಕಲ್ಪನೆಯು ವಸತಿಯ ರೀತಿ, ವಾಸಿಸುವ ಸ್ಥಳ, ಮನೋರಂಜನೆಯ ಸಾಧನಗಳು, ಓದುವ ಪುಸ್ತಕಗಳು, ತಂದೆ ಮಕ್ಕಳ ಸಂಬಂಧ ಮೊದಲಾದ ಅಂಶಗಳನ್ನು ಒಳಗೊಂಡಿದೆ. "ಜೀವನದ ಅವಕಾಶಗಳ ಮೇಲೆ ವ್ಯಕ್ತಿಯ ನಿಯಂತ್ರಣ ಕಡಿಮೆ ಇದ್ದು, ಅವ್ಯೈಯಕ್ತಿಕವಾಗಿ ನಿರ್ಧಾರವೆಂದರೆ, ಜೀವನದ ಶೈಲಿಗಳು ಆತನ ಅಭಿರುಚಿಗಳು ಮೌಲ್ಯಗಳು ಮೊದಲಾದವುಗಳನ್ನು ಅವಲಂಬಿಸಿವೆ".[೫]

'ಪ್ರಕೃತಿ ಪುರುಷ' ಮುಗ್ಧತೆಯ ಕಾರಣದಿಂದಾದ ತಪ್ಪಿಗೆ ಮದುವೆಯಾಗದೆ ಒಂದು ಹೆಣ್ಣು ಮಗುವಿನ ತಾಯಿಯಾಗುವುದು, ಆ ಮಗುವಿನ ಭವಿಷ್ಯಕ್ಕಾಗಿ ತನ್ನ ಯೌವ್ವನದ ಕಾಲವನ್ನು ವಿಧವೆಯಂತೆ ಸವೆಸುವ ಕಮಲ, ತನ್ನ ಮಗಳಿಗೆ ಉನ್ನತ ಶಿಕ್ಷಣ ನೀಡಿ ಕಾಲೇಜು ಉಪನ್ಯಾಸಕಿಯನ್ನಾಗಿ ಮಾಡುವಲ್ಲಿ ಯಶಸ್ಸು ಗಳಿಸುತ್ತಾಳೆ. ಮಧ್ಯವಯಸ್ಸಿನ ಕಾಲಕ್ಕೆ ಅವಳ ಬದುಕಿನಲ್ಲಿ ಪ್ರವೇಶ ಮಾಡುವ ಶಾಮಣ್ಣ, ಮಗಳ ಮನಸ್ಸು ಸಂಘರ್ಷಕ್ಕೆಡೆಯಾದರೂ ಅದನ್ನು ಸರಿಯಾಗಿ ನಿಭಾಯಿಸುವುದು, ಮಗಳು ತನ್ನ ಮನೋಭಾವಕ್ಕೆ ಜೀವನ ಸಂದರ್ಭಕ್ಕೆ ಪ್ರೇಮಿಸಿದ ರವೀಂದ್ರನನ್ನು ಬಿಟ್ಟು ಪೋಷಿಸುವ ಗುಣವುಳ್ಳ ಪ್ರೊಫೆಸರ್‌ರನ್ನು ಜೀವನ ಸಂಗಾತಿಯನ್ನಾಗಿ ಮಾಡಿಕೊಳ್ಳುವುದು. ಹೀಗೆ ಆರ್ಯಾಂಬರವರ ಸಾಮಾಜಿಕ ವ್ಯವಸ್ಥೆಯ ಪರ ವಿರೋಧ ಎರಡನ್ನೂ ಅಚ್ಚುಕಟ್ಟಾಗಿ ಸಾಧಿಸಿದ್ದಾರೆ.

ಮದುವೆ ಎನ್ನುವ ವ್ಯವಸ್ಥೆಯೇ ಜೀವನದಲ್ಲಿ ಮುಖ್ಯ ಗುರಿ ಎಂಬುದನ್ನು ಪಕ್ಕಕ್ಕೆ ಸರಿಸಿ, ಶಿಕ್ಷಕಿಯಾಗಿ ಸಮಾಜ ಸೇವಕಿಯಾಗಿ, ಸಾರ್ವಜನಿಕ ಸೇವೆಯಲ್ಲೇ ತನ್ನ ಬದುಕಿನ ಅರ್ಥಪೂರ್ಣತೆಯನ್ನು ಕಂಡುಕೊಳ್ಳುವ 'ಬಂಡಾಯ'ದ ನಾಯಕಿ, ಸ್ತ್ರೀ ಬದುಕಿನ ಸಮಸ್ಯೆಯನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಗುರುತಿಸುವ ನಾಯಕಿ. ಸ್ತ್ರೀ ಸ್ವಾತಂತ್ರ್ಯ, ಸಮಾನತೆ ಸ್ವಾಭಿಮಾನದ ಪ್ರಶ್ನೆಗಳಿಗೆ ಉತ್ತರವಾಗುವಳು.

'ಸಂಬಂಧಗಳು' ಕಾದಂಬರಿಯ ನಾಯಕಿ ಭವಾನಿ ವ್ಯವಸ್ಥೆಯ ಪರವಾಗಿ ನಿಲ್ಲುವ ಶಕ್ತಿಯನ್ನು ಕಳೆದುಕೊಂಡರು, ವ್ಯವಸ್ಥೆಯ ವೈರುಧ್ಯದಲ್ಲಿ 'ಜೀವನ' ಎಂಬ ಮೂರಕ್ಷರವಾದರೂ ಅದು ಮೂರು ಲೋಕವನ್ನು ವ್ಯಾಪಿಸುವ ಶಕ್ತಿ ಹೊಂದಿದೆ ಎಂಬುದು ಭವಾನಿಯ ಹೃದಯವನ್ನು ತಟ್ಟಿ ಪತಿಯ ಗೆಳೆಯನ ಆಹ್ವಾನವನ್ನು ಮನ್ನಿಸುವ ಮೂಲಕ ತನ್ನ ಬದುಕಿನ ಮತ್ತೊಂದು ಘಟ್ಟವನ್ನು ಪ್ರವೇಶಿಸುವುದು.

'ಕಸ್ತೂರಿ' ಕಾದಂಬರಿಯಲ್ಲಿ ನಾಯಕಿ ಕಸ್ತೂರಿಯ ಅಣ್ಣಂದಿರು ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಸಲುವಾಗಿ ತಂಗಿಯನ್ನು ಇಷ್ಟವಿಲ್ಲದ ಮದುವೆಗೆ ಬಲವಂತ ಮಾಡುತ್ತಾರೆ. ತಂಗಿ ಇನ್ನೊಬ್ಬನನ್ನು ಇಷ್ಟಪಟ್ಟಿರುವ ವಿಚಾರ ಗೊತ್ತಿದ್ದರೂ ತಮ್ಮ ಬೇಳೆಕಾಳು ಬೇಯಿಸಿಕೊಳ್ಳಲು ಕಸ್ತೂರಿಯನ್ನು ಬಳಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ 'ನೀವೆಲ್ಲಾ ಸ್ವಾರ್ಥಿಗಳು' ನಿಮಗೆ ಹಣಕೊಡಿಸುವ ಸಲುವಾಗಿ ಬೇಡದವನ ಕೈಯಿಂದ ನಾನು ತಾಳಿ ಕಟ್ಟಿಸಿಕೊಳ್ಳಲೇ? ನಾನು ಹೆಂಗಸಾಗಿರಬಹುದು ಆದರೆ ನಾನು ಕೆಲಸಕ್ಕೆ ಬಾರದವಳಲ್ಲ... ನನ್ನ ದೇಹದಲ್ಲಿ ಶಕ್ತಿಯಿದೆ. ನಾನು ಆತ್ಮಾಭಿಮಾನವುಳ್ಳ, ಚೈತನ್ಯವುಳ್ಳ ಹೆಂಗಸು, ದುಡಿದು ಸಂಪಾದಿಸುವ ಶಕ್ತಿ ನನಗಿದೆ. ಯಾರಿಗೂ ನಾನು ಹೆದರಬೇಕಾಗಿಲ್ಲ. ಗತಿಯಿಲ್ಲದೆ ಯಾರೊಬ್ಬರ ಆಶ್ರಯಕ್ಕೂ ನಾನು ಹೋಗಿ ಬೀಳಬೇಕಾಗಿಲ್ಲ. ಈ ಬಲವಂತ, ಒತ್ತಾಯ ನಾನು ಸಹಿಸಲಾರೆ. ದಯವಿಟ್ಟು ನನ್ನನ್ನು ಯಾರೂ ಮದುವೆಯಾಗೆಂದು ಬಲವಂತ ಮಾಡಬೇಡಿ ಎಂಬಲ್ಲಿ ಆಕೆಯ ಪ್ರತಿಭಟನೆಯ ಸ್ಥೈರ್ಯ ಎದ್ದು ಕಾಣುತ್ತದೆ.

'ಅಸಂಗತ' ಕಾದಂಬರಿಯ ನಾಯಕಿ ರತ್ನ ಮದುವೆಯಾಗದೆ ಜೊತೆಯಲ್ಲಿರುವುದು ಸರಿಯೆನ್ನಿಸಿದರೂ ಸಮಾಜವನ್ನು ಬಿಟ್ಟು ಹೊರಗೆ ಬದುಕಲು ಸಾಧ್ಯವಿಲ್ಲ ಎಂಬುದನ್ನು ಮನಗಂಡು ಬೇರೆ ಬೇರೆ ವಾಸ ಮಾಡುವುದು. ಅಂದರೆ ನಾವು ಬದುಕಿದರೂ ಸಮಾಜದಲ್ಲೇ, ಸತ್ತರೂ ಸಮಾಜದಲ್ಲೇ ಎನ್ನುವ ಅವಳ ಮುಂದಾಲೋಚನೆ.

ತ್ರಿವೇಣಿಯವರು ಚಿತ್ರಿಸಿರುವ 'ಕೀಲುಗೊಂಬೆ' ಕಾದಂಬರಿಯ ಸೀತಾ ವ್ಯವಸ್ಥೆಯನ್ನು ವಿರೋಧಿಸಲಾಗದೆ ದುರಂತಕ್ಕೀಡಾಗುವ ಸಂದರ್ಭ. ಪಾರಂಪರಿಕ ವಿವಾಹದ ಚೌಕಟ್ಟಿನಲ್ಲಿ ಅಡಗಿರುವ ಅಸೀಮ ಕ್ರೌರ್ಯಕ್ಕೆ ಬಲಿಯಾಗುವಳು. ಸ್ತ್ರೀಯರ ಇಂತಹ ಹೀನಸ್ಥಿತಿಗೆ ಮುಖ್ಯ ಕಾರಣವೆಂದರೆ ನಮ್ಮ ಸಮಾಜದಲ್ಲಿ ಹೆಂಗಸಿಗೊಂದು ನ್ಯಾಯ, ಗಂಡಸಿಗೆ ಮತ್ತೊಂದು ನ್ಯಾಯವಿರುವುದು. ಗಂಡಸರ ವಿವಾಹೇತರ ಅನೈತಿಕ ವ್ಯವಹಾರಗಳು ದುರ್ಲಕ್ಷಿಸಲ್ಪಟ್ಟರೆ, ಪ್ರಕೃತಿಯೇ ಅಂತಹ ದುರ್ವ್ಯವಹಾರಗಳಿಗೆ ಹೆಂಗಸನ್ನು ಜವಾಬ್ದಾರಳನ್ನಾಗಿಸುತ್ತದೆ.

ಕಾದಂಬರಿಗಾರ್ತಿ ಅಭಿಪ್ರಾಯ ಚಿಕ್ಕ ವಯಸ್ಸಿನಲ್ಲಿ ಗಂಡ ಸತ್ತರೆ ಮದುವೆ ಮಡ್ಕೋಬಾರ್ದು ಹೆಣ್ಣು ಅಂತ ಕಾನೂನು ಮಾಡಿರುವ ಸಮಾಜದ ತಪ್ಪು. ಆ ಸಮಾಜವನ್ನು ಎದುರಿಸಿ ಅನಾಥೆಯನ್ನು ಸೌಭಾಗ್ಯವತಿಯನ್ನಾಗಿ ಮಾಡಲು ಹಿಂಜರಿಯುವ ಹೇಡಿ ಗಂಡಸಿನ ತಪ್ಪು. ಗಂಡಸು ಇನ್ನು ಮೃಗವಾಗಿಯೇ ಇದ್ದಾನೆ ಎನ್ನುವುದಕ್ಕೆ ಸಾಕ್ಷಿ ಎಂಬುದಾಗಿದೆ.

ತನ್ನ ಬಾಳ ಸಂಗಾತಿಯನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿಲ್ಲದೆ ಇತರರ ನಿರ್ಬಂಧಕ್ಕೊಳಗಾಗಿ ತನಗಿಷ್ಟವಿಲ್ಲದವರನ್ನು ಮದುವೆಯಾಗುವ ವ್ಯವಸ್ಥೆಯೊಂದಿಗೆ ನಿಂತು ಸ್ಪಂದಿಸಲಾರದೆ ವೈರುಧ್ಯವಾಗಿ ನಿಲ್ಲುವ ಸ್ತ್ರೀಯನ್ನು 'ಅಪಸ್ವರ' 'ಅಪಜಯ' ಕಾದಂಬರಿಗಳು ಚಿತ್ರಿಸುತ್ತವೆ.

ತನ್ನ ಕೆಲಸವಾಗುವವರೆಗೆ ಗಂಡಸು ಹೆಣ್ಣಿಗೆ ವ್ಯವಸ್ಥೆಗೆ ದಾಸ. ಆನಂತರ ತನಗೂ ಹೆಣ್ಣಿಗೂ ಏನೇನೂ ಸಂಬಂಧವಿಲ್ಲದಂತೆ ವರ್ತಿಸುತ್ತಾನೆ. ಗಂಡಸರು ಬೆಂಕಿಯ ಹಾಗೆ ಅವರನ್ನು ಮುಟ್ಟಿದರೆ ನಮ್ಮ ಕೈ ಸುಡುತ್ತದೆ. ಸುಟ್ಟ ಗಾಯದ ಕಲೆ ಸಾಯುವವರೆಗೂ ಮಾಸುವುದಿಲ್ಲ ಎಂದು ತಿಳಿಸುವ 'ಮೊದಲ ಹೆಜ್ಜೆ' ಕಾದಂಬರಿ.

'ಕಂಕಣ' ಎಂಬುದರಲ್ಲಿ ಸಂಕ್ರಮಣ ಕಾಲದ ಈ ಸಮಾಜದ ಮೌಲ್ಯಗಳನ್ನು ಪರೀಕ್ಷಿಸುವ ಮಾನದಂಡನೆ ವಿವಾಹವೆಂಬ ಸಾಮಾಜಿಕ ಸಂಸ್ಥೆಯ ಸುತ್ತ ತಿರುಗುವ ಚಕ್ರಗಳಂತೆ ಕಂಡುಬರುವ ಆರು ಜನ ಹತಭಾಗಿನಿಯರ ಪರಿಸ್ಥಿತಿ. ವ್ಯವಸ್ಥೆಯನ್ನು ವಿರೋಧಿಸಲೂ ಆಗದೆ ವ್ಯವಸ್ಥೆಗೆ ಸಿಲುಕಲಾರದೆ ತೊಳಲಾಡುವ ಒಂದು ಸಂದಿಗ್ಧತೆ, ಇದರ ಮುಂದುವರೆದ ಭಾಗವೇ ಎಂಬಂತೆ ಈ ಹತಭಾಗಿನಿಯರ ಜೀವನ ಹೋರಾಟಕ್ಕೆ 'ಮುಕ್ತಿ' ಕೊಡಿಸಲು ಹೊರಟ ಲೇಖಕಿ ವ್ಯವಸ್ಥೆಯ ಸ್ಥಿತ್ಯಂತರಗಳನ್ನು ಸ್ವೀಕರಿಸುವ ಮನೋಭಾವ.

ಮಾನವನು ಹುಟ್ಟುವಾಗ ಸ್ವತಂತ್ರ. ಆದರೆ ಆತನು ಎಲ್ಲೆಡೆಯಲ್ಲಿಯೂ ಸಂಕೋಲೆಗಳಲ್ಲಿಯೇ ಇರುತ್ತಾನೆ. ನಿಜ, ಪ್ರಪಂಚದ ಯಾವುದೇ ಸಮಾಜದಲ್ಲಿಯೂ ಮಾನವನು ಸಂಪೂರ್ಣವಾಗಿ ಸ್ವತಂತ್ರನಾಗಿಲ್ಲ. ನಿರ್ಬಂಧಗಳ ಹೊರತಾಗಿ ಸಮೂಹ ಜೀವನ ನಡೆಸುವುದು ಸಾಧ್ಯವಾಗದ ಮಾತು. ತನ್ನ ಹಾಗೂ ತನ್ನ ಸಮಾಜದ ಹಿತದೃಷ್ಟಿಯಿಂದ ತಾನು ನಿಯಮ ನಿರ್ಬಂಧಗಳಿಗೆ ಒಳಪಡುವುದು ಅಗತ್ಯವೆಂದು ಮಾನವ ತನ್ನ ಅನುಭವದಿಂದ ಕಂಡುಕೊಂಡಿದ್ದಾನೆ. ವೈಯಕ್ತಿಕ ಹಿತಸಾಧನೆಯೇ ಸಮೂಹ ಜೀವನದ ಗುರಿಯಾಗಿದ್ದರೂ, ಅದು ಸಾಧ್ಯವಾಗುವುದು ವ್ಯಕ್ತಿಗಳು ಸಮೂಹದ ಕಟ್ಟುಪಾಡುಗಳಿಗೆ ಒಳಪಟ್ಟಾಗ ಮಾತ್ರ. ತಾನು ಸ್ವಚ್ಛಂದವಾಗಿ ವರ್ತಿಸದೇ ಇರುವಂತೆ ತನ್ನ ನಡವಳಿಕೆಯ ಮೇಲೆ ಹತೋಟಿಯನ್ನಿಟ್ಟುಕೊಳ್ಳಲು ಮಾನವನು ಸಮಾಜಕ್ಕೆ ಅಧಿಕಾರ ನೀಡಿದ್ದಾನೆ. ತನ್ನ ಸ್ವಸಂರಕ್ಷಣಾಪೇಕ್ಷೆಯಿಂದಲೇ ಆತ ಸಮಾಜಕ್ಕೆ ವಿಧೇಯತೆಯಿಂದಿರಲು ಕಲಿತುಕೊಂಡಿದ್ದಾನೆ. "ವ್ಯಷ್ಠಿ ಹಾಗೂ ಸಮಷ್ಠಿಯ ಹಿತದ ದೃಷ್ಟಿಯಿಂದ ಸಮಾಜವು ವ್ಯಕ್ತಿಗಳ ನಡವಳಿಕೆಯನ್ನು ನಿಯಂತ್ರಿಸುವ ಪ್ರಕ್ರಿಯೆಯನ್ನು 'ಸಾಮಾಜಿಕ ನಿಯಂತ್ರಣ' ಎಂದೆನ್ನಬಹುದು".[೬]

ಮಾನವ ಸಮಾಜವು ನಿರಂತರವಾಗಿ ಮುಂದುವರಿಯ ಬೇಕಾದರೆ ಮತ್ತು ಸುಗಮವಾಗಿ ಕಾರ್ಯವೆಸಗಬೇಕಾದರೆ ಸಮಾಜದಲ್ಲಿ ಏಕತೆ, ಐಕ್ಯಭಾವ ಮತ್ತು ಕ್ರಮಬದ್ಧವಾದ ವ್ಯವಸ್ಥೆಯಿರಬೇಕಾದುದು ಅತ್ಯಗತ್ಯ. ಸಮಾಜ ಸ್ಥಾಪಿತ ನಿಯಮಗಳಿಗೆ ಅನುಸಾರವಾಗಿ ಎಲ್ಲರೂ ನಡೆದುಕೊಳ್ಳುವುದರಿಂದ ಸಮಾಜದಲ್ಲಿ ಸ್ಥಿರತೆ ಮತ್ತು ಐಕ್ಯಮತ್ಯ ನಡೆಸಲು ಸಾಧ್ಯ. ಸ್ವಾರ್ಥ ಸಾಧಕ ಬಯಕೆಗಳಿಗಿಂತಲೂ ಸಾಮಾಜಿಕ ನಿಯಮಗಳಿಗೆ ಬದ್ಧವಾಗಿ ನಡೆದುಕೊಳ್ಳುವುದು ಮುಖ್ಯ. ಹಾಗೆಯೇ ವ್ಯಕ್ತಿಗತ ಸಂತೃಪ್ತಿಗಿಂತಲೂ ಸಮೂಹದ ಅಥವಾ ಸಮಾಜದ ಏಳಿಗೆ ಹಾಗೂ ಕಲ್ಯಾಣ ಪ್ರಧಾನವಾದುದು.

ವ್ಯಕ್ತಿಯು ತಾನಾಗಿಯೇ ಇದನ್ನು ಸಾಧಿಸಲಾರ. ಆದ್ದರಿಂದಲೇ ಸಮಾಜವು ವ್ಯಕ್ತಿಗಳ ಮೇಲೆ ತನ್ನ ವರ್ಚಸ್ಸನ್ನು ಬೀರುತ್ತಾ ಮತ್ತು ನಿಯಂತ್ರಣವನ್ನು ಸಾಧಿಸುತ್ತಾ ಅವರನ್ನು ಸಾಮಾಜಿಕ ಹಿತಕ್ಕೆ ಬದ್ಧರನ್ನಾಗಿಸುತ್ತದೆ. ಹೀಗೆ ಸಮೂಹ ಅಥವಾ ಸಮಾಜವು ವ್ಯಕ್ತಿ ಅಥವಾ ವ್ಯಕ್ತಿಗಳ ಮೇಲೆ ಹೊಂದಿರುವ ನಿಯಂತ್ರಣವನ್ನು ಸಮೂಹಸಮ್ಮತ ನಡವಳಿಕೆಗೆ ಅನುಸಾರವಾಗಿ ವರ್ತಿಸುವಂತೆ ಕಟ್ಟುಪಾಡುಗಳಿಗೊಳಪಡಿಸುವ ಸಮಾಜದ ಪ್ರಯತ್ನವನ್ನು ಸಾಮಾಜಿಕ ನಿಯಂತ್ರಣ ಎನ್ನಬಹುದು.

ಸಮಾಜದ ಅಸ್ತಿತ್ವಕ್ಕೆ ಸಾಮಾಜಿಕ ಐಕ್ಯತೆಯು ಅತ್ಯವಶ್ಯಕ. ಯಾವುದೇ ಇಬ್ಬರು ವ್ಯಕ್ತಿಗಳು ಸ್ವಭಾವ, ವಿಚಾರಧೋರಣೆ ಅಥವಾ ಆಸಕ್ತಿಗಳಲ್ಲಿ ಒಂದೇ ರೀತಿಯಾಗಿರುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಅವನದೇ ಆದ ವ್ಯಕ್ತಿತ್ವ ಇರುತ್ತದೆ. ವ್ಯಕ್ತಿಗಳ ನಡುವೆ ಸಾಂಸ್ಕೃತಿಕ ಭಿನ್ನತೆಗಳಿರುತ್ತವೆ. ಕೆಲವರು ಉಗ್ರಹಾರಾಧನೆ ಮಾಡುತ್ತಾರೆ. ಕೆಲವರು ಮಾಡುವುದಿಲ್ಲ. ಕೆಲವರು ಮಾಂಸಾಹಾರಿಗಳಾದರೆ, ಇತರರು ಸಸ್ಯಾಹಾರಿಗಳಾಗಿರುತ್ತಾರೆ. ಕೆಲವರು ಸಂಪ್ರದಾಯಶೀಲರಾಗಿದ್ದರೆ, ಇತರರು ಆಧುನಿಕರಾಗಿರುತ್ತಾರೆ. ಕೆಲವರು ಫ್ಯಾಷನ್ ಶೀಲರಾದರೆ ಕೆಲವರು ಸರಳವಾಗಿರುತ್ತಾರೆ. ನಿಜವಾಗಿ ನೋಡುವುದಾದರೆ ಸಮಾಜ ಎನ್ನುವುದು ವೈವಿಧ್ಯಮಯ ಸಂಘಟನೆ. ಒಂದು ವೇಳೆ ಪ್ರತಿಯೊಬ್ಬ ವ್ಯಕ್ತಿಗೂ ಅವನದೆ ಆದ ರೀತಿಯಲ್ಲಿ ವರ್ತಿಸಲು ಅನಿರ್ಬಂಧಿತ ಸ್ವಾತಂತ್ರ್ಯವನ್ನು ನೀಡಿದರೆ ಸಮಾಜದಲ್ಲಿ ಅವ್ಯವಸ್ಥೆ ಸೃಷ್ಟಿಯಾಗುತ್ತದೆ. ಸುವ್ಯವಸ್ಥಿತವಾದ ಸಾಮಾಜಿಕ ಜೀವನಕ್ಕೆ ಸಾಮಾಜಿಕ ನಿಯಂತ್ರಣ ಅವಶ್ಯಕ.

ಪ್ರತಿಯೊಂದು ಸಮಾಜ ಅಥವಾ ಗುಂಪಿಗೆ ಸಾಮಾಜಿಕ ವ್ಯವಸ್ಥೆಯನ್ನು ಪಾಲಿಸುವುದು ಅತ್ಯಂತ ಅಗತ್ಯ. ಸಮಾಜದ ಸದಸ್ಯರು ಆ ಸಾಮಾಜಿಕ ವ್ಯವಸ್ಥೆಗೆ ಅನುಗುಣವಾಗಿ ನಡೆದುಕೊಂಡಾಗ ಮಾತ್ರ ಇದು ಸಾಧ್ಯವಾಗುವುದು. ಸಾಮಾಜಿಕ ನಿಯಂತ್ರಣದ ಮುಖ್ಯವಾದ ಧ್ಯೇಯಗಳಲ್ಲಿ ಒಂದೆಂದರೆ ಪುರಾತನ ವ್ಯವಸ್ಥೆಯನ್ನು ಪಾಲಿಸುವುದು. ಈ ಧ್ಯೇಯವನ್ನು ಪೂರೈಸುವುದಕ್ಕೆ ಕುಟುಂಬ ನೆರವಾಗುತ್ತದೆ. ಕುಟುಂಬದಲ್ಲಿನ ಹಿರಿಯ ವ್ಯಕ್ತಿಗಳು ತಮ್ಮ ವಿಚಾರಗಳನ್ನು ಮಕ್ಕಳ ತಲೆಗೆ ತುಂಬುತ್ತಾರೆ.

ಮತೀಯ ಮತ್ತು ಇತರ ವಿಚಾರಗಳಲ್ಲಿಯೂ ಕುಟುಂಬದ ವಯಸ್ಸಾದ ತಂದೆ, ತಾಯಂದಿರು ಇತರ ಸದಸ್ಯರ ವರ್ತನೆಗಳ ಮೇಲೆ ಪ್ರಭಾವ ಬೀರುತ್ತಾರೆ. ಬದಲಾಗುತ್ತಿರುವ ಸಮಾಜದಲ್ಲಿ ಹಳೆಯ ವ್ಯವಸ್ಥೆಯನ್ನು ಜಾರಿಯಲ್ಲಿಡುವುದು ಸಾಮಾಜಿಕ ಪ್ರಗತಿಗೆ ಧಕ್ಕೆ ತರುತ್ತದೆನಿಸಿದರೂ ಸಮಾಜದ ಮುಂದುವರಿಕೆಗೆ ಹಾಗೂ ಏಕರೂಪತೆಯನ್ನು ಪಾಲಿಸಲು ಇದು ಅಗತ್ಯವಾಗಿದೆ. ತ್ರಿವೇಣಿಯವರ 'ಕಂಕಣ'ದ ಅಮೃತಾಳನ್ನು ಅವರ ತಾಯಿ ನಿಯಂತ್ರಿಸುವುದು ಆರ್ಯಾಂಬರ 'ದೇವಮಾನವ'ದ ಸೀತಾ ತನ್ನ ಮಗಳನ್ನು ನಿಯಂತ್ರಿಸುವುದು.

ಸಾಮಾಜಿಕ ನಿಯಂತ್ರಣವಿಲ್ಲದಿದ್ದರೆ ಸಾಮಾಜಿಕ ಐಕ್ಯತೆ ಎನ್ನುವುದು ಕೇವಲ ಕನಸಾಗುತ್ತದೆ. ಸಂಸ್ಥಾಪಿತವಾದ ರೂಢಿಗಳಿಗೆ ಅನುಗುಣವಾಗಿ ವರ್ತನೆಯನ್ನು ನಿಯಂತ್ರಿಸುವುದು ಸಾಮಾಜಿಕ ನಿಯಂತ್ರಣ. ಇದರಿಂದ ವರ್ತನೆಗಳಲ್ಲಿ ಏಕರೂಪತೆ ಮೂಡಿ ಈ ಮೂಲಕ ವ್ಯಕ್ತಿಗಳ ನಡುವೆ ಏಕತೆ ಉಂಟಾಗುತ್ತದೆ. ಕುಟುಂಬದ ಸದಸ್ಯರು ಕುಟುಂಬದ ನಿಯಮಗಳಿಗೆ ಅನುಗುಣವಾಗಿ ಒಂದೇ ರೀತಿಯಲ್ಲಿ ವರ್ತಿಸುವುದರ ಕಾರಣದಿಂದ ಕುಟುಂಬ ತನ್ನ ಏಕತೆಯನ್ನು ಉಳಿಸಿಕೊಂಡಿರುತ್ತದೆ. 'ಹಣ್ಣೆಲೆ ಚಿಗುರಿದಾಗ' ದಲ್ಲಿನ ರಾಯರ ಕುಟುಂಬ 'ಪರಂಪರೆ'ಯ ವಿಶ್ವನಾಥಯ್ಯರ ಕುಟುಂಬ.

ಯಾವುದೇ ಇಬ್ಬರು ವ್ಯಕ್ತಿಗಳು ತಮ್ಮ ಧೋರಣೆ ವಿಚಾರ. ಆಸಕ್ತಿ ಹಾಗೂ ಹವ್ಯಾಸಗಳಲ್ಲಿ ಒಂದೇ ರೀತಿಯವರಾಗಿರುವುದಿಲ್ಲ. ಒಂದೇ ತಾಯಿಯ ಮಕ್ಕಳು ಒಂದೇ ರೀತಿಯ ಧೋರಣೆ, ಹವ್ಯಾಸ ಮತ್ತು ಆಸಕ್ತಿಯುಳ್ಳವರಾಗಿರುವುದಿಲ್ಲ. ಮಾನವರು ಸಾಮಾನ್ಯವಾಗಿ ಬೇರೆ ಬೇರೆ ಧರ್ಮಗಳಲ್ಲಿ ನಂಬಿಕೆಯಿಟ್ಟಿರುತ್ತಾರೆ. ಬೇರೆ ಬೇರೆ ಉಡುಗೆಗಳನ್ನು ಧರಿಸುತ್ತಾರೆ. ಆಹಾರ ಪದ್ಧತಿಗಳು ಅನೇಕ ರೀತಿಯಲ್ಲಿವೆ. ವಿವಾಹ, ಸಂಪ್ರದಾಯಗಳು ಬೇರೆ ಬೇರೆಯಾಗಿರುತ್ತದೆ. ಜನರು ಬೇರೆ ಬೇರೆ ವೈಚಾರಿಕ ಕಲ್ಪನೆಗಳನ್ನು ಹೊಂದಿರುವವರಾಗುತ್ತಾರೆ. ಹೀಗೆ ಜೀವನದ ರೀತಿಗಳು ಹಲವಾರು ವೈವಿಧ್ಯಗಳಿಂದ ಕೂಡಿರುತ್ತದೆ. ಹಾಗಾಗಿ ಬೇರೆ ಬೇರೆ ವಿಚಾರಗಳುಳ್ಳವರ ನಡುವೆ ಯಾವುದೇ ಗಳಿಗೆಯಲ್ಲಾದರೂ ಘರ್ಷಣೆ ಉಂಟಾಗುವ ಸಾಧ್ಯತೆ ಇದೆ.

ಇಂದಿನ ಆಧುನಿಕ ಪರಿಸ್ಥಿತಿಯಲ್ಲಿ ಈ ಸಂಭಾವ್ಯತೆ ಇನ್ನೂ ಅಧಿಕಗೊಳ್ಳುತ್ತಿದೆ. ಏಕೆಂದರೆ ಮಾನವ ಹೆಚ್ಚು ಹೆಚ್ಚು ಸ್ವಾರ್ಥಿಯಾಗುತ್ತಿದ್ದಾನೆ. ಆದ್ದರಿಂದ ಸಾಮಾಜಿಕ ಹಿತಾಸಕ್ತಿಯನ್ನು ರಕ್ಷಿಸಲು ಮತ್ತು ಸಮುದಾಯದ ಅಗತ್ಯವನ್ನು ಪೂರೈಸಲು ಸಾಮಾಜಿಕ ನಿಯಂತ್ರಣ ಅವಶ್ಯಕವಾಗಿದೆ. ಸಾಮಾಜಿಕ ನಿಯಂತ್ರಣ ಇಲ್ಲದಿದ್ದರೆ, ಪ್ರತಿಯೊಬ್ಬ ವ್ಯಕ್ತಿಯನ್ನು ಸ್ವಚ್ಛಂದವಾಗಿ ಬಿಟ್ಟರೆ ಸಮಾಜವು ಕಾಡುಪ್ರಾಣಿಗಳಿರುವ ಅರಣ್ಯವಾಗುತ್ತದೆ. ಕಂಕಣದ ರಮಾಳ ತಂಗಿ ಜಾನಕಿ 'ಸವತಿಯ ನೆರಳು' ದಲ್ಲಿನ ಇಂದಿರಾ. 'ಕಪ್ಪು ಬಿಳುಪು'ದಲ್ಲಿನ ಚಂದ್ರ.

ವರ್ತನೆಯ ಸಾಮಾಜಿಕ ರೀತಿ ನೀತಿಗಳಿಗೆ ತಕ್ಕಂತೆ ಸಾಮಾಜಿಕ ಸ್ಥಿರತೆಯನ್ನು ಸಾಮಾಜಿಕ ನಿಯಂತ್ರಣ ತರುತ್ತದೆ. ಸಮಾಜದಲ್ಲಿ ಅಸಂಖ್ಯಾತವಾದ ಜನಪದ ರೀತಿಗಳು, ಮಾರ್ಗಗಳು, ವಾಡಿಕೆಗಳು ಇವೆ. ಪ್ರತಿಯೊಬ್ಬ ವ್ಯಕ್ತಿಯು ಅವುಗಳನ್ನು ಅನುಸರಿಸಬೇಕು. ಯಾವುದೇ ವ್ಯಕ್ತಿ ಸಾಮಾಜಿಕ ನಿಯಮಗಳನ್ನು ಉಲ್ಲಂಘಿಸಲು ಯತ್ನಿಸಿದರೆ ಸಾಮಾಜಿಕ

ನಿಯಂತ್ರಣದ ಮೂಲಕ ಅವುಗಳನ್ನು ಪಾಲಿಸುವಂತೆ ಬಲಾತ್ಕರಿಸಲಾಗುತ್ತದೆ. ಹೀಗೆ ಸಮಾಜಿಕ ನಿಯಂತ್ರಣ ಸಾಮಾಜಿಕ ನಿಯಮಗಳನ್ನು ಸ್ಥಿರೀಕರಿಸುತ್ತದೆ. 'ಕಂಕಣ'ದ ಸುಶೀಲ 'ಸವತಿಯ ನೆರಳು'ದಲ್ಲಿನ ಇಂದಿರಾ.

ಸಮಾಜದಲ್ಲಿ ಬದಲಾವಣೆ ನಿರಂತರವಾದುದು. ಸಮಾಜದಲ್ಲಿ ಹೊಸ ತತ್ವಗಳು ಸತತವಾಗಿ ಉಂಟಾಗುತ್ತಲೆ ಇರುತ್ತವೆ. ಸಮಾಜದಲ್ಲಿ ಅಗುವ ಬದಲಾವಣೆಗಳಿಗೆ ಅನುಗುಣವಾಗಿ ವ್ಯಕ್ತಿ ತನ್ನ ವರ್ತನೆಯನ್ನು ಹೊಂದಿಸಿಕೊಳ್ಳಬೇಕು. ಆದರೆ ಹೊಸ ಪರಿಸ್ಥಿತಿಗಳಿಗೆ ಎಲ್ಲಾ ವ್ಯಕ್ತಿಗಳು ಹೊಂದಿಕೊಳ್ಳಲಾಗುವುದಿಲ್ಲ. ಕೆಲವರು ಪ್ರಗತಿಶೀಲರಾಗಿರುತ್ತಾರೆ. ಉಳಿದವರು ಹಳೆಯ ಸಂಪ್ರದಾಯಶೀಲರೇ ಆಗಿರುತ್ತಾರೆ.

ಒಬ್ಬ ವ್ಯಕ್ತಿ ಹಳ್ಳಿಯಿಂದ ನಗರಕ್ಕೆ ವಲಸೆ ಬಂದಾಗ ಅವನಿಗೆ ಹೊಸ ಬಗೆಯ ಸಾಂಸ್ಕೃತಿಕ ಸನ್ನಿವೇಶ ಎದುರಾಗುತ್ತದೆ. ಆಗ ಹೊಸ ಸಾಂಸ್ಕೃತಿಕ ವಾತಾವರಣಕ್ಕೆ ಅವನು ತಪ್ಪಾಗಿ ಹೊಂದಿಕೊಳ್ಳುವ ಸಾಧ್ಯತೆ ಇರುತ್ತದೆ. ಅವನು ಸ್ವ ನಿಗ್ರಹ ಕಳೆದುಕೊಂಡು ಚಟಗಳಿಗೆ ದಾಸನಾಗುತ್ತಾನೆ. ಈ ಬಗೆಯ ಪರಿವರ್ತನೀಯ ಅವಧಿಯಲ್ಲಿ ಅವನ ಜೀವನದಲ್ಲಿ ಸಾಮಾಜಿಕ ನಿಯಂತ್ರಣ ಅಗತ್ಯವಾಗುತ್ತದೆ. ಇಲ್ಲವಾದರೆ ಆತ ದಾರಿತಪ್ಪುವ ಸಾಧ್ಯತೆ ಇದೆ. ನಮ್ಮ ದೇಶದಲ್ಲಿ ಸಾಮಾಜಿಕ ನಿಯಂತ್ರಣದ ಅಗತ್ಯ ಇಂದು ಅಧಿಕವಾಗಿದೆ. ವಿದ್ಯಾರ್ಥಿಗಳಲ್ಲಿನ ಅಶಿಸ್ತಿಗೆ ಮತ್ತು ಸಮಾಜದಲ್ಲಿನ ಗೊಂದಲ ವ್ಯವಸ್ಥೆಗೆ ಪ್ರಮುಖ ಕಾರಣವೇ ಸಾಂಸ್ಕೃತಿಕ ತಪ್ಪು ಹೊಂದಾಣಿಕೆ.

ಸಾಮಾಜಿಕ ನಿಯಮಗಳನ್ನು ಉಲ್ಲಂಘಿಸುವುದು ಈಗ ಫ್ಯಾಷನ್ ಆಗಿ ಪರಿಣಮಿಸಿದೆ. ಈ ತೆರನ ಉಲ್ಲಂಘನೆಗಳನ್ನು ಪ್ರಗತಿ ಮತ್ತು ಸುಧಾರಣೆಗಳ ಹೆಸರಿನಲ್ಲಿ ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಸಾಮಾಜಿಕ ನಿಯಂತ್ರಣದ ಕೊರತೆ ಸರ್ವವ್ಯಾಪ್ತಿಯಾಗಿದೆ. ಮಕ್ಕಳು ತಂದೆ ತಾಯಿಗಳಿಗೆ ಕಾನೂನುಗಳನ್ನು ಬಹಿರಂಗವಾಗಿ ಉಲ್ಲಂಘಿಸುತ್ತಾರೆ. ಕುಗ್ಗುತ್ತಿರುವ ಸಾಮಾಜಿಕ ನಿಯಂತ್ರಣದ ಬಗ್ಗೆ ಸಮಾಜದಲ್ಲಿನ ಯಾವ ವ್ಯಕ್ತಿಯೂ ತಲೆಕೆಡಿಸಿಕೊಂಡಂತೆ ಕಾಣುವುದಿಲ್ಲ. ಸಮಾಜ ಪರಿವರ್ತನೀಯ ಅವಧಿಯ ಘಟ್ಟದಲ್ಲಿದೆ. ಈ ಅವಧಿಯಲ್ಲಿ ಹೆಚ್ಚು ಹೆಚ್ಚು ಸಾಮಾಜಿಕ ನಿಯಂತ್ರಣದ ಅಗತ್ಯವಿದೆ. ಸಾಮಾಜಿಕ ನಿಯಂತ್ರಣಕ್ಕೆ ಸಂಬಂಧಪಟ್ಟ ಸಂಸ್ಥೆಗಳು ಪರಿಣಾಮಕಾರಿಯಾಗಿ ಕ್ರಿಯಾಶೀಲರಾಗದಿದ್ದರೆ ಭಾರತೀಯ ಸಮಾಜ ತೀವ್ರವಾದ ವಿಸಂಘಟನೆಗೆ ಒಳಗಾಗಬಹುದು.

ಈ ಮೇಲೆ ಹೇಳಿದ ಕಾರಣಗಳು ಸಾಮಾಜಿಕ ನಿಯಂತ್ರಣದ ಅಗತ್ಯವನ್ನು ಒತ್ತಿ ಹೇಳುತ್ತವೆ. ಈ ಅಗತ್ಯ ಆಧುನಿಕ ಸಮಾಜದಲ್ಲಿ ಅಧಿಕವಾಗಿರುತ್ತದೆ. ಏಕೆಂದರೆ, ಆಧುನಿಕ ಸಮಾಜ ಅತ್ಯಂತ ಸಂಕೀರ್ಣ ಸ್ವರೂಪವನ್ನು ಜೊತೆಗೆ ವಿಸಂಘಟನಾಶಕ್ತಿಗಳು ಅದರಲ್ಲಿ ಇದ್ದೇ ಇರುತ್ತವೆ

ಈ ನಿಟ್ಟಿನಲ್ಲಿ ತ್ರಿವೇಣಿರವರ 'ಅಪಸ್ವರ' ಕಾದಂಬರಿಯು ವ್ಯಾಪಕವಾಗಿ ಗ್ರಾಮೀಣ ಹಾಗೂ ನಗರ ಜೀವನಶೈಲಿಗಳ ವೈದೃಶ್ಯವನ್ನು ಚಿತ್ರಿಸುತ್ತಾ, ಈ ವೈದೃಶ್ಯದ ಪರಿಣಾಮವಾಗಿ ಮೀರಾ ಅನುಭವಿಸುವ 'ಪರಕೀಯ ಸ್ಥಿತಿ'ಯನ್ನು ಪರಿಣಾಮಕಾರಿಯಾಗಿ ದಾಖಲಿಸುತ್ತದೆ. ಬದುಕಿನ ಖಾಸಗೀತನಕ್ಕೆ ಒಗ್ಗಿಕೊಂಡಿರುವ ಮೀರಾ ಹಳ್ಳಿಗೆ ಕಾಲಿಟ್ಟ ಕೂಡಲೇ ಖಾಸಗೀತನದ ಅರಿವೇ ಇಲ್ಲದ ಹಳ್ಳಿಯ ಹೆಂಗಸರು ಅವಳನ್ನು ಮುತ್ತಿಕೊಂಡು ಅವಳ ಮೇಲೆ ವೈಯಕ್ತಿಕ ಪ್ರಶ್ನೆಗಳ ಸುರಿಮಳೆಯನ್ನು ಕರೆಯುತ್ತಾರೆ. ಅಲ್ಲದೆ, ಆ ಹಳ್ಳಿಯಲ್ಲಿ ವಿದ್ಯುಚ್ಛಕ್ತಿಯಿಲ್ಲ; ಎಲ್ಲೆಲ್ಲೂ ಮಣ್ಣಿನ ಮನೆಗಳು ಮತ್ತು ಕೊಳಕು ಕಂಡು ಬರುತ್ತದೆ ಎಲ್ಲದಕ್ಕಿಂತ ಮಿಗಿಲಾಗಿ ಶಾಮು ಆ ಕೊಳಕು ಕೊಚ್ಚೆಯಲ್ಲಿ ಆರಾಮವಾಗಿರುವುದನ್ನು ಕಂಡು ಅವಳಿಗೆ ದಿಗ್ಭ್ರಮೆಯಾಗುತ್ತದೆ. ಈ ವಿಧದ ಅಸಾಂಗತ್ಯವನ್ನು ಲೇಖಕಿ ಕಾದಂಬರಿಯುದ್ದಕ್ಕೂ ಪರಿಣಾಮಕಾರಿಯಾಗಿ ದಾಖಲಿಸುತ್ತಾರೆ.

ಒಂದು ಸಂದರ್ಭದಲ್ಲಿ ಶಾಮು ಪ್ರೀತಿಯಿಂದ ಒಂದು ಬಿಳಿಯ ಕರುವನ್ನು ಮುದ್ದಾಡುತ್ತಿರುತ್ತಾನೆ. ಅವನ ಹಾಗೂ ಆ ಕರುವಿನ ನಡುವೆ ಶಬ್ದಾತೀತ ಸಾಮರಸ್ಯವೇರ್ಪಟ್ಟಿರುತ್ತದೆ. ಮೀರಾ ಅಕಸ್ಮಾತ್ ಅಲ್ಲಿಗೆ ಬಂದಾಗ ಕರುವನ್ನು ಅವಳೆಡೆಗೆ ಶಾಮು ತಳ್ಳುತ್ತಾನೆ. 'ಶಾಮು' ಕರುವಿನ ಬೆನ್ನಿನ ಮೇಲೆ ಕೈಯಾಡಿಸುತ್ತ ಅವನೇನೋ ಆ ಕರುವನ್ನು ಎತ್ತಿಕೊಂಡು ಬಂದು ಮೀರಳ ಕೈಗೆ ಕೊಡಲು ಹೋದ. ಕರುವಿನ ಚೆಲುವಿಗೆ ಮನಸೋತ ಮೀರಾ ಕೈ ನೀಡಿದಳು. ಕೂಡಲೇ ಕಾಲಿನ ಮೇಲಿದ್ದ ಸಗಣಿಯುಂಡೆಯನ್ನೂ ಬಾಲ, ಪಕ್ಕೆಗೆ ಅಂಟಿಕೊಂಡಿದ್ದ ಗಂಜಲವನ್ನೂ ಕರುವಿನ ಮೈಯಿಂದ ಹೊರಡುತ್ತಿದ್ದ ಸಿನುಗು ವಾಸನೆಯನ್ನೂ ಗಮನಿಸಿ ಅಸಹ್ಯಪಟ್ಟು ತಟ್ಟನೆ ಕೈ ಹಿಂದಕ್ಕೆ ತೆಗೆದುಕೊಂಡಳು. ಮೀರ ಕೈ ಹಿಂದೆಳೆದುಕೊಂಡಿದ್ದರಿಂದ ಕರು ದೊಪ್ಪನೆ ನೆಲದ ಮೇಲೆ ಬಿದ್ದತು. "ತನ್ನ ಮೆಚ್ಚಿನ ಕರು ನೆಲದ ಮೇಲೆ ಬಿದ್ದುದನ್ನು ನೋಡಿ ಶಾಮು ಅಪಶಕುನವಾಯಿತೆಂದು ಭಾವಿಸಿದೆ".[೭]

ಶಾಮು ಮತ್ತು ಮೀರಾ ಇವರ ಜೀವನಶೈಲಿಗಳು ಸಂಪೂರ್ಣವಾಗಿ ಭಿನ್ನವಾಗಿವೆ. ಅಲ್ಲದೆ, ಅವರಿಬ್ಬರ ನಡುವೆ ದೊಡ್ಡ ವೈಚಾರಿಕ ಹಾಗೂ ಸಂವೇದನಾ ಕಂದರವಿದೆ. ಒಬ್ಬರು ದಕ್ಷಿಣಧ್ರುವವಾದರೆ ಮತ್ತೊಬ್ಬರು ಉತ್ತರಧ್ರುವ. ಹೊಲಗದ್ದೆಗಳ ಹಾಗೂ ದೈಹಿಕ ಶ್ರಮದ ಬಗ್ಗೆ ಶಾಮುವಿಗಿರುವ ಪ್ರೀತ್ಯುತ್ಸಾಹಗಳು ಮೀರಾಳಿಗೆ ಅರ್ಥವಾಗುವುದಿಲ್ಲ. ತಾಸುಗಟ್ಟಲೆ ಮೀರಾ ಪುಸ್ತಕಗಳಲ್ಲಿ ಹುದುಗಿರುವುದು ಶಾಮುವಿಗೆ ಅರ್ಥವಾಗುವುದಿಲ್ಲ. ಈ ವೈಚಾರಿಕ ವೈದೃಶ್ಯವನ್ನು ಲೇಖಕಿ ಯಶಸ್ವಿಯಾಗಿ ಚಿತ್ರಿಸಿದ್ದಾರೆ. "ಮಹಾರಾಯ್ತಿ ಅವೆಷ್ಟು ಪುಸ್ತಕಗಳನ್ನು ಓದುತ್ತೀಯಾ? ಜೀವವಿಲ್ಲದ ಪುಸ್ತಕಗಳಲ್ಲಿ ನಿನಗೇನು ಆಕರ್ಷಣೆಯೋ?"

ಪು. ೧೪೪

ಮೀರಳ ಸಹನೆ ಮೀರಿತು

"ಹಗಲಿರುಳೂ ಗದ್ದೆ, ತೋಟ, ಭೂಮಿ ಅಂತ ಓಡಾಡುತ್ತೀರಲ್ಲ, ನಿಮಗೆ ಅದು ಬೇಜಾರಾಗೋದಿಲ್ವೇ?" ಎಂದಳು ಶಾಮು ಹುಬ್ಬು ಗಂಟಿಕ್ಕಿ.

"ನಾವು ಪ್ರತಿ ದಿನ ನೋಡುವ ಸೂರ್ಯನಲ್ಲಿ ಬೇಜಾರು ಬರುವುದೇ?" ಭೂಮಿ ತಾಯಿಯ ಪವಿತ್ರ ಸ್ನೇಹದಲ್ಲಿ ನಿನ್ನ ಮನಸ್ಸು ಐಕ್ಯವಾಗಿದೆ. ತಾಯಿಯ ಮೇಲೆ ಬೇಜಾರು ಮಾಡಿಕೊಂಡ ಕಂದನಿರುವನೇ? ಅವಳ ಸೌಂದರ್ಯ ನಿತ್ಯನೂತನ. ಅವಳ ಸ್ನೇಹ ಅಮರ. ಅವಳ ಸೇವೆಯಲ್ಲಿ ಅಡಗಿರುವ ತೃಪ್ತಿ ನಿಮ್ಮ ಪುಸ್ತಕದಿಂದ ಬರುವುದೇನು? ಎಂದ.

"ನಿಮಗೆ ಭೂಮಿಯ ಸಹವಾಸ ಹೇಗೆ ನಿತ್ಯ ನೂತನವೋ, ನನಗೆ ಪುಸ್ತಕಗಳಿಂದ ದೊರಕುವ ಶಾಂತಿ ಅಪರಿಮಿತ, ನೀವು ಸಾಹಿತ್ಯದಲ್ಲಿ ಹೇಗೆ ಯಾವ ಸೌಂದರ್ಯವನ್ನೂ ಕಾಣಲಾರಿರೋ ಹಾಗೆ ನಾನು ಭೂದೇವಿಯಲ್ಲಿ ಯಾವ ಚೆಲುವನ್ನು ಕಾಣಲಾರೆ ನನಗೆ ಊಟ ನಿದ್ದೆಗಿಂತಲೂ ಪುಸ್ತಕದ ಅವಶ್ಯಕತೆ ಹೆಚ್ಚಾಗಿದೆ. ಹೊಟ್ಟೆಯ ಹಸಿವು ಇಂಗಿಸಲು ಅನ್ನ ಬೇಕಾಗುವಂತೆ ಹೃದಯದ ಹಸಿವು ನೀಗಿಸಲು ನನಗೆ ಪುಸ್ತಕ ಬೇಕು".[೮]

ಮುಂದುವರಿದು, ಶಾಮು ಆರು ಹೆಣ್ಣು ಮಕ್ಕಳು ಮತ್ತು ಮೂವರು ಗಂಡು ಮಕ್ಕಳನ್ನು ಇಚ್ಛಿಸುವಾಗ ಮೀರಾ "ಮಕ್ಕಳೇನು ಆಕಾಶದಿಂದ ಉದುರುತ್ತವೆ ಅಂತ ಭಾವಿಸಿದ್ದೀರೇನು?" ಗಂಡಸರಿಗೆ ಮಗುವಿನ ಬೆಲೆ ತಿಳಿದಿದೆಯೇನು? ಒಂಬತ್ತು ತಿಂಗಳು ಹೊತ್ತು ಹೆರುವುದು ಸಾಮಾನ್ಯವೇ? ಒಂದು ಮಗುವಿಗಾಗಿ ಹೆಣ್ಣು ತನ್ನ ರಕ್ತ ಮಾಂಸವನ್ನು ಹಂಚಬೇಕು. ಕೆಲವು ಬಾರಿ ತನ್ನ ಪ್ರಾಣವನ್ನೇ ಪಣವಾಗಿಡಬೇಕಾದ ಸಂದರ್ಭವೂ ಬರುತ್ತದೆ. ತಮ್ಮ ಅಲ್ಪ ಪಾತ್ರವನ್ನು ಮುಗಿಸಿ, ಪ್ರತಿಯೊಂದು ಜವಾಬ್ದಾರಿಯೂ ಹೆಣ್ಣಿನ ಮೇಲಿದ್ದರೂ ಕರುಣೆಯಿಲ್ಲದ ರಕ್ಕಸನಂತೆ ವರ್ತಿಸುತ್ತಾನೆ ಗಂಡು. "ಒಂಬತ್ತು ಮಕ್ಕಳನ್ನು ಹೆರುವುದರಲ್ಲಿ ನನ್ನ ಸಮಾಧಿ ಸಿದ್ಧವಾದಂತೆಯೇ ಸರಿ".[೯]

ಈ ಅನಿರೀಕ್ಷಿತ ಆವೇಶದಿಂದ ಶಾಮು ದಿಗ್ಭ್ರಮೆಗೊಳ್ಳುತ್ತಾನೆ. ಸ್ತ್ರೀಯರೆಲ್ಲರೂ ಮಕ್ಕಳನ್ನು ಪ್ರೀತಿಸುತ್ತಾರೆಂಬುದು ಅವನ ಎಣಿಕೆ. ಆದ್ದರಿಂದ ತನಗೆ ಮಕ್ಕಳಾಗುವುದನ್ನು ಮೀರಾ ಏಕೆ ಅಪೇಕ್ಷಿಸುವುದಿಲ್ಲ ಎಂದು ಅವನಿಗೆ ಆಶ್ಚರ್ಯವಾಗುತ್ತದೆ.

ಇದಕ್ಕೆ ವೈರುಧ್ಯವಾಗಿ ಆರ್ಯಾಂಬರವರು 'ಗುರಿ'ಯ ಮೀನ ಎಂಬ ಸದ್ಗುಣಿ ಪಾತ್ರದ ಮೂಲಕ ಹಳ್ಳಿಯ ಸುಧಾರಣೆಯನ್ನು ಮೂಡಿಸುತ್ತಾರೆ. 'ಹಳ್ಳಿಯ ಹಳೆಯ ಪದ್ಧತಿಗಳನ್ನು

ಬಿಡೋಕೆ ಆಗ್ತದಾ, ಹಳ್ಳಿಯ ಅಜ್ಞಾನಿಗಳು ಕೇಳಿದಾಗ ಅವಳು ಹೇಳುವ ಮಾತುಗಳು ಅರ್ಥಪೂರ್ಣವಾಗಿವೆ. ಮೀನ ಹಳ್ಳಿಯವರಿಗೆಲ್ಲಾ ದಾರಿ ದೀಪವಾಗುತ್ತಾಳೆ. ಹಳ್ಳಿಯವರ ಉಡುಗೆ ತೊಡುಗೆಯಲ್ಲಿ ಬದಲಾವಣೆ, ಪರಿಸರದಲ್ಲಿ ಶುಚಿಯ ಬಗ್ಗೆ ಚಿಂತನೆ ಮತ್ತು ಸುಧಾರಣೆಯನ್ನು ತಂದು ಎಲ್ಲರಿಗೂ ನೇರವಾಗಿ ನೆರವು ನೀಡಿ ಹಳ್ಳಿಯಲ್ಲೇ ಉತ್ತಮ ಜೀವನಕ್ಕೆ ಅಗತ್ಯವಾದ ಸಲಹೆಯನ್ನು ನೀಡಿ ಪ್ರತಿಷ್ಠಿತ ವ್ಯಕ್ತಿಯಾಗುತ್ತಾಳೆ. ಮುಂದೆ ತನ್ನ ಹೆಂಡತಿಯ ಮಾತಿಗೆ ಧ್ವನಿಕೊಟ್ಟು ಜಯರಾಮ ಹಳ್ಳಿಯಲ್ಲಿಯೇ ವಾಸಿಸಲು ಬರುತ್ತಾನೆ.

ಮಾನವ ಸಮಾಜವು ತನ್ನ ನಿಯಮಗಳ ವ್ಯವಸ್ಥೆಯ ಮೂಲಕ ಸಾಮಾಜಿಕ ಪರಿಕ್ರಮವನ್ನು ಕಾಪಾಡಿಕೊಳ್ಳುವುದು ಸಮಾಜದಲ್ಲಿ ಹೇಗೆ ವರ್ತಿಸಬೇಕೆಂದು ತಿಳಿಸುವ ನಿಯಮಗಳ ವ್ಯವಸ್ಥೆಗೆ ಸಾಮಾನ್ಯವಾಗಿ ಜನರು ಬದ್ಧರಾಗಿಯೇ ನಡೆಯುವರು. ಹೀಗೆ ಸಾಮಾಜಿಕ ನಿಯಮಗಳಿಗೆ ಅನುಗುಣವಾಗಿ ನಡೆಯುವುದೇ ಅನುವರ್ತನೆ. ಇದು ಬಾಹ್ಯವರ್ತನೆಗೆ ಮಾತ್ರ ಸೀಮಿತವಾದುದಲ್ಲ. ಆ ವರ್ತನೆಯನ್ನು ವ್ಯಕ್ತಿಯು ಅನುಮೋದಿಸಿ, ಅದರಂತೆ ನಡೆಯಲು ಇಚ್ಛೆಪಡುತ್ತಾನೆ. ಅಂದ ಮಾತ್ರಕ್ಕೆ ಎಲ್ಲಾ ವ್ಯಕ್ತಿಗಳೂ ನಿಯಮಗಳಿಗೆ ತಕ್ಕಂತೆಯೇ ವರ್ತಿಸುವರೆಂದು ಹೇಳಲಾಗದು.

"ಕೆಲವು ವ್ಯಕ್ತಿಗಳು ನಿಯಮಗಳಿಗೆ ವಿರುದ್ಧವಾಗಿಯೇ ವರ್ತಿಸಬಹುದು. ಇಲ್ಲವೇ ಅವುಗಳನ್ನು ಅಲಕ್ಷಿಸಿ ನಡೆಯಬಹುದು. ಈ ರೀತಿ ನಿಯಮಗಳನ್ನು ಉಲ್ಲಂಘಿಸಿ ನಡೆಯುವುದೇ 'ಅಪವರ್ತನೆ' ನಿಯಮಗಳಿಗೆ ಅನುಸಾರವಾಗಿ ನಡೆದುಕೊಳ್ಳುವವರನ್ನು 'ಅನುವರ್ತಿ'ಗಳೆಂದೂ ಮತ್ತು ನಿಯಮಗಳನ್ನು ಉಲ್ಲಂಘಿಸಿ ನಡೆಯುವವರು ಅಪವರ್ತಿಗಳೆಂದು ಕರೆಯಲಾಗುತ್ತದೆ. 'ಅನುವರ್ತನೆ' ಮತ್ತು 'ಅಪವರ್ತನೆ' ಎರಡೂ ಸಮಾಜದಲ್ಲಿ ಒಟ್ಟಿಗೆ ಸಾಗುತ್ತವೆ".[೧೦]

ಸಮಾಜವು ತನ್ನ ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಲು ಸಾಮಾಜಿಕ ನಿಯಂತ್ರಣ ಹಾಗೂ ಸಾಮಾಜೀಕರಣವನ್ನು ಬಳಸಿಕೊಳ್ಳುತ್ತದೆ. ಸಮಾಜದಲ್ಲಿ ಬಹಳಷ್ಟು ಮಂದಿ ಸಾಮಾಜಿಕ ನಿಯಮಗಳಿಗೆ ಅನುಗುಣವಾಗಿ ನಡೆದುಕೊಳ್ಳುವರು. ಆದರೆ ಎಲ್ಲ ಸದಸ್ಯರು ಎಲ್ಲ ನಿಯಮಗಳಿಗೂ ಬದ್ಧರಾಗಿಯೇ ನಡೆದುಕೊಳ್ಳುತ್ತಾರೆ ಎಂದು ಹೇಳಲಾಗದು. ಯಾವುದೇ ಒಂದು ನಿಯಮವನ್ನು ಎಲ್ಲಾ ಸಮಯದಲ್ಲಿಯೂ ಅನುಸರಿಸಲಾಗುವುದು ಎನ್ನುವಂತಿಲ್ಲ. ಯಾವೊಬ್ಬ ವ್ಯಕ್ತಿಯೂ ಎಲ್ಲಾ ಬಗೆಯ ಸಾಮಾಜಿಕ ನಿರೀಕ್ಷೆಗಳಿಗೆ ಅನುಸಾರವಾಗಿ ಯಾವಾಗಲೂ ನಡೆದುಕೊಳ್ಳುತ್ತಾನೆ ಎನ್ನುವಂತಿಲ್ಲ. ಕಾರಣವೇನೆಂದರೆ, ನಿಯಮಗಳನ್ನು ಅತಿಕ್ರಮಿಸಿ ನಡೆಯುವುದೇ 'ಅಪವರ್ತನೆ'.

ಅಪವರ್ತನೆಯು ಮೋಸಗೊಳಿಸುವಿಕೆ, ಕೃತ್ರಿಮತೆ, ಅಪರಾಧ, ಅನೈತಿಕತೆ, ಅಪ್ರಮಾಣಿಕತೆ, ವಿಶ್ವಾಸದ್ರೋಹ, ಕೃತಘ್ನತೆ, ಅಶ್ಲೀಲತೆ, ಕ್ರೌರ್ಯ, ಸ್ವಚ್ಛಂದತೆ, ದೋಷಾರೋಪಣೆ, ದುರಾಗ್ರಹ ಮುಂತಾದ ಹಲವು ರೂಪಗಳಲ್ಲಿ ಕಾಣಿಸಿಕೊಳ್ಳಬಹುದು. ಅಪವರ್ತನೆಯು ಒಂದಲ್ಲ ಒಂದು ರೂಪದಲ್ಲಿ ಎಲ್ಲಾ ಸಮಯದಲ್ಲಿಯೂ ಅಸ್ತಿತ್ವದಲ್ಲಿದ್ದು ಮಾನವನ ನಡತೆಯಲ್ಲಿ ಕಾಣಬರುವ ಒಂದು ಕೊರತೆಯಾಗಿದೆ.

"ಒಂದು ಸಮೂಹದ ಅಥವಾ ಸಮಾಜದ ಸಾಮಾಜಿಕ ನಿರೀಕ್ಷೆಗಳಿಗೆ ಅಥವಾ ನಡತೆಯ ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದನ್ನು 'ಅಪವರ್ತನೆ' ಎಂದು ಅಭಿಪ್ರಾಯ ಸಾಂಪ್ರದಾಯಿಕ ನಿಯಮಗಳಿಗೆ ಅನುಸಾರವಾಗಿ ನಡೆದುಕೊಳ್ಳುವಲ್ಲಿನ ಯಾವುದೇ ವೈಫಲ್ಯವನ್ನು ಅಪವರ್ತನೆ ಎನ್ನಬಹುದು. ಒಟ್ಟಿನಲ್ಲಿ ಹೇಳುವುದಾದರೆ ಒಂದು ಗೊತ್ತಾದ ನಿಯಮಕ್ಕೆ ಅನುಗುಣವಾಗಿರದ ವರ್ತನೆಯೇ ಅಪವರ್ತನೆ".[೧೧]

ಸಮಾಜವು ತನ್ನ ಸದಸ್ಯರ ಆಸೆ, ಆಕಾಂಕ್ಷೆಗಳನ್ನು ಮತ್ತು ಗುರಿಗಳನ್ನು ಈಡೇರಿಸಿಕೊಳ್ಳಲು ಅನೇಕ ಮಾರ್ಗಗಳನ್ನು ಅಥವಾ ಸಾಧನಗಳನ್ನು ರೂಪಿಸಿರುತ್ತದೆ. ಅವುಗಳನ್ನು ಒಪ್ಪಿಕೊಂಡು ಆ ಮಾರ್ಗದ ಮೂಲಕ ತನ್ನ ಧ್ಯೇಯಗಳನ್ನು ಪೂರೈಸಿಕೊಳ್ಳುವವನಿಗೆ 'ಅನುವರ್ತಿ' ಎಂದು ಕರೆಯುತ್ತೇವೆ. ಆದರೆ ಇನ್ನು ಕೆಲವರು ತಮ್ಮ ಧ್ಯೇಯಗಳನ್ನು ಈಡೇರಿಸಿಕೊಳ್ಳಲು ತಮ್ಮದೇ ಆದ ಮಾರ್ಗಗಳನ್ನು ಹಿಡಿಯುತ್ತಾರೆ. ಆ ದೆಸೆಯಲ್ಲಿ ಅವರೂ ಸಹ 'ಅಪವರ್ತಿಗಳೇ' ಆಗುತ್ತಾರೆ. ಈ ಹೊಸ ರೀತಿಯ ಕಾರ್ಯವಿಧಾನಗಳಿಂದ ತಮ್ಮ ಗುರಿಗಳನ್ನು ಈಡೇರಿಸಿಕೊಳ್ಳುವಲ್ಲಿ ಸಮಸ್ಯೆಗಳು ತಲೆದೋರದೇ ಇರಬಹುದು.

ಒಂದು ವೇಳೆ ಸಮಾಜಕ್ಕೆ ಹಾನಿಕಾರಕ ಪರಿಣಾಮಗಳಾಗಬಹುದಾದರೆ ಅದರಿಂದ ಸಾಮಾಜಿಕ ವ್ಯವಸ್ಥೆಯೇ ಅಪಾಯಕ್ಕೆ ಒಳಗಾಗಬಹುದು. ಉದಾಹರಣೆಗೆ, ಬಡತನದಲ್ಲಿ ನರಳುವವರು, ಸೋಮಾರಿಗಳು, ಸುಲಭವಾಗಿ ಸುಖಾಪೇಕ್ಷೆಯನ್ನು ಹೊಂದಬೇಕೆನ್ನುವವರು ಹಣ, ಆಸ್ತಿ ಸಂಪಾದನೆಗಾಗಿ ಅನೀತಿಯುತವಾದ ಅಪ್ರಾಮಾಣಿಕವಾದ ಹಾಗೂ ವ್ಯವಸ್ಥೆಗೆ ವಿರುದ್ಧವಾದ ವಿಧಾನಗಳನ್ನು ಅನುಸರಿಸಬಹುದು. ಇಂತಹ ಅನ್ಯಮಾರ್ಗಗಳನ್ನು ಅನುಸರಿಸುವವರು ಅಪವರ್ತಿಗಳೆನಿಸಿಕೊಳ್ಳುವರು.

ಆರ್ಯಾಂಬರ 'ದೇವಮಾನವ' ಕಾದಂಬರಿಯಲ್ಲಿ ತಾಯಿಯಾಗಿದ್ದ ವಿಧವೆಯಾದ ಸೀತ ಮರುಮದುವೆಯಾಗುವ ಮೂಲಕ ನಮ್ಮ ಸಮಾಜದಲ್ಲಿ ಹಿಂದಿನಿಂದ ನಡೆದು ಬಂದ ಕಟ್ಟಳೆಯನ್ನು ಮುರಿಯುತ್ತಾಳೆ. ಆದರೆ ತನ್ನ ಮಗಳಿಗೆ ತಾಯ್ತನದ ಪ್ರೀತಿಯನ್ನು ತೋರಿಸದೆ ನಮ್ಮ ಭಾರತೀಯ ಸಂಸ್ಕೃತಿಗೆ ವಿರೋಧವೆನಿಸುತ್ತಾಳೆ.

ಪು. ೧೪೭

ಆರ್ಯಾಂಬರ 'ಸವತಿಯ ನೆರಳು' ಕಾದಂಬರಿಗಾರ್ತಿ ಹೇಳುವಂತೆ ಎರಡಂತಸ್ತಿನ ಭವ್ಯವಾದ ಅರಮನೆಯಂತ ಬಂಗಲೆ, ನೂರಾರು ಎಕರೆ ಎಸ್ಟೇಟ್ ದೇವನಗರ. ಇದರ ಯಜಮಾನ ಹರ್ಷ. ಇವನ ಹೆಂಡತಿ ಇಂದಿರ ಈಕೆ ರೂಪವಂತೆ, ವಿದ್ಯಾವಂತೆ. ಅಂತಸ್ತಿಗೆ ತಕ್ಕ ನಡವಳಿಕೆಗಳು ಆದರೆ ಇವಳು ಮದುವೆಗೆ ಮುನ್ನವೇ ವ್ಯಭಿಚಾರಿಯಂತೆ ಜೀವನ ನಡೆಸುತ್ತಿದ್ದಳು. ಈ ವಿಷಯ ಮದುವೆಯ ರಾತ್ರಿಯೇ ಹರ್ಷನಿಗೆ ಹೇಳಿದಳು. ಇಂತಹ ವಿಷಯ ತಿಳಿದ ಯಾವ ಪುರುಷನೇ ಆಗಲಿ ಹೆಂಡತಿಯನ್ನು ದ್ವೇಷಿಸುವುದು ಸಹಜ. ಹಾಗೆಯೇ ಅದೇ ಕ್ಷಣದಲ್ಲಿ ಹರ್ಷ ಹೆಂಡತಿಯನ್ನು ಬಿಟ್ಟುಬಿಡಬಹುದಿತ್ತು. ದೇವನಗರ ಒಡತಿ ವ್ಯಭಿಚಾರಿಣಿ ಎಂದು ಆಡಿಕೊಂಡು ಜನ ನಗಬಾರದು, ತಮ್ಮ ವಂಶಕ್ಕೆ ಅಪಕೀರ್ತಿ ಬರಬಾರದೆಂದು ಸುಮ್ಮನಾಗಿದ್ದ. ತೋರಿಕೆಗೆ ಮಾತ್ರ ಆದರ್ಶ ದಂಪತಿಗಳಂತೆ ಕಾಣಿಸಿಕೊಳ್ಳುತ್ತಿದ್ದರು. ಮದುವೆಯ ನಂತರವಾದರೂ ಇಂದಿರ ತನ್ನ ಅಭ್ಯಾಸಗಳನ್ನು ತಿದ್ದುಕೊಳ್ಳಬಹುದಿತ್ತು. ಬದಲಾಗಿ ತನ್ನ ಕಾಮುಕ ಜೀವನವನ್ನು ಮುಂದುವರೆಸಿದಳು. ಕಾಮುಕ ಸ್ನೇಹಿತರನ್ನು ದೇವನಗರಕ್ಕೆ ಕರೆದುಕೊಂಡು ಬಂದು ಅವರೊಡನೆ ಮಧುನಿವಾಸದಲ್ಲಿ ಅನೇಕ ರಾತ್ರಿ ಕಳೆಯುತ್ತಿದ್ದಳು. ಹೀಗೆ ಇಂದಿರ ಭಾರತೀಯ ನಾರಿಯ ಪಾವಿತ್ರ್ಯಕ್ಕೆ ಕಳಂಕವಾಗಿ ಕಾಣಿಸಿಕೊಳ್ಳುತ್ತಾಳೆ.

ಇದಕ್ಕೆ ವ್ಯತಿರಿಕ್ತವಾಗಿ ದೇವನಗರಕ್ಕೆ ಪದ್ಮಿನಿ ಬಂದ ನಂತರ ಸತ್ತು ಹೋದ ಇಂದ್ರಳೊಂದಿಗೆ ಪ್ರತಿಯೊಬ್ಬರು ತುಲನೆ ಮಾಡಿ ನೋಡುತ್ತಿದ್ದರು. ಇಂದ್ರಳ ನಾಗರಿಕ ಬದುಕು, ಜನರೊಂದಿಗೆ ವ್ಯವಹರಿಸುತ್ತಿದ್ದ ರೀತಿ, ಅವಳ ಸೌಂದರ್ಯ ಇಂತಹ ಯಾವ ಲಕ್ಷಣಗಳು ಪದ್ಮಿನಿಯಲ್ಲಿ ಗುರುತಿಸಲು ಸಾಧ್ಯವಿಲ್ಲವಾದುದರಿಂದ ಪದ್ಮಿನಿಯನ್ನು ಕಡೆಗಾಣಿಸಿದರು. ಹೀಗೆ ಕಡೆಗಾಣಿಸುತ್ತಿದ್ದುದು ಪದ್ಮಿನಿಯ ಮನಸ್ಸಿನ ಮೇಲೆ ಗಾಢ ಪ್ರಭಾವ ಬೀರಿತು. ಮಾನಸಿಕವಾಗಿ ನೊಂದುಕೊಳ್ಳುತ್ತಿದ್ದಳು.

ಕೆಲಸದ ಹೆಂಗಸು ಜಾನಕಮ್ಮ ಪ್ರತಿಕ್ಷಣದಲ್ಲಿಯೂ "ಇಂದಿರಳಂತೆ ನೀನಿರಲು ಸಾಧ್ಯವೇ?" ಎಂದು ಹೀಯಾಳಿಸುತ್ತಿದ್ದಳು. ರೂಪಿನಲ್ಲಿ ಸವತಿಯೊಡನೆ ಸ್ಪರ್ಧಿಸಲು ತನ್ನಿಂದ ಸಾಧ್ಯವಿಲ್ಲದೆ ಹೋದರು, ನಡೆವಳಿಕೆಯಲ್ಲಿ ಅವಳಂತೆ ನಡೆದು ಎಲ್ಲರ ಪ್ರೀತಿ ಗೌರವಗಳನ್ನು ಸಂಪಾದಿಸಬೇಕೆಂದುಕೊಂಡಳು. ಎಲ್ಲಕ್ಕಿಂತ ಮಿಗಿಲಾಗಿ ಕೈಹಿಡಿದ ಹರ್ಷ ಸಂಪೂರ್ಣವಾಗಿ ಇಂದಿರಳನ್ನು ಮರೆಯಬೇಕು. ಮರೆತು ಸಂತೋಷದಿಂದ ನಗುನಗುತ್ತ ತನ್ನೊಡನೆ ಬಾಳ್ವೆ ನಡೆಸಬೇಕು. ಇದು ಪದ್ಮಿನಿಯ ಅಭಿಲಾಷೆ. ತಬ್ಬಲಿಯಾದ ತನ್ನನ್ನು ಮದುವೆಯಾಗಿ ಸಿರಿಸಂಪತ್ತಿನ ರಾಣಿಯನ್ನಾಗಿ ಮಾಡಿದ ಗಂಡನ ಸುಖ ಸಂತೋಷಗಳು ಅವಳ ಬದುಕಿನ ಗುರಿಯಾಯಿತು. ಹೀಗೆ ಗಂಡನ ಪ್ರೀತಿ, ವಿಶ್ವಾಸ, ಅವನ ಅಭ್ಯುದಯವನ್ನು ಬಯಸುವ ಪದ್ಮಿನಿ ಭಾರತೀಯ ಸುಸಂಸ್ಕೃತ ಹೆಣ್ಣಾಗಿ ಕಾಣಿಸಿಕೊಳ್ಳುತ್ತಾಳೆ.

ತ್ರಿವೇಣಿಯವರ 'ಮೊದಲಹೆಜ್ಜೆ'ಯ ನಾಯಕಿ ಹೇಳುವಂತೆ, ಮಣಿಯ ಮದುವೆಯಾದ ನಂತರ ನನ್ನ ಹೃದಯದಲ್ಲಿ ನಿದ್ರಿಸುತ್ತಿದ್ದ ರಾಗ ಭಾವೋದ್ವೇಗಗಳೆಲ್ಲಾ ಒಂದೇ ಬಾರಿಗೆ ಜಾಗೃತಗೊಂಡವು. ಮಗುವಾಗಿದ್ದವಳು ಒಂದೇ ದಿನದಲ್ಲಿ ಯುವತಿಯಾದೆ. ಮಣಿ ಮೂರ್ತಿಯ ಕಣ್ಣುಗಳ ಸಮಾಗಮ, ಮೂಕ ಸಂದೇಶ, ಕಳ್ಳನೋಟಗಳು, ಪರಸ್ಪರ ನಗೆಯಲ್ಲಿಡಗಿದ್ದ ಪ್ರಣಯ ಇವುಗಳನ್ನು ನಾನು ಗಮನಿಸಿದ್ದೆ. ಮೂರ್ತಿಯ ಕಣ್ಣುಗಳು ಪ್ರಣಯದ ಸಂದೇಶ ಹೊತ್ತು ಮಣಿಯಲ್ಲಿ ನಾಟಿದಾಗ ನನ್ನೆದೆ ಭಾರವಾಗಿತ್ತು. ಧಾರೆಗೆ ಮುಂಚೆ ಮಣಿ ಎದುರಿಗೆ ಕುಳಿತಿದ್ದ ನನ್ನ ಮುಖದಲ್ಲಿ ಎದುರಿಗಿಲ್ಲದ ತನ್ನ ನಲ್ಲನ ಮುಖ ಚಿತ್ರಿಸಿಕೊಂಡು ತನ್ಮಯಳಾದಾಗ, ನಾನು ಈ ಹುಚ್ಚು ಉಂಟೆ ಎಂದು ಚಕಿತಳಾಗಿದ್ದೆ. ಆದರೆ ಈ ಬಗೆಯ ಹುಚ್ಚಿಲ್ಲದಿದ್ದರೆ, ಮಧುರ ಪುಳಕವಿಲ್ಲದಿದ್ದರೆ ಬಾಳು ಎಷ್ಟೊಂದು ಶೂನ್ಯ ಎಂದು ನನಗೆ ಈಗ ಎನಿಸತೊಡಗಿತ್ತು. ಕೋಗಿಲೆ ಕೂಗಿದಾಗ, ಹೂವು ಅರಳಿದಾಗ, ಪೂರ್ಣಿಮೆಯ ಚಂದ್ರ ನೀಲಿಯಾಗಸದಲ್ಲಿ ಮುಖ ತೋರಿದಾಗ ಮಂದಮಾರುತ ಸುಮಸೌರಭ ಹೊತ್ತು ನನ್ನೆಡೆಗೆ ತೇಲಿ ಬಂದಾಗ, ನನ್ನ ಬಾಳಿನ ಶೂನ್ಯತೆ ಇಮ್ಮಡಿಯಾಗುತ್ತಿತ್ತು.

ನನಗೆ ಬಿಡುಗಡೆ ಬೇಕಿತ್ತು, ಪ್ರಣಯ ಬಂಧನದೊಳಗೆ ಹಾರುವ ಬಿಡುಗಡೆ ಪ್ರೇಮದ ಬಲೆಯಲ್ಲಿ ಬೀಳಲು ಪ್ರಣಯದ ಹುಚ್ಚು ಮಾತುಗಳನ್ನು ಕೇಳಲು ನಾನು ಬಿಡುಗಡೆಯನ್ನು ಬಯಸಿದೆ. ನನ್ನ ಹೃದಯದಲ್ಲಿ ಹರಿಯುತ್ತಿರುವ ಹುಚ್ಚು ಹೊಳೆ ಶಾಂತವಾಗುವುದು ಎಂದಿಗೆ? "ನನ್ನ ಹೃದಯವನ್ನು ದಹಿಸಿ ಭಸ್ಮ ಮಾಡುತ್ತಿರುವ ಜ್ವಾಲಾಮುಖಿ ತಣ್ಣಗಾಗುವುದೆಂದಿಗೆ".[೧೨]

ಇಂತಹ ಮಾನಸಿಕ ಸ್ಥಿತಿಯಲ್ಲಿ ಅವಳು ಸುಲಭವಾಗಿ ಯಾವ ಆಕರ್ಷಕ ಲಂಪಟನ ಬಲೆಗೂ ಬೀಳುವುದು ಸಹಜ ಹಾಗೂ ಅನಿವಾರ್ಯ ಮತ್ತು ಆ ಲಂಪಟನಾದರೋ ಪಕ್ಕದ ಮನೆಯಲ್ಲಿಯೇ ಇರುವ ಶ್ರೀಮಂತ ಕಾಲೇಜ್ ವಿದ್ಯಾರ್ಥಿ. ಅಲ್ಲದೆ, ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ನಿರೂಪಕಿಯ ಬಾಯಿಂದ ಸಹಜವಾಗಿ ಬರುವ ಬೆಂಕಿಯ ರೂಪಕ ಇಡೀ ಕಾದಂಬರಿಯಲ್ಲಿ ಪುನರಾವರ್ತನೆಗೊಳ್ಳುವ ಮೂಲಾಶಯದಂತೆ ಅರ್ಥಪೂರ್ಣವಾಗಿದೆ. ಮಗುವಾಗಿದ್ದಾಗಲೂ 'ನಾಯಕಿ' ಬೆಂಕಿಯ ಉರಿಯಿಂದ ಆಕರ್ಷಿತಳಾಗಿ ತನ್ನ ಕೈಗಳನ್ನು ಸುಟ್ಟುಕೊಂಡಿದ್ದಾಳೆ. ನಿಜವಾಗಿ ಮುಂದೆ ತನ್ನ ತಂಗಿಯ ಮದುವೆಯಾಗಿ ತಾನು ಅವಿವಾಹಿತಳಾಗಿಯೇ ಉಳಿದಾಗ ವಿಷಯ ವಾಸನೆಗಳ ಬೆಂಕಿಯಲ್ಲಿ ಬೇಯುತ್ತಾಳೆ. ಆನಂತರ ಶಿವಸ್ವಾಮಿಯ ಮೋಹದಲ್ಲಿ ಬಿದ್ದು ಸಾಂಕೇತಿಕವಾಗಿ ತನ್ನನ್ನೇ ತಾನು ಸುಟ್ಟುಕೊಳ್ಳುತ್ತಾಳೆ ಮತ್ತು ಈಗ ಈ ಆಸ್ಪತ್ರೆಯಲ್ಲಿ ತನ್ನ ಬಗ್ಗೆ ಮತ್ತು ಇತರರ ಬಗ್ಗೆ ಕ್ರೋಧದಿಂದ ಕುದಿಯುತ್ತಾಳೆ.

ಪು. ೧೪೯

ಧ್ಯೇಯ ಮತ್ತು ಸಾಧನೆಯ ಮಾರ್ಗಗಳನ್ನು ನಿರಾಕರಣೆ ಮಾಡುವವರಿಗೆ ಇರುವ ಮತ್ತೊಂದು ಮಾರ್ಗವೆಂದರೆ 'ಬಂಡಾಯ' ಕೆಲವು ವ್ಯಕ್ತಿಗಳು ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನೇ ಪ್ರಶ್ನಿಸಿ ಅದಕ್ಕೆ ಪರ್ಯಾಯವಾಗಿ ಬೇರೆ ವ್ಯವಸ್ಥೆಯನ್ನು ಸ್ಥಾಪಿಸುವ ಹೋರಾಟ ನಡೆಸಬಹುದು ಅಥವಾ ಆ ನಿಟ್ಟಿನಲ್ಲಿ ಅವರು ಹೊಸ ಧ್ಯೇಯಗಳನ್ನು ಮತ್ತು ಸಾಧನಗಳನ್ನು ಸೂಚಿಸಲೂಬಹುದು. ಇಂತಹ ವ್ಯಕ್ತಿಗಳು ಬಂಡಾಯಗಾರರು ಎನಿಸಿಕೊಳ್ಳುವರು.

ಬಂಡಾಯಗಾರನು ಪ್ರಚಲಿತ ವ್ಯವಸ್ಥೆಯನ್ನು ಬುಡಮೇಲು ಮಾಡಲು ಅಥವಾ ಬದಲಾಯಿಸಲು ಮಾರ್ಪಡಿಸಲು ತಾನು ಪ್ರಯತ್ನಿಸುತ್ತಿರುವುದಾಗಿ ಭಾವಿಸುವನು. ಉದಾಹರಣೆಗೆ, ಕೌಟುಂಬಿಕ ಜೀವನದಲ್ಲಿದ್ದ ವ್ಯಕ್ತಿಯೊಬ್ಬನು ಶೋಷಣೆಗೊಳಗಾದಾಗ ತನಗಾದ ಅನ್ಯಾಯಕ್ಕೆ ಪ್ರತೀಕಾರ ಕೈಗೊಳ್ಳಲು ಹೋರಾಟದ ಮಾರ್ಗಗಳನ್ನು ಹಿಡಿಯುವುದು.

ಆರ್ಯಾಂಬರ 'ಬಂಡಾಯ'ದ ಸುಧಾ ಮದುವೆಯ ಬದುಕಿನ ದುರಂತವನ್ನು ತನ್ನ ಅಕ್ಕನ ಬದುಕಿನಲ್ಲಿ ಕಂಡು ಜೀವನದಲ್ಲಿ ಮದುವೆಯನ್ನೇ ಮುಖ್ಯ ಗುರಿಯನ್ನಾಗಿ ಹೊಂದದೆ ಶಿಕ್ಷಕಿಯಾಗಿ, ಸಮಾಜ ಸೇವಕಿಯಾಗಿ ಹಳ್ಳಿಯಲ್ಲಿ ಮಾದರಿ ಬದುಕನ್ನು ಸಾಗಿಸುವಳು. ಇವಳನ್ನು ಅಲ್ಲಿಯ ಕಾರ್ಮಿಕ ಮುಖಂಡ ಕೇಶವ ಮದುವೆಯಾಗಲು ಇಷ್ಟಪಟ್ಟರೂ ಸಾಂಪ್ರದಾಯಿಕ ಕೌಟುಂಬಿಕ ಬದುಕಿನಿಂದ ದೂರವಾಗಿದ್ದ ಸುಧಾ, ಸಾರ್ವಜನಿಕ ಸೇವೆಯಲ್ಲೇ ತನ್ನ ಬದುಕಿನ ಅರ್ಥಪೂರ್ಣತೆಯನ್ನು ಕಂಡುಕೊಂಡಿದ್ದಳು.

ಅಪವರ್ತನೆ ಅಥವಾ ಅಸಂಗತ ವರ್ತನೆಯು ಅನುವರ್ತನೆಯಷ್ಟೇ ಸಹಜವಾಗಿ ಸಮಾಜದಲ್ಲಿ ಕಂಡುಬರುವುದು. ಸಮಾಜದಲ್ಲಿ ಕೆಲವು ವ್ಯಕ್ತಿಗಳು ಯಾವುದೋ ನಿರ್ದಿಷ್ಟ ನಿಯಮಗಳನ್ನು ಉಲ್ಲಂಘಿಸಬಹುದು ಅಥವಾ ಮತ್ತೆ ಕೆಲವು ಜನರು ಕೆಲವೊಂದು ನಿಯಮಗಳನ್ನು ವಿರೋಧಿಸಬಹುದು. ತ್ರಿವೇಣಿಯವರ 'ಕಂಕಣ'ದ ಸುಶೀಲ, ಆರ್ಯಾಂಬರ 'ಕಪ್ಪು ಬಿಳುಪು'ವಿನ ಚಂದ್ರ.

ಮಗುವಿಗೆ ಸಾಮಾಜಿಕ ಶಿಕ್ಷಣವನ್ನು ನೀಡುವ ಸಂದರ್ಭದಲ್ಲಿ ಆತನ ಸಂಬಂಧಿಕರು ಸರಿಯಾದ ಜವಾಬ್ದಾರಿ ನಿರ್ವಹಿಸದೇ ಇದ್ದಲ್ಲಿ, ಸಾಮಾಜಿಕ ನಿಯಮಗಳ ಪ್ರಾಮುಖ್ಯತೆಯೇ ಅರಿವಾಗದಿರಬಹುದು. ಕೆಲವು ವೇಳೆ ಸಾಮಾಜಿಕ ಶಿಕ್ಷಣವನ್ನು ನಿಡುವವರೇ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಇಲ್ಲದೇ ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ಅಪವರ್ತನೆಗೆ ಬೆಂಬಲ ನೀಡಬಹುದು. ಆರ್ಯಾಂಬರ 'ಪ್ರೇಮಕಥೆ'ಯ ರಾಮದಾಸ.

ಸಾಮಾಜಿಕ ನಿಯಮಗಳನ್ನು ಚಲಾಯಿಸಿ ನಿಯಂತ್ರಣವನ್ನು ಕಾಪಾಡಲು ಬಳಸಲಾಗುವ ಪ್ರತಿಫಲ ಮತ್ತು ಶಿಕ್ಷೆಗಳನ್ನು ನಿರ್ಬಂಧಗಳೆನ್ನಬಹುದು. ಇವು ತೀರಾ ದುರ್ಬಲವಾಗಿದ್ದರೆ ವ್ಯಕ್ತಿಗಳಿಗೆ ಅವುಗಳನ್ನು ಗೌರವಿಸಿ ಅನುಸರಿಸಬೇಕೆಂಬ ಭಾವನೆ ಬಾರದೇ ಹೋಗಬಹುದು. ಆಗ ಅವುಗಳನ್ನು ನಿರ್ಲಕ್ಷಿಸುವ ಇಲ್ಲವೇ ಉಲ್ಲಂಘಿಸಿ ನಡೆಯುವ ಪ್ರವೃತ್ತಿ ಬೆಳೆಯಬಹುದು. ತ್ರಿವೇಣಿಯವರ 'ಸೋತು ಗೆದ್ದವಳು' ಭಾರತಿ.

ಕೆಲವು ಸಂದರ್ಭಗಳಲ್ಲಿ ನಿಯಮಗಳಿಗೆ ಸಂಬಂಧಿಸಿದ ನಿರ್ಬಂಧಗಳು ಶಕ್ತಿಶಾಲಿಯಾಗಿ ಮತ್ತು ಸಮರ್ಥವಾಗಿ ಇದ್ದಿರಬಹುದಾದರೂ ಅವುಗಳನ್ನು ಪರಿಣಾಮಕಾರಿಯಾಗಿ ಹಾಗೂ ಯಶಸ್ವಿಯಾಗಿ ಜಾರಿ ತರುವುದು ಸಾಧ್ಯವಾಗದೇ ಹೋಗಬಹುದು. ಇದರಿಂದ ನಿಯಮಗಳ ತಡೆಗಟ್ಟುವ ಶಕ್ತಿಯು ಕುಂದಿ ಹೋಗಿ ಅಪವರ್ತನೆಗೆ ಅವಕಾಶ ನೀಡಬಹುದು.

ನಿಯಮಗಳನ್ನು ಉಲ್ಲಂಘನೆ ಮಾಡುವವರು ಕೆಲವು ಸಂದರ್ಭಗಳಲ್ಲಿ ಸಯುಕ್ತಿಕ ಕಾರಣಗಳನ್ನು ಸೃಷ್ಟಿಸಿಕೊಂಡು ಅವುಗಳ ಮುಖಾಂತರ ತಮಗೆ ತಾವೇ ಸಮಾಧಾನ ಮಾಡಿಕೊಳ್ಳುವ ಪ್ರಯತ್ನಪಡುತ್ತಾರೆ. ಇಂತಹ ವ್ಯಕ್ತಿಗಳು ಬಹಳ ವಿಚಿತ್ರ ರೀತಿಯ 'ಸ್ವ ಸಂರಕ್ಷಣಾ' ತಂತ್ರವನ್ನು ಬೆಳೆಸಿಕೊಂಡಿದ್ದು, ಇನ್ನೊಬ್ಬರ ಪ್ರತಿಕ್ರಿಯೆಗಳಿಗೆ ಅಥವಾ ಟೀಕೆಗಳಿಗೆ ಕಿವಿಗೊಡದೆ ತಮ್ಮ ಆತ್ಮಸಾಕ್ಷಿಗೆ ತಾವೇ ಸಮಾಧಾನ ತಂದುಕೊಳ್ಳುವರು. ಅವರು ನನ್ನ ಮೇಲೆ ದಾಳಿ ಮಾಡಿದರು ಅದನ್ನು ನಾನಾಗಿಯೇ ಮಾಡಲಿಲ್ಲ. ಆ ಪರಿಸ್ಥಿತಿಯಲ್ಲಿ ಅದು ಈ ಮನೋಭಾವಕ್ಕೆ ತಕ್ಕುದೆನಿಸಿಕೊಳ್ಳುತ್ತದೆ. ತ್ರಿವೇಣಿಯವರ 'ತಾವರೆಕೊಳ'ದ ರಮೇಶ ಹಾಗೂ 'ಸೋತು ಗೆದ್ದವಳು' ಕಾದಂಬರಿಯಲ್ಲಿನ ಚಂದು.

ಒಂದು ವಸ್ತುವಿನ ಬಗ್ಗೆ ವ್ಯಕ್ತಿಯಲ್ಲಿರಬಹುದಾದ ಪರಸ್ಪರ ವಿರೋಧಾತ್ಮಕ ಮನೋಭಾವನೆಗಳನ್ನು ಮಾನಸಿಕ ದ್ವಿರೂಪತೆ ಎನ್ನಬಹುದು. ಉದಾಹರಣೆಗೆ ಒಬ್ಬ ವ್ಯಕ್ತಿಯು ಸ್ತ್ರೀಯನ್ನು ಒಂದು ಮಾನಬಿಂದು ಎಂದು ಮಾತ್ರವಲ್ಲದೆ ಲೈಂಗಿಕ ಪ್ರೀತಿಯ ಒಂದು ವಸ್ತು ಎಂಬುದಾಗಿಯೂ ಪರಿಗಣಿಸಬಹುದು. ಇಂತಹ ಮಾನಸಿಕ ದ್ವಿವಿಧತೆಗೆ ಒಳಗಾದ ವೈದ್ಯನೊಬ್ಬನು ಸುಂದರಳಾದ ತರುಣಿಗೆ ವೈದ್ಯಕೀಯ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಲೈಂಗಿಕ ಅಪರಾಧವನ್ನು ಮಾಡುವ ಸಾಧ್ಯತೆ ಇದೆ. ಹೀಗೆ ಪೋಲೀಸರು, ಅಧ್ಯಾಪಕರು, ದೇವಮಂದಿರದಲ್ಲಿನ ಪುರೋಹಿತ ವರ್ಗ ಅಥವಾ ಧರ್ಮಾಧಿಕಾರಿಗಳು ವಯಸ್ಸಿನಲ್ಲಿ ಹಿರಿಯರು ಕಿರಿಯ ಅಧಿಕಾರಿಗಳು ಮುಂತಾದವರು ತಮ್ಮ ಸಹಚರರೊಂದಿಗೆ ಹಾಗೂ ಸಾರ್ವಜನಿಕರೊಂದಿಗೆ ತೀರಾ ಸನಿಹದಲ್ಲಿ ವ್ಯವಹರಿಸುವ ಅವಕಾಶವಿರುವುದು. ಅವರುಗಳಲ್ಲಿ ಈ ರೀತಿಯ ದ್ವಿರೂಪತೆ ಇರುವುದಾದಲ್ಲಿ ಅದು ಅಪವರ್ತನೆಗೆ ಕಾರಣವಾಗುವ ಸಾಧ್ಯತೆ ಇದೆ. ಆರ್ಯಾಂಬರ 'ಆ ಹಾಡು'ವಿನ ಮುಕುಂದ.

ಅಪವರ್ತನೆಗಳಲ್ಲಿ ತೊಡಗಿರುವ ಗುಂಪಿನೊಂದಿಗೆ ಸೇರಿಕೊಂಡಿರುವ ವ್ಯಕ್ತಿಯು ತನ್ನ ಸಹ ಸದಸ್ಯರ ಒತ್ತಾಯಕ್ಕೆ ಮಣಿದು ತಾನು ಅವರೊಂದಿಗೆ ಭಾಗಿಯಾಗಬಹುದು. ಅಂದರೆ ಗುಂಪಿನ ಇತರ ಸದಸ್ಯರಿಗೆ ದ್ರೋಹ ಬಗೆಯಲಾರದೆ, ಅವರ ಅಸಮ್ಮತಿ ಮತ್ತು ನಿರಾಕರಣೆಯನ್ನು ಎದುರಿಸಲಾಗದೆ ತಾನೂ ಆ ಕೃತ್ಯದಲ್ಲಿ ಪಾಲ್ಗೊಳ್ಳಬಹುದು. ಅಂತಹ ಚಟುವಟಿಕೆಗಳಲ್ಲಿ ನಂಬಿಕೆ ಇಲ್ಲದೆ ಇದ್ದರೂ ಸಮೂಹದ ಬಗ್ಗೆ ತನಗಿರುವ ಭಾವನಾತ್ಮಕ ನಿಷ್ಠೆಯಿಂದಾಗಿ ಆತ ಅವುಗಳಿಗೆ ಪರೋಕ್ಷವಾಗಿಯಾಗಿದ್ದರೂ ಬೆಂಬಲ ನೀಡಬಹುದು. ತ್ರಿವೇಣಿಯವರ 'ತಾವರೆಕೊಳ'ದ ರತ್ನ. 'ಸೋತು ಗೆದ್ದವಳು' ಭಾರತಿ.

ಕೆಲವು ಮೌಲ್ಯಗಳಿಗೆ ಸಂಬಂಧಿಸಿದ ನಿಯಮಗಳು ಸ್ಪಷ್ಟವಾಗಿ ನಿರೂಪಿತವಾಗಿಲ್ಲ. ಉದಾಹರಣೆಗೆ, ಸ್ವಾತಂತ್ರ್ಯ ಮುಂತಾದ ಮೌಲ್ಯಗಳಿಗೆ ಸಂಬಂಧಿಸಿದ ನಿಯಮಗಳು ಸ್ಪಷ್ಟವಾಗಿ ನಿರೂಪಿತವಾಗಿಲ್ಲ. ಇದರಿಂದ ಕೆಲವೊಂದು ಅಪವರ್ತನೆಗಳನ್ನು ಮೌಲ್ಯಗಳ ಹೆಸರಿನಲ್ಲಿ ಸಮರ್ಥಿಸಿಕೊಳ್ಳುವ ಪ್ರಯತ್ನ ನಡೆಯುವುದುಂಟು. ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವೇಚ್ಛಾಚಾರ ನಡೆಯಬಹುದು. ಸಮಾಜವಾದದ ಹೆಸರಿನಲ್ಲಿ ಶ್ರೀಮಂತರ ಶೋಷಣೆಯಾಗಬಹುದು. ಆರ್ಯಾಂಬರ ಕಪ್ಪು ಬಿಳುಪಿನ 'ಚಂದ್ರ' ಮತ್ತು 'ವತ್ಸಲ'

ಕೆಲವು ವೇಳೆ ತಮ್ಮ ನಿಯಮಬಾಹಿರ ನಡವಳಿಕೆಯು ಗೋಪ್ಯವಾಗುಳಿಯಬಹುದೆಂಬ ನಂಬಿಕೆಯಿಂದಲೇ ಬಹುಮಂದಿ ವಿವಿಧ ಅಪವರ್ತನೆಗಳಲ್ಲಿ ಭಾಗಯಾಗುವುದುಂಟು. ಉದಾಹರಣೆಗೆ, ಲೈಂಗಿಕ ಅಪರಾಧಗಳು ರಹಸ್ಯವಾಗುಳಿಯಬಹುದೆಂಬ ನಂಬಿಕೆಯಿಂದಲೇ ಅಂತಹ ಅವರ್ತನೆಯಲ್ಲಿ ತೊಡಗುವುದುಂಟು. 'ಕಂಕಣ'ದ ಸುರೇಶ, 'ಸೋತು ಗೆದ್ದವಳು' ಕಾಂದಬರಿಯಲ್ಲಿನ ಚಂದು.

ಈ ದೃಷ್ಟಿಯಲ್ಲಿ ತ್ರಿವೇಣಿಯವರು ಚಿತ್ರಿಸಿರುವ ಸ್ತ್ರೀಪುರುಷ ಸಂಬಂಧಗಳನ್ನು ವಿಶ್ಲೇಷಿಸಿದಾಗ ಅವರ ಕಾದಂಬರಿಗಳೆಲ್ಲವೂ ಐವತ್ತರ ದಶಕದಲ್ಲಿ ಬರೆಯಲ್ಪಟ್ಟವು ಎಂಬ ಅಂಶವನ್ನು ನೆನಪಿನಲ್ಲಿಡಬೇಕು. ಅಂದಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಔದ್ಯೋಗಿಕರಣ ಆಗ ತಾನೇ ಪ್ರಾರಂಭವಾಗಿತ್ತು ಮತ್ತು ಸ್ತ್ರೀ ಶಿಕ್ಷಣ ಇಂದಿನಷ್ಟು ವ್ಯಾಪಕವಾಗಿರಲಿಲ್ಲ. ಪರಿಣಾಮತಃ ಸ್ವತಂತ್ರ ಉದ್ಯೋಗವೆನ್ನುವುದು ಸ್ತ್ರೀಯೊಬ್ಬಳಿಗೆ ಆಯ್ಕೆಯ ವಿಷಯವೇ ಆಗಿರಲಿಲ್ಲ. ಆದ್ದರಿಂದ ಸ್ವಾತಂತ್ರ್ಯೋತ್ತರ ಯುಗದ ಮೊದಲನೆಯ ದಶಕದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಮತ್ತು ಪಾಶ್ಚಾತ್ಯ ಜೀವನ ವಿಧಾನಗಳಾದ ವಿವಾಹ ವಿಚ್ಛೇದನ, ಸ್ತ್ರೀಯರಿಗೆ ಸ್ವತಂತ್ರ ವೃತ್ತಿ ವಿವಾಹಪೂರ್ವ ಹಾಗೂ ವಿವಾಹೇತರ ಲೈಂಗಿಕ ಸಂಬಂಧ ಮುಂತಾದವುಗಳನ್ನು ವಸಾಹತುಶಾಹಿಯ ಚಿಹ್ನೆಗಳಂತೆ ನೋಡುವುದು ತ್ರಿವೇಣಿಯವರಂತಹ ಅಂದಿನ ಅನೇಕ ಲೇಖಕರಿಗೆ ಸಹಜವಾಗಿತ್ತು.

ಅವರೆಲ್ಲರೂ ಭಾರತೀಯ ಸಮಾಜದಲ್ಲಿ ನಿಜವಾಗಿ ಭಾರತೀಯವೆನ್ನಬಹುದಾದ ಏನನ್ನಾದರೂ ಗುರುತಿಸಲು ಮತ್ತು ಅವುಗಳನ್ನು ಪ್ರತಿಪಾದಿಸಲು ಶ್ರಮಿಸುತ್ತಿದ್ದರು. ಈ ದಿಕ್ಕಿನಲ್ಲಿ ಪಾಶ್ಚಾತ್ಯ ಸಮಾಜಗಳಲ್ಲಿ ಶಿಥಿಲವಾಗುತ್ತಿದ್ದ ಕುಟುಂಬ ವ್ಯವಸ್ಥೆ ತ್ರಿವೇಣಿಯವರಂತಹ ಅಂದಿನ ಲೇಖಕರಿಗೆ ಆರ್ಷೇಯವಾಗಿಯೂ ಅಪೇಕ್ಷಣೀಯವಾಗಿಯೂ ಕಂಡು ಬಂದುದರಲ್ಲಿ ಆಶ್ಚರ್ಯವೇನಿಲ್ಲ.

ಅಪಕ್ವವಾದ ಮಾನವ ಪರಿಪಕ್ವವಾಗಿ ಹೇಗೆ ರೂಪಾಂತರಗೊಳ್ಳುತ್ತಾನೆ ಹಾಗೂ ಸಮಾಜದಲ್ಲಿ ಒಬ್ಬ ವ್ಯಕ್ತಿಯಾಗಿ ಹೇಗೆ ಮಾರ್ಪಾಡಾಗುತ್ತಾನೆ ಎಂಬುದು ಎಲ್ಲ ಸಮಾಜಗಳಲ್ಲೂ ಎದುರಾಗುವ ಪ್ರಶ್ನೆ. ಮಾನವ ಜೀವಿಯು ಇತರೆ ಎಲ್ಲಾ ಪ್ರಾಣಿಗಳಂತೆ ಕೇವಲ ಜೀವಿಯಾಗಿ ಈ ಪ್ರಪಂಚಕ್ಕೆ ಬರುತ್ತಾನೆ. ಮಗು ಹುಟ್ಟಿದ ಕ್ಷಣದಿಂದಲೇ ಸಮಾಜದ ಯಾವ ಚಟುವಟಿಕೆಗಳಲ್ಲೂ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಕಾಲಕ್ರಮೇಣ ಈತ ಬೆಳೆದು ಸಾಮಾಜಿಕ ವ್ಯಕ್ತಿಯಾಗಿ ರೂಪುಗೊಳ್ಳುತ್ತಾನೆ ಮತ್ತು ನಿರಂತರ ತರಬೇತಿಯಿಂದ ಸಮಾಜದ ವ್ಯಕ್ತಿಯಾಗುತ್ತಾನೆ. ತನ್ನ ಎಲ್ಲಾ ಮಾನಸಿಕ ದೈಹಿಕ ಚಟುವಟಿಕೆಗಳನ್ನು ನಿಯಂತ್ರಿಸಿ ನಿರ್ಧರಿಸುವ ಮೂಲಕ ಸಮಾಜದ ಅವಿಭಾಜ್ಯ ಅಂಗವಾಗಿ ಬೆಳೆಯುತ್ತಾನೆ. ನಂತರದಲ್ಲಿ ಸಮಾಜದ ಅಂಗವಾಗಿ ರೂಪುಗೊಂಡು ಸಮಾಜದ ರೀತಿ, ನೆಲೆ, ನಿಯಮಗಳಿಗೆ ಅನುಸಾರವಾಗಿ ವ್ಯಕ್ತಿಯ ಬೆಳವಣಿಗೆಯಾಗುತ್ತದೆ.

ಮಾನವ ಜೀವಿಯಾಗಿ ಅಥವಾ ವ್ಯಕ್ತಿಯಾಗಿ ಕ್ರಮೇಣ ಸಾಮಾಜಿಕ ಜೀವಿಯಾಗುವ ಕ್ರಿಯೆಯೇ ಸಾಮಾಜೀಕರಣ. ಸಾಮಾಜಿಕ ನಿಯಮಗಳನ್ನು ಅರಿತು ಅದರಂತೆ ನಡೆಯುವುದೇ ಸಾಮಾಜೀಕರಣವಾಗಿದೆ ಎಂದು ಹೇಳಬಹುದು ಅಥವಾ ನವಜಾತ ಶಿಶುವಿಗೆ ಸಮಾಜದ ಸಂಸ್ಕೃತಿ, ನೀತಿ, ನಿಯಮಗಳನ್ನು ಪರಿಚಯಿಸುವ ಸಾಮಾಜಿಕ ವ್ಯವಸ್ಥೆಯನ್ನು ಸಾಮಾಜೀಕರಣ ಎಂದು ಕರೆಯಲಾಗಿದೆ.

ಮಾನವ ಸಾಮಾಜಿಕ ಜೀವಿ ಮಾತ್ರವಾಗಿರದೆ ಸುಸಂಸ್ಕೃತ ಜೀವಿಯೂ ಆಗಿದ್ದಾನೆ. ವ್ಯಕ್ತಿಯ ಬೆಳವಣಿಗೆಯಲ್ಲಿ ಸಂಸ್ಕೃತಿಯು ಬಹಳ ಪ್ರಭಾವ ಬೀರುತ್ತದೆ. ಪ್ರತಿಯೊಂದು ಸಮಾಜವು ನವಜಾತ ಶಿಶುವಿನ ಬೆಳವಣಿಗೆಗಾಗಿ ತನ್ನದೇ ಆದ ನೀತಿ, ನಿಯಮಗಳನ್ನು ರೂಪಿಸಿರುತ್ತದೆ. ಅದರಂತೆ ವ್ಯಕ್ತಿಯು ತರಬೇತಿಗೊಳ್ಳುತ್ತಾನೆ. ಈ ಒಂದು ಪ್ರಕ್ರಿಯೆಯನ್ನು ಸಾಮಾಜೀಕರಣ ಎಂದು ಕರೆಯುತ್ತಾರೆ. "ಯಾವುದೇ ವ್ಯಕ್ತಿತ್ವವನ್ನು ಸಮಾಜದ ನಿಯಮಗಳಿಗೆ ಅನುಗುಣವಾಗಿ ಹೊಂದಿಕೊಂಡು ಹೋಗುವಂತೆ ತರಬೇತಿ ನೀಡಿ ಪರಿವರ್ತಿಸುವ ಕ್ರಿಯೆಯೇ ಸಾಮಾಜೀಕರಣ".[೧೩]

ಪು. ೧೫೩

ಯಾವುದೇ ಮಗುವು ಹುಟ್ಟುವಾಗಲೇ ವ್ಯಕ್ತಿತ್ವವನ್ನು ಪಡೆದುಕೊಂಡಿರುವುದಿಲ್ಲ. ವ್ಯಕ್ತಿತ್ವವು ಸಾಮಾಜೀಕರಣದಿಂದ ರೂಪುಗೊಳ್ಳುವಂತದ್ದು, ಸಾಮಾಜಿಕ ನಿಯಮಗಳೆಂದರೆ ಸಮೂಹದ ಸದಸ್ಯರು ಯಾವುದೇ ಗ್ರಹಿಕೆಯ ಮೌಲ್ಯತೆಯ ಬಗ್ಗೆ ತೀರ್ಮಾನಿಸಿದ ಮತ್ತು ಭಾವನೆ ಹಾಗೂ ವರ್ತನೆಯ ಸಮಂಜಸತೆಯ ಬಗ್ಗೆ ಮೌಲ್ಯಮಾಪನ ಮಾಡಿದ ವರ್ತನೆಯ ನಿರೀಕ್ಷೆಗೆ ಸಾಮಾಜಿಕ ನಿಯಮ ಎನ್ನುತ್ತೇವೆ.

ಸಾಮಾಜಿಕ ನಿಯಮಗಳು ವ್ಯಕ್ತಿಗಳಲ್ಲಿ ಅಂತರೀಕರಣಗೊಂಡಿರುತ್ತದೆ. ಸಾಮಾಜಿಕ ನಿಯಮಗಳು ಒಂದೇ ತೆರನಾಗಿರದೆ ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತದೆ. ಅಲ್ಲದೆ ಜಾತಿ, ಧರ್ಮ ಮತ್ತು ಸಾಮಾಜಿಕ ವರ್ಗಗಳಿಗೆ ಅನುಗುಣವಾಗಿ ಬೇರೆಯೇ ಆಗಿರುತ್ತದೆ. ಸಾಮಾನ್ಯವಾಗಿ ಸಮಾಜದ ನಿಯಮಗಳನ್ನು ಸಾಮಾಜಿಕ ನಿಯಮಗಳು ಎನ್ನುತ್ತೇವೆ. ಸಾಮಾಜಿಕ ನಿಯಮಗಳನ್ನು ಅನುಸರಿಸಿ ನಡೆಯುವವರಿಗೆ ಮನ್ನಣೆ ಗೌರವಗಳು ದೊರೆಯುತ್ತವೆ. ಉಲ್ಲಂಘಿಸಿದವರು ಶಿಕ್ಷೆಗೆ ಗುರಿಯಾಗುತ್ತಾರೆ. ಸರಿ, ತಪ್ಪು ಮನ್ನಣೆ, ಮತ್ತು ತಿರಸ್ಕಾರದ ಅರಿವಿನಿಂದಾಗಿ ವ್ಯಕ್ತಿಯು ಸಾಮಾಜಿಕ ನಿಯಮಗಳನ್ನು ಅಂತರ್ಗತಗೊಳಿಸಿಕೊಳ್ಳುತ್ತಾನೆ.

ವ್ಯಕ್ತಿಯು ತನ್ನ ಒಡನಾಟದಿಂದ ಸಮಾಜದ ಜ್ಞಾನವನ್ನು ಕಲ್ಪಿಸಿಕೊಂಡು ಊಹಿಸುವ ಸಾಮರ್ಥ್ಯವನ್ನು ಹೊಂದುತ್ತಾನೆ. ಇದರಿಂದ ಸಾಮಾಜಿಕ ನಿಯಮಗಳನ್ನು ಅಂತರೀಕರಣಗೊಳಿಸಿಕೊಳ್ಳುವ ಶಕ್ತಿ ವೃದ್ಧಿಯಾಗುತ್ತದೆ. ಹೀಗೆ ವ್ಯಕ್ತಿಗಳು ಸಮಾಜದಲ್ಲಿನ ಸಾಮಾಜಿಕ ನಿಯಮಗಳನ್ನು ತಮ್ಮ ವರ್ತನೆಯಲ್ಲಿ ಮೈಗೂಡಿಸಿಕೊಳ್ಳುತ್ತಾರೆ. ಈ ಕ್ರಿಯೆಯಿಂದ ಅವರಲ್ಲಿ ಸ್ವಯಂ ಅಥವಾ ಸ್ವ ಪ್ರಜ್ಞೆ ಬೆಳೆಯಲು ಸಹಕಾರಿಯಾಗುತ್ತದೆ.

ಸಾಮಾಜೀಕರಣವಾದ ಬಹುಪ್ರಮುಖವಾದ ಭಾಗವೆಂದರೆ 'ಸ್ವ' ಪ್ರಜ್ಞೆಯ ಬೆಳವಣಿಗೆ ಮಗು ಹುಟ್ಟಿದಾಗ ತನ್ನ ಅಥವಾ ಇತರರ ಬಗ್ಗೆ ಯಾವುದೇ ರೀತಿಯ ಅರಿವನ್ನು ಹೊಂದಿರಲಾರದು. ಆದರೆ ಕಾಲಕ್ರಮೇಣ ತನ್ನ ಮತ್ತು ಬಾಹ್ಯವಸ್ತುಗಳೊಂದಿಗಿನ ಕಲ್ಪನೆಗಳನ್ನು ಅರಿತು ಸ್ವ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತದೆ. ಸ್ವಪ್ರಜ್ಞೆ ಎಂಬ ಪದವನ್ನು ಸ್ವಂತ ಕಲ್ಪನೆ ಅಥವಾ ಸ್ವಂತ ಪ್ರತಿಮೆ ಎಂಬ ಅರ್ಥದಲ್ಲಿ ಬಳಸುತ್ತಾರೆ. ಸಾಮಾಜೀಕರಣದಲ್ಲಿ ಬಹು ಪ್ರಮುಖವಾದ ವಸ್ತುಗಳೆಂದರೆ ಸಾಮಾಜಿಕ ಪಾತ್ರಗಳು. ಉದಾಹರಣೆಗೆ ಮಗು ತನ್ನ ಅವಶ್ಯಕತೆಗಳಿಗಾಗಿ ಅತ್ತಾಗ ತಾಯಿ ಅದರ ಬೇಡಿಕೆಗಳನ್ನು ಈಡೇರಿಸಲು ಹಾಲು ಅಥವಾ ಇತರ ವಸ್ತುಗಳೊಂದಿಗೆ ಸಾಂತ್ವನಗೊಳಿಸುತ್ತಾಳೆ. ಹೀಗೆ ತಾಯಿಯ ಪಾತ್ರವು ಅಂತರ್ಗತವಾಗಿ ಇತರ ವಸ್ತುಗಳಂತೆಯೇ ಇರುತ್ತವೆ.

ಪಾತ್ರವೆಂಬುದು ವ್ಯಕ್ತಿತ್ವದ ಒಂದು ಭಾಗವಾಗಿದ್ದು, ಸಾಮಾಜಿಕ ನಿಯಮಗಳಿಂದ ಕೂಡಿರುವುದು. ಸಾಮಾಜಿಕ ನಿಯಮಗಳ ಅಂತರೀಕರಣ ಎಂಬುದು ವ್ಯಕ್ತಿತ್ವದ ಒಂದು ಭಾಗವಾಗುತ್ತದೆ. ಮಗು ತಾನು ಬೆಳೆದಂತೆ ಸಾಮಾಜಿಕ ನಿಯಮಗಳು ಕೂಡ ಬೆಳೆದು ತನ್ನ ಪಾತ್ರವನ್ನು ನಿರ್ವಹಿಸುತ್ತಾನೆ. ಈ ನಿಯಮಗಳು ಮಗುವಿನ ಸುತ್ತ ಹೆಣೆದುಕೊಂಡು ಅಂತರ್ಗತವಾಗುತ್ತದೆ. "ಒಮ್ಮೆ ಅಂತರ್ಗತವಾದ ನಿಯಮಗಳನ್ನು ವ್ಯಕ್ತಿತ್ವದಿಂದ ಬೇರ್ಪಡಿಸಲು ಸಾಧ್ಯವಾಗದೆ ವ್ಯಕ್ತಿತ್ವದ ಒಂದು ಭಾಗವಾಗಿ ಪರಿವರ್ತಿಸಿ ಕಾಲಾನುಕ್ರಮದಲ್ಲಿ ಅವು ರೂಢಿಯಾಗಿ ದಿನನಿತ್ಯದ ಕಾರ್ಯಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಹೀಗೆ 'ಸ್ವಯಂ' ಬೆಳವಣಿಗೆಯಾಗುತ್ತದೆ".[೧೪]

ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ತಾನು ಅಥವಾ ಅಹಂ ಎಂಬುದು ವ್ಯಕ್ತಿಯಲ್ಲಿ ನಿಧಾನವಾಗಿ ಬೆಳೆಯುತ್ತಾ ಹೋಗುತ್ತದೆ. ಸಮಾಜದಲ್ಲಿ ಜೀವಂತವಾಗಿರುವ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ತಾನು ಎಂಬುವ ಪ್ರಜ್ಞೆ ಖಂಡಿತವಾಗಿ ಇರುತ್ತದೆ. ಈ ಕಾರಣದಿಂದಲೇ ವ್ಯಕ್ತಿಯು ಮಾನವನಾಗಿ ವರ್ತಿಸಲು ಸಾಧ್ಯ. ಜೊತೆಗೆ ವ್ಯಕ್ತಿಯು ಕ್ರಮೇಣವಾಗಿ ರೂಪುಗೊಂಡು ಸಮಾಜದ ಕ್ರಿಯೆಗೆ ತಕ್ಕಂತೆ ವರ್ತಿಸುತ್ತಾನೆ.

ಸಾಮಾಜೀಕರಣದಲ್ಲಿ ಪಾತ್ರ ನಿರ್ವಹಣೆಯು ಬಹಳ ಮುಖ್ಯವಾದ ಅಂಶವಾಗಿದೆ. ಸಾಮಾಜೀಕರಣದಲ್ಲಿ ಸಾಮಾಜಿಕ ಪಾತ್ರಗಳು ಅಂತರ್ಗತವಾಗಿ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಗಿ ನಿಲ್ಲುತ್ತದೆ. ಸಾಮಾಜಿಕ ಸಮೂಹದಲ್ಲಿ ಜನಿಸಿದ ಮಗುವೊಂದು ಆ ಸಮೂಹದ ಸದಸ್ಯನಾಗಿ ಬೆಳೆಯುವುದರೊಂದಿಗೆ ಮಗನಾಗಿಯೋ ಅಥವಾ ಮಗಳಾಗಿಯೋ ತನ್ನ ಸ್ಥಾನವನ್ನು ಹೊಂದುತ್ತಾನೆ. ಈ ಪಾತ್ರವು ಅವನ ವ್ಯಕ್ತಿತ್ವದ ಅಂಗವಾಗಿರುತ್ತದೆ. ಮಾತ್ರವಲ್ಲದೆ ಆ ಪಾತ್ರವು ಸಾಮಾಜಿಕ ನಿಯಮಗಳಿಂದ ನಿಗಧಿತದ್ದಾಗಿರುತ್ತದೆ. ಪಾತ್ರ ನಿರ್ವಹಣೆಯು ಬಹಳ ಸಂಕೀರ್ಣತೆಯಿಂದ ಕೂಡಿದ್ದಾಗಿರುತ್ತದೆ. ಏಕೆಂದರೆ ವ್ಯಕ್ತಿಯು ಅನೇಕ ಸಂದರ್ಭದಲ್ಲಿ ಅನೇಕ ಪಾತ್ರವನ್ನು ನಿರ್ವಹಿಸುತ್ತಿರುವುದರಿಂದ ಆ ಪಾತ್ರವು ನಿಗಧಿತ ಸ್ಥಳ ಮತ್ತು ವ್ಯಕ್ತಿಗೆ ಸಂಬಂಧಿಸಿದ್ದಾಗಿರುತ್ತದೆ.

ಉದಾಹರಣೆಗೆ, ಒಂದು ಮಗುವಿನ ನಡತೆಯು ಆತನ ತಂದೆ ತಾಯಿಗಳೊಂದಿಗೆ ಮತ್ತು ಸ್ನೇಹಿತ ಅಥವಾ ಅಕ್ಕ ತಂಗಿಯರ ನಡತೆಯೊಂದಿಗೆ ಭಿನ್ನವಾಗಿರುತ್ತದೆ. ಪಾತ್ರನಿರ್ವಹಣೆಗೆ ಒಂದೇ ಕಾಲದಲ್ಲಿರಬೇಕೆಂಬ ನಿಯಮವೇನಿಲ್ಲ ಅಥವಾ ಒಂದಾದ ನಂತರ ಮತ್ತೊಂದು ಪಾತ್ರವನ್ನು ನಿರ್ವಹಿಸುತ್ತಿರಬಹುದು. ಅಥವಾ ಏಕಕಾಲದಲ್ಲಿ ಎಲ್ಲಾ ಪಾತ್ರಗಳನ್ನು ನಿರ್ವಹಿಸುತ್ತಲೂ ಇರಬಹುದು. ಒಮ್ಮೆ ಪಾತ್ರದ ಅರಿವು ಅವನಿಗೆ ಮನದಟ್ಟಾದಲ್ಲಿ ಮತ್ತು ಸಂಪೂರ್ಣ ಜ್ಞಾನವಿದ್ದಲ್ಲಿ ಮಾತ್ರ, ಪಾತ್ರ ನಿರ್ವಹಣೆ ಉಪಯುಕ್ತವಾಗುತ್ತದೆ.

ಸಾಮಾಜಿಕ ಸಮೂಹ ಮತ್ತು ಕುಟುಂಬದಲ್ಲಿನ ಸದಸ್ಯರನ್ನು ಅವಲೋಕಿಸಿ ವ್ಯಕ್ತಿಯು ಪಾತ್ರ ನಿರ್ವಹಣೆಯನ್ನು ಕಲಿಯುತ್ತಾನೆ. ನಂತರದಲ್ಲಿ ತನ್ನ ಪಾತ್ರವನ್ನು ಇತರರ ಪಾತ್ರಗಳೊಂದಿಗೆ ಬೇರ್ಪಡಿಸಿ ಅಥವಾ ಇತರರ ಸಂಪರ್ಕ ಮತ್ತು ಸಾಮಾಜಿಕ ಅಂತರ ಕ್ರಿಯೆ ಹಾಗೂ ತನ್ನ ಅನುಭವದೊಂದಿಗೆ ಪಾತ್ರಗಳ ಮಹತ್ವವನ್ನು ಅರಿಯುತ್ತಾನೆ. ಹೀಗೆ ಅನೇಕ ಸಂದರ್ಭಗಳಲ್ಲಿ ಪುರಸ್ಕಾರ ಮತ್ತು ಶಿಕ್ಷೆಯ ಮುಖಾಂತರ ಪಾತ್ರನಿರ್ವಹಣೆಯು ಸಾಧ್ಯವಾಗುತ್ತದೆ.

ತ್ರಿವೇಣಿಯವರ 'ಹೂವುಹಣ್ಣು' ಕಾದಂಬರಿಯಲ್ಲಿ ಬರುವ ರಮೆಯ ಪಾತ್ರವು ಒಂದು ಅಸಹಾಯಕ ಹೆಣ್ಣಿನ ಚಿತ್ರಣ. ಜೀವನದಲ್ಲಿ ಅವಳು ಶೀಲವತಿಯಾಗಿ ಬಾಳಲು ಬಯಸಿದರೆ, ಇದಕ್ಕೆ ವಿರುದ್ಧವಾದುದನ್ನೇ ಅವಳ ಸುತ್ತಲಿನ ಸಮಾಜವು ವಿಧಿಸುತ್ತದೆ. ಜೀವನ ನಿರ್ವಹಣೆಯು ತೀರ ಅಸಹನೀಯವಾದಾಗ ಇವಳು ಅನಿವಾರ್ಯವಾಗಿ ಅನೀತಿಯ ಜೀವನಕ್ಕೆ ಕಾಲಿರಿಸುತ್ತಾಳೆ. ತನ್ನ ಒಬ್ಬಳೇ ಮಗಳ ಶ್ರೇಯಸ್ಸಿಗಾಗಿ ಇವಳು ಅನೇಕ ಕಷ್ಟಗಳನ್ನೆದುರಿಸಿದ ಚಿತ್ರಣವು ಕೃತಿಯಲ್ಲಿ ಅಡಕವಾಗಿದ್ದರೂ, ಅವುಗಳಾವುವು ಇವಳ ಪಾತ್ರದ ಪೋಷಣೆಗೆ ಸಹಕಾರಿಯಾಗಿ ಬೆಳೆದು ಬಂದಿಲ್ಲ. ಆದರೆ ಸಮಾಜದ ಜನತೆಯ ಸ್ವಾರ್ಥಕ್ಕೆ ಸಿಕ್ಕಿ ಜೀವನದಲ್ಲಿ ನೋವನ್ನೆದುರಿಸಿದ ಅಸಹಾಯಕ ಹೆಣ್ಣು ರಮೆಯ ದೈನ್ಯದೃಷ್ಟಿಯ ಚಿತ್ರವು ಮಾತ್ರ ಓದುಗನ ಆಂತರ್ಯದಲ್ಲಿ ಕೆಲವು ಕಾಲವಾದರೂ ನಿಲ್ಲಬಲ್ಲ ಸಾಮರ್ಥ್ಯ ಗಳಿಸಿದೆ.

'ಸೋತು ಗೆದ್ದವಳು' ಕಾದಂಬರಿಯ ಭಾರತಿ ಗಂಡನು ಇಂಗ್ಲೆಂಡಿನಲ್ಲಿದ್ದಾಗ ಮನೆಗೆ ಬಂದ ಚಂದುವನ್ನು ಭಾರತಿಯು ಮೊದಲೆರಡು ದಿನಗಳು ತಾತ್ಸಾರವಾಗಿಯೇ ಕಾಣುತ್ತಾಳೆ. ಆದರೆ ದಿನಕಳೆದಂತೆ ಅವಳಿಗೆ ಅವನ ಬಗ್ಗೆ ಆಸಕ್ತಿಯುಂಟಾಗಿ, ಅವನ ಸಾಮಿಪ್ಯ ಬಯಸುವ ಮನೋಭಾವ ಉಂಟಾಗಲು ಅವಕಾಶವಾಯಿತೆಂದು ಸೂಚಿಸಿದ್ದಾರೆ. ಯಾರ ಬಯಕೆಯನ್ನೂ ಯಾವ ಸಮಾಜದ ಕಟ್ಟು ಕಟ್ಟಳೆಯೂ ಪ್ರತಿಬಂಧಿಸಲಾರದು.

ಶೀಲಸಂರಕ್ಷಣೆಯ ವಿಚಾರದಲ್ಲಿ ತನ್ನ ಸ್ವಯಂ ನಿರ್ಧಾರಕ್ಕೆ ವಿರುದ್ಧವಾಗಿ ಯಾವ ವ್ಯಕ್ತಿಯೂ ವ್ಯವಹರಿಸಲು ಸಾಧ್ಯವಿಲ್ಲ. ವ್ಯಕ್ತಿಯ ಅಂತಃಶಕ್ತಿಯು ದುರ್ಬಲಗೊಂಡು ಅದು ಸುಲಭವಾಗಿ ಸೋಲನ್ನನುಭವಿಸಿದಾಗ, ಅಂಥ ವ್ಯಕ್ತಿಯ ಶ್ರೇಷ್ಠತೆಯೂ ಕುಸಿಯುವುದು ಸಾಮಾನ್ಯವಾದ ಅಂಶ. ಕತೆಯ ಕ್ರಿಯೆಯನ್ನೂ ಸಂಕೇತಿಸುವಂತೆ, ಕತೆಯ ಒಟ್ಟು ಪರಿಣಾಮದ ದೃಷ್ಟಿಯಿಂದ 'ಸೋತು ಗೆದ್ದಿದ್ದ'ರೂ ಭಾರತೀಯ ಪಾತ್ರ ವಿಶ್ಲೇಷಣೆ ಹಾಗೂ ಬೆಳವಣಿಗೆಯನ್ನೇ ಗಮನಿಸಿದರೆ ಸೋತು ಗೆದ್ದಿರುವ ಅಂಶ ಗಮನಾರ್ಹವಲ್ಲ.

ನಿತ್ಯ ಜೀವನದ ಸಹಜ ಸನ್ನಿವೇಶಕ್ಕೆ ಅನುಗುಣವಾಗಿ ಚಿತ್ರಿತವಾಗಿರುವ 'ಅವಳ ಮನೆ'ಯ ಸರೋಜಿನಿಯ ಪಾತ್ರವು ಯಶಸ್ವೀ ಪಾತ್ರ ಚಿತ್ರಣಗಳ ಪೈಕಿ ಒಂದೆನಿಸಿದೆ. ಹುಟ್ಟಿದ ಮನೆಯ ದಾರಿದ್ರ್ಯದಿಂದ ದೂರವಾಗಿ ಸಾಕಿದ ಮನೆಯ ಶ್ರೀಮಂತಿಕೆಯನ್ನು ಸೇರಿದರೂ, ಇವಳ ಹೃದಯದಲ್ಲಿ ಮನೆ ಮಾಡಿದ್ದ ಅನ್ಯ ಭಾವನೆಯು ದೂರವಾಗಲು ಸಾಧ್ಯವೇ ಇರುವುದಿಲ್ಲ. ಇದರೊಂದಿಗೆ ಹೆತ್ತ ತಂದೆತಾಯಿಗಳ ನಿಷ್ಠುರದ ನುಡಿಗಳು ಬೇರೆ ಇವಳ ಆಂತರ್ಯವನ್ನು ಕುಕ್ಕುತ್ತಿರುತ್ತವೆ. ಸಾಕು ತಂದೆ ರಾಮಸ್ವಾಮಯ್ಯನ ವಿಚಿತ್ರ ವರ್ತನೆಯು ಬೇಸರ ತರಿಸಿದಾಗ, ತನಗೆ ಆಸರೆಯಾಗಬಹುದಾದ ಮಾಧವನೊಂದಿಗೆ ಬೆರೆತು ತನ್ನದೇ ಆದ ಮನೆಯನ್ನು ಹೊಂದುವುದಕ್ಕೆ ಪ್ರಯತ್ನಿಸುವ ಸರೋಜಿನಿಯ ಪಾತ್ರಚಿತ್ರಣವು ಹೃದಯಸ್ಪರ್ಶಿಯಾಗಿ ರೂಪುಗೊಂಡಿದೆ.

ತನ್ನಲ್ಲಿ ಮಾತೃವಾತ್ಸಲ್ಯವನ್ನಿರಿಸಿದ್ದ ಅತ್ತಿಗೆಯು ಅಕಾಲ ಮೃತ್ಯುವಿಗೆ ತುತ್ತಾದಾಗ ಜೀವನದಲ್ಲಿ ಆಸಕ್ತಿಯನ್ನೇ ಕಳೆದುಕೊಂಡು ಅರೆ ಹುಚ್ಚನಂತೆ ವರ್ತಿಸುವ 'ತಾವರೆಕೊಳ'ದ ರಮೇಶನ ಪಾತ್ರ ಚಿತ್ರಣವು ಸಹಜವಾಗಿ ಕಾಣದಿದ್ದರೂ, ಸಮಯ ಸನ್ನಿವೇಶಗಳು ಅನುಕೂಲವಾದಾಗ ಸ್ತ್ರೀ ಸಹಜವಾದ ಭಾವನೆಗೆ ಬಲಿ ಬಿದ್ದು ಇವನಲ್ಲಿ ಅನುರಕ್ತಳಾಗುವ ರತ್ನಳ ಪಾತ್ರವು ಮಾತ್ರ ಕತೆಯ ಯಶಸ್ಸನ್ನೂ ಮೀರಿ ಓದುಗನ ಆಂತರ್ಯದಲ್ಲಿ ಪರಿಣಾಮ ಬೀರಬಲ್ಲ ಸಾಮರ್ಥ್ಯಗಳಿಸಿದೆ.

ರಾಜಗೋಪಾಲನನ್ನು ಪ್ರೀತಿಸಿ ವಾಸುವಿನ ಮಡದಿಯಾದ ಸರಳೆ ವಾಸುವಿನಿಂದ ನಿರಾಕೃತಳಾಗಿ ರಾಜಗೋಪಾಲನ ಕೈ ಹಿಡಿಯುವ ಅರುಂಧತಿ ಈ ನಾಲ್ಕು ಪಾತ್ರಗಳಿರುವ 'ವಸಂತಗಾನ' ಜೀವನದಲ್ಲಿ ಸಹಜವಾಗಿ ಸಂಭವಿಸುವ ಸನ್ನಿವೇಶಗಳಿಗೆ ಅಪಾರ್ಥ ಕಲ್ಪಿಸಿಕೊಂಡು ಅಸಮಾಧಾನಕ್ಕೊಳಗಾಗುವ ವಾಸು ಹಾಗೂ ಸರಳೆಯ ಪಾತ್ರಗಳು ಸಹಜವಾದ ಬೆಳವಣಿಗೆಯಿಂದ ಸ್ಮೃತಿಪಟಲದಲ್ಲಿ ಉಳಿಯುವ ಅರ್ಹತೆಗಳಿಸಿದೆ. ಅನಗತ್ಯವಾದ ಸನ್ನಿವೇಶಗಳಲ್ಲಿ ಅರ್ಥಹೀನವಾದ ವ್ಯಕ್ತಿ ಸ್ವಾತಂತ್ರ್ಯವನ್ನು ಅಪೇಕ್ಷಿಸಿ ಬಾಳಿನಲ್ಲಿ ನೋವನ್ನನುಭವಿಸಿ, ಬುದ್ಧಿ ಕಲಿತ ಕಲ್ಯಾಣಿಯ ಪಾತ್ರ ಚಿತ್ರಣವಿರುವ 'ಬಾನುಬೆಳಗಿತು'.

ಅಲ್ಪಸ್ವಲ್ಪ ಅಸಹಜತೆಯಿಂದ ಕೂಡಿದ್ದರೂ ತಿಳಿಹಾಸ್ಯದ ಹೊರಲೇಪನದಿಂದ ರೂಪುಗೊಂಡಿರುವ ರಾಯರ ಪಾತ್ರ ಸಂಸಾರದ ನೆಮ್ಮದಿಗಾಗಿ ತನ್ನ ಸ್ವಸುಖದ ಹಂಬಲವನ್ನು ತ್ಯಜಿಸಲು ಸಿದ್ಧಳಾದ 'ಮಾಲತಿ' ಪಾತ್ರ ಇರುವ 'ಹಣ್ಣೆಲೆ ಚಿಗುರಿದಾಗ'

ಆರ್ಯಾಂಬರ ಸ್ತ್ರೀ ಪುರುಷ ಸಂಬಂಧಗಳ ವಿಶ್ಲೇಷಣೆ ಮಾಡುವ ಕಾದಂಬರಿ 'ಪ್ರಕೃತಿ ಪುರುಷ' ಕುತೂಹಲದಿಂದ ಹೋಗುವ ಗುಣ ಪಡೆದು ಸಾಮಾಜಿಕ ಹಾಗೂ ಮನೋವೈಜ್ಞಾನಿಕ ನೆಲೆಯಲ್ಲಿ ಬರುವ ಪಾತ್ರಗಳಾದ ಮಂಗಳಾ, ಕಮಲ, ಲಕ್ಷ್ಮಿ, ರಾಜಶೇಖರಯ್ಯ, ಶಾಮಣ್ಣ. ತನ್ನ ಉದಾತ್ತತೆ, ವೃತ್ತಿಪರತೆ, ಕಷ್ಟಸಹಿಷ್ಣುತೆ, ಸಾಮಾನ್ಯರಲ್ಲಿ ಒಂದಾಗುವ ಮನಸ್ಥಿತಿಯಿಂದಾಗಿ ಬಡಹುಡುಗಿಯಾದ ಗೌರಿಯನ್ನು ವರಿಸುವುದರ ಮುಖಾಂತರ 'ಪತಿತಪಾವನ' ನಾಗುವ ಆನಂದ.

ಮುಸ್ಸಂಜೆಯ ಸಮಯದಲ್ಲಿ ಭವಾನಿಯನ್ನು ಮದುವೆಯಾಗುವ ಭಾಸ್ಕರ 'ಸಂಬಂಧಗಳು' ಕಸ್ತೂರಿಯ ಕುಟುಂಬಕ್ಕೆ ಎಲ್ಲಾ ರೀತಿಯ ನೆರವನ್ನು ನೀಡುತ್ತಾ, ಪ್ರತಿಫಲವಾಗಿ ಕಸ್ತೂರಿಯನ್ನು ವರಿಸಲು ಕೇಳಿದರೂ ಶಿವಸ್ವಾಮಿಯ ಮೇಲಿರಿಸಿದ ಕಸ್ತೂರಿಯ ಪ್ರೇಮದ ಬಗ್ಗೆ ತಿಳಿದು ಬಿಟ್ಟುಕೊಡಲು ಮುಂದಾಗುವ ಅವಳೇ ಒಲಿದು ಬಂದಾಗ ಸ್ವೀಕರಿಸುವ ಮನೋಭಾವ ತೋರುವ ಶಾಮನ ಪಾತ್ರ 'ಕಸ್ತೂರಿ'ಯಲ್ಲಿ.

"ಜೀವನೋಪಾಯಗಳನ್ನು ಗಳಿಸಲು ಮತ್ತು ಸಂತಾನೋತ್ಪತ್ತಿ ಮಾಡಲು ಸಹಕಾರದಿಂದ ಜೀವನವನ್ನು ನಡೆಸುತ್ತಿರುವ ಮನುಷ್ಯರ ಸಮೂಹವೇ ಸಮಾಜ".[೧೫] ಸಮಾಜವೆಂದರೆ ಸಾಮಾಜಿಕ ಸಂಬಂಧಗಳ ಬಲೆ, ಹಾಗಾದರೆ ಸಾಮಾಜಿಕ ಸಂಬಂಧಗಳು ಎಂದರೇನು? ಎಲ್ಲಾ ಸಂಬಂಧಗಳು ಸಾಮಾಜಿಕವಾದವುಗಳಲ್ಲ. ಮಾನವ ಸಂಪರ್ಕಗಳ ಕಾರಣ ಕೆಲವು ಘಟನೆಗಳು ಉಂಟಾಗಬಹುದು. ಉದಾಹರಣೆಗೆ ಇಬ್ಬರು ಸೈಕಲ್ ಸವಾರರು ಢಿಕ್ಕಿ ಹೊಡೆದಾಗ ಅದು ಅನಿರೀಕ್ಷಿತ ಘಟನೆಯಾಗುತ್ತದೆಯೇ ವಿನಾ ಅದು ಸಾಮಾಜಿಕ ಸಂಬಂಧವಾಗುವುದಿಲ್ಲ. ಅದು ವ್ಯಕ್ತಿಗಳಿಗೆ ಸಂಬಂಧಪಟ್ಟಿದ್ದರೂ ಸಾಮಾಜಿಕವಾಗುವುದಿಲ್ಲ. ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಬೆಂಕಿ ಮತ್ತು ಹೊಗೆ, ಪೆನ್ನು ಮತ್ತು ಕಾಗದ, ಮೇಜು ಮತ್ತು ಟೀ ತಟ್ಟೆಗಳಿಗಿರುವ ಸಂಬಂಧ ಭೌತಿಕವಾದುದು, ಇದು ಸಾಮಾಜಿಕವಾದುದಲ್ಲ ಕಾರಣ ಈ ವಸ್ತುಗಳಿಗೆ ಪರಸ್ಪರ ಇರುವಿಕೆಯ ಬಗ್ಗೆ ಅರಿವು ಇರುವುದಿಲ್ಲ. ಅದೇ ರೀತಿ ಇಬ್ಬರು ವ್ಯಕ್ತಿಗಳು ಒಂದೇ ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಅವರು ಒಟ್ಟಿಗೆ ಕುಳಿತಿರುವುದರಿಂದ ಉಂಟಾಗುವ ಶಾರೀರಿಕ ಸಂಬಂಧ ಸಾಮಾಜಿಕವಾದುದಲ್ಲ. ಆದರೆ ಅವರು ಪರಸ್ಪರ ನಮಸ್ಕರಿಸಿ ಕುಶಲಪ್ರಶ್ನೆ ಮಾಡಿ ಮಾತನಾಡಿದರೆ ಸಾಮಾಜಿಕ ಸಂಬಂಧ ಉಂಟಾಗುತ್ತದೆ. ಈ ಅಭಿನಂದನೆಯಿಂದ ಅವರಿಬ್ಬರೂ ಸ್ನೇಹಿತರಾಗುತ್ತಾರೆ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಅವರಿಗೆ ಪರಸ್ಪರ ಇರುವಿನ ಬಗ್ಗೆ ಅರಿವಿದೆ ಎಂಬುದು ತಿಳಿದು ಬರುತ್ತದೆ. ಎಲ್ಲಾ ಸಾಮಾಜಿಕ ಸಂಬಂಧಗಳು ಸಮಾಜ ನಿರ್ಮಾಣಕ್ಕೆ ಉಪಯುಕ್ತವಾದವುಗಳು ಎಂಬುದು ಗಮನಿಸಬೇಕಾದ ಅಂಶವಾಗಿದೆ.

ನಮ್ಮ ದೈನಂದಿನ ಜೀವನದಲ್ಲಿ ಕೆಲವು ವ್ಯಾವಹಾರಿಕ ಸಂಬಂಧವನ್ನು ಬೆಳೆಸಿಕೊಳ್ಳುತ್ತೇವೆ. ಉದಾಹರಣೆಗೆ, ಬಸ್ ಪ್ರಯಾಣಿಸುವ ಅಥವಾ ರೈಲು ಬಂಡಿಯಲ್ಲಿ ನಾವು ಅಪರಿಚಿತರೊಡನೆ ಸಂಭಾಷಿಸಿ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತೇವೆ. ಈ ಸಂಬಂಧಗಳು ಸಾಮಾಜಿಕವಾದವುಗಳೇ, ಆದರೆ, ಅವುಗಳು ಯಾವ ಸಂಸ್ಥೆಯ ನಿಯಮಗಳಿಗೂ ಒಳಪಟ್ಟಿರದೆ ಇರುವುದರಿಂದ ತಾತ್ಕಾಲಿಕವಾಗಿರುತ್ತದೆ.

"ಸಮಾಜಶಾಸ್ತ್ರವು ಸಾಮಾಜಿಕ ಜೀವನದ ನಿಯಮಗಳಿಗೆ ಒಳಪಟ್ಟಿರುವಂತಹ ಸಾಮಾಜಿಕ ಸಂಬಂಧಗಳ ಬಗ್ಗೆ ಮಾತ್ರ ವಿಚಾರ ಮಾಡುತ್ತದೆ. ಅವುಗಳು ಸಮಾಜ ನಿರ್ಮಾಣ ಕಾರ್ಯದಲ್ಲಿ ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ"[೧೬]. ವ್ಯಕ್ತಿಗಳು ಬೇರೆ ಬೇರೆಯಾಗಿರುವ ಸಂಬಂಧಗಳನ್ನು ಹೊಂದಿರುತ್ತಾರೆ. ಉದಾಹರಣೆಗೆ, ಮಗ ಮತ್ತು ತಂದೆತಾಯಿಗಳಿಗೆ, ಪತಿಪತ್ನಿಯರಿಗೆ, ಉಪಾಧ್ಯಾಯರು ಮತ್ತು ವಿದ್ಯಾರ್ಥಿಗೆ, ಯಜಮಾನ ಮತ್ತು ನೌಕರರಿಗೆ ಇರುವ ಸಂಬಂಧಗಳು ವ್ಯಕ್ತಿ ಸಮಾಜದಲ್ಲಿ ಅನೇಕ ವಿಧವಾದ ಪಾತ್ರವನ್ನು ನಿರ್ವಹಿಸಬೇಕು. ಅವು ಮಗ, ವಿದ್ಯಾರ್ಥಿ, ಪತಿ, ತಂದೆ ಕೆಲಸ ಮಾಡುವವ, ಪ್ರಜೆ ಇತ್ಯಾದಿ ಆಗಿರುತ್ತಾರೆ. ಬಗೆಬಗೆಯಾದ ಸಂಬಂಧಗಳಿಂದ ಕೂಡಿರುವ ಸಮಾಜ ನಾವು ಮನೆಗಳಲ್ಲಿ ಅಥವಾ ಇತರೆಡೆಗಳಲ್ಲಿ ನೋಡಬಹುದಾದ ಜೇಡರ ಬಲೆಯಂತೆ ಇರುತ್ತದೆ. ಆದ್ದರಿಂದ ಅವುಗಳನ್ನು ಸಾಮಾಜಿಕ ಸಂಬಂಧಗಳ ಬಲೆ ಎಂಬುದಾಗಿ ವಿವರಿಸಬಹುದು. ಅಂತೆಯೇ ಆರ್ಯಾಂಬ ಮತ್ತು ತ್ರಿವೇಣಿಯವರ ಕಾದಂಬರಿಗಳು ಸಂಬಂಧಗಳ ಮಹಾಪೂರವನ್ನೇ ಹೊಂದಿದೆ.

ಸಾಮಾಜಿಕ ಸಂಬಂಧಗಳು ವ್ಯವಸ್ಥೆಯಾಗಿರುವ ಸಂಬಂಧವನ್ನು ಒಂದೇ ತರಹದ ಶರೀರಗಳುಳ್ಳ ಮತ್ತು ಒಂದೇ ಬಗೆಯ ಅಭಿಪ್ರಾಯ, ಅಭಿರುಚಿ ಮೊದಲಾದವುಗಳನ್ನು ಜೀವಿಗಳಲ್ಲಿ ನೋಡಬಹುದು. ಸಾಮಾಜಿಕ ಸಂಬಂಧಗಳೂ ಒಂದೇ ತರಹದ ಅಭಿರುಚಿ, ಧ್ಯೇಯ ಮತ್ತು ಭಾವನೆಗಳನ್ನು ಅವಲಂಬಿಸಿರುತ್ತವೆ. ವ್ಯಕ್ತಿಗಳು ಪ್ರಾಣಿಗಳ ಸಂಗಡ ಕೂಡಿ ಸಮಾಜವನ್ನು ನಿರ್ಮಿಸಲಾರರು. ಕಾರಣ ಅವರ ಅಭಿರುಚಿ, ಉದ್ದೇಶ ಮತ್ತು ಮನೋಭಾವ ಒಂದೇ ತೆರನಾಗಿರುವುದಿಲ್ಲ. ಹೋಲಿಕೆಯ ಕಾರಣ ವ್ಯಕ್ತಿಗಳಲ್ಲಿ ಏಕತೆಯ ಪ್ರಜ್ಞೆ ಅಥವಾ ಅನುಭವ ಉಂಟಾಗುತ್ತದೆ. ಸರಳವಾಗಿರುವ ಸಮಾಜದಲ್ಲಿ ಸಾದೃಶ್ಯದ ಪ್ರಜ್ಞೆ ಕುಟುಂಬದಲ್ಲಿ ವ್ಯಕ್ತವಾಗಿರುವುದನ್ನು ನೋಡಬಹುದು. ಸ್ನೇಹಯುತವಾದ ಬಾಂಧವ್ಯಗಳನ್ನು ಬೆಳೆಸಲು ಪರಸ್ಪರ ಅರಿವು ಅವಶ್ಯಕ. ಈ ಪರಸ್ಪರ ಅರಿವು ವ್ಯಕ್ತಿಗಳು ತಮ್ಮ ತಮ್ಮಲ್ಲಿ ಕಂಡುಕೊಳ್ಳುವ ಸಾದೃಶ್ಯವನ್ನು ಅವಲಂಬಿಸಿರುತ್ತದೆ.

ಆರ್ಯಾಂಬರ ಪ್ರಕೃತಿ ಪುರುಷ ಕಾದಂಬರಿಯ ಶ್ಯಾಮಣ್ಣ ಮೇಷ್ಟ್ರು ಪಾತ್ರ ಹಳ್ಳಿಗೆ ಅವನ ಆಗಮನ ಕಮಲಳನ್ನು ಅರ್ಥಮಾಡಿಕೊಂಡು ಮದುವೆಯಾಗುವ ಅವನ ಜಾಣತನ, ತಾಯಿ-ಮಗಳ ಮಧ್ಯೆ ನಿಂತು ಸೂಕ್ಷ್ಮ ಸನ್ನಿವೇಶಗಳನ್ನು ನಿಭಾಯಿಸುವ ಅವನ ಜಾಣ್ಮೆ, ವ್ಯಾವಹಾರಿಕ

ಜಾಣ್ಮೆ ಈ ಲಕ್ಷಣಕ್ಕೆ ಪೂರಕವಾಗಿದೆ. ಕಾದಂಬರಿಯ ಅಂತ್ಯದಲ್ಲಿ ಮಗಳು ಮಂಗಳಾಳನ್ನು ತಾಯಿಯಾದ ನೀನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದು ಹೇಳಿ ಶಾಮಣ್ಣ, ಮಂಗಳಾ ತಂದೆಯ ವಯಸ್ಸಿನ ರಾಜಶೇಖರಯ್ಯನನ್ನು ಜೀವನ ಸಂಗಾತಿಯನ್ನಾಗಿ ಆಯ್ಕೆ ಮಾಡಿಕೊಳ್ಳಲು ತಂದೆತನದ ಸೆಳೆತ ಹೇಗೆ ಕಾರಣವಾಗಿದೆ ಎಂಬುದನ್ನು ಕಮಲಳಿಗೆ ವಿವರಿಸಿ ಸಮಾಧಾನ ಮಾಡುವನು.

ತ್ರಿವೇಣಿಯವರ 'ಹಣ್ಣೆಲೆ ಚಿಗುರಿದಾಗ' ಕಾದಂಬರಿಯ ಮಾಲತಿ, ಮದುವೆಯಾದ ಕೆಲವು ತಿಂಗಳುಗಳಲ್ಲೇ ವಿಧವೆಯಾದ ರಾಯರ ಮಗಳು ಕಿರುವಯಸ್ಸಿನಲ್ಲೇ ವಿಧುರನಾದ ಒಬ್ಬನನ್ನು ಪ್ರೇಮಿಸಿ, ಮದುವೆಯಾಗಲು ಸಿದ್ಧಳಿದ್ದಾಳೆ. ಸಂಪ್ರದಾಯಸ್ಥರಾದ ರಾಯರು ಸ್ತ್ರೀಯ ಪುನರ್ವಿವಾಹವನ್ನು ಒಪ್ಪಲಾಗದೆ, ಮಗಳ ವಿಚಾರವನ್ನೂ ವಿರೋಧಿಸುತ್ತಾರೆ. ಆದರೆ ಮಗಳಾದರೋ ತನ್ನ ಅಣ್ಣನಂತೆ ತಂದೆಯ ಭಾವನೆಗಳಿಗೆ ನೋವುಂಟು ಮಾಡಲಿಚ್ಛಿಸದೆ ಅವಿವಾಹಿತಳಾಗಿಯೇ ಉಳಿಯಲು ನಿರ್ಧರಿಸುತ್ತಾಳೆ ಹೀಗೆ ಸಂಬಂಧಗಳು ಸಾದೃಶ್ಯವಾಗುತ್ತವೆ.

ಭಿನ್ನತೆಯು ಸಮಾಜಕ್ಕೆ ಆಧಾರವಾಗಿದೆ. ಸಮಾಜದ ರಚನೆಗೆ ಹೋಲಿಕೆ ಮೊದಲು ನಂತರ ಭಿನ್ನತೆ ಅನಿವಾರ್ಯ. ಒಂದೇ ಮನೋಧರ್ಮವಿದ್ದರೂ ಮಾನವ ವ್ಯಕ್ತಿತ್ವಗಳಲ್ಲಿ ವ್ಯತ್ಯಾಸವಿರುವುದನ್ನು ಕಾಣಬಹುದು. ವ್ಯತ್ಯಾಸವು ಸಾಮಾಜಿಕ ಜೀವನವನ್ನು ನಡೆಸುವ ವಿಷಯದಲ್ಲಿ ವ್ಯಕ್ತಿಗಳಿಗಿರುವ ವಿಭಿನ್ನವಾದ ಶಕ್ತಿ ಸಾಮರ್ಥ್ಯಗಳನ್ನು ಸೂಚಿಸುತ್ತದೆ. ಉದಾಹರಣೆಗೆ ಕುಟುಂಬವು ಪತಿಪತ್ನಿಗಿರುವ ಜೈವಿಕ ವ್ಯತ್ಯಾಸಗಳ ಮೇಲೆ ಆಧಾರಿತವಾಗಿದೆ. ಶ್ರಮ ವಿಭಜನೆ, ಆರ್ಥಿಕ ವ್ಯವಸ್ಥೆಯಲ್ಲಿ ಬಹುಮುಖ್ಯವಾದ ಅಂಶವಾಗಿದೆ. ವ್ಯಕ್ತಿಗಳಲ್ಲಿ ಮೂಲಭೂತವಾದ ಹೋಲಿಕೆಗಳಿವೆ ಎನ್ನುವುದು ನಿಜ. ಅಂದರೆ, ಅವರೆಲ್ಲ ಒಂದೇ ಪಡಿಯಚ್ಚಾಗಿ ಇರುವುದಿಲ್ಲ ಎಂಬುದು ಅಷ್ಟೇ ನಿಜವಾಗಿದೆ. ಕೆಲವರು ಕೆಲವು ವಿಷಯಗಳಲ್ಲಿ ಪ್ರವೀಣರಾಗಿದ್ದಾರೆ. ಇತರರು ಬೇರೆ ಬೇರೆ ಕಾರ್ಯಕ್ಷೇತ್ರಗಳಲ್ಲಿ ನಿಪುಣರಾಗಿರುತ್ತಾರೆ.

ಬುದ್ಧಿಶಕ್ತಿ, ಸಾಮರ್ಥ್ಯ, ಆಸಕ್ತಿ, ಒಲವು ದೃಷ್ಟಿಕೋನ ಮುಂತಾದ ವಿಷಯಗಳಲ್ಲಿ ವ್ಯಕ್ತಿ ವ್ಯಕ್ತಿಗಳಲ್ಲಿ ಭೇದಗಳು ಎದ್ದು ತೋರುತ್ತವೆ. ವೈವಿಧ್ಯತೆಗಳು ಮನೆ ಮಾಡಿರುತ್ತವೆ. ನಾವಿರುವ ಸಮಾಜವನ್ನೇ ನೋಡಿದರೆ ಎಷ್ಟೊಂದು ತೆರನಾದ ಜನರನ್ನು ಕಾಣುತ್ತೇವೆ. ಇವರಲ್ಲಿ ಹಿರಿಯರು ಹಾಗೂ ಕಿರಿಯರು ಬಲಶಾಲಿಗಳೂ ಹಾಗೂ ಬಲಹೀನರೂ ಹಾಗೂ ಅತ್ಯಂತ ಮೂರ್ಖರೂ,

ಕಲಿಗಳೂ ಜೊತೆಗೆ ಹೇಡಿಗಳು, ಕಲಾಕಾರರೂ ಹಾಗೂ ಕಲೆಯ ಗಂಧವು ಇಲ್ಲದವರು ಇದ್ದಾರೆ. ಈ ರೀತಿಯಾಗಿ ವಿವಿಧತೆಗೆ ಮಿತಿಯೇ ಇಲ್ಲವಾಗಿದೆ. ಆರ್ಯಾಂಬರ 'ಸವತಿಯ ನೆರಳು' ವಿನ ಇಂದಿರಾ 'ಕಪ್ಪು ಬಿಳುಪು'ವಿನ ಚಂದ್ರ ತ್ರಿವೇಣಿರವರ 'ಕಂಕಣ'ದ ಸುಶೀಲ.

ಇದು ಸಮಾಜದ ಮತ್ತೊಂದು ಮುಖ್ಯವಾದ ಲಕ್ಷಣವಾಗಿದೆ. ಸಮಾಜದ ಪ್ರತಿಯೊಂದು ಭಾಗವೂ ಪ್ರತ್ಯೇಕವಾಗಿ ಅಪೂರ್ಣವಾಗಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಇತರರ ಸಹಾಯದಿಂದ ಮಾತ್ರ ತನ್ನ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಲ್ಲ. ಸಮಾಜದಲ್ಲಿ ಅನೇಕ ಸಮುದಾಯಗಳು ಇವೆ. ಅವುಗಳಿಗೆ ಸ್ವತಂತ್ರವಾದ ಅಸ್ತಿತ್ವವಿಲ್ಲ. ಉದಾಹರಣೆಗೆ, ಕುಟುಂಬ ಇತರ ಸಂಸ್ಥೆಗಳೂ ಇವುಗಳು ಸಹ ಕುಟುಂಬವನ್ನು ಅವಲಂಬಿಸಿವೆ. ಹೆಚ್ಚು ಕಡಿಮೆ ಈರುಳ್ಳಿಯಲ್ಲಿ ಕಂಡುಬರುವ ಪದರಗಳಿಗೆ ಹೋಲಿಸಬಹುದಾಗಿದೆ. ಹೀಗೆ ಈರುಳ್ಳಿಯ ಪದರುಗಳು ಒಂದಕ್ಕೊಂದು ಸಂಬಂಧಪಟ್ಟಿವೆಯೋ ಅದೇ ತರಹ ಸಮಾಜದ ವಿವಿಧ ಭಾಗಗಳು ಪರಸ್ಪರ ಸಂಬಂಧಪಟ್ಟಿದೆ ಮತ್ತು ಆಂತರಿಕ ಅವಲಂಬನೆಯನ್ನು ಹೊಂದಿವೆ 'ಕಂಕಣ'ದ ರಮಾಳ ಕುಟುಂಬ.

ಸಹಕಾರವಿಲ್ಲದಿದ್ದರೆ ಯಾವ ಸಮಾಜವು ಇರಲಾರದು ಸಹಕರಿಸಿ ಬಾಳುವುದರಲ್ಲಿ ಸುಖವಿದೆ ಎಂಬುದು ಮಾನವನ ಅನುಭವದಿಂದ ಕಲಿತ ಪಾಠ. ಸಹಕಾರ ಸಾಮಾಜಿಕ ಸಂಸ್ಥೆಗಳಿಗೆ ಬಲವಾದ ಆಧಾರವಾಗಿದೆ. ಉದಾಹರಣೆಗೆ, ಕುಟುಂಬವು ಅದರ ಸದಸ್ಯರ ಹಾಗೂ ಇತರ ಸಂಸ್ಥೆಗಳ ಸಹಕಾರದ ಮೇಲೆ ಆಧಾರಿತವಾಗಿದೆ. ಒಂದು ಕಟ್ಟಡದ ಇಂಜಿನಿಯರ್, ಬಡಗಿ, ಗಾರೆಯವರು, ಕೂಲಿಯಾಳುಗಳು ಮತ್ತಿತರ ಜನರ ಸಹಕಾರದ ಫಲವಾಗಿದೆ. ಸಮಾಜದಲ್ಲಿ ಸ್ಪರ್ಧೆ ಮತ್ತು ಘರ್ಷಣೆ ಮುಂತಾದ ಇತರೆ ಸಾಮಾಜಿಕ ಪ್ರಕ್ರಿಯೆಗಳು ಇವೆ ಎನ್ನುವುದು ನಿಜ.

ವ್ಯಕ್ತಿಗಳು ವಿವಿಧ ಶಕ್ತಿ ಸಾಮರ್ಥ್ಯಗಳನ್ನು ಹೊಂದಿರುವುದರಿಂದ ಸ್ಪರ್ಧೆ ಹಾಗೂ ಘರ್ಷಣೆಗಳುಂಟಾಗುತ್ತವೆ. ಆದ್ದರಿಂದ ಸಮಾಜದಲ್ಲಿ ಸಹಕಾರ ನಿರಂತರವಾಗಿರುವುದಿಲ್ಲ ಎಂದು ಹೇಳುತ್ತಾರೆ. ಸಹಕಾರ ವ್ಯಕ್ತಿಗಳನ್ನು ಒಂದುಗೂಡಿಸಿದರೆ ಘರ್ಷಣೆ ಅವರನ್ನು ಪ್ರತ್ಯೇಕಿಸುತ್ತದೆ. ಈ ಎರಡು ಪ್ರಕ್ರಿಯೆಗಳಿಗೂ ಸಮಾಜದಲ್ಲಿ ಸಮಾವಕಾಶವಿದೆ ಸಮಾಜಕ್ಕೆ ಮೂಲಭೂತವಾಗಿರುವುದು ಸಹಕಾರವೇ ಹೊರತು ಘರ್ಷಣೆಯಲ್ಲ. ಹೀಗೆ ಇದು ಸಮಾಜದ ಬಹು ಮುಖ್ಯವಾದ ಲಕ್ಷಣವಾಗಿದೆ.

ತ್ರಿವೇಣಿರವರ 'ಕಾಶೀಯಾತ್ರೆ' ಪಾತಜ್ಜಿ ನೆರಮನೆಯ ರಾಮಣ್ಣನ ಸಂಸಾರಕ್ಕೆ ನೀಡುವ ಸಹಕಾರ ಮಂಗಳೆ ಮದುವೆಗೆ ಮಾಡುವ ತ್ಯಾಗ ಇದಕ್ಕೆ ನಿದರ್ಶನ ಆರ್ಯಾಂಬರ 'ದೇವಮಾನವ' ಕೃಷ್ಣ ಸೀತಾಳ ಕುಟುಂಬಕ್ಕೆ ನೆರವಾಗುವುದು ತ್ರಿವೇಣಿಯವರ 'ಕಂಕಣ'ದ ಅಂಬಿಕಾ ರಮೆಗೆ ನೀಡುವ ಸಹಕಾರ.

ಮಾನವ ಸಮಾಜ ಏನೂ ಬದಲಾವಣೆಯನ್ನು ಹೊಂದದೆ ಸ್ಥಾಯಿಯಾಗಿ ಇರುವ ಜಡ ವಸ್ತುವಲ್ಲ. ಇರುವೆ, ಜೇನುನೊಣ ಮುಂತಾದ ಪ್ರಾಣಿ ಸಮಾಜಗಳು ಹಿಂದೆ ಇದ್ದಂತೆ ಈಗಲೂ ಇವೆ. ಆದರೆ ಮಾನವ ಸಮಾಜ ಚಲನಾತ್ಮಕವಾದುದು. ಪರಿವರ್ತನಶೀಲವುಳ್ಳದ್ದು, ಅಂದರೆ ಅದು ಯಾವಾಗಲೂ ಬದಲಾಗುತ್ತಲೇ ಇರುತ್ತದೆ.

ಅಂತೆಯೇ ಆರ್ಯಾಂಬ ಹಾಗೂ ತ್ರಿವೇಣಿಯವರ ಪ್ರತಿಯೊಂದು ಕಾದಂಬರಿಗಳಲ್ಲಿ ಈ ತೆರನಾದ ಅಂಶಗಳು ಕಂಡು ಬರುತ್ತವೆ. ಒಂದೊಂದು ಕಥಾವಸ್ತು, ಪಾತ್ರಚಿತ್ರಣ, ಸಂವಿಧಾನ, ಶೈಲಿ ಎಲ್ಲವೂ ವಿಭಿನ್ನವಾಗಿದೆ. ಸಾಮಾಜಿಕ ವ್ಯವಸ್ಥೆಗೆ ಅಂಟಿಕೊಂಡಿರುವ ಹಾಗೂ ವಿರೋಧಿಸುವ ಎರಡು ಪರಿಗಳು ಕಂಡುಬರುತ್ತದೆ.

ಅಡಿಟಿಪ್ಪಣಿಗಳು

೧. ಎನ್.ದೊಡ್ಡಸಿದ್ದಯ್ಯ : ಸಮಾಜಶಾಸ್ತ್ರದ ಪರಿಕಲ್ಪನೆಗಳು, ಸಂ. ಡಾ. ಆರ್.ಎನ್.ಹಾದಿಮನಿ, ಸಮಾಜಶಾಸ್ತ್ರದ ಮೂಲತತ್ವಗಳು, ಪೂರ್ಣಿಮ ಪ್ರಿಂಟರ್ಸ್, ಬೆಂಗಳೂರು, ೨೦೦೬, ಪುಟ ೩೩

೨. ಅದೇ, ಪುಟ ೩೩

೩. ಎಂ.ಹೆಚ್.ಕೃಷ್ಣಪ್ಪ : ಸಾಮಾಜಿಕ ಸ್ತರವಿನ್ಯಾಸ, ಸಂ. ಡಾ. ಆರ್.ಎನ್.ಹಾದಿಮನಿ, ಸಮಾಜಶಾಸ್ತ್ರದ ಮೂಲತತ್ವಗಳು, ಪೂರ್ಣಿಮ ಪ್ರಿಂಟರ್ಸ್, ಬೆಂಗಳೂರು, ೨೦೦೬, ಪುಟ ೩

೪. ಅದೇ, ಪುಟ ೪

೫. ಅದೇ, ಪುಟ ೭

೬. ಅದೇ, ಪುಟ ೨೪೦

೭. ತ್ರಿವೇಣಿ : ಅಪಸ್ವರ, ರವಿಪಬ್ಲಿಕೇಷನ್, ಮೈಸೂರು, ೨೦೦೨, ಪುಟ ೭

೮ ಅದೇ, ಪುಟ ೧೦೪

೯. ಅದೇ, ಪುಟ ೧೬೪

೧೦. ಎಂ.ಹೆಚ್.ಕೃಷ್ಣಪ್ಪ : ಸಾಮಾಜಿಕ ನಿಯಂತ್ರಣ, ಸಂ. ಡಾ. ಆರ್.ಎನ್.ಹಾದಿಮನಿ, ಸಮಾಜಶಾಸ್ತ್ರದ ಮೂಲತತ್ವಗಳು, ಪೂರ್ಣಿಮ ಪ್ರಿಂಟರ್ಸ್, ಬೆಂಗಳೂರು, ೨೦೦೬, ಪುಟ ೪೧

೧೧. ಅದೇ, ಪುಟ ೪೪

೧೨. ತ್ರಿವೇಣಿ : ಮೊದಲ ಹೆಜ್ಜೆ, ರವಿಪಬ್ಲಿಕೇಷನ್, ಮೈಸೂರು, ೨೦೦೨, ಪುಟ ೮೬-೮೭

೧೩. ಎಂ.ರ‍್ಯಾಪಲ್ : ಸಾಮಾಜೀಕರಣ, ಸಂ. ಡಾ. ಆರ್.ಎನ್.ಹಾದಿಮನಿ, ಸಮಾಜಶಾಸ್ತ್ರದ ಮೂಲತತ್ವಗಳು, ಪೂರ್ಣಿಮ ಪ್ರಿಂಟರ್ಸ್, ಬೆಂಗಳೂರು, ೨೦೦೬, ಪುಟ ೪೪

೧೪. ಅದೇ, ಪುಟ ೪೫

೧೫. ಎನ್.ದೊಡ್ಡಸಿದ್ದಯ್ಯ : ಸಮಾಜಶಾಸ್ತ್ರದ ಪರಿಕಲ್ಪನೆಗಳು, ಸಂ. ಡಾ. ಆರ್.ಎನ್.ಹಾದಿಮನಿ, ಸಮಾಜಶಾಸ್ತ್ರದ ಮೂಲತತ್ವಗಳು, ಪೂರ್ಣಿಮ ಪ್ರಿಂಟರ್ಸ್, ಬೆಂಗಳೂರು, ೨೦೦೬, ಪುಟ ೪

೧೬. ಅದೇ, ಪುಟ ೪

ಅಧ್ಯಾಯ ೮

ಸ್ತ್ರೀವಾದಿ ಸಂವೇದನೆ

ಅಧ್ಯಾಯ ೮

ಸ್ತ್ರೀವಾದಿ ಸಂವೇದನೆ

ಸ್ತ್ರೀವಾದವು ಕನ್ನಡ ಸಾಹಿತ್ಯದಲ್ಲಿ ಗಟ್ಟಿಗೊಳ್ಳುತ್ತಿದ್ದರೂ, ಒಂದು ಪ್ರಬಲ ಸಂಘಟನೆಯಾಗಿ ಬೆಳೆದಿದ್ದರೂ, ಸ್ತ್ರೀವಾದವೆಂದರೇನು ಎಂಬ ಬಾಲಿಶ ಪ್ರಶ್ನೆಯಿಂದ ಹಿಡಿದು, ಸ್ತ್ರೀವಾದಿಗಳೆಲ್ಲರೂ ಸ್ವಚ್ಛಂದ ಸ್ವತಂತ್ರರು ಎಂದು ತಿಳಿಯುವ, ವಾದಿಸುವ ಅತಿರೇಕದವರೆಗೆ ಇದರ ವ್ಯಾಪ್ತಿಯಿದೆ. ಸ್ತ್ರೀಯರ ಪರವಾಗಿ ವಾದಿಸುವವರೆಲ್ಲರೂ ಸ್ತ್ರೀವಾದಿಗಳು. ಅವರಲ್ಲಿ ಸ್ತ್ರೀಯರಿರಬಹುದು, ಪುರುಷರಿರಬಹುದು, ಸ್ತ್ರೀಯರ ವಿರುದ್ಧವಾಗಿ ಮಾತನಾಡುವವರು ಸ್ತ್ರೀವಾದಿಗಳಲ್ಲ. ಅವರಲ್ಲಿ ಸ್ತ್ರೀಯರಿರಬಹುದು, ಪುರುಷರಿರಬಹುದು. ಇದು ಸಾಮಾನ್ಯವಾಗಿ ಸ್ತ್ರೀವಾದಿಗಳು, ಸ್ತ್ರೀವಾದ ಎಂದರೇನು? ಎಂದು ಕೇಳುವ ಪ್ರಶ್ನೆಗೆ, ಕೊಡುವ, ಕೊಡಬಹುದಾದ ಸರಳವಾದ ಉತ್ತರ ಮತ್ತು ಸ್ತ್ರೀ ಶೋಷಣೆಯ ಬಗ್ಗೆ ಮಾತನಾಡುವವರು ಒಂದು ಎಚ್ಚರಿಕೆಯನ್ನಂತೂ ವಹಿಸಬೇಕು.

ಶೋಷಣೆ ಪುರುಷರಿಂದ ಮಾತ್ರ ನಡೆಯದೇ ಸ್ತ್ರೀಯರಿಂದ, ಸಮಾಜದಿಂದ ನಿಯಮಗಳಿಂದ, ವಿಜ್ಞಾನದಿಂದ ಕೊನೆಗೆ ನಿಸರ್ಗದಿಂದಲೂ ನಡೆದಿದೆ. ಈ ಹಿನ್ನೆಲೆಯಲ್ಲಿ "ಸರಳವಾದ ಸ್ತ್ರೀವಾದ ಇಂದಿನ ಅಗತ್ಯವಾಗಿದೆ. ಸ್ತ್ರೀವಾದ ಇಂದು ಮನೆ ಮನೆಯ ಬಾಗಿಲನ್ನು ತಟ್ಟುತ್ತಿದೆ"[೧] ಎಂದು ೧೯೯೬ ರ ಶಾಶ್ವತೀ ಪ್ರಶಸ್ತಿ, ಪ್ರದಾನ ಮಾಡುತ್ತಾ ಡಾ. ಯು.ಆರ್. ಅನಂತಮೂರ್ತಿಯವರು ಹೇಳಿರುವುದು, ಈ ಆಶಯದಿಂದಲೇ. ಹೀಗೆ ಮನೆ ಬಾಗಿಲು ತಟ್ಟುವ ಸ್ತ್ರೀವಾದ ಕಬ್ಬಿಣದ ಕಡಲೆಯಾಗಬಾರದು. ದಂತಗೋಪುರದಲ್ಲಿ ಕುಳಿತು ಅಸಂಖ್ಯಾತ ಸ್ತ್ರೀಯರನ್ನು ವಂಚಿಸಬಾರದು. ಅದಕ್ಕೆ ಬದಲಾಗಿ ಪರಿಸರದಿಂದ ಪರಿಸರಕ್ಕೆ ಇದನ್ನು ಹೇಗೆ ಅನ್ವಯಿಸಬಹುದು ಎಂದು ಚಿಂತಿಸಬೇಕು. ಈ ನಿಟ್ಟಿನಲ್ಲಿ ಯೋಚಿಸಿದಾಗ ಸಮಾನತೆಯನ್ನು ಕೇಳುವುದು ಸ್ತ್ರೀವಾದವಲ್ಲ ಗಂಡುಮಕ್ಕಳನ್ನು ತೊರೆದು ಬೀದಿಗಿಳಿಯುವುದು ಸ್ತ್ರೀವಾದವಲ್ಲ.

ಸ್ತ್ರೀವಾದವೆಂದರೆ ಸಂವಹನ, ಅರ್ಥವಂತಿಕೆ, ಹೃದಯವಂತಿಕೆಗಳನ್ನು ಸ್ತ್ರೀಯರು ಇತರರಿಗೆ ನೀಡಿ ಇತರರಿಂದ ಅದನ್ನು ಸಹಜವಾಗಿ ಪಡೆಯುವುದಾಗಿದೆ. ಹೇಗೆ ತಾಯಿ, ತನ್ನ ಮಗುವಿಗೆ ಸಹಜವಾಗಿ ಹಾಲೂಡಿಸಿ ಪೋಷಿಸುವಳೋ ಹಾಗೆ. ಆದರೆ, ಕೆಲವು ಬಾರಿ ಸಂಘಟನೆಗಳನ್ನು ಮಾಡಿಕೊಳ್ಳುವುದು, ಚಳುವಳಿ ನಡೆಸುವುದು, ಪ್ರತಿಭಟನೆ ಮಾಡುವುದು ಇವು ಅದರ ಅನಿವಾರ್ಯ ಅಂಗಗಳಾಗುತ್ತವೆ. "ಮಗು ಅಳದಿದ್ದರೆ ತಾಯಿಯೂ ಹಾಲು ಕುಡಿಸುವುದಿಲ್ಲ"[೨] ಎಂಬ ಅರ್ಥಶಾಸ್ತ್ರದ ಪ್ರಸಿದ್ಧ ವ್ಯಾಖ್ಯೆಯಂತೆ

"ಅನುಭವವೊಂದಕ್ಕೆ ಭಾವನಾತ್ಮಕ ಹಾಗೂ ಬೌದ್ಧಿಕ ಪಾತಳಿಯ ವ್ಯಕ್ತಿವಿಶಿಷ್ಟವಾದ ಪ್ರತಿಕ್ರಿಯೆಯನ್ನು 'ಸಂವೇದನೆ' ಎಂದು ಕರೆಯುತ್ತಾರೆ. ಇದನ್ನೇ ಸ್ವಲ್ಪ ವಿಸ್ತರಿಸಿದರೆ, ಬಾಹ್ಯಾನುಭವವನ್ನು ನಿರ್ದಿಷ್ಟ ಪ್ರಜ್ಞೆಯೊಂದರ ಮೂಲಕ ಗ್ರಹಿಸುವ ಸಂದರ್ಭ ಸಂವಾದಿಯಾಗಿ ಸಂವಹಿಸುವ ಸಾಮರ್ಥ್ಯವನ್ನು ಇದು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ ನಾವು ಸ್ತ್ರೀಸಂವೇದನೆ ಎನ್ನುವ ಪರಿಕಲ್ಪನೆಯನ್ನು ಗಮನಿಸಬೇಕಾಗುತ್ತದೆ".[೩]

'ಸಂವೇದನೆ'ಯ ನಿರ್ವಚನವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಗೊಂದಲವು ಇನ್ನಷ್ಟು ಹೆಚ್ಚಾಗುತ್ತದೆ. ಇಲ್ಲಿ ಸಾಮಾನ್ಯೀಕರಣ ಪ್ರಕ್ರಿಯೆ ಮತ್ತು ಅಭಿವ್ಯಕ್ತಿಯ ಪ್ರಾಮಾಣಿಕತೆಗಳೆರಡೂ ಚರ್ಚಾಸ್ಪದ ಅಂಶಗಳೇ ಆಗುತ್ತವೆ. ಸಂವೇದನೆಯೆನ್ನುವುದು ವ್ಯಕ್ತಿ ವಿಶಿಷ್ಟವೆನ್ನುವುದನ್ನು ಒಪ್ಪುವುದಾದರೆ 'ಸ್ತ್ರೀಸಮುದಾಯಕ್ಕೆ ವಿಶಿಷ್ಟವಾಗಿರುವ ಸಂವೇದನೆಗಳು ಎನ್ನುವ ಉಲ್ಲೇಖವೇ ಅಸಂಗತವಾಗುತ್ತದೆ. 'ಸ್ತ್ರೀಸಂವೇದನೆ' ಯೆಂದಾಗ ಬರಿಯ ಸ್ತ್ರೀಯರ ಸಂವೇದನೆಯೆನ್ನುವ ಅರ್ಥವನ್ನೇ ಸ್ಫುರಿಸುವುದಿಲ್ಲ.

"ಶತಮಾನಗಳಿಂದ ಗಂಡು ಹೆಣ್ಣು ಕೂಡಿ ಬದುಕಿದವು. ಅವರಿಬ್ಬರಿಗೂ ಪರಿಚಿತವಾದ ಒಂದು ಸಾಮಾನ್ಯ ಪ್ರಪಂಚವಿದ್ದಂತೆ, ಹೆಣ್ಣಿಗೆ ಅವಳದೇ ಆದ ಭೌತಿಕ, ಮಾನಸಿಕ, ಭಾವುಕ ಪ್ರಪಂಚವು ಉಳಿಯಿತು. ಆದುದರಿಂದ ಮಹಿಳೆಯ ಸ್ಪಂದನೆಯ ಗ್ರಹಿಕೆಯ ಸ್ವೀಕಾರದ ಲಯ-ಗತಿ-ತೀವ್ರತೆಗಳು ಭಿನ್ನವಾದವು. ಈ ಭಿನ್ನತೆ ಬದುಕನ್ನು ನೋಡುವ ಅವಳ ದೃಷ್ಟಿಕೋನಕ್ಕೂ ಒಂದು ವಿಶಿಷ್ಟತೆಯನ್ನು ತಂದುಕೊಟ್ಟಿದೆ"[೪] ಎನ್ನುವ ವಿಜಯಾದಬ್ಬೆಯವರ ಅಭಿಪ್ರಾಯವನ್ನು ಗ್ರಹಿಸಬಹುದು. ಈ ವೈಶಿಷ್ಟ್ಯಪೂರ್ಣವಾದ ಅನುಭವದ ಅಭಿವ್ಯಕ್ತಿಯನ್ನು 'ಸ್ತ್ರೀಸಂವೇದನೆ' ಎಂದು ಕರೆಯಬಹುದು.

ಸ್ತ್ರೀಸಂವೇದನೆಯ ನಾಲ್ಕು ಆಯಾಮಗಳು

೧. ಮಹಿಳಾ ಸಾಹಿತಿಗಳಲ್ಲಿ ಕಂಡು ಬರುವ ಸ್ವಅಭಿವ್ಯಕ್ತಿ, ಸ್ವಲ್ಪಮಟ್ಟಿಗೆ ಆತ್ಮವೃತ್ತಾತ್ಮಕವಾದ ಸ್ವಂತದ ಸ್ವರೂಪದ ಶೋಧದತ್ತ ಮುಖಮಾಡಿರುವ ಸಾಹಿತ್ಯ ಪ್ರಕಾರ.

೨. ಸ್ತ್ರೀಪರವಾದ ಸಹಾನುಭೂತಿಯ ನಿಲುವನ್ನು ತಳೆಯುವ ಬರೆಹಗಳು.

೩. ಜೀವ ವಿರೋಧಿ ದೃಷ್ಟಿಕೋನವಿರುವ, ಸ್ತ್ರೀ ಸಂವೇದನೆಯ ಆಭಾಸವನ್ನಷ್ಟೇ ಕಲ್ಪಿಸುವ ಕೃತಿಗಳು.

೪. ಯಾವುದೇ ಬಗೆಯ ಲಿಂಗವಿವಕ್ಷೆಗೆ ಹೊರಡದ, ಸ್ತ್ರೀಯನ್ನು ಒಬ್ಬ ವ್ಯಕ್ತಿಯಾಗಿ, ವ್ಯಕ್ತಿತ್ವದ ಎಲ್ಲ ಶಕ್ತಿ, ಮಿತಿ, ಸಾಧ್ಯತೆಗಳೊಂದಿಗೆ ಗುರುತಿಸುವ ರಚನೆಗಳು.

ನಮ್ಮ ಹೆಚ್ಚಿನ ಬರೆಹಗಾರ್ತಿಯರ ಸಾಹಿತ್ಯಸೃಷ್ಟಿಯ ಹಿಂದೆ ಯಾವುದೇ ರೀತಿಯ ಆಂತರಿಕ ಒತ್ತಡವಾಗಲೀ, ಅನುಭವಗಳ ಸಂಕೀರ್ಣತೆಯಾಗಲೀ, ಇರುವುದಿಲ್ಲ. ಪ್ರಶ್ನೆಗಳು ತೀವ್ರವಾದ ಸಂವೇದನೆಗಳಿಗೆ ಒಳಗಾಗುವುದಕ್ಕೂ ಅವರ ಬರವಣಿಗೆಗಳಿಗೂ ಅರ್ಥಾರ್ಥ ಸಂಬಂಧವೂ ಇರುವುದಿಲ್ಲ.

ಕ್ರಿಯೆ ಮತ್ತು ಪ್ರತಿಕ್ರಿಯೆಗೆ ಮೂಲ ಸಂವೇದನೆ ಅಂತೆಯೇ ಸ್ತ್ರೀ ವಿಚಾರಕ್ಕೆ ಬಂದಾಗ ಇಲ್ಲಿ ಎರಡು ರೀತಿಯ ಅಂಶಗಳನ್ನು ಗುರುತಿಸುವುದಾದರೆ ಹುಟ್ಟಿನ ಜೈವಿಕತೆ, ಸಾಮಾಜಿಕ ಜೈವಿಕತೆ. ಹೀಗಿರುವಲ್ಲಿ ಬದುಕಿನ ಸ್ವರೂಪ ಸಂಬಂಧವಾಗಿ ಗ್ರಹಿಕೆ ಎಂಬುದು ವ್ಯಕ್ತಿಯ ಒಳಗನ್ನು ಹೊಂದಿರುತ್ತದೆ. ಇದಕ್ಕೆ ಮೂಲ ಧರ್ಮ, ಸಮಾಜ. ಇದು ಪುರುಷಕೇಂದ್ರಿತ ಹಿನ್ನೆಲೆಯಲ್ಲಿ ಬಂದಿದೆ. ಆದರೆ ವಾಸ್ತವತೆ ಹೆಣ್ಣಿನ ಭಾವನಾ ಶಕ್ತಿ, ಧಾರಣಾ ಶಕ್ತಿ, ಸೃಜನಶೀಲತೆ, ಕ್ರಿಯಾಶೀಲತೆ, ಪುರುಷನಿಗಿಂತ ಹೆಚ್ಚು, ಏಕೆಂದರೆ ಸ್ತ್ರೀವಾದ ಎಂದರೆ ಸ್ತ್ರೀಶೋಷಣೆ, ಸಬಲೀಕರಣ, ತಾರತಮ್ಯದಿಂದ ಮುಕ್ತಿ ಎಂಬುದು. ಸ್ತ್ರೀ ಸಮಸ್ಯೆಗಳಿಗೆ ಒಂದೇ ಮುಖವಿಲ್ಲ. ಸ್ತರ, ವರ್ಗ, ವರ್ಣ ಇತ್ಯಾದಿಗಳಿವೆ. ಸಂವೇದನೆ ಪ್ರಕೃತಿ ಸಹಜವಾದುದು. ಆದರೂ ಸ್ತ್ರೀಸಂವೇದನೆ ದ್ವಿಲಿಂಗವನ್ನು ತೋರಿಸುತ್ತದೆ.

ಸ್ತ್ರೀಚಳುವಳಿಗಳೇ ಕಂಡು ಬರದಂತಹ ಕಾಲದಲ್ಲಿ ಕಾದಂಬರಿ ಮುಖೇನ ಸ್ತ್ರೀಚಳುವಳಿಯನ್ನು ವ್ಯವಸ್ಥಿತ ಮಟ್ಟದಲ್ಲಿ ರೂಪಿಸಿದ ತ್ರಿವೇಣಿಯವರ ಸ್ತ್ರೀಪರ ನಿಲುವು ಕಾಳಜಿಗಳು, ಸಮಾಜದ ಹಿನ್ನೆಲೆಯಲ್ಲಿ ಅಸಮಾನತೆಯ ಬೆನ್ನಲ್ಲಿ ಅವರು ಪರಿಸ್ಥಿತಿಗಳನ್ನು ಪ್ರತಿಬಿಂಬಿಸುವ ರೀತಿ, ನೀತಿಗಳು ಇತ್ಯಾದಿಗಳನ್ನು ಸ್ತ್ರೀವಾದಿ ಸಂವೇದನೆಯ ಹಿನ್ನೆಲೆಯಲ್ಲಿ ಕಾಣುವ ದೂರದರ್ಶಿತ್ವವಾಗಿದೆ.

"ತ್ರಿವೇಣಿಯವರಾದರೋ ಸ್ತ್ರೀ ಸಾಹಿತ್ಯವು ಭದ್ರವಾಗಿ ಕನ್ನಡದಲ್ಲಿ ನೆಲೆಯೂರುವಂತೆ ಮಾಡಿದರಲ್ಲದೆ ಸ್ತ್ರೀಪರ ಚಿಂತನೆಗೆ ಪ್ರತಿಷ್ಠೆ ಹಾಗೂ ಜನಪ್ರಿಯತೆಗಳನ್ನು ಗಳಿಸಿಕೊಟ್ಟರು. ಹೆಚ್ಚು ಕಡಿಮೆ ಎಲ್ಲಾ ರಚನೆಗಳು ಸ್ತ್ರೀಕೇಂದ್ರಿತವೇ. ವಿಷಮ ದಾಂಪತ್ಯವನ್ನು ಸ್ತ್ರೀ ದೃಷ್ಟಿಕೋನದಿಂದಲೇ ಅಪಸ್ವರದಲ್ಲಿ ವಿಶ್ಲೇಷಿಸುತ್ತಾರೆ. ಸಂಪ್ರದಾಯ ಜಡ ಹಾಗೂ ಪುರುಷ ಪ್ರಧಾನ ಸಮಾಜದ ವಿರುದ್ಧ ತೀವ್ರ ಪ್ರತಿಭಟನೆ ತೋರುತ್ತಾರೆ. ಸ್ವತಃ ಸ್ತ್ರೀಯಾಗಿರುವುದರಿಂದ ತ್ರಿವೇಣಿಯವರಿಗೆ ಸ್ತ್ರೀ ಸಂವೇದನೆಯನ್ನು ಯಾವ ರೀತಿಯ ಭಾವಾವೇಶವೂ ಇಲ್ಲದೆ ಅಭಿವ್ಯಕ್ತಗೊಳಿಸುತ್ತಾರೆ".[೨]

ಪು. ೧೬೬

ತ್ರಿವೇಣಿಯವರ ಅತ್ಯಂತ ಪ್ರಮುಖ ಸ್ತ್ರೀವಾದಿ ಕಾದಂಬರಿಯೆಂದರೆ ೧೯೫೫ರಲ್ಲಿ ಪ್ರಕಟವಾದ 'ಕೀಲುಗೊಂಬೆ'. ಈ ಕಾದಂಬರಿಯಲ್ಲಿ ಲೇಖಕಿ ಸ್ತ್ರೀಯ ಬಗೆಬಗೆಯ ಶೋಷಣೆಗೆ ಕಾರಣವಾದ ಪುರುಷ ದ್ವೇಷದಿಂದ ಕೂಡಿದೆಯೆಂದರೂ ಪ್ರಾರಂಪರಿಕ ವಿವಾಹದ ಚೌಕಟ್ಟಿನಲ್ಲಿ ಅಡಗಿರುವ ಅಸೀಮ ಕ್ರೌರ್ಯವನ್ನು ಸಫಲವಾಗಿ ದಾಖಲಿಸುತ್ತದೆ. 'ಮೊದಲಹೆಜ್ಜೆ'ಯೂ 'ಕೀಲುಗೊಂಬೆ'ಯಂತೆಯೇ ಹೆಣ್ಣಿಗೊಂದು ಗಂಡಿಗೊಂದು ಸಾಮಾಜಿಕ ವರ್ತನೆ ಹಾಗೂ ಮಾನದಂಡಗಳನ್ನು ರೂಪಿಸುವ ಪುರುಷಕೇಂದ್ರಿತ ಸಮಾಜವನ್ನು ಉಗ್ರವಾಗಿ ಖಂಡಿಸುತ್ತದೆ.

ವಿವಾಹವೆಂಬ ಸಾಮಾಜಿಕ ಸಂಸ್ಥೆಯನ್ನು ಎದುರಿಸಿ ಒಂದಲ್ಲಾ ಒಂದು ಕಾರಣಕ್ಕಾಗಿ ಸೋಲುವ ಆರುಜನ ಗೆಳತಿಯರು ತಮ್ಮ ಬದುಕನ್ನು ಭಯಂಕರವಾಗಿ ಕೊನೆಗಾಣಿಸಿಕೊಳ್ಳುವ 'ಕಂಕಣ' ತನ್ನ ಕಪ್ಪು ಬಣ್ಣದಿಂದಾಗಿ ಬಹುಕಾಲ ಮದುವೆಯಾಗದೆ ಉಳಿಯುವ ವೇದವಲ್ಲಿ. ಸ್ವಾತಂತ್ರ್ಯವಿಲ್ಲವೆಂಬುದನ್ನು ಒಪ್ಪಿಕೊಂಡ ಅರಿವು. ಮೇಲ್ನೋಟಕ್ಕೆ 'ಕಂಕಣ' ಮತ್ತು 'ಮುಕ್ತಿ' ಈ ಎರಡೂ ಕಾದಂಬರಿಗಳು ಸ್ತ್ರೀಯ ಪಾರಂಪರಿಕ ಪಡಿಯಚ್ಚನ್ನು ಯಾವ ಕಾರಣಕ್ಕೂ ಅಸಮಾಧಾನಗೊಳ್ಳದ ನಿಸ್ವಾರ್ಥಿ ಮತ್ತು ಪುರುಷಾನುವರ್ತಿಯಾದ ಸ್ತ್ರೀಯ ಮಾದರಿಯನ್ನು ಎತ್ತಿ ಹಿಡಿಯುವಂತೆ ಕಾಣುತ್ತದೆ.

ಸ್ತ್ರೀಯರ ಮೂಲಕ ತ್ರಿವೇಣಿ ನಮಗೆ ತೋರಿಸುವುದೇನೆಂದರೆ ಹೇಗೆ ಆಧುನಿಕ ಸ್ತ್ರೀಯರು ಇಂದು ಒಂದು ಅಸಾಧ್ಯ ಹಾಗೂ ಅಸಂಬದ್ಧ ಪ್ರಪಂಚದಲ್ಲಿ ಬದುಕಬೇಕಾಗಿದೆ ಎಂಬುದನ್ನು ಈ ಪ್ರಪಂಚದಲ್ಲಿ ಏರೋಪ್ಲೇನ್‌ಗಳೊಡನೆ, ಹಿರಿಯರಿಂದ ನಿರ್ಧರಿಸಲ್ಪಟ್ಟ ಮದುವೆಗಳಿವೆ. ರಸೆಲ್ ಓದುತ್ತಲೇ ಜಾತಕಗಳು ನೋಡಲ್ಪಡುತ್ತವೆ ಮತ್ತು ಹಾಲಿವುಡ್ ಸಿನಿಮಾಗಳೊಡನೆ ವರದಕ್ಷಿಣೆಯ ಸಂಪ್ರದಾಯವೂ ಇದೆ ಎಂದರೆ ಮಧ್ಯಕಾಲೀನ ಹಾಗೂ ಆಧುನಿಕ ಇವೆರಡು ಯುಗಗಳಲ್ಲಿಯೂ ಏಕಕಾಲದಲ್ಲಿ ಆಧುನಿಕ ಸ್ತ್ರೀಯರು ಬದುಕಬೇಕಾಗಿದೆ.

ಆರ್ಯಾಂಬರವರು ಚಿತ್ರಿಸುವಂತೆ ಸಮಾಜ ಗಂಡುಹೆಣ್ಣು ಎಂಬ ತಾರತಮ್ಯವನ್ನು ಅವರು ನಿರ್ವಹಿಸುವ ಕೆಲಸಕಾರ್ಯಗಳಲ್ಲೂ ನಿಗದಿಪಡಿಸಿದೆ. ಅದು ನಿರೂಪಕನ ಊರಿನಲ್ಲೂ ಸರ್ವೇಸಾಮಾನ್ಯ "ನಮ್ಮೂರಿನಲ್ಲೂ ಹೆಣ್ಣು ಮಕ್ಕಳನ್ನು ಹೆಂಡತಿಯಾಗುವುದಕ್ಕೆ ಮೊದಲು ತಾಯಿಯಾಗುವಂತೆ ತಯಾರು ಮಾಡುವರು. ಸಂಪಾದಿಸಿ ದವಸಧಾನ್ಯ ತಂದು ಹಾಕುವುದು ಗಂಡಸಿನ ಕೆಲಸ ಅದನ್ನು ಒಪ್ಪ ಓರಣ ಮಾಡಿ ಹಿಟ್ಟು ಬೀಸಿ ಅಡಿಗೆ ಮಾಡುವುದು, ನೀರು

ತರುವುದು, ಬಟ್ಟೆ ಒಗೆಯುವುದು, ವರ್ಷಕ್ಕೊಂದು ಮಕ್ಕಳಂತೆ ಹೆತ್ತು ಸಾಕುವುದು ಗಂಡ ಹಿರಿಯರಿಗೆ ತಗ್ಗಿ ನಡೆಯುವುದು ಹೆಂಗಸಿನ ಕೆಲಸ. ಇದು 'ಅಸಂಗತ'ದಲ್ಲಿ ವ್ಯಕ್ತವಾಗುವ ಸ್ತ್ರೀವಾದಿ ಅಂಶ"[೬].

"ನಮ್ಮ ಭಾರತೀಯ ಸಂಪ್ರದಾಯದ ಪ್ರಕಾರ ಪತಿಯೇ ಪರದೈವ ಎಂಬ ಹೇಳಿಕೆಯನ್ನು ಆರ್ಯಾಂಬರವರು ಪತಿ ಹೆಂಡತಿಯೊಡನೆ ಸಾಮರಸ್ಯದಿಂದ ಬದುಕಿದರೆ ಸರಿ. ಇಲ್ಲವಾದರೆ ಅದು ವ್ಯಭಿಚಾರವೇ ಸರಿ ಎನ್ನುವ ಮೂಲಕ ಆಧುನಿಕ ಸ್ತ್ರೀಯರ ಹೋರಾಟದ ಮನೋಭಾವವನ್ನು ತಿಳಿಸುತ್ತಾರೆ"[೭].

"ಮದುವೆಯಾದ ಹೆಣ್ಣು ಹೊರಗೆ ದುಡಿಯುವುದು ತಪ್ಪೇ?"[೮] ಎಂಬ ಪ್ರಶ್ನೆಯನ್ನಿಟ್ಟು ಅದರ ಬಗ್ಗೆ ಸ್ತ್ರೀಯರೇ ಚರ್ಚಿಸುವಂತಹ ಸಂದರ್ಭವನ್ನು ತಂದಿದ್ದಾರೆ. ಇಂದು ಮಹಿಳೆ ಸಂಸಾರ ಹಾಗೂ ಉದ್ಯೋಗ ಈ ಎರಡು ಕ್ಷೇತ್ರಗಳಲ್ಲೂ ಯಶಸ್ವಿಯಾಗಿದ್ದಾಳೆ. ಹಾಗೆ ನೌಕರಿ ಮಾಡೋ ಹೆಂಗಸರಿಗೆಲ್ಲ ಆರ್ಥಿಕ ಸ್ವಾತಂತ್ರ್ಯ ಇರುವುದಿಲ್ಲ ಎಂಬ ಸತ್ಯಾಂಶ ನಿರುದ್ಯೋಗಿ ಸೋಮಾರಿ ಬೇಜವಾಬ್ದಾರಿ ಗಂಡನನ್ನು ಕಟ್ಟಿಕೊಂಡ ಉದ್ಯೋಗಸ್ಥ ಮಹಿಳೆಯ ಪಾಡು ಮದುವೆಯಾದ ಮೇಲೆ ಕೆಲಸ ಬಿಡಿಸುವ ಗಂಡಂದಿರ ವಿಷಯ ಒಂದು ವೇಳೆ ಕೆಲಸಕ್ಕೆ ಹೋದರೂ ಮಕ್ಕಳನ್ನು ನೋಡಿಕೊಳ್ಳುವ ಚಿಂತೆ ಹೀಗೆ ಹಲವಾರು ಸಮಸ್ಯೆಗಳನ್ನು ಓದುಗರ ಮುಂದಿರಿಸಿದ್ದಾರೆ ಅರ್ಯಾಂಬರವರು.

ಇಬ್ಬರು ಸ್ತ್ರೀಯರೇ ಆಗಿರುವುದರಿಂದ ಸ್ತ್ರೀನಿಲುವು ಧೋರಣೆಗಳು ವಿಚಾರ ಸುಳುಹುಗಳು ಕರತಲಾಮಲಕವಾಗಿವೆ. ಸ್ತ್ರೀವಾದದ ಒಂದೊಂದು ಎಳೆ ಎಳೆಯನ್ನು ಜೋಡಿಸುವಲ್ಲಿ ಸಫಲರಾಗಿದ್ದಾರೆ ಆರ್ಯಾಂಬ ಹಾಗೂ ತ್ರಿವೇಣಿಯವರು.

ಹೀಗಿರುವಾಗ, ಸ್ತ್ರೀವಾದಿ ಸಂವೇದನೆ ಹುಟ್ಟಿಕೊಳ್ಳಲು ಕಾರಣವಾದ ಕೆಲವು ಚಾರಿತ್ರಿಕ ಸಂದರ್ಭಗಳನ್ನು, ಕಾರಣಗಳನ್ನು ಹೀಗೆ ಗುರುತಿಸಬಹುದು.

೧. ಜಗತ್ತಿನಾದ್ಯಂತ ಎಲ್ಲಾ ಜನಾಂಗಗಳಲ್ಲಿ ಹೆಣ್ಣು ಹೆಚ್ಚು ಶೋಷಣೆಗೆ ಒಳಗಾಗಿದ್ದಾಳೆ ಎನ್ನುವ ಅರಿವು.

೨. ಕುಟುಂಬದ ಸ್ವರೂಪದಲ್ಲಿ ಹೆಣ್ಣಿಗೆ ಕೇವಲ ಹೆರುವ ಕೆಲಸವಷ್ಟೇ ಮೀಸಲಾಗಿರುವುದು.

೩. ಸಂಸ್ಕೃತಿ, ರಾಜಕೀಯ, ಸಾಮಾಜಿಕ ಅವತರಣಿಕೆಯಲ್ಲಿ ಹೆಣ್ಣಿನ ಮೇಲೆ ಗಂಡಿನ ದಬ್ಬಾಳಿಕೆ.

೪. ಲೈಂಗಿಕ ವ್ಯವಹಾರದಲ್ಲಿ ಹೆಣ್ಣಿಗೆ ಯಾವ ಪ್ರಾಶಸ್ತ್ಯವೂ ಇಲ್ಲದಿರುವುದು.

೫. ವಿಜ್ಞಾನ ಭಾಷೆ ಮುಂತಾದ ವಿಚಾರಗಳು ಪುರುಷ ಪ್ರಧಾನವಾಗಿರುವುದು.

೬. ಹೆಣ್ಣು ತನಗೆ ಅರಿವಿಲ್ಲದೆ ಈ ತನಕ ಗಂಡಿನ ಅಧಿಪತ್ಯಕ್ಕೆ ಒಳಗಾಗಿರುವುದು.

೭. ಎರಡನೆ ದರ್ಜೆಯ ಪ್ರಜೆಯಾದ ಹೆಣ್ಣು ಮೂಲಭೂತವಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಇದು ಎಲ್ಲಾ ಜಾತಿಯ ಎಲ್ಲಾ ವರ್ಗಗಳಲ್ಲಿ ಕಂಡುಬರುವ ಸಮಸ್ಯೆ. ಈ ಸಮಸ್ಯೆ ಹೆಣ್ಣಿನ ಪ್ರಜ್ಞೆಯನ್ನು ನಿಯಂತ್ರಿಸುತ್ತದೆ. ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಯತ್ನಿಸುವುದು.

ಮೇಲಿನ ಅಂಶಗಳನ್ನು ವಿಸ್ತೃತವಾಗಿ ವಿವೇಚಿಸುವುದು ಉಚಿತವೆನಿಸುತ್ತದೆ. ಇದರಿಂದ ಬಿಟ್ಟು "ಸ್ತ್ರೀವಾದಿ ಸಂವೇದನೆಯ ತಾತ್ವಿಕ ಭಿತ್ತಿಯನ್ನು ಸ್ಥೂಲವಾಗಿಯಾದರೂ ನಮ್ಮ ಗ್ರಹಿಕೆಗೆ ತಂದುಕೊಳ್ಳಬಹುದು".[೯]

ಶೋಷಣೆ ಹೆಣ್ಣಿಗೆ ಸಂಬಂಧಿಸಿದಂತೆ

ಪ್ರಪಂಚದ ಎಲ್ಲಾ ಜನಾಂಗಗಳಲ್ಲಿ ಹೆಣ್ಣಿನ ಶೋಷಣೆ ಒಂದು ಸಾಮಾನ್ಯ ಸಂಗತಿಯಾಗಿ ಅರಿವಿಗೆ ಬರುತ್ತದೆ ಮತ್ತು ಇದಕ್ಕೆ ತನ್ನದೇ ಅದ ಚರಿತ್ರೆಯಿದೆ. ಮಾರ್ಕ್ಸ್‌ವಾದಿಗಳು ಹೇಳುವ 'ಸ್ತ್ರೀಯರ ಐತಿಹಾಸಿಕ ಪರಾಜಯ'ದ ನಂತರ ಮಾತೃಪ್ರಧಾನ ಸಂಸ್ಕೃತಿಯಿಂದ ಪಿತೃಪ್ರಧಾನ ಸಂಸ್ಕೃತಿಗೆ ಪರಿವರ್ತನೆಯಾದ ಕಾಲಾನಂತರದಿಂದಲೂ ಇದನ್ನು ಗಮನಿಸಬಹುದು. ಎಲ್ಲಾ ನಾಗರಿಕತೆಗಳಲ್ಲೂ ಕೂಡ ಹೆಣ್ಣಿನ ಬಗ್ಗೆ ಹೀನಾಯ ಕಲ್ಪನೆ ಅಥವಾ ಎರಡನೆ ದರ್ಜೆಯ ವ್ಯಕ್ತಿಯಾಗಿ ಕಾಣುವ ಪ್ರವೃತ್ತಿ ಇದ್ದೇ ಇದೆ. ಈ ರೀತಿಯ ಸಂಗತಿಗಳೆ ಒಂದು ಸಾಮಾಜಿಕ ವ್ಯವಸ್ಥೆಯಾಗಿ ರೂಪುಗೊಂಡಿದ್ದು ಅವು ಪುರುಷನ ಪರವಾಗಿವೆ. ಈ ಒತ್ತಡದ ನಡುವೆಯೆ ಆಕೆಯ ಅರಿವು ಆಲೋಚನಾ ಕ್ರಮವು ರೂಪುಗೊಳ್ಳುತ್ತಿದೆ.

ಮಹಿಳೆಯ ತಾಯ್ತನವು ಕೇವಲ ಆಕೆಯ ದೈಹಿಕ ಮತ್ತು ಮನಸ್ಸುಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಬದಲಾಗಿ ಅದು ಸಾಮಾಜಿಕ ಸ್ಥಿತಿಯ ಮೇಲೂ ಕೂಡ ಪರಿಭಾವಿಸುತ್ತಾರೆ. ಆದರೆ 'ತಾಯಿಯ ಪ್ರೀತಿ' ಕೇವಲ ಮನೆಯೊಳಗಿನ ವ್ಯವಹಾರವಾದ್ದರಿಂದ ಕುಟುಂಬದ ಸ್ವರೂಪವು ಬದಲಾಗಬೇಕೆಂದು ಒತ್ತಾಯಿಸುತ್ತಾರೆ. ಕೆಲವು ಚಿಂತಕಿಯರು ಪುರುಷನು ತಾಯ್ತನವನ್ನು ಒತ್ತಾಯಿಸುವುದನ್ನು ಖಂಡಿಸಿ, ಸ್ತ್ರೀಗರ್ಭಧರಿಸುವುದೂ, ಬಿಡುವುದು ಅವಳ ಹಕ್ಕೆಂದು ವಾದಿಸುತ್ತಾರೆ.

ಸಂಸ್ಕೃತಿಯೆಂದರೆ ಅದು ಗಂಡಿನದು ಅದರಲ್ಲೂ ಸ್ತ್ರೀಯೂ ಇದ್ದಾಳೆ. ಆದರೆ ಸ್ತ್ರೀ ಸಂಸ್ಕೃತಿಯು ಅನಧಿಕೃತವಾಗಿದೆ. ಆಕೆಯದು ಕಿರುಸಂಸ್ಕೃತಿ ಎಂದು ಪರಿಭಾವಿಸಲಾಗಿದೆಯಾದ್ದರಿಂದ ಅದು ಏಕಮುಖವಾಗಿದೆ. ಆದರೆ ಸ್ತ್ರೀ ಸಂಸ್ಕೃತಿಯು ಅದು ಅಂತಸ್ಥವಾದುದಾಗಿದ್ದು, ಎಷ್ಟೋ ವೇಳೆ ಅದು ಪುರುಷ ಸಂಸ್ಕೃತಿಯೊಳಗೆ ಅಡಗಿರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಬಹಳಷ್ಟು ಸಲ ಎಲ್ಲಾ ಸಂಸ್ಕೃತಿಯಲ್ಲೂ ಮಹಿಳಾದನಿಯು ಕ್ಷೀಣವಾದುದಾಗಿರುತ್ತದೆ. ಆದರೆ ಮಹಿಳಾವಾದಿಗಳು ಇದನ್ನೇ ಮುಖ್ಯವಾಗಿ ಗಣಿಸುತ್ತಾರೆ. ಬಹುತೇಕ ವೇಳೆ ಮಹಿಳೆ ಪುರುಷನ ಸಾಂಸ್ಕೃತಿಕ ಪದ್ಧತಿಯನ್ನೇ ಸಹಜವಾಗಿ ಒಪ್ಪುವ ಸ್ಥಿತಿಯನ್ನೇ ನಾವು ಕಾಣುತ್ತೇವೆ.

ಲೈಂಗಿಕ ಚಟುವಟಿಕೆಯಲ್ಲಿ ಗಂಡು ಮುಖ್ಯವಾಗಿ ತನ್ನ ತೃಪ್ತಿಯನ್ನೇ ಪರಿಗಣಿಸುತ್ತಾನೆ ಎಂದು ಸ್ತ್ರೀವಾದಿಗಳು ವಾದಿಸುತ್ತಾರೆ. ಮುಖ್ಯವಾಗಿ ಫ್ರೆಂಚ್ ಮಹಿಳಾವಾದಿಗಳು ಇದನ್ನು ಬೆಂಬಲಿಸುತ್ತಾರೆ. ಅದಲ್ಲದೆ ಗಂಡು ಹಲವು ಹೆಣ್ಣುಗಳನ್ನು ಹೊಂದಬಹುದು. ಆದರೆ ಹೆಣ್ಣಿಗೆ ಇಂತಹ ಸ್ವಾತಂತ್ರ್ಯವನ್ನು ತಡೆಹಿಡಿಯಲಾಗಿದೆ. ಅಲ್ಲದೆ ಪಾವಿತ್ರ್ಯತೆ ಪ್ರಾತಿವ್ರತ್ಯ ಮುಂತಾದ ನಂಬಿಕೆಗಳನ್ನು ಆಕೆ ಆಚರಿಸಬೇಕಾಗಿದೆ.

ಇದನ್ನು ಸಾಮಾನ್ಯ ವಿಜ್ಞಾನದ ಹಿನ್ನೆಲೆಯಲ್ಲಿ ಮಾತನಾಡಿದರೂ ಸಹ ಮುಖ್ಯವಾಗಿ ಫ್ರಾಯ್ಡನ ಮನೋವಿಜ್ಞಾನವನ್ನು ಗುರಿಯನ್ನಾಗಿ ಹೊಂದಲಾಗಿದೆ. ಫ್ರಾಯ್ಡ್‌ನ ಎಲ್ಲಾ ಸಿದ್ಧಾಂತಗಳ ಹಿಂದೆ ಪುರುಷತ್ವದ ಧ್ವನಿ ಇರುವುದನ್ನು ಯಾರೂ ಗುರುತಿಸಬಹುದಾಗಿದೆ. ಕಾರಣ ಫ್ರಾಯ್ಡ್ ಪುರುಷ ನಿಷ್ಠೆ ನೆಲೆಯಿಂದ ತನ್ನ ವಿವೇಚನೆಗೆ ತೊಡಗುವುದು ಇದಕ್ಕೆ ಕಾರಣ ಆತನ ಕಾಲದ ಒಟ್ಟು ಸ್ಥಿತಿಗತಿಯೂ ಹಾಗೆಯೇ ಇದ್ದಿತು.

ಭಾಷೆಯನ್ನು ಸಾಮಾನ್ಯವಾಗಿ ಪುರುಷನಿಷ್ಠವೆಂದು ಭಾವಿಸಲಾಗಿದೆ. ಭಾಷೆಯ ಬಗ್ಗೆ ಮಾತನಾಡುತ್ತಾ ಗಂಡು ಭಾಷೆ ಎಂಬ ಪರಿಭಾಷೆಯನ್ನು ಜಾರಿಗೆ ತರಲಾಗಿದೆ. ಹೆಣ್ಣು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಈ ಪುರುಷನಿಷ್ಠ ಭಾಷೆಯ ಅಥವಾ 'ಗಂಡುಭಾಷೆ'ಯ ಲಯವನ್ನು ಒಪ್ಪಿಕೊಳ್ಳುವ ಸಾಧ್ಯತೆಯಿದೆ. ಒಟ್ಟು ಸಾಮಾಜಿಕ ರಚನೆಯೇ ಪುರುಷಪರವಾಗಿರುವಾಗ ಅದರ ಉತ್ಪನ್ನವಾದ ಭಾಷೆ ಕೂಡ ಅದೇ ರಚನೆಗೆ ಬದ್ಧವಾಗಿರುತ್ತದೆ.

ಸಮಾಜ ಆಕೆಯನ್ನು ಎರಡನೇ ದರ್ಜೆ ಪ್ರಜೆಯಾಗಿ ಮಾರ್ಪಡಿಸಿರುವುದರಿಂದಲೇ ಆಕೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಇದರಿಂದ ವಿಮೋಚನೆಗೊಳ್ಳುವುದು ತಮ್ಮ ಹಕ್ಕೆಂದು ಮಹಿಳಾವಾದಿಗಳು ವಾದಿಸುತ್ತಾರೆ. ಈ ಸಮಸ್ಯೆಗಳು ಜೀವನದ ಎಲ್ಲಾ ರಂಗಗಳಿಗೆ ಸಂಬಂಧಿಸಿದ್ದು. ಅವುಗಳಿಗೆ ಪರಿಹಾರ ಕಂಡುಹಿಡಿಯುವುದೇ ಇಂದಿನ ಸ್ತ್ರೀವಾದಿಗಳ ಮುಖ್ಯ ಆಶಯವಾಗಿದೆ.

ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ, ಅಲ್ಲಿ ದೇವತೆಗಳು ರಮಿಸುತ್ತಾರೆ ಎಂದು ಹೇಳಿದ ಪ್ರಾಚೀನ ಹಿಂದೂ ಸಂಸ್ಕೃತಿಯ ಒಡಲಲ್ಲೇ ಹೆಣ್ಣಿಗೆ ಸ್ವಾತಂತ್ರ್ಯವನ್ನು ನಿರಾಕರಿಸಿದ ಆ ಸಂಸ್ಕೃತಿ ಅವಳಿಗೆ ಸಂಕೋಲೆಯನ್ನು ಬಿಗಿದು ದನಿಯೆತ್ತದಂತೆ ಮಾಡಿದೆ. ಆದರೂ ತಮ್ಮ ಸುತ್ತ ಬಿಗಿದಿರುವ ಸಂಕೋಲೆಯ ಉಕ್ಕಿನ ಹಿಡಿತವನ್ನು ಪ್ರತಿಭಟಿಸಲು ಅಲ್ಲೊಂದು, ಇಲ್ಲೊಂದರಂತೆ ಕೇಳಿಬರುತ್ತಿರುವ ಗಟ್ಟಿ ಧ್ವನಿಗಳ ಬಾಯಿ ಮುಚ್ಚಿಸಲು ಹಿಂದೂ ಸಂಸ್ಕೃತಿಯು ತನ್ನ ಕೀರ್ತಿಪತಾಕೆಯನ್ನು ಮತ್ತೆ ಮತ್ತೆ ಹೊಸ ಹೊಸ ವರ್ಣಗಳಲ್ಲಿ ರಾಗರಂಜಿತವಾಗಿ ಚಿತ್ರಿಸುತ್ತಿದೆ. ಆದರೂ ಸತ್ಯ ಕಾಣಬೇಕೆಂಬ ಮನಸ್ಸಿದ್ದವರಿಗೆ, ಸತ್ಯ ಕಾಣುವ ಮಾರ್ಗ ಗೊತ್ತಿದ್ದವರಿಗೆ ನಿಜ ಚಿತ್ರ ಅರಿವಾಗದೆ ಇರದು.

"ಲೈಂಗಿಕ ಪ್ರಶ್ನೆಯನ್ನು ಹೊಂದಿರುವ ದಾಂಪತ್ಯ ನೀತಿ ಬಲು ಜಿಗುಟಿನ ಸಮಸ್ಯೆ. ನಮ್ಮ ಸಮಾಜದ ಮನುಧರ್ಮರುಗಳು ಅರ್ವಾಬೇಧ ನೀತಿಕಾರರೂ ಬಣ್ಣಿಸುವಷ್ಟು ಸುಲಭದಲ್ಲಿ ಖಂಡ ತುಂಡ ನಿಯಮಗಳನ್ನು ಹಿಂಬಾಲಿಸುವ ಪ್ರಶ್ನೆ ಅದಲ್ಲ ಎಂದೇ ನನಗೆ ತೋರುತ್ತದೆ"[೧೦] ಎನ್ನುತ್ತಾರೆ ಶಿವರಾಮ ಕಾರಂತರು. ಈ ಮಾತುಗಳು ದಾಂಪತ್ಯ ನೀತಿಯು ಅಪೇಕ್ಷಿಸುವ ಸ್ವಾತಂತ್ರ್ಯವನ್ನು ಹಾಗೂ ಮಾನವೀಯ ನೆಲೆಯನ್ನು ಪ್ರಸ್ತಾಪಿಸುತ್ತದೆ. ವಾಸ್ತವದಲ್ಲಿ ಇಂತಹ ಲೈಂಗಿಕ ಸ್ವಾತಂತ್ರ್ಯದ ನೀತಿಯು ಬಹಳಷ್ಟು ಬಾರಿ ಏಕಪಕ್ಷೀಯವಾಗಿರುತ್ತದೆ. ಗಂಡಿನ ಪರವಾಗಿ ವಕಾಲತ್ತು ವಹಿಸುತ್ತದೆ.

ಮನುಷ್ಯನ ಮುಖ್ಯ ಪ್ರವೃತ್ತಿಗಳಲ್ಲೊಂದಾದ 'ಕಾಮ' ಅದರ ಪೂರೈಕೆಗಾಗಿ ಸೃಷ್ಟಿಯಾಗುವ ಗಂಡು ಹೆಣ್ಣಿನ ಸಂಬಂಧ ಇವು ಸಂಸ್ಥೀಕರಣಗೊಂಡಾಗ ಸೃಷ್ಟಿಯಾಗುವ ಸಮಸ್ಯೆಗಳು ಅಪಾರ. ವಿವಾಹ ಸಂಸ್ಥೆ ಹೊರಿಸುವ ಹತ್ತು ಹಲವಾರು ಬಿಗಿ ನಿಯಮಗಳು ತೊಡಗಿಸುವ ಅನೇಕ ಸಂಪ್ರದಾಯದ ಸಂಕೋಲೆಗಳು ಸಮಾಜದ ಮುಗ್ಧಜೀವಿಗಳನ್ನು ಬಲಿತೆಗೆದುಕೊಳ್ಳುವ ರೀತಿ ಊಹೆಗೂ ನಿಲುಕದ್ದು.

ಹೆಣ್ಣಿನ ಬದುಕಿನಲ್ಲಿ ವಿವಾಹವೆನ್ನುವುದು ಮಹತ್ತರ ಬದಲಾವಣೆಗಳನ್ನು ತರುವ ಘಟನೆ, ಹೆಣ್ಣಿನ ಆಸೆ, ಆಕಾಂಕ್ಷೆಗಳು, ಕಲಿಕೆ ಸಾಮರ್ಥ್ಯಗಳು ಸೃಜನಶೀಲತೆಯ ಅಳಿವು ಉಳಿವುಗಳು ಬಹಳಷ್ಟು ಬಾರಿ ವಿವಾಹವನ್ನು ಅವಲಂಬಿಸಿರುತ್ತದೆ. ಹೆಣ್ಣು ಮದುವೆಯಾಗುವುದು ಬರೀ ಗಂಡನನ್ನಲ್ಲ, ಅವನ ಇಡೀ ಕುಟುಂಬವನ್ನು ಆದರೆ ಗಂಡನ ಪಾಲಿಗೆ ಇದು ಹಾಗಾಗಬೇಕೆಂದೇನೂ ಇಲ್ಲ. ಬಯಸಲಿ, ಬಯಸದಿರಲಿ ವಿವಾಹ ಹೆಣ್ಣಿನ ಪಾಲಿಗೆ ಬಂಧನವಾಗಿಯೇ ಪರಿಣಮಿಸುತ್ತದೆ. ಈ ಪವಿತ್ರ ಬಂಧನ ಪ್ರೇಮ ಬಂಧನವೂ ಆಗಬೇಕಾದರೆ ಅದು ಬಹಳಷ್ಟು ತ್ಯಾಗವನ್ನು ಸ್ತ್ರೀ ಪುರುಷರಿಬ್ಬರಿಂದಲೂ ಅಪೇಕ್ಷಿಸುತ್ತದೆ. ಆದರೆ ಈ ಅಪೇಕ್ಷೆ ಹೆಣ್ಣಿನ ಕಡೆಯಿಂದಲೇ ಹೆಚ್ಚಿರುತ್ತದೆ. ವೈವಾಹಿಕ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಎಷ್ಟೇ ಕಾನೂನುಗಳು ಬಂದರೂ ಒಟ್ಟಾರೆಯಾಗಿ ಸಮಾಜದಲ್ಲಿ ವಿವಾಹವನ್ನು ಕುರಿತಾದ ಪರಿಕಲ್ಪನೆ ಬದಲಾಗದಿದ್ದರೆ ಸಮಸ್ಯೆಗಳು ಸಂಪೂರ್ಣವಾಗಿ ಇಲ್ಲದಂತಾಗುವುದಿಲ್ಲ. ಆದ್ದರಿಂದ ಯಾವುದೇ ಸಮಾಜದಲ್ಲಿನ ವಿವಾಹದ ಚೌಕಟ್ಟು ಮಹಿಳೆಯರ ಸ್ಥಾನಮಾನದ ಸ್ವರೂಪ. ಧೋರಣೆಗಳನ್ನು ರೂಪಿಸುವ ನಿರ್ಣಾಯಕ ಅಂಶವಾಗಿರುತ್ತದೆ.

ಬರ್ಟ್ರೆಂಡ್ ರಸೆಲ್ ಹೇಳುವಂತೆ "ಒಳ್ಳೆಯ ವಿವಾಹದ ಜೀವಾಳವಿರುವುದು ಪರಸ್ಪರ ವ್ಯಕ್ತಿತ್ವಗಳಿಗೆ ನೀಡುವ ಗೌರವದಲ್ಲಿ. ಇಬ್ಬರ ನಡುವಿರುವ ಆಳವಾದ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ವ್ಯಕ್ತಿತ್ವಗಳು ಸಮ್ಮಿಳಿತಗೊಂಡು ಸ್ತ್ರೀ ಪುರುಷರ ನಡುವಣ ಪ್ರೀತಿಯು ಹೆಚ್ಚು ಫಲಕಾರಿಯಾಗಲು ಅಪಾರವಾದ ತ್ಯಾಗ ಮನೋಭಾವ ಅವಶ್ಯವಾಗುತ್ತದೆ. ಇಂತಹ ತ್ಯಾಗವು ಸ್ವಯಂ ಇಚ್ಛೆಯಿಂದ ಕೂಡಿರದಿದ್ದರೆ ಅದು ಪ್ರೀತಿಯ ಆಸ್ತಿಭಾರವನ್ನು ನಾಶ ಮಾಡಿ ಬಿಡುತ್ತದೆ".[೧೧] ಈ ಮಾತುಗಳು ಯಾವುದೇ ಸಮಾಜಕ್ಕೂ ಅನ್ವಯಿಸುವ ಮಾತು.

ಹೆಣ್ಣಾಗಿ ಹುಟ್ಟಿದ್ದೇ ಸಮಸ್ಯೆಯಾಗಬಲ್ಲ ಪ್ರಸ್ತುತ ಪರಿಸ್ಥಿತಿಯಲ್ಲಿ ಅವಳು ಬೆಳೆದು ದೊಡ್ಡವಳಾಗಿ ಮುಪ್ಪಾಗುವ ತನಕ ಪುರುಷ ಕಾಣದ ಕೆಲವು ವಿಶಿಷ್ಟ ಅನುಭವಗಳನ್ನು ಪಡೆಯುತ್ತಾಳೆ. ಮುಟ್ಟು, ಗರ್ಭ, ಹೆರಿಗೆ ಮುಂತಾದವು ದೈಹಿಕ ವೈಶಿಷ್ಟ್ಯಗಳಾದರೆ ಲಜ್ಜೆ, ಭಯ, ಸಂಕೋಚ, ಕೀಳರಿಮೆ ತಾಯ್ತನದ ಹೊಣೆ ಇವು ಬಹುತೇಕ ಪರಿಸರ ನಿರ್ಮಿತ ತನ್ನ ವೈಯಕ್ತಿಕ ಅನಿಸಿಕೆ, ಬಳಲಿಕೆ, ಸಹಜ ಕಾಮನೆ, ಕನಸು ಸ್ವಾತಂತ್ರ್ಯಗಳನ್ನು ಬದಿಗೊತ್ತಿ ಸದಾ ಕುಟುಂಬದ ಹಿತಕ್ಕಾಗಿ ಓಡಾಡುವ ಹೆಣ್ಣಿನ ಮಾನಸಿಕ ತಾಕಲಾಟ, ಸಮಸ್ಯೆಗಳಾಗಿ ಅವಳನ್ನು ಕಾಡಬಹುದು. ಸಮಾಜದ ದ್ವಿಮುಖ ನೀತಿ ಗಂಡಿನ ದಬ್ಬಾಳಿಕೆ, ದೈಹಿಕ ದೌರ್ಬಲ್ಯ ಮತ್ತು ಸ್ವಯಂ ನಿರ್ಮಿತ ಕಟ್ಟಲೆಗಳ ನಡುವೆ ಮಹಿಳೆ ನಾನಾ ತರಹ ಕ್ಷೋಭೆಗೊಳಗಾಗುತ್ತಾಳೆ. ಹುಟ್ಟಿನಿಂದ ಹಿಡಿದು ಜೀವನದುದ್ದಕ್ಕೂ ಹೆಣ್ಣಿನ ಆಸೆ ಆಕಾಂಕ್ಷೆಗಳನ್ನು ಜೀವನ ವಿಧಾನವನ್ನು ನಿಯಂತ್ರಿಸುವ ಶಕ್ತಿಗಳು ಅಪಾರ.

ಪು. ೧೭

ಈ ಸಂದರ್ಭಗಳಲ್ಲೆಲ್ಲಾ ತಮಗಾಗುತ್ತಿರುವ ಸ್ವಾತಂತ್ರ್ಯಹರಣದ ಪರಿವೆಯೇ ಇಲ್ಲದ ಹೆಣ್ಣುಗಳಿಗೆ ಬಂಧನದ ಅನುಭವವಾದರೂ ಎಲ್ಲಿದೆ? ಬಂಧನದಲ್ಲಿಯೇ ಕರ್ತವ್ಯ, ಸೌಂದರ್ಯ, ಜೀವನ ಮೀಮಾಂಸೆಯನ್ನು ಕಾಣಬಯಸುವವರ ಮುಂದೆ ಸ್ವಾತಂತ್ರ್ಯದ ಕಹಳೆ ಕೋಣದ ಮುಂದೆ ಕಿನ್ನರಿ ಬಾರಿಸಿದಂತೆ, ಹೆಣ್ಣಿನ ಮೂಕ ವೇದನೆಯನ್ನು ಆದರ್ಶೀಕರಿಸುವ ಈ ಸಮಾಜದಲ್ಲಿ ಬಾಳಿನ ಕರ್ಕಶತೆಯನ್ನು ಗುರುತಿಸುವುದಾದರೂ ಹೇಗೆ? ಹೆಣ್ಣು ತೊಡುವ ಸೇವಾ ಕೈಂಕರ್ಯ ಅವಳ ದಾಸ್ಯತ್ವವನ್ನು ಸೂಚಿಸುವುದಷ್ಟೆ ಅಲ್ಲ. ಸ್ವಾತಂತ್ರ್ಯಕ್ಕಾಗಿ ಹಾತೊರೆಯದ ಅವಳ ಮನೋಭಾವದ ಸೂಚಿಯು ಕೂಡ. ಮದುವೆಯ ಚೌಕಟ್ಟಿನೊಳಗೆ ಕೌರ್ಯ, ವಂಚನೆಗೆ ಒಳಗಾಗುವ ಹೆಣ್ಣುಗಳು ದಿನ ದಿನಕ್ಕೂ ಕುಬ್ಜರಾಗಿ ದನಿಯಿಲ್ಲದವರಾಗುತ್ತಾರೆ. ಪತ್ನಿ ಯಾರೊಡನೆ ಮಾತನಾಡಬೇಕು, ಯಾರೊಡನೆ ಸ್ನೇಹ ಮಾಡಬೇಕು ಎಂಬುದನ್ನು ಪತಿಶ್ರೇಷ್ಠರೇ ನಿರ್ಧರಿಸುವ ಸಂದರ್ಭಗಳೂ ಉಂಟು.

ಜವಾಹರಲಾಲ್ ನೆಹರುರವರು ಹೇಳುವಂತೆ "ಮಹಿಳೆಗೆ ಸ್ವಾತಂತ್ರ್ಯ ದೊರೆಯಬೇಕಾದರೆ ವಿವಾಹ ಒಂದು ವೃತ್ತಿ ಎಂಬ ಭಾವನೆ ಮೊದಲು ಮರೆಯಬೇಕು. ಸ್ವಾತಂತ್ರ್ಯವು ಆರ್ಥಿಕ ಸ್ಥಿತಿ ಗತಿಗಳ ಮೇಲೆ ಅವಲಂಬಿಸಿದೆ. ಮಹಿಳೆ ಆರ್ಥಿಕವಾಗಿ ಸ್ವತಂತ್ರಳಾಗದೆ ಹಾಗೂ ಸ್ವಯಂ ಗಳಿಕೆಯಲ್ಲಿ ತೊಡಗದಿದ್ದರೆ ಅವಳು ಗಂಡ ಅಥವಾ ಇನ್ನಾರ ಮೇಲೋ ಅವಲಂಬಿತಳಾಗಿರಬೇಕಾಗುತ್ತದೆ. ಪರಾವಲಂಬಿಗಳೆಂದಿಗೂ ಸ್ವತಂತ್ರರಲ್ಲ. ಸ್ತ್ರೀ ಪುರುಷರ ಸಂಬಂಧ ಪರಸ್ಪರ ಅವಲಂಬನೆ ಇಲ್ಲದಂತಹ ಸ್ವತಂತ್ರ ಸಂಗಾತಿತನ ಕೊಡುವಂಥದ್ದು".[೧೨]

ಆರ್ಯಾಂಬರ 'ಕಸ್ತೂರಿ' ಕಾದಂಬರಿಯಲ್ಲಿ ಈ ರೀತಿಯ ಅಂಶಗಳು ಎದ್ದು ಕಾಣುತ್ತದೆ. ಕಸ್ತೂರಿಯ ಅಣ್ಣಂದಿರಾದ ಮುರಳಿ ಮತ್ತು ಮೋಹನ ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಸಲುವಾಗಿ ತಂಗಿಯನ್ನು ಇಷ್ಟವಿಲ್ಲದ ಮದುವೆಗೆ ಬಲವಂತ ಮಾಡುತ್ತಾರೆ. ಅಂದರೆ ತಂಗಿ ಶಿವಸ್ವಾಮಿಯನ್ನು ಇಷ್ಟ ಪಟ್ಟಿರುವ ವಿಚಾರ ಗೊತ್ತಿದ್ದರೂ, ತಮ್ಮ ಬೇಳೆಕಾಳು ಬೇಯಿಸಿಕೊಳ್ಳಲು ಕಸ್ತೂರಿಯನ್ನು ಬಳಸಿಕೊಳ್ಳುತ್ತಾರೆ.

'ಅಸಂಗತ' ಕಾದಂಬರಿಯ ಮತ್ತೊಂದು ಚಿತ್ರಣ ನಿರೂಪಕನ ಅಕ್ಕ ಸತ್ತ ಐದು ತಿಂಗಳಿನಲ್ಲಿ ಭಾವನಿಗೆ ಮರುಮದುವೆ ಮಾಡುತ್ತಾರೆ. ನಿರೂಪಕನಿಗೆ ಇಲ್ಲಿಯೂ ಪ್ರಶ್ನೆಗಳು ಮೂಡುತ್ತವೆ. ಅಕ್ಕ ಸತ್ತ ಅನಂತರ ಭಾವನಿಗೆ ಮದುವೆ, ಭಾವ ಸತ್ತಿದ್ದರೆ ಅಕ್ಕನಿಗೆ ಇಷ್ಟು ಸಲಿಸಾಗಿ ಮದುವೆ ಮಾಡುತ್ತಿದ್ದರೇ?

ಪು. ೧೭೩

ತ್ರಿವೇಣಿಯವರ 'ಕೀಲುಗೊಂಬೆ' ಕೃತಿಗಳಲೆಲ್ಲಾ ಅತ್ಯಂತ ಅಕ್ರಾಮರ ಸ್ತ್ರೀವಾದಿ ಕಾದಂಬರಿ ಎಂದರೆ ತಪ್ಪಾಗಲಾರದು. ಈ ಕಾದಂಬರಿಯಲ್ಲಿ ಲೇಖಕಿ ಸ್ತ್ರೀಯ ಬಗೆ ಬಗೆಯ ಶೋಷಣೆಗೆ ಕಾರಣವಾದ ಪುರುಷ ಪ್ರಧಾನ ಸಮಾಜವನ್ನು ಕಟುವಾಗಿ ಟೀಕಿಸುತ್ತಾರೆ. ಸಾಂಪ್ರದಾಯಿಕ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಬೆಳೆಸುವ ಬಗ್ಗೆ ಮತ್ತು ಹೆಣ್ಣಿನ ಸ್ಥಾನಮಾನಗಳ ಬಗ್ಗೆ ಕಾದಂಬರಿಯು ಅರ್ಥಪೂರ್ಣ ಒಳನೋಟವನ್ನು ನೀಡುತ್ತದೆ.

'ಕೀಲುಗೊಂಬೆ'ಯಂತೆಯೇ ಮತ್ತೊಂದು ಸ್ತ್ರೀವಾದಿ ನೆಲೆಯ ಕಾದಂಬರಿ 'ಮೊದಲಹೆಜ್ಜೆ' ಬಡತನ ಮತ್ತು ಕಪ್ಪು ಬಣ್ಣದ ಜೊತೆಗೆ ಕಾದಂಬರಿಯ ಮುಖ್ಯ ಪಾತ್ರದಲ್ಲಿ ಮತ್ತೊಂದು ಕೊರತೆಯಿದೆ. ಅವಳ ಹೆಣ್ತನ ಅವಳು ಹೆಣ್ಣಾದುದರಿಂದ ಅವಳಿಗೆ ಶಿಕ್ಷಣದ ಅಗತ್ಯವೇನೂ ಇಲ್ಲವೆಂದು ಭಾವಿಸಲಾಗುತ್ತದೆ. ಅವಳನ್ನು ಸ್ಕೂಲಿನಿಂದ ಬಿಡಿಸಿದರೂ ಕೂಡಾ ಅವಳ ತಮ್ಮನಿಗೆ ಅವನು ಮುಂದೆ ಕುಟುಂಬದ ಜವಾಬ್ದಾರಿಯನ್ನು ಹೊರುತ್ತಾನೆಂಬ ನಂಬಿಕೆಯಿಂದ ಹೇಗಾದರೂ ತನ್ನ ಶಿಕ್ಷಣವನನು ಮುಂದುವರಿಸಲು ಪ್ರೋತ್ಸಾಹ ಸಿಗುತ್ತದೆ. ಅವಳ ತಾಯಿಯೂ ಕೂಡ ಅಪ್ರಜ್ಞಾಪೂರ್ವಕವಾಗಿ ಮತ್ತು ತಾನು ಬೆಳೆದು ಬಂದ ವಾತಾವರಣದಿಂದಾಗಿ ಆಹಾರ ಬಟ್ಟೆ ಬರೆಗಳ ವಿಷಯದಲ್ಲಿ ಮಗಳು ಹಾಗೂ ಮಗನ ಮಧ್ಯೆ ಪಕ್ಷಪಾತ ಮಾಡುತ್ತಾಳೆ. ಸಾಧಾರಣವಾಗಿ ಮನೆಯಲ್ಲಿ ಸಾಕಷ್ಟು ಆಹಾರ ಯಾವತ್ತೂ ಇಲ್ಲ. ಆದರೆ, ಇರುವ ಅಲ್ಪ ಸ್ವಲ್ಪವನ್ನು ಮೊದಲು ಮಗನಿಗೆ ಕೊಟ್ಟು, ಇನ್ನೂ ಏನಾದರೂ ಉಳಿದರೆ ಮಾತ್ರ ಅದು ಮಗಳಿಗೆ ಸಿಕ್ಕುತ್ತದೆ.

"ನನ್ನ ತಮ್ಮ ಗುರುರಾಜ ಹುಟ್ಟಿದ ಮೇಲೆ ನನ್ನ ಎರಡು ವರ್ಷದ ಬದುಕು ಒಮ್ಮಿಂದೊಮ್ಮೆಗೆ ಬದಲಾಯಿಸಿತು. ಈ ಬಗೆಯ ಬದಲಾವಣೆಯನ್ನು ನಾನು ಕನಸಿನಲ್ಲಿಯೂ ನಿರೀಕ್ಷಿಸಿರಲಿಲ್ಲ".

ನಾನು ಹುಟ್ಟಿದಾಗ ಹೆಣ್ಣಾಯಿತೆಂದು ನಿರಾಶೆಗೊಂಡಿದ್ದ ಸುಬ್ಬಿ, ಅಪ್ಪ ಗುರುವಿನ ಜನನದಿಂದ ಹರ್ಷಿತರಾಗಿದ್ದರು. ಸುಬ್ಬಿ ತಾನು ಮೊದಲೇ ಮನಸ್ಸಿನಲ್ಲಿ ಮಾಡಿಕೊಂಡಿದ್ದಂತೆ ಗುರುಗಳ ಹೆಸರನ್ನು ಮಗನಿಗಿರಿಸಿದ್ದಳು.

ಮೊದಲು ಮನೆಯಲ್ಲಿ ನನಗಿದ್ದ ಸ್ಥಾನ ನಿಧಾನವಾಗಿ ಹಿಂದಕ್ಕೆ ಸರಿಯಿತು. ಈಗ ಪ್ರತಿಯೊಂದು ಗುರುವಿಗೆ ಮೊದಲಾಗಬೇಕು, ಅವನದಾಗಿ ಉಳಿದ ನಂತರ ನನ್ನದಾಗಬೇಕು.

ಈಗ ನಾನು ಮೊದಲಿನಂತೆ ಸುಬ್ಬಿಯ ತೊಡೆಯ ಮೇಲೆ ತಲೆಯಿಟ್ಟು ಮಲಗುವುದಾಗುತ್ತಿರಲಿಲ್ಲ ನಾನು ಒಂದು ಗಳಿಗೆ ಮಲಗುವುದರಲ್ಲಿ ಗುರು ಎದ್ದು ಬಿಡುತ್ತಿದ್ದ.

"ಏಳು ಆ ಕಡೆ ಮಲಗಿರೋ ಗುರು ಎದ್ದು ಬಿಟ್ಟ ಎನ್ನುತ್ತಾ ಸುಬ್ಬಿ ನನ್ನ ತಲೆಯನ್ನು ಕೆಳಕ್ಕೆ ಸರಿಸಿ, ಗುರುವನ್ನು ತೊಡೆಯ ಮೇಲೆ ಮಲಗಿಸಿಕೊಳ್ಳುತ್ತಿದ್ದಳು. ಆಗ ನನಗೆ ಗುರುವಿನ ಮೇಲೆ ಕೋಪ ಬರುತ್ತಿತ್ತು".[೧೩]

ಹೀಗೆ ಕಾದಂಬರಿಯ ಪ್ರಾರಂಭದಿಂದಲೇ ತಾರತಮ್ಯ ಗೋಚರವಾಗಿ ನಾಯಕಿ ಪ್ರತಿ ವಿಷಯದಲ್ಲೂ ವಂಚನೆಗೊಳಗಾಗುವುದು ಕಂಡು ಬರುತ್ತದೆ. ಈ ಅಂಶಗಳಿಗೆ ಪೂರಕವಾಗಿ ತಲತಲಾಂತರಗಳಿಂದ ರೂಢಿಯಾಗಿ ಬಂದಿರುವ ವಿಚಾರಗಳನ್ನು ಗಮನಿಸಿದ ಸಂದರ್ಭದಲ್ಲಿ –

"ಹೆಣ್ಣು ಎಲ್ಲಾ ಕೆಡುಕಿನ ಮೂಲ – ಮಹಾಭಾರತ
ಹೆಣ್ಣು ಪಾಪಿ, ಗುಲಾಮಳು – ಭಗವದ್ಗೀತೆ
ಸಧ್ಯ, ನಾನು ಹೆಣ್ಣಾಗಿ ಹುಟ್ಟಲಿಲ್ಲ – ಪ್ಲೇಟೋ
ಇಂದು ಮನೆಯಲ್ಲಿ ದೀಪ ಹಚ್ಚುವುದು ಬೇಡ ಹೆಣ್ಣು ಹುಟ್ಟಿದೆ – ಜ್ಯೂ ಜನಾಂಗ
ಹೆಣ್ಣು ಅಪರಿಪೂರ್ಣ – ಅರಿಸ್ಟಾಟಲ್
ಎಲ್ಲಾ ಪ್ರಾರ್ಥನೆಗಳೂ ಗಂಡು ಮಗುವಿಗಾಗಿ – ಋಗ್ವೇದ

ಈ ಮೇಲ್ಕಂಡ ಮಾತುಗಳನ್ನು ಗಮನಿಸಿದಾಗ ಹೆಣ್ಣಿನ ಸ್ಥಾನಮಾನ, ಸ್ಥಿತಿಗತಿ ಹೆಣ್ಣು ಎರಡನೇ ದರ್ಜೆಯ ಪ್ರಜೆಯಾಗಿರುವುದರ ಅರ್ಥ ತಿಳಿದೀತು".[೧೪]

ಸ್ತ್ರೀವಾದ ಮೊದಲನೆಯದಾಗಿ, ಸ್ತ್ರೀ ಪುರುಷರ ನಡುವಿನ ಅಸಮಾನತೆ, ಪ್ರಕೃತಿ ಸಹಜವಲ್ಲ, ಜೈವಿಕವಲ್ಲ, ಅದು ಸಾಂಸ್ಕೃತಿಕ ಹಿನ್ನೆಲೆಯದಾಗಿದ್ದು, ಪರಿಸರದ ಕಾರಣದಲ್ಲಿ ಉದ್ಭವಿಸಿದ್ದು ಎಂದು ನಂಬುತ್ತದೆ. ಎರಡನೆಯದಾಗಿ ಪುರುಷ ದೃಷ್ಟಿಕೋನ 'ಸಾರ್ವತ್ರಿಕವಲ್ಲ' ಪುರುಷ ಪ್ರಧಾನ ಮೌಲ್ಯಗಳು ಪ್ರಧಾನ ಸಂಸ್ಕೃತಿಗೆ ಅನುಕೂಲಕರವಾದ ಅರ್ಧಸತ್ಯವನ್ನಷ್ಟೇ ಹೇಳುತ್ತದೆ.

ಪುರುಷ ಕೇಂದ್ರಿತ ಗ್ರಹಿಕೆಯಲ್ಲಿ ಮಿತಿ ಇದೆ ಅಪಾಯವಿದೆ ಎಂದೂ ಸ್ತ್ರೀವಾದ ಹೇಳುತ್ತದೆ. ಹೆಣ್ಣುತನದ ಗುಣಸ್ವಭಾವಗಳು ದೈಹಿಕವಾಗಿ ಹೆಣ್ಣಾದ ಮಾತ್ರಕ್ಕೆ ಒಳಗೊಂಡಿರುತ್ತದೆ ಎಂಬ ಮೂಲ ನಂಬಿಕೆಯನ್ನೇ ಸ್ತ್ರೀವಾದ ಪ್ರಶ್ನಿಸುತ್ತದೆ. 'ಹೆಣ್ಣುತನ' ಸಮಾಜ–ಸಂಪ್ರದಾಯಗಳು ಪುರುಷ ಲಾಭಕ್ಕಾಗಿ ಮಹಿಳೆಯರ ಮೇಲೆ ಹೇರಿದ ಗುಣಗಳಾಗಿವೆ. ತಾಯ್ತನದ ಹಂಬಲ ಸತೀತ್ವ ಶೀಲ, ಪಾತಿವ್ರತ್ಯ ಎಲ್ಲವೂ ಸಮಾಜದ ನಿರೀಕ್ಷೆಯೇ ಹೊರತು, ಹೆಣ್ಣಿಗೆ ವರ್ಣತಂತುಗಳಿಂದಲೇ ಹರಿದು ಬರುವುದಿಲ್ಲ.

ಪ್ರತಿ ವ್ಯಕ್ತಿಯಲ್ಲೂ ಹೆಣ್ಣು ಗಂಡು ಗುಣಗಳಿವೆ. ಆದರೆ, ಸಮಾಜವು ಧೈರ್ಯ, ಸಾಹಸ, ಆಕ್ರಮಣಶೀಲತೆಯನ್ನು ಗಂಡು ಗುಣಗಳೆಂದು, ಗಂಡಿನಲ್ಲಿ ಮಾತ್ರ ಇವುಗಳನ್ನು ಪೋಷಿಸಿ, ಸಹನೆ, ಸಂಯಮ, ವಿಧೇಯತೆಗಳು ಹೆಣ್ಣು ಗುಣಗಳೆಂದು ಹೆಣ್ಣಿನಲ್ಲಿ ಪ್ರೋತ್ಸಾಹಿಸಿತು.

ಸಾಲದ್ದಕ್ಕೆ ಈ ವಿಂಗಡಣೆ ಗಂಡು ಗುಣಗಳನ್ನು ಹೆಚ್ಚಿನದೆಂದೂ ಹೆಣ್ಣು ಗುಣಗಳನ್ನು ದೌರ್ಬಲ್ಯವೆಂದೂ ಸಾರಿತು. ಪ್ರತಿ ಲಿಂಗದೊಡನೆ ಜೋಡಿಸಿದ ಗುಣ ವಿಶೇಷಗಳು ಆ ಲಿಂಗದ ಆಯಾಮಗಳನ್ನು ಸೀಮಿತಗೊಳಿಸಿ, ಹೆಣ್ಣು ಗಂಡಿನ ಸಾಮ್ಯವನ್ನು ಅದುಮಿಟ್ಟು ಬದುಕಿನ ನೂರು ಸಾಧ್ಯತೆಗಳನ್ನು ಬದಿಗಿಟ್ಟಿತು. ಹೆಣ್ಣು ಗಂಡಿನ ಕಾರ್ಯರಂಗಗಳನ್ನು ವಿಂಗಡಿಸಿ, ಅವರ ಆಸಕ್ತಿ ಅಭಿರುಚಿಗಳಿಗೆ ಆದ್ಯತೆ ಇಲ್ಲದೆ ನಿಗದಿತ ಏಕಗೌನತೆಯ ಪಾತ್ರ ನಿರ್ವಹಣೆಯನ್ನು ನಿರೀಕ್ಷಿಸಿತು.

"ಹೆಣ್ಣು ಗಂಡು ಪರಸ್ಪರ ವಿರುದ್ಧ ವ್ಯಕ್ತಿತ್ವಗಳೆಂಬ ಕಲ್ಪನೆಯನ್ನು ಮೊದಲು ತೊಡೆಯಬೇಕಾದ ಅಗತ್ಯವನ್ನು ಸ್ತ್ರೀವಾದ ಗುರುತಿಸಿದೆ".[೧೫] ಗಂಡು ಹೆಣ್ಣಿನ ನಡುವೆ ವ್ಯತ್ಯಾಸಗಳಿವೆ. ಹೆಚ್ಚುಗಾರಿಕೆಗಳಲ್ಲ, ನಡುವೆ ನಿಂತಿರುವುದು ಪರಸ್ಪರ ಗಡಿದಾಟಬಲ್ಲ ಗೆರೆಗಳು ಮಾತ್ರ. ಲಕ್ಷ್ಮಣ ರೇಖೆಗಳಲ್ಲಿ ಪ್ರತಿ ವ್ಯಕ್ತಿಯೂ ದ್ವಿಲಿಂಗಿಯೇ ಹೆಣ್ಣು ಗಂಡು ಗುಣಗಳ ಮಿಶ್ರಣವನ್ನು ಪ್ರತಿಯೊಬ್ಬರಲ್ಲೂ ಕಾಣಬಹುದು. ಅರ್ಧನಾರೀಶ್ವರ ಕಲ್ಪನೆ ನಿಜಕ್ಕೂ ವಿಪರೀತದ್ದಲ್ಲ. ಹೆಣ್ಣು ಗಂಡಿನ ವಿಭಿನ್ನತೆಯನ್ನು ವ್ಯಕ್ತಿ ವೈಶಿಷ್ಟ್ಯವೆಂದು ಪರಿಗಣಿಸದೆ, ಅಸಮಾನ ನೆಲೆಯ ಮೇಲೆ ರೂಪುಗೊಂಡ ಸಾಮಾಜಿಕ ವ್ಯವಸ್ಥೆ ಹೆಣ್ಣನ್ನು ಮನೆಗಂಟಿಸಿತು. ಗಂಡಿಗೆ ಪೋಷಣೆಯ ಸಂಪೂರ್ಣ ಹೊರೆಯನ್ನು ಕಡ್ಡಾಯವಾಗಿಸಿತು.

ಹೆಣ್ಣಿಗೆ ಶೀಲ ಪಾತಿವ್ರತ್ಯದ ಕಟ್ಟು ಬಿಗಿಯಿತು, ಗಂಡಿನ ಲೈಂಗಿಕತೆಯನ್ನು ಗರ್ವವೆನಿಸಿತು. ಹೇರಿದ ಪಾತ್ರ ನಿರ್ವಹಣೆಯ ಒತ್ತಡದಲ್ಲಿ ಗಂಡು ಹೆಣ್ಣುಗಳಿಬ್ಬರು ತಮ್ಮ ನಿಜ ವ್ಯಕ್ತಿತ್ವವನ್ನು ಮುದುಡಿಟ್ಟು ಪಾತ್ರಾಭಿನಯಕ್ಕೆ ಇಳಿಯಬೇಕಾಯಿತು. ಗಂಡು ಹೆಣ್ಣಿಗನಾಗುವ ಭಯದಲ್ಲಿ ಹೆಣ್ಣು ಗಂಡುಬೀರಿ ಎನಿಸಿಕೊಳ್ಳುವ ಭೀತಿಯಲ್ಲಿ ಹೆಣ್ಣು ಗಂಡುಗಳು ಪರಿಸರದೊತ್ತಡಕ್ಕೆ ಒಪ್ಪಿಸಿಕೊಂಡು ಕಲ್ಪಿತ ಸೀಮೆ ಸರಹದ್ದುಗಳೊಳಗೆ ಪರಿಭ್ರಮಿಸಿ, ಅದರಾಚಿನ ಬದುಕಿನ ನೂರು ಅನುಭವಗಳಿಂದ ಸಾಧ್ಯತೆಗಳಿಂದ ವಂಚಿತರಾದರು.

ಸ್ತ್ರೀವಾದಿ ದೃಷ್ಟಿಕೋನ ಮಾನವತಾವಾದಕ್ಕಿಂತ ಭಿನ್ನವಲ್ಲ, ಹುಟ್ಟಿನಿಂದಲೇ ಒಂದು ಗುಂಪು ಇನ್ನೊಂದು ಗುಂಪಿಗಿಂತ ಶ್ರೇಷ್ಠ ಎಂಬ ಮೂಲ ಶ್ರೇಣೀಕೃತ ವ್ಯವಸ್ಥೆಯನ್ನೇ ಸ್ತ್ರೀವಾದ ತಿರಸ್ಕರಿಸುತ್ತದೆ. ನಮಗಿಂದು ಸ್ತ್ರೀಯರ ಅನುಭವದ ಬಗ್ಗೆ ಸಾಧನೆಯ ಬಗ್ಗೆ ತಿಳಿಯದಿದ್ದರೆ, ಅದಕ್ಕೆ ಸ್ತ್ರೀಯರಿಗೆ ವಿಶೇಷ ಅನುಭವಗಳಿರಲಿಲ್ಲ ಎಂದಾಗಲೀ ಸಾಧನೆ ಮಾಡಿದ ಮಹಿಳೆಯರು ಇರಲಿಲ್ಲ ಎಂದಾಗಲೀ ಅರ್ಥವಿಲ್ಲ. ಪ್ರಧಾನ ವ್ಯವಸ್ಥೆಯ ಹೆಣ್ಣಿನ ಅನುಭವಗಳನ್ನು ಗಣನೆಗೆ ತೆಗೆದುಕೊಂಡಿರಲಿಲ್ಲ.

ಹಾಗೆಂದೇ ಇಂದೂ ಕೂಡಾ ನಮ್ಮ ಹೆಂಗಸರಲ್ಲಿ ಅದೇ ಪುರುಷ ಸಮಾಜ ಬಿತ್ತಿದ ಗೊಂದಲಗಳನ್ನು ಕಾಣಬಹುದು. ಆರ್ಥಿಕ ಅನಿವಾರ್ಯತೆಗೋ, ಬೌದ್ಧಿಕ ತೃಪ್ತಿಗೋ, ಹೊರಗೆ ದುಡಿಯ ಹೊರಟ ಹೆಣ್ಣುಗಳೂ ಕೂಡಾ, ಅಡಿಗೆಮನೆ ಕೆಲಸ ಮಕ್ಕಳ ಲಾಲನೆ ಎಲ್ಲವೂ ತಮ್ಮೊಬ್ಬರಿಗೆ ಸೇರಿದ ಜವಾಬ್ದಾರಿಯೆಂಬ ನಂಬುಗೆಯಲ್ಲಿ ಇಬ್ಬಗೆಯ ಹೊರೆ ಹೊತ್ತು ಒದ್ದಾಡುತ್ತಾರೆ. ಸಮಾಜದ ನಿಗದಿತ ಸ್ತ್ರೀ ಪಾತ್ರದೊಳಗೇ ಹೊಂದಿಕೊಳ್ಳಲು ಹೆಣಗುತ್ತಾರೆ. ಪುರುಷನೇಕೆ ಸಹಭಾಗಿಯಾಗಬಾರದು ಎಂದು ಪ್ರಶ್ನಿಸಲೂ ಭಯ. "ಆಧುನಿಕ ಬದುಕಿನ ಅನಿವಾರ್ಯಗಳಲ್ಲಿ ಸ್ತ್ರೀಯು ಸಾಮಾಜಿಕ ಸಾಂಪ್ರದಾಯಿಕ ಪಾತ್ರಕ್ಕೆ ಸೀಮಿತವಾಗಲಾರದ ಸೀಮಿತವಾಗಬೇಕಿಲ್ಲದ ಇಂದಿನ ಸಂಕ್ರಮಣ ಸ್ಥಿತಿಯಲ್ಲಿ 'ಸ್ತ್ರೀವಾದ' ಮಹಿಳೆಗೆ. ಮಹಿಳೆಗೆ ನಿಜ ವ್ಯಕ್ತಿತ್ವವನ್ನು ಪರಿಚಯಿಸ ಹೊರಟಿದೆ. ಇಂದು ಮಹಿಳೆಯರ ಪರಂಪರೆಯನ್ನು ತಿಳಿಯಬೇಕಾದ ಅಗತ್ಯ ಎಂದಿಗಿಂತಲೂ ಹೆಚ್ಚಿದೆ".[೧೬]

ಸ್ತ್ರೀಸಂವೇದನೆಯು ಪುರುಷ ಸಂವೇದನೆಗಿಂತ ಭಿನ್ನ. ಅದು ಸಹಜ ಕೂಡಾ, ಇದಕ್ಕೆ ಸಾಂಸ್ಕೃತಿಕ ಕಾರಣಗಳಿವೆ. ಸಮಾನತೆಯ ಆಧಾರದ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ಗಂಡಿನ ದೃಷ್ಟಿಕೋನ ಮತ್ತು ಅನುಭವಗಳ ನಡುವೆ ವಿಪರೀತ ಅಂತರವಿರುವುದಿಲ್ಲ ಎಂಬುದು ಸ್ತ್ರೀವಾದದ ನಿಲುವು. ಹೆಣ್ಣುತನ, ಗಂಡುತನ ಕೇವಲ ವ್ಯತ್ಯಾಸಗಳನ್ನು ಸೂಚಿಸಲು ಮೀಸಲಾಗಿದೆ. ಗಂಡು ಹೆಣ್ಣಿನ ನಡುವೆ ವಿಭಜನೆಯ ರೇಖೆ ಹಾಕಿ, ಅಸಮಾನತೆಯನ್ನು ಹುಟ್ಟು ಹಾಕಿ ಮೇಲು ಕೀಳುಗಳನ್ನು ಸೃಷ್ಟಿಸಿ, ಒಂದು ವರ್ಗ ಮತ್ತೊಂದನ್ನು ಶೋಷಿಸಲು ದಾರಿಯಾಯಿತು. ಹಾಗೆಂದೇ ಒಂದೇ ಪರಿಸರದಲ್ಲಿ ಬೆಳೆದ ಹೆಣ್ಣು ಗಂಡಿನ ಅನುಭವದ ನಡುವೆ ಅಗಾಧ ವ್ಯತ್ಯಾಸವಿರುತ್ತದೆ.

ಹೆಣ್ಣನ್ನು ಅಬಲೆಯಾಗಿಸುವ ಮನೆಗೆಲಸಕ್ಕೆ ಹಚ್ಚುವ ತಗ್ಗಿ ಬಗ್ಗಿ ನಡೆವ ವಿಧೇಯತೆಯನ್ನು ಕಲಿಸುವ ವಿವಾಹಕ್ಕೆಂದೇ ತಯಾರಿಸುವ ಪರಿಯಲ್ಲಿ ಬಾಲ್ಯದಿಂದಲೇ ಆರಂಭವಾಗುವ ಗೃಹಿಣಿ ಪಾತ್ರದ ತರಬೇತಿಯಿದ್ದರೆ ಅವಳೊಡನೆ ಹುಟ್ಟಿ ಬೆಳೆವ ಗಂಡು ಮಗುವಿಗೆ ನೀಡುವ ಪ್ರೋತ್ಸಾಹ ಅವನ ಭವಿಷ್ಯವನ್ನು ರೂಪಿಸುವ ಪರಿಯೇ ಬೇರೆ ಇರುತ್ತದೆ. ಈ ಮೂಲ ಕಾರಣದಿಂದಲೇ ಸ್ತ್ರೀಯರ ಅನುಭವ, ಸಂವೇದನೆ ಬೇರೆಯಾಗುತ್ತದೆ. "ಸ್ತ್ರೀವಾದಿಗಳೆಂದು ಪುರುಷಕೇಂದ್ರಿತ ಮಾದರಿಗಳನ್ನು ಉರುಳಿಸುವ ಮೂಲಕ ಸ್ತ್ರೀ ದೃಷ್ಟಿಕೋನ, ಸ್ತ್ರೀ ಅನುಭವಗಳನ್ನು ತೆರೆದಿಡುವ ಮೂಲಕ ಸ್ತ್ರೀಯನ್ನು ಮೂಕವಾಗಿಸಿದ ವ್ಯವಸ್ಥೆಯನ್ನು ಬದಲಿಸ ಹೊರಟಿದ್ದಾರೆ".[೧೭]

ಇದಕ್ಕೆ ಹೊಂದಿಕೊಂಡಂತೆ ತ್ರಿವೇಣಿಯವರ 'ಕೀಲುಗೊಂಬೆ'ಯಲ್ಲಿ ಬಾಲ್ಯದಿಂದಲೂ ಹೆಣ್ಣು ತನ್ನದೇ ಆದ ಒಂದು ಪಡಿಯಚ್ಚನ್ನು ಸಹಜವಾಗಿ ಒಪ್ಪಿಕೊಂಡು ಬಿಡುವಂತೆ ಹೇಗೆ ಅವಳನ್ನು ಬೆಳೆಸಲಾಗುತ್ತದೆ ಎಂಬುದನ್ನು ಕಾದಂಬರಿ ಅತ್ಯಂತ ಸೂಕ್ಷ್ಮವಾಗಿ ದಾಖಲಿಸುತ್ತದೆ. ಈ ಪಡಿಯಚ್ಚೆಂದರೆ ಸ್ತ್ರೀ ಯಾವಾಗಲೂ ಕಾಯಾ ವಾಚಾ ಮನಸಾ ಪತಿಯ ಅಧೀನಳಾಗಿರಬೇಕೆಂಬುದು. ಚಿಕ್ಕ ವಯಸ್ಸಿನಲ್ಲಿಯೇ ಮಗನು ಹೊರಗೆ ಹೋಗಿ, ಸ್ವತಂತ್ರವಾಗಿ, ಧೈರ್ಯದಿಂದ ಮುನ್ನುಗ್ಗಲು ಪ್ರೋತ್ಸಾಹಿಸಲ್ಪಟ್ಟರೆ, ಮಗಳಿಗೆ ಸಹನೆ, ಪರಾವಲಂಬನೆ ಮತ್ತು ವಿಧೇಯತೆ ಮುಂತಾದ ಗುಣಗಳನ್ನು ಕಲಿಸಲಾಗುತ್ತದೆ. ಹೆಣ್ಣಾದುದರಿಂದ ಸೀತಾಳಿಗೆ ಯಾವಾಗಲೂ ನೀಡುವ ಉಪದೇಶ ಇದು.

ಮೂವತ್ತು ವರ್ಷಗಳ ದುರ್ಬರ ವೈವಾಹಿಕ ಜೀವನದ ನಂತರ ಒಮ್ಮೆ ದೀರ್ಘಾವಧಿಯ ಚಿಕಿತ್ಸೆಗಾಗಿ ಸೀತಾ ಆಸ್ಪತ್ರೆ ಸೇರಿದಾಗ ಅಲ್ಲಿ ಅವಳು ಹೊಸದೇ ಆದ ಒಂದು ಲೋಕವನ್ನು ಕಾಣುತ್ತಾಳೆ. ಅಲ್ಲಿ ಸಮಾಜದ ವಿವಿಧ ಸ್ತರಗಳಿಂದ ಬಂದಿರುವ ವಿವಿಧ ಬಗೆಯ ಸ್ತ್ರೀಯರನ್ನು ನೋಡುತ್ತಾಳೆ. ಅವರೆಲ್ಲರೂ ಒಂದಲ್ಲಾ ಒಂದು ಬಗೆಯಲ್ಲಿ ಪುರುಷ ಪ್ರಭುತ್ವಕ್ಕೆ ಬಲಿಯಾದವರೇ.

ನರಸಮ್ಮ ತನಗೆ ಆಗ ತಾನೇ ಹುಟ್ಟಿದ ಹೆಣ್ಣು ಮಗುವನ್ನು ಕೊಂದು ಆನಂತರ ತಾನೂ ಸಾಯಲು ಸಿದ್ಧಳಾಗಿರುತ್ತಾಳೆ. ಕಾರಣ ಅವಳಿಗೆ ಈಗಾಗಲೇ ನಾಲ್ಕು ಹೆಣ್ಣು ಮಕ್ಕಳಿದ್ದಾರೆ. ಈಗಲಾದರೂ ಗಂಡುಮಗುವಾಗದೇ ಹೋದರೆ ಅವಳು ಆಸ್ಪತ್ರೆಯಿಂದ ಮನೆಗೆ ಬರಬೇಕಾಗಿಲ್ಲವೆಂದು ಅವಳ ಗಂಡ ಮತ್ತು ಅತ್ತೆ ಮಾವಂದಿರು ಅವಳಿಗೆ ಎಚ್ಚರಿಕೆಯನ್ನಿತ್ತು ಅರ್ಥಾತ್ ಈಗ ಅವಳ ಇಡೀ ಬದುಕು ಗಂಡುಮಗುವಾಗುವುದನ್ನು ಅವಲಂಬಿಸಿದೆ. ದುರದೃಷ್ಟವಶಾತ್, ಅವಳಿಗೆ ಈ ಬಾರಿಯೂ ಹೆಣ್ಣು ಮಗುವಾಗುತ್ತದೆ.

ಪರಿಣಾಮತಃ ಅವಳ ಗಂಡ ಅವಳನ್ನು ಹೊರಹಾಕಿ ಇನ್ನೊಂದು ಮದುವೆಯನ್ನು ಮಾಡಿಕೊಳ್ಳಬಹುದು. ಸರಳಮ್ಮನೆಂಬುವಳು ಒಂಬತ್ತನೆಯ ಮಗುವಿಗೆ ಜನ್ಮವಿತ್ತ ನಂತರ ಇನ್ನು ಮುಂದೆ ಮಕ್ಕಳಾಗದಂತೆ ತಾನೇ 'ಟ್ಯುಬೆಕ್ಟಮಿ' ಆಪರೇಷನ್ ಮಾಡಿಸಿಕೊಂಡಿದ್ದಾಳೆ. ಕಾರಣವೇನೆಂದರೆ, ಅಷ್ಟೇನೂ ಆದಾಯವಿಲ್ಲದ ಅವಳ ಗಂಡನಿಗೆ ಸಾಧ್ಯವಿದ್ದಷ್ಟೂ ಮಕ್ಕಳಾಗಬೇಕೆಂಬ ಆಸೆ. ಅವಳು ಹೇಳುತ್ತಾಳೆ. ಆದರೆ ಹೊತ್ತು ಹೆರೋಳ ಸಂಕಟ ಅವರಿಗೇನು ಗೊತ್ತು ಹೇಳಿ ಅದಕ್ಕೆ ನಾನು ಮಾಡಿಸಿಕೊಂಡೆ.

ಆಸ್ಪತ್ರೆಯಲ್ಲಿರುವ ಮತ್ತೊಬ್ಬ ದುರ್ದೈವಿ ಹೆಂಗಸು ಸಾವಿತ್ರಮ್ಮ ಬಾಲವಿಧವೆ. ಆ ವಾರ್ಡಿನ ಎಲ್ಲರ ಗೇಲಿ, ತಿರಸ್ಕಾರಗಳಿಗೆ ಗುರಿಯಾಗಿರುವವಳು ಅವಳು ಅಡುಗೆಯವಳಾಗಿ ಕೆಲಸ ಮಾಡುತ್ತಿದ್ದ ಶ್ರೀಮಂತರೊಬ್ಬರ ಮನೆಯಲ್ಲಿ ಆ ಮನೆಯ ಯಜಮಾನನ ಕಾಮತೃಷೆಗೆ ಬಲಾತ್ಕಾರವಾಗಿ ಅವಳು ಒಳಗಾಗಬೇಕಾಯಿತು. ಪರಿಣಾಮತಃ ಇಂದು ಇವಳೊಬ್ಬಳೇ ಆ ಪಾಪದ ಫಲವನ್ನು ಉಣ್ಣಬೇಕಾಗಿದೆ. ಆಧುನಿಕ ಸುಶಿಕ್ಷಿತ ಸ್ತ್ರೀ ಮಧುರವಾಣಿ ಅವಳಿಗೆ ಹೇಳುವಂತೆ ಸ್ತ್ರೀಯರನ್ನು ಸದಾ ತನ್ನೊಡೆತನದಲ್ಲಿಡಲು ಗಂಡಸು ಮಾಡುವ ಅನೇಕ ಕ್ರಮಗಳಲ್ಲಿ ಇದೂ ಒಂದು.

ಆರ್ಯಾಂಬರ ಕಾದಂಬರಿ 'ಬದುಕಿನ ಬವಣೆಯಲ್ಲಿ' ಒಬ್ಬ ಹೆಣ್ಣಿನ ಬದುಕಿನ ಕಷ್ಟಗಳ ಸರಪಳಿಗಳ ಸಂಕೋಲೆಗಳ ಚಿತ್ರಣ. ಹೆಣ್ಣಿನ ಅಸಹಾಯಕ ಸ್ಥಿತಿಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಬದುಕಿನಲ್ಲಿ ಮುಗ್ಧ ಹೆಣ್ಣುಮಗಳು ಅತ್ಯಾಚಾರಕ್ಕೆ ಬಲಿಯಾಗಿ ಸೆಲೆಸಿಕ್ಕದಿದ್ದಾಗ ಕೊನೆಗೆ ವೇಶ್ಯಾವೃತ್ತಿಗೆ ಇಳಿಯುವಂತಹ ಅಮಾಯಕ ಸ್ಥಿತಿಯನ್ನು ಮನಕರಗುವಂತೆ ಕಾದಂಬರಿಯ ನಾಯಕಿ ನಾಗುವಿನ ಪಾತ್ರದ ಮೂಲಕ ಚಿತ್ರಿಸಿದ್ದಾರೆ. ಅವಳು ಜೀವನದುದ್ದಕ್ಕೂ ಕಠಿಣತೆಯ ಶೃಂಖಲೆಯನ್ನು ತೊಟ್ಟು ಸಮಾಜದ ಪುರುಷ ವಿಕೃತ್ವವನ್ನು ಎದುರಿಸಲು ಅಸಮರ್ಥಳಾಗಿದ್ದಾಳೆ.

ಮದುವೆಯಾಗದೆ ತಾಯಿಯಾಗುತ್ತಿದ್ದೇನೆ ಎಂದು ಅರಿತ ನಾಗು ಲಿಂಗಣ್ಣನನ್ನು ಕುರಿತು ಮದುವೆಯಾಗೆಂದು ಬೇಡಿಕೊಂಡಾಗ ಸಾಧ್ಯವಿಲ್ಲವೆಂದು ಅವನು ನುಣುಚಿಕೊಂಡಾಗ ಅವಮಾನದಿಂದ ನಾಗು ತತ್ತರಿಸಿದಳು. ಇಂತಹ ಹೆಣ್ಣಿನ ಬಗ್ಗೆ ಸಮಾಜ ಹೊಂದಿರಬಹುದಾದ ಕ್ರೂರ ಪಕ್ಷಪಾತ ಧೋರಣೆಯನ್ನು ಕುರಿತು ನೊಂದುಕೊಂಡಳು. ಹೆಣ್ಣಿನ ಸಾಮಾಜಿಕ ಬದುಕಿಗೆ ಮದುವೆ ಇಲ್ಲದೆ ತಾಯಿಯಾದರೆ ಸಮಾಜ ಕಳಂಕಪಟ್ಟ ನೀಡುತ್ತದೆ.

ಒಟ್ಟಿನಲ್ಲಿ ಸಮಾಜದ ದೌರ್ಜನ್ಯಗಳನ್ನು ಎತ್ತಿ ಹಿಡಿದು ನಮ್ಮ ವ್ಯವಸ್ಥೆಯ ಓರೆಕೋರೆಗಳನ್ನು ತಿದ್ದುವ ಪ್ರಯತ್ನದಲ್ಲಿ 'ಬದುಕಿನ ಬವಣೆಯಲ್ಲಿ' ಕಾದಂಬರಿಯು ಗಮನಾರ್ಹವಾದುದು. ಅತ್ಯಾಚಾರಕ್ಕೆ ಬಲಿಯಾದ ಹೆಣ್ಣು ಮಾತ್ರ ಅಪರಾಧದ ಕಳಂಕ ಹೊತ್ತವಳಾಗಿ ಸಮಾಜದಲ್ಲಿ ವಾಸಿಸಬೇಕಾಗುತ್ತದೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಈ ಅನಾಹುತಕ್ಕೆ ಹೆಣ್ಣನ್ನೇ ಕಾರಣವಾಗಿಸುವ ಪ್ರಯತ್ನಗಳೇ ಹೆಚ್ಚು ನೆಡೆಯುತ್ತದೆ. ಅವಳ ನಡತೆಯನ್ನು ಮುಖ್ಯ ಕಾರಣವಾಗಿಸುವ, ಅದಕ್ಕೆ ಕಾರಣವಾದ ಪುರುಷ ದೋಷ ಮುಕ್ತವಾಗಿಸುವ ಪ್ರಯತ್ನ ಕಾದಂಬರಿಯಲ್ಲಿ ಕಾಣಬಹುದು.

ತನ್ನ ದೇಹ ಮತ್ತು ಮನಸ್ಸಿನ ಮೇಲೆ ಸಾರ್ವಭೌಮತ್ವವನ್ನು ಸಾಧಿಸಿಕೊಳ್ಳಬಲ್ಲ ಎದೆಗಾರಿಕೆ ಹೆಣ್ಣುಗಳಿಗೆ ಎಲ್ಲಿಯವರೆಗೆ ಬರುವುದಿಲ್ಲವೋ ಹಾಗೂ ಅಂತಹದೊಂದು ಆರೋಗ್ಯಕರವಾದ ವಾತಾವರಣ ಸೃಷ್ಟಿಸುವ ಹೊಸದೊಂದು ಸಮಾಜದ ರಚನೆಯ ಕಾರ್ಯ ಎಲ್ಲಿಯವರೆಗೆ ನಡೆಯುವುದಿಲ್ಲವೋ ಅಲ್ಲಿಯವರೆಗೆ ಈ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಲೇ ಇರುತ್ತದೆ. ಅತ್ಯಾಚಾರ, ಶೋಷಣೆಗಳು ನಡೆಯುತ್ತಲೇ ಇರುತ್ತದೆ. ಅಸಹಾಯಕ ಹೆಣ್ಣಿನ ಪರಿಸ್ಥಿತಿಯ ಬಗ್ಗೆ ಕ್ಷಣಕಾಲಕ್ಕಾದರೂ ಚಿಂತಿಸಬೇಕೆನ್ನುವ ಪ್ರಯತ್ನ ಕಾದಂಬರಿಯಲ್ಲಿ ಕಂಡುಬರುತ್ತದೆ.

ಆರ್ಯಾಂಬರ ಮತ್ತೊಂದು ಕಾದಂಬರಿ 'ಮರಳಿಗೂಡಿಗೆ'ಯಲ್ಲಿ ಮತ್ತೊಂದು ಮುಖವನ್ನು ಕಾಣಬಹುದು. ಹೆಣ್ಣು ಸದ್ರೂಪಿಯಾಗಿ ಕಾಣಿಸಿಕೊಳ್ಳುವವರೆಗೆ ಪುರುಷನಿಗೆ ಬೇಕಾಗಿದ್ದು, ಅವಳಲ್ಲಿ ನ್ಯೂನ್ಯತೆಗಳು ಕಂಡುಬಂದಾಗ ಹಣ್ಣು ತಿಂದು ಸಿಪ್ಪೆ ಎಸೆಯುವಂತ ಸ್ಥಿತಿಗೆ ತರುವ ಗಂಡಿನ ವಿಶ್ವಾಸಘಾತುಕವನ್ನು ಕಾಣಬಹುದು.

ಮಹಿಳೆಯನ್ನು ಆವರಿಸಿರುವ ಸಾಮಾಜಿಕತೆಯಲ್ಲಿ ಅವಳ ಚಲನಶೀಲತೆಗೆ ಅವಕಾಶಗಳಿಲ್ಲ. ಅವಳ ಪಾಡುಗಳು ಹಾಡುಗಳಾಗುವ ಹಾದಿಗಳು ಮುಚ್ಚಿಕೊಂಡಿವೆ. ಕಲಿಕೆಯ ಕದಗಳು ಅವಳ ಪಾಲಿಗೆ ತೆರೆದಿಲ್ಲ. ಧ್ಯಾನಸ್ಥಳಾಗಲು ಬೇಕಾದ ಏಕಾಂತವಂತೂ ಅವಳಿಗೆ ದುರ್ಲಭವೇ ಸರಿ. ಅದಾವ ಸಾಮಾಜಿಕ ತಂತ್ರವು ಇಂಥಹ ವಾತಾವರಣವನ್ನು ಕಲ್ಪಿಸಿ ನಡೆಸುತ್ತಿದೆ ಎಂಬುದನ್ನು ಕಂಡುಕೊಂಡ ಹೊರತು ಮಹಿಳೆಯರಿಗೆ ಈ ಬಂಧನಗಳಿಂದ ಮುಕ್ತಿ ಸಾಧ್ಯವಾಗುವುದಿಲ್ಲ. ಸಮಾಜದ ಚರಿತ್ರೆಯಲ್ಲಿ ಮಾತೃಪ್ರಧಾನತೆಯು ಪಿತೃಪ್ರಧಾನತೆಗೆ ಹೇಗೆ ಶರಣಾಯಿತು ಎಂಬ ದೊಡ್ಡ ಕಥಾನಕವೇ ಇದೆ. ಶ್ರಮವಿಭಜನೆಯ ಕುತರ್ಕದಲ್ಲಿ ಅವಳ ಆರ್ಥಿಕತೆಯನ್ನು ನಿರ್ಬಂಧಿಸಲಾಯಿತಾದರೆ, ತಾಯ್ತನವನ್ನು ನೆಪವಾಗಿಸಿ, ಅವಳ ಭಾವಜಗತ್ತನ್ನು ಬ್ಲಾಕ್‌ಮೇಲ್ ಮಾಡಿ ಅವಳನ್ನು ಗೃಹಬಂಧಿಯನ್ನಾಗಿ ಮಾಡಿ ಅವಳ ಚಲನಶೀಲತೆಯನ್ನು ಅಪಹರಿಸಲಾಯಿತು.

ಬಾಹ್ಯ ನೆಪಗಳನ್ನೇ ಸ್ಥಿರಗೊಳಿಸಿ ಬಿಡುವ ಇನ್ನೊಂದು ದೊಡ್ಡ ಕುತಂತ್ರವಾಗಿ, ಅವಳ ಲೈಂಗಿಕತೆಯನ್ನು ನಿರ್ಬಂಧಿಸುವ ವಿವಾಹ ಎಂಬ ಸಂಸ್ಥೆಯನ್ನು ಹುಟ್ಟುಹಾಕಲಾಯಿತು. ಈ ವಿವಾಹದ ನಿಯಮಗಳಡಿ ಆರ್ಥಿಕ ದಿಗ್ಬಂಧನ, ಲೈಂಗಿಕತೆಯ ದಿಗ್ಬಂಧನ ಹಾಗೂ ಗೃಹ ದಿಗ್ಬಂಧನಗಳಲ್ಲಿ ಸೆರೆಯಾಗಿ ಹೋದ ಹೆಣ್ಣಿನ ಬದುಕು ಸಂಪೂರ್ಣವಾಗಿ ಪುರುಷಾಧೀನವಾಗಿ ಹೋಯಿತು. "ಹೆಣ್ಣಿನ ಚೈತನ್ಯಕ್ಕೆ ಸ್ವತಂತ್ರ ಅಸ್ತಿತ್ವವೆಂಬುದೇ ಇಲ್ಲವಾಯಿತು. 'ಗೃಹಿಣಿ' ಎಂಬುದಷ್ಟೇ ಈಗಿನ ಅವಳ ಚಹರೆಯಾಯಿತು".[೧೮]

ಮಹಿಳೆಯ ಬದುಕನ್ನು ನಿಯಂತ್ರಿಸುವ ಮುಖ್ಯ ಸಾಮಾಜಿಕ ತಂತ್ರ ಈ ಗೃಹಿಣಿತ್ವ ಮೂಲದ್ದೇ ಆಗಿದೆ. ಗೃಹಿಣಿತ್ವ ಎಂಬುದು ಹೆಣ್ಣಿಗೆ ಅವಳ ಸಾಮಾಜಿಕ ಬಾಧ್ಯತೆಗಳನ್ನು ಸದಾಕಾಲವೂ ನೆನಪಿಸುತ್ತಲೇ ಕಾಡುವ ಒಂದು ಭೂತ. ಈ ಭೂತದಿಂದ ಅವಳಿಗೆ ಬಿಡುಗಡೆಯೇ ಇಲ್ಲ. ಬದಲಿಗೆ 'ಇದೇ ನನ್ನನ್ನು ರಕ್ಷಿಸುವ ದೈವ' ಎಂಬ ಮಾಯೆಗೆ ಹೆಣ್ಣು ಒಳಗಾಗುವುದೇ ಇಂದಿನ ಸಾಮಾಜಿಕ ವಾಸ್ತವ. ಈ ಭೂತವು ಹೆಣ್ಣಿಗಾಗಿಯೇ ನಿರ್ಮಿಸಿರುವ ಮಗಳು, ಹೆಂಡತಿ, ತಾಯಿ ಎಂಬ ಸ್ಥಿರಮಾದರಿ ಪಾತ್ರಗಳ ಮಾಯೆಗೆ ಸಿಲುಕಿದ ಹೆಣ್ಣು. ಇವು ತನ್ನದೇ ಆಯ್ಕೆಯೋ ಎಂಬಂತೆ ಭಾವಿಸಿ ನಿರ್ವಹಿಸುತ್ತಾ ಬದುಕನ್ನು ಕಳೆದು ಬಿಡುವುದೂ ಇದರಿಂದಲೇ ಸಾಧ್ಯವಾಗುವುದು. ಅವಳ ಚೇತನವನ್ನು ಈ ಮಾಯೆಯ ಮುಸುಕು ಆವರಿಸುತ್ತದೆ. ಆತ್ಮವು ವಿಸ್ಮೃತಿಯ ಗೂಡಿನೊಳಗೆ ಮರೆಯಾಗಿ ಬಿಡುತ್ತದೆ.

ಹೆಗಲೇರಿದ ಗೃಹಿಣಿತ್ವವೆಂಬ ಭೂತವು ಅವಳನ್ನು ಇನ್ನಿಲ್ಲದಂತೆ ಆವರಿಸುತ್ತಾ ವ್ಯಕ್ತಿತ್ವದ ಒಂದೊಂದು ಕಣವನ್ನು ನಿರ್ನಾಮ ಮಾಡಬಲ್ಲದು. ಅವಳ ಬುದ್ಧಿಭಾವಗಳು ನುಣ್ಣಗೆ ತೊಳೆದು ಹೋಗಿ ಗೃಹಿಣಿತ್ವದ ಬಾಧ್ಯತೆಗಳಾಚೆಗೆ ಏನನ್ನೂ ಕಲ್ಪಿಸಲಾಗದ ದುಸ್ಥಿತಿಗೆ ತಲುಪಬಹುದು. ಈಗ ಹೆಣ್ಣು ಮಾಡು ತೊಳಿ ಬಳಿ ಎಂಬ ದೈನಿಕ ಲಯಗಳೇ ತನ್ನ ಸೃಜನಶೀಲತೆಯ ಬಹುಸುಂದರ ಅಭಿವ್ಯಕ್ತಿಗಳೆಂಬ ಭ್ರಮೆಯನ್ನು ನೆಚ್ಚುವುದೂ ಸಹಜವೇ. ಅವಳನ್ನು ಒಂದು ಸೇವಾ ಪರಿಕರವಾಗಿಸಿ, ನಿರ್ಜೀವವಾಗಿಸಿ ಬಿಡುವ ಈ ಭ್ರಮೆಯಿಂದ ಹೊರಬರುವ ಇಚ್ಛೆ ಕೂಡ ಅವಳಲ್ಲಿ ಮೊಳೆಯಲು ಸಾಧ್ಯವಿಲ್ಲ ಎಂಬ ವಾತಾವರಣದಲ್ಲಿ ಮಹಿಳಾ ಸೃಜನಶೀಲತೆ ಸಿಲುಕಿದೆ. ಈ ವಾಸ್ತವವನ್ನು ಗ್ರಹಿಸುವುದರೊಂದಿಗೆ ಮಹಿಳಾ ಅಭಿವ್ಯಕ್ತಿಯ ಸ್ವರೂಪವನ್ನು ಕುರಿತ ಚರ್ಚೆ ಅನಿವಾರ್ಯ.

ಈ ಗೃಹಿಣಿತ್ವವು ವಿವಾಹದ ಬಿಂದುವಿನಲ್ಲಿ ಆರಂಭಗೊಳ್ಳುತ್ತದೆ ಎಂಬುದು ಭ್ರಮೆಯಷ್ಟೇ. ಹೆಣ್ಣು ಮಗುವೊಂದು ಜನಿಸಿದ ಕ್ಷಣದಿಂದಲೇ ಅವಳ ವಿವಾಹಕ್ಕೆ ಸಿದ್ಧತೆ ಶುರುವಾಯಿತೆಂದೇ ಲೆಕ್ಕ. ಅಂದಿನಿಂದಲೇ ಸಾಮಾಜೀಕರಣ ಪ್ರಕ್ರಿಯೆಯಲ್ಲಿಯೇ ಅವಳನ್ನು ಜೀವನ ಪರ್ಯಂತ ನಡೆಸಬೇಕಾದ ಅವಳ ಗುಣ ಸ್ವಭಾವಗಳಿಗೂ ಕೂಡ ಸಮಾನವಾಗಿ ಈ ತರಬೇತಿಯೇ ವಿಸ್ತರಿಸಿ ಬಿಡುತ್ತದೆ. ತನ್ನತನ ಎಂಬುದನ್ನೇ ಮರೆಯಿಸಿಬಿಡುವ ಈ ತರಬೇತಿಯಲ್ಲಿ ಹೆಣ್ಣು ತನ್ನ ಬದುಕಿನ ಮುಖ್ಯ ಕೇಂದ್ರದಲ್ಲಿ ತಾನು ಇರುವಂತಿಲ್ಲ ಎಂಬುದಕ್ಕೂ ಶರಣಾಗಿ ಲೋಕವೆಂದರೆ ಪುರುಷಕೇಂದ್ರ ಎಂಬ ಕರಾರನ್ನು ಉಸಿರೆತ್ತದೆ ಒಪ್ಪುತ್ತಾಳೆ. ಈಗ ಅವಳ ಚಿತ್ತವು ಪುರುಷಲೋಕಕ್ಕೆ ಹೊರತಾಗಿ ಏನೊಂದನ್ನೂ ಕಲ್ಪಿಸಲು ಅಶಕ್ತವಾಗುತ್ತದೆ. ತನ್ನನ್ನು ತಾವು ಪ್ರೀತಿಸಲಾಗದ ಅವಳ ಚೇತನವು ಪ್ರೀತಿ ಮತ್ತು ಸ್ವಾರ್ಥಗಳನ್ನು ಪ್ರತ್ಯೇಕಿಸಿ ನೋಡಲಾಗದಷ್ಟು ಕೀಳರಿಮೆಯಿಂದ ಬಳಲುತ್ತದೆ. ಹಾಗಾಗಿ ಗೃಹಿಣಿತ್ವ ಎಂಬುದನ್ನು ವೈವಾಹಿಕ ಸ್ಥಿತಿ ಎಂದು ಅರ್ಥೈಸುವಂತಿಲ್ಲ.

ವಿವಾಹವನ್ನೇ ನಿರಾಕರಿಸಿಯೂ ಹೆಣ್ಣು ತನ್ನ ಸ್ವಾಯತ್ತತೆಯನ್ನು ಉಳಿಸಿಕೊಳ್ಳಲಾರಳು. ಅವಿವಾಹಿತ ಹೆಣ್ಣು ಮಕ್ಕಳು ತವರು ಮನೆಯಲ್ಲೇ ಈ ಗೃಹಿಣಿತ್ವದ ಬಾಧೆಗೆ ಸಿಲುಕಿಕೊಳ್ಳುವ ಸಂದರ್ಭಗಳನ್ನು ಗಮನಿಸಬಹುದು. ಅವಿವಾಹಿತರಷ್ಟೇ ಅಲ್ಲ. ಕೊನೆಗೆ ವಿಧವೆಯರೇ ಆದಾಗಲೂ ಈ ಒಂಟಿ ಹೆಣ್ಣುಗಳು ಸೋದರ ಸೋದರಿಯರ ಶಿಕ್ಷಣ ವಿವಾಹಗಳಿಗೆಂದೇ ದುಡಿದು ಹಣ್ಣಾಗಿ, ನಂತರದಲ್ಲೂ ಅವರ ಮಕ್ಕಳು, ಮರಿ ಸಂಸಾರಗಳ ಭಾರವನ್ನು ಹೊತ್ತುಕೊಂಡೇ ಜೀವ ಸವೆಸುವ ಅನಿವಾರ್ಯಗಳಲ್ಲಿ ಬಿದ್ದಿದ್ದಾರೆ. ಕೊನೆಗೂ ಒಂಟಿತನವು ಕೂಡ ಅವರನ್ನು ಅವರ ಪಾಡಿಗೆ ಉಳಿಸುವುದಿಲ್ಲ. ಒಂಟಿತನವೆಂದರೆ ತಮ್ಮ ಕಷ್ಟಗಳನ್ನು ಹಂಚಿಕೊಳ್ಳಲು ತಮಗೆ ಯಾರೂ ಇಲ್ಲ ಎಂಬಷ್ಟಕ್ಕೆ ನಿಜ. ಹೆಣ್ಣಾಗಿ ಹುಟ್ಟಿದ ಮೇಲೆ ಇತರರ ಸುಖಕ್ಕಾಗಿ ದುಡಿಯುವ ಸಂದರ್ಭ ಎಂಬುದರಲ್ಲೇನೂ ವ್ಯತ್ಯಾಸವಾಗುವುದಿಲ್ಲ. ಈ ಗೃಹಿಣಿತ್ವದಲ್ಲಿ ಅವಳು ತನ್ನತನ ಎಂಬುದಕ್ಕೆ ಆಸ್ಪದವೇ ಆಗದ ಗುಣ ಸ್ವಭಾವಗಳನ್ನು ಮೈಗೂಡಿಸಿಕೊಳ್ಳುತ್ತಾಳೆ.

ಈ ಗುಣಸ್ವಭಾವಗಳಿಂದಾಗಿ ಹೆಣ್ಣು 'ಗೃಹಿಣಿತ್ವ'ದ ಭಾರದಡಿ ನಲುಗುತ್ತಿದ್ದರೂ, ಅದರ ಅರ್ಥವನ್ನು ಗ್ರಹಿಸಲಾರಳು. ತನ್ನ ಕರ್ತವ್ಯ ಬಾಧ್ಯತೆಗಳನ್ನು ನಿರ್ದೇಶಿಸುವ ಈ ತನ್ನ ಪಟ್ಟವನ್ನೇ ತನಗೆ ದೊರೆತ ಅತ್ಯುನ್ನತ ಸಮ್ಮಾನವೆಂದು ಗ್ರಹಿಸಿ ಬದುಕಲು ಯತ್ನಿಸುತ್ತಾಳೆ. ಆದರೆ, ಇಷ್ಟೆಲ್ಲಾ ದಮನಗೊಂಡ ಮೇಲೂ ಕೆಲವೊಮ್ಮೆ ಅವಳ ಸೃಜನಶೀಲತೆಯು ಕಾರ್ಯಪ್ರವೃತ್ತವಾಗಲು ಹವಣಿಸಬಹುದು.

"ಹೆಣ್ಣಿನ ಪ್ರತಿಭೆಯು ತೀರಾ ಪ್ರಖರವಾಗಿದ್ದು, ಅದರ ಕಿರಣಗಳು ಹೊರಹೊಮ್ಮಲು ಚಡಪಡಿಸಲೂಬಹುದು. ಈ ಮನಸ್ಥಿತಿಯಲ್ಲಿ ಹೆಣ್ಣು ತೀವ್ರವಾಗಿ ಅಸ್ವಸ್ಥಳಾಗುವುದೂ ಅಷ್ಟೇ ಸಹಜ. ಈ ಅಸ್ವಷ್ಟತೆ ಯಾವ ಆಕಾರಗಳಲ್ಲಿ ಕಾಣಿಸಿಕೊಳ್ಳುತ್ತದೋ ಹೇಳಲಾಗದು. ಹಾಗಲ್ಲದೆ ಉಸಿರುಕಟ್ಟಿದಲ್ಲಿ ಹುಚ್ಚು ಮಾತು, ನಡವಳಿಕೆಗಳ, ಅಪವರ್ತನೆಗಳ ಮಾನಸಿಕ ಕಾಯಿಲೆಗಳಾಗಿ ಕಾಣಿಸಿಕೊಳ್ಳಬಹುದು ಅಥವಾ ದೈಹಿಕ ರೋಗ ಲಕ್ಷಣಗಳಾಗಿ ಹೊಮ್ಮಿ ಮನಸ್ಸಿನ ತಲ್ಲಣಕ್ಕೆ ಮುಸುಕನ್ನೂ ಹಾಕಬಹುದು. ತತ್ಕಾಲಕ್ಕೆ ಆ ಹೆಣ್ಣು ತನ್ನ ಅಂತರಾತ್ಮಕ್ಕೆ ಏನೇನೂ ಘಾಸಿಯಾಗಿಲ್ಲ ಎಂಬ ಭ್ರಮೆಯಲ್ಲಿ ನಿಶ್ಚಲಳಾಗುತ್ತಾಳೆ. ಆದರೆ ಅವಳ ಸೃಜನಶೀಲತೆಯ ಚಡಪಡಿಕೆ ಮಾತ್ರ ನಿರಂತರವಾಗುತ್ತದೆ. ಎಲ್ಲಿಯಾದರೂ ಅವಕಾಶದ ಕಿಂಡಿಗಳು ಕಾಣಿಸಿಯಾವೇ ಎಂದು ಕಾಯುತ್ತಲೇ ಇರುತ್ತದೆ".[೧೯]

"ಮದುವೆಯಾದ ಹೆಣ್ಣು ಹೊರಗೆ ದುಡಿಯುವುದೇ ತಪ್ಪೇ?" ಎಂಬ ಪ್ರಶ್ನೆಯನ್ನಿಟ್ಟು ಅದರ ಬಗ್ಗೆ ಸ್ತ್ರೀಯರೇ ಚರ್ಚಿಸುವಂತಹ ಸಂದರ್ಭವನ್ನು ತಂದಿದ್ದಾರೆ. ಇಂದು ಮಹಿಳೆ ಸಂಸಾರ ಹಾಗೂ ಉದ್ಯೋಗ ಈ ಎರಡು ಕ್ಷೇತ್ರಗಳಲ್ಲೂ ಯಶಸ್ವಿಯಾಗಿದ್ದಾಳೆ. ಹಾಗೆ ನೌಕರಿ ಮಾಡೋ ಹೆಂಗಸರಿಗೆಲ್ಲ ಆರ್ಥಿಕ ಸ್ವಾತಂತ್ರ್ಯ ಇರುವುದಿಲ್ಲ ಎಂಬ ಸತ್ಯಾಂಶ, ನಿರುದ್ಯೋಗಿ, ಸೋಮಾರಿ, ಬೇಜವಾಬ್ದಾರಿ ಗಂಡನನ್ನು ಕಟ್ಟಿಕೊಂಡ ಉದ್ಯೋಗಸ್ಥ ಮಹಿಳೆಯ ಪಾಡು, ಮದುವೆಯಾದ ಮೇಲೆ ಕೆಲಸ ಬಿಡಿಸುವ ಗಂಡಂದಿರ ವಿಷಯ. ಒಂದು ವೇಳೆ ಕೆಲಸಕ್ಕೆ ಹೋದರೂ ಮಕ್ಕಳನ್ನು ನೋಡಿಕೊಳ್ಳುವ ಚಿಂತೆ ಹೀಗೆ ಹಲವಾರು ಸಮಸ್ಯೆಗಳನ್ನು ಓದುಗರ ಮುಂದಿರಿಸಿದ್ದಾರೆ.

"ಸಂಸಾರ, ಉದ್ಯೋಗ, ಎರಡನ್ನೂ ಕಟ್ಟಿಕೊಂಡರೆ ಹೆಣ್ಣಾದವಳು ನೂರೆಂಟು ಸಮಸ್ಯೆಗಳು, ಬೇಗೆಗಳು, ದುಮ್ಮಾನಗಳು ಒಳಗುಡಿಗಳನ್ನು ಎದುರಿಸಬೇಕಾಗುತ್ತದೆ. ಸುಖ ಒಂದು ಪಾಲಾದರೆ ಕಷ್ಟ ಒಂಬತ್ತು ಪಾಲು ಎನ್ನುವಲ್ಲಿ ಉದ್ಯೋಗಸ್ಥ ಮಹಿಳೆಯರ ಪರವಾದ ಲೇಖಕಿಯ ಅಭಿಪ್ರಾಯ ವ್ಯಕ್ತವಾಗುತ್ತದೆ. ಗಂಡ ಹೆಂಡತಿಯ ಬೇರೆ ಬೇರೆ ಊರಿಗೆ ವರ್ಗ ಮಾಡಿಬಿಡ್ತಾರೆ, ಅಪ್ಪ ಒಂದು ಕಡೆ ಅಮ್ಮ ಒಂದು ಕಡೆ ಮಕ್ಕಳು ಮತ್ತೊಂದು ಕಡೆ ಇದೂ ಸಂಸಾರವೆ ಎನ್ನುವಷ್ಟು ಜಿಗುಪ್ಸೆ ಹೆಣ್ಣುಗಳನ್ನು ಕಾಡುತ್ತದೆ"[೨೦] ಎಂಬ ಅಂಶಗಳನ್ನು 'ಕಾಮನಬಿಲ್ಲು' ಕಾದಂಬರಿ ಮುಖಾಂತರ ಹೇಳುತ್ತಾರೆ.

"ತ್ರಿವೇಣಿಯವರು 'ಕಂಕಣ' ಮತ್ತು 'ಮುಕ್ತಿ' ಈ ಎರಡೂ ಕಾದಂಬರಿಗಳು ಸ್ತ್ರೀಯ ಪಾರಂಪರಿಕ ಪಡಿಯಚ್ಚನ್ನು ಯಾವ ಕಾರಣಕ್ಕೂ ಅಸಮಾಧಾನಗೊಳ್ಳದ ನಿಸ್ವಾರ್ಥ ಮತ್ತು ಪುರುಷಾನುವರ್ತಿಯಾದ ಸ್ತ್ರೀಯ ಮಾದರಿಯನ್ನು ಎತ್ತಿ ಹಿಡಿಯುವಂತೆ ಕಾಣುತ್ತದೆ. ತನ್ನದೇ ಆದ ವ್ಯಕ್ತಿತ್ವವೇ ಇಲ್ಲದ ಹಾಗೂ ಯಾವುದೇ ಮಹತ್ವಾಕಾಂಕ್ಷೆಯಿಲ್ಲದ ಅಂಬಿಕಾ ಮಾತ್ರ ಸುಖೀ ಜೀವನವನ್ನು ನಡೆಸುತ್ತಾಳೆ. ಆದರೆ, ಇಂತಹ ಸರಳೀಕೃತ ವಿಚಾರಗಳನ್ನು ಹೊರಗಿಟ್ಟು ಕಾದಂಬರಿಗಳನ್ನು ಆಳವಾಗಿ ನೋಡಿದರೆ, ಸಂಕ್ರಮಣ ಕಾಲದ ಭಾರತೀಯ ಸಂಕ್ರಮಣ ಕಾಲದ ಭಾರತೀಯ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನಗಳನ್ನು ಈ ಕಾದಂಬರಿಗಳು ಅರ್ಥಪೂರ್ಣವಾಗಿ ವಿಶ್ಲೇಷಿಸಿರುವುದು ಕಂಡು ಬರುತ್ತದೆ".[೨೧]

ಸುಮಾರು ೧೯ ನೇ ಶತಮಾನದ ಉತ್ತರಾರ್ಧದಲ್ಲಿ ಆಧುನಿಕತೆಯ ಗಾಳಿ ಭಾರತದಲ್ಲಿ ಬೀಸುವ ಮುನ್ನ ವಿದ್ಯಾಭ್ಯಾಸ ಹಾಗೂ ಆರ್ಥಿಕ ಸ್ವಾತಂತ್ರ್ಯ ಇವೆರಡರಿಂದಲೂ ವಂಚಿಸಲ್ಪಟ್ಟ ಸ್ತ್ರೀ ತನ್ನ ಪತಿ (ಅದೂ ತನ್ನ ತಂದೆ ತಾಯಿಯರು ಆರಿಸಿದ ಪತಿ) ಮತ್ತು ಮಕ್ಕಳಲ್ಲಿಯೇ

ತೃಪ್ತಿಯನ್ನು ಕಂಡುಕೊಳ್ಳುತ್ತಿದ್ದಳು. ಹಾಗೆಯೇ ಅವಳನ್ನು ಬೆಳೆಸಲಾಗುತ್ತಿತ್ತು. ಶ್ರದ್ಧಾಮಯಿ ಪತ್ನಿ ಹಾಗೂ ಪ್ರೇಮಮಯಿ ತಾಯಿ ಇವೆರಡರ ಹೊರತಾದ ತನ್ನದೇ ಆದ ಅನನ್ಯತೆಯೆಂಬುದೇ ಭಾರತೀಯ ಸ್ತ್ರೀಗಿರಲಿಲ್ಲ.

ಪಾಶ್ಚಾತ್ಯ ವಿದ್ಯಾಭ್ಯಾಸ ಹಾಗೂ ವಿಚಾರಗಳು ಭಾರತವನ್ನು ಪ್ರವೇಶಿಸಿದಾಗ ಅವಳಿಗೆ ನೂತನ ಶಿಕ್ಷಣ ದೊರೆಯುವಂತಾಗಿ ಅದರ ಕಾರಣದಿಂದ ಅವಳ ಆಲೋಚನಾ ಕ್ರಮವು ಬದಲಾಗಲು ಪ್ರಾರಂಭಿಸಿತು. ಆದರೆ, ಅಷ್ಟೇ ಸುಲಭವಾಗಿ ಅವಳ ಮೇಲಿದ್ದ ಸಂಪ್ರದಾಯ ಹಾಗೂ ಪಾರಂಪರಿಕ ವ್ಯವಸ್ಥೆಗಳ ಬಂಧನ ಕಮ್ಮಿಯಾಗಲಿಲ್ಲ. ಪರಿಣಾಮತಃ ಪಾಶ್ಚಾತ್ಯ ಆಧುನಿಕ ಶಿಕ್ಷಣ ಪಡೆದ ಆದರೆ ಪಾರಂಪರಿಕ ವಿವಾಹ ಹಾಗೂ ಕುಟುಂಬ ವ್ಯವಸ್ಥೆಗಳಿಗೆ ಬದ್ಧವಾದ ಭಾರತೀಯ ಸ್ತ್ರೀಗೆ ಒಂದು ವಿಧದ ಬೋನಿನಲ್ಲಿಟ್ಟಂತಹ, ಉಸಿರುಗಟ್ಟಿದಂತಹ ಅನುಭವವಾಗಲಾರಂಭಿಸಿತು. ಇಂತಹ ಉಸಿರುಗಟ್ಟಿದಂತಹ ನೋವಿನ ಅನುಭವವನ್ನೇ ತ್ರಿವೇಣಿಯವರ ಎಲ್ಲಾ ಕಾದಂಬರಿಗಳು ಮುಖ್ಯವಾಗಿ 'ಕಂಕಣ' ಮತ್ತು 'ಮುಕ್ತಿ' ಅಭಿವ್ಯಕ್ತಿಗೊಳಿಸುತ್ತವೆ.

"ಸ್ತ್ರೀವಾದಕ್ಕೂ, ಮಹಿಳಾಬ್ರಾಹ್ಮಣ್ಯಕ್ಕೂ ನಿಕಟವಾದ ಸಂಬಂಧವಿದೆ ಎನ್ನುವುದಕ್ಕಿಂತ ಸ್ತ್ರೀವಾದ ಮೆಟ್ಟನಿಲ್ಲಬೇಕಾದದ್ದೆ. 'ಮಹಿಳಾಬ್ರಾಹ್ಮಣ್ಯ'ವನ್ನು ಎಂದು ಹೇಳಬೇಕು".[೨೨] ಒಬ್ಬ ನೌಕರಸ್ಥ ಹೆಣ್ಣಿನ ಸಮಸ್ಯೆಗಳು ಮತ್ತೊಬ್ಬ ನಗರ ಗೃಹವಾಸಿ ಹೆಣ್ಣಿನ ಸಮಸ್ಯೆಗಳಿಗಿಂತ ಭಿನ್ನ. ಇಲ್ಲಿ ಬಳಕೆಯಾಗಬೇಕಾದ ಸ್ತ್ರೀವಾದದ ಮಾನದಂಡ ಯಾವುದು? ಇಲ್ಲಿಯೇ ನಮಗೆ ಎದುರಾಗುವ ಇನ್ನೊಂದು ದೊಡ್ಡ ಪ್ರಶ್ನೆಯೆಂದರೆ ಈ ಸ್ತ್ರೀವಾದ ಯಾರಿಗಾಗಿ? ಅಕ್ಷರಸ್ಥ ಮಹಿಳೆಗಾಗಿಯೇ, ಅನಕ್ಷರಸ್ಥ ಮಹಿಳೆಗಾಗಿಯೇ? ಅಕ್ಷರಸ್ಥರಾದ ನಾವು ಸ್ತ್ರೀವಾದದ ಹೆಸರಿನಲ್ಲಿ ಅನಕ್ಷರಸ್ಥ ಮಹಿಳೆಯರ ಮೇಲಿನ ಒಂದು ಹೊರೆಯನ್ನು ಇಳಿಸಲು ಹೋಗಿ ಮತ್ತೊಂದು ಹೊರೆಯನ್ನು ಹೊರಿಸುತ್ತಿದ್ದೇವೆಯೇ, ಗ್ರಾಮೀಣ ಮಹಿಳೆಯರ ಬದುಕಿಗೂ ನಗರ ಮಹಿಳೆಯರ ಬದುಕಿಗೂ ವ್ಯತ್ಯಾಸವಿಲ್ಲವೆ? ಈ ಸ್ತ್ರೀವಾದದ ಮಾನದಂಡಗಳು ಇಬ್ಬರಿಗೂ ಒಂದೇ ಬಗೆಯಾಗಿ ಅನ್ವಯವಾಗುತ್ತವೆಯೇ? ನಗರದಲ್ಲಿಯೇ ಇರುವ ಗ್ರಾಮೀಣ ಮನೋಭಾವದ ಮಹಿಳೆಯರ ಬದುಕು ಇತ್ತ ನಗರಕ್ಕೂ ಅತ್ತ ಗ್ರಾಮಕ್ಕೂ ಸೇರದ ಮಧ್ಯಂತರ ಜಗತ್ತಿನಲ್ಲಿ ಜೋತಾಡುವಂತೆ ಆಗಿದೆ. ಇವೆಲ್ಲ ಪ್ರಶ್ನೆಗಳಿಗೆ ಸ್ತ್ರೀವಾದದ ಒಂದೇ ರೀತಿಯ ಮಾನದಂಡದಿಂದ ಎತ್ತರಿಸಲಾಗದು. ಹೀಗಾಗಿ ಸ್ತ್ರೀವಾದಕ್ಕೆ ಭಿನ್ನ ಮುಖಗಳಿವೆ. ಭಿನ್ನ ಆಯಾಮಗಳಿವೆ. ಭಿನ್ನ ಸ್ತರಗಳಿವೆ ಭಿನ್ನ ಮಾರ್ಗಗಳಿವೆ. ಮಾನದಂಡವನ್ನು ಇನ್ನೊಬ್ಬರ ಮೇಲೆ ಹೇರಿ ಬದುಕನ್ನು ಭಾರವಾಗಿಸಿ

ಸ್ತ್ರೀವಾದದ ಮೂಲಕ ನಾವು ಮಹಿಳೆಯನ್ನು ಬದುಕಿನಿಂದ ವಿಮುಖಗೊಳ್ಳಲು ಪ್ರೇರೇಪಿಸಿದಂತಾಗುತ್ತದೆ. ಹೀಗಾಗಿ ಸ್ತ್ರೀವಾದದ ಬಗ್ಗೆ ಮಾತನಾಡುವಾಗ ತುಂಬ ಎಚ್ಚರಿಕೆಯಿಂದಿರಬೇಕಾಗುತ್ತದೆ.

ಗ್ರಾಮೀಣ ಬದುಕಿನಲ್ಲಿ ವಿವಾಹ ಸಂಬಂಧಗಳು ಹೆಣ್ಣನ್ನು ಹೇಗೆ ಒಡೆಯುತ್ತವೆ ಎಂಬುದನ್ನು ಅರಿತಿದ್ದೇವೆ. ನಗರ ಜೀವನದಲ್ಲಿ ಈ ಮಹಿಳಾ ಬ್ರಾಹ್ಮಣ್ಯ ಕಳೆದು ಹೋಗಿಲ್ಲ. ಇನ್ನೊಂದು ರೂಪದಲ್ಲಿ ಸಂಪೂರ್ಣವಾಗಿ ಮೈತಾಳುತ್ತಿದೆ, ಅಳುತ್ತಿದೆ. ಅವಿಭಕ್ತ ಕುಟುಂಬಗಳಲ್ಲಿ ಸಾಮಾನ್ಯವಾಗಿರುವ ಸ್ತ್ರೀ ವಿಭಜನೆಯನ್ನು ಸಣ್ಣ ಕುಟುಂಬಳಲ್ಲಿ ಕಾಣಬಹುದು. ಹೊರಗೆ ದುಡಿಯುವ ಗಂಡು ಮತ್ತು ಗೃಹಕೃತ್ಯಗಳಲ್ಲಿ ತೊಡಗಿಸಿಕೊಂಡಿರುವ ಹೆಣ್ಣು ಇವರಿಬ್ಬರ ನಡುವಿನ ಅಂತರವನ್ನು ಗಮನಿಸಬೇಕು. ಮತ್ತು ಅಲ್ಲಿರುವ ಮೇಲರಿಮೆ, ಕೀಳರಿಮೆಯನ್ನು ತಿಳಿಯಬೇಕು.

"ಗ್ರಾಮೀಣ ಬದುಕಿನಲ್ಲಿ ಬೆಳೆದ ಹೆಣ್ಣೊಬ್ಬಳು ನಗರದ ಬದುಕನ್ನು ಪ್ರವೇಶಿಸುವಾಗ ಅಲ್ಲಿ ಅಸ್ಪೃಶ್ಯಳಾಗಿಬಿಡುತ್ತಾಳೆ. ಪಟ್ಟಣದ ರೀತಿನೀತಿಗಳನ್ನು ನಯ ನಾಜೂಕುಗಳನ್ನು ತಿಳಿಯಲಾರದೆ ಕುಟುಂಬದ ಸದಸ್ಯರ ಪಾಲಿಗೆ ನಗೆಪಾಟಲಿನ ವಸ್ತುವೂ ಆಗುತ್ತಾಳೆ. ಎಲ್ಲ ಮನೆಗಳಲ್ಲೂ ಮಹಿಳಾ ಬ್ರಾಹ್ಮಣ್ಯ ಒಂದಲ್ಲ ಒಂದು ಹಳ್ಳಿಗೆ ಬಂದ ಹೆಣ್ಣಿನದೂ ಆಗಿಬಿಡುತ್ತದೆ. ಕಾಲು ಬೀಳುವುದರಿಂದ ಹಿಡಿದು, ಗದ್ದೆಯ ಬದುವಿನ ಮೇಲೆ ನಡೆಯುವಾಗ ಸೌದೆ ಒಲೆಯ ಮುಂದೆ ಕುಳಿತು ಕೊಳವೆಯಿಂದ ಒಲೆಯನ್ನು ಊದಬೇಕಾಗುವಂಥ ಸಂದರ್ಭಗಳಲ್ಲಿ ಉಸಿರಿನಷ್ಟೇ ಸಲೀಸಾಗಿ ಇವು ಪ್ರತ್ಯಕ್ಷವಾಗುತ್ತವೆ".[೨೩]

ಅತ್ತೆ ಸೊಸೆಯರಲ್ಲಿ ಯಾರೇ ಪ್ರಧಾನರಾದರೂ ಒಂದು ಹೆಣ್ಣಿನ ಕೊರಗನ್ನು ತಪ್ಪಿಸಲಾಗದು. ಮನಸ್ಸಲ್ಲಿ ಬೇರೂರಿರುವ ಮಹಿಳಾ ಬ್ರಾಹ್ಮಣ್ಯದ ಕತ್ತಲನ್ನು ಅಂಧತ್ವವನ್ನು ತೊಲಗಿಸದೆ ಬೇರೆ ವಿಧಿ ಇಲ್ಲ. ಆ ಕತ್ತಲಿಗೆ ಕಲ್ಲನ್ನೂ ಕರಗಿಸುವ ಶಕ್ತಿ ಇದೆ. ನೀರನ್ನೂ ಕಲ್ಲಾಗಿಸುವ ಸಾಮರ್ಥ್ಯವಿದೆ.

"ಸ್ತ್ರೀವಾದ ಜನಾಂಗದಿಂದ ಜನಾಂಗಕ್ಕೆ ಬೇರೆಯಾಗುತ್ತದೆ. ಜನಾಂಗವೆನ್ನುವಾಗ ಮತ್ತೆ ಒಳಪಂಗಡವನ್ನು ಗಮನಿಸಿದಾಗ ನವೋದಯ ಕಾಲಘಟ್ಟವನ್ನು ನೋಡಿದರೆ ಅಲ್ಲಿ ವಿಧವಾ ಸಮಸ್ಯೆ ಹೆಚ್ಚು ಇದೆ. ಮೊದಮೊದಲು ವಿಧವೆಯರ ಪುನರ್ವಿವಾಹಕ್ಕಿಂತಲೂ ಅವರ ಸಂರಕ್ಷಣೆ ಮುಖ್ಯವೆನ್ನುವ ವಿಚಾರವೇ ಬಂದಿದೆ. ವಿಧವೆಯ ಪುನರ್ವಿವಾಹದ ಸಂದರ್ಭದಲ್ಲಿ ಆಕೆ

ಬಾಲವಿಧವೆ ಎನ್ನುವ ಕನ್ಯತ್ವದ ಪರಿಕಲ್ಪನೆಯನ್ನು ಸ್ವತಃ ಮಹಿಳೆಯರೇ ತಮ್ಮ ಕೃತಿಗಳಲ್ಲಿ ಒಡಮೂಡಿಸಿರುವುದನ್ನು ಕಾಣುತ್ತೇವೆ. ನವೋದಯ ಕಾಲಘಟ್ಟದಲ್ಲಿ ಈ ವಿಚಾರಗಳೇ ಕ್ರಾಂತಿ ಎನಿಸಿದವು. ಇದೇ ಸ್ತ್ರೀಪರ ವಿಚಾರಗಳೆಂದು ಕರೆಸಿಕೊಂಡವು. ಆದರೆ, ಅಲ್ಲಿನ ಕ್ರಾಂತಿ ಮೇಲ್ವರ್ಗದವರಿಗೆ ಮಾತ್ರ ಸಂಬಂಧಿಸಿದ್ದಾಗಿದೆ.

ಕೆಳವರ್ಗದ ಜನರಲ್ಲಿ ವಿಧವಾ ಸಮಸ್ಯೆಯಿಲ್ಲ. ಇಲ್ಲಿ ಕೂಡಿಕೆ ಕ್ರಮವಿರುವುದನ್ನು ಈಗಲೂ ಕಾಣುತ್ತೇವೆ. ವೈದಿಕರಲ್ಲಿ ವಿಧವೆ ಮನೆಯೊಳಗೆ ಬತ್ತಿ ಹೊಸೆಯುವ, ಪೂಜೆ ಮಾಡುವ, ಓದುವ ಕ್ರಿಯೆಗಳಿಗಷ್ಟೇ ಸೀಮಿತಳಾಗಿದ್ದರೆ ವೈದಿಕೇತರ ವಿಧವೆ ಮಣ್ಣಿನೊಂದಿಗೆ ಮಣ್ಣಾಗಿ ದುಡಿಯುವಳು. ಆಕೆಯ ದುಡಿಮೆಯನ್ನೂ, ಶಕ್ತಿಯನ್ನೂ ಅರ್ಥರೂಪಕ್ಕೆ ಬದಲಾಯಿಸಲಾಗುತ್ತದೆ. ಆದುದರಿಂದ ಅವಳಿಗೆ ವಿಧವಾತನವಿಲ್ಲ. ಬದಲಾಗಿ ಒಬ್ಬ ಸಂಪಾದಿಸುವ ವ್ಯಕ್ತಿಯಾಗಿ ಇನ್ನೊಂದು ಕುಟುಂಬ ಅವಳನ್ನು ಸ್ವೀಕರಿಸುತ್ತದೆ. ವಿಧವೆಯ ಸಮಸ್ಯೆಗಳು ಆಕೆಗಿರದಿದ್ದರೂ ಮಲಮಕ್ಕಳು, ಸವತಿ, ಅತ್ತೆಯ ಕಾಟ ಹೀಗೆ ಹಲವು ರೂಪದ ಮಹಿಳಾ ಸಮಸ್ಯೆಗಳು ಅವಳನ್ನು ಕಾಡುತ್ತವೆ”.[೨೪]

ಪ್ರಗತಿಶೀಲ ಚಳುವಳಿಯ ಸಂದರ್ಭದಲ್ಲಿ ಅಳುವ ಅಳಿಸಿಕೊಂಡ ಸಂಸ್ಕೃತಿಯ ವ್ಯಾಖ್ಯಾನಗಳು ಬದಲಾದವು. ತಳರಚನೆಯೇ ಮೂಲಭೂತವಾಗಿ ಬದಲಾಗಬೇಕೆಂಬ ಕ್ರಮ ಬಂದಿರುವುದು, ಈ ಕಾಲದಲ್ಲಿ ಸ್ತ್ರೀವಾದಿ ಚಳುವಳಿಯ ಈ ಕಾಲದಲ್ಲಿ ಸ್ವಪ್ರಜ್ಞೆಯ ಎತ್ತರಕ್ಕೇರಿತು.

ತ್ರಿವೇಣಿಯವರ ಬರೆಹಗಳಲ್ಲಿ ಪ್ರಗತಿಶೀಲ ಧೋರಣೆಯ ಚಿಂತನೆಗಳನ್ನು ಗುರುತಿಸಬಹುದು, ಇವರ ಬರವಣಿಗೆಯಲ್ಲಿ ಹೆಣ್ಣಿನ ಸಮಸ್ಯೆಗಳ ತಳಹದಿಯಲ್ಲಿರುವ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ದೃಷ್ಟಿಕೋನದ ವಿಶ್ಲೇಷಣೆಯಿದ್ದು ಹೆಣ್ಣಿನ ಸಮಸ್ಯೆಯನ್ನು ಸಾಮಾಜಿಕ ಚಿತ್ರಣದ ಮುಖೇನ ವಿವರಿಸುವುದು ಗಮನಿಸುವಂಥದ್ದು, ಮುಖ್ಯವಾಗಿ ಮಧ್ಯಮ, ಕೆಳಮಧ್ಯಮ ವರ್ಗದ ಹೆಣ್ಣು ಮಕ್ಕಳ ಸಾಂಸಾರಿಕ ಸಮಸ್ಯೆಗಳ ನಾನಾ ಮಜಲುಗಳನ್ನು ಕೇಂದ್ರವಾಗಿಟ್ಟುಕೊಳ್ಳುತ್ತಾರೆ. ಅವರ ಕೃತಿಗಳಲ್ಲಿ ಹೆಣ್ಣಿನ ಮಾನಸಿಕ ಹೋರಾಟ, ವೇಶ್ಯಾಸಮಸ್ಯೆ, ಗಂಡಿನ ಲೈಂಗಿಕ ದಬ್ಬಾಳಿಕೆ, ವೈಧವ್ಯ, ವಿವಾಹೇತರ ಪ್ರೇಮ ಮುಂತಾದ ವಸ್ತುಗಳು ಕಾಣಿಸಿಕೊಳ್ಳುತ್ತವೆ.

ಪು. ೧೮೬

ಹೆಣ್ಣಿಗೆ ವಿವಾಹ ಹಾಗೂ ತಾಯ್ತನಗಳು ಬಹಳ ಮುಖ್ಯ ಎಂದು ಭಾವಿಸಿದ ತ್ರಿವೇಣಿಯವರು ಹೆಣ್ಣನ್ನು ಸಾಮಾಜಿಕ ಹಿನ್ನೆಲೆಯಲ್ಲಿಟ್ಟು ಅವಳನ್ನು ಗ್ರಹಿಸುವುದಕ್ಕಿಂತ ಹೆಚ್ಚಾಗಿ ಆಕೆಯ ಮಾನಸಿಕ ಲೋಕಕ್ಕೆ ದಾಳಿ ಇಡುತ್ತಾರೆ. ಹೆಣ್ಣಿನ ಅಂತರಂಗದ ಭಾವಕೋಶವನ್ನು ಅನಾವರಣಗೊಳಿಸುವ ಕೆಲಸ ಮಾಡುತ್ತಾರೆ. ಲೈಂಗಿಕ ಪಾತಿವ್ರತ್ಯವೇ ಮಹಿಳೆಯ ಬದುಕನ್ನು ಚಾರಿತ್ರ್ಯವನ್ನು ಅಳೆಯುವ ಮಾನದಂಡವನ್ನು ಹೇಳುತ್ತಾರೆ. ತ್ರಿವೇಣಿಯವರು ಹೆಣ್ಣಿನ ಸ್ವಂತಿಕೆ ಪ್ರಗತಿಪರ ನಿಲುವುಗಳನ್ನು ಮೆಚ್ಚಿಕೊಂಡರೂ, ಅವಳ ಬದುಕಿಗೆ ಗಂಡಿನ ರಕ್ಷಣೆ ಅಗತ್ಯ ಎಂದೇ ಭಾವಿಸುತ್ತಾರೆ. ಮಹಿಳೆ ಸದೃಢಗೊಳ್ಳಬೇಕಾದರೆ ಅವಳಿಗೆ ಆರ್ಥಿಕ ಸ್ವಾತಂತ್ರ್ಯದ ಅಗತ್ಯವಿದೆ ಎಂಬುದರ ಕಡೆಗೆ ಅಷ್ಟಾಗಿ ಗಮನ ಹರಿಸುವುದಿಲ್ಲ. ಹೆಣ್ಣು ಆರ್ಥಿಕ ಪ್ರಪಂಚದ ಕಡೆಗೆ ಮುಖ ಮಾಡಿಕೊಳ್ಳುವುದು ಗಂಡಿನ ನೆಲೆ ತಪ್ಪಿದ ಸಂದರ್ಭದಲ್ಲಿ ಮಾತ್ರ ಮನೆಯಿಂದ ಹೊರಬಂದು ಹೆಣ್ಣು ದುಡಿಯಬೇಕಾದಾಗ ಅವಳಿಗೆ ಕುಟುಂಬದಲ್ಲಿ ಯಾವುದೋ ಅಭದ್ರತೆಯಿರಬೇಕೆಂಬ ಭಾವನೆ ಇದೆ. ಆದರೂ ಅವರು ಅನೇಕ ಬರೆಹಗಳಲ್ಲಿ ಮಹಿಳೆ ಕುಟುಂಬಕ್ಕೆ ಬದ್ಧಳಾಗಿರಬೇಕೆಂಬ ಸಾಂಪ್ರದಾಯಿಕ ಧೋರಣೆಗಳಿಂದ ಹೊರಬಂದಿದ್ದಾರೆ.

ತ್ರಿವೇಣಿಯವರ ಕೃತಿಗಳಲ್ಲಿ ಅನೇಕ ಮಿತಿಗಳು, ಸರಳೀಕೃತ ಪರಿಹಾರಗಳು ದಿಢೀರನೆ ಕಾಣಿಸಿಕೊಂಡರೂ ಸ್ತ್ರೀ ಪರ ಕಾಳಜಿಗಳು ಖಂಡಿತ ಇವೆ. ತ್ರಿವೇಣಿಯವರು ತಮ್ಮ ಕಾಲದಲ್ಲಿ ತುಂಬ ಸುಲಭವಾಗಿ ಓದುಗರನ್ನು ತಲುಪಿದ ಬರಹಗಾರ್ತಿ ಭಾವುಕತೆ, ಕಥೆ ಹೇಳುವ ಜಾಣ್ಮೆ ಇವುಗಳ ಮೂಲಕ ತಮ್ಮ ಕೃತಿಗಳನ್ನು ತುಂಬಿ ಜನಪ್ರಿಯಗೊಳಿಸಿದರು. ಸಮಾಜದ ಅಸಹಜ, ಅನ್ಯಾಯದ ರೀತಿ ನೀತಿಗಳ ವಿರುದ್ಧ ತಿರುಗಿ ಬಿದ್ದಿದ್ದೂ ಉಂಟು. ದ್ವಿಸ್ತರ ನ್ಯಾಯಗಳಿಗೆ ಸ್ಪಷ್ಟ ವಿರೋಧವನ್ನೂ ಸೂಚಿಸುತ್ತಾರೆ.

ಈ ವ್ಯವಸ್ಥೆಯಲ್ಲಿ ಕಲ್ಪಿಸುವ ಚರಿತ್ರೆಗಳಲ್ಲಿ ಹೆಣ್ಣು ಎಲ್ಲೂ ಕಾಣಿಸಿಕೊಳ್ಳುವುದಿಲ್ಲ. ಚರಿತ್ರೆಯನ್ನೇ ನಿರಾಕರಿಸಲಾದ ಮಹಿಳಾ ಬದುಕು ತನಗಾಗಿ ಮಾದರಿಗಳನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲದ ಮಾತು. ಪರಂಪರೆಯ ಕೊಂಡಿಯನ್ನು ಎಟುಕಿಸಿಕೊಳ್ಳಲಾಗದ ಈ ಹೆಣ್ಣಿಗೆ ವರ್ತಮಾನವೆಂಬುದು ಒಂದು ಅತಂತ್ರಸ್ಥಿತಿ. ಪರಂಪರೆಯ ಆಸರೆಯಿಲ್ಲದ ಬದುಕು ನಿರಾಧಾರವಾಗಿ ನಿಂತಾಗ ಆತಂಕ ಭಯ ತಲ್ಲಣಗಳಲ್ಲಿ ಬೀಳುತ್ತದೆ. ಹೆಜ್ಜೆಗಳು ಸ್ಥಗಿತಗೊಳ್ಳುತ್ತವೆ. ಕಣ್ಣು ಕಾಣದಾಗುತ್ತದೆ. ಈ ಸ್ಥಿತಿಯಲ್ಲಿ ಮುಂದೇನು ಎಂಬುದು ಉತ್ಸಾಹದ ಸ್ವಪ್ರಯತ್ನದ ಪ್ರಶ್ನೆಯಾಗಿ ಉಳಿಯುವುದಿಲ್ಲ.

ಬದಲಿಗೆ ಇನ್ನೇನು ಗತಿ ಎಂಬ ಅಸಹಾಯಕತೆಗೆ ತಳ್ಳುವ ಸಂಗಾತಿಯಾಗುತ್ತದೆ. ತನ್ನದಲ್ಲಿನ ಬದುಕು ವಿಧಿಬರಹಕ್ಕೆ ಅಂಕಿತವಾಗಿ ಬಿಡುತ್ತದೆ. ಹಾಗಾಗಿ ಭವಿಷ್ಯವನ್ನು ಕುರಿತ ಕನಸುಗಳಿಗೆ ಅವಕಾಶವೇ ಇಲ್ಲ. ಕನಸುಗಳಿಲ್ಲದ ಹಾದಿಯಲ್ಲಿ ನಡೆಯಬೇಕಾದ ಒತ್ತಾಯದಲ್ಲಿ ವರ್ತಮಾನವು ನಿಷ್ಕ್ರಿಯವಾಗುವುದು ಅನಿವಾರ್ಯ.

ಮಹಿಳಾ ಬದುಕಿನ ನಿಷ್ಕ್ರಿಯತೆಯನ್ನು ಸರಿಯಾಗಿ ವಿವರಿಸಿಕೊಳ್ಳುವ ಅಗತ್ಯವಿದೆ. ಏಕೆಂದರೆ, ಚಲನಶೀಲತೆ ಹಾಗೂ ಕ್ರಿಯಾಶೀಲತೆಗಳಲ್ಲದೆ ಚೇತನಕ್ಕೆ ಸೃಜನಶೀಲತೆಯನ್ನು ಅರಳಿಸುವ ಸಾಮರ್ಥ್ಯವೇ ಸಾಧ್ಯವಿಲ್ಲ. ಅವಳ ಚಲನಶೀಲತೆಗೆ ಒದಗುವ ದಿಗ್ಬಂಧನವನ್ನೇನೋ 'ಗೃಹಿಣಿತ್ವ'ವನ್ನು ವಿವರಿಸಿಕೊಳ್ಳುವ ಮೂಲಕ ಅರ್ಥಮಾಡಿಕೊಳ್ಳಬಹುದು. ಆದರೆ ಸದಾ ಸರ್ವಕಾಲವೂ ದುಡಿಯುತ್ತಲೇ ಇರುವ ಮಹಿಳೆಯಲ್ಲಿ ನಿಷ್ಕ್ರಿಯತೆ ಇದೆ ಎಂಬುದನ್ನು ವಿವರಿಸುವುದು ಸುಲಭವಲ್ಲ. ಮೊದಲಿಗೆ ಅರ್ಥಮಾಡಿಕೊಳ್ಳಬೇಕಾದ ಮಾತೆಂದರೆ ಹೆಣ್ಣಿನ ದುಡಿಮೆಯು ಪ್ರಧಾನವಾಗಿ ಅವಳು ಆಶಿಸಿ, ಭಾವಿಸಿ, ರೂಪಿಸಿಕೊಂಡದ್ದಲ್ಲ. ಸಮಾಜ ವ್ಯವಸ್ಥೆಯು ಅವಳ ಮೇಲೆ ಒತ್ತಾಯವಾಗಿ ಹೇರಿರುವ ಈ ದುಡಿಮೆಯಿಂದ ಅವಳು ಗಳಿಸುವುದು. ಏನೇನೂ ಇಲ್ಲ. ಹಾಗಾಗಿ ಇದು ಅವಳ ಚೇತನದಲ್ಲಿ ಯಾವ ಉತ್ಸಾಹವನ್ನು ತುಂಬಲಾರದು. ವಿಧಿಯಿಲ್ಲದೆ ಗಾಣದೆತ್ತಾಗಿ ಬದುಕುವುದು ಅವಳಿಗೆ ಅನಿವಾರ್ಯವಾಗಿದೆ.

ಸಮಾಜ ವ್ಯವಸ್ಥೆಯ ಬಹುಮುಖ್ಯ ಲಕ್ಷಣವೇ ಅಸಮಾನತೆ. ಅದರ ಘೋಷಣೆಗೆ ತದ್ವಿರುದ್ಧ ವಾಸ್ತವ. ಕೊನೆಗೂ ಸೌಲಭ್ಯ ಸವಲತ್ತುಗಳ ಬದುಕು ಕೆಲವರಿಗಷ್ಟೇ ಸೀಮಿತವಾಗುತ್ತದಾದರೆ ಬಹುತೇಕ ಸಾಮಾನ್ಯರು ಈ ಸೌಲಭ್ಯ ಸವಲತ್ತುಗಳ ಸುಖದ ಬದುಕಿನ ಕನಸು ಕಾಣುತ್ತಲೇ ಬದುಕು ಸವೆಸುತ್ತಾರಷ್ಟೇ. ವಾಸ್ತವದಲ್ಲಿ ಎಂದೆಂದಿಗೂ ಕಾಣಸಿಗದ ಸುಖವನ್ನು ನಿರಂತರವಾಗಿ ಅರಸುತ್ತಾ ದಣಿಯುವ ಈ ಸಾಮಾನ್ಯರಿಗೆ ಕನಸುಗಳು, ಭ್ರಮೆಗಳು ಮಾತ್ರವೇ ಒಂದಿಷ್ಟು ವಿರಮಿಸುವ ಅವಕಾಶಗಳನ್ನು ಕಲ್ಪಿಸುತ್ತವೆ. ಜನಸಾಮಾನ್ಯರಿಗೆ ಅವಾಸ್ತವದ ಭ್ರಮಾಲೋಕವನ್ನು ನೆಚ್ಚಿ ಕೆಡಬೇಡಿರೋ ಎಂದು ಬುದ್ಧಿವಾದವನ್ನು ಹೇಳುವುದು ಸುಲಭ. ಆದರೆ ದಣಿದ ಜೀವಕ್ಕೆ ಕ್ಷಣಿಕವಾಗಿಯಾದರೂ ಮೈಮರೆಸುವ ಮಾದಕತೆಯೇ ಪ್ರಿಯವಾಗುವುದೇ ಬದುಕಿನ ವಾಸ್ತವ.

ಈ ಸಾಮಾಜಿಕ ವಾತಾವರಣದಲ್ಲಿ ಪ್ರಕೃತಿ ಸಹಜವಾದ ಈ ಪೋಷಕ ದ್ರವ್ಯವನ್ನು ಪಡೆಯುವುದು ಕೂಡಾ ಹೆಣ್ಣಿಗೆ ಸರಳವಾದ ಮಾತಾಗಿರುವುದಿಲ್ಲ. ಅವಳ ಲೈಂಗಿಕತೆಯನ್ನು ನಿರ್ಬಂಧಿಸುವ ಪರಮ ಸೂತ್ರವಾಗಿ ರೂಪುಗೊಂಡಿರುವ ವಿವಾಹದ ನಿಯಮಗಳಡಿ ಹೆಣ್ಣು ಬದುಕಿನಲ್ಲಿ ಕಾಮವು ಅವಳ ಮೇಲಿನ ಆಕ್ರಮಣವಾಗಿ ಅವಳ ಅಪರಾಧವಾಗಿ ಅಥವಾ ಶಿಕ್ಷೆಯಾಗಿ ಮಾತ್ರವೇ ಕಾಣಿಸುತ್ತದೆಯೇ ಹೊರತು ಅವಳ ಚೇತನದ ಆನಂದ

ಶಕ್ತಿಯಾಗುವುದಿಲ್ಲ. ಹೆಣ್ಣಿನ ಬದುಕಿನಲ್ಲಿ 'ಕಾಮ'ದ ಸ್ಥಾನವೇನು ಎಂಬುದನ್ನು ಕುರಿತ ಚರ್ಚೆಗಳು ಸಾಕಷ್ಟು ನಡೆದಿವೆ. ಈ ಪ್ರಸ್ತಾಪಗಳು ಎಷ್ಟೇ ಮುಖ್ಯವಾದರೂ ಈ ಸಂದರ್ಭದಲ್ಲಿ ಈ ವಿವರಗಳಿಗೆ ಅವಕಾಶವಾಗುವುದಿಲ್ಲ. ಅದರ ಮುಖ್ಯ ಸಾರಾಂಶವನ್ನಷ್ಟೇ ಪರಿಗಣಿಸಲು ಸಾಧ್ಯ. ಅದರಲ್ಲೂ ಸಹಜ ಕಾಮವು ನಿರ್ಬಂಧಿತವಾಗುವ ಸಾಮಾಜಿಕ ವಾತಾವರಣದಲ್ಲಿ ಬದುಕುವ ಹೆಣ್ಣಿನ ಸೃಜನಶೀಲತೆಯ ತಲ್ಲಣಗಳನ್ನು ಗಮನಿಸುವಷ್ಟಕ್ಕೆ ಈ ಚಿಂತನೆಯನ್ನು ಸೀಮಿತಗೊಳಿಸಬೇಕಾಗಿದೆ.

ಕಾಮದ ಅಭಿವ್ಯಕ್ತಿಗೆ ವಾಸ್ತವ ಬದುಕಿನಲ್ಲಾಗಲೀ ಅವಕಾಶಗಳು ನಿರ್ಬಂಧಿತವಾಗುತ್ತವೆ ಎಂಬುದೇ ಹೆಣ್ಣು ಬದುಕಿನ ಅನುಭವ. ಅವಳ ಬಹುತೇಕ ದುಃಖಗಳು ಈ ನೆಲೆಯವೇ ಆಗಿವೆ. ವಿವಾಹದಲ್ಲಾಗಲೀ ಅದರ ಹೊರತಾಗಲೀ ಹೆಣ್ಣು ತನ್ನ ಅಗತ್ಯದ ಕಾಮವನ್ನು ಅನುಭವಿಸುವುದಿರಲಿ, ಕಲ್ಪಿಸುವುದೂ ಕೂಡಾ ಸಾಧ್ಯವಾಗುವುದಿಲ್ಲ. ಶೀಲ ಸಂಹಿತೆಯ ಗೆರೆಗಳು ಹೆಣ್ಣಿನ ಪಾಲಿಗೆ ತುಂಬಾ ಕಟ್ಟುನಿಟ್ಟಾಗಿದೆ. ಹೆಣ್ಣಿನ ಕಾಮವು ಎಂದೂ ಅವಳ ಸ್ವಂತದ್ದಲ್ಲ. ಏನಿದ್ದರೂ ಗಂಡಿನ ಅನುಭೋಗಕ್ಕಾಗಿಯೇ ಬಳಕೆಗೊಳ್ಳುವಂಥದ್ದು.

ನಿಷ್ಠುರ ಸಾಮಾಜಿಕ ನಿಯಮವನ್ನೂ ಪ್ರಶ್ನಿಸುವ ಒಂದು ಸಣ್ಣ ಅವಕಾಶವೂ ಹೆಣ್ಣಿಗೆ ದೊರೆಯುವುದಿಲ್ಲ. "ಹೆಣ್ಣು ಅವಿವಾಹಿತಳಿರಬಹುದು, ವಿವಾಹಿತಳಿರಬಹುದು, ವೇಶ್ಯೆಯೇ ಇರಬಹುದು, ಕೊನೆಗೆ ಆಕೆ ಅಪ್ರಾಪ್ತ ಬಾಲಕಿಯೋ, ವೃದ್ದೆಯೋ, ಹುಚ್ಚಳೋ, ಬೆಪ್ಪಳೋ, ಅಂಗವಿಕಲಳೋ ಏನೂ ಆಗಿರಬಹುದು. ಇವಳ ಲೈಂಗಿಕತೆಯ ಮೇಲೆ ದಾಳಿ ಮಾಡುವ ಸಾಮಾಜಿಕ ಅಧಿಕಾರ ಗಂಡಿಗೆ ತೀರಾ ಸಹಜವೆಂಬಂತೆ ಪ್ರಾಪ್ತವಾಗಿ ಬಿಡುತ್ತದೆ. ಇದು ಅಪರಾಧ ಎಂದು ಗಟ್ಟಿಯಾಗಿ ಹೇಳುವ ಅವಕಾಶವೇನೂ ಹೆಣ್ಣಿಗೆ ಸುಲಭವಾಗಿ ದೊರೆಯುವುದಿಲ್ಲ".[೨೫]

ಇನ್ನು ಗಂಡನೊಂದಿಗೆ ಕೂಡ ಅವಳು ಈ ಕುರಿತು ತನ್ನ ಬೇಕು ಬೇಡಗಳನ್ನು ಹೇಳುವುದಿಲ್ಲ. ಪ್ರತಿರೋಧದ ಪ್ರಶ್ನೆಯನ್ನು ಎತ್ತದಿರುವುದೇ ಮೇಲು. ಆದರೆ 'ನೀನೊಂದು ವಸ್ತು' ಎಂದು ಹೆಣ್ಣನ್ನು ಈ ಸಾಮಾಜಿಕ ವಾತಾವರಣವು ಎಷ್ಟೇ ನಿರ್ಬಂಧಿಸುತ್ತಿದ್ದರೂ ಹೆಣ್ಣು ತನ್ನೊಳಗಿನ ಜೀವಸೆಲೆಯ ರಭಸವನ್ನು ಅದುಮಿ ಹಿಡಿಯಲಾರಳು. ಅದನ್ನು ಮುಕ್ತವಾಗಿ ಹರಿಯ ಬಿಡುವ ಸಂದರ್ಭಗಳಿಗಾಗಿ ಅವಳು ಹಾತೊರೆಯುತ್ತಾಳೆ. ಅದು ಅಸಾಧ್ಯವೇ ಆದಾಗ ಮರುಗಿ, ಮಂಕಾಗಿ ಕೊರಡಾಗುತ್ತಾಳೆ. ಹೀಗಿದ್ದರೂ ಅವಳು ಮಾತು ಕತೆ, ಭಾವ ವರ್ತನೆಗಳಲ್ಲಾದರೂ ಕಾಣಿಸಿಕೊಳ್ಳಲು ಕೆಲವೊಮ್ಮೆ ಪ್ರಯತ್ನಿಸಬಹುದು. ಭಾವಲೋಕದಲ್ಲೇ ಹರಳುಗಟ್ಟುತ್ತಾ, ಸೃಜನಶೀಲತೆಯ ಹಾದಿಯಲ್ಲಿ ಚಲಿಸಲು ತೊಡಗಲೂಬಹುದು.

ಆರ್ಯಾಂಬರ 'ಬದುಕಿನ ಬವಣೆ'ಯಲ್ಲಿ 'ಆ ಹಾಡು' 'ದೇವಮಾನವ'ದ ನರಸಿಂಹಯ್ಯನ 'ಸಾಕುಮಗ' ದಲ್ಲಿನ ಡ್ರಿಲ್‌ಮೇಷ್ಟ್ರು 'ಪ್ರಕೃತಿ ಪುರುಷ' ಕಾದಂಬರಿಗಳು ಇದೇ ನೆಲೆಗಟ್ಟಿನಲ್ಲಿ ಚಿತ್ರಿತವಾಗಿದೆ. ಕಾಮವೇ ಪ್ರಧಾನವಾಗಿ ಸ್ತ್ರೀ ತನ್ನ ನೆಲೆಯನ್ನು ಕಳೆದುಕೊಂಡು ಸಮಾಜದಲ್ಲಿ ಪರಿತಪಿಸುವ ವಸ್ತುವು ಇವುಗಳದ್ದಾಗಿದೆ.

ತ್ರಿವೇಣಿಯವರ 'ಹೂವು ಹಣ್ಣು' ನಾಯಕಿ ಹೆಜ್ಜೆ-ಹೆಜ್ಜೆಗೂ ಕಾಮುಕರ ಕೈಗೆ ಸಿಲುಕಿದ್ದು, 'ಮೊದಲ ಹೆಜ್ಜೆ' ನಾಯಕಿನನ್ನು ಶಿವಸ್ವಾಮಿ ಕಬಳಿಸಿದ್ದು, 'ಕೀಲುಗೊಂಬೆ'ಯಲ್ಲಿ ಸೀತಾಳ ಮೇಲೆ ನಡೆದ ನಿರಂತರ ದೌರ್ಜನ್ಯ. 'ಸೋತು ಗೆದ್ದವಳು' ಆನಂದನ ಪರಿಸ್ಥಿತಿಯ ಹೀಗೆ ಲೈಂಗಿಕತೆಯ ಇಲ್ಲಿ ಮುಖ್ಯವಾಗಿ ಹೆಣ್ಣು ಪರಿಸ್ಥಿತಿಯ 'ಕೈಗೊಂಬೆ'ಯಾಗಿ ಸಮಾಜದ ದೃಷ್ಟಿಯಲ್ಲಿ ಕೀಳುಭಾವನೆಗೆ ಸಿಲುಕುವುದು. ತಮ್ಮದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವುದನ್ನು ದುರಂತತೆಗೆ ಒಳಗಾಗುವುದನ್ನು ಕಾಣಬಹುದು.

ಪ್ರತಿರೋಧವನ್ನು ಜೀವಂತವಾಗಿರಿಸಿಕೊಳ್ಳಬೇಕೆಂಬುದೇ ಮಹಿಳಾ ಸೃಜನಶೀಲತೆಯ ಮುಖ್ಯಅಗತ್ಯ. ಇದನ್ನು ಸಾಧ್ಯವಾಗಿಸಿಕೊಳ್ಳುವಲ್ಲಿ ಆತ್ಮವಿಶ್ವಾಸವೇ ಬಹುಮುಖ್ಯವಾಗಿ ಒದಗಿಬರುವ ಸಾಧನ. ತನ್ನ ದಿನನಿತ್ಯದ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕೂ ಹೆಣ್ಣು ಗಂಡನ್ನು ಅವಲಂಬಿಸಬೇಕಾದ ಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಅಗತ್ಯಗಳನ್ನು ಸರಿಯಾಗಿ ಪೂರೈಸು ಎಂಬ ಆಗ್ರಹ ಪರಾಧೀನತೆಯನ್ನು ಅಧಿಕೃತಗೊಳಿಸಿದಂತೆ ಮಾತ್ರವೇ ಆಗುತ್ತದೆ. ಬದಲಿಗೆ ನನ್ನ ಅಗತ್ಯವನ್ನು ನಾನೇ ಪೂರೈಸಿಕೊಳ್ಳಲು ಅವಕಾಶಬೇಕು ಎಂಬ ಆಗ್ರಹ ಮೊದಲಾಗಬೇಕು. ನನ್ನ ಚಲನಶೀಲತೆ, ನನ್ನ ಕ್ರಿಯಾಶೀಲತೆಗಳ ನಿರ್ಬಂಧಗಳನ್ನು ನಾನು ಸಹಿಸುವುದಿಲ್ಲ ಎಂಬುದನ್ನು ಕುಟುಂಬಕ್ಕೆ ಅರ್ಥಮಾಡಿಸುವುದು ಮೊದಲ ಅಗತ್ಯ. ಲೈಂಗಿಕತೆ, ಆಸ್ತಿ, ವಂಶ, ವೈವಾಹಿಕತೆಗಳನ್ನು ಕುರಿತ ಭೌತಿಕ ಹಕ್ಕುಗಳನ್ನು ಸಮುದಾಯ ಶಕ್ತಿಯಾಗಿ ಒಗ್ಗೂಡಿ ಗಳಿಸುವುದೇ ಹೆಚ್ಚು ವ್ಯಾವಹಾರಿಕ.

ಗೃಹಿಣಿತ್ವದ ಬಾಧ್ಯತೆಗಳಲ್ಲಿ ಇನ್ನಿಲ್ಲದಂತೆ ಸಿಲುಕಿಕೊಳ್ಳುವ ಹೆಣ್ಣಿನ ಬದುಕಿನಲ್ಲಿ ಸೃಜನ ಶೀಲತೆಯ ಪಸೆಯು ಆರಿಹೋಗುವ ಪರಿಯನ್ನು ಸಾಕಷ್ಟು ದೀರ್ಘವಾಗಿ ಪ್ರಸ್ತಾಪಿಸಲಾಯಿತು. ಮುಖ್ಯವಾಗಿ ಅವಳ ಸಮಯ ಮತ್ತು ಅವಕಾಶಗಳನ್ನು ಲೂಟಿ ಹೊಡೆದು ಆವರಿಸುವ ಕುಟುಂಬ ನಿಯಮಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಗೃಹಿಣಿತ್ವವನ್ನು ಪ್ರಶ್ನಿಸುವುದೆಂದರೆ ಈ ನಿಯಮಗಳನ್ನು ಕುರಿತದ್ದೇ ಹೊರತದ್ದೇ ಹೊರತು ಕುಟುಂಬ, ಗಂಡ, ಮಕ್ಕಳು ಎಂಬ ಸಂಬಂಧಗಳನ್ನೇ ನಿರಾಕರಿಸಿ, ಸೃಜನಶೀಲತೆಯನ್ನು ಜೀವಂತವಾಗಿರಿಸಿ ಕೊಳ್ಳಬೇಕೆಂಬುದೆ ಒಂದು ದೊಡ್ಡ ಮಿಥ್ಯೆ. ಇದನ್ನು ನೆಚ್ಚಿದರೆ ಅದು ಭ್ರಮಾಲೋಕವನ್ನು ನಿರಾಕರಿಸಿ, ಇನ್ನೊಂದು ಭಯಾನಕ ಭ್ರಮಾಲೋಕವನ್ನು ಪ್ರವೇಶಿಸುವ ಪ್ರಮಾದವೇ ಆದೀತು.

ಮಹಿಳೆಯರ ಸದ್ಯದ ಸಾಮಾಜಿಕ ಸ್ಥಿತಿಯೇನೊ, ಈ ಎರಡು ಭ್ರಮಾಲೋಕಗಳಲ್ಲಿ ಒಂದನ್ನು ಆಯ್ದುಕೊಳ್ಳಬೇಕಷ್ಟೆ ಎಂಬಂತೆಯೇ ಇದೆ. ಕುಟುಂಬದ ಸೌಖ್ಯ ಬೇಕೆಂದರೆ ಸಾಧನೆಯ ಆಕಾಂಕ್ಷೆಗಳನ್ನು ಕೊಂದುಬಿಡಬೇಕು. ಸಾಧನೆಯ ಹಾದಿಯನ್ನು ಆಯ್ದುಕೊಂಡರೆ ಕುಟುಂಬ ಸೌಖ್ಯಕ್ಕೆ ಎರವಾಗಬೇಕು ಎಂಬ ಸಂದಿಗ್ಧದಲ್ಲೇ ಮಹಿಳೆಯರು ಇನ್ನೂ ತೊಳಲುತ್ತಿದ್ದಾರೆ. "ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗ ಖಗಗಳಿಗೆ ಅಂಜಿದೊಡೆಂತಯ್ಯ"[೨೬] ಎಂಬ ಸವಾಲನ್ನು ಸಮಾಜಕ್ಕೆ ಹಾಕಿ ಗೆಲ್ಲುವುದು ಸುಲಭ ಸಾಧ್ಯವಲ್ಲ. ಎಲ್ಲ ದೊಡ್ಡ ಸಾಧಕಿಯರ ಹಿನ್ನೆಲೆಗೂ ಇಂಥದ್ದೇ ಕತೆಗಳಿರುವುದನ್ನು ಕಾಣುತ್ತಾ ತೀವ್ರ ನಿರಾಶೆಯಾಗುತ್ತದೆ. ಭ್ರಾಮಕವೇ ಆದರೂ ಕುಟುಂಬದ ರಕ್ಷಣೆಯನ್ನೇ ಸಾಮಾನ್ಯ ಎಲ್ಲ ಮಹಿಳೆಯರೂ ನೆಚ್ಚಿಕೊಳ್ಳುವುದೇಕೆ ಎಂಬ ಪ್ರಶ್ನೆ ತೀರಾ ನಿಗೂಢವೇನಲ್ಲ. ಈ ಸಾಧಕಿಯರು ಪಟ್ಟ ಕಷ್ಟಗಳನ್ನು ಸಾಮಾನ್ಯ ಹೆಂಗಸರು ಎದುರಿಸುವುದು ಸಾಧ್ಯವಿಲ್ಲ. ಹೆಂಗಸರು, ಮೂಢರು, ದಡ್ಡರು, ನಿಷ್ಕ್ರಿಯರು ಎಂಬ ಬಿರುದುಗಳನ್ನೇ ಸ್ಥಿರಪಡಿಸುತ್ತಾರಷ್ಟೆ.

ಮಹಿಳಾ ವಿಮೋಚನೆಯ ಸಾಧ್ಯತೆಗಳನ್ನು ತೀವ್ರ ಸೂಕ್ಷ್ಮಗಳಲ್ಲಿ ಕಲ್ಪಿಸಿರುವ ಸಿಮೊನ್ ಬೊವಾ ಹೇಳುವ ಮಾತುಗಳು ಗಮನಾರ್ಹವಾಗಿದೆ. ನಿಮ್ಮ ಸಾಮಾಜಿಕತೆಯೇ ನಿಮ್ಮ ದಿಗ್ಬಂಧನದ ಮೂಲ ಎಂಬುದು ಹೌದಾದರೆ, ಈ ಸಾಮಾಜಿಕತೆಯನ್ನು ಬದಲಿಸುವುದೇ ನಿಮ್ಮ ವಿಮೋಚನೆಯ ಮೊದಲ ಮತ್ತು ಅತ್ಯಂತಿಕ ಅಗತ್ಯ. ನಿಮ್ಮ ಸಮಯ ಮತ್ತು ಅವಕಾಶಗಳನ್ನು ಇಲ್ಲವಾಗಿಸುವ ಕುಟುಂಬದ ನಿಯಮಗಳೇ ನಿಮ್ಮ ಸೃಜನಶೀಲತೆಯ ಮುಖ್ಯ ಸವಾಲುಗಳಾಗಿದ್ದರಿಂದ ಈ ನಿಯಮಗಳನ್ನು ಬದಲಿಸಲು ಒತ್ತಾಯಿಸುವುದೇ ನಿಮ್ಮ ಮೊದಲ ಆದ್ಯತೆಯಾಗಬೇಕು.

ಗೃಹಿಣಿಯ ದುಡಿಮೆಗೆ ಒಂದು ಚೌಕಟ್ಟು ಬೇಕು. ಈಗಿರುವಂತೆ ಅದು ಅನಿಯಮಿತವಾಗಿದ್ದಷ್ಟು ಕಾಲವೂ ಮಹಿಳೆಯರನ್ನು ಈ ಗೃಹಿಣಿತ್ವದ ಬಾಧೆ ಕಾಡುತ್ತಲೇ ಇರುತ್ತದೆ. ಮಹಿಳೆಯು ತನ್ನ ಖಾಸಗಿ ಸಮಯವನ್ನು ಸರಿಯಾಗಿ ನಿರ್ವಹಿಸಿಕೊಂಡು ಅದನ್ನು ಕುಟುಂಬದಲ್ಲಿ ಜಾರಿಗೊಳಿಸಬೇಕು. ತನಗಾಗಿ ಒಂದಿಷ್ಟು ಖಾಸಗಿ ಅವಕಾಶಗಳನ್ನು ಕಲ್ಪಿಸಿಕೊಳ್ಳಬೇಕು. ಸಂಬಂಧಗಳನ್ನು ನಿರ್ವಹಿಸುವ ಪ್ರೀತಿ ಎಂಬುದು ಭೋಳೆತನದ ತ್ಯಾಗ ಬಲಿದಾನಗಳಲ್ಲಿ ಪರ್ಯಾವಸಾನಗೊಳ್ಳಬೇಕಾದ ಅಗತ್ಯವಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

"ಸ್ತ್ರೀವಾದ ಅಥವಾ ಫೆಮಿನಿಸಂ ಎನ್ನುವುದು ಸ್ತ್ರೀಪುರುಷರ ನಡುವಿನ ಲಿಂಗಾಧರಿತ ತಾರತಮ್ಯಗಳ ಪ್ರಚಲಿತ ವ್ಯವಸ್ಥೆಯನ್ನು ಬದಲಾಯಿಸಲು ಹಕ್ಕೊತ್ತಾಯಿಸುತ್ತದೆ ಮತ್ತು ಬದುಕಿನ

ನೆಲೆಗಳಲ್ಲಿ ಸ್ತ್ರೀಪುರುಷರನ್ನು ಸಮಾನವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಗಾಗಿ ನಡೆಯುವ ಹೋರಾಟವೆ ಅದರ ಮುಖ್ಯವಾದ ಕಾರ್ಯವಿಧಾನವಾಗಿದೆ. ಸ್ತ್ರೀವಾದ ವರ್ತಮಾನದ ಜನಜೀವನ ಕ್ರಮವನ್ನು ರೂಪಿಸಿರುವಂತಹ ಸಂಸ್ಕೃತಿಯ ಸ್ವರೂಪವನ್ನು ಪರಿಶೀಲನೆಗೆ ಗುರಿಮಾಡುತ್ತ, ಜನರಲ್ಲಿ ಪ್ರಜ್ಞಾಜಾಗೃತಿಗಾಗಿ ಯತ್ನಿಸುತ್ತದೆ. ಈ ಅರ್ಥದಲ್ಲಿ ಸ್ತ್ರೀವಾದವು ಒಂದು ಪ್ರಯೋಗರೂಪಿ ಕ್ರಿಯೆ ಕೂಡಾ ಆಗಿರುತ್ತದೆ[೨೭].

ಕೆಲವು ಗುಂಪಿನವರಿಗೆ ಮಹಿಳೆಯರನ್ನು ಪುರುಷರ ಲೈಂಗಿಕ ಉಪಭೋಗಕ್ಕಾಗಿಯೇ ಇರುವ ವಸ್ತುಗಳೆಂಬಂತೆ ನೋಡುವ ವ್ಯವಸ್ಥೆಯ ಬಗ್ಗೆ ತೀವ್ರ ವಿರೋಧವಿತ್ತು. ಇಂಥವರ ಅಶ್ಲೀಲತೆಯ ವಿರುದ್ಧವಾಗಿ ಹಾಗೂ ಕುಟುಂಬದ ಒಳಗೂ ಹೊರಗೂ ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ ಹಿಂಸೆ ದೌರ್ಜನ್ಯಗಳ ವಿರುದ್ಧವಾಗಿ ಪ್ರತಿಭಟನೆ ನಡೆಸಿದ್ದರು.

ಬೇರೆ ಕೆಲವು ಹೋರಾಟಗಾರರಿಗೆ ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ವೇತನ, ಅಭಿವೃದ್ಧಿ ಮತ್ತು ಸವಲತ್ತುಗಳಲ್ಲಿ ಸಮಾನ ಅವಕಾಶಗಳು ದೊರೆಯಬೇಕೆಂಬುದೇ ವಿಮೋಚನೆಯಾಗಿ ಕಾಣಿಸಿತ್ತು. ಇವರು ಮಾನವ ಜಗತ್ತಿನ ಅಧಿಕಾರ ಮತ್ತು ಸವಲತ್ತುಗಳು ಸ್ತ್ರೀಪುರುಷರಲ್ಲಿ ಸಮಾನವಾಗಿ ಹಂಚಿಕೆಯಾಗಬೇಕೆಂಬುದೇ ಹಕ್ಕೊತ್ತಾಯಿಸುತ್ತಿದ್ದರು.

ಮಹಿಳಾ ಚಳುವಳಿಯಲ್ಲಿದ್ದ ಇನ್ನೊಂದು ಗುಂಪಿನವರ ಮುಖ್ಯ ಕಾಳಜಿ ಮಕ್ಕಳ ಅಭಿವೃದ್ಧಿ ಮತ್ತು ಪಾಲನೆಗಳು, ಸಮಾಜದ ಜವಾಬ್ದಾರಿಯಾಗಬೇಕು. ಮದುವೆ, ತಾಯ್ತನಗಳಲ್ಲಿ ಸ್ವಾತಂತ್ರ್ಯದ ಮತ್ತು ಆಯ್ಕೆಯ ಹಕ್ಕು ಮಹಿಳೆಯರಿಗೆ ಬೇಕು ಎಂಬುದಾಗಿತ್ತು.

ಕೆಲವು ಮಹಿಳಾ ಹೋರಾಟಗಾರರು ಹೆಣ್ಣಿನ ಮತ್ತು ಹೆಣ್ಣಿನ ಲೈಂಗಿಕತೆಯ ಸ್ವರೂಪ ಹೀಗೆ ಇರುತ್ತದೆ ಇರುವಂಥದ್ದು ಎಂದು ಪುರುಷರೇ ನಿರ್ಧರಿಸಿ, ನಿರ್ವಚನೆ ಮಾಡುತ್ತಿರುವುದರ ದುಷ್ಪರಿಣಾಮಗಳೇನು? ಇದರಿಂದ ಪಾರಾಗಲು ಮಹಿಳೆಯರೇ ತಮ್ಮನ್ನೂ ತಮ್ಮತನವನ್ನೂ ಮರುವ್ಯಾಖ್ಯಾನಿಸಲು ಇರುವ ಸಾಧ್ಯತೆಗಳೇನು? ಎನ್ನುವಂತಹ ತಾತ್ವಿಕ, ವೈಚಾರಿಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಯತ್ನಿಸತೊಡಗಿದರು.

ಪಿತೃ ಪ್ರಧಾನ ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಕೆಲವು ಗುಂಪಿನ ಮಹಿಳೆಯರು ಮಹಿಳೆಯರಾಗಿರುವುದರಿಂದಲೂ ಬಹುಮುಖ ಶೋಷಣೆಗೆ ಹೇಗೆ ಬಲಿಪಶುಗಳಾಗಿದ್ದಾರೆ ಎಂಬುದನ್ನು ಬೆಳಕಿಗೆ ತರುವುದು ಮತ್ತೆ ಕೆಲವರ ಮುಖ್ಯ ಕಾಳಜಿಯಾಯಿತು.

ಉದ್ಯೋಗದ ಮಾರುಕಟ್ಟೆಯ ವ್ಯವಸ್ಥೆಯನ್ನು ಕಟ್ಟಿಬೆಳೆಸಿರುವ ಪುರುಷರಿಗೆ ತಾಯ್ತನದ ಹೊರೆಯಾಗಲಿ, ಮಕ್ಕಳ ಪಾಲನೆ ಪೋಷಣೆಗಳ ಅನಿವಾರ್ಯ ಜವಾಬ್ದಾರಿಗಳಾಗಲಿ ಇರುವುದಿಲ್ಲ. ಕತ್ತು, ಬೆನ್ನು, ಸೊಂಟ ಮುರಿಯುವಂತಹ ಗೃಹಕೃತ್ಯಗಳ ಸಂಕೋಲೆಯು ಅವರಿಗಿಲ್ಲ. ಹೀಗೆ ಸರ್ವತಂತ್ರ ಸ್ವತಂತ್ರವಾದ ಸ್ಥಾನದಲ್ಲಿದ್ದು, ದಕ್ಷತೆ, ದುಡಿಯುವ ಸಾಮರ್ಥ್ಯ, ವೈಜ್ಞಾನಿಕ ಮತ್ತು ತಾಂತ್ರಿಕ ತಿಳುವಳಿಕೆಗಳ ಮೇಲೆ ಶ್ರೇಷ್ಠತೆಯ ಚೌಕಟ್ಟುಗಳನ್ನು ಅವರು ಕಟ್ಟಿಕೊಂಡಿರುತ್ತಾರೆ.

ಚೌಕಟ್ಟಿನೊಳಗೆ ಪ್ರವೇಶ ಪಡೆಯುವ ಮಹಿಳೆಯರು ಒಂದು ಕಡೆ ತಮ್ಮ ಸ್ತ್ರೀತ್ವದ ಫಲವಾದ ಕೌಟುಂಬಿಕ ಜವಾಬ್ದಾರಿಗಳಿಗೂ ಮತ್ತೊಂದು ಕಡೆ ತಮ್ಮ ದುಡಿಯುವ ಜಗತ್ತಿನ 'ವಸ್ತುನಿಷ್ಠ' ವೆನಿಸಿಕೊಂಡ ನಿಷ್ಠುರವಾದ ನಿರೀಕ್ಷೆಗಳಿಗೂ ಬದ್ಧರಾಗುವ ಪ್ರಯತ್ನದಲ್ಲಿ ಎರಡೂ ದಿಕ್ಕುಗಳಲ್ಲಿಯು ಹೆಣಗಾಡುತ್ತಿರುತ್ತಾರೆ. ಇಲ್ಲವೆ ಪರಿಸ್ಥಿತಿಗಳೊಂದಿಗೆ ವ್ಯಾವಹಾರಿಕವಾದ, ವೈಯಕ್ತಿಕ ಹೊಂದಾಣಿಕೆಗಳನ್ನು ಮಾಡಿಕೊಳ್ಳುತ್ತಾರೆ. "ಮಹಿಳಾ ದಕ್ಷತೆಯ ಮಾಪನದಲ್ಲಿ ಸ್ತ್ರೀ ವಿಶಿಷ್ಟ ಸಂದರ್ಭಗಳ ಅರಿವು ಅವಶ್ಯಕ. ಹಾಗೆಯೇ ಪ್ರಗತಿ, ಸಾಧನೆ ಮುಂತಾದ ಆಧುನಿಕ ಪರಿಕಲ್ಪನೆಗಳಲ್ಲಿ ಮಾನವೀಕರಣಕ್ಕೆ ಒಳಗಾಗಬೇಕಾಗುತ್ತದೆ ಎಂಬುದು ಸ್ತ್ರೀವಾದದ ಒಂದು ನಿಲುವು".[೨೮]

ಸ್ತ್ರೀ ಸತ್ವ ಎಂಬ ಅಂತಃ ಸತ್ಯವಾದವನ್ನು ಮುಂದಿಡುವವರು ಹೆರಿಗೆ, ಗರ್ಭಧಾರಣೆ, ಶಿಶು ಸಂಗೋಪನೆಗಳಿಂದ ಎಂಬ ಜೈವಿಕ ಚಟುವಟಿಕೆಗಳಲ್ಲಿ ಹೆಣ್ಣಿನ ವಾತ್ಸಲ್ಯ, ಜೀವದಾಯಕ ಸಾಮರ್ಥ್ಯ ಜೀವಪರ ದೃಷ್ಟಿ, ರಕ್ಷಕಭಾವ ಮುಂತಾದ ಭಾವನೆಗಳಿರುತ್ತವೆಂದು ಆದರ್ಶೀಕರಿಸಿ, ಸ್ತ್ರೀ ಮೌಲ್ಯಗಳನ್ನು ಸ್ತ್ರೀ ಸಮೃದ್ಧತೆಯನ್ನು ಎತ್ತಿ ಹಿಡಿಯುವುದರ ಇನ್ನೊಂದು ಮುಖವೆಂದರೆ ಸ್ತ್ರೀಯರ ಯಾವುದೇ ಗುಣಾವಗುಣಗಳ ವಿಮರ್ಶೆಯನ್ನು ಸ್ತ್ರೀ ದ್ವೇಷದ ಲಕ್ಷಣಗಳೆಂದು ಆರೋಪಿಸುವುದು. ಈ ಕಾರಣದಿಂದಲೇ ಶೋಷಣೆಗೆ ಬಲಿಪಶುವಾಗುವುದನ್ನು ಹೆಣ್ಣಿನ ಮುಗ್ಧತೆ ಎಂದು ಸ್ತ್ರೀಯರಲ್ಲಿ ದೃಷ್ಟತನವಿದ್ದರೆ ಅದು ಧನಾತ್ಮಕ ಗುಣಗಳೇ ಎಂದು ಪ್ರತಿಪಾದಿಸುವ ಅತಿರೇಕವು ಹುಟ್ಟಿಕೊಂಡಿತು. ಗಂಡಿನ ಶ್ರೇಷ್ಠತೆಯನ್ನು ಕೊಂಡಾಡುವ ವ್ಯವಸ್ಥೆಗೆ ಒಂದು ಪ್ರತಿಕ್ರಿಯೆಯಾಗಿ ಈ ಹೆಣ್ಣಿನ ಕೊಂಡಾಟದ ತಾತ್ವಿಕತೆಯನ್ನು ಕಟ್ಟಲಾಯಿತು. ಆದರೆ, ಸ್ತ್ರೀತ್ವ ಪುರುಷತ್ವ ಎಂದು ಎರಡು ಧ್ರುವಗಳಲ್ಲಿ ಮಾನವರ ಸ್ವಭಾವವನ್ನು ಒಡೆದಿಡುವ ವ್ಯವಸ್ಥೆಯೇ ಅಸಮರ್ಪಕ ಹಾಗೂ ಅಸಮಾನತೆಯ ಮೂಲ.

ಸ್ತ್ರೀಯರು ಇಂದು ನಿರ್ವಹಿಸುತ್ತಿರುವ ಕೌಟುಂಬಿಕವಾದ ಸಾಂಪ್ರದಾಯಿಕ ಪಾತ್ರಗಳು, ಪತ್ನಿ, ತಾಯಿ, ಗೃಹಿಣಿ ಮುಂತಾದವು. ಚರಿತ್ರೆಯ ಯಾವುದೋ ಒಂದು ಘಟ್ಟದಲ್ಲಿ ಹುಟ್ಟಿಕೊಂಡವು. ಆದ್ದರಿಂದ ಅವು ಮುಂದೆ ಭೌತಿಕ ಪರಿಸ್ಥಿತಿಗಳು ಬದಲಾದಾಗ ತಾವು ಬದಲಾಗಬಲ್ಲವು. ಈ ಸ್ಥಿತಿಗಳು ಮೌಲ್ಯಗಳು ಎಂದಿನಿಂದಲೂ ಹೀಗೆ ಇದೆ, ಇರುತ್ತವೆ.

"ಸ್ತ್ರೀವಾದ ಗಮನಿಸುವ ಮತ್ತೊಂದು ಮುಖ್ಯವಾದ ವಿಷಯ, ಕುಟುಂಬ ಮಹಿಳೆಯರ ಶೋಷಣೆಗೆ ಕುಟುಂಬವೇ ಪ್ರಧಾನ ಕೇಂದ್ರವಾಗಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕುಟುಂಬ ಸ್ತ್ರೀಯರ ಶೋಷಣೆಯನ್ನು ಸ್ಥಿರಪಡಿಸುವಾಗಲೂ ಹತ್ತಿಕ್ಕುವಿಕೆಯೇ ಎಲ್ಲದಕ್ಕೂ ಕಾರಣವೆಂಬ ಸಂಕುಚಿತಾರ್ಥದಲ್ಲಿ ಗುರುತಿಸಬಾರದು. ಹೆಣ್ಣು ಉತ್ಪಾದನೆಯಲ್ಲಿ ಪಾಲುದಾರಳಾಗದೆ ಹೋದದ್ದು, ಆಸ್ತಿಯ ವ್ಯವಸ್ಥೆಯಲ್ಲಿ ಅಧೀನಳಾದುದು, ವರ್ಗ ದರೋಡೆಯ ಸಾಂಪ್ರದಾಯಿಕ ಸಮಾಜದ ಸ್ತ್ರಿಯರ ಸಮಸ್ಯೆಯನ್ನು ಬಹಳ ಸಂಕುಚಿತಗೊಳಿಸಿದೆ".[೨೯]

ಸಮಾಜ ಉದ್ಯೋಗದ ಸ್ಥಳ ಅಥವಾ ಮನೆಯಲ್ಲಿ ಮಹಿಳೆಯರ ಮೇಲೆ ನಡೆಯುವ ದಮನ ಮತ್ತು ದೌರ್ಜನ್ಯಗಳ ಬಗೆಗೆ ಅರಿವು ಹೊಂದಿರುವುದರ ಜೊತೆಗೆ ಇಂತಹ ಪರಿಸ್ಥಿತಿಯನ್ನು ಬದಲಾಯಿಸಲು ಮಹಿಳೆಯರು ಮತ್ತು ಪುರುಷರಿಂದ ನಡೆಯುತ್ತಿರುವ ಕಾರ್ಯಚಟುವಟಿಕೆಗಳನ್ನು ಸ್ತ್ರೀವಾದ ಎಂದು ಗ್ರಹಿಸಬಹುದು.

ಸ್ತ್ರೀ ವಾದದ ಎರಡು ಸಾಮಾನ್ಯ ಗುಣಲಕ್ಷಣಗಳನ್ನು ಹೀಗೆ ಗುರುತಿಸಬಹುದು.

- ಮಹಿಳೆಯರ ಸಾಮಾಜಿಕ ಅಧೀನತೆ ಮತ್ತು ಮಹಿಳೆಯರಾದ ಕಾರಣಕ್ಕಾಗಿ ಅನುಭವಿಸುವ ತಾರತಮ್ಯವನ್ನು ಎಲ್ಲಾ ನಿರೂಪಣೆಗಳೂ ಗಮನಿಸುತ್ತವೆ.
- ಸ್ತ್ರೀಯರ ವಿರುದ್ಧ ನಡೆಯುವ ದಬ್ಬಾಳಿಕೆಯನ್ನು ಕ್ರಮೇಣ ನಿರ್ಮೂಲನಗೊಳಿಸುವ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವಲಯಗಳಲ್ಲಿನ ಬದಲಾವಣೆಗೆ ಎಲ್ಲಾ ಸ್ತ್ರೀವಾದಗಳು ಒತ್ತು ನೀಡುತ್ತವೆ.

ಹಾಗೆಯೇ ಸ್ತ್ರೀವಾದದಲ್ಲಿ ಮೂರು ಪ್ರಾಥಮಿಕ ಹಂತಗಳಿವೆ ಅವು ಯಾವುವೆಂದರೆ,

⇨ ಮಹಿಳೆಯರ ಮೇಲೆ ಆಗುವ ಅವಮಾನ ಮತ್ತು ದೌರ್ಜನ್ಯಗಳನ್ನು ಪ್ರಜ್ಞಾಪೂರ್ವಕವಾಗಿ ವಿರೋಧಿಸುತ್ತದೆ. ಹಾಗಾಗಿ, ಅದು ಲಿಂಗವಾದದ ಬಗ್ಗೆ ಸಾಂದರ್ಭಿಕ ಪ್ರತಿರೋಧವನ್ನು ಪ್ರತಿನಿಧಿಸುತ್ತದೆ.

⇨ ಲಿಂಗ ವ್ಯವಸ್ಥೆ ಕೇವಲ ಜೈವಿಕ ಮಾತ್ರವಲ್ಲ, ಸಾಂಸ್ಕೃತಿಕವಾಗಿಯೂ ರೂಪುಗೊಂಡಿರುವುದು ಎಂಬ ಗ್ರಹಿಕೆಯನ್ನು ಸ್ತ್ರೀವಾದವು ನಮ್ಮ ಮುಂದಿಡುತ್ತದೆ. ಜೈವಿಕ ಆಧಾರದ ಮೇಲೆ ಇಬ್ಬರು ವ್ಯಕ್ತಿಗಳ ನಡುವೆ ಇರಬಹುದಾದ ಅಸಮಾನತೆಯನ್ನು ಅದು ವಿರೋಧಿಸುತ್ತದೆ.

⇨ ಸ್ತ್ರೀವಾದವು ಈಗಾಗಲೇ ಒಪ್ಪಿತವಾಗಿರುವ ಮೌಲ್ಯ ವ್ಯವಸ್ಥೆಯನ್ನು ಮೀರುತ್ತದೆ. ಮಹಿಳೆಯರ ಬದುಕನ್ನು ಸೀಮಿತಗೊಳಿಸುವ ಪೂರ್ವಾಗ್ರಹಪೀಡಿತ ಮನೋಭಾವವನ್ನು ಅನಾವರಣಗೊಳಿಸುವುದರ ಜೊತೆಗೆ ವಿರೋಧವನ್ನು ವ್ಯಕ್ತಪಡಿಸುತ್ತದೆ. ಸಮ ಸಮಾಜದ ನಿರ್ಮಾಣ ಲಿಂಗ ಸಮಾನತೆ ಆಧಾರದ ಮೇಲೆ ಇಡೀ ವಿಶ್ವದ ಪುನರ್‌ರಚನೆಗಾಗಿ ನಡೆಯುವ ಚಳುವಳಿಯನ್ನು ಸ್ತ್ರೀವಾದ ಎನ್ನಬಹುದು.

ಲಿಂಗ ತಾರತಮ್ಯ, ಪುರುಷ ಪ್ರಾಧಾನ್ಯತೆ ಮತ್ತು ಪಿತೃಪ್ರಾಧಾನ್ಯತೆಯನ್ನು ಗುರುತಿಸಿ, ಅದರ ವಿರುದ್ಧದ ಚಿಂತನೆ ಮತ್ತು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವವರನ್ನು ಸ್ತ್ರೀವಾದಿ ಎನ್ನಬಹುದು. ಹಾಗಾಗಿ ಜೈವಿಕ ಮತ್ತು ಸಾಮಾಜಿಕ ಲಿಂಗದ ಕಾರಣಕ್ಕಾಗಿ ಮಹಿಳೆಯರು ಸಮಾಜದಲ್ಲಿ ಶೋಷಣೆ ಅನುಭವಿಸುತ್ತಾರೆ ಎಂಬ ನಂಬಿಕೆಯಿಂದಾಗಿಯೇ ಎಲ್ಲಾ ಸ್ತ್ರೀವಾದ ಸಿದ್ಧಾಂತಗಳು ರೂಪುಗೊಳ್ಳುತ್ತವೆ. ಮಹಿಳಾ ಅಸಮಾನತೆ ಬಹಳ ಸಂಕೀರ್ಣವಾದುದು. ಮತ್ತು ಎಲ್ಲಾ ಸಂಸ್ಕೃತಿಗಳಲ್ಲೂ ಮಹಿಳೆಯರು ಪುರುಷರಿಗಿಂತ ಕಡಿಮೆ ಅಧಿಕಾರವನ್ನು ಹೊಂದಿರುತ್ತಾರೆ ಎಂಬ ಅಭಿಪ್ರಾಯವನ್ನು ಇಲ್ಲಿ ವ್ಯಕ್ತಪಡಿಸಬಹುದು.

ಮಹಿಳೆ ಮತ್ತು ಪುರುಷರ ನಡುವಿನ ಸಮಾನತೆಯಿಂದಾಗಿ ಹುಟ್ಟುವ ಮಾನವ ಸಮಾಜವು ಎಲ್ಲಾ ಕಾನೂನು ಮತ್ತು ಪದ್ಧತಿಗಳ ಬುನಾದಿ ಎಂದು ಗುರುತಿಸುವ ನಿರಂತರ ಹೋರಾಟ ಇದಾಗಿದೆ. ಪ್ರತಿಯೊಬ್ಬ ಮಹಿಳೆಯು ತನ್ನ ಸಹಜ ಸಾಮರ್ಥ್ಯವನ್ನು ಬಳಸಿಕೊಂಡು ಬೆಳೆಯುವ ಎಲ್ಲಾ ಅವಕಾಶಗಳನ್ನು ಕಲ್ಪಿಸಿಕೊಡುವ ಗುರಿಯನ್ನು ಅದು ಹೊಂದಿದೆ.

ಹಿಂದಿನ ಸ್ತ್ರೀವಾದಿಗಳಿಗೂ, ಈಗಿನ ಸ್ತ್ರೀವಾದಿಗಳಿಗೂ ಇರುವ ಒಂದು ಪ್ರಮುಖ ವ್ಯತ್ಯಾಸ ಎಂದರೆ, ಹಿಂದಿನ ಸ್ತ್ರೀವಾದಿಗಳು ಸಮಾಜದಲ್ಲಿ ಸಮಾನತೆ ಕಲ್ಪಿಸಿಕೊಳ್ಳಲು ಹೋರಾಟ ನಡೆಸಿದರು. ಇವರ ಹೋರಾಟ ಬಹುಪಾಲು ಮನೆಯ ಹೊರಗಿನ ಸಮಸ್ಯೆಗಳಿಗೆ ಸಂಬಂಧಿಸಿತ್ತು. ಆದರೆ, ಇಂದಿನ ಮಹಿಳಾ ಹೋರಾಟಗಾರರು ಕೇವಲ ಸಮಾನವಷ್ಟೇ ಅಲ್ಲದೆ, ಮನೆಯ ಒಳಗೆ ಕುಟುಂಬದವರಿಂದ ಮಹಿಳೆಯರು ಎದುರಿಸುವ ದೌರ್ಜನ್ಯ, ಉದ್ಯೋಗ, ಸ್ಥಳಗಳಲ್ಲಿರುವ ಅಸಮಾನತೆ, ಸಮಾಜದಲ್ಲಿ ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಇರುವ ಸವಾಲುಗಳು ಮನೆಯ ಒಳಗೂ, ಹೊರಗೂ ಹೊರಬೇಕಾದ ದ್ವಿಪಾತ್ರದ ಹೊರೆ ಮುಂತಾದ ಎಲ್ಲಾ ಅಂಶಗಳ ಬಗ್ಗೆ ಹೋರಾಟವನ್ನು ರೂಪಿಸಿಕೊಂಡಿದ್ದಾರೆ. ಜೊತೆಗೆ ಸ್ತ್ರೀತ್ವ ಮತ್ತು ಪುರುಷತ್ವ ಇವೆರಡು ಜೈವಿಕವಾಗಿ ರೂಪುಗೊಂಡ ಎರಡು ಭಿನ್ನ ವಿಚಾರಗಳು ಎಂಬ ಗ್ರಹಿಕೆಯನ್ನೇ ಹಿಂದಿನಿಂದ ಸ್ತ್ರೀವಾದ ಪ್ರಶ್ನಿಸುತ್ತದೆ. ಹಾಗಾಗಿ ಮಹಿಳೆಯರ ಅಸಮಾನ ಪರಿಸ್ಥಿತಿಗಳ ಬಗೆಯಷ್ಟೇ ಅಲ್ಲದೆ ಆ ಪರಿಸ್ಥಿತಿಗೆ ಕಾರಣವಾದ ಸನ್ನಿವೇಶ, ಸಮಾಜ ಮತ್ತು

ಪುರುಷರಿಂದ ಬಿಡುಗಡೆ ಪಡೆಯುವುದಕ್ಕೂ ಹೋರಾಟ ನಡೆಸಬೇಕು ಎಂಬುದನ್ನು ಸೂಚಿಸುತ್ತದೆ. ಎಲ್ಲಾ ಬಗೆಯ ದಬ್ಬಾಳಿಕೆ, ಅಸಮಾನತೆಯ ದಮನಕ್ಕೂ ಮಹಿಳೆಯರೇ ಬಲಿಪಶುಗಳಾಗಿದ್ದಾರೆ. ಇಂಥದ್ದೇ ಸಮಸ್ಯೆಗಳನ್ನು ಎದುರಿಸುತ್ತಿರುವ ಇತರ ಮಹಿಳೆಯರ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಅದಕ್ಕಾಗಿ ಒಂದು ಹೋರಾಟವನ್ನು ರೂಪಿಸುವುದರ ಜೊತೆಗೆ ಸಮಾಜದ ಒಂದು ದಮನಕಾರಿ ಪರಿಸ್ಥಿತಿಯನ್ನು ಬದಲಾಯಿಸಬೇಕಾಗುತ್ತದೆ ಎಂಬುದು ಆಧುನಿಕ ಸ್ತ್ರೀವಾದದ ಆಶಯವಾಗಿದೆ.

ಆಧುನಿಕ ಸ್ತ್ರೀವಾದ ಎಂದರೆ, ಮಹಿಳೆ ತನ್ನ ಸಮಾನತೆ ಮತ್ತು ಘನತೆ ಕಾಪಾಡಿಕೊಳ್ಳುವುದು. ಅದಕ್ಕಾಗಿ ತನ್ನ ಬದುಕು ಮತ್ತು ದೇಹಕ್ಕೆ ಸಂಬಂಧಿಸಿದಂತೆ ಮನೆಯ ಒಳಗೆ, ಹೊರಗೆ ತಾನೇ ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯವನ್ನು ಪಡೆಯಲು ನಡೆಸುವ ಹೋರಾಟ ಎನ್ನಬಹುದು.

"ಸ್ತ್ರೀವಾದದ ಅಂತಿಮ ಗುರಿ ರಾಜಕೀಯ ಚಟುವಟಿಕೆಗಳ ಮೂಲಕ ಮಹಿಳೆಯರಿಗಾಗಿ ಸಂಘಟಿಸಿ, ಆ ಮೂಲಕ ಸಮಾಜವು ಮಹಿಳೆಯರನ್ನು ಸಮಾನರು ಎಂದು ಒಪ್ಪಿಕೊಳ್ಳುವ ಒಂದು ಶಕ್ತಿಯಾಗಿ ರೂಪಿಸುವುದೇ ಆಗಿದೆ".[೩೦]

ಈ ಎಲ್ಲಾ ಅಂಶಗಳನ್ನು ತೀವ್ರತರವಾಗಿ ಗಮನಿಸಿದ ಸಂದರ್ಭದಲ್ಲಿ ಆರ್ಯಾಂಬ ಹಾಗೂ ತ್ರಿವೇಣಿರವರ ಕಾದಂಬರಿಗಳಲ್ಲಿ ಸಂಪ್ರದಾಯ, ಜಡ ಹಾಗೂ ಪುರುಷ ಪ್ರಧಾನ ಸಮಾಜದ ವಿರುದ್ಧ ತೀವ್ರ ಪ್ರತಿಭಟನೆ ಕಂಡುಬರುತ್ತದೆ. ಆರ್ಯಾಂಬರಲ್ಲಿ ಸ್ವಲ್ಪ ಸಡಿಲಿಕೆ ಕಂಡು ಬಂದರೂ ತ್ರಿವೇಣಿಯವರಷ್ಟು ತೀವ್ರವಾಗಿ ಸ್ತ್ರೀ ಕೇಂದ್ರಿತ ನಿಲುವನ್ನು ಪ್ರತಿಪಾದಿಸುವ ಸ್ತ್ರೀಯರಿಗೆ ನ್ಯಾಯಯುತವಾಗಿ ಸಲ್ಲಬೇಕಾದ ಸ್ಥಾನಕ್ಕಾಗಿ ಅಷ್ಟು ಕೆಚ್ಚಿನಿಂದ ವಾದಿಸುವ ಮತ್ತು ಸ್ತ್ರೀತ್ವದ ಅನೇಕಾನೇಕ ಮುಖಗಳನ್ನು ಪರಿಣಾಮಕಾರಿಯಾಗಿ ದಾಖಲಿಸಿರುವ ಲೇಖಕಿಯರು ಕನ್ನಡದಲ್ಲಿ ಕಂಡುಬರುವುದಿಲ್ಲ.

ಆರ್ಯಾಂಬ ಮತ್ತು ತ್ರಿವೇಣಿರವರ ಅರ್ಧಕ್ಕಿಂತಲೂ ಹೆಚ್ಚು ಕೃತಿಗಳು ಸ್ತ್ರೀವಾದಿ ಸಂವೇದನೆ ವರ್ಗದಲ್ಲಿ ಬರುತ್ತದೆ. ನಮ್ಮ ಸಮಾಜದಲ್ಲಿ ಸ್ತ್ರೀಪುರುಷರ ನಡುವೆ ಇರುವ ಅಸಮಾನ ಅಧಿಕಾರಾಧಾರಿತ ಸಂಬಂಧಗಳನ್ನು ವಿಶ್ಲೇಷಿಸುತ್ತಾರೆ. ಹೊರಗಿನ ಸಮಾಜದಲ್ಲಿ ಪುರುಷನು ಪ್ರಬಲನಾಗಿರುವಂತೆ ಮನೆಯೊಳಗೂ ಪ್ರಬಲನಾಗಿ ಅಧಿಕಾರವನ್ನು ಚಲಾಯಿಸುತ್ತಾನೆ. ಈ ಕಾರಣದಿಂದ ಸ್ತ್ರೀ ಅವಳ ವಧುವಾಗಿರಬಹುದು. ಅಥವಾ ಪತ್ನಿ, ಸಹೋದರಿ, ತಾಯಿ ಯಾರೂ ಆಗಿರಬಹುದು. ಯಾವಾಗಲೂ 'ಆಶ್ರಿತ'ಳಾಗಿಯೇ ಇರಬೇಕಾಗುತ್ತದೆ. ಈ ನೆಲೆಯಲ್ಲಿ ರಚಿಸಲ್ಪಟ್ಟಿರುವ ಕೃತಿಗಳಲ್ಲಿ ಪುರುಷನನ್ನು ಕುರಿತು ಇರುವ ಸಿಟ್ಟು ಮತ್ತು ಅಸಹನೆ ಹಾಗೂ ಸ್ತ್ರೀಯನ್ನು ಕುರಿತು ಅನುಕಂಪ ಮತ್ತು ಇವು ವ್ಯಕ್ತವಾಗುತ್ತವೆ.

ಪುರುಷ ಪ್ರಧಾನ ಸಮಾಜದಲ್ಲಿ ತ್ರಿವೇಣಿಯವರಿಗೆ ಅಸಹನೆಯನ್ನುಂಟುಮಾಡುವ ಅಂಶವೆಂದರೆ, ಪುರುಷನೊಬ್ಬನು ಅನೇಕ ಸ್ತ್ರೀಯರೊಡನೆ ಓಡಾಡಲು ಸ್ವತಂತ್ರವಿದ್ದರೂ, ಸ್ತ್ರೀಯಿಂದ ತನ್ನ ಬಗ್ಗೆ ಸಂಪೂರ್ಣ ನಿಷ್ಠೆಯನ್ನಪೇಕ್ಷಿಸುತ್ತಾನೆ ಮತ್ತು ಇಂತಹ ಸ್ತ್ರೀ ನಿಷ್ಠೆಯನ್ನು ಅವನ ಬಗ್ಗೆ ಕಾಯ್ದುಕೊಳ್ಳುತ್ತಾಳೆ ಕೂಡಾ.

ತ್ರಿವೇಣಿಯವರು ಸಾಹಿತ್ಯ ಕ್ಷೇತ್ರಕ್ಕೆ ಕಾಲಿಡುವ ತನಕ ಪ್ರತಿಷ್ಠಿತರಾಗಿದ್ದ ಕಾದಂಬರಿಕಾರರೆಲ್ಲರೂ ಪುರುಷರು ಮತ್ತು ಸ್ತ್ರೀಯರ ಜಗತ್ತು ಹಾಗೂ ಸ್ತ್ರೀಸಂವೇದನೆ ಇವುಗಳು ಬಹುಮಟ್ಟಿಗೆ ಸಾಹಿತ್ಯಕ್ಷೇತ್ರಕ್ಕೆ ಅಜ್ಞಾತವಾಗಿದ್ದವು ಎಂಬುದು ನಿಜ. ಬದಲಾಗುತ್ತಿರುವ ಕಾಲದೊಡನೆ ಬದಲಾಗಲು ನಿರಾಕರಿಸುತ್ತಿದ್ದ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನಗಳನ್ನು ಗುರುತಿಸುವ ಹಾಗೂ ದಾಖಲಿಸುವ ಸೂಕ್ಷ್ಮಸಂವೇದನೆಯ ಲೇಖಕಿಯ ಅಗತ್ಯ ಅಂದು ಪ್ರಬಲವಾಗಿದ್ದಿತು. ಅಂತಹ ಅಗತ್ಯವನ್ನು ತ್ರಿವೇಣಿ ಪೂರೈಸಿದರು ಮತ್ತು ಸಂಪ್ರದಾಯ ಬದ್ಧ ಸಮಾಜದಲ್ಲಿ ಸ್ತ್ರೀಯ ವ್ಯಥೆ ಹಾಗೂ ದುರ್ಭರ ಅನುಭವಗಳತ್ತ ಲೇಖಕಿಯರ ಕಣ್ಣು ತೆರೆಸಿದರು.

ಅಡಿಟಿಪ್ಪಣಿಗಳು

೧. ಡಾ. ಎಸ್.ವಿ.ಪ್ರಭಾವತಿ : ಸ್ತ್ರೀವಾದ ಮತ್ತು ಜನಜೀವನ, ಸಾಹಿತ್ಯ ವಿಮರ್ಶೆ ೧೯೯೮, ಸಂ. ಡಾ. ಜಿ.ಎಂ.ಹೆಗಡೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೯, ಪುಟ ೧೪೯

೨. ಅದೇ, ಪುಟ ೧೫೦

೩. ಡಾ. ಮಣಿಮಾಲಿನಿ.ವಿ.ಕೆ. : ಮಹಿಳಾ ಸಂವೇದನೆ, ಸಾಹಿತ್ಯ ವಿಮರ್ಶೆ ೧೯೯೮, ಸಂ. ಡಾ. ಜಿ.ಎಂ.ಹೆಗಡೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೯, ಪುಟ ೧೫೯

೪. ಅದೇ, ಪುಟ ೧೬೧

೫. ಸಿ.ಎನ್. ರಾಮಚಂದ್ರನ್ : ತ್ರಿವೇಣಿ ಭಾರತೀಯ ಸಾಹಿತ್ಯ ನಿರ್ಮಾಪಕರು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೯, ಪುಟ ೧೩

೬. ಡಾ. ಬಿ.ಪಿ.ಆಶಾಕುಮಾರಿ : ಆರ್ಯಾಂಬ ಅವರ ಸಾಹಿತ್ಯ, ಉನ್ಮೀಲನ (ಶ್ರೀಮತಿ ಆರ್ಯಾಂಬ ಪಟ್ಟಾಭಿ ಅಭಿನಂದನಾ ಗ್ರಂಥ), ಸಂ. ಪ್ರೊ. ಸ.ನ. ಗಾಯತ್ರಿ ಮತ್ತು ಡಾ.ಎಸ್.ಡಿ. ಶಶಿಕಲಾ ಸಂವಹನ ಪ್ರಕಾಶನ, ಮೈಸೂರು, ೨೦೦೨, ಪುಟ ೬೩

೭. ಕೋಕಿಲಾ : ಆರ್ಯಾಂಬರ ಅವರ ಸಾಹಿತ್ಯ, ಉನ್ಮೀಲನ (ಶ್ರೀಮತಿ ಆರ್ಯಾಂಬ ಪಟ್ಟಾಭಿ ಅಭಿನಂದನಾ ಗ್ರಂಥ), ಸಂ. ಪ್ರೊ. ಸ.ನ. ಗಾಯತ್ರಿ ಮತ್ತು ಡಾ.ಎಸ್.ಡಿ. ಶಶಿಕಲಾ; ಸಂವಹನ ಪ್ರಕಾಶನ, ಮೈಸೂರು, ೨೦೦೨, ಪುಟ ೮೪

೮. ಕೆ. ಅಕ್ಕಮಹಾದೇವಿ : ಆರ್ಯಾಂಬರ ಅವರ ಸಾಹಿತ್ಯ, ಉನ್ಮೀಲನ (ಶ್ರೀಮತಿ ಆರ್ಯಾಂಬ ಪಟ್ಟಾಭಿ ಅಭಿನಂದನಾ ಗ್ರಂಥ), ಸಂ. ಪ್ರೊ. ಸ.ನ. ಗಾಯತ್ರಿ ಮತ್ತು ಡಾ.ಎಸ್.ಡಿ. ಶಶಿಕಲಾ; ಸಂವಹನ ಪ್ರಕಾಶನ, ಮೈಸೂರು, ೨೦೦೨, ಪುಟ ೧೦೩

೯. ಕೆ.ಕೇಶವಶರ್ಮ : ಸ್ತ್ರೀವಾದಿ ಸಾಹಿತ್ಯ; ತಾತ್ವಿಕ ವಿವೇಚನೆ, ಸಂ. ಜಿ.ಎಸ್.ಅವಧಾನಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೨, ಪುಟ ೩

೧೦. ಎನ್.ಗಾಯಿತ್ರಿ : ಮಹಿಳೆ ಬಿಡುಗಡೆ ಹಾದಿಯಲ್ಲಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೯, ಪುಟ ೩೨

೧೧. ಅದೇ, ಪುಟ ೧೩

೧೨. ಅದೇ, ಪುಟ ೧೨-೧೬

೧೩. ತ್ರಿವೇಣಿ : ಮೊದಲ ಹೆಜ್ಜೆ, ಮೀರಾ ಪ್ರಕಾಶನ, ಮೈಸೂರು. ಪುಟ ೨೫

೧೪. ಡಾ. ಎಸ್.ವಿ.ಪ್ರಭಾವತಿ : ಮಹಿಳೆ ಮತ್ತು ಮಧ್ಯಕಾಲೀನ ಸಾಹಿತ್ಯ, ಸಂ. ಪಂಡಿತಾರಾಧ್ಯ : ಸಾಹಿತ್ಯ ಮಿಮರ್ಶೆ ೧೯೯೯, ಕರ್ನಾಟ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೧, ಪುಟ ೧೫೪.

೧೫. ನೇಮಿಚಂದ್ರ : ಮಹಿಳಾ ಅಧ್ಯಯನ, ಅಂಕಿತ ಪುಸ್ತಕ, ಬೆಂಗಳೂರು, ೨೦೦೧, ಪುಟ ೯

೧೬. ಅದೇ, ಪುಟ ೧೨

೧೭. ಅದೇ, ಪುಟ ೧೩

೧೮. ಡಾ. ಎಚ್.ಎಸ್.ಶ್ರೀಮತಿ : ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೬, ಪುಟ ೩೩

೧೯. ಅದೇ ಪುಟ ೨೩

೨೦. ಕೆ.ಅಕ್ಕಮಹಾದೇವಿ : ಆರ್ಯಾಂಬ ಅವರ ಸಾಹಿತ್ಯ, ಪುಟ ೧೦೩

೨೧. ಸಿ.ಎನ್. ರಾಮಚಂದ್ರನ್ : ತ್ರಿವೇಣಿ ಭಾರತೀಯ ಸಾಹಿತ್ಯ ನಿರ್ಮಾಪಕರು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೯, ಪುಟ ೩೪

೨೨. ಧರಣೀದೇವಿ ಮಾಲಗತ್ತಿ : ಸ್ತ್ರೀವಾದ ಮತ್ತು ಭಾರತೀಯತೆ, ಚೇತನ ಬುಕ್ ಹೌಸ್, ಮೈಸೂರು, ೧೯೯೮, ಪುಟ ೧೧೧

೨೩. ಅದೇ, ಪುಟ ೧೧೫

೨೪. ಅದೇ, ಪುಟ ೧೧೯

೨೫. ಹೆಚ್.ಎಸ್.ಶ್ರೀಮತಿ : ಅದೇ ಪುಟ ೩೦

೨೬. ಹೆಚ್.ಎಸ್.ಸಾವಿತ್ರಿ : ಪುಟ ೩೩

೨೭. ಡಾ॥ ಬಿ.ಎನ್.ಸುಮಿತ್ರಾಬಾಯಿ : ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೯, ಪುಟ ೧

೨೮. ಅದೇ, ಪುಟ ೫

೨೯. ಬಿ.ಸುಜ್ಞಾನಮೂರ್ತಿ : ನಮಗೆ ಗೋಡೆಗಳಲ್ಲಿ (ಸ್ತ್ರೀವಾದ ಪರಿಚಯ), ಲುಡಾಯಿ ಪ್ರಕಾಶನ, ಗದಗ, ೨೦೦೯, ಪುಟ ೧೨

೩೦. ಮಹಿಳಾ ಅಧ್ಯಯನ, ಸಮಾಜಶಾಸ್ತ್ರೀಯ ದೃಷ್ಟಿಕೋನ, ಸ್ತ್ರೀಲೇಖ ಪ್ರಕಟಣೆ, ಬೆಂಗಳೂರು, ೨೦೧೦, ಪುಟ ೪೫

ಅಧ್ಯಾಯ ೯

ಜೀವನ ಮೌಲ್ಯಗಳು

ಅಧ್ಯಾಯ ೯

ಜೀವನ ಮೌಲ್ಯಗಳು

ಜಗತ್ತಿನ ಮಹಾಪುರುಷರ ಜೀವನವನ್ನು ನಾವು ಗಮನಿಸಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ. ಕೆಲವು ಅಸಾಮಾನ್ಯ ಗುಣಗಳು ಅವರಲ್ಲಿ ಮೈಗೂಡಿದ್ದವು. ಕೆಲವು ಸದ್ಗುಣಗಳ ಆಳವಾದ ಪ್ರಭಾವದಿಂದ ಅವು ಪ್ರಾಬಲ್ಯವನ್ನು ಪಡೆದವು. ಪ್ರಗತಿಶೀಲ ವ್ಯಕ್ತಿಯನ್ನು ಕೆಲವು ಒರೆಗಲ್ಲುಗಳಿಂದ ಪರೀಕ್ಷಿಸಿದಾಗ ಘನತೆಯುಳ್ಳದ್ದು ಉಳಿಯಿತು. ಈ ಗುಣಗಳನ್ನೇ ಭಗವದ್ಗೀತೆಯಲ್ಲಿ ದೈವೀಸಂಪತ್ತು ಎಂದು ಹೇಳುವುದಾದರೆ, ನವ್ಯಸಾಹಿತ್ಯದಲ್ಲಿ ಇದನ್ನೇ 'ಜೀವನ ಮೌಲ್ಯಗಳು' ಎಂದು ಹೇಳುತ್ತಾರೆ. "ಮಾನವ ಜೀವನವನ್ನು ಮೌಲ್ಯಾಧಾರಿತವಾಗಿಸುವ ಕ್ಷಮತೆ ಪಡೆದ ಗುಣಗಳೇ ಜೀವನಮೌಲ್ಯಗಳು"[೧]. ಈ ಮೌಲ್ಯಗಳು ಶಾಶ್ವತವಾಗಿವೆ ಮತ್ತು ಮಾನವತೆಯೊಂದಿಗೆ ಜನಿಸಿವೆ. ಜೀವನ ಮೌಲ್ಯಗಳು ಬದಲಾಗುವುದಿಲ್ಲ ಅವು ನಿತ್ಯನೂತನವಾದವು.

ಪಾತ್ರೆಯ ಆಕಾರ ಬದಲಾದರೆ ನೀರಿನ ರೂಪ ಬದಲಾಗುವುದಿಲ್ಲ. ವಿಗ್ರಹವು ಬದಲಾದರೆ ಭಗವಂತನು ರೂಪಾಂತರ ಹೊಂದುವನೆ? ಕಟ್ಟಿಗೆಯ ಆಕಾರ ಬೇರೆಯಾದರೆ ಅಗ್ನಿಯ ರೂಪ ಭಿನ್ನವಾದೀತೆ? ಆರ್ಥಿಕ, ಸಾಮಾಜಿಕ, ಕೌಟುಂಬಿಕ ಪರಿಸ್ಥಿತಿಗಳಲ್ಲಿ ಪರಿವರ್ತನೆ ಆಗಿದ್ದರೂ ಜೀವನ ಮೌಲ್ಯಗಳು ಬದಲಾಗುವುದಿಲ್ಲ. ಶ್ರದ್ಧೆ, ಉದ್ಯೋಗಶೀಲತೆ, ನಿರ್ಭಯತೆ, ಸಾತ್ವಿಕತೆ, ಅಹಿಂಸೆ, ದಯೆ ಮೊದಲಾದ ಗುಣಗಳು ಪ್ರಾಚೀನ ಕಾಲದಿಂದಲೂ ಗೌರವವನ್ನು ಪಡೆದಿವೆ. ಈ ಗುಣಗಳು ವಿನಾಶಗೊಂಡಾಗ ಮಾನವ ಮಾನವನಾಗಿರುವುದಿಲ್ಲ. ಏಕೆಂದರೆ, ಮಾನವ ಮಾತ್ರ ಸಮಾಜವನ್ನು ಕಟ್ಟಬಲ್ಲ. ಅದಕ್ಕಾಗಿ ಅವನಿಗೆ ಕೆಲವು ಸಾಮಾಜಿಕ ಗುಣಗಳ ಅವಶ್ಯಕತೆಯಿದೆ. ಆ ಸಾಮಾಜಿಕ ಗುಣಗಳೇ ಜೀವನ ಮೌಲ್ಯಗಳು. ಮನುಷ್ಯನೆಂದರೆ ಬುದ್ಧಿಶಕ್ತಿ, ವಿಚಾರಶಕ್ತಿ ಇರುವ ಪ್ರಾಣಿ. ಆದರೆ ವಿಚಾರ ಮಾಡುವ ಆಸಕ್ತಿ ಹೊಂದಿರಬೇಕಾದರೂ ಜೀವನ ಮೌಲ್ಯಗಳು ಅತ್ಯಗತ್ಯವಾಗಿವೆ.

"ಭಾರತದ ಇತಿಹಾಸವೆಂದರೆ ಜೀವನ ಮೌಲ್ಯಗಳನ್ನು ದಿಗ್ದರ್ಶಿಸುವ ಶ್ರೇಷ್ಠ ಚಲನಚಿತ್ರವೇ ಸರಿ"[೨] ದೇಹದ ಪೋಷಣೆಗಾಗಿ ಜೀವಸತ್ವಗಳ ಅಗತ್ಯವಿದ್ದಂತೆ ಮನಸ್ಸು ಮತ್ತು ಬುದ್ಧಿಗಳ ಪೋಷಣೆಗೆ ಮತ್ತು ಆತ್ಮ ಶೋಧನಗೆ ಇರುವ ಚಿರಂತನ ಜೀವನ ತತ್ವಗಳನ್ನೇ ಜೀವನ ಮೌಲ್ಯಗಳೆಂದು ಕರೆಯುತ್ತಾರೆ. ಒಂದು ಕಾಲದ ಸಮಾಜ ಸುಶಿಕ್ಷಿತರ ಜೀವನವು ಅಕ್ಷಯ

ಜೀವನ ಮೌಲ್ಯಗಳಿಂದ ಶೃಂಗಾರಗೊಂಡಿತ್ತು. ಅದೇ ದಿವ್ಯಮಾನವಾದ ಸಾಮಾಜಿಕ ಜೀವನವನ್ನು ಮತ್ತೆ ಪುನರ್‌ನಿರ್ಮಿಸಬೇಕಾದರೆ ನಾವು ಜೀವನ ಮೌಲ್ಯಗಳನ್ನು ಅಂಗೀಕರಿಸಬೇಕಾಗಿದೆ. ಅವು ಅತಿ ಅಗತ್ಯ ಹಾಗೂ ಜರೂರಾಗಿದೆ.

ಜೀವನಕ್ಕೆ ಮೌಲ್ಯ ಒಂದು ಆಧಾರಸ್ತಂಭ. ಇದನ್ನು ಬಹುಪಾಲು ಜನ ಒಪ್ಪುತ್ತಾರೆ. ಮೌಲ್ಯ ಒಂದು ಲಕ್ಷ್ಮಣರೇಖೆಯಿದ್ದಂತೆ. ಅದನ್ನು ದಾಟಿದರೆ, ಸಾಮಾಜಿಕವಾಗಿ ನಾವು ದುಷ್ಟರಾಗುತ್ತೇವೆ. ಕಷ್ಟಗಳಿಗೆ ಸಿಲುಕಿಕೊಳ್ಳುತ್ತೇವೆ ಎಂಬ ಭಾವನೆಯಿದೆ. ಮೌಲ್ಯಗಳನ್ನು ಪರಿಪಾಲಿಸಬೇಕು. ಆವಾಗಲೇ ಜೀವನಕ್ಕೆ ಅರ್ಥ. "ಮೌಲ್ಯವನ್ನು ಅಪಮೌಲ್ಯಗೊಳಿಸುವುದರಿಂದ ವ್ಯಕ್ತಿ ತಾನೂ ಕೆಡುವುದಲ್ಲದೆ, ಸಮಾಜವನ್ನೂ ತಪ್ಪು ದಾರಿಗೆ ಎಳೆಯುತ್ತಾನೆ"[೩] ಎಂಬ ಮಾತನ್ನು ಕೇಳಿದ್ದೇವೆ.

ಈ ಮೌಲ್ಯ ಏನು, ಅದರ ರೂಪವೇನು, ಅದರ ಇತಿಮಿತಿಗಳೇನು ಎಂಬ ಪ್ರಶ್ನೆ ನಾವು ಮೇಲಿನ ಮಾತುಗಳನ್ನು ಹೇಳಿದಾಗ ತಟ್ಟನೆ ಏಳುತ್ತದೆ. ಮೌಲ್ಯಕ್ಕೆ ಅರ್ಥ ಹುಡುಕಲು ಹೊರಟಾಗ ನಮ್ಮ ಮನಸ್ಸು ಗಲಿಬಿಲಿಗೊಳ್ಳುತ್ತದೆ. ಸಾಧಾರಣ ಅರ್ಥದಲ್ಲಿ ಮೌಲ್ಯ, ನಾವು ಹಾಕಿಕೊಂಡಿರುವ, ಹೇಳಿಕೊಂಡಿರುವ, ಮಾಡಿಕೊಂಡಿರುವ ಗುಣಮಟ್ಟದ ಕಲ್ಪನೆ. ಭೌತಿಕವಾಗಿ ಹೇಳಹೊರಡುವಾಗ, ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಈ ಬಿಡಿಭಾಗವನ್ನು ಯಂತ್ರದ ವೇಳೆ ಅಂದರೆ ಪ್ರಾಣಿಗಳಲ್ಲಿ ಮೌಲ್ಯಗಳಿಲ್ಲವೇ ಎನ್ನಬೇಡಿ. ಇಡೀ ಪ್ರಾಣಿ ವರ್ಗದಲ್ಲಿ ಮೌಲ್ಯ ಎಂಬ ತತ್ವವಿದೆ. ಆದರೆ ಅವು ಮನುಷ್ಯನನ್ನು ಬಿಟ್ಟು ಬೇರೆ ವರ್ಗಗಳಲ್ಲಿ ಬೇರೆ ಅರ್ಥದಲ್ಲಿದೆ. ಈ ಅರ್ಥ ಬಾಹ್ಯಾರ್ಥ. ಆ ವರ್ಗದ ಪ್ರಾಣಿ ತನ್ನ ವಿಕಾಸದ ಹಂತದಲ್ಲಿ ಅರ್ಥ. ಮನುಷ್ಯನೂ ಇದಕ್ಕೆ ಹೊರತಲ್ಲ.

ಈ ಬಾಹ್ಯಾರ್ಥವನ್ನು ನಾವು ಮೊದಲು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಬೇಕು. ಉದಾಹರಣೆಗೆ, ಆಹಾರ, ಪ್ರಾಣಿಗಳಲ್ಲಿ ಉಣ್ಣುವಿಕೆಯ ಮೌಲ್ಯ ತೀರಾ ಸ್ಪಷ್ಟ. ಒಂದು ವರ್ಗದ ಪ್ರಾಣಿ ತನಗೆ ನಿಗದಿಯಾದ ರೀತಿಯ ಆಹಾರವನ್ನು ಮಾತ್ರ ತಿನ್ನುತ್ತದೆ. ಮಾಂಸಾಹಾರ ತಿನ್ನುವ ಕುದುರೆಯನ್ನಾಗಲೀ, ಹುಲ್ಲನ್ನು ತಿಂದು ಜೀವಿಸುವ ಹುಲಿಯನ್ನಾಗಲೀ ನೋಡಲು ಸಾಧ್ಯವಿಲ್ಲ. ಆದರೆ, ಮನುಷ್ಯನು ಸರ್ವವಿಧದ ಆಹಾರವನ್ನು ತಿನ್ನುವ ಜೀವಿ. ನಮ್ಮಲ್ಲಿ ಮಾಂಸಾಹಾರ, ಶಾಖಾಹಾರ ಬೇರೆ ಬೇರೆ ಮೌಲ್ಯಗಳಿಗೆ ಕಾರಣವಾಗುತ್ತದೆ. ಅವುಗಳಿಂದ ದೇಹದ ಮೇಲೆ ಉಂಟಾಗುವ ಪರಿಣಾಮಗಳನ್ನು ಆಧರಿಸಿ, ಮನುಷ್ಯನಲ್ಲಿ ಸಾತ್ವಿಕ, ತಾಮಸ, ರಾಜಸ ಗುಣಗಳನ್ನು ನಾವು ಹುಡುಕುತ್ತೇವೆ.

ಭೌತಿಕ ದೇಹಕ್ಕೆ ಸಂಬಂಧಪಟ್ಟ ಎಲ್ಲಾ ಕ್ರಿಯೆಗಳಿಗೂ ಇಂತಹ ಮೌಲ್ಯಲೇಪನವಾಗಿದೆ. ಉಡುವ ತೊಡುಗೆಯಲ್ಲಿ, ಇರುವ ಮನೆಯಲ್ಲಿ, ಹೆಣ್ಣಿನ ಜೊತೆ ಕೂಡುವುದರಲ್ಲಿ ಎಲ್ಲದರಲ್ಲೂ ಒಂದು ಮೌಲ್ಯ ಹುಡುಕಲು ನೋಡಿದ್ದಾನೆ. ಆದರೆ, ಇಂದಿನ ಮೌಲ್ಯಗಳೇ ಬೇರೆ? ಇದಕ್ಕೆ ಕಾರಣವೇನು? ಎಂದು ಆಲೋಚಿಸಿದಂತೆ ನಮಗೆ ಸಿಗುವ ಉತ್ತರ ನಮ್ಮ ಮನಸ್ಸು. ಮನುಷ್ಯನ ಮನಸ್ಸು ಕಾಲಕಾಲಕ್ಕೆ ಹೊಸ ವಿಚಾರಧಾರೆಗಳನ್ನು ಅಳವಡಿಸಿಕೊಳ್ಳುತ್ತಾ ಹೋಗಿದೆ. ಈ ವಿಚಾರಧಾರೆಗಳನ್ನು ತನ್ನ ದೇಹದ ಮೇಲೆ ಹೇರಲು ಮನಸ್ಸು ಪ್ರಯತ್ನಿಸುತ್ತಾ ಬಂದಿದೆ. ಇದು ಅಗತ್ಯವಿಲ್ಲವೇ ಎಂದುಕೊಳ್ಳಬೇಡಿ. ಕಾರಣ ಅಗತ್ಯವಿದೆ.

ಸಮಾಜ ಎಂದ ಮೇಲೆ ಮನುಷ್ಯ ಸಾಮಾಜಿಕ ಜೀವಿ ಎಂದ ಮೇಲೆ ಅವನು ಕೆಲವು ಕಟ್ಟುಪಾಡುಗಳಿಗೆ ಸಿಕ್ಕಿ ಬೀಳಲೇಬೇಕಾಗುತ್ತದೆ. ಒಬ್ಬನಿಂದ ಇನ್ನೊಬ್ಬನಿಗೆ ತೊಂದರೆಯಾಗದಿರಬಾಕಾಗಿದ್ದರೆ ಇಂತಹ ಕಟ್ಟುಪಾಡು ಬೇಕೇಬೇಕಾಗುತ್ತದೆ. ಆದರೆ, ಈ ಮೌಲ್ಯದ ಅಗತ್ಯಕ್ಕೆ ಮಿತಿಯಿದೆ. ಈ ಮಿತಿಯನ್ನು ದಾಟಿಹೋದಾಗ ಅದು ಅಪಹಾಸ್ಯಕ್ಕೆ ಈಡಾಗುತ್ತದೆ. ಇದಕ್ಕೆ 'ಮದುವೆ' ಎಂಬ ಸಾಮಾಜಿಕ ಮೌಲ್ಯವನ್ನೇ ತೆಗೆದುಕೊಳ್ಳೋಣ. ಆದಿ ಮಾನವ ಮದುವೆ ಎಂದರೆ ಏನು ಎಂದು ತಿಳಿದಿರಲಾರ. ಅವನಿಗೆ ಆಗಬೇಕಾಗಿದ್ದುದು ವಂಶಾಭಿವೃದ್ಧಿ. ಸಾಮಾಜಿಕವಾಗಿ ಅವನು ಬೆಳೆದಾಗ ಒಬ್ಬ ಹೆಂಗಸನ್ನು ತನ್ನ ಜೊತೆ ಇಟ್ಟುಕೊಂಡು ಮಕ್ಕಳ ಸಂಸಾರವನ್ನು ಬೆಳೆಸಲು ಪ್ರಯತ್ನಿಸಿದನು.

ಒಂದು ಗೂಡಿನಲ್ಲಿದ್ದಾಗ ಪ್ರಬಲವಾದ ವ್ಯಕ್ತಿ ತನಗೆ ಸರಿ ಕಂಡ ಹೆಣ್ಣನ್ನು ಎಳೆದುಕೊಂಡು ಹೋಗಿ ತನ್ನ ಬಳಿ ಇಟ್ಟುಕೊಳ್ಳುತ್ತಿರಬಹುದು. ಆದಿಮಾನವನಿಂದ ನಾಗರಿಕತೆಯ ಕಾಲಕ್ಕೆ ಬಂದಾಗ ಈ ಜೊತೆಯಲ್ಲಿರುವವಳ ಸಂಸರ್ಗ ಮಾಡುವುದರ ಮೊದಲು ಒಂದು ತಾಂತ್ರಿಕ ಕ್ರಿಯೆ ಹುಟ್ಟಿಕೊಂಡಿತು. ಇದರಲ್ಲೂ ಅನೇಕ ವಿಧಗಳಿದ್ದವು. ಒಬ್ಬ ಗಂಡಸು, ಅನೇಕ ಹೆಂಗಸರನ್ನು ಅನೇಕ ಗಂಡಸರು ಒಬ್ಬ ಹೆಂಗಸನ್ನು ಕೂಡುವಂತಹದ್ದನ್ನು ಸಮಾಜ ಒಪ್ಪಿಕೊಂಡಿತು. ನಂತರ ಒಬ್ಬ ಗಂಡಸು ಒಬ್ಬ ಹೆಂಗಸು ಎಂಬ ಮೌಲ್ಯ ಸ್ಥಾಪಿತವಾಯಿತು. ಇಲ್ಲಿಯವರೆಗೆ ಈ ಸಾಮಾಜಿಕ ಪದ್ಧತಿಯಲ್ಲಿ ಅಂತಹ ದೋಷ ಕಂಡುಬರಲಿಲ್ಲ.

ನಂತರದ ದಿನಗಳಲ್ಲಿ ಹೆಂಗಸು ಗಂಡನನ್ನು ದೇವರು ಎಂದು ಭಾವಿಸಬೇಕು. ಗಂಡಸು ಏನು ತಪ್ಪು ಮಾಡಿದರೂ ಹೆಂಗಸು ಅದನ್ನು ಪ್ರತಿಭಟಿಸದೆ ಒಪ್ಪಿಕೊಳ್ಳಬೇಕು. ಹೆಂಗಸಾದವಳು ಪತಿವ್ರತಾಧರ್ಮವನ್ನು ಪರಿಪಾಲಿಸಬೇಕು ಹಾಗೂ ಗಂಡ ಸತ್ತಾಗ, ಗಂಡನ ಚಿತೆಯ ಮೇಲೆ ಹೆಂಗಸಾದವಳು ಸತಿ ಹೋಗಬೇಕು ಎಂದು ಮೌಲ್ಯ ಬದಲಾಯಿಸಿದಾಗ ಈ ಸಾಮಾಜಿಕ ಪದ್ಧತಿ ಅಪಹಾಸ್ಯಕ್ಕೆ ಈಡಾಯಿತು.

"ಮೌಲ್ಯಗಳು ಸ್ಥಾಯಿ ಎಂದೇನೂ ಅಲ್ಲ ಬದಲಾಗುತ್ತಿರುತ್ತದೆ. ಕಾಲಕ್ಕೆ ತಕ್ಕಂತೆ ಪರಿಸರಕ್ಕೆ ತಕ್ಕಂತೆ ತಾನು ವ್ಯವಹರಿಸುವ ಜನರ ಸಂಸ್ಕೃತಿಗೆ ತಕ್ಕಂತೆ, ಈ ಮೌಲ್ಯಗಳು ಬದಲಾಗುತ್ತವೆ. ಇದಕ್ಕೆ ಕಾರಣ ಮನುಷ್ಯನ ಮನಸ್ಸು, ಮನಸ್ಸು ಮನುಷ್ಯನ ದೇಹದ ಮೇಲೆ ಸ್ಥಾಪಿಸಿರುವ ಏಕಾಧಿಪತ್ಯ"[೪].

ಮೌಲ್ಯವು ವ್ಯಕ್ತಿಯ ವೈಯಕ್ತಿಕ, ಸಾಮಾಜಿಕ, ಸೌಂದರ್ಯೋಪಾಸಕ, ನೈತಿಕ ಹಾಗೂ ಆಧ್ಯಾತ್ಮಿಕ ಜೀವನದ ಆಯಾಮಗಳನ್ನು ರೂಪುಗೊಳಿಸುವಲ್ಲಿ ಪ್ರೇರಕಶಕ್ತಿ. ಜೀವನದ ಮೌಲ್ಯಾತ್ಮಕ ಬುನಾದಿಗಳನ್ನು ವಿಶ್ಲೇಷಿಸಿದಾಗ 'ಮೌಲ್ಯ' ಈ ಪರಿಕಲ್ಪನೆಯ ಅರ್ಥ ಮೌಲ್ಯ ಎಂದಾಕ್ಷಣ ಬೆಲೆ ಬಾಳುವ ಬಂಗಾರ, ವಜ್ರದ ಆಭರಣಗಳು ನೆನಪಿಗೆ ಬರುತ್ತವೆ. ಈ ಆಭರಣದ ಮೌಲ್ಯವೆಷ್ಟು? ಎಂದು ಸಾಮಾನ್ಯವಾಗಿ ಕೇಳುತ್ತೇವೆ.

ಇಂಥ ಸಂದರ್ಭಗಳಲ್ಲಿ 'ಮೌಲ್ಯ'ದ ಅರ್ಥ ಅದರ ಬೆಲೆ, ಅದಕ್ಕೆ ತೆರಬೇಕಾದ 'ಹಣ' ಎಂದಾಗುತ್ತದೆ.ಒಂದು ವಿಧದಲ್ಲಿ ಈ ಅರ್ಥವನ್ನು ಒಪ್ಪಬೇಕಾದದ್ದೆ. ಆದರೆ, 'ಮೌಲ್ಯ'ಕ್ಕೆ ಇತರ ಅರ್ಥಗಳನ್ನು ಕಂಡುಕೊಳ್ಳಬಹುದು. ಇದೊಂದೇ ಅರ್ಥವಲ್ಲ, ಓದುಬರೆಹವನ್ನು ಪ್ರೀತಿಸುವ ವ್ಯಕ್ತಿಗೆ ಪುಸ್ತಕವು ಅಮೂಲ್ಯ ವಸ್ತುವಾಗುತ್ತದೆ. ಯೋಧನಿಗೆ ಶಸ್ತ್ರಾಸ್ತ್ರಗಳು ಅಮೂಲ್ಯವಾಗಿರುತ್ತದೆ. ಪಂಡಿತನಿಗೆ 'ಜ್ಞಾನ'ವು ಅಮೂಲ್ಯವಾಗಿರುತ್ತದೆ. ಅಂತೆಯೇ ಚಿತ್ರಕಾರನಿಗೆ ಕುಂಚ, ಬಣ್ಣಗಳು ಅಮೂಲ್ಯವಾಗಿರುತ್ತದೆ. ಇಲ್ಲಿ 'ಅಮೂಲ್ಯ' ಎಂಬುದು ಅತ್ಯಂತ ಉಪಯುಕ್ತವಾದುದು ಎಂಬ ಅರ್ಥದಲ್ಲಿ ಬಳಕೆಯಾದದ್ದು ಕಂಡುಬರುತ್ತದೆ. ಇದರ ಜೊತೆಗೇ ಉಪಯೋಗದ ದೃಷ್ಟಿಯಿಂದ ಅವು ಮಹತ್ವದ ಸಂಗತಿಗಳು ಎಂಬ ಅರ್ಥವನ್ನೂ ಅವು ಸೂಚಿಸುತ್ತದೆ. ಆದ್ದರಿಂದ ಉಪಯೋಗದ ದೃಷ್ಟಿಯಿಂದ ಮಹತ್ವವಿರುವ ಸಂಗತಿಗಳು ಮೌಲ್ಯವೆಂದು ಪರಿಗಣಿಸಲಾಗುತ್ತಿವೆ.

ಮೌಲ್ಯ ಶಬ್ದಕ್ಕೆ ವಿವಿಧ ಅರ್ಥಗಳಿವೆ ಎಂಬುದು ತಿಳಿದುಬರುತ್ತದೆ. ಬೆಲೆಯುಳ್ಳ, ಮಹತ್ವವಾದ ಅದರ ಗೌರವವನ್ನುಂಟು ಮಾಡಬಲ್ಲ, ಯೋಗ್ಯವಾದ, ಘನತೆ ಹೆಚ್ಚಿಸಬಲ್ಲ, ಉನ್ನತಮಟ್ಟದ, ಉಪಯುಕ್ತವಾದ ಎಂಬ ಅನೇಕ ಅರ್ಥದಲ್ಲಿ 'ಮೌಲ್ಯ' ಎಂಬ ಪದವು ಬಳಕೆಯಾಗುತ್ತದೆ.

ಸ್ವಚ್ಛವಾದ ಗ್ಲಾಸೊಂದರಲ್ಲಿ ಅರ್ಧದಷ್ಟು ಹಾಲು ತುಂಬಿಸಿ, ಅದನ್ನು ಕೆಲವು ಜನರ ಮುಂದೆ ಇಟ್ಟು ಅದರ ಬಗ್ಗೆ ಅಭಿಪ್ರಾಯ ಕೇಳಿದರು ಎಂದು ಭಾವಿಸಿ, ಅವರ ಅಭಿಪ್ರಾಯಗಳು ಏನೆಂಬುದನ್ನು ತಿಳಿದಾಗ ಕೆಲವು ಇಂಥ ಪ್ರತಿಕ್ರಿಯೆಗಳೂ ದೊರೆಯಬಹುದು. ಆದ್ದರಿಂದ ಕೆಲವು ಮಹತ್ವದ ಸಂಗತಿಗಳು ಗೊತ್ತಾಗುವುವು.

೧. ಈ ಹಾಲನ್ನು ಸೇವಿಸಿದರೆ, ಆರೋಗ್ಯವು ಚೆನ್ನಾಗಿ ವರ್ಧಿಸುವುದು ಎಂಬ ಪ್ರತಿಕ್ರಿಯೆ ದೊರೆತಲ್ಲಿ ವ್ಯಕ್ತಿಯ ಬಗ್ಗೆ ಈ ಕೆಳಗಿನ ಸಂಗತಿ ತಿಳಿದುಕೊಳ್ಳಬಹುದು.

ಅ. ವ್ಯಕ್ತಿಯು ಆರೋಗ್ಯದ ವಿಷಯದ ಬಗ್ಗೆ ಹೆಚ್ಚು ಲಕ್ಷ್ಯವಹಿಸುತ್ತಾನೆ. ಅಥವಾ

ಆ. ವಸ್ತುಗಳ ಬಗ್ಗೆ, ಅವುಗಳ ಉಪಯೋಗದ ಕುರಿತು ಪರಿಗಣಿಸುವ ಪ್ರವೃತ್ತಿ ಹೊಂದಿದ್ದಾನೆ

ಇ. ವ್ಯಕ್ತಿಗೆ ತಿನ್ನುವುದು, ಕುಡಿಯುವುದು ಹೆಚ್ಚು ಆಸಕ್ತಿ ಇದೆ

೨. ಇನ್ನೋರ್ವನ ಅಭಿಪ್ರಾಯ ಹೀಗೆ ಇರಬಹುದು. 'ಇದರಲ್ಲಿ ಅರ್ಧ ಹಾಲು ಇದೆ. ಈ ಅಭಿಪ್ರಾಯ ಕೊಡುವವನ ಬಗ್ಗೆ ಹೀಗೆ ತಿಳಿಯಬಹುದು.

ಅ. ವ್ಯಕ್ತಿಯು ಇದ್ದುದರಲ್ಲಿ ಉತ್ತಮ ಅಂಶ ಕಂಡುಕೊಳ್ಳುವ ದೃಷ್ಟಿ ಹೊಂದಿದ್ದಾನೆ.

ಆ. ವ್ಯಕ್ತಿಯು ವಾಸ್ತವಿಕವಾಗಿ ಒಳ್ಳೆಯದನ್ನು ಕಾಣುವ ವಿಚಾರ ಹೊಂದಿದ್ದಾನೆ

ಇ. ವ್ಯಕ್ತಿಯು ಜೀವನದ ಬಗ್ಗೆ ಧನಾತ್ಮಕ ಭಾವನೆ ಹೊಂದಿದ್ದಾನೆ. ಆಶಾವಾದಿಯೂ ಆಗಿದ್ದಾನೆ

೩. 'ಇದರಲ್ಲಿ ಅರ್ಧ ಗ್ಲಾಸ್ ಖಾಲಿ ಇದೆ' ಈ ಅಭಿಪ್ರಾಯ ಬಂದಲ್ಲಿ

ಅ. ವ್ಯಕ್ತಿಯು ಇದ್ದುದರಲ್ಲಿ ದೋಷ ಕಂಡುಹಿಡಿಯುವ ಪ್ರವೃತ್ತಿ ಹೊಂದಿದ್ದಾನೆ.

ಆ. ನಿರಾಶಾವಾದಿಯಾಗಿದ್ದಾನೆ.

೪. ಅಂತೆಯೇ ಇನ್ನೋರ್ವನ ಅಭಿಪ್ರಾಯ ಹೀಗಿದ್ದಲ್ಲಿ, "ಇದು ಹಾಲೇ ಹೌದಾ, ಅಥವಾ ಬಣ್ಣದ ನೀರೋ" ವ್ಯಕ್ತಿಯು ಹೀಗೆ ಅಭಿಪ್ರಾಯವನ್ನು ತಿಳಿಸಬಹುದು.

ಅ. ವ್ಯಕ್ತಿಯು ಸಂಶಯ ಪ್ರವೃತ್ತಿ ಹೊಂದಿದ್ದಾನೆ.

ಆ. ಬಾಹ್ಯ ಲಕ್ಷಣ ವಿಶ್ಲೇಷಣೆ ಮಾಡುವ ಪ್ರವೃತ್ತಿ ಹೊಂದಿದ್ದಾನೆ... ಇತ್ಯಾದಿ.

ಇದರಿಂದ ಪ್ರತಿಯೊಂದು ಇಂಥ ಹೇಳಿಕೆಯು ನೋಡುವ ವ್ಯಕ್ತಿಯ ಅಭಿಪ್ರಾಯಗಳಿಗನುಗುಣವಾಗಿರುತ್ತದೆ. ನೋಡುವವನ ದೃಷ್ಟಿಯನ್ನು ಅವಲಂಬಿಸಿರುತ್ತದೆ. ಇದನ್ನು ಇನ್ನೂ ಸ್ವಲ್ಪ ಸಂಶ್ಲೇಷಿಸಿದರೆ ಒಂದು ವಸ್ತು ಅಥವಾ ಒಂದು ಘಟನೆ ನೋಡುವವನು ತನ್ನ ಅನುಭವ ವೈಯಕ್ತಿಕ ಕಾರಣಗಳ ಹಿನ್ನೆಲೆಯಲ್ಲಿ ಮೌಲ್ಯ ನಿರ್ಧಾರ ಮಾಡುತ್ತಾನೆ. ಇದು ವೈಯಕ್ತಿಕ ಅಭಿಪ್ರಾಯಗಳಾಗಿರುತ್ತದೆ. "ಮೌಲ್ಯಗಳು ನೋಡುವವನ ದೃಷ್ಟಿಯನ್ನು ಅನುಸರಿಸಿರುವುದರಿಂದ ಅದನ್ನು 'ವ್ಯಕ್ತಿನಿಷ್ಠ' ಎಂದು ಗುರುತಿಸುವರು"[೫].

೧. ಮೌಲ್ಯಗಳು ವಸ್ತು, ಘಟನೆ ಅಥವಾ ಲಕ್ಷಣಗಳ ಬಗ್ಗೆ ಹೊಂದಿರುವ ವೈಯಕ್ತಿಕ ಧೋರಣೆಗಳು

೨. ಮೌಲ್ಯಗಳಲ್ಲಿ ದ್ವಂದ್ವ ಅಥವಾ ವಿರುದ್ಧಾರ್ಥಕತೆಯನ್ನು ಕಲ್ಪಿಸಬಹುದು ಉದಾಹರಣೆಗೆ, ಸತ್ಯ x ಅಸತ್ಯ, ಹಿಂಸೆ x ಅಹಿಂಸೆ, ಶ್ರೇಷ್ಠತೆ x ಕೀಳುತನ.

೩. ಮೌಲ್ಯ ಎಂದರೆ ಯಾವುದನ್ನು ಹೊಂದಿದರೆ, ತನಗೆ ಅದರಿಂದ ಲಾಭವಿದೆಯೋ, ಸಮಾಜಕ್ಕೂ ಒಳಿತನ್ನುಂಟು ಮಾಡುತ್ತದೋ, ಯಾವುದನ್ನು ಪಡೆದರೆ ಗೌರವ

ಪಡೆಯಲು ಸಾಧ್ಯವೋ, ತನಗೆ ಉತ್ತಮ ಯೋಗ್ಯವೆಂದು ಅನಿಸುವುದೋ, ಅಂತಹುದು ಎಂಬ ಅರ್ಥಗಳಿವೆ.

೪. ಮೌಲ್ಯಗಳು ವ್ಯಕ್ತಿ ನಿಷ್ಠವಾಗಿದ್ದು, ಕುಟುಂಬ ಮತ್ತು ಸಮಾಜಕ್ಕನುಗುಣವಾಗಿ ಬದಲಾಗಬಹುದು.

೫. ಕಾಲ, ಸ್ಥಳಗಳಿಗನುಗುಣವಾಗಿ ಮೌಲ್ಯಗಳು ಬದಲಾಗಿ, ಹೊಸ ಮೌಲ್ಯಗಳು ಉದಯವಾಗಬಲ್ಲವು, ಹಳೆಯ ಮೌಲ್ಯಗಳು ಅಸ್ತಿತ್ವ ಕಳೆದುಕೊಳ್ಳಬಲ್ಲವು.

೬. ಮೌಲ್ಯಗಳನ್ನು ಪಟ್ಟಿಮಾಡಿ ವರ್ಗೀಕರಿಸಬಹುದು. ಜೀವನ ಮೌಲ್ಯ, ವೈಯಕ್ತಿಕ ಮೌಲ್ಯ, ಸಾಮಾಜಿಕ ಮೌಲ್ಯ, ಜಾಗತಿಕ ಮೌಲ್ಯ, ಮಾನವೀಯ ಮೌಲ್ಯ, ಆರ್ಥಿಕ ಮೌಲ್ಯ, ಧಾರ್ಮಿಕ ಮೌಲ್ಯ, ನೈತಿಕ ಮೌಲ್ಯ, ಆಂತರಿಕ ಮೌಲ್ಯ, ಶಾಶ್ವತ ಮೌಲ್ಯ, ಸಾಧನೆ ಮೌಲ್ಯ, ಸಾಧ್ಯ ಮೌಲ್ಯ.

೭. ಸರ್ವತೋಮುಖ ಅಭಿವೃದ್ಧಿಯ ಒಂದಂಶವಾಗಿ ಮೌಲ್ಯಗಳ ಸಂಶ್ಲೇಷಣೆ ಆಧರಣೀಯ ಹಾಗೂ ಅಪೇಕ್ಷಣೀಯವಾಗಿದೆ.

೮. ಮೌಲ್ಯಗಳನ್ನು ಹೋಲಿಕೆಗೆ ಗುರಿಪಡಿಸಿ, ಉತ್ತಮ, ಕನಿಷ್ಠ ಎಂದು ಸೂಚಿಸಬಹುದು. ಉದಾ. ನಡತೆ ಒಂದು ಮೌಲ್ಯ ಎಂದಾದರೆ, ಉತ್ತಮ ನಡತೆ, ಕನಿಷ್ಠ ನಡತೆ ಎಂದು ಸೂಚಿಸಬಹುದು. ಆದರೆ, ಯಾವುದೇ ಎರಡು ವಿಭಿನ್ನ ಮೌಲ್ಯಗಳನ್ನು ಹೋಲಿಸಿ, ಉತ್ತಮ, ಕನಿಷ್ಠ ಎಂದು ತೀರ್ಮಾನಿಸುವುದು ಅಪ್ರಸ್ತುತ.

ಜ್ಞಾನ ಹಾಗೂ ಚೈತನ್ಯ ಇವು ಮಾನವನಿಗೆ ಸ್ಫೂರ್ತಿಯನ್ನು ನೀಡುವ ಮೂಲಗಳಾಗಿವೆ. ವೈಯಕ್ತಿಕ ಮೌಲ್ಯ, ಸಾಮಾಜಿಕ ಮೌಲ್ಯ, ನೈತಿಕ ಮೌಲ್ಯ, ಸೌಂದರ್ಯೋಪಾಸನೆ ಹಾಗೂ ಆಧ್ಯಾತ್ಮಿಕ ಮೌಲ್ಯಗಳು ಒಳ್ಳೆಯ ಬದುಕಿಗೆ ಸ್ಫೂರ್ತಿಯನ್ನು ಒದಗಿಸುವುವು. ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಇವು ಮೈಲಿಗಲ್ಲುಗಳು. ಆದ್ದರಿಂದ, ಪ್ರತಿಯೊಬ್ಬ ವ್ಯಕ್ತಿಯ ಪ್ರಗತಿಗೆ ವೈಯಕ್ತಿಕ ಮೌಲ್ಯ ಹಾಗೂ ಸಾಮಾಜಿಕ ಮೌಲ್ಯಗಳ ಆಯಾಮ, ಅಂತೆಯೇ ನೈತಿಕ, ಸೌಂದರ್ಯೋಪಾಸಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳ ಆಯಾಮವಿರುವುದು ಅಗತ್ಯ. ಇವುಗಳ ಸಮಾನತೆಯೇ ಸರ್ವತೋಮುಖ ಪ್ರಗತಿ. ಇವುಗಳಿಂದ ಬದುಕು ಅರ್ಥಪೂರ್ಣ ಹಾಗೂ ಸ್ಫೂರ್ತಿಯುತವಾಗಿ ಸಾಗುವುವು. ಈ ದೃಷ್ಟಿಯಿಂದಾಗಿ ಮೌಲ್ಯಗಳ ಅಳವಡಿಕೆ ಸಮರ್ಥನೀಯವಾಗಿದೆ.

ಜ್ಞಾನ ಮತ್ತು ಕೌಶಲಗಳ ಜೊತೆಗೆ ಉತ್ತಮ ನಾಗರಿಕನಾಗಲು ಪ್ರೇರಕವಾದ ಅಂಶಗಳೆಲ್ಲಾ ಮೌಲ್ಯಗಳು. ಒಂದು ಮೌಲ್ಯವು ಆ ವ್ಯಕ್ತಿಯ ಸಂವೇದನಾತ್ಮಕ ಭಾವನೆಗಳು ಮತ್ತು ನಿರ್ಧಿಷ್ಟ ಜ್ಞಾನಾತ್ಮಕ ಪ್ರಕಾರಗಳ ನಡುವಿನ ಸಂಬಂಧವನ್ನು ಸೂಚಿಸುವುದಾಗಿದೆ. ಮೌಲ್ಯಗಳು ಆದರ್ಶತತ್ವಗಳು, ಅವು ಭಾವನಾ ರೂಪದಲ್ಲಿರುತ್ತದೆ. ಆದರ್ಶ ತತ್ವಗಳು ನಿರ್ದಿಷ್ಟವಾದ ಉದ್ದೇಶಪೂರ್ವಕ ಕ್ರಿಯೆಯಲ್ಲಿ ಪದೇ ಪದೇ ತೊಡಗಿ ರೂಢಿಗತವಾಗಿರುವವರೆಗೂ, ಭಾವನಾ ರೂಪದಲ್ಲಿರುತ್ತವೆ".[೬] ಅಂದರೆ, ವ್ಯಕ್ತಿಯು ಕೈಗೊಳ್ಳುವ ಕ್ರಿಯೆಯೂ ಆತನಲ್ಲಿ ಭಾವನಾ ರೂಪದಲ್ಲಿ ಸುಪ್ತವಾಗಿರುವ ಮೌಲ್ಯಗಳನ್ನು ಆಧರಿಸಿರುತ್ತವೆ. ಭಾವನಾ ರೂಪದ ಮೌಲ್ಯಗಳ ಪರಿಕಲ್ಪನೆಗಳು ರಕ್ತಗತ ಇಲ್ಲವೆ ರೂಢಿಗತವಾಗುವ ಮೂಲಕ ಮನೋಧೋರಣೆಗೆ ಪರಿಪಕ್ವಗೊಳ್ಳುವ ಪ್ರಕ್ರಿಯೆಯಲ್ಲಿ ನಿರ್ದಿಷ್ಟ ಪರಿಣಾಮಕಾರಿ ಹಾಗೂ ಕ್ರಾಂತಿಕಾರಕ ಪ್ರಭಾವವನ್ನುಂಟುಮಾಡುತ್ತದೆ.

"ಮನೋಧೋರಣೆಗಳು ವ್ಯಕ್ತಿಯ ಸಂವೇದನಾತ್ಮಕ ಅಂಶಗಳಾದ 'ಇಚ್ಛೆ ಮತ್ತು ಅನಿಚ್ಛೆ' ಗಳಿಂದ ರೂಪಿತವಾಗುತ್ತದೆ. ಅವುಗಳು ಒಂದು ನಿರ್ದಿಷ್ಟ ಪ್ರಕ್ರಿಯೆಗಳಾಗಿದ್ದು, ವ್ಯಕ್ತಿಯ ಮೌಲ್ಯಗಳಿಂದ ನಿರ್ಧರಿಸಲ್ಪಟ್ಟಿರುತ್ತದೆ. ಅಲ್ಲದೆ, ಆತನ ವರ್ತನೆ ಮತ್ತು ಕ್ರಿಯೆಗೆ ಶಕ್ತಿ ತುಂಬುವ ಇಲ್ಲವೆ ಬಲವರ್ಧನೆ ಮಾಡುವ ಸೇವಾ ಕಾರ್ಯವನ್ನು ಮೌಲ್ಯಗಳು ನಿರ್ವಹಿಸುತ್ತವೆ" ಎಂದರೆ, ಉತ್ಪ್ರೇಕ್ಷೆಯಾಗಲಾರದು. ಕ್ರಿಯೆಯು ಮೌಲ್ಯದ ರೂಢಿಗತ ಪ್ರತಿಕ್ರಿಯೆಯನ್ನು ಅಂತಿಮತೆಗೆ ಕರೆದೊಯ್ಯುತ್ತದೆ. ಅಂದರೆ, ಯಾವುದೇ ವ್ಯಕ್ತಿಯ ಕ್ರಿಯೆಯು ಆತನ ಮನೋಭಾವನೆಗಳ ಇಲ್ಲವೆ ಮನೋಧೋರಣೆಗಳ ಜೊತೆ ತಾರ್ಕಿಕವಾಗಿ ಅನುಕ್ರಮವಾಗಿ ಅನುಸಂಘಟಿತಗೊಂಡ ಮೌಲ್ಯಗಳೇ ಆಗಿರುತ್ತದೆ.

ನೈತಿಕ ಮೌಲ್ಯಗಳ ಪಕ್ವತೆಯು ಅದರ ಕ್ರಿಯೆಗಳಿಂದಾಗಲಿ ಇಲ್ಲವೆ ಕ್ರಿಯೆಗಳಿಗೆ ಸಂಬಂಧಿಸಿದಂತೆ ನೀಡಿದ ವಿವರಣೆಗಳಿಂದಾಗಲಿ ಅಳೆಯಲ್ಪಡುವುದಿಲ್ಲ. ಆದರೆ, ಆ ಕ್ರಿಯೆಗಳ ಕಾರ್ಯಗತಕ್ಕೆ ಕಾರಣೀಭೂತವಾದ ಇಲ್ಲವೆ ಒತ್ತಾಯಪೂರಿತ ಅಂಶಗಳನ್ನು ಅವಲಂಬಿಸಿರುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ, ಕ್ರಿಯೆ ಮತ್ತು ಮೌಲ್ಯಗಳು ಹಾಲು ಹಾಗೂ ಹಾಲಿನೊಳಗಿನ ಬೆಣ್ಣೆಯಂದದಿ ಹಾಸುಹೊಕ್ಕಾಗಿರುತ್ತದೆ. ಹಾಲಿನ ಗುಣ ಧರ್ಮವನ್ನಾಧರಿಸಿ, ಬೆಣ್ಣೆಯ ಗುಣ ಧರ್ಮ ರೂಪಿಸುವಂತೆ, ವ್ಯಕ್ತಿ ರೂಢಿಸಿಕೊಂಡಿರುವ ಮೌಲ್ಯದ ಗುಣಧರ್ಮವನ್ನು ಆಧರಿಸಿ, ಆತನು ಕೈಗೊಳ್ಳುವ ಕ್ರಿಯೆಗಳ ಗುಣಧರ್ಮಗಳು ರೂಪಿತವಾಗಿರುತ್ತದೆ ಹಾಗೂ ಪ್ರದರ್ಶಿತವಾಗುತ್ತದೆ.

ಪು. ೨೦೬

“ನಿರ್ದಿಷ್ಟ ಅಂಶಕ್ಕೆ ನಾವು ಎಷ್ಟು ಬೆಲೆ ಕೊಡುತ್ತೇವೆ. ದತ್ತ ಮೌಲ್ಯಕ್ಕೆ ನಾವು ಎಷ್ಟರಮಟ್ಟಿಗೆ ಬದ್ಧರಾಗಿರುತ್ತೇವೆ ಮತ್ತು ನಮ್ಮಲ್ಲಿರುವ ಮೌಲ್ಯಾಮೌಲ್ಯಗಳ ನಡುವಿನ ಸಂಬಂಧವನ್ನು ಸೂಚಿಸುವ ಅಂತರವೆಷ್ಟು”? ಎಂಬೀ ಪ್ರಮಾಣಾತ್ಮಕ, ಗುಣಾತ್ಮಕ ಹಾಗೂ ಅಂತರ ಸಂಬಂಧಗಳೆಂಬ ಮೂರು ದೃಷ್ಟಿಕೋನಗಳನ್ನು ಮೌಲ್ಯಗಳು ಹೊಂದಿರುತ್ತದೆಂದು ಪ್ರತಿಪಾದಿಸುತ್ತಾರೆ.

ಬದುಕು ಮತ್ತು ಮೌಲ್ಯಗಳು ಒಂದು ನಾಣ್ಯದ ಎರಡು ಮುಖಗಳಿದ್ದ ಹಾಗೆ. ಮೌಲ್ಯಗಳು ಬದುಕಿನಲ್ಲಿ ಹಾಸುಹೊಕ್ಕಾಗಿದ್ದು, ಸನ್ಮಾರ್ಗಗಾಮಿ ಅಂಶಗಳ ಬಲವರ್ಧನೆ ಮಾಡುವ ಮೂಲಕ ವ್ಯಕ್ತಿಯ ಚಾರಿತ್ರ್ಯವರ್ಧನೆ ಮಾಡುವಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತದೆ.

ಮೌಲ್ಯಗಳು ವ್ಯಕ್ತಿ ಮತ್ತು ಕುಟುಂಬಗಳನ್ನು ಹಲವು ಕಟ್ಟುಪಾಡುಗಳಿಂದ ಮತ್ತು ರೀತಿ ರಿವಾಜುಗಳಿಂದ ಬಂಧಿಸುವ ಮೂಲಕ ಸಾಮಾಜಿಕ ಸುಭದ್ರತೆಯನ್ನು ಕಾಪಾಡುತ್ತದೆ. ತನ್ಮೂಲಕ ಒಂದು ಮಗು ಉತ್ತಮ ಪತಿ ಪತ್ನಿಯಾಗಿ, ತಂದೆ ತಾಯಿಯಾಗಿ ರೂಪಿತವಾಗಲು ಪ್ರಭಾವಿತ ಪ್ರಮುಖ ಅಂಶವಾಗಿದೆ.

ಸದೃಢ ಹಾಗೂ ಸಮರ್ಥನೀಯ ಮೌಲ್ಯಗಳು, ಸದೃಢವಾದ ವ್ಯಕ್ತಿ ಹಾಗೂ ಕುಟುಂಬವನ್ನು ರೂಪಿಸುತ್ತದೆ. ಸದೃಢ ಹಾಗೂ ಸಮರ್ಥವಾಗಿ ರೂಪಿತಗೊಂಡ ವ್ಯಕ್ತಿಗಳು ಹಾಗೂ ಕುಟುಂಬಗಳೂ ಸದೃಢ ಹಾಗೂ ಸಮರ್ಥವಾದ ಸಮಾಜವನ್ನು ರೂಪಿಸುವಲ್ಲಿ ಪ್ರಭಾವಿತವಾಗಿರುತ್ತದೆ.

“ಸತ್ಯ, ಧರ್ಮ, ಶಾಂತಿ, ಪ್ರೇಮ ಹಾಗೂ ಅಹಿಂಸೆ ಈ ಐದು ಮೌಲ್ಯಗಳು ಆಚಂದ್ರಾರ್ಕವಾಗಿ ಅನೂಚಾನವಾಗಿ ಮಾನವನ ಮೇಲೆ ಸಮೃದ್ಧ ಪ್ರಭಾವ ಮತ್ತು ಮಹತ್ವ ಬೀರುತ್ತಾ ಬಂದಿರುವ ಮೌಲ್ಯಗಳಾಗಿರುತ್ತವೆ. ಅವು ಎಲ್ಲಾ ಯುಗಗಳಿಂದಲೂ ಮೌಲ್ಯಗಳಾಗಿಯೇ ಉಳಿದು, ಬೆಳೆದು ಮಾನವಕುಲದ ಕಲ್ಯಾಣಾರ್ಥವಾಗಿ ಜೀವಂತವಾಗಿ ಉಳಿದಿವೆ. ಮಾನವನ ಕಣಕಣಗಳಲ್ಲಿ ಇದು ತುಂಬಿದ್ದರೂ ಸುಪ್ತವಾಗಿರುತ್ತದೆ. ಅವುಗಳನ್ನು ಜಾಗ್ರತಗೊಳಿಸಿ, ಮನದಟ್ಟು ಮಾಡಿ ಚಾರಿತ್ರ್ಯದಲ್ಲಿ ಆಂತರಿಕರಣಗೊಳಿಸಿ ರೂಢಿಗತ ಮಾಡುವುದು ಅತಿ ಮುಖ್ಯವಾಗಿದೆ”.[೭]

ಈ ಹಿನ್ನೆಲೆಯಲ್ಲಿ ಭಯ, ಭೀತಿ, ಕೋಪ, ತಾಪ, ತ್ಯಾಗ, ತಾಳ್ಮೆ, ನಗು, ಅಳು, ಸ್ವಾಭಿಮಾನ, ವಾತ್ಸಲ್ಯ, ಅಸೂಯೆ, ವ್ಯಾಕುಲ, ಸತ್ಯ, ಪ್ರೇಮ, ಧರ್ಮ, ಶಾಂತಿ, ಅಹಿಂಸೆ ಇವೇ ಮುಂತಾದ ಪ್ರಮುಖ ಮೌಲ್ಯಗಳು ಮತ್ತು ಪೂರಕ ಮೌಲ್ಯಗಳು ಜೀವನದಲ್ಲಿ ಅತೀ ಅವಶ್ಯ

ಎಂದು ಭಾವಿಸಿ, ಅವುಗಳ ಅರ್ಥ, ಮಹತ್ವ ಅವುಗಳ ಕೊರತೆಯ ಪರಿಣಾಮ ದೈನಂದಿನ ಬದುಕಿನಲ್ಲಿ ಅವುಗಳ ಅವಶ್ಯಕತೆ ಬಗೆಗೆ ಕಿಂಚಿತ್ ಅರಿವು ಮೂಡಿಸುವ ಸಲುವಾಗಿ ಸಂಕ್ಷಿಪ್ತವಾಗಿ ನೆನಪಿನ ಬಾಂಧವ್ಯವನ್ನು ಜಾಗೃತಿಗೊಳಿಸುವ ಪ್ರಯತ್ನ ಇದಾಗಿದೆ.

ಮೌಲ್ಯ ವ್ಯಕ್ತಿಯ ವೈಯಕ್ತಿಕ, ಸಾಮಾಜಿಕ ಸೌಂದರ್ಯೋಪಾಸಕ, ನೈತಿಕ ಹಾಗೂ ಆಧ್ಯಾತ್ಮಿಕ ಆಯಾಮಗಳನ್ನು ರೂಪುಗೊಳಿಸುವಲ್ಲಿ ಪ್ರೇರಕ ಶಕ್ತಿ. ಮಾನವ ಹುಟ್ಟಿದಾಗ ಕ್ರೂರ ಗುಣಗಳಿಂದ ಜನಿಸಿರುವನು. ಅವನನ್ನು ಯೋಗ್ಯ ವ್ಯಕ್ತಿಯನ್ನಾಗಿ ಮಾಡಿ, ಉತ್ತಮ ಸಮಾಜ ಜೀವಿಯನ್ನಾಗಿ ಮಾಡಲು ಮೌಲ್ಯಗಳು ಅವಶ್ಯ. ಜೀವನ ಮೌಲ್ಯಗಳು ಉತ್ತಮ ಮಾನವನಾಗಿ ಬಾಳಿ ಬದುಕಲು ತೀರಾ ಅಗತ್ಯ ಹಾಗೂ ಅಷ್ಟೇ ಪ್ರಭಾವ ಬೀರುತ್ತದೆ.

ಯಾವುದಾದರೊಂದನ್ನು ಜನತೆ ಸಾಮಾಜಿಕವಾಗಿಯಾಗಲೀ, ವೈಜ್ಞಾನಿಕವಾಗಿಯಾಗಲೀ, ಅಪೇಕ್ಷಿತವಾಗಿದ್ದೆಂದು ಪರಿಗಣಿಸುವ ಭಾವನೆಗಳನ್ನೇ ಮೌಲ್ಯಗಳೆನ್ನಲಾಗುತ್ತದೆ. ಅಂತೆಯೇ ಮೌಲ್ಯಗಳು ಸಮಾಜ ಮತ್ತು ಜೀವನವನ್ನು ಸ್ಥಿರಗೊಳಿಸಲು ಅವಶ್ಯವಾದಲ್ಲಿ, ಅವುಗಳಲ್ಲಿ ಬದಲಾವಣೆಯನ್ನುಂಟು ಮಾಡಲು ಸಹಾಯಕವಾಗುವಂತಹ ಎಲ್ಲಾ ಪ್ರಮುಖ ಜೀವನ ಧರ್ಮಗಳು, ನಂಬಿಕೆಗಳು, ನೈತಿಕ ಮನೋವೃತ್ತಿಗಳು, ರಾಜಕೀಯ ಆಲೋಚನೆಗಳು ಇತ್ಯಾದಿಗಳನ್ನೊಳಗೊಂಡಿರುತ್ತದೆ. ಒಟ್ಟಿನಲ್ಲಿ ವೈಯಕ್ತಿಕ ಹಾಗೂ ಸಾಮಾಜಿಕ ವಿಕಾಸ ಮತ್ತು ಕಲ್ಯಾಣಕಾರ್ಯಗಳಾಗಿ ಯಾವುದೇ ಸಮಾಜದಲ್ಲಿ ಮೌಲ್ಯಗಳು ಅಪೇಕ್ಷಿತವೂ ಹೌದು, ಅಗತ್ಯವೂ ಹೌದು ಎನ್ನಬಹುದಾಗಿದೆ. ವ್ಯಕ್ತಿಯ ಭೌತಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಸಹಾಯಕವಾದ ಮತ್ತು ಆ ಸಮಾಜದ ಸಾಂಸ್ಕೃತಿಕ ಹೊಂದಿಕೆಯಾದ ತತ್ವಗಳನ್ನೇ ಜೀವನ ಮೌಲ್ಯಗಳೆಂದು ಪರಿಗಣಿಸಬಹುದಾಗಿದೆ.

ಇಂತಹ ಹಿನ್ನೆಲೆಯಲ್ಲಿ ಆರ್ಯಾಂಬ ಹಾಗೂ ತ್ರಿವೇಣಿಯವರ ಕಾದಂಬರಿಗಳಲ್ಲಿ ಸಾಮಾಜಿಕ ಸಂವೇದನೆಯ ಸ್ಥಿತ್ಯಂತರದ ನಿಟ್ಟಿನಲ್ಲಿ ಮೌಲ್ಯಗಳು ಸ್ವೀಕರಣವೋ, ತಿರಸ್ಕಾರವೋ ಆಗಿದ್ದಲ್ಲಿ, ಆರ್ಯಾಂಬರ ದೃಷ್ಟಿಯಲ್ಲಿ ಹೊಂದಾಣಿಕೆ, ತ್ರಿವೇಣಿಯವರ ದೃಷ್ಟಿಯಲ್ಲಿ ವಿರೋಧ ಹೀಗೆ ವ್ಯಕ್ತಿಗತವಾದ ಮೌಲ್ಯಗಳು, ಕಾದಂಬರಿ ವಿನ್ಯಾಸದಲ್ಲಿ ಹೇಗೆ ಪ್ರತಿಬಿಂಬಿತವಾಗಿದೆ. ಮೌಲ್ಯಗಳು ಪರಂಪರಾಗತವಾದರೂ ಅವುಗಳ ಅಳವಡಿಕೆ, ಕಾದಂಬರಿಯ ಪಾತ್ರಗಳಲ್ಲಿ ಹೇಗೆ ಹಾಸುಹೊಕ್ಕಾಗಿದೆ ಎಂಬುದನ್ನು ಮನಗಾಣಬೇಕಾಗಿದೆ.

ಪುರುಷರೊಂದಿಗಿನ ವಿನಿಮಯ, ಸಾಹಸ ಕಾರ್ಯಗಳು ಹೆಚ್ಚಿದಂತೆ ಹೆಂಗಸರಿಗೆ ಸಂಬಂಧಿಸಿದ ಅರ್ಥಹೀನವಾದ ಜೀವ ವಿರೋಧಿ ಮೌಲ್ಯಗಳು ಕುಸಿದು ಹೊಸ ಮಹಿಳೆಯ ಹೊಸ ಮನುಷ್ಯನ, ಹೊಸ ಚರಿತ್ರೆಯ ಪುಟಗಳಿಗೆ ನಾಂದಿಯಾಗಬೇಕು. ತನ್ನ ಅನುಕೂಲಕ್ಕಾಗಿ ಪುರುಷ ಪ್ರಧಾನ ವ್ಯವಸ್ಥೆಯು ಸ್ತ್ರೀಗೆ ಸೃಷ್ಟಿಸಿಕೊಟ್ಟ ಮೌಲ್ಯಗಳಲ್ಲಿ ತಾಯ್ತನವೂ ಒಂದಾಗಿದೆ. ಇದನ್ನು ಅತಿಯಾಗಿ ವೈಭವೀಕರಿಸುತ್ತಾ, ಹೆಣ್ಣಿನ ಜೀವನದ ಅರ್ಥವಂತಿಕೆಯನ್ನು, ಸಾರ್ಥಕ್ಯವನ್ನು ಅದೇ ಅವಳ ಮಾತೃತ್ವದೊಂದಿಗೆ ಸಮೀಕರಿಸಿದ್ದರಲ್ಲಿ ಆ ಮೌಲ್ಯ ವ್ಯವಸ್ಥೆಯ ದುರಂತವಿದೆ. ಕೌಟುಂಬಿಕ ನೆಲೆಯಾಚೆಗೂ ಸ್ತ್ರೀಗೆ ಇರುವ ಅಸ್ತಿತ್ವವನ್ನು ಸವಾಲುಗಳನ್ನು ಎದುರಿಸುತ್ತಾ ತಮ್ಮ ನಿಜವಾದ ಸ್ವರೂಪಗಳ ಪತ್ತೆಗೆ ಹೊರಡುವ ಪ್ರತಿಕ್ರಿಯೆಯಲ್ಲಿ ಗಟ್ಟಿಯಾಗುತ್ತಾ ಹೋಗುವ ಈ ಪಾತ್ರಗಳು ಸ್ತ್ರೀಸಂವೇದನೆಗಳ ವಿಶಿಷ್ಟ ಅಂಶಗಳನ್ನು ಸೂಚಿಸುತ್ತದೆ.

ಇದರ ಇನ್ನೊಂದು ಬದಿಗೆ ಈ ಮೌಲ್ಯ ನಿರಾಕರಣೆಯನ್ನು ಅತಿಯಾಗಿ ಜಗ್ಗುವ ಪ್ರವೃತ್ತಿಯನ್ನು ಕಾಣುತ್ತೇವೆ. ವಿವಾಹ ಸಂಸ್ಥೆಯು ಪ್ರಭಾವಿಸುವ ವಿಧಿ ನಿಷೇಧಗಳು ಸ್ತ್ರೀಯ ಲೈಂಗಿಕ ಬದುಕನ್ನು ನಿಯಂತ್ರಿಸುತ್ತದೆ. ಪುರುಷ ಯಜಮಾನ್ಯದ ಸಂಕೇತಗಳಾಗಿವೆ ಎನ್ನುವುದು ಸರಿಯೇ. ಆದರೆ, ಇವುಗಳನ್ನು ಪ್ರಕಟಿಸುವ ಉತ್ಸಾಹದಲ್ಲಿ ಬಹುಪತಿತ್ವ, ವಿವಾಹಬಾಹಿರ ಸಂಬಂಧಗಳನ್ನಾಗಲೀ ಪ್ರೋತ್ಸಾಹಿಸುವ ಅಗತ್ಯವಿದೆಯೇ? ಇಲ್ಲೆಲ್ಲಾ ಮಹಿಳಾ ಸಂವೇದನಾತ್ಮಕತೆಯನ್ನು ಒಂದೋ ತಪ್ಪಾಗಿ ಗ್ರಹಿಸುತ್ತೇವೆ. ಇಲ್ಲವೇ ಅನವಶ್ಯಕವಾಗಿ ತಿರುಚಲಾಗುತ್ತದೆ ಎನಿಸುತ್ತದೆ.

ಈ ವ್ಯಾಪ್ತಿಯಲ್ಲಿ ತ್ರಿವೇಣಿಯವರ 'ಹೂವು ಹಣ್ಣು' ಕಾದಂಬರಿಯ ರಮಾ, ಆರ್ಯಾಂಬರ 'ಬದುಕಿನ ಬವಣೆ'ಯಲ್ಲಿನ ನಾಗು ಈ ಪಾತ್ರಗಳನ್ನು ಅರ್ಥೈಸಬಹುದು. ತಮ್ಮ ಕರುಳ ಕುಡಿಯನ್ನು ಉತ್ತಮವಾಗಿ ಸಾಕಬೇಕೆಂಬ ದೃಷ್ಟಿಯಿಂದ ತಾನು ವೇಶ್ಯಾವೃತ್ತಿಗೆ ಇಳಿದರೂ, ಮಗಳನ್ನು ಒಳ್ಳೆಯ ಜೀವನಕ್ಕೆ ತಲುಪಿಸಿದ ತೃಪ್ತಿ ತಾಯ್ತನದ ಪ್ರತೀಕ. ಮಗಳ ಸಂಸಾರವನ್ನು ಕಂಡು ಸಮಾಧಾನ ಚಿತ್ತಳಾಗುವ ಪರಿ. ಅಂತೆಯೇ ತಾನು ಅನೇಕ 'ಬದುಕಿನ ಬವಣೆ'ಯಲ್ಲಿ ನೊಂದು ಬೆಂದರೂ ಮಹೇಶನ ಮಗುವನ್ನು ಅವನ ಕೈಗೆ ತಲುಪಿಸುವವರೆಗೂ ಯಾತನೆಯ ಜೀವನವನ್ನೇ ಸವೆಸಿದರೂ, ಆತ್ಮತೃಪ್ತಿ ಪಡೆಯುವ ನಾಗು.

ತಾಯಿ ಮಗನ ಬದುಕಿನ ದುರಂತತೆಯನ್ನು ಚಿತ್ರಿಸುವುದರ ಜೊತೆಗೆ ಸಮಾಜದ ಒಪ್ಪಿತ ಮೌಲ್ಯಗಳನ್ನು ಗೌರವಿಸುವ ಅಂದಿನ ದೇವದಾಸಿ ಪದ್ಧತಿಯಲ್ಲಿದ್ದ ನೈತಿಕತೆ, ಪ್ರಾಮಾಣಿಕತೆಯನ್ನು ಮೈಮಾರಿ ಕೊಳ್ಳುವವರಾದರೂ ಅವರೂ ಮನುಷ್ಯರೇ, ಸಮಾಜದ ದೃಷ್ಟಿಯಲ್ಲಿ ಗೌರವ ಹೀನವಾಗಿ ಬದುಕಿನ ನಿಷ್ಠುರ ಹೊಡೆತಕ್ಕೆ ಸಿಕ್ಕಿ ತಮ್ಮ ಜೀವ ತೇಯುತ್ತಾ, ಕುಟುಂಬದ ಕ್ಷೇಮಕ್ಕೆ ತಮ್ಮನ್ನು ಅರ್ಪಿಸಿಕೊಂಡವರು ತಾಯ್ತನದ ಮೌಲ್ಯಕ್ಕೆ ಮೆರುಗು ತಂದವರು ಆರ್ಯಾಂಬರ 'ಬಸವಿ'ಯ ದುರ್ಗಿ ಮತ್ತು ಸಂಪಣ್ಣ.

ಶೀಲ ಪಾತಿವ್ರತ್ಯಗಳಂತೆಯೇ ತಾಯ್ತನವೂ ಸಹ ಹೆಣ್ಣನ್ನು ವಿವಿಧ ರೀತಿಯಲ್ಲಿ ಕಾಡುತ್ತಾ ಬಂದಿರುವ ಸಮಸ್ಯೆ ತಾಯ್ತನಕ್ಕೆ ಸಂಬಂಧಿಸಿದಂತೆ ಉಂಟಾಗುವ ವಿವಿಧ ರೀತಿಯ ಸಮಸ್ಯೆಗಳು ಕೃತಿಗಳಿಗೆ ವಸ್ತು. ಪಿತೃಪ್ರಧಾನ ವ್ಯವಸ್ಥೆ ತಾಯ್ತನದ ವಿಷಯದಲ್ಲಿ ಹೆಣ್ಣನ್ನು ಶೋಷಿಸುವ ಒಂದು ಪ್ರಬಲ ಅಸ್ತ್ರವಾಗಿ ಬಳಸಿಕೊಂಡಿದೆ. ತಾಯ್ತನವೇ ಹೆಣ್ಣಿನ ಆದರ್ಶ ಎಂಬ ಪರಂಪರಾಗತ ಮೌಲ್ಯದಿಂದಾಗಿ ತಾಯಿಯಾಗದ ಹೆಣ್ಣು ಕೌಟುಂಬಿಕವಾಗಿ ಸಾಮಾಜಿಕವಾಗಿ ಅನುಭವಿಸಬೇಕಾದ ಸಂಕಷ್ಟ, ವ್ಯಥೆ, ನೋವುಗಳನ್ನು ಹೆಣ್ಣುಮಕ್ಕಳ ಬದುಕಿನ ಸಮಸ್ಯೆಯಾಗಿ ಚಿತ್ರಿಸಲಾಗುತ್ತಿತ್ತು.

ಇಂದು ಅಂತಹ ಸಮಸ್ಯೆ ಇಲ್ಲವಾದರೂ ಅದೇ ಮೌಲ್ಯದ ಸುತ್ತ ಬೆಳೆದಿರುವ ಇನ್ನಿತರ ಅಂಶಗಳು ಹೇಗೆ ಹೆಣ್ಣಿನ ಬದುಕನ್ನು ಕಾಡುತ್ತದೆ ಎಂಬುದರತ್ತ ಲೇಖಕಿಯರ ಗಮನ ಹರಿದಿದೆ. ಯಾವ ಮಗು ಬೇಕು, ವಿಷ್ಟು ಮಕ್ಕಳು ಬೇಕು, ಯಾವಾಗ ಬೇಕು, ಮೊದಲಾದ ಎಲ್ಲಾ ವಿಷಯಗಳಲ್ಲಿ ಗಂಡಿನ ನಿರ್ಧಾರವೇ ಅಂತಿಮ. ಮುಂದುವರೆದು ಇದು ಇನ್ನೊಂದು ತಿರುವು ಪಡೆದಿದ್ದು, ಮಗುವನ್ನು ಬಯಸಿದಾಗಲೂ ಅದು ಗಂಡಿಗೆ ಬೇಡದಿದ್ದಾಗ ಅವಳು ತನ್ನ ಬಯಕೆಯಿಂದ ವಂಚಿತಳಾಗಬೇಕಾಗುತ್ತದೆ.

೧. ಪೌರುಷ : ಪ್ರಬಲ   ಸ್ತ್ರೀತ್ವ : ದುರ್ಬಲ

೨. ಗಂಡು ಪ್ರಬಲ : ಅಧಿಕಾರ ಉಳ್ಳವನು, ಹೆಣ್ಣು ದುರ್ಬಲ : ಅಧಿಕಾರವಿಲ್ಲದಾಗ

೩. ಹೆಣ್ಣು ಸ್ವೀಕರಿಸುವುದಕ್ಕೆ ಇರುವವಳು

೪. ಹೆಣ್ಣಿಗೆ ಅನೇಕ ಸಮಸ್ಯೆಗಳೇ ಇವೆ... ಇತ್ಯಾದಿ

೫. ಗಂಡು ಮತ್ತು ಹೆಣ್ಣು ಎನ್ನುವ ಪ್ರಭೇದದ ಮೇಲೆ ಪ್ರವರ್ತಿಸುವ ಋಣಾತ್ಮಕ ಮತ್ತು ಧನಾತ್ಮಕ ಮೌಲ್ಯಗಳು.

"ಹೆಣ್ಣಿನ ಬಗೆಗೆ ಋಣಾತ್ಮಕವಾಗಿ ನೋಡುವ ಮೌಲ್ಯಗಳು ಜಗತ್ತಿನ ಹೆಚ್ಚಿನ ಸಮಾಜಗಳಲ್ಲಿ ವ್ಯಕ್ತವಾಗಿರುತ್ತದೆ".[೮] ಹಾಗಾಗಿ ತನ್ನ ಹೊಟ್ಟೆಯಲ್ಲಿ ಪಾಪದ ಫಲವನ್ನು ಹೊತ್ತುಕೊಂಡು ತನ್ನ ತಂಗಿ ಮತ್ತು ತಂದೆ ತಾಯಿಗಳಿಗೆ ಮುಖ ತೋರಿಸಲಾಗದೆ ಅವಳ ಮನೆಯಿಂದ ಓಡಿ ಹೋಗಿ ಬೀದಿ ಬೀದಿಗಳಲ್ಲಿ ದಿನ ಕಳೆದು ಒಂದು ಹೆಣ್ಣು ಮಗುವಿಗೆ ಜನ್ಮವಿತ್ತು, ತಂದೆ ಆಸ್ತಿ ಇಲ್ಲದ ಹೆಣ್ಣಿಗೆ ಏನು ಭವಿಷ್ಯವೆಂದು ಚಿಂತಿಸಿ, ಕತ್ತು ಹಿಸುಕಿ ಅದನ್ನು ಸಾಯಿಸಿ, ಪೋಲೀಸರಿಂದ ಬಂಧನಕ್ಕೊಳಗಾಗಿ, ಶಿಶು ಹತ್ಯೆ ಆರೋಪದ ಮೇಲೆ ಐದು ವರ್ಷ ಶಿಕ್ಷೆಗೊಳಗಾಗುವ ತ್ರಿವೇಣಿಯವರ 'ಮೊದಲ ಹೆಜ್ಜೆ'ಯ ನಾಯಕಿ.

"ಮಹಿಳೆಗೆ ಇರುವ ಗರ್ಭ, ತಿಂಗಳ ಋತುಚಕ್ರ, ಶಾರೀರಿಕ ರಚನೆ, ಭಿನ್ನವೆನಿಸುವ ಧ್ವನಿ ಹೀಗೆ ಎಲ್ಲ ಬಗೆಯ ನೈಸರ್ಗಿಕ ವೈಶಿಷ್ಟ್ಯಗಳು ಅವಳನ್ನು ಮೂಲೆಗುಂಪಾಗಿಸುವ ಅಸ್ತ್ರಗಳಾದವು. ಈ ಎಲ್ಲವುಗಳನ್ನು ಅವಳ ವಿರುದ್ಧವೇ ಬಳಸಲಾಯಿತು. ಮಹಿಳೆಗೆ ಗರ್ಭ ಇರುವ ಕಾರಣವಾಗಿಯೇ ಮಗುವನ್ನು ಗರ್ಭದಲ್ಲಿರಿಸಿಕೊಂಡು ನವಮಾಸದ ತರುವಾಯ ನವಜೀವವೊಂದಕ್ಕೆ ಜನ್ಮ ಕೊಡುತ್ತಾಳೆ. ಅದೊಂದು ಶಕ್ತಿ ಸಾಮರ್ಥ್ಯದ ಸಾಧ್ಯತೆಯಾಗಿ ಸ್ವೀಕರಿಸಬೇಕಾದ ಅಂಶ. ಆದರೆ ಗರ್ಭ ಹೊಂದಿರುವುದೇ ಒಂದು ದೌರ್ಬಲ್ಯವೆಂದು ಪ್ರತಿಬಂಧಿಸುವ ಈ ವ್ಯವಸ್ಥೆಯು ತಿಂಗಳ ಮುಟ್ಟಿನ ಪ್ರಕ್ರಿಯೆಯನ್ನು ಹೊಲಸಿಗೆ ಹೋಲಿಸುತ್ತದೆ. ಪುರುಷ ಪ್ರಧಾನ ಮೌಲ್ಯಗಳ ಸಾಮಾಜಿಕ ಚೌಕಟ್ಟಿನಡಿಯಲ್ಲಿ ದಾಂಪತ್ಯದ ಫಲವಾಗಿ ಕಟ್ಟಿಕೊಳ್ಳುವ ಗರ್ಭಧಾರಣೆ ವೈಭವಕ್ಕೆ, ಹೊಗಳಿಕೆಗೆ ಭಾಜನವಾಗುತ್ತದೆ. ದೊಡ್ಡವರ ಮನೆಯ ಹೆಣ್ಣಿನ ಸೀಮಂತ ಊರಿಗೆ ಊರೇ ಹೆಮ್ಮೆ ಪಡುವ ಸಂಗತಿಯಾಗುತ್ತದೆ. ಇದರಾಚೆಗೆ ಕಟ್ಟಿಕೊಳ್ಳುವ ಗರ್ಭ ಎಲ್ಲಾ ಬಗೆಯ ತಾತ್ಸಾರಕ್ಕೆ ಅವಹೇಳನಕ್ಕೆ ಪಕ್ಕಾಗುತ್ತದೆ".[೯]

ತ್ರಿವೇಣಿಯವರ ಕಾದಂಬರಿಗಳನ್ನು ಮೂರು ರೀತಿಯ ಮೌಲ್ಯಗಳಿಗನುಸಾರವಾಗಿ ವಿಭಾಗಿಸಬಹುದು. ಸಾಮಾಜಿಕ ಮೌಲ್ಯ, ಕೌಟುಂಬಿಕ ಮೌಲ್ಯ, ಮನೋವೈಜ್ಞಾನಿಕ ಮೌಲ್ಯದ ಹಿನ್ನೆಲೆಯಲ್ಲಿ ಜೀವನ ಮೌಲ್ಯಗಳನ್ನು ಗುರುತಿಸಬಹುದು.

ಹೂವು ಹಣ್ಣು, ಅಪಸ್ವರ, ಕೀಲುಗೊಂಬೆ, ಮೊದಲ ಹೆಜ್ಜೆ, ಅಪಜಯ, ಕಂಕಣ, ಬೆಳ್ಳಿಮೋಡ, ಮುಕ್ತಿ, ಹಣ್ಣೆಲೆ ಚಿಗುರಿದಾಗ ಸಾಮಾಜಿಕ ಮೌಲ್ಯಗಳ ವ್ಯಾಪ್ತಿಯಲ್ಲೂ; ಸೋತು ಗೆದ್ದವಳು, ಹೃದಯಗೀತ, ಬಾನುಬೆಳಗಿತು, ಅವಳ ಮನೆ, ತಾವರೆಯ ಕೊಳ, ವಸಂತಗಾನ, ಕಾಶಿಯಾತ್ರೆ, ಅವಳ ಮಗಳು, ಕೌಟುಂಬಿಕ ಮೌಲ್ಯಗಳಾಗಿಯೂ, ಬೆಕ್ಕಿನಕಣ್ಣು, ದೂರದಬೆಟ್ಟ, ಮುಚ್ಚಿದ ಬಾಗಿಲು, ಶರಪಂಜರ, ಮನೋ ವೈಜ್ಞಾನಿಕ ಮೌಲ್ಯವಾಗಿಯೂ ಚಿತ್ರಿತವಾಗಿವೆ.

ಪು. ೨೧೧

ಆರ್ಯಾಂಬರ ಕಾದಂಬರಿಗಳಲ್ಲೂ ವೈವಿಧ್ಯಮಯತೆ ಕಾಣುತ್ತದೆ. ಬದುಕಿನ ಬವಣೆಯಲ್ಲಿ, ಆಹಾಡು, ಬಂಡಾಯ, ಪತಿತಪಾವನ, ಪ್ರಕೃತಿಪುರಷ, ಬಸವಿ, ಅಸಂಗತ, ಪ್ರೇಮಕತೆ, ಬೇವುಬೆಲ್ಲ, ಮರಳಿಗೂಡಿಗೆ ಇತ್ಯಾದಿಗಳು ಸಾಮಾಜಿಕ ಮೌಲ್ಯಗಳಡಿಯಲ್ಲೂ, ಹೊಂಗನಸು, ಆರಾಧನೆ, ದೇವಮಾನವ, ಪರಂಪರೆ, ಕಸ್ತೂರಿ, ಕಾಮನಬಿಲ್ಲು, ಯಜ್ಞಪಶು, ಬಲೆ, ಅಪೂರ್ವಕತೆ, ಗುರಿ, ಸಂಬಂಧಗಳು, ಕೌಟುಂಬಿಕ ನೆಲೆಯಲ್ಲಿಯೂ ಪ್ರಿಯಸಂಗಮ, ಮಾನವೀಯ ಮೌಲ್ಯಕ್ಕೂ, ಕಪ್ಪು ಬಿಳುಪು, ಸವತಿಯ ನೆರಳು, ಮೌಲ್ಯ ಸಂಘರ್ಷಕ್ಕೂ ವಿಭಾಗಿಸಬಹುದು. ಎರಡು ಮುಖ ಮನೋವೈಜ್ಞಾನಿಕ ಮೌಲ್ಯವಾಗಿ ಚಿತ್ರಿತವಾಗಿದೆ.

ತ್ರಿವೇಣಿಯವರ ಕಾದಂಬರಿಗಳಂತೆ ಗೆರೆ ಎಳೆದು ಈ ವರ್ಗಕ್ಕೆ ಸೇರಿವೆ ಎಂಬ ಖಚಿತ ಅಭಿಪ್ರಾಯಕ್ಕೆ ಆರ್ಯಾಂಬರ ಕಾದಂಬರಿಗಳನ್ನು ತಿಳಿಸಲಾಗುವುದಿಲ್ಲ. ಏಕೆಂದರೆ, ವಸ್ತುವೈವಿಧ್ಯ ತ್ರಿವೇಣಿಯವರ ಕಾದಂಬರಿಗಳಿಗಿಂತ ಆರ್ಯಾಂಬರ ರಚನೆಗಳಲ್ಲಿ ಕಾಣುತ್ತದೆ.

ನಮ್ಮೆಲ್ಲಾ ಕೆಲಸಗಳಿಗೆ ಆಲೋಚನೆಗಳಿಗೆ ಮಾನವೀಯ ಮೌಲ್ಯಗಳೇ ಆಧಾರವಾಗಬೇಕು. ಈ ಮೌಲ್ಯಗಳು ಯಾವುವು? ಮನುಷ್ಯ ಎಂದ ಮೇಲೆ ಉಪ್ಪು, ಹುಳಿ, ಖಾರ ತಿನ್ನುವ ವ್ಯಕ್ತಿ ಎಂದೂ ಜೀವನದಲ್ಲಿ ಕಾಣುವ ಸಕಲ ಭಾವನೆಗಳೂ ಮಾನವನ ಅಂಗವೆಂದು ಪರಿಗಣಿಸುತ್ತೇವೆಯಾಗಿ, ಮಾನವೀಯ ಮೌಲ್ಯಗಳು ಇದರಿಂದ ಹೇಗೆ ಭಿನ್ನ ಎಂಬ ಪ್ರಶ್ನೆ ಏಳುತ್ತದೆ. ಪ್ರೀತಿ, ವಿಶ್ವಾಸದಿಂದ ಮಾತನಾಡುವ ಹಾಗೆ ಕೋಪದಿಂದ ಜಗಳಕ್ಕೆ ಇಳಿಯುವುದು ಮಾನವ ಜೀವನದ ಅಂಗ. ಪ್ರೀತಿ ವಿಶ್ವಾಸವನ್ನು ಮೌಲ್ಯದಲ್ಲಿ ಸೇರಿಸಿದಂತೆ ಕ್ರೋಧ, ರೋಷವನ್ನು ಮೌಲ್ಯದಲ್ಲಿ ಸೇರಿಸಿದಂತೆ ಕ್ರೋಧ, ರೋಷವನ್ನು ಮೌಲ್ಯದಲ್ಲಿ ಯಾರೂ ಸೇರಿಸಬಾರದೆಂಬ ಪ್ರಶ್ನೆ ಏಳುತ್ತದೆ.

ಈ ಹಂತದಲ್ಲಿ ನಾವು ಭಾವನೆಗಳನ್ನು ಹಾಗೂ ಮೌಲ್ಯಗಳನ್ನು ಭಿನ್ನವಾಗಿ ನೋಡುವ ಕಲೆಯನ್ನು ಕಲಿಯಬೇಕು. ಮಾನವೀಯ ಕೃತ್ಯಗಳ ವಿಶ್ಲೇಷಣೆ ನಡೆಸುವಾಗ ನಾವು ಬಹುಪಾಲು ಈ ದ್ವಂದ್ವದಲ್ಲಿ ಸಿಕ್ಕಿಕೊಳ್ಳುತ್ತೇವೆ. ಜೀವನವನ್ನು ನಡೆಸುವಾಗ ಪ್ರೀತಿ, ವಿಶ್ವಾಸ, ಕರುಣೆ, ವಾತ್ಸಲ್ಯದಂತಹ 'ಮೃದು' ಭಾವನೆಗಳ ಜೊತೆಗೆ ಕೋಪ, ರೋಷ, ದುಃಖ, ಮಾತ್ಸರ್ಯದಂತಹ ಅಂಗ ಭಾವನೆಗಳೇ ಆದರೂ, ಇವೆಲ್ಲವೂ ಜೀವನದ ಅಂಗವೇ ಆದರೂ ಇವೆಲ್ಲಾ ಮೌಲ್ಯಗಳಾಗುವುದಿಲ್ಲ.

ಹಾಗಾದರೆ, ಭಾವನೆಗಳು ಯಾವಾಗ ಮೌಲ್ಯಗಳಾಗಿ ಪರಿವರ್ತನೆಗೊಳ್ಳುತ್ತವೆ? ಈ ಪ್ರಶ್ನೆಗೆ ಉತ್ತರವನ್ನು ಬೇರೆ ಬೇರೆ ಸ್ತರಗಳಲ್ಲಿ ಹುಡುಕಬಹುದು. ಮೊದಲನೆಯದು ಸಾಮಾಜಿಕ ನ್ಯಾಯದ ದಾರಿ "ಯಾವುವು ಸಮಾಜದಲ್ಲಿರುವ ಎಲ್ಲಾ ಜನರನ್ನೂ ಒಂದಾಗಿ ಕಾಣಬಲ್ಲವೋ, ಅವು ಮಾನವೀಯ ಮೌಲ್ಯಗಳು".[೧೦] ಹೆಣ್ಣು ಗಂಡು ಭೇದವೆನಿಸದೆ ಹುಟ್ಟಿದ ನೆಲ, ಜಾತಿ, ಧರ್ಮ ಎಂದು ವ್ಯತ್ಯಾಸವೆಣಿಸಿದೆ ಯಾವ ಭಾವನೆಗಳು ನ್ಯಾಯವನ್ನು ದೊರಕಿಸಿಕೊಡಬಲ್ಲವೋ ಅವನ್ನು ಮೌಲ್ಯಗಳಾಗಿ ಪರಿಗಣಿಸಬಹುದು.

ಎರಡನೆಯದು, ವೈಯಕ್ತಿಕ ನ್ಯಾಯದ ದಾರಿ, ವ್ಯಕ್ತಿಗೆ ಈ ಭೂಮಿಯ ಮೇಲೆ ಜೀವನ ನಡೆಸಲು ಆ ಜೀವನವನ್ನು ಶ್ರೀಮಂತಗೊಳಿಸಿಕೊಳ್ಳಲು ತನ್ನ ಸುತ್ತ ಇರುವ ಜೀವಿಗಳನ್ನು ತನ್ನ ಬಾಳಿನ ಜೊತೆ ಹೆಣೆದುಕೊಂಡು ಜೀವನ ನಡೆಸುವಂತೆ ಮಾಡಲು ಸ್ವಾತಂತ್ರ್ಯವಿದೆ. ಈ ಸ್ವಾತಂತ್ರ್ಯಕ್ಕೆ ಇಂಬುಗೊಡುವ ಭಾವನೆಗಳನ್ನು ನಾವು ಮೌಲ್ಯಗಳಾಗಿ ಪರಿಗಣಿಸುತ್ತೇವೆ. ಈ ಮೌಲ್ಯಗಳು ವ್ಯಕ್ತಿಯ ಸ್ವಾತಂತ್ರ್ಯವನ್ನು ಕಾಪಾಡಿತು ಎಂದ ಮಾತ್ರಕ್ಕೆ ಮತ್ತೊಬ್ಬರ ಸ್ವಾತಂತ್ರ್ಯದ ಹರಣಕ್ಕೆ ವ್ಯಕ್ತಿ ಪ್ರಯತ್ನಿಸಲು ಇವು ಅವಕಾಶ ನೀಡುವುದಿಲ್ಲ.

ಆರ್ಯಾಂಬ ಪಟ್ಟಾಭಿಯವರ ಕಾದಂಬರಿ 'ಪ್ರಿಯಸಂಗಮ'ದಲ್ಲಿ ಪೋಲಿಯೋ ಕಾಯಿಲೆಗೆ ಬಲಿಯಾಗಿ ಕಾಲನ್ನು ಕಳೆದುಕೊಂಡ ಹೆಣ್ಣೊಬ್ಬಳ ದಾರುಣ ಚಿತ್ರಣವಿದೆ. ಅಂಗವಿಕಲತೆಯೂ ಒಂದು ಗಂಭೀರ ಸಮಸ್ಯೆಯೇ, ಅವರ ಶರೀರ ಊನವಾಗಿದ್ದರೂ ಮನಸ್ಸು ಎಲ್ಲರಿಗೂ ಒಂದೇ, ಅವರ ಅಂತರಂಗವನ್ನು ಅರ್ಥೈಸಿಕೊಂಡು ಅವರ ಭವಿಷ್ಯದ ಹಿತವನ್ನು ಹಾರೈಸಿ, ತಂದೆ ತಾಯಿಯರು ಹೆಣ್ಣಿಗೆ ಪ್ರೋತ್ಸಾಹ ತೋರಿಸಬೇಕು. ಹಾಗೆಯೇ ವಿವೇಕಶೀಲ ತರುಣರು ಮಾನವೀಯತೆಯಿಂದ ಅವರಿಗೆ ಹೊಸ ಬದುಕನ್ನು ಕಲ್ಪಿಸಿಕೊಡಬೇಕು. ಹೀಗಾದಾಗ ಮಾತ್ರ ಈ ಸಮಸ್ಯೆ ಪರಿಹಾರವಾಗಬಲ್ಲದು ಎಂಬುದರ ಸ್ಪಷ್ಟ ಚಿತ್ರಣದ ಕಾದಂಬರಿ.

ಎಳೆತನದಲ್ಲೇ ಪೋಲಿಯೋ ಕಾಯಿಲೆಗೆ ಬಲಿಯಾಗಿ ಕಾಲನ್ನು ಕಳೆದುಕೊಂಡ ಹೆಣ್ಣೊಬ್ಬಳು, ಬಾಳ್ವೆ ತನ್ನ ಮುಂದಿಟ್ಟ ಉಗ್ರಪರೀಕ್ಷೆಯಲ್ಲಿ ಧೃತಿಗೆಡದೆ ಊರ್ಧ್ವಮುಖಿಯಾಗಿ ಹೇಗೆ ಮುನ್ನಡೆವಳು ಎಂಬುದರ ಚಿತ್ರಣವಿದೆ. ಅದರಲ್ಲೂ ಗಂಗಳ ತಂದೆತಾಯಿ ಅವಳ ವಿಷಯದಲ್ಲಿ ವಿಶೇಷವಾಗಿ ತೋರುತ್ತಿದ್ದ, ಪ್ರೀತಿ ಮಗಳ ಕಾಲನ್ನು ಸರಿಪಡಿಸುವುದಕ್ಕೆ ಅವರು ಪಟ್ಟ ಶ್ರಮ, ಎಲ್ಲವನ್ನೂ ಲೇಖಕಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಇಲ್ಲಿನ ಸಮಸ್ಯೆ ಮಿಡಿಯುವ ಮಾನವೀಯ ಮೌಲ್ಯಗಳಿರುವ ಕಾರಣದಿಂದಾಗಿಯೇ ಇದೊಂದು ಮೌಲ್ಯಧಾರಿತ ಕಾದಂಬರಿ.

'ತ್ಯಾಗ' ಮನೋಭಾವನೆಯ ಒಂದು ಶ್ರೇಷ್ಠ ಜೀವನಮೌಲ್ಯ, ಮಾನವೀಯ ಮೌಲ್ಯ ಇತರರ ಶ್ರೇಯಸ್ಸಿಗಾಗಿ ಮಾನವ ತನ್ನ ತನು, ಮನ, ಧನಗಳನ್ನು ಅರ್ಪಿಸಿ ಮಾಡುವುದೇ ತ್ಯಾಗ. ತ್ಯಾಗ ಎಂಬುದು ಒಂದು ಅಮೂಲ್ಯವಾದ ಗುಣ ಸಂಪತ್ತು. ಕೇವಲ ತನ್ನಲ್ಲಿ ಹೆಚ್ಚಾಗಿರುವ ಸಿರಿ ಸಂಪತ್ತು, ಅನ್ನ, ಆಹಾರಾದಿಗಳನ್ನು ಮತ್ತೊಬ್ಬರಿಗೆ ದಾನ ಮಾಡುವುದಷ್ಟೇ ತ್ಯಾಗವಲ್ಲ. ತ್ಯಾಗವು ತನ್ನದೇ ಆದ ಪ್ರಮುಖ ಗುಣಲಕ್ಷಣ ಹೊಂದಿದೆ.

ತ್ಯಜಿಸುವುದು ತ್ಯಾಗವಾಗುತ್ತದೆ. ಆದರೆ, ಒಂದು ವಸ್ತುವಿನ ಒಡೆತನವನ್ನು ಬಿಡುವುದು ತ್ಯಾಗ ಎನಿಸುತ್ತದೆ. ತ್ಯಜಿಸುವ ಎಲ್ಲಾ ಪ್ರಕ್ರಿಯೆ ತ್ಯಾಗ ಎನಿಸುವುದಿಲ್ಲ ಎಂಬುದು ಮುಖ್ಯ. ಸಾಧಾರಣ ರೂಪು ಇದ್ದರು ಬಡತನ ಕಿರಿಯರ ಭವಿಷ್ಯವನ್ನು ತನ್ನ ದುಡಿಮೆಯ ಮೇಲೆ ಅವಲಂಬಿಸಿ ಜೀವನ ನಿರ್ವಹಿಸಬೇಕಾದ ಕರ್ತವ್ಯದ 'ಕಂಕಣ'ಕ್ಕೆ ಕಟಿಬದ್ಧಳಾದ ರಮಾ ಮದುವೆಯ ವಯಸ್ಸಿಗೆ ಬಂದರೂ ಅದನ್ನು ಹೇಳಲು ಆಶಿಸಲು ಒಪ್ಪದ ಮನಸ್ಥಿತಿಗೆ ತನ್ನನ್ನ ತಾನು ಹೊಂದಿಸಿಕೊಂಡು ದುಡಿಮೆಗೆ ಶರಣಾದ ರಮಾ ನಾನು ಸುಂದರವಾಗಿದ್ದೀಯಾ ನಾನು ನಿನ್ನನ್ನು ಪ್ರೀತಿಸುತ್ತೇನೆ. ನನ್ನನ್ನು ಮದುವೆಯಾಗುತ್ತೀಯಾ ಎಂದು ಪ್ರೇಮಯಾಚಿಸಿದ ನಾಗೇಂದ್ರನನ್ನು ಬಡತನದ ಬೇಗೆಯಲ್ಲಿ ಬೆಂದ ಕುಟುಂಬವನ್ನು ಸರಿದೂಗಿಸಲಾಗದೆ ರಮಾ ತಂಗಿಯರ ಆಸೆ ಪೂರೈಸಲು ಅವರನ್ನು ಸರಿದೂಗಿಸಲು ಮನಸ್ಸಿಲ್ಲದ ಮನಸ್ಸಿನಿಂದಲೇ ಅನಿವಾರ್ಯವಾಗಿ ತಿರಸ್ಕರಿಸಿ ಕುರುಡ ಸೂರ್ಯನಾರಾಯಣನನ್ನು ಮದುವೆಯಾಗುತ್ತೇನೆಂದು ಹೊರಡುವ ತ್ಯಾಗಮಯಿಯಾದಳು.

ಮಧ್ಯಮ ಕುಟುಂಬದವರೇ ಆದರೂ ತಂದೆಯ ಸಾವಿನಿಂದ ತತ್ತರಿಸಿದ ಕುಟುಂಬದ ನಿರ್ವಹಣೆಯ ಭಾರವನ್ನು ಅನಿವಾರ್ಯವಾಗಿ ಹೊರಬೇಕಾದ ಪರಿಸ್ಥಿತಿ ರಮಾಳ ಪಾಲಿಗೆ ವಯಸ್ಸಿಗೆ ಬಂದ ಮಗಳನ್ನು ಮದುವೆ ಮಾಡಿ ಕಳುಹಿಸಲಾಗದೆ ತೊಳಲಾಡುವ ತಾಯಿ. ಕುಟುಂಬದ ನೊಗವನ್ನು ಹೊರಲು ರಮಾಳನ್ನು ಅನಿವಾರ್ಯವಾಗಿ ನೂಕಿದ್ದು, ಮನೆಯ ಪರಿಸ್ಥಿತಿಯನ್ನು ಎಳ್ಳಷ್ಟೂ ಯೋಚಿಸದ ತಂಗಿ ಜಾನಕಿ ನಟಿಯಾಗುವ ಬಯಕೆಯನ್ನು ವ್ಯಕ್ತಪಡಿಸಿದ್ದು, ಚಾಪಲ್ಯಚಿತ್ತಕ್ಕೆ ಒಳಗಾಗಿ ಕಳ್ಳತನಕ್ಕೆ ಇಳಿದಿದ್ದ ರಾಮ. ಸದಾ ಅನಾರೋಗ್ಯಪೀಡಿತ ಸುಧಾ, ಕಿರಿಯವನಾದ ಲಕ್ಷ್ಮಣ ಎಲ್ಲರೂ ಬಡತನದ ದಾರಿದ್ರ್ಯ ಚಿತೆಯಲ್ಲಿ ಅದರಿಂದ ದೂರ ಸರಿಯಲು ಆಗದೆ ಹಿರಿಯಕ್ಕಳಾದ ರಮೆಯ ಸಂತಸಕ್ಕೆ ದಾರಿ ಮಾಡದೆ ಅವಳ ದುಡಿಮೆಗೆ ಮುಂದೆ ಬಂದದ್ದು ಅಥವಾ ಯೋಚಿಸಿದ್ದು ಈ ಒಳಸುಳಿಗಳಿಂದಲೇ.

ಅಮೃತಾ ಹೇಳಿದ ಒಂದು ಮಾತು ಸುಶೀಲಾ ಇಷ್ಟೊಂದು ಅದ್ದೂರಿಯಾಗಿ ಸೀರೆ ಉಡಲು ಖರ್ಚು ಮಾಡಲು ಹುಡುಕಿದ ದಾರಿ ಇದು ಎನ್ನುವುದರ ಬಗ್ಗೆ ಅಷ್ಟೊಂದು ಚಿಂತನಮಂಥನ ಮಾಡಿ ನಟಿಯಾಗಿ ಹಣ ಸಂಪಾದಿಸುವ ಮನಸ್ಥಿತಿಗೆ ಇಳಿದು ರತ್ನಳ ಮೊರೆಹೋದ ಜಾನಕಿ, ನಮಗೋಸ್ಕರ ನನ್ನಕ್ಕ ತನ್ನ ಜೀವನವನ್ನೇ ಮುಡುಪಾಗಿಟ್ಟಿದ್ದಾಳೆ ಅವಳಿಗೆ ನಾನು ಕೂಡ ಸಹಕರಿಸುವ ಎಂಬ ಭಾವನೆಯೊಂದಿಗೆ ಓದಿಯೋ, ಆಗದಿದ್ದರೆ ಅವಳ ಓದಿಗೆ ಅನುಕೂಲವಾಗುವ ಹಾಗೆ ಸಣ್ಣಪುಟ್ಟ ಕೆಲಸ ಮಾಡಿ ಜೀವನ ನಿರ್ವಹಣೆಗೆ ಸಹಕರಿಸಬಹುದಾಗಿತ್ತು.

'ಭಗವದ್ಗೀತೆ'ಯಲ್ಲಿ ಶ್ರೀಕೃಷ್ಣ ಹೇಳಿದಂತೆ ಅಪಾತ್ರರಿಗೆ ದಾನ ಮಾಡಬಾರದು ಎಂಬಂತೆ ಇಂಥ ಕುಟುಂಬ ಸದಸ್ಯರಿಗೆ ತಮ್ಮ ಜೀವನ ತ್ಯಾಗ ಮಾಡುವುದು ದುರಂತವೇ ಸರಿ. ಅಂತಹವರ ಬಳಿ ತ್ಯಾಗಕ್ಕೆ ಬೆಲೆ ಇಲ್ಲ ಎಲ್ಲದಕ್ಕೂ ಅಸಹಾಯಕತೆಯನ್ನು ಪ್ರಕಟಿಸುವ ತಾಯಿ ಜಾನಕಿಯ ವಿಷಯದಲ್ಲಿ ಕೈ ಚೆಲ್ಲುವುದು ಸುಮ್ಮನಿರುವುದು ತರವಲ್ಲ. ರಮಾಳು ಹಾಗೆಯೇ ಆಗಿದ್ದರೆ ಕುಟುಂಬದ ಗತಿ. ಆದ್ದರಿಂದ ಜವಾಬ್ದಾರಿ ನಿರ್ವಹಿಸಬೇಕೆಂದು ಮುಂದೆ ನಿಂತವಳಿಗೆ ಕುಟುಂಬದ ಸದಸ್ಯರು ಸಹಕಾರ, ಸ್ಪಂದನೆ ನೀಡಬೇಕಾದ್ದು ಅವರ ಕರ್ತವ್ಯ ಧರ್ಮ ಆದರೆ, ಇಲ್ಲಿ ಹಾಗಾಗದೆ ಇದ್ದದ್ದು ಶೋಚನೀಯ.

ಕುಟುಂಬದ ಜವಾಬ್ದಾರಿಯನ್ನು ಮಗಳ ಮೇಲೆ ಹೇರಿದ ತಾಯಿ, ಅಸಹಾಯತೆಯ ಪ್ರತೀಕ, ಅನಿವಾರ್ಯವಾಗಿ ಹೊರೆ ಹೊತ್ತ ರಮಾ ತ್ಯಾಗದ ಪ್ರತೀಕ, ಕುಟುಂಬದ ಸ್ಥಿತಿಯನ್ನು ಅವಲೋಕಿಸದ ಜಾನಕಿ ಸ್ವಾರ್ಥದ ಪ್ರತೀಕ, ಇತರ ವಿಷಯ ತಿಳಿಯದಿದ್ದರು ಕದಿಯುವ ರೂಢಿ ಮಾಡಿಕೊಂಡ ರಾಮ ದೌರ್ಬಲ್ಯದ ಪ್ರತೀಕ, ಸದಾ ಬೇರೆಯವರ ಆರೈಕೆಗೆ ಸಿದ್ಧಳಾಗಿರುವ ಸುಧಾ ಅನಾರೋಗ್ಯದ ಪ್ರತೀಕ, ಲಕ್ಷ್ಮಣ ಕಿರಿಯ ಪ್ರತೀಕ, ಈ ಪರದಾಟದಿಂದ ಬೇಸತ್ತು ರಮಾ ಸೂರ್ಯನಾರಾಯಣನನ್ನು ವಿವಾಹವಾಗಲು ಒಪ್ಪಿದ್ದು, ಪ್ರೀತಿಸಿದ ಮೆಚ್ಚಿದ ನಾಗೇಂದ್ರನನ್ನೇ ತ್ಯಜಿಸಲು ಮುಂದಾಗುವುದು ಅವಳ ಕುಟುಂಬದ ಪೋಷಣೆಯ ಆ ಧಾವಂತ ತೀವ್ರತೆ ಅವಳನ್ನು ಇಂಥ ಗಟ್ಟಿ ನಿರ್ಧಾರಕ್ಕೆ ಮುಂದಾಗಿಸಿದ್ದು, ಅವಳೇ ಹೇಳುವಂತೆ ನಾನು ಕಟ್ಟಿಕೊಳ್ಳುವುದು ಮದುವೆಯ ಕಂಕಣವಲ್ಲ, ಕರ್ತವ್ಯದ ಕಂಕಣ.

'ಕಂಕಣ'ದಲ್ಲಿ ಬರುವ ಮತ್ತೊಂದು ತ್ಯಾಗಮಯಿ ಪಾತ್ರ ಅಮೃತಾ. ಹೆಸರಿಗೆ ತಕ್ಕಂತೆ ತಾನು ವಿಷದ ಗಳಿಗೆಯನ್ನು ಎದುರಿಸಿದರೂ ತಮ್ಮಂದಿರು ಅಮೃತದಂಥ ಜೀವನ ಪಡೆಯಲು ಆಶಿಸಿದವಳು. ಸಾಧ್ಯಮಾಡಿದ ಮತ್ತೊಂದು ತ್ಯಾಗದ ಮಜಲು. ಸ್ವಲ್ಪ ಕುರೂಪಿಯಾದ ಅಮೃತಾಳನ್ನು ಬರುವ ಗಂಡುಗಳು ಒಪ್ಪದಿದ್ದಾಗ ಬಾಹ್ಯ ಸೌಂದರ್ಯದ ಕೊರತೆಯಿಂದ ಅಮೃತ ಆಂತರಿಕ ಸೌಂದರ್ಯದ ಒಡತಿಯಾಗಿ ತನಗೆ ಸಿಗದ ಆನಂದದ ಕ್ಷಣ ಮತ್ತೊಬ್ಬರಿಗೆ ಸಿಗುವುದನ್ನು ತಪ್ಪಿಸಲಿಲ್ಲ. ಆದ್ದರಿಂದಲೇ ರತ್ನ ಬಾಲುವಿಗೆ ಮದುವೆಯಾಗಲು ಒಪ್ಪಿಗೆ ಸೂಚಿಸಿ ತನ್ನ ವ್ಯಕ್ತಿತ್ವಕ್ಕೆ ಒರೆಹಚ್ಚುವ ಪ್ರಯತ್ನ ಮಾಡಿದ್ದಾಳೆ.

ತನಗಿಂತ ಕಿರಿಯವನಾದ ತಮ್ಮನ ಬಾಳಿಗೆ ನಾನೇಕೆ ಮುಳುವಾಗಲಿ, ಅವರ ಮುಂದಿನ ಜೀವನವಾದರೂ ಯಶಸ್ವಿಯಾಗಲಿ ಎಂದು ಹಾರೈಸಿ, ಎಲ್ಲರನ್ನೂ ಒಪ್ಪಿಸುವಳು. ಅವಳ ಮನೋಸ್ಥೈರ್ಯ ಮೆಚ್ಚುವಂಥದ್ದು, ಹೆಣ್ಣು ತ್ಯಾಗಜೀವಿ ಎಂಬುದನ್ನು ಅಮೃತಾ ಪಾತ್ರದ ಮೂಲಕ ಮತ್ತೊಮ್ಮೆ ನಿರೂಪಿಸಿದ್ದಾರೆ ಲೇಖಕಿ ತ್ರಿವೇಣಿಯವರು.

'ಕಾಶೀಯಾತ್ರೆ' ತ್ರಿವೇಣಿಯ ಮತ್ತೊಂದು ಯಶಸ್ವಿ ಕಾದಂಬರಿ, ಇದರ ಕೇಂದ್ರ ಪಾತಜ್ಜಿಯ ಜೀವನ ಚಿತ್ರದ ಮೂಲಕ ಅವಳ ಸುತ್ತಮುತ್ತಲಿನ ಸಮಾಜದ ನೈಜ ಚಿತ್ರಣವನ್ನು ತೋರಿಸುವ ಕಾದಂಬರಿ. ತನ್ನ ಜೀವನದ ಅಂತಿಮ ಆಸೆ 'ಕಾಶೀಯಾತ್ರೆ'. ಅದು ತಾನು ಕೂಡಿಟ್ಟ ಹಣದಿಂದಲೇ ಹೋಗಬೇಕೆನ್ನುವ ಸ್ವಾಭಿಮಾನ. ಅದಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟು ಶ್ರಮಿಸುವ ಜೀವಿ. ಅವರಿವರ ಮನೆಯಲ್ಲಿ ಅವಲಕ್ಕಿ ಕುಟ್ಟಿ, ಮೆಣಸಿನ ಪುಡಿ ಮಾಡಿ, ಹಣ ಕೂಡಿಟ್ಟು ತಮ್ಮ ಜೀವಮಾನದ ಬಯಕೆಯನ್ನು ಈಡೇರಿಸಿಕೊಳ್ಳುವ ಹಂತದಲ್ಲಿ, ಆ ಹಣವನ್ನು ಬಡಹುಡುಗಿ ಮಂಗಳೆಯ ಮದುವೆಗಾಗಿ ಪ್ರಾಂಜಲ ಮನಸ್ಸಿನಿಂದ ನೀಡಿ ತ್ಯಾಗ ಮೆರೆಯುವ ತ್ಯಾಗ ಜೀವಿಯಾಗಿ ಹೊರಹೊಮ್ಮಿದ್ದಾರೆ.

ಏಕೆಂದರೆ, "ಒಂದು ವಸ್ತುವಿನ ಒಡೆತನ ಐದು ವಿಧಗಳಲ್ಲಿ ತ್ಯಜಿಸಲ್ಪಡುತ್ತದೆ ಎಂದು ಶ್ರೀ ಪ್ರ.ಗು.ಸಹಸ್ರಬುದ್ಧೆರವರು ತಮ್ಮ ಜೀವನ ಮೌಲ್ಯಗಳು ಪುಸ್ತಕದಲ್ಲಿ ವಿವರಿಸಿದ್ದಾರೆ.

೧. ನಾಶ : ಪ್ರಕೃತಿಯು ನಿಯಮದಂತೆ ನಾಶವಾಗುತ್ತದೆ ಇಲ್ಲಿ ಮನಸ್ಸಿಗೆ ಬಹು ದುಃಖ ಉಂಟಾಗುತ್ತದೆ ಹಾಗೂ ಜೀವ ತುಂಬಾ ಸಂಕಟವಾಗುತ್ತದೆ.

೨. ಅಪಹರಣ : ತನ್ನಲ್ಲಿರುವ ವಸ್ತು, ಸಿರಿ ಸಂಪತ್ತು ಅಪಹರಣವಾಗುವುದು, ಆವಾಗಲೂ ಮನಸ್ಸಿಗೆ ತುಂಬಾ ದುಃಖ ಉಂಟಾಗುತ್ತದೆ. ಪುನಃ ಪಡೆಯಬೇಕು, ಪ್ರಾಪ್ತಿ ಮಾಡಿಕೊಳ್ಳಬೇಕು ಎಂಬ ಹೆಬ್ಬಯಕೆಯಿಂದ ಮಿಡಿಯುತ್ತದೆ ಮನಸ್ಸು. ತತ್ಫಲವಾಗಿ ಕ್ರೋಧ ಉಂಟಾಗುತ್ತದೆ.

೩. ಮಾರಾಟ : ತನ್ನ ಒಡೆತನದಲ್ಲಿರುವ ವಸ್ತುವನ್ನು ಮಾರಾಟ ಮಾಡುವುದರಿಂದಲೂ ತ್ಯಜಿಸಿದಂತಾಗುತ್ತದೆ ಇಲ್ಲಿ ಮಾರಾಟಕ್ಕೆ ತಕ್ಕ ಬೆಲೆ ಬರುತ್ತದೆ. ದ್ರವ್ಯ ಇಲ್ಲವೇ ವಸ್ತು ರೂಪದಲ್ಲಿ ಬೆಲೆ ಸಿಗುತ್ತದೆ. ಇಲ್ಲಿಯೂ ಕೂಡಾ ತ್ಯಜಿಸುವಿಕೆ ಇದೆ. ಆದರೆ, ಇಲ್ಲಿ ತ್ಯಜಿಸಿದ ವಸ್ತುವಿಗೆ ದ್ರವ್ಯ ದೊರೆಯುತ್ತದೆಂಬ ಮೋಹ ಹೆಚ್ಚಾಗಿರುತ್ತದೆ. ಅದಕ್ಕಾಗಿ ಕಾತರಿಸುತ್ತಿರುತ್ತದೆ ಮನಸ್ಸು.

೪. ದಾನ : ತನ್ನಲ್ಲಿ ಹೆಚ್ಚಾಗಿರಲಿ, ಇಲ್ಲದಿರಲಿ ಇರುವುದನ್ನೇ ಸಂಬಂಧವಿರಲಿ, ಇರದಿರಲಿ, ಬಂಧು ಬಳಗವಿರಲಿ, ಇಲ್ಲದಿರಲಿ ಮಾನವೀಯ ದೃಷ್ಟಿಯಿಂದ ತನ್ನಲ್ಲಿರುವುದನ್ನು ಇತರರಿಗೆ ನೀಡುವುವೇ ದಾನ. ಕೊಟ್ಟು ಸಂತೋಷ ಪಡುವ ಹಾಗೂ ಇತರರನ್ನು ಸಂತೋಷಗೊಳಿಸುವ ಗುಣ ಇದಾಗಿದೆ. ಇದು ಮೊದಲ ಮೂರಕ್ಕಿಂತ ಶ್ರೇಷ್ಠವಾದದ್ದು ಎನಿಸಿದರೂ ಇದು ಕೂಡಾ ತ್ಯಾಗ ಎನಿಸಿಕೊಳ್ಳದು. ಏಕೆಂದರೆ, ಇಲ್ಲಿಯೂ ಕೂಡಾ ಕೀರ್ತಿ, ಪ್ರತಿಷ್ಠೆ ದೊರೆಯುವುದೆಂಬ ಹಂಬಲಿಕೆ ಇರುತ್ತದೆ. ಅಲ್ಲದೆ ಅಹಂಕಾರಕ್ಕೆ ಕೋಡು ಮೂಡುವ ಸಾಧ್ಯತೆ ಇದೆ. ಆದರೆ ಪ್ರತಿಫಲಾಪೇಕ್ಷೆಯಿಂದ ಮಾಡಿದ ದಾನ ತ್ಯಾಗದ ಸ್ಥಾನವನ್ನು ತುಂಬಲಾರದು.

೫. ತ್ಯಾಗ : ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕೀರ್ತಿ, ಪ್ರತಿಷ್ಠೆ, ಹೊಗಳಿಕೆ, ತೆಗಳಿಕೆಗಳ ಬಗೆಗೆ ಕಿಂಚಿತ್ ಕೂಡಾ ಚಿಂತಿಸದೆ ಹಮ್ಮು ಬಿಮ್ಮುಗಳಲ್ಲಿಯೂ ಸತ್‌ಚಿತ್ತದಿಂದ ನೀಡಿದ ದಾನ ತ್ಯಾಗ ಎನಿಸುತ್ತದೆ".[೧೧]

ತ್ರಿವೇಣಿಯವರ 'ಕಾಶೀಯಾತ್ರೆ'ಯ ಪಾತಜ್ಜಿ ತ್ಯಾಗ ಈ ಬಗೆಯದು, ನಿಸ್ವಾರ್ಥವುಳ್ಳದ್ದು.

ಆರ್ಯಾಂಬರ 'ದೇವಮಾನವ' ಕೃಷ್ಣ ಸೀತಾಳನ್ನು ಮದುವೆಯಾಗಲು ಒಪ್ಪಿಕೊಂಡಾಗ ಇಡೀ ಸಮಾಜದಂತೆ ತಾಯಿ ರಾಧಮ್ಮನವರೂ ವಿರೋಧಿಸುತ್ತಾರೆ. ಆದರೆ ಕೃಷ್ಣನ ತಾಯಿ ಲಕ್ಷ್ಮಮ್ಮ ಕೃಷ್ಣನನ್ನು ಕುರಿತು ಸೀತಾ ವಿಧವೆ, ಮೇಲಾಗಿ ಒಂದು ಮಗುವಿನ ತಾಯಿ ಅವಳನ್ನು ಮದುವೆಯಾದರೆ ಕಟುನುಡಿಗಳನ್ನು ಎದುರಿಸಬೇಕಾಗಿರುವುದರಿಂದ ಹೃದಯವನ್ನು ಹಿಮಗೆಡ್ಡೆ ಮಾಡಿಕೊಳ್ಳಬೇಕು ಕೇವಲ ಕರುಣೆಯಿಂದ ಪಶ್ಚಾತ್ತಾಪದಿಂದ ಅವಳನ್ನು ಮದುವೆಯಾಗುವುದಾದರೆ ದಾಂಪತ್ಯ ಜೀವನದಲ್ಲಿ ನಿನಗೆ ಸುಖ ಸಿಗಲಾರದು ಅವಳನ್ನು ಮದುವೆಯಾದೆನಲ್ಲಾ ಎಂದು ಮುಂದೆ ಎಂದೂ ಯಾವ ವಿಷಗಳಿಗೆಯಲ್ಲೂ ನೀನು ಪಶ್ಚಾತ್ತಾಪ ಪಡುವಂತಾಗಬಾರದು. ಅವಳ ಮಗುವಿಗೆ ನೀನು ತಂದೆಯಾಗಬೇಕು. ಎನ್ನುವ ಮೂಲಕ ವಿಧವಾ ವಿವಾಹಕ್ಕೆ ಹಳೆಯ ಸಂಪ್ರದಾಯದವರಾದ ಲಕ್ಷ್ಮಮ್ಮನ ಪಾತ್ರದ ಮೂಲಕ ಪ್ರೋತ್ಸಾಹ

ಕೊಟ್ಟಿದ್ದಾರೆ. ಜೀವನ ಸುಖಕರವಾಗಿರಬೇಕಾದರೆ ಪಶ್ಚಾತ್ತಾಪದಿಂದ ಮದುವೆಯಾಗದೆ ಸಂತೋಷದಿಂದ ಈಗಿರುವ ಮಗುವಿಗೆ ಜನ್ಮಕೊಟ್ಟು ನಡೆದುಕೊಳ್ಳಬೇಕೆಂದು ಹೇಳುವ ಮೌಲ್ಯಯುತ ಮಾತುಗಳು ಮುಖ್ಯವಾದದ್ದು.

ಸಂಸ್ಕಾರವಂತ ತಾಯಿಯ ಮಗನಾದ್ದರಿಂದಲೇ ಕೃಷ್ಣನ ತ್ಯಾಗ ಜೀವನವನ್ನು ನೋಡಿದ ಸೀತಾ ತನ್ನ ತಾಯಿ ಹೇಳಿದಂತೆ ನೀವು 'ದೇವಮಾನವ'ರೆಂದು ಪ್ರೀತಿಯಿಂದ ತಂದೆಯನ್ನು ಆಲಂಗಿಸಿಕೊಂಡು ಕಣ್ಣೀರಿಡುತ್ತಾಳೆ. ಅಲ್ಲದೆ ನೀವು ನನ್ನ ಸ್ವಂತ ತಂದೆಯೇ ಸರಿ ಎಂದು ಹೇಳಿ ದತ್ತನೊಂದಿಗೆ ನೂತನ ಜೀವನ ನಡೆಸುತ್ತಾಳೆ. ಲಕ್ಷ್ಮಮ್ಮನ ಅಕ್ಕರೆಯ ಮಗನಾಗಿ ಉತ್ತಮ ಪ್ರಜೆಯಾಗಿ ಆದರ್ಶ ಗಂಡನಾಗಿ ಪ್ರೀತಿಯ ತಂದೆಯಾಗಿ ತ್ಯಾಗಜೀವಿಯಾಗಿ ಕಂಡು ಬರುತ್ತಾನೆ. 'ದೇವಮಾನವ' ಕೃಷ್ಣ.

ಯಾವುದು ಜೀವಿಗಳಿಗೆ ಪ್ರಯೋಜನವನ್ನು ಎಂದು ಮಾಡುವುದೋ ಅದು ಮೌಲ್ಯ ಯಾವ ವಸ್ತುವನ್ನು ನಾವು ಎಂದರೆ ನಮಗೆ ಶಕ್ತಿ ಪೌಷ್ಟಿಕತೆ ಉಂಟಾಗುವುದೋ ಅದನ್ನು ನಾವು ಆಹಾರ ಎಂದು ಕರೆಯುತ್ತೇವೆ ಮತ್ತು ಆ ವಸ್ತುವಿಗೆ ಆಹಾರ ಮೌಲ್ಯವಿದೆ ಎಂದು ಹೇಳುತ್ತೇವೆ. ಯಾವುದು ನಮ್ಮ ನೈತಿಕ ಉನ್ನತಿಗೆ ಸಹಾಯಕವಾಗುವುದೋ ಅದು ನೈತಿಕ ಮೌಲ್ಯ. ಹಾಗೆಯೇ ಯಾವ ಅಂಶಗಳು ನಮ್ಮ ಜೀವನದ ಉನ್ನತಿಗೆ ಸಹಾಯಕವಾಗುವುದೋ ಅದೇ ಜೀವನ ಮೌಲ್ಯಗಳು. ಹೀಗೆ ಮೌಲ್ಯಗಳಲ್ಲಿ ತಾರತಮ್ಯವುಂಟು. ಸಂಸ್ಕೃತದಲ್ಲಿ ಈ ಮೌಲ್ಯವನ್ನು ಪುರುಷಾರ್ಥ ಎಂದು ಕರೆಯುತ್ತಾರೆ. ಪುರುಷರು ಬಯಸುವುದರಿಂದ ಪುರುಷಾರ್ಥಗಳು ಅವು ಅವರ ಅವಶ್ಯಕತೆಗಳನ್ನು ಪೂರೈಸುವುದರಿಂದ ಪುರುಷಾರ್ಥಗಳು.

ವ್ಯಕ್ತಿ ಮತ್ತು ಸಮಾಜದ ಸರ್ವತೋಮುಖ ಹಿತಕ್ಕೆ ಸಹಾಯಕವಾಗುವಂಥವುಗಳನ್ನೇ ನಿಜವಾದ ಅರ್ಥದಲ್ಲಿ ಪುರುಷಾರ್ಥಗಳೆಂದು ಹೇಳಬಹುದು. ಮೌಲ್ಯಗಳು ವಿಚಾರರಹಿತವಾಗಿದ್ದರೆ ಅಂಧ ಭಾವಹೀನವಾಗಿದ್ದರೆ, ದುರ್ಬಲ ಕ್ರಿಯಾಶೀಲವಾಗಿದ್ದರೆ, ಶೂನ್ಯ ಪುರುಷಾರ್ಥಗಳಲ್ಲಿ ಮೂರನೆಯದು ಕಾಮವೆಂದು ಪರಿಗಣಿಸಲಾಗಿದೆ. ಸಾಧಾರಣವಾಗಿ ಕಾಮವೆಂದರೆ ಇಂದ್ರಿಯಗಳಿಗೆ ಸಂಬಂಧಿಸಿದ ಜೀವನ ಎಂಬುದಾಗಿ ಅರ್ಥವನ್ನು ಕೊಡಲಾಗಿದೆ. ಇಂದ್ರಿಯ ಭೋಗ ಅಥವಾ ದೈಹಿಕ ಸುಖಾನುಭವ. ಇದು ಮಾನವ ಶರೀರದ ಎಲ್ಲಾ ಇಂದ್ರಿಯ ಬಯಕೆ. ವಿಷಯಾಶಕ್ತಿ ಮತ್ತು ಶಾರೀರಿಕ ಭೋಗಗಳು, ಅಪೇಕ್ಷೆಗಳನ್ನು ಸೂಚಿಸುತ್ತದೆ. ಕಾಮ ಎಂಬ ಪದಕ್ಕೆ ಅಕ್ಷರಶಃ ಅರ್ಥ ಕಾಮಾಸಕ್ತಿ ಪ್ರಣಯ ಅಥವಾ ವಿಷಯಾಭಿಲಾಷೆ ಎಂದಾಗುತ್ತದೆ.

ಕಾಮವೆಂದರೆ ಇಂದ್ರಿಯಗಳಿಗೆ ಸಂಬಂಧಿಸಿದ ಬಾಹ್ಯವಸ್ತುಗಳ ಸಂಪರ್ಕದಿಂದ ಉಂಟಾಗುವ ಸಂತೋಷ ಎಂದರ್ಥವಾಗುತ್ತದೆ. ಪಂಚೇಂದ್ರಿಯಗಳ ಕಡು ಬಯಕೆ ಮತ್ತು ಮನಸ್ಸು ಹಾಗೂ ಬುದ್ಧಿಯ ಹಂಬಲಗಳನ್ನು ತೃಪ್ತಿ ಪಡಿಸುವ ಆಕಾಂಕ್ಷೆಯನ್ನು ಸಹ ಕಾಮ ಎಂಬುದಾಗಿ ಹೇಳಲಾಗುತ್ತದೆ. ಸಂಕ್ಷೇಪದಲ್ಲಿ ಕಾಮವೆಂದರೆ ವಿಷಯ ಭೋಗವನ್ನು ಗುರಿಯಾಗಿಟ್ಟುಕೊಂಡು ಜೀವನವನ್ನು ನಡೆಸುವುದು ಮತ್ತು ಶಾರೀರಿಕ ತೃಪ್ತಿ ಹಾಗೂ ಸೌಂದರ್ಯಾತ್ಮಕ ಆನಂದ ಮತ್ತು ಕಲಾತ್ಮಕ ಸುಖಾನುಭವವನ್ನು ಸೂಚಿಸುತ್ತದೆ.

ಸಂಕ್ಷೇಪದಲ್ಲಿ ಕಾಮವು ಮಾನವನಲ್ಲಿರುವ ಜೀವನವನ್ನು ಅನುಭವಿಸಬೇಕೆಂಬ ಸ್ವಭಾವ ಸಿದ್ಧವಾದ ಬಯಕೆ. ಮನಃಪ್ರವೃತ್ತಿ ಸ್ವಾಭಾವಿಕ ಪ್ರೇರಣೆ. ಸಹಜ ಪ್ರವೃತ್ತಿ, ಪ್ರಚೋದನೆ ಹಾಗೂ ಮಾನಸಿಕ ಪ್ರವೃತ್ತಿ ಸಮಷ್ಟಿಗೆ ಸಂಕೇತವಾಗಿದೆ. ಕಾಮವು ಸಹಜವಾದ ಲೈಂಗಿಕ ಜೀವನಕ್ಕೂ ಅನ್ವಯವಾಗುತ್ತದೆ. ಇದಿಲ್ಲದಿದ್ದರೆ ಸಮಾಜ ಮುಂದುವರಿಯಲಾರದು. ಕಾಮ ಇಲ್ಲದಿದ್ದರೆ ಕೌಟುಂಬಿಕ ಜೀವನ ಇರಲಾರದು. ಮಾನವ ಸಂತತಿ ಮುಂದುವರೆಯಲಾರದು ಎಂಬುದು ಅಷ್ಟೇ ನಿಜವಾಗಿದೆ. ಇದು ಸಂತಾನೋತ್ಪತ್ತಿಗೆ ಹಾಗು ಮಾನವ ಜನಾಂಗವನ್ನು ಮುಂದುವರಿಸುವುದಕ್ಕೆ ಸಹಾಯ ಮಾಡುತ್ತದೆ. ಕಾಮವೆಂದರೆ ಕೇವಲ ವಿಷಯಾಭಿಲಾಷೆ ಅಥವಾ ಲೈಂಗಿಕ ಭೋಗಾಶಕ್ತಿ ಮಾತ್ರವಲ್ಲ. ಉನ್ನತ ಆದರ್ಶವನ್ನಾಗಿ ಮಾರ್ಪಡಿಸಬಹುದಾದ ಪ್ರೇಮ ಅಥವಾ ಪ್ರಣಯ ಎಂದಾಗುತ್ತದೆ.

ಪುರುಷಾರ್ಥಕ್ಕೆ ಸಂಬಂಧಿಸಿದಂತೆ, ತ್ರಿವೇಣಿಯವರ 'ಸೋತು ಗೆದ್ದವಳು' ಕಾದಂಬರಿಯಲ್ಲಿ ನಾಯಕಿ ಭಾರತಿ ಅತ್ಯಂತ ಚೆಲುವೆ. ಗಂಡ ಆನಂದ ವಿದ್ಯಾವಂತ. ಒಳ್ಳೆಯ ಉದ್ಯೋಗದಲ್ಲಿದ್ದಾನೆ. ಹೆಂಡತಿ ಎಂದರೆ ಪಂಚಪ್ರಾಣ. ಆನಂದನ ಸೋದರಮಾವ ಚಂದು ಕಲಾವಿದ. ಅವನು ಭಾರತಿಯನ್ನು ನೋಡಿದೊಡನೆ ಅವನ ಕಲ್ಪನೆ ಗರಿಗೆದರುತ್ತದೆ. ಇದು ಭಾರತಿಗೆ ಇರುಸುಮುರಿಸು. ಆನಂದ ಎರಡು ವರ್ಷದ ತರಬೇತಿಗೆಂದು ಇಂಗ್ಲೆಂಡಿಗೆ ಹೋಗಬೇಕಾಗುತ್ತದೆ. ಆದರೆ ಆನಂದ ಪತ್ರಗಳ ಮಹಾಪೂರವನ್ನೇ ಹರಿಸುತ್ತಿದ್ದಾನೆ. ಈ ಕೆಲವು ತಿಂಗಳು ಗಂಡನ ಸಾಮಿಪ್ಯವನ್ನೇ ಅನುಭವಿಸಿದ್ದು, ಗಂಡ ಹೆಂಡತಿ ಈಗ ದೂರದಲ್ಲಿದ್ದಾರೆ.

ಭಾರತಿಯ ತಾರುಣ್ಯ ಬಡಿದೆಬ್ಬಿಸಿದ ಸಮಯದಲ್ಲಿ ಚಂದು ಹತ್ತಿರ ಬಂದಿದ್ದಾನೆ. ಮನಸ್ಸು ಬೇಡವೆಂದರೂ ದೇಹ ಚಂದುವಿನ ಸಾಮಿಪ್ಯವನ್ನು ಬಯಸುತ್ತದೆ. ಇದು ಅತ್ತೆಮಾವನಿಗೆ ತಿಳಿಯುತ್ತದೆ. ಮೊದಲು ಪ್ರೀತಿ ವಾತ್ಸಲ್ಯದ ಮಹಾಪೂರ ಹರಿಸಿದವರು ಈಗ ಅವರ ಅನಾದರಣೆಗೆ ಅವಹೇಳನಕ್ಕೆ ತಿರಸ್ಕಾರಕ್ಕೆ ಗುರಿಯಾಗುತ್ತಾಳೆ. ಮಗ ಹಿಂದಿರುಗಿದೊಡನೆಯೇ ತಾಯಿ ತಂದೆ ಇಬ್ಬರೂ ಅವಳ ನೀತಿಗೆಟ್ಟ ನಡತೆಯನ್ನು ಹೇಳುತ್ತಾರೆ. ಭಾರತಿಗೆ

ಮನದಟ್ಟಾಗುತ್ತದೆ. ನಿಜವಾಗಲೂ ಅವನ ಹೃದಯದಲ್ಲಿ ಮತ್ತು ಮನೆಯಲ್ಲಿ ತನಗೆ ಸ್ಥಾನ ಇನ್ನು ದೊರೆಯದು ಎಂದು ತಾಯಿ ತಂದೆಗಳು ಹೇಳಿದ್ದನ್ನು ಕೇಳಿದ ಆನಂದನಿಗೆ ಕೋಪ ಉಕ್ಕಿ ಬರುತ್ತದೆ.

ಭಾರತಿಯ ಕೆನ್ನೆಗೆ ಎರಡು ಬಾರಿಸುತ್ತಾನೆ.

"ಅಯ್ಯೋ, ಭಾರತಿ ಹೀಗೇಕೆ ಮಾಡಿದೆ? ನನ್ನ ಪ್ರೇಮ ನಿನಗೆ ಸಾಕಾಗಲಿಲ್ಲವೆ? ನಾನು ನಿನ್ನನ್ನು ಪ್ರೀತಿಸಲಿಲ್ಲವೇ?" ಮ್ಲಾನವದನದಲ್ಲಿ ವಿಷಾದದ ನಗು ಮೂಡಿತು.

ಪ್ರೇಮ! ಪ್ರೇಮಕ್ಕಾಗಿ ನಾನು ಹಾಗೆ ಮಾಡಲಿಲ್ಲ. ದಾಂಪತ್ಯದ ಹೊಸಬಾಳಿನಲ್ಲಿ ನನಗೆ ತೃಪ್ತಿ ಸಿಕ್ಕಿರಲಿಲ್ಲ. ವಿರಹದ ಕಿಚ್ಚಿನಲ್ಲಿ ಬೆಂದು ನಿಸರ್ಗದೊಡನೆ ಹೋರಾಡುತ್ತಿರುವಾಗಲೇ... ಆತ ಬಂದ. ಹೆಜ್ಜೆ ಹೆಜ್ಜೆಗೂ ನನ್ನ ಕೆಣಕಿದ. ಕೆರಳಿದ ಲಾಲಸೆಯನ್ನು ದಮನ ಮಾಡಲು ಯತ್ನಿಸಿದೆ. ಆದರೆ ನಿಸರ್ಗದ ಕರೆಯ ಮುಂದೆ ನನ್ನ ಸಂಯಮ ಹಿಮ್ಮೆಟ್ಟಿತು. ನನ್ನ ದೇಹ ಪತಿತವಾಯಿತು. ವಿಧಿ ರಚಿಸಿದ್ದ ಸನ್ನಿವೇಶಗಳಿಗೆ ಬಲಿಯಾದೆ. ಆತ ತನ್ನೊಡನೆ ನನ್ನನ್ನು ಕರೆದೊಯ್ಯಲು ಸಿದ್ಧನಾಗಿದ್ದ. ಆದರೆ ನಾನು ನಿರಾಕರಿಸಿದೆ. ನಿಮ್ಮ ಕ್ಷಮೆ ನನಗೆ ಅತ್ಯಾವಶ್ಯಕವಾಗಿತ್ತು. ನನ್ನ ತಪ್ಪನ್ನು ನಾನು ಸಮರ್ಥಿಸುತ್ತಿಲ್ಲ. ನನ್ನನ್ನು ಸ್ವೀಕರಿಸಿ ಎಂದು ಕೇಳಿಕೊಳ್ಳುತ್ತಿಲ್ಲ. ನಿಮ್ಮ ಕ್ಷಮೆಯೊಂದು ನನಗೆ ಸಿಕ್ಕಿದರೆ ಸಾಕು ಹಿರಿಯರ ಆಶೀರ್ವಾದದೊಡನೆ ನಡತೆಯಲ್ಲಿ ನಿಮಗನುರೂಪಳಾದ.... ಹೌದು ನಿಮಗೆ ಸರಿಯಾದ ಹುಡುಗಿಯ ಕೈಹಿಡಿದು ಸುಖವಾಗಿ ಬಾಳಿ, ನಾನು ನಿಮ್ಮ ಜೀವನದಲ್ಲಿ ದುಃಸ್ವಪ್ನವೆಂದು ತಿಳಿದು ಮರೆತುಬಿಡಿ. ಆದರೆ, ಒಂದು ಮಾತ್ರ ನಿಮ್ಮ ನೆನಪಿನಲ್ಲಿರಲಿ. ನನ್ನ ದೇಹ ಪತಿತವಾಗಿದ್ದರೂ ಮನಸ್ಸು ನಿಮ್ಮದು ನನ್ನ ಹೃದಯದ ಪ್ರೇಮ ಎಂದೆಂದಿಗೂ ನಿಮ್ಮದು.

ಭಾರತಿಗೆ ಗಂಟಲುಬ್ಬಿ ಬಂತು "ಈ ಮನೆಯಿಂದ ಹೊರಡುವ ನನಗೆ ಅನುಮತಿ ಕೊಡಿ"

ಆನಂದ ಹೆಂಡತಿಯ ಕಡೆ ನೋಡಿದ "ಎಲ್ಲಿಗೆ ಹೋಗುತ್ತೀಯಾ ಭಾರತಿ, ತಾಯಿಯ ಮನೆಗೆ?"

"ಉಹೂಂ ಎಲ್ಲಿಗಾದರೂ ಹೋಗುತ್ತೇನೆ"

"ಜೀವನಕ್ಕೆ"

"ಅದರ ಯೋಚನೆ ನನಗಿಲ್ಲ"

"ನನಗೆ ಯೋಚಿಸಲು ಅವಕಾಶ ಕೊಡು" ಎಂದು ಹೇಳುತ್ತಾನೆ. ಅವನ ಮನಸ್ಸು ಲಂಡನ್ನಿನ ಕಡೆಗೆ ಹರಿಯುತ್ತದೆ. ಅದೇ ವೇಲೆಯಲ್ಲೇ ಅವನು ಸಂಯಮವನ್ನು ಕಳೆದುಕೊಂಡು ಇಂಥ ತಪ್ಪನ್ನೇ ಮಾಡಿರುತ್ತಾನೆ.

ಭಾರತಿಯೆಡೆಗೆ ಹೋಗುವಾಗ ತಡೆಯುವ ಅಮ್ಮನಿಗೆ ಹೇಳುತ್ತಾನೆ. "ಅಮ್ಮಾ ನಾನೂ ಪತಿತ, ಅವಳಂತೆಯೇ ನಾನೂ ಇಂಗ್ಲೆಂಡಿನಲ್ಲಿ ಬೇರೊಂದು ಹೆಣ್ಣಿನೊಡನೆ ಸಂಪರ್ಕವಿಟ್ಟುಕೊಂಡಿದ್ದೆ"

"ಆದರೆ..... ಆದರೆ.... ನೀನು ಗಂಡಸು"

ಆನಂದ ವ್ಯಂಗ್ಯವಾಗಿ ನಕ್ಕು ಹೇಳಿದ, 'ನೀತಿ ಎಂದ ಮೇಲೆ ಎಲ್ಲರಿಗೂ ಒಂದೇ ಅಲ್ಲವೇನಮ್ಮ?

ನಾವಿಬ್ಬರೂ ಪತಿತರು ಎನ್ನುತ್ತಾ ಆನಂದ ಮಹಡಿಯ ಮೆಟ್ಟಿಲೇರಿ ಭಾರತಿಯ ಕಡೆಗೆ ಹೋಗುತ್ತಾನೆ.

"ನೀತಿ ಎಂಬುದು ಗಂಡಿಗಾಗಲೀ, ಹೆಣ್ಣಿಗಾಗಲೀ ಎಲ್ಲರಿಗೂ ಒಂದೇ. ದೇಹದ ಬಯಕೆಯೂ ಅಷ್ಟೇ. ಹೆಣ್ಣಿಗೂ, ಗಂಡಿಗೂ ಒಂದೇ ಎಂದು ಗಂಡ ಹೆಂಡತಿಯ ತಪ್ಪನ್ನು ಕ್ಷಮಿಸಿ ತನ್ನ ದೊಡ್ಡತನವನ್ನು ಮೆರೆಯುತ್ತಾನೆ. ಕಾಮಕ್ಕಿಂತ ಪ್ರೇಮ ದೊಡ್ಡದು ಎಂಬುದು ಸಾಬೀತಾಗುತ್ತದೆ".[೧೩]

ಆರ್ಯಾಂಬರ 'ಸವತಿಯ ನೆರಳು' ಕಾದಂಬರಿಯನ್ನು ವಿಶ್ಲೇಷಿಸಿದಾಗ ದಾಂಪತ್ಯ ಬದುಕಿನಲ್ಲಿ ಗಂಡು ಹೆಣ್ಣು ಒಂದು ರಥದ ಎರಡು ಚಕ್ರಗಳಂತೆ. ಸಮಾನವಾಗಿರಬೇಕು. ಆಗ ಇವರಲ್ಲಿ ಪರಸ್ಪರ ವಿಶ್ವಾಸ, ಸಾಮರಸ್ಯ ಏರ್ಪಟ್ಟು ಬದುಕಿನ ರಥ ಯಾವ ಅಡೆತಡೆಯೂ ಇಲ್ಲದೆ ಮುಂದಕ್ಕೆ ಸಾಗುತ್ತದೆ. ಒಂದು ಚಕ್ರಕ್ಕೆ ಊನವಾದರೆ ರಥ ನಡೆಯದೆ ನಿಲ್ಲುತ್ತದೆ. ಆದುದರಿಂದ ಗಂಡು ಹೆಣ್ಣಿನಲ್ಲಿ ಕೆಲವು ನೈತಿಕ ಜೀವನ ಮೌಲ್ಯಗಳಿರುವುದು ಅತ್ಯಗತ್ಯ. ಇವು ಬಾಳ ಪ್ರಜ್ಞೆಯ ಮನೋಧರ್ಮ. ತ್ಯಾಗದ ನೆಲಗಟ್ಟಿನ ಮೇಲೆ ಇದರ ಅಸ್ತಿತ್ವದ ಪ್ರಜ್ವಲೀಕರಣವಾಗುತ್ತದೆ. ಸತ್ಯ ಧರ್ಮ ಇದರ ಬೆನ್ನೆಲುಬು. ಪರೋಪಕಾರ ಪ್ರಜ್ಞೆ ಇದರ ಮುಖ್ಯ ಧ್ಯೇಯ. ಮೌಲ್ಯವಿಲ್ಲದ ಬದುಕು ಅಧಃಪತನಗೊಳ್ಳುತ್ತದೆ. ಇಂತಹ ಸ್ಥಿತಿಗೆ ಒಳಗಾದವಳು 'ಸವತಿಯ ನೆರಳು' ಕಾದಂಬರಿಯ ಇಂದಿರ.

ವ್ಯಕ್ತಿ ಚಾರಿತ್ರ್ಯದ ಸುತ್ತ 'ಸವತಿಯ ನೆರಳು' ಕಾದಂಬರಿ ನಿಂತಿದೆ. ರೂಪ, ಐಶ್ವರ್ಯ, ನಾಗರಿಕತೆಗಿಂತ ಮಿಗಿಲಾದುದು ವ್ಯಕ್ತಿಯ ಸದ್ಗುಣಗಳು ಎಂಬುದು ಕಾದಂಬರಿಯ ಧೋರಣೆ, ಹೆಣ್ಣೇ ಆಗಲಿ, ಗಂಡೇ ಆಗಲಿ ನೈತಿಕತೆಯನ್ನು ಮರೆತು ಸ್ವೇಚ್ಛಾರೀತಿಯ ಬದುಕು ನಡೆಸುವುದು ಕಳಂಕವೇ ಸರಿ ಎನಿಸುತ್ತದೆ. ಆಗ ಅವರಿಗೆ ಬದುಕುವ ಅರ್ಹತೆ ಇಲ್ಲ ಎಂಬ ಸೂಚನೆಯಿದೆ. ಶ್ರೀಮಂತ ದೇವನಗರದ ಒಡೆಯ ಹರ್ಷನ ಹೆಂಡತಿ ಇಂದಿರಾ ರೂಪವಂತೆ, ವಿದ್ಯಾವಂತೆ, ಅಂತಸ್ತಿಗೆ ತಕ್ಕ ನಡವಳಿಕೆಗಳು. ಆದರೆ ಇವಳು ಮದುವೆಗೆ ಮುನ್ನವೇ ವ್ಯಭಿಚಾರಿಯಂತೆ ಜೀವನ ನಡೆಸುತ್ತಿದ್ದಳು. ಹರ್ಷನಿಗೆ ಇದು ತಿಳಿಯಿತು. ದೇವನಗರ ಒಡತಿ ವ್ಯಭಿಚಾರಿಣಿ ಎಂದು ಆಡಿಕೊಂಡು ಜನ ನಗಬಾರದು ತಮ್ಮ ವಂಶಕ್ಕೆ ಅಪಕೀರ್ತಿ ಬರಬಾರದೆಂದು ಸುಮ್ಮನಾಗಿದ್ದ. ತೋರಿಕೆಗೆ ಮಾತ್ರ ಸತಿಪತಿಗಳು.

ಮದುವೆಯ ನಂತರವಾದರೂ ಇಂದಿರ ತನ್ನ ಅಭ್ಯಾಸಗಳನ್ನು ತಿದ್ದುಕೊಳ್ಳಬಹುದಿತ್ತು. ಬದಲಾಗಿ ತನ್ನ ಕಾಮುಕ ಜೀವನವನ್ನು ಮುಂದುವರಿಸಿದಳು. ಕಾಮುಕ ಸ್ನೇಹಿತರನ್ನು ದೇವನಗರಕ್ಕೆ ಕರೆತಂದು ಅವರೊಡನೆ ಮಧುನಿವಾಸದಲ್ಲಿ ಅನೇಕ ರಾತ್ರಿ ಕಳೆಯುತ್ತಿದ್ದಳು. ಹೀಗೆ ಭಾರತೀಯ ನಾರಿಯ ಪಾವಿತ್ರ್ಯಕ್ಕೆ ಕಳಂಕವಾಗಿ ಕಾಣಿಸಿಕೊಳ್ಳುತ್ತಾಳೆ. ಹರ್ಷನಾದರೂ ಹೆಂಡತಿಯ ನಡವಳಿಕೆಯನ್ನು ತಿದ್ದುವ ಪ್ರಯತ್ನ ಮಾಡದೆ, ಬದಲಾಗಿ ಕುಣಿತ, ಕುಡಿತ, ಕಾಮುಕ ಜೀವನದಿಂದ ಬೇಸತ್ತು ಇಂದಿರಳ ಮಾನಸಿಕ ದೌರ್ಬಲ್ಯಗಳನ್ನು ಅರಿಯುವ ಪ್ರಯತ್ನವನ್ನೂ ಮಾಡದೆ ಇಂದಿರ ಆತ್ಮಹತ್ಯೆ ಮಾಡಿಕೊಂಡಳು ಎಂಬ ರೀತಿಯಲ್ಲಿ ಆಕೆಯನ್ನು ಕೊಂದುಹಾಕಿದನು.

ಸಾಮಾನ್ಯ ರೂಪಿನ ತಬ್ಬಲಿ ಹುಡುಗಿಯಾದ ಪದ್ಮಿನಿಯನ್ನು ಮದುವೆಯಾದನು. ಚಾರಿತ್ರ್ಯಹೀನಳಾದ ಸೌಂದರ್ಯವತಿಗಿಂತ ಅನಾಥಳಾದ ಪದ್ಮಿನಿಯ ಗುಣಗಳೇ ಮುಖ್ಯವಾದವು. ರೂಪಿನಲ್ಲಿ ಸವತಿಯೊಡನೆ ಸ್ಪರ್ಧಿಸಲು ಸಾಧ್ಯವಿಲ್ಲದೆ ಹೋದರೂ, ನಡವಳಿಕೆಯಲ್ಲಿ ಎಲ್ಲರ ಪ್ರೀತಿ, ಗೌರವಗಳನ್ನು ಸಂಪಾದಿಸಿದಳು. ತಬ್ಬಲಿಯಾದ ತನ್ನನ್ನು ಮದುವೆಯಾಗಿ ರಾಣಿಯಾಗಿಸಿದ ಗಂಡನ ಸುಖ ಸಂತೋಷಗಳು ಪದ್ಮಿನಿಯ ಗುರಿಯಾಯಿತು. ಹೀಗೆ ಗಂಡನ ಪ್ರೀತಿ, ವಿಶ್ವಾಸ ಅವನ ಅಭ್ಯುದಯವನ್ನು ಬಯಸುವ ಪದ್ಮಿನಿ ಭಾರತೀಯ ಸುಸಂಸ್ಕೃತ ಹೆಣ್ಣಾಗಿ ಕಾಣಿಸಿಕೊಳ್ಳುತ್ತಾಳೆ. ಹೀಗೆ ಮೌಲ್ಯ ಸಂಘರ್ಷ ಈ ಕಾದಂಬರಿಯ ಪ್ರಧಾನ ಆಶಯವಾಗಿದೆ. ಗುಣ ಹಾಗೂ ನಡತೆಯಲ್ಲಿ ವ್ಯಕ್ತಿಗೆ ಸಿಕ್ಕಿರುವ ಮಾನ್ಯತೆಯನ್ನು ಕಾದಂಬರಿಯಲ್ಲಿ ಗಮನಿಸಬಹುದು.

ಇದನ್ನು ಅನುಸರಿಸಿಯೇ ತ್ರಿವೇಣಿಯವರ ಮತ್ತೊಂದು ಕಾದಂಬರಿ 'ಅವಳ ಮಗಳು' ಕಾದಂಬರಿಯ ವನಜ ವಿವಾಹ ಪೂರ್ವದಲ್ಲೇ ತನ್ನ ಸಹಪಾಠಿ ಶ್ರೀಕಂಠನಲ್ಲಿ ಅನುರಕ್ತಳಾಗಿದ್ದ ಹೆಣ್ಣು. ಅವನು ಸೈಗಾಲನಂತೆ ಸೊಗಸಾಗಿ ಹಾಡಬಲ್ಲನೆಂಬುದೇ ಅವಳ ಅನುರಾಗಕ್ಕೆ ಪ್ರಬಲ ಕಾರಣವಾಗುತ್ತದೆ. ಶ್ರೀಕಂಠನಲ್ಲಿ ಅನುರಕ್ತಳಾಗಿದ್ದ ವನಜಳು ವಾಮನರಾಯನ ಮಡದಿಯಾಗುತ್ತಾಳೆ. ಮೊದಲ ಹೆರಿಗೆಗೆ ತವರಿಗೆ ಬಂದಾಗ ಪುನಃ ಶ್ರೀಕಂಠನ ಸಾಮಿಪ್ಯ ಬಯಸುತ್ತಾಳೆ. ಈ ಅನೀತಿಯ ವ್ಯವಹಾರವನ್ನು ಗಮನಿಸಿದ ವಾಮನರಾಯನು ಅವಳನ್ನು ಅಂಕೆಯಲ್ಲಿಡಲು ಬಯಸುತ್ತಾನೆ. ಗಂಡನ ಸ್ವಭಾವದ ಅರಿವಿದ್ದ ವನಜಳು ತನ್ನ ಒಡವೆವಸ್ತ್ರಗಳೊಂದಿಗೆ ಶ್ರೀಕಂಠನನ್ನು ಸೇರಿ ಊರನ್ನೇ ಬಿಡುತ್ತಾಳೆ. ಎಳೆಯ ವಯಸ್ಸಿನ ತನ್ನ ಮಗಳೊಂದಿಗೆ ವಾಮನರಾಯನು ಊರನ್ನು ಬಿಡುತ್ತಾನೆ. ಇಲ್ಲಯೂ ಕೂಡ ವನಜ ಪ್ರೇಮಿಯಾಗಿ ಗೆದ್ದರೂ ತಾಯಿಯಾಗಿ ಸೋಲುತ್ತಾಳೆ.

ಅಂತೆಯೇ, "ಶಾಲೆಯಲ್ಲಿ ಡ್ರಿಲ್ ಮಾಸ್ಟರನ ಕಾಮದಾಹಕ್ಕೆ ಬಲಿಯಾದ ರತ್ನಳಿಗೆ ಮಗುವಾಗುತ್ತದೆ. ಆದರೆ, ಅವಳ ಮುಂದಿನ ಭವಿಷ್ಯಕ್ಕಾಗಿ ಮಗುವನ್ನು ಅನಾಥಾಶ್ರಮಕ್ಕೆ ಬಿಡುತ್ತಾರೆ. ಮಕ್ಕಳಿಲ್ಲದ ಅನಂತಯ್ಯ ಭವಾನಿ ದಂಪತಿಗಳು ಆ ಮಗುವನ್ನು ದತ್ತು ತೆಗೆದುಕೊಂಡು ಸಾಕಿ, ಶಿಕ್ಷಣವನ್ನೂ ನೀಡುತ್ತಾರೆ. ಆದರೆ ತನ್ನ ಹೆತ್ತ ತಾಯಿಯನ್ನು ಹೇಗಾದರೂ ಪತ್ತೆ ಮಾಡಬೇಕು. ಬದುಕಿನಲ್ಲಿ ಒಮ್ಮೆಯಾದರೂ ಅವಳನ್ನು ನೋಡಲೇಬೇಕೆಂಬ ಹಂಬಲದಿಂದ ತಹತಹಿಸುತ್ತಾನೆ.

ಬೊಂಬಾಯಿಯ ಅನಾಥಾಶ್ರಮದ ವಿಳಾಸ ಪಡೆದು ಹೊರಟುಬಿಡುತ್ತಾನೆ. ಸತತ ಪ್ರಯತ್ನಗಳ ನಂತರ ಮೈಸೂರಿನಲ್ಲಿರುವ ತಾತನ ವಿಳಾಸ ಪತ್ತೆ ಮಾಡಿ ಅವರನ್ನು ಕಾಡಿ ಬೇಡಿ ಹೆತ್ತ ತಾಯಿಯ ವಿಳಾಸ ಪಡೆದು ತಾಯಿಯ ಭವಿಷ್ಯಕ್ಕೆ ತಾನು ಅಡ್ಡಿಯಾಗುವುದಿಲ್ಲವೆಂಬ ಭರವಸೆ ಇತ್ತು ಹೊರಡುತ್ತಾನೆ. ಹುಡುಕುವ ಬಳ್ಳಿ ಕಾಲಿಗೆ ತೊಡರಿದಂತೆ ಬೆಂಗಳೂರಿನಲ್ಲಿ ತಾನು ವಾಸವಾಗಿದ್ದ ಬಡಾವಣೆಯಲ್ಲಿಯೇ ಶ್ರೀಮಂತನ ಕೈಹಿಡಿದು ಎರಡು ಹೆಣ್ಣು ಮಕ್ಕಳ ತಾಯಿಯಾಗಿರುವ ವಿಷಯ ತಿಳಿದು ಸಂತೋಷ ಪಡುತ್ತಾನೆ. ತಾಯಿಯನ್ನು ಕಾಣಬೇಕೆಂದು ವಿಳಾಸ ಹಿಡಿದು ಹೊರಡುತ್ತಾನೆ. ತಾಯಿಯನ್ನು ಕಂಡು ನೀನೇ ನನ್ನ ತಾಯಿ ನಾನು ನಿನ್ನ ಮಗ ಎಂದು ಹುಟ್ಟಿನ ರಹಸ್ಯ ನೆನಪಿಸುವನು. ಹಿಂದಿನ ನೆನಪು ಮುರುಕಲ್ಪಿಸಿ ಸಂತೋಷವಾದರೂ ತನ್ನ ಸಂಸಾರದ ಮುಂದಿನ ಭವಿಷ್ಯಕ್ಕಾಗಿ ಹೆದರಿದ ಆಕೆ ಇದು ನಮ್ಮ ಕಡೆಯ ಭೇಟಿಯೂ ಆಗಲಿ, ನನ್ನನ್ನು ಮರೆತುಬಿಡು ನಿನ್ನ ಸಾಕಿದವರನ್ನೇ ತಂದೆ ತಾಯಿ

ಎಂದು ತಿಳಿದು ಸುಖವಾಗಿರು. ನೀನು ನನ್ನ ಮಗನಲ್ಲ. ಅವರ ಮಗನೆಂದೇ ತಿಳಿದುಕೋ ನನ್ನನ್ನು ನೋಡಲು ಇನ್ನೆಂದೂ ಇಲ್ಲಿಗೆ ಬರಬೇಡ ತಿಳಿಯಿತೇ ಎಂದು ವಚನ ಪಡೆಯುತ್ತಾಳೆ.

ಇಲ್ಲಿ ವಾತ್ಸಲ್ಯವೆಂಬ ಜೀವನ ಮೌಲ್ಯವಿದೆ "ವಾತ್ಸಲ್ಯ ಎಂಬುದು ಒಂದು ಮನೋಭಾವ, ಇದು ಅರಿವು ಹಾಗೂ ಸಂಕಲ್ಪನಾ ಕ್ರಿಯೆಗಳಿಗೆ ಭಿನ್ನವಾಗಿರುವ ಮನಸ್ಸಿನ ಭಾವನಾ ಕಾರ್ಯವಾಗಿರುತ್ತದೆ"[೧೭]. ಇದನ್ನು ಇಂತಿಷ್ಟು ಪ್ರಮಾಣವೆಂದು ಅಳತೆ ಮಾಡಿ ತೋರಿಸಲು ಆಗದು ಹಾಗೂ ಸ್ವೀಕರಿಸಲು ಆಗದು. ವಾತ್ಸಲ್ಯವು ಯಾವ ಲೈಂಗಿಕ ಅರ್ಥ ಆಸಕ್ತಿಗಳು ಇಲ್ಲದೆ ವ್ಯಕ್ತಪಡಿಸುವ ಆಸಕ್ತಿ. ಪ್ರೇಮ ಮತ್ತು ವಿಶ್ವಾಸ ಅದು ಮನೋವಿಕಾರವೆನಿಸುವಷ್ಟು ತೀವ್ರವಾಗಿರದೆ ಹಿತಕರ ಮನೋಭಾವವಾಗಿರುತ್ತದೆ. ಅದು ವ್ಯಕ್ತಿ, ಸನ್ನಿವೇಶ, ವಸ್ತು ಇವುಗಳ ಬಗೆಗೆ ಇರುವುದಾದರೂ ಇದನ್ನು ಕಿರಿಯರ ಬಗೆಗೆ ಹಿರಿಯರು ತೋರುವ ಪ್ರೀತಿ ವಿಶ್ವಾಸಗಳಿಗೆ ಹೆಚ್ಚಾಗಿ ಬಳಸುವರು.

"ಜೀವನಮೌಲ್ಯಗಳಲ್ಲಿ ಮತ್ತೊಂದು ಪ್ರಮುಖವಾದುದು 'ಸಹನೆ' ಸಹನೆಯನ್ನು ಸೈರಣೆ, ತಾಳ್ಮೆ ಎಂಬ ಇನ್ನೂ ಹಲವಾರು ಪೂರಕ ಪದಗಳಿಂದ ಗುರುತಿಸಲಾಗುತ್ತದೆ. ಮನಸ್ಸಿಗೆ ಉಂಟಾದ ನೋವನ್ನಾಗಲೀ, ಕೋಪವನ್ನಾಗಲಿ ಶಾಂತಿಯಿಂದ ಸಹಿಸುವುದು ಸಹನೆ. ಇದು ವ್ಯಕ್ತಿಯು ಹೊಂದಲೇಬೇಕಾದ ಪ್ರಮುಖ ಮೌಲ್ಯಗಳಲ್ಲಿ ಮಹತ್ವಪೂರ್ಣವಾದುದು".[೧೮]

ವ್ಯಕ್ತಿಚಾರಿತ್ರ್ಯದ ಮುಕುಟಮಣಿ ಸಹನೆ. ಯಾರೇ ಆಗಲೀ ಉತ್ತಮ ಚಾರಿತ್ರ್ಯ ಉಳ್ಳವರೆಂದು ಗುಣಶೀಲರೆಂದು, ಉತ್ತಮನಡತೆಯುಳ್ಳವರೆಂದು ಹೇಳಿದರೆ, ಅವರ ಸಹನಾ ಮೌಲ್ಯದಲ್ಲಿ ಕೊರತೆ ಇದ್ದಲ್ಲಿ ಖಂಡಿತ ಅವರು ಪರಿಪೂರ್ಣರಾಗುವುದಿಲ್ಲ.

* ಸಹನೆಯ ಮೌಲ್ಯವನ್ನು ಆದರ್ಶಪ್ರಾಯವಾಗಿ ಉಳ್ಳವರು ದುಃಖ ದುಮ್ಮಾನ, ಸುಖ ದುಃಖ, ನೋವು ನಲಿವು, ಕಷ್ಟ ನಷ್ಟ, ಶ್ರಮ ವಿರಾಮಗಳನ್ನು ತಾಳ್ಮೆಯಿಂದ ಶಾಂತಚಿತ್ತದಿಂದ ತಡೆದುಕೊಳ್ಳುವ ಮತ್ತು ಸಹಿಸಿಕೊಳ್ಳುವ ಶಕ್ತಿ ಹೊಂದಿರುತ್ತಾರೆ.
* ಯಾವುದೇ ತೊಂದರೆಯನ್ನು ಶಾಂತಚಿತ್ತದಿಂದ ಕ್ಷೋಭೆಗೆ ಒಳಗಾಗದೇ ಸ್ವೀಕರಿಸುವ ತಾಳ್ಮೆಯು ಸಹನಾ ಮೌಲ್ಯಕ್ಕೆ ಇರುತ್ತದೆ.
* ಕ್ಷುದ್ರ, ತುಚ್ಛ, ಮಾನಸಿಕ ಮತ್ತು ಸಂವೇಗಾತ್ಮಕ ಮನೋಭಾವಗಳನ್ನು ನಿಯಂತ್ರಿಸುವ ಆತ್ಮಸ್ಥೈರ್ಯ ಉಳ್ಳವರಾಗಿದ್ದು ಅದು ಅವರಿಗೆ ಶ್ರೀರಕ್ಷೆಯಾಗಿರುತ್ತದೆ.

* ಯಾವುದೇ ಸನ್ನಿವೇಶವನ್ನು ಶಾಂತತೆಯಿಂದ ಸ್ವೀಕರಿಸುವ ವಿವೇಚನಾಪೂರಕವಾಗಿ ತೀರ್ಮಾನ ಮಾಡುವ ಹಾಗೂ ತೀರ್ಮಾನ ಮಾಡಿದ ವಿಚಾರವನ್ನು ಮಾನಸಿಕ ಮತ್ತು ಸಂವೇಗಾತ್ಮಕ ಕ್ಷೋಭೆಗೆ ಒಳಗಾಗದೇ ಅನುಷ್ಠಾನಗೊಳಿಸುವ ಸಮಸ್ಥಿತಿಯನ್ನು ಹೊಂದಿದವರಾಗಿರುತ್ತಾರೆ.

* ಸಹನೆಯುಳ್ಳವರು ತಮ್ಮ ಭೌತಿಕ ಶರೀರವಲ್ಲದ ದೌರ್ಬಲ್ಯಗಳು ಮತ್ತು ಭಿನ್ನತೆಗಳನ್ನು ಹೊಂದಿದ್ದರೂ ಸಹಜ ಸ್ಥಿತಿಯನ್ನು ಯಾವುದೇ ಹಮ್ಮು ಬಿಮ್ಮು ಇಲ್ಲದೆ ಸ್ವೀಕರಿಸಿ ಮೆಚ್ಚುವ ಹಾಗೂ ಇತರರ ಬಗೆಗೂ ಇದೇ ಧೋರಣೆಯನ್ನು ಹೊಂದುವ ಹೃದಯ ವೈಶಾಲ್ಯತೆ ಹೊಂದಿರುತ್ತಾರೆ.

ಒಟ್ಟಾರೆ, ಸಹನಾ ಮೌಲ್ಯವನ್ನು ಯಾವ ಪ್ರಮಾಣದಲ್ಲಿ ಹೊಂದಿದ್ದಾನೆಂಬುದರ ಆಧಾರದ ಮೇಲೆ ಇತರರ ಜೊತೆ ಅವನ ಪ್ರತಿಕ್ರಿಯೆ ಮಟ್ಟ ನಿರ್ಧಾರವಾಗುತ್ತದೆ.

'ತಾವರೆಯ ಕೊಳ'ದಲ್ಲಿ ಬರುವ ರತ್ನ, ಈ ಬಗೆಯ ಸಹನೆಯಿಂದಲೇ ನಾಯಕ ರಮೇಶನನ್ನು ಸರಿಪಡಿಸಿ, ವೈದ್ಯಕೀಯ ವೃತ್ತಿ ಸ್ವೀಕರಿಸಿ ಅವನು ಮತ್ತೆ ಜೀವನ್ಮುಖಿಯಾಗುವಂತೆ ಮಾಡುತ್ತಾಳೆ. ಸ್ವಲ್ಪ ಅತ್ತಿತ್ತ ಸರಿದರೂ ಕಾದಂಬರಿ ಬೇರೆ ಸ್ವರೂಪ ಪಡೆಯುತ್ತಿತ್ತು. ನಾಯಕ ರಮೇಶ ವೈದ್ಯಕೀಯ ವಿದ್ಯಾರ್ಥಿ. ಕೊನೆಯ ವರ್ಷದಲ್ಲಿರುವಾಗ ಅತ್ಯಂತ ಪ್ರೀತಿಸುತ್ತಿದ್ದ ಅವನ ಅತ್ತಿಗೆ ಮರಣ ಹೊಂದುತ್ತಾರೆ. ಅತ್ತಿಗೆಯನ್ನು ಬದುಕಿಸಿಕೊಳ್ಳಲಾಗದ ವೈದ್ಯಕೀಯದ ಮೇಲೆಯೇ ಅವನಿಗೆ ಬೇಸರವಿರುತ್ತದೆ. ಅಷ್ಟಲ್ಲದೆ ಜೀವನದ ಮೇಲಿದ್ದ ಆಸಕ್ತಿಯೇ ಕಡಿಮೆಯಾಗಿ ಮಂಕಾಗುತ್ತಾನೆ. ಮನೆಯವರೆಲ್ಲರೂ ಬದಲಾವಣೆಗಾಗಿ ಮುಂಬಯಿಯಲ್ಲಿರುವ ಅಣ್ಣ ಶೇಷಾದ್ರಿಯ ಗೆಳೆಯನ ಮನೆಗೆ ನಾಲ್ಕು ದಿವಸ ಕಳುಹಿಸುವುದೆಂದು ನಿರ್ಧರಿಸುತ್ತಾರೆ.

ಶೇಷಾದ್ರಿ ಒಳ್ಳೆಯ ಪ್ರಾಕ್ಟೀಸು ಇರುವ ವೈದ್ಯ. ಅವನ ಹೆಂಡತಿ ರತ್ನ ಮತ್ತು ಚಿಕ್ಕಮಗಳು ಆಶಾ ಇದಷ್ಟೇ ಅವರ ಕುಟುಂಬ. ಮೊದಮೊದಲು ನಿರಾಸಕ್ತನಾಗಿದ್ದ ಅವನು ರತ್ನಳ ಪ್ರೀತಿ, ವಿಶ್ವಾಸದಿಂದ ಕೊಂಚ ಕೊಂಚ ಸುಧಾರಿಸುತ್ತಾನೆ. ಇಬ್ಬರೂ ಒಬ್ಬರಿಗೊಬ್ಬರು ತಮಗೆ ತಿಳಿಯದಂತೆ ಹತ್ತಿರಾಗುತ್ತಾರೆ. ರತ್ನ ಇದರಿಂದ ಬಿಡಿಸಿಕೊಳ್ಳುವ ಸಲುವಾಗಿ ನಳಿನಿ ಎಂಬ ಹುಡುಗಿಯನ್ನು ಪರಿಚಯ ಮಾಡಿಸುತ್ತಾಳೆ. ಆದರೆ ರಮೇಶ ಅವಳೊಂದಿಗೆ ಹೆಚ್ಚಿನ ಗೆಳೆತನವನ್ನು ಬಯಸುವುದಿಲ್ಲ. ಯಾವುದೇ ಅನಾಹುತ ತಮ್ಮಿಬ್ಬರ ಮಧ್ಯೆ ನಡೆಯುವ ಮುನ್ನ ದೂರಾಗಬೇಕೆಂದು ನಿರ್ಧರಿಸಿ, ತಾನು ಊರಿಗೆ ಹೋಗುವ ಆಶೆಯನ್ನು ವ್ಯಕ್ತಪಡಿಸುತ್ತಾನೆ. ಶೇಷಾದ್ರಿ ತಾನು ಊರಿನಲ್ಲಿರದ ಕಾರಣ ಹಿಂತಿರುಗಿದ ಮೇಲೆ ಹೋಗು ಎನ್ನುತ್ತಾನೆ. ಹಾಗಾಗಿ

ಅವನು ಮತ್ತೆ ಉಳಿಯಬೇಕಾಗುತ್ತದೆ. ಈ ಸಂದರ್ಭದಲ್ಲಿ ಮಗು ಕಾಯಿಲೆ ಬೀಳುತ್ತದೆ. ರತ್ನ ರಮೇಶನ ಬಳಿ ಬಿಟ್ಟು ಯಾವುದೋ ಸಮಾರಂಭಕ್ಕೆ ಹೋಗಿರುತ್ತಾಳೆ. ಅಷ್ಟರಲ್ಲಿ ಮಗುವಿಗೆ ಡಿಫ್ತೀರಿಯಾ ಆಗಿರುವುದನ್ನು ಗಮನಿಸಿ ಪ್ರಥಮಚಿಕಿತ್ಸೆ ಕೊಟ್ಟು ಆಸ್ಪತ್ರೆಗೆ ಸೇರಿಸಿರುತ್ತಾನೆ. ಹಾಗಾಗಿ ಮಗು ಪ್ರಾಣಾಪಾಯದಿಂದ ಪಾರಾಗುತ್ತದೆ. ಅಂದರೆ ಮತ್ತೆ ಅವನು ವೈದ್ಯಕೀಯ ರಂಗಕ್ಕೆ ಮರಳುವಂತಾಗುತ್ತದೆ. ಇಲ್ಲಿಗೆ ರತ್ನಳಿಗೂ ಸಮಾಧಾನ ಮತ್ತು ಸಂತೋಷ ಎರಡೂ ಆಗುತ್ತದೆ. ರಮೇಶ ಮತ್ತೆ ಮೊದಲಿನಂತಾಗುತ್ತಾನೆ.

ಸ್ವಾಭಿಮಾನ ಚಾರಿತ್ರ್ಯವಂತನಿಗೆ ಭೂಷಣ, ಉತ್ತಮ ಗುಣದ ಬಗೆಗೆ ಅತ್ಯಧಿಕ ಪ್ರೇಮ, ಒಲವು, ಆಸಕ್ತಿ, ಶ್ರದ್ಧೆ ಮತ್ತು ನಿಷ್ಠೆಯಿಂದ ಇರುವುದು ಸ್ವಾಭಿಮಾನ ಎನಿಸುತ್ತದೆ. ಒಂದು ಶ್ರೇಷ್ಠ ವಿಚಾರ, ವಿಷಯದೊಂದಿಗೆ ಒಂದಾಗುವುದು ಕೂಡಾ ಸ್ವಾಭಿಮಾನು. ಅದು ಸ್ವಯಂ ಅಭಿಮಾನ.

ಬಡತನದ ಬೇಗೆಯಲ್ಲಿ ಬೆಂದಿದ್ದ ಕಾವೇರಿ ಸಿರಿವಂತನಾದ ಕೃಷ್ಣನನ್ನು ಪ್ರೀತಿಸುತ್ತಾಳೆ. ಆದರೆ, ಕೃಷ್ಣನ ತಂದೆ ರಾಮಯ್ಯನವರು ನಾನು ಬದುಕಿರುವವರೆಗೆ ಕಾವೇರಿಯನ್ನು ಮದುವೆಯಾಗಲು ಸಾಧ್ಯವಿಲ್ಲ ಯಾವುದೇ ಆಸ್ತಿಯನ್ನು ಕೊಡುವುದಿಲ್ಲ ಎಂದಾಗ ಪ್ರಶ್ನಿಸಲು ಬಂದ ಕಾವೇರಿಗೆ ಹಣದ ಆಸೆ ತೋರಿಸಿ ಮಗನನ್ನು ಮರೆಯಲು ಆದೇಶಿಸುತ್ತಾರೆ. ಕಾವೇರಿ ಹಣವನ್ನು ತಿರಸ್ಕರಿಸಿ ಹೊರಡುತ್ತಾಳೆ. ಅವಳ ದಿಟ್ಟತನ, ಸ್ವಾಭಿಮಾನ ಇವುಗಳನ್ನು ಕಂಡು ಮೆಚ್ಚಿದ ರಾಮಯ್ಯನವರು ಕಾವೇರಿಯನ್ನು ಸೊಸೆಯಾಗಿ ಸ್ವೀಕರಿಸಲು ಒಪ್ಪುತ್ತಾರೆ. ಆದರೆ ಸ್ವತಃ ಕಾವೇರಿಯೇ ಅದನ್ನು ತಿರಸ್ಕರಿಸುತ್ತಾಳೆ.

ಹೆಣ್ಣು ಗಂಡಿನಷ್ಟೇ ಸಮಾನಳೂ ಎಂಬ ದೋರಣೆಯನ್ನು ಹೊಂದಿದ್ದ ಕಾವೇರಿ ವ್ಯಕ್ತಿಗಿಂತ ವ್ಯಕಿತ್ವಕ್ಕೆ ಹೆಚ್ಚಿನ ಮನ್ನಣೆ ನೀಡುವವಳು ನಾನು. ಆದರೆ ನಿಮ್ಮ ಮಗ ದುರ್ಬಲ ಆದ್ದರಿಂದ ಮದುವೆ ಬೇಡ ಎಂದು ಅಂತಿಮ ನಿರ್ಧಾರ ತಿಳಿಸಿ ಹೊರಡುತ್ತಾಳೆ. ಕಾವೇರಿಯ ಸ್ತ್ರೀಪರ ಧೋರಣೆ ಸ್ವಾಭಿಮಾನ ಇಲ್ಲಿ ಆದರ್ಶಮಯವಾಗಿದೆ.

ಇದೇ ಮೌಲ್ಯವನ್ನು ಒಳಗೊಂಡ ತ್ರಿವೇಣಿಯವರ ಬೆಳ್ಳಿಮೋಡದ ನಾಯಕಿ, ಇಂದಿರಾ ಶ್ರೀಮಂತ ಕಾಫಿ ಪ್ಲಾಂಟರ್ ಅವರಿಗೆ ಒಬ್ಬಳೇ ಮಗಳು. ಎಲ್ಲಾ ಆಸ್ತಿಗೂ ಅವಳೇ ಹಕ್ಕುದಾರಳೆಂದು ಭಾವಿಸಿದ ಯುವಕ ಮೋಹನ ಅವಳೊಂದಿಗೆ ಪ್ರೇಮದ ನಾಟಕವಾಡುತ್ತಾನೆ. ಅವಳಿಗೊಬ್ಬ ತಮ್ಮ ಹುಟ್ಟಿ ಬರುತ್ತಾನೆ. ಇದರ ನಂತರ ಇವನ ವರ್ತನೆಯೇ ಬದಲಾಗುತ್ತದೆ. ತಾನು ಮದುವೆಯಾಗುತ್ತೇನೆಂದು ಹೇಳಿದ್ದೆಲ್ಲಾ ನಿಜವಲ್ಲ ಎನ್ನುತ್ತಾನೆ. ಈ ಮಧ್ಯೆ ಅವನು ಬಿದ್ದು ನಡೆಯಲಾಗದ ಸ್ಥಿತಿ ತಲುಪುತ್ತಾನೆ. ಅಂದರೆ ಮತ್ತಷ್ಟು ದಿವಸ ಇವರ ಮನೆಯಲ್ಲೇ

ಪು. ೨೨೬

ಉಳಿಯಬೇಕಾಗುತ್ತದೆ. ನಾಯಕಿ ತನಗೆ ಮೋಸ ಮಾಡಿದವನು ಎಂಬುದನ್ನು ಮನಸ್ಸಿಗೆ ತಂದುಕೊಳ್ಳದೆ ಅವನ ಉಪಚಾರದಲ್ಲಿ ತೊಡಗುತ್ತಾನೆ. ಆಗ ಅವಳ ಮನದ ಎತ್ತರ ಅವನಿಗೆ ತಿಳಿಯುತ್ತದೆ. ಮತ್ತೆ ಮದುವೆಯಾಗುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಸ್ವಾಭಿಮಾನದ ನಾಯಕಿ ತಿರಸ್ಕರಿಸುತ್ತಾಳೆ.

ಮತ್ತೊಂದು, ಜೀವನ ಮೌಲ್ಯವಾದ ಪ್ರೇಮ ಪ್ರೀತಿ ಎಂದರೆ ಒಂದು ವ್ಯಕ್ತಿಯ ಅಥವಾ ವಸ್ತುವಿನ ಬಗೆಗೆ ವಿಶ್ವಾಸ ವ್ಯಕ್ತಪಡಿಸುವುದು ಅಥವಾ ಆತ್ಮೀಯತೆ ವ್ಯಕ್ತಪಡಿಸುವುದು. ಅದು ಕೇವಲ ಲೈಂಗಿಕ ವಿಷಯಕ್ಕೆ ಸೀಮಿತವಾದುದಲ್ಲ. ಪ್ರೇಮವು ಅಮೂಲ್ಯವಾದುದು. ಅಳಿಸಲಾಗದ ಮಹತ್ವದ ಗುಣವಿರುವುದರಿಂದಲೇ ಪ್ರಪಂಚದಲ್ಲಿ ಒಬ್ಬರಿಗೊಬ್ಬರು ಪ್ರೀತಿಸಿ ಸಂತೋಷಿಸುವುದನ್ನು ಕಾಣುತ್ತೇವೆ. ಇದರಿಂದ ಸೃಷ್ಟಿಯಲ್ಲಿರುವ ಪ್ರತಿಯೊಂದು ಜೀವಿ ಮತ್ತು ವಸ್ತುವನ್ನು ಪ್ರೀತಿಸಬೇಕು ಏಕೆಂದರೆ ಸೃಷ್ಟಿಯಲ್ಲಿ ಜನಿಸಿದ ಪ್ರತಿಯೊಂದು ಜೀವಿ ಮತ್ತು ವಸ್ತುವಿಗೂ ಬದುಕಿ ಬಾಳುವ ಹಕ್ಕುಂಟು. ಅದನ್ನು ಕಸಿದುಕೊಳ್ಳುವ ಹಕ್ಕು ಯಾವ ಜೀವಿಗೂ ಇಲ್ಲಿ ಎನ್ನುವುದನ್ನು ತಿಳಿಯಬೇಕು.

ಮನುಷ್ಯ ಸಮಾಜಜೀವಿ ಒಂಟಿಯಾಗಿ ಬಾಳಲು ಸಾಧ್ಯವಿಲ್ಲದ ಮಾತು, ಸಮಾಜದಲ್ಲಿ ಜೀವಿಸುವನು ಎಂದರೆ ಅವನು ಸಮಾಜದ ಇತರ ವ್ಯಕ್ತಿಗಳ ಜೊತೆ ಪ್ರೇಮದಿಂದ ಇರಬೇಕು. ಏಕೆಂದರೆ ಪ್ರೇಮ ವಂಚಿತ ಜೀವನ ನಿಷ್ಪ್ರಯೋಜಕ. ಪ್ರೇಮವು ಉಳಿದ ವ್ಯಕ್ತಿಗೆ ತನುಮನವನ್ನು ಆಕರ್ಷಿಸುತ್ತದೆ. ದ್ವೇಷದಿಂದ ಸಾಧಿಸಲಾಗದ ಕೆಲಸವನ್ನು ಪ್ರೀತಿಯಿಂದ ಸಾಧಿಸಬಹುದು.

ತ್ರಿವೇಣಿಯವರ ಕಾದಂಬರಿಗಳಲ್ಲಿ ಪ್ರೀತಿ ಪ್ರೇಮದ ಮೌಲ್ಯವು ವಿಜೃಂಭಿಸುತ್ತದೆ. ಏಕೆಂದರೆ ಅದು ಅವರ ಬರೆವಣಿಗೆಯ ಶೈಲಿಯಲ್ಲಿ ಹಾಸುಹೊಕ್ಕಾಗಿದೆ. ಪ್ರೇಮ ಪ್ರೀತಿಯ ಕುರಿತು ವಿಶಾಲಮನೋಭಾವದಿಂದ ಸರಾಗವಾಗಿ ಬರೆಯುವ ಸೃಜನಶೀಲತೆ ಅವರ ಕೃತಿಗಳಲ್ಲಿ ಕಂಡುಬರುತ್ತದೆ. ಇದು ಅವರ ರಚನೆಯ ಗಟ್ಟಿತನವೂ ಹೌದು.

"ಕಿಶೋರ ಪ್ರೇಮವನ್ನು ಚಿತ್ರಿಸುವುದರಲ್ಲಿ ತ್ರಿವೇಣಿಯವರು ಅಪ್ರತಿಮರು. ಆಳವಾದ ಅರಿವಿನಿಂದ ಮತ್ತು ಮುಖ್ಯವಾಗಿ, ನವಿರಾದ ಹಾಸ್ಯದಿಂದ ತ್ರಿವೇಣಿಯವರು ಯುವಪ್ರೇಮಿಗಳ ಪ್ರಣಯ ಕಾಲದ ಭಯ ಭೀತಿಗಳನ್ನು ಮತ್ತು ಪ್ರೇಮವು ಯಶಸ್ವಿಯಾದಾಗ ಅವರ ಆನಂದ ಹಿಗ್ಗುಗಳನ್ನು ಮತ್ತೆಮತ್ತೆ ತಮ್ಮ ಕಾದಂಬರಿಗಳಲ್ಲಿ ಸೆರೆ ಹಿಡಿಯುತ್ತಾರೆ. ತ್ರಿವೇಣಿಯವರ ಹೆಚ್ಚಿನ ಕಾದಂಬರಿಗಳಲ್ಲಿ ಓದುಗರ ಮನಸ್ಸಿನಲ್ಲಿ ಯಾವಾಗಲೂ ಹಸಿರಾಗುಳಿಯುವ ದೃಶ್ಯಗಳೆಂದರೆ, ಯುವ ಪ್ರೇಮಿಗಳ ಪ್ರಣಯ ದೃಶ್ಯಗಳು"[೨೪].

ಪು. ೨೨೭

'ಹೂವು ಹಣ್ಣು' ಕಾದಂಬರಿಯಲ್ಲಿ ಬರುವ ನಾಯಕಿ ರಮಾಳ ಮಗಳು ಶೀಲಾ ಕಾಲೇಜು ಅಧ್ಯಾಪಕನನ್ನು ಪ್ರೀತಿಸುವ ಪ್ರೀತಿಸಿ ಮದುವೆಯಾಗುವ ಸಂದರ್ಭ ಸನ್ನಿವೇಶಗಳು ಯಶಸ್ವಿಯಾಗಿ ಕಾದಂಬರಿಗೆ ಮೆರುಗು ನೀಡಿದೆ. ಅಂತೆಯೇ 'ಅಪಜಯ'ದ ನಾಯಕಿ ಮೀರಾಳ ಸಹಪಾಠಿಗಳಾದ ವಿಜಯ್ ಹಾಗೂ ಗೋಪಿನಾಥ ಅವರ ಪ್ರೇಮ ಪ್ರಸಂಗಕ್ಕೆ ಮೀರಾಳೇ ನಿಂತು ವಿವಾಹ ಮಾಡಿಸುವ ರೀತಿ 'ಕೀಲುಗೊಂಬೆ'ಯಲ್ಲಿ ಮನೆಕೆಲಸ ಮಾಡಲು ಬರುವ ರೋಹಿಣಿಯು ಮನೆಯಲ್ಲಿ ಎಲ್ಲರಿಗೂ ಅಚ್ಚುಮೆಚ್ಚಿನವಳಾಗುತ್ತಾಳೆ. ಮಧುವಿಗೂ ರೋಹಿಣಿಗೂ ಪರಸ್ಪರ ಅವ್ಯಕ್ತ ಆಕರ್ಷಣೆಯೊಂದು ಬೆಳೆದು ಅವಳ ವಿವಾಹವು ಬೇರೆಯವರ ಜೊತೆ ನಡೆದಾಗ ಮಧುವಿಗೆ ಆಗುವ ಅನುಭವ. 'ಮೊದಲಹೆಜ್ಜೆ'ಯಲ್ಲಿ ಬರುವ ನಾಯಕಿಯ ತಂಗಿ ಮಣಿಯನ್ನು ಮೆಚ್ಚಿ ಮದುವೆಯಾಗುವ ಹುಡುಗ. ಯೌವ್ವನದ ಮಧ್ಯವಯಸ್ಕನನ್ನೇ ಒಪ್ಪಿ ವಿವಾಹವಾಗುವ 'ಹೃದಯಗೀತೆ'.

ಈ ಎಲ್ಲಾ ಕಾದಂಬರಿಗಳು ಪ್ರೀತಿ ಪ್ರೇಮದ ಹಿನ್ನೆಲೆಯಲ್ಲಿ ಮೂಡಿ ಬಂದಿರುವುದರಿಂದ ಪ್ರತಿಯೊಂದು ಸನ್ನಿವೇಶ, ಸಂಭಾಷಣೆ ಲವಲವಿಕೆಯಿಂದ ಕೂಡಿದೆ. ತ್ರಿವೇಣಿಯವರ ಬರೆಹ ಸತ್ವಶಾಲಿಯಾಗಿಸಿರುವ ರೀತಿಯೇ ಅಂಥಾದ್ದು. ಏಕೆಂದರೆ, ಸ್ವಲ್ಪ ಆಚೆ ಈಚೆ ಹೋದರು ವ್ಯತ್ಯಾಸವಾಗುವ ಮೌಲ್ಯವನ್ನು ಜೀವನದ ಹತ್ತಿರಕ್ಕೆ ಅಪ್ಯಾಯಮಾನವಾಗಿ ಸೆಳೆಯುವ ರೀತಿ ಗಮನಾರ್ಹವಾದುದು.

'ಕಂಕಣ'ದ ಕಸ್ತೂರಿ ಮತ್ತು ಸುರೇಶನ ಪ್ರೇಮ ಪ್ರಕರಣ ಚೆನ್ನಾಗಿ ಬಂದರೂ ದುರಂತಕ್ಕೀಡಾಗುವ ಕಸ್ತೂರಿ ಪಾತ್ರ ಹಾಗೂ ರಮಾ ನಾಗೇಂದ್ರರ ಪ್ರಣಯ ವಿಚಾರಗಳು ಪರಿಣಯಕ್ಕೆ ತಿರುಗದೇ ಹೋದರೂ ಅವು ಕೊಡುವ ಬೆಚ್ಚನೆಯ ಸನ್ನಿವೇಶಗಳು 'ಬೆಳ್ಳಿಮೋಡ'ದ ಇಂದಿರಾ ಮೋಹನರ ಮದುವೆ ಮುರಿದುಬಿದ್ದರು ಪ್ರೇಮದ ಚುಂಬಿತ ಗಾಳಿಯನ್ನು ಬೀಸುವ ತಂಪು ವಾತಾವರಣ 'ಅವಳ ಮನೆಯ ಸರೋಜಿನಿ ಮಾಧವ ವಸಂತಗಾನದ ಸರಳೆ ವಾಸು ಪ್ರಸಂಗ, 'ಕಾಶೀಯಾತ್ರೆ'ಯ ಮಂಗಳೆ ನರಹರಿಯ ಪ್ರೇಮ ವಿವಾಹ 'ಬಾನು ಬೆಳಗಿತು' ಕಲ್ಯಾಣಿ ರಂಗನಾಥರ ಪ್ರೇಮ ಸಂಸಾರದ ಸಾಗರ, 'ಹಣ್ಣೆಲೆ ಚಿಗುರಿದಾಗ' ಮಾಲತಿ ಪ್ರಸಾದರ ಪುನರ್ವಿವಾಹ ಜಯಂತಿ ಶಿವು ಅವಳ ಮಗಳು ಭವಾನಿ ಜಗನ್ನಾಥ ಹೀಗೆ ಪಟ್ಟಿ ಮುಂದುವರೆಯುತ್ತದೆ. ಹೀಗೆ ತ್ರಿವೇಣಿಯವರು ಪ್ರತಿಯೊಂದು ಕಾದಂಬರಿಯಲ್ಲಿ ಪ್ರೀತಿ ಪ್ರೇಮದ ಜೀವನ ಮೌಲ್ಯವನ್ನು ಅತ್ಯುತ್ತಮವಾಗಿ ಚಿತ್ರಿಸಿದ್ದಾರೆ.

ಆರ್ಯಾಂಬರವರು ಕೂಡಾ ಈ ಮೌಲ್ಯ ಕುರಿತು ತ್ರಿವೇಣಿಯವರಿಗಿಂತ ಹೊರತಾಗಿಲ್ಲ. ಇವರು ಸಹ ಪ್ರತಿಯೊಂದು ಕಾದಂಬರಿಯಲ್ಲಿ ಪ್ರೀತಿ ಪ್ರೇಮ ಮೌಲ್ಯವನ್ನು ಚೆನ್ನಾಗಿ ಬಳಸಿದ್ದಾರೆ. 'ಹೊಂಗನಸು'ಯಿಂದ ಹಿಡಿದು 'ಬಸವಿ'ಯವರೆಗೂ ಪ್ರೇಮ ಮೌಲ್ಯ ಬೆಳೆಸಿದ್ದಾರೆ.

'ಪ್ರಕೃತಿಪುರುಷ'ದಲ್ಲಿನ ಶಾಮಣ್ಣ ಕಮಲ, 'ಬಸವಿ'ಯ ಸಂಪಣ್ಣ ರತ್ನ 'ಪತಿತಪಾವನ'ದ ಆನಂದ ಗೌರಿ 'ಸಂಬಂಧಗಳು' ಭವಾನಿ ಭಾಸ್ಕರ್ 'ಗುರಿ' ಜಯರಾಮು ಮೀನಾ 'ಅಪೂರ್ವಕಥೆ'ಯ ಗೌತಮ ಶ್ರೀದೇವಿ. 'ಅಮರಪ್ರೇಮ'ದ ರಾಮಕೃಷ್ಣ, ಸವಿತ.

ಸವಿತ ತನ್ನ ಪತಿ ವಿದೇಶಕ್ಕೆ ಹೋಗಿದ್ದಾಗ, ತನ್ನ ದೇಹದಲ್ಲಿ ಹೇಳಿದಾಗೆ ಸವಿತ ಪಾತಾಳಕ್ಕೆ ಇಳಿಯುತ್ತಾಳೆ. ಪತಿ ಸ್ವದೇಶಕ್ಕೆ ಮರಳುವ ಸುದ್ದಿ ಬಂದಾಗ ಪತಿಯ ಜೀವನದಿಂದ ಹೊರಟುಹೋಗಬೇಕೆಂದು ತನ್ನ ಕಾಯಿಲೆಯ ಬಗ್ಗೆ ವಿವರವಾಗಿ ಪತ್ರದ ಮುಖೇನ ತಿಳಿಸಿ, ಅವಳು ಮೈಸೂರಿನಲ್ಲಿ ಹಾಸ್ಪೆಲಿಗೆ ಹೊರಟು ಹೋದಾಗ ವಿದೇಶದಿಂದ ಹಿಂದಿರುಗಿ ರಾಮಕೃಷ್ಣ ಪತ್ರವನ್ನು ಓದಿ ವಿಷಯ ತಿಳಿದು, ತನ್ನ ಪತ್ನಿಯನ್ನು ಅರಸಿ ಹಾಸ್ಪೆಲಿಗೆ ಬಂದು ಅವಳನ್ನು ಸ್ವೀಕರಿಸುತ್ತಾನೆ. ಇಲ್ಲಿ ಲೇಖಕಿ ಪತಿ ಪತ್ನಿಯರ ಗಾಢವಾದ ಪ್ರೀತಿಯನ್ನು ಇಬ್ಬರ ತ್ಯಾಗ ಮನೋಭಾವವನ್ನು ಬಹಳ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಪತ್ನಿಗೆ ಕಾಯಿಲೆ ಎಂದಾಕ್ಷಣ ಹಿಂದೆ ಸರಿಯುವ ಗಂಡಸರೇ ಸಾಮಾನ್ಯವಾಗಿ ಹೆಚ್ಚು. ಅವರೇ ಇಲ್ಲಿ ರಾಮಕೃಷ್ಣ ತನ್ನ ಪತ್ನಿಯನ್ನು ತನ್ನ ಹೃದಯದಲ್ಲಿ ಸ್ಥಾಪಿಸಿಕೊಂಡಿದ್ದ ಅವನ ಅಚಲವಾದ ಪ್ರೀತಿ ಹೃದಯದಿಂದ ಹೃದಯಕ್ಕೆ ಎಂಬುದು ಇಲ್ಲಿ ಪ್ರಕಟವಾಗುತ್ತದೆ.

'ಕಸ್ತೂರಿ'ಯ ಶ್ಯಾಮ, ಕಸ್ತೂರಿಯ ಪ್ರೀತಿಗಾಗಿ ಹಂಬಲಿಸುವ ಪರಿ 'ಬಲೆ' ಕಾದಂಬರಿಯಲ್ಲಿ ಪ್ರೀತಿ ಪ್ರೇಮಗಳದ್ದೇ ಅಧಿಪತ್ಯ. ಹೆಣ್ಣು ಗಂಡಿರ ನಡುವೆ ಇರಬೇಕಾದ ಸಂಬಂಧಗಳ ಮೌಲ್ಯ ಗಂಡು ಹೆಣ್ಣಿನ ಪ್ರೀತಿ ಪ್ರೇಮಗಳು ವಿಶ್ವಾಸ ನಂಬಿಕೆಗಳ ಬೆಂಗಾವಲಿನಲ್ಲಿ ಸಹಜವಾಗಿ ಅರಳುವ ರೀತಿಯನ್ನು ಪ್ರತಿಪಾದಿಸುವ 'ವಿಶ್ವಧರ್ಮ' 'ದೇವಮಾನವ'ದ ಸೀತಾ ಕೃಷ್ಣರ ಒಲುಮೆ. 'ಕಾಮನಬಿಲ್ಲು'ವಿನ ಶೇಖರ ಭಾರತಿ 'ಬದುಕಿನ ಬವಣೆ'ಯಲ್ಲಿನ ನಾಗು ಮಹೇಶರ ನಿಷ್ಕಲ್ಮಶ ಪ್ರೀತಿ.

'ಕಪ್ಪು ಬಿಳುಪು' ವ್ಯಕ್ತಿಯ ಗುಣ, ಸ್ವಭಾವವನ್ನು ಅನಾವರಣಗೊಳಿಸುವಂತಹ ಕಥಾವಸ್ತು. ಗುಣವನ್ನು ಬಿಳುಪು ಎಂದು ಅವಗುಣವನ್ನು ಕಪ್ಪು ಎಂದು ಸೂಚಿಸುವುದರ ಮೂಲಕ ಗುಣ ಮತ್ತು ಅವಗುಣಗಳನ್ನು ಲೌಖಿಕವಾಗಿ ವಿವೇಚಿಸಲಾಗಿದೆ. ಇದರೊಂದಿಗೆ ಶ್ರೀಮಂತ ಮತ್ತು

ಬಡತನದ ಶ್ರೀಮಂತಿಕೆ, ವಿದ್ಯೆ, ನಾಗರೀಕತೆಗಳಿಂದ ಗುಣವನ್ನು ನಿರ್ಧರಿಸಲಾಗುವುದಿಲ್ಲ. ಅವರವರ ವರ್ತನೆ ಹಾಗೂ ನಡವಳಿಕೆಯಿಂದ ಗುಣದ ಪರಿಚಯವಾಗುತ್ತದೆ. ಕೊನೆಗೆ ಗುಣ ಎಂಬ ಮೌಲ್ಯಕ್ಕೆ ಮಾನ್ಯತೆ ಸಿಕ್ಕಿ ಸ್ವಾರ್ಥಮುಕ್ತವಾದ ಪ್ರೀತಿಗೆ ಬೆಲೆ ಸಿಗುವಂತಾಗುತ್ತದೆ.

ಬಡವನಿಗೆ ಬಾಯಿ ಇಲ್ಲ ಎನ್ನುವ ಸ್ಥಿತಿಯಲ್ಲಿ ವತ್ಸಲ ಇರುವಾಗ ಇವಳ ಅಸಹಾಯಕ ಸ್ಥಿತಿಯನ್ನು ಚಂದ್ರ ದುರುಪಯೋಗಪಡಿಸಿಕೊಂಡಂತೆ ಕಾಣಲಾಗುತ್ತದೆ. ಚಂದ್ರಳ ಮಾತಿಗೆ ಕಟ್ಟುಬಿದ್ದು, ಒಲ್ಲದ ಮನಸ್ಸಿನಿಂದಲೇ ನಿಡಘಟ್ಟಕ್ಕೆ ಹೋದಳು. ತನ್ನ ನಡವಳಿಕೆಯಿಂದ ಎಲ್ಲರ ಮನಸ್ಸನ್ನು ಗೆದ್ದಳು. ಶ್ರೀವತ್ಸನ ಆತ್ಮಹತ್ಯೆಗೆ ಕಾರಣವಾದಿ ಚಂದ್ರಳನ್ನು ದ್ವೇಷಿಸುತ್ತಿದ್ದ ಮಧುಸೂದನನು ಚಂದ್ರಳ ಪಾತ್ರ ನಿರ್ವಹಿಸುತ್ತಿದ್ದ ವತ್ಸಳನ್ನು ಪ್ರೀತಿಸತೊಡಗಿದ. ಮಧುಸೂದನ ಕುರೂಪನಲ್ಲಿ ತನ್ನಷ್ಟೇ ವಿದ್ಯಾವಂತ, ಸ್ಥಿತಿವಂತನೆಂದು ತಿಳಿದ ಚಂದ್ರ ಮಧುಸೂದನನನ್ನು ಮದುವೆಯಾಗಲು ಒಪ್ಪಿಕೊಂಡಳು. ಮಧುಸೂದನನೊಂದಿಗೆ ಮದುವೆ ಮಾಡಿಸುವ ತನ್ನ ಪಾತ್ರದಿಂದ ದೂರಮಾಡಿದಳು. ಈ ಸಂದರ್ಭದಲ್ಲಿ ಹೃದಯ ತುಡಿತಗಳಿಲ್ಲದ ಸ್ವಾರ್ಥಿಯಂತೆ ಚಂದ್ರ ಕಾಣಿಸಿಕೊಳ್ಳುತ್ತಾಳೆ.

ಚಂದ್ರ ವತ್ಸಲಳ ಸೌಮ್ಯಗುಣವನ್ನು ತನ್ನ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಂಡಳು. ಎರಡು ದಿನದ ಕನಸಿನ ಬದುಕಿನಿಂದ ವಾಸ್ತವಿಕ ಬದುಕಿಗೆ ವತ್ಸಲ ಹಿಂದಿರುಗಬೇಕಾಯಿತು. ಆದರೆ ತನ್ನ ತನು ಮನವನ್ನೆಲ್ಲವನ್ನೂ ಮಧುಸೂದನನಿಗೆ ಧಾರೆ ಎರೆದಿದ್ದಳು. ಅವನ ನೆನಪಿನಲ್ಲಿ ಮದುವೆಯಾಗದೆ ಇರುತ್ತೇನೆಂದು ತ್ಯಾಗಕ್ಕೂ ಸಿದ್ಧಳಾದಳು. ವತ್ಸಲಳ ನಿಸ್ವಾರ್ಥವಾಗಿ ಪ್ರೀತಿಸುವ ಗುಣ ಗಮನಾರ್ಹವಾದುದು. ಒಂದು ರೂಪ ಎರಡು ಗುಣಗಳಾದ ಚಂದ್ರು ಮತ್ತು ವತ್ಸಲರ ಜೀವನದಲ್ಲಿ ನಿಸ್ವಾರ್ಥ ಪ್ರೀತಿಗೆ ಬೆಲೆ ಸಿಕ್ಕಿರುವುದನ್ನು ಗಮನಿಸಬಹುದು.

ಹೀಗೆ, ವಿಶ್ಲೇಷಿಸಿ ಚರ್ಚಿಸಿದ ಜೀವನ ಮೌಲ್ಯಗಳೂ ಸೇರಿದಂತೆ ವಿವಿಧ ಮೌಲ್ಯಗಳು ವ್ಯಕ್ತಿಯ ಮೇಲೆ ಸ್ವಭಾವವನ್ನು ಬೀರುತ್ತವೆ. ಇವುಗಳ ಪರಿಣಾಮದಲ್ಲಿ ವ್ಯಕ್ತಿಯ ವರ್ತನೆಯಲ್ಲಿ ಕಂಡು ಬರುತ್ತದೆ. ಅಂದರೆ ಮೌಲ್ಯಗಳಿಂದ ಪ್ರಭಾವಿತವಾಗಿ ವ್ಯಕ್ತಿಯು ತನ್ನ ವರ್ತನೆಯನ್ನು ಬದಲಿಸಿಕೊಳ್ಳುತ್ತಾನೆ.

ತನಗೆ ಉಪಯುಕ್ತವಾದ ವಸ್ತುವನ್ನು ಹೊಂದಬೇಕೆನ್ನುವುದು ಸಹಜವಾದ ವಿಚಾರ. ಆದ್ದರಿಂದ 'ಉಪಯುಕ್ತತೆ' ಯನ್ನೇ ಪರಿಗಣಿಸಿದಲ್ಲಿ ಕೆಲವು ವಸ್ತುಗಳು ಕೆಲವು ಮೌಲ್ಯಗಳು ಅತ್ಯಂತ ಬೇಡಿಕೆಯ ಸಂಗತಿಗಳಾಗುತ್ತವೆ. ಮಾನವನು ಬೆಳವಣಿಗೆಯ ಹಂತಗಳನ್ನು ಕ್ರಮಿಸುತ್ತಿದ್ದಂತೆಯೇ ಬೇಡಿಕೆಯ ಕ್ಷೇತ್ರಗಳೂ ಹೆಚ್ಚಾಗುತ್ತದೆ. ವೈಯಕ್ತಿಕ ಬೇಡಿಕೆ, ಸಾಮಾಜಿಕ ಅಗತ್ಯ, ಭಾವನಾತ್ಮಕ ಬೇಡಿಕೆ ಮುಂತಾದವು ಬೆಳವಣಿಗೆಯ ಜೊತೆಗೆ ಸಾಗುತ್ತದೆ.

ಯಾವುದೇ ಒಂದು ಘಟನೆ ವಸ್ತು ಅಥವಾ ಲಕ್ಷಣವು ವ್ಯಕ್ತಿಯಲ್ಲಿ ಮೌಲ್ಯವಾಗಿ ರೂಪುಗೊಳ್ಳುವುದು ಒಂದು ಬಗೆಯ ಮಾನಸಿಕ ಬದಲಾವಣೆ. ಈ ಬದಲಾವಣೆಯು ವ್ಯಕ್ತಿಯಲ್ಲಿ ಉಂಟಾದ ಬೇಡಿಕೆಯ ತೀವ್ರತೆ ಹಾಗೂ ಪೂರೈಕೆಯ ಮಟ್ಟವನ್ನು ಅವಲಂಬಿಸಿರುತ್ತದೆ. ವಿವಿಧ ಹಂತಗಳಲ್ಲಿ ಇಂತಹ ಪರಿಣಾಮ ಉಂಟಾಗುತ್ತದೆ. ಅವುಗಳ ಒಟ್ಟಾರೆ ಪರಿಣಾಮದಿಂದ ಮೌಲ್ಯವು ರೂಪುಗೊಳ್ಳುತ್ತದೆ. ಇದನ್ನು ಮನೋವೈಜ್ಞಾನಿಕವಾಗಿ ಪ್ರೇರಣಾ ಬಲ ಎನ್ನುವರು. ಈ ಬಲವು ವ್ಯಕ್ತಿಯ ವಿವಿಧ ಬಗೆಯ ವರ್ತನೆಗೆ ಕಾರಣ ಎಂದು ಗುರುತಿಸಲಾಗಿದೆ ಹೀಗೆ ಮೌಲ್ಯಗಳು ವರ್ತನೆಗೆ ಬಲವನ್ನೊದಗಿಸುತ್ತವೆ ಎಂದು ಹೇಳಬಹುದು.

ವರ್ತನೆಯಿಂದ 'ವ್ಯಕ್ತಿತ್ವ' ನಿರ್ಧಾರಗೊಳ್ಳುವುದು. ಆದ್ದರಿಂದ ವ್ಯಕಿತ್ವ ನಿರ್ಮಾಣದಲ್ಲಿ ಮೌಲ್ಯಗಳು ಪ್ರೇರಣಾಬಲನ್ನು ಒದಗಿಸುವವು ಎಂದು ತಿಳಿದುಬರುತ್ತದೆ. ಉತ್ತಮ ವ್ಯಕ್ತಿತ್ವ ಸಿದ್ದಿಸಲು ವಿವಿಧ ಮೌಲ್ಯಗಳ ಸಂಶ್ಲೇಷಣೆಯು ಈ ದೃಷ್ಟಿಯಿಂದ ಮಹತ್ವವನ್ನು ಪಡೆದಿದೆ. ಇದರಂತೆಯೇ ಪ್ರತಿಯೊಬ್ಬ ವ್ಯಕ್ತಿಯೂ ವಿವಿಧ ಮೌಲ್ಯಗಳಿಂದ ಪ್ರಭಾವಿತನಾಗುತ್ತಾನೆ. ಅವು ವ್ಯಕ್ತಿಯ ಜೀವನದುದ್ದಕ್ಕೂ ವರ್ತನೆಯ ಪ್ರತಿಹಂತದಲ್ಲಿಯೂ ಪರಿಣಾಮವನ್ನು ಬೀರಲು ಕಾರಣವಾಗುತ್ತದೆ. ಆದ್ದರಿಂದ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಆದ್ದರಿಂದ ವ್ಯಕ್ತಿತ್ವವನ್ನು ವಿವಿಧ ಮೌಲ್ಯಗಳ ಸಂಕೀರ್ಣ, ವರ್ತನಾ ಫಲ' ಎನ್ನಬಹುದು.

ಕೌಟುಂಬಿಕ ಔದ್ಯೋಗಿಕ ಬದುಕುಗಳ ನಡುವೆ ಹುಟ್ಟಿಕೊಳ್ಳುವ ತಾಕಲಾಟಗಳು ಬದಲಾಗದ ಪರಂಪರಾಗತ ಮೌಲ್ಯಗಳು, ಬದಲಾದ ಬದುಕು. ತಾನು ಕೊಟ್ಟ ಸ್ವಾತಂತ್ರ್ಯದ ಭಾವನೆಗಳು ತಲೆಮಾರುಗಳ ಅಂತರ ಸೃಷ್ಟಿಸುವ ಸಮಸ್ಯೆಗಳು ಹೀಗೆ ನಮ್ಮ ಕೃತಿಗಳು ಒಳಗೊಳ್ಳಬೇಕಾದ ವಸ್ತು ಇನ್ನೂ ಅಪಾರವಾಗಿದೆ. ಇಂತಹ ಅನುಭವ ಶೋಧಗಳತ್ತ ಲೇಖಕಿಯರು ಗಮನ ಹರಿಸಿದ್ದಾರೆ. ಹಾಗೆ ಪರಂಪರಾಗತ ನಿರೀಕ್ಷೆಗಳನ್ನು ಬದಲಾಯಿಸುವ ಹೊಸ ಮೌಲ್ಯಸ್ಥಾಪನೆಗೆ ನೆರವಾಗುವಂಥ ಕಾದಂಬರಿಗಳು ರಚನೆಯಾಗಿವೆ.

ಹೆಣ್ಣಿನ ಪಾತಿವ್ರತ್ಯ, ಶೀಲ, ತಾಯ್ತನ ಕುರಿತ ಅತಿಯಾದ ಕಾಳಜಿ ಆಕೆಯ ಇತರ ಎಲ್ಲಾ ಬೆಳವಣಿಗೆಗಳಿಗೆ ದೊಡ್ಡ ಅಡಚಣೆಯಾಗುತ್ತದೆ. ಶೀಲವೆನ್ನುವುದು ಹೆಣ್ಣಿಗೆ ಮಾತ್ರ ಇರಬೇಕಾದ ಗುಣವೇನೋ ಎಂಬಂತಾಗಿದೆ. ಇದನ್ನು ಪದೇ ಪದೇ ಒತ್ತಿ ಹೇಳುತ್ತಾ, ಮತ್ತೆ ಸ್ಥಾಪಿಸುವ ಕೆಲಸ ನಡೆಯುತ್ತದೆ. ಪರಿಸ್ಥಿತಿಯ ಒತ್ತಡಗಳಿಗೆ ಸಿಕ್ಕಿದ ಹೆಣ್ಣಿಗೆ ವೇಶ್ಯೆಯಾಗುವಂತಹ ದಾರಿ ಎಂಬಂತಹ ಚಿತ್ರಣ ಮತ್ತೆ ಶೀಲವೇ ಅವಳ ಬದುಕಿನ ಮೌಲ್ಯ ಎಂದು ದೃಢೀಕರಿಸಿದಂತಾಗುತ್ತದೆ. ಒಟ್ಟಿನಲ್ಲಿ ಏಕಪಕ್ಷೀಯವಾದ ನಿಲುವು. ಪೂರ್ವನಿಶ್ಚಿತ ಧೋರಣೆ,

ವಸ್ತು ಮತ್ತು ತಂತ್ರಗಳ ನೇಮಿತತೆ ಮುಂತಾದುವೆಲ್ಲ ಬದುಕನ್ನು ಸಮಗ್ರವಾಗಿ ನೋಡುವುದಕ್ಕೆ ಅಡ್ಡಿಯಾಗುತ್ತದೆ ಎಂಬ ಅರಿವು ಬಹಳ ಮುಖ್ಯ ಈ ನಿಟ್ಟಿನಲ್ಲಿ ಜೀವನ ಮೌಲ್ಯಗಳು ಬದುಕನ್ನು ಪಕ್ವವಾಗಿಸುತ್ತವೆ ಎಂಬುದೇ ವಾಸ್ತವ.

ಶ್ರೀಮತಿ ಆರ್ಯಾಂಬರವರು ಹಾಗೂ ತ್ರಿವೇಣಿಯವರು ತಮ್ಮ ಕಾದಂಬರಿಗಳ ಮೂಲಕ ವಿಶಿಷ್ಟವಾದ ಸ್ತ್ರೀವಾದಿ ಸಂವೇದನೆಯನ್ನು ಚಿತ್ರಿಸುತ್ತಾರೆ. ಪುರುಷ ಪ್ರಧಾನವಾದ ಮೌಲ್ಯಗಳಿಂದ ಸ್ತ್ರೀ ಹೇಗೆ ಬಳಲುತ್ತಿದ್ದಾಳೆ ಎಂಬುದನ್ನು ಎಳೆಎಳೆಯಾಗಿ ತಿಳಿಸುತ್ತಾರೆ. ಪುರುಷ ಪ್ರಧಾನ ಮೌಲ್ಯಗಳಿಂದ ಸ್ತ್ರೀಯರ ಜೊತೆಗೆ ಪುರುಷರು ಬಿಡುಗಡೆ ಹೊಂದಬೇಕೆಂಬ ಅಂಶವನ್ನು ಅವರು ಪ್ರತಿಪಾದಿಸುತ್ತಾರೆ. ಸಾಹಿತ್ಯಕೃತಿ ಸಾಮಾಜಿಕ ಬದಲಾವಣೆಗೆ ಕಾರಣವಾಗಿ ಸಂತಸದ ಸಮಾಜ ನಿರ್ಮಾಣಕ್ಕೆ ಅನುವಾಗಬಲ್ಲದು. ಈ ಬದಲಾವಣೆಗಳು ಘೋಷಣೆ, ಪ್ರತಿಘೋಷಣೆಗಳ ಮೂಲಕ ಘರ್ಷಣೆಯ ಮಾಧ್ಯಮದಲ್ಲಿ ಆಗಬೇಕಾಗಿಲ್ಲ. ಪ್ರೀತಿಯನ್ನು ತಳಹದಿಯನ್ನಾಗಿಸಿ ಈ ಎಲ್ಲಾ ಬದಲಾವಣೆಗಳು ಆಗಬೇಕಾದದ್ದು ಎಂಬುದನ್ನು ಲೇಖಕಿಯರಿಬ್ಬರೂ ಸ್ಪಷ್ಟಪಡಿಸುತ್ತಾರೆ. ಪರಸ್ಪರ ಆದರ, ಸಮಾನ ಗೌರವ, ಪ್ರೀತಿ ವಿಶ್ವಾಸ ಹಾಗೂ ಆ ಮೂಲಕ ಶಾಂತಿ ನೆಮ್ಮದಿಯೇ ಬದುಕಿನ ಪರಮ ಮೌಲ್ಯಗಳು ಎಂಬುದಾಗಿ ಪ್ರತಿಪಾದಿಸುತ್ತಾರೆ.

ಅಡಿಟಿಪ್ಪಣಿಗಳು

೧. ಜೀವನ ಮೌಲ್ಯಗಳು : ಪ್ರ.ಗು.ಸಹಪ್ರಬುದ್ಧೆ ಕನ್ನಡ ರೂಪಾಂತರ : ಶಕುಂತಲಾ ಎಸ್.ರಾವ್, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೨೦೧೦, ಪುಟ ೧೨೪

೨. ಅದೇ, ಪುಟ ೧೦೫

೩. ಮನು : ಜೀವನ ಮೌಲ್ಯಗಳು (ಅಂಕಣ ಬರೆಹಗಳು), ಕಾವ್ಯಶ್ರೀ ಪ್ರಕಾಶನ, ಮೈಸೂರು, ೨೦೧೦, ಪುಟ ೩೩

೪. ಅದೇ, ಪುಟ ೩೫

೫. ಡಿ.ಇಡಿ.,

೬. ಟಿ.ಜಯರಾಮು : ಮೌಲ್ಯ ಶಿಕ್ಷಣ, ಮಂದಾರ ಪ್ರಕಾಶನ, ಬೆಂಗಳೂರು, ೨೦೦೪, ಪುಟ ೩

೭. ಅದೇ, ಪುಟ ೮೪

೮. ಜಿ.ಎಸ್.ಅವಧಾನಿ : ಸಾಹಿತ್ಯ ವಿಮರ್ಶೆ ೧೯೯೧ ಸಂ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೨, ಪುಟ ೧೪

೯. ಸಿ.ಎನ್. ರಾಮಚಂದ್ರನ್ : ತ್ರಿವೇಣಿ ಭಾರತೀಯ ಸಾಹಿತ್ಯ ನಿರ್ಮಾಪಕರು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೯, ಪುಟ ೮೮

೧೦. ಡಾ. ವಿಜಯಶ್ರೀ ಸಬರದ : ಮಹಿಳೆ ಶೋಷಣೆ, ಸವಾಲುಗಳು ಸಂ. ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫, ಪುಟ ೨

೧೦. ಮನು : ಜೀವನ ಮೌಲ್ಯಗಳು (ಅಂಕಣ ಬರೆಹಗಳು), ಕಾವ್ಯಶ್ರೀ ಪ್ರಕಾಶನ, ಮೈಸೂರು, ೨೦೧೦, ಪುಟ ೧೦೩

೧೧. ಟಿ.ಜಯರಾಮು : ಮೌಲ್ಯ ಶಿಕ್ಷಣ, ಮಂದಾರ ಪ್ರಕಾಶನ, ಬೆಂಗಳೂರು, ೨೦೦೪, ಪುಟ ೧೨

೧೨. ಭಾಗ್ಯ ಜಯಸುದರ್ಶನ : ತ್ರಿವೇಣಿ ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೯, ಪುಟ ೩೩

೧೩. ೧೪. ಟಿ.ಜಯರಾಮು : ಮೌಲ್ಯಶಿಕ್ಷಣ, ಮಂದಾರ ಪ್ರಕಾಶನ, ಬೆಂಗಳೂರು, ೨೦೦೪, ಪುಟ ೨೧೦

೧೫. ಅದೇ, ಪುಟ ೨೦೭

೧೬. ಅದೇ, ಪುಟ ೨೦೦

ಅಧ್ಯಾಯ ೧೦
ಉಪಸಂಹಾರ

ಅಧ್ಯಾಯ ೧೦

ಉಪಸಂಹಾರ

ಒಂದು ಮನೆಯಲ್ಲಿ ಒಬ್ಬರು ಯಾವುದೇ ಒಂದು ಕ್ಷೇತ್ರವನ್ನು ತಮ್ಮ ಕಾರ್ಯಸಾಧನೆಗಾಗಿ ಆಯ್ದುಕೊಂಡು, ಅಲ್ಲಿ ತಮ್ಮ ಹೆಜ್ಜೆಯ ಗುರುತನ್ನು ಮೂಡಿಸುವುದು ಅಷ್ಟೇನು ಪ್ರಯಾಸದ ಕೆಲಸವಲ್ಲ. ಅಲ್ಲಿ ಪರಸ್ಪರ ಸ್ಪರ್ಧೆ ಇರುವುದಿಲ್ಲ. ಹೆಸರು ಮಾಡುವುದು ಸುಲಭ ಆದರೆ, ಒಂದೇ ಮನೆಯಲ್ಲಿ ಇಬ್ಬರು ಒಂದೇ ಕ್ಷೇತ್ರವನ್ನು ಆಯ್ದುಕೊಂಡು ಅಲ್ಲಿ ತಮ್ಮ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿಯಲು ಬಹಳ ಶ್ರಮ ಪಡಬೇಕಾಗುತ್ತದೆ. ಸುಲಭದಲ್ಲಿ ಜಯ ಸಿಗುವುದಿಲ್ಲ. ಒಂದೇ ಮನೆಯಲ್ಲಿ ಅಕ್ಕತಂಗಿಯರು ಇಬ್ಬರು ಒಟ್ಟಿಗೆ ಹೆಸರು ಮಾಡಿದವರು ವಿರಳವೂ ಕೂಡ. ಆ ವಿರಳದ ಸಾಲಿಗೆ ಸೇರಿದವರು ಅಕ್ಕ ತಂಗಿಯರಾದ ಆರ್ಯಾಂಬ ಮತ್ತು ತ್ರಿವೇಣಿ ಅವರು.

ಇವರಿಬ್ಬರು ತಮ್ಮ ಕಾರ್ಯಸಾಧನೆಗೆ ಆಯ್ದುಕೊಂಡ ಕ್ಷೇತ್ರ ಸಾಹಿತ್ಯ ಕ್ಷೇತ್ರ. ಕನ್ನಡ ಸಾಹಿತ್ಯ ಪ್ರೇಮಿಗಳಿಗೆ ಈ ಅಕ್ಕತಂಗಿಯರು ಚಿರಪರಿಚಿತರು. ಜೀವನದ ವೈವಿಧ್ಯಮಯ ಬದುಕಿನಲ್ಲಿ ಸಾರ್ಥಕವಾದ ಕೆಲಸ ಮಾಡಿ ತೋರಿಸಿದವರು. ಸಾಹಿತ್ಯಕ್ಷೇತ್ರದಲ್ಲಿ ಶ್ರೀಮತಿ ಆರ್ಯಾಂಬ ಪಟ್ಟಾಭಿಯವರು ಗಟ್ಟಿಯಾಗಿ ತಳವೂರಲು ಕಾರಣವೂ ಇದೆ. ದೊಡ್ಡಪ್ಪನವರಾದ ಬಿ.ಎಂ.ಶ್ರೀ ಅವರು ಘನ ವಿದ್ವಾಂಸರು, ಕಟ್ಟಾ ಕನ್ನಡಾಭಿಮಾನಿಗಳು, ಸ್ವತಃ ಬರೆಹಗಾರರಾಗಿದ್ದವರು ಮಾತ್ರವಲ್ಲ ಹೆಸರಾಂತ ಕಾದಂಬರಿಗಾರ್ತಿಯಾಗಿದ್ದ ವಾಣಿ ಅವರು ಇವರ ಚಿಕ್ಕಮ್ಮ. ಅಕ್ಕ ತ್ರಿವೇಣಿಯಂತೂ ಸರಿಯೇ ಸರಿ. ಮಹಿಳೆಯರು ಎದುರಿಸಿದ ಹಲವಾರು ಸಮಸ್ಯೆಗಳನ್ನು ಅವರ ಮಾನಸಿಕ ತೊಳಲಾಟವನ್ನು ತಮ್ಮ ಕಾದಂಬರಿಯಲ್ಲಿ ಪಡಿಮೂಡಿಸಿದವರು. ಮನೋವಿಶ್ಲೇಷಣಾ ಸಿದ್ಧಾಂತದ ಅಡಿಯಲ್ಲಿ ಮೂಡಿಬಂದ ಇವರ ಕಾದಂಬರಿಗಳು ಯಾವ ಕಾಲಕ್ಕೂ ಪ್ರಸ್ತುತ.

ಸಾಹಿತ್ಯ ಹಿನ್ನೆಲೆಯುಳ್ಳ ಪರಿಸರದಿಂದ ಬಂದ ಶ್ರೀಮತಿ ಆರ್ಯಾಂಬ ಪಟ್ಟಾಭಿಯವರಿಗೆ ತಮ್ಮನ್ನು ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಕಷ್ಟವಾಗಲಿಲ್ಲ. ಕಥೆ ಹೇಳುವ ಕಲೆ ಅವರಿಗೆ ಸಹಜವಾಗಿಯೇ ಕರಗತವಾಗಿದೆ. ಇವರ ಕಾದಂಬರಿಗಳಲ್ಲಿ ನಾವು ಕಾಣುವುದು, ಪ್ರೀತಿ-ನೋವು ಹಾಗೆ ನಿರಾಶೆ, ಗೆಲುವು, ದ್ವೇಷ-ಒಲವು ಎರಡನ್ನು ಹೃದಯಂಗಮವಾಗಿ ವರ್ಣಿಸುವ ರೀತಿ ಹೃದ್ಯವೆನಿಸುತ್ತದೆ. ಅತಿರೇಕವಾದ ಅಡಂಬರವಿಲ್ಲದ ಸರಳ ಬರೆವಣಿಗೆ ಸಮಾಜವನ್ನು ಸೂಕ್ಷ್ಮವಾಗಿ ಅವಲೋಕಿಸುವ ಜಾಣ್ಮೆ. ಕಂಡದ್ದನ್ನು ಕಾದಂಬರಿಗೆ

ವಸ್ತುವನ್ನಾಗಿಸುವ ಕುಲಶಲತೆಯನ್ನು ಇವರ ಕಾದಂಬರಿಗಳಲ್ಲಿ ಕಾಣಬಹುದು. "ಬದುಕನ್ನು ನೋಡುವ ಕಣ್ಣು ಇರುವವರು ಮಾತ್ರ ಬರೆಯಬಹುದು".[೧] ಸಹಜ ಕಥನ ಕಲೆ ಇವರಿಗೆ ಸಿದ್ಧಿಸಲು ಇದೂ ಒಂದು ಕಾರಣ.

ಕನ್ನಡದ ಹೆಸರಾಂತ ಲೇಖಕರಾಗಿದ್ದ ಶಿವರಾಮ ಕಾರಂತರು ತಮ್ಮ ಕಾದಂಬರಿಯೊಂದರಲ್ಲಿ ಹೀಗೆ ಹೇಳುತ್ತಾರೆ. "ಬದುಕು ಎಂದರೆ ಅನ್ಯರ ಮುಂದೆ ನಟಿಸುವ ನಾಟಕವಲ್ಲ, ತಮಗಾಗಿ ಬಾಳುವ ರೀತಿ"[೨] ನಾನು ಹೀಗೆ ಬಾಳಬೇಕು ಎಂದು ನಿಶ್ಚಯ ತೆಗೆದುಕೊಂಡಾಗಲೇ ಮಾನವನಿಗೆ ಮೊದಲ ಸವಾಲಿನ ಅರಿವಾಗುತ್ತದೆ. ತನ್ನ ಬದುಕು ಇದಾದರೆ ಜತೆಯವರಾರು? ಜತೆಗಾರ ಯಾರು? ಜತೆಗಾತಿ ಯಾರು? ಜತಗಾಯಿಯ ಅಥವಾ ಜತೆಗಾರನ ಕಲ್ಪನೆ ಬಾಧಿಸಿದ ವ್ಯಕ್ತಿಗಳಲ್ಲ. ಆದರೆ ಅವರವರ ಪ್ರಜ್ಞಾಸ್ತರದಲ್ಲಿ ಅವಕ್ಕೆ ಉತ್ತರಗಳು ಅಥವಾ ಉತ್ತರಗಳೆಂಬ ನಂಬಿಕೆಗಳು ದೊರತ ಪ್ರಶ್ನೆ ಅಲ್ಲೇ ಮಾಯವಾಗಲೂಬಹುದು. ದೈನಿಕಗಳ ಜಂಬದ ಅವುಗಳನ್ನು ಕೆದಕಲು ಪ್ರಜ್ಞೆಗೆ ಅವಕಾಶ ನೀಡುವುದೇ ಇಲ್ಲ. ಕಾಡುವಿಕೆ ಬಾಧಿಸಿದರೆ ಸಿದ್ಧಮಾದರಿಗಳಿರುತ್ತವೆ. ರೂಢಮೂಲ ನಂಬಿಕೆಗಳಿರುತ್ತವೆ.

"ಸಿದ್ಧಮಾದರಿಗಳನ್ನು ಬದಿಗಿಟ್ಟು ಚಿಂತನೆಗೆ ತೊಡಗಿದವೆಂದರೆ, ನಮ್ಮನ್ನು ಮೊದಲು ಸೆಳೆಯುವುದು ಸಾಹಿತ್ಯ. ಅಂದರೆ ಜ್ಞಾನ, ಅದಕ್ಕೆ ಜಗತ್ತಿನ ಮಹಾನ್ ಬದುಕನ್ನು ಸಹನೀಯ ಮಾಡುವ ಗುಣ ಇರುವುದು ಸಾಹಿತ್ಯಕ್ಕೆ ಮಾತ್ರ. ಈ ಸಹನೀಯಗೊಳಿಸುವ ಕ್ರಿಯೆಯಲ್ಲಿ ಒಳ್ಳೆಯತನದ ಪ್ರಸಾರ ಇರಬೇಕು ಎಂಬುದು".[೩]

ಆರ್ಯಾಂಬರ ಕಾದಂಬರಿಗಳ ಕೇಂದ್ರ ಕಾಳಜಿ ಸ್ತ್ರೀ ಪುರುಷರನ್ನು ಸಮಾನ ಸಖಿಸಖರಂತೆ ಕಾಣುವ ಆದರ್ಶ. ಅವರ ಕಾದಂಬರಿಗಳ ಸ್ತ್ರೀಯರು ಬದುಕಿನಲ್ಲಿ ದಾರುಣವಾದ ಕಷ್ಟನಷ್ಟಗಳನ್ನು ಅನುಭವಿಸಿದರೂ ಕಳೆಗುಂದುವುದಿಲ್ಲ. ಎದೆಗುಂದುವುದಿಲ್ಲ. ಪುರುಷ ಪ್ರಾಧಾನ್ಯತೆಯ ಕಾರಣದಿಂದ ಎಂಬಾದ ನೋವನ್ನು ಸಮಾಜಕ್ಕೆ ತಿಳಿಸುತ್ತಾರೆ. ತಮ್ಮ ಸ್ಥಿತಿಗೆ ಕಾರಣರಾದ ಪುರುಷರನ್ನು ಅಲ್ಲಿನ ಸ್ತ್ರೀಯರು ತಿರಸ್ಕಾರದಿಂದ ಕಾಣುತ್ತಾರೆ. ಪುರುಷ ತನ್ನ ತಪ್ಪನ್ನು ಅರಿಯಲು ಆತನ ಕಣ್ಣು ತೆರೆಸುವ ಪ್ರಯತ್ನ ಮಾಡುತ್ತಾರೆ.

ಪುರುಷ ಪ್ರಾಧಾನ್ಯತೆ ಹೇಗೆ ನಮ್ಮ ಪ್ರತಿ ಮಾತು, ಹೆಜ್ಜೆ, ದೃಷ್ಟಿ, ನೋಟ, ಊಟ, ಧಿರಿಸು ಎಲ್ಲದರಲ್ಲೂ ತೀರ ಸಹಜವೆನ್ನುವ ಭ್ರಮೆ ಮೂಡಿಸಿದೆ. ಈ ಮಿಥ್ಯಾವಾಸ್ತವವನ್ನೇ ಆಕೆ ವಾಸ್ತವ ಎಂದೇ ಗ್ರಹಿಸಿದ್ದಾಳೆ. ಈ ಗೃಹೀತದಿಂದಾಗಿ ಬದುಕಿನ ಪ್ರತಿ ಹಂತದಲ್ಲಿ ಆಕೆ ನೋವಿಗೆ

ಒಳಗಾಗಿದ್ದಾಳೆ. ಇದರ ಬದಲಾವಣೆ ಹೇಗೆ ಮತ್ತು ಬದಲಾವಣೆ ಏಕೆ ಬೇಕು. ಅದು ಹೇಗೆ ಸಾಧ್ಯವಾಗುವುದು ಎಂಬುದನ್ನು ಲೇಖಕಿ ಕಾದಂಬರಿ ಮಾಧ್ಯಮದ ಮೂಲಕ ಚಿತ್ರಿಸಿದ್ದಾರೆ.

ಏಕೆಂದರೆ, ಬದಲಾವಣೆಯ ಮೂಲ ಸೆಲೆ ಚಿಂತನೆಯೇ; ಘೋಷಣೆ ಪ್ರತಿ ಘೋಷಣೆಯನ್ನು ಹುಟ್ಟುಹಾಕುತ್ತದೆ. ಆದರೆ ಚಿಂತನೆ ಸೃಜನಶೀಲತೆಗೆ ನಾಂದಿಯಾಗುತ್ತದೆ. ತ್ರಿವೇಣಿಯವರ ಸೋದರಿಯಾಗಿದ್ದ ಇವರು ಬೆಳೆದ ವಾತಾವರಣದಲ್ಲಿ ಇದ್ದ ಸಾಹಿತ್ಯದ ಸಮೃದ್ಧ ಬೆಳಕಿನಿಂದ ಮತ್ತು ಸಹಜವಾಗಿದ್ದ ಪ್ರತಿಭೆಯ ಬಲದಿಂದ ಸಾಹಿತ್ಯಸೇವೆ ಅವರಿಗೆ ಉಸಿರಿನಷ್ಟೇ ಸರಾಗವಾಗಿದೆ.

ಆರ್ಯಾಂಬರ ಕಾದಂಬರಿಗಳ ಕಥಾವಸ್ತುವಿನಲ್ಲಿ ವೈವಿಧ್ಯತೆಯಿದೆ. ಮಧ್ಯಮವರ್ಗದ ಕುಟುಂಬದ ಸಮಸ್ಯೆಗಳು, ಪ್ರೇಮ ಸಂಬಂಧಗಳು, ಸಹೋದರ ಸಹೋದರಿಯರ ನಡುವಿನ ಭಾವಗಳ ತಾಕಲಾಟಗಳ ಸರಳ ಚಿತ್ರಣವನ್ನು ನೀಡುತ್ತವೆ. ಇವರ 'ಮರಳಿಗೂಡಿಗೆ' ಕಾದಂಬರಿ ಕುಷ್ಠರೋಗಕ್ಕೆ ಸಂಬಂಧಿಸಿದ ಕಥೆಯನ್ನು ಹೊಂದಿದೆ. ಈ ಕೃತಿಯು ಚಲನಚಿತ್ರವಾಗಿ ಜನಪ್ರಿಯವಾಯಿತಲ್ಲದೆ ರಾಜ್ಯ ಪ್ರಶಸ್ತಿಯನ್ನು ಪಡೆದಿದೆ. ಸರ್ಕಸ್ ಕಾರ್ಮಿಕರ ಬವಣೆ 'ಅತ್ತು ನಗಿಸಿದಾಗ' ಕೃತಿಗೆ ವಸ್ತುವಾದರೆ, 'ಕಾಮನಬಿಲ್ಲು'ವಿನಲ್ಲಿ ಉದ್ಯೋಗಸ್ಥ ಮಹಿಳೆಯರ ಹಾಗೂ ಬದುಕಿನ ಬವಣೆಯ ಚಿತ್ರಣವಿದೆ. 'ಆ ಹಾಡು' ಕೃತಿಯಲ್ಲಿ ಟೀ ತೋಟದ ದಿನಗೂಲಿಗಳ ಹಾಗೂ ಮಾಲೀಕರ ಬದುಕು ಮತ್ತು ಸಂಘರ್ಷದ ಕಥೆಯಿದೆ. ಹೀಗೆ ವೈವಿಧ್ಯಮಯ ವಸ್ತುವನ್ನು ಒಳಗೊಂಡ ಇವರ ಕಾದಂಬರಿಗಳು ಮಹಿಳಾ ಸಾಹಿತ್ಯಕ್ಕೆ ಉತ್ತಮ ಕೊಡುಗೆಗಳಾಗಿದೆ.

'ಬಸವಿ' ಕಾದಂಬರಿಯು ಇವರ ಮಹತ್ವದ ಕಾದಂಬರಿಗಳಲ್ಲಿ ಒಂದಾಗಿದೆ. ಈ ಕಾದಂಬರಿಯು ದೇವದಾಸಿ ಪದ್ಧತಿಯ ಒಳ ಹೊರಗನ್ನು ಕೂಲಂಕಷವಾಗಿ ಪರಿಶೀಲಿಸುತ್ತದೆ. ದೇವದಾಸಿಯರ ದಾರುಣ ಕಥೆಗಳು. ವೃದ್ಧ ಬಸವಿಯರ ಬಡತನದ ವ್ಯಥೆಯ ಸಂಗತಿಗಳು ಇಲ್ಲಿ ಹೃದಯಸ್ಪರ್ಶಿಯಾಗಿ ಅಭಿವ್ಯಕ್ತಗೊಂಡಿದೆ. ದೇವದಾಸಿ ಪದ್ಧತಿಯ ಮೂಲೋತ್ಪಾಟನೆಯ ಅಶಯವನ್ನು ಹೊಂದಿರುವ ಈ ಕೃತಿ ಲೇಖಕಿಯ ಆಳವಾದ ಅಧ್ಯಯನದ ಫಲವಾಗಿದೆ. ದೇವದಾಸಿ ಪದ್ಧತಿಯ ವಿಭಿನ್ನ ನೆಲೆಗಳನ್ನೂ, ನಂಬಿಕೆಗಳನ್ನೂ ವಿವೇಚಿಸುತ್ತಾ ಸ್ತ್ರೀ ಶೋಷಣೆಯ ವಿವಿಧ ಮಜಲುಗಳನ್ನು ಬಿಡಿಸಿಡುವ ಈ ಕಾದಂಬರಿಯ ಸಂಪಣ್ಣ, ದುರ್ಗಿ ಪಾತ್ರಗಳು ಗಮನ ಸೆಳೆಯುತ್ತದೆ.

ಆರ್ಯಾಂಬರ ಬಹುತೇಕ ಪಾತ್ರಗಳು ಸಮಾಜದ ಕ್ರೂರ ವ್ಯವಸ್ಥೆಯನ್ನು ಯಾವ ವಿರೋಧವೂ ಇಲ್ಲದೆ ಮನಸಾ ಒಪ್ಪಿಕೊಂಡು ಬಿಡುತ್ತವೆ. ಆದರೆ ಪುರುಷ ಸಮಾಜದ ಈ ಕ್ರೌರ್ಯ, ಅನ್ಯಾಯ, ದಬ್ಬಾಳಿಕೆ ಶೋಷಣೆಗಳನ್ನು ಒಪ್ಪಿಕೊಳ್ಳುವುದಿಲ್ಲ. ಈ ವಿರೋಧ ಅತ್ಯಂತ ಸೂಕ್ಷ್ಮ ನೆಲೆಯಲ್ಲಿ ನಡೆಯುವುದು ಇವರನ್ನು ಮೆಚ್ಚಿಕೊಳ್ಳಲು ಮತ್ತೊಂದು ಕಾರಣವಾಗುತ್ತದೆ.

ಅಷ್ಟೇ ಅಲ್ಲದೆ, ಆರ್ಯಾಂಬರವರು ಕನ್ನಡ ನಾಡು ನುಡಿಗಳಿಗೆ ಅಭೂತಪೂರ್ವ ಸೇವೆ ಸಲ್ಲಿಸಿ ಕನ್ನಡದ ಕಣ್ವರೆಂಬ ಬಿರುದಿಗೆ ಪಾತ್ರರಾದ ಪ್ರೊ. ಬಿ.ಎಂ. ಶ್ರೀಕಂಠಯ್ಯರವರ ತಮ್ಮನ ಮಗಳೆಂದರೆ, ಅಸಾಧಾರಣ ಪ್ರತಿಭೆಯ ಕಾದಂಬರಿಗಾರ್ತಿ ತ್ರಿವೇಣಿಯವರ ತಂಗಿಯೆಂದರೆ, ಮತ್ತೊಬ್ಬ ಪ್ರತಿಭಾನ್ವಿತ ಕಾದಂಬರಿಗಾರ್ತಿ ಶ್ರೀಮತಿ ವಾಣಿರವರ ಅಕ್ಕನ ಮಗಳೆಂದರೆ ಯಾರಿಗೆ ತಾನೆ ಹೆಮ್ಮೆಯಾಗದು. ಸಾಹಿತ್ಯ ವಾತಾವರಣದಲ್ಲಿ ಹುಟ್ಟಿದ ಆರ್ಯಾಂಬ ಅವರ ಧಮನಿ ಧಮನಿಗಳಲ್ಲಿ ಹುಟ್ಟಿದಾರಭ್ಯದಿಂದಲೇ ಸಾಹಿತ್ಯ ಸತ್ವ ಸೌರಭಗಳು ಹರಿಯುತ್ತಿದ್ದವೆಂದರೆ ಅತಿಶಯೋಕ್ತಿಯಾಗಲಾರದು. ಇಂತಹ ಮಹನೀಯರನ್ನು ಪಡೆದು ಆರ್ಯಾಂಬ ಶ್ರೇಷ್ಠ ಸಾಹಿತಿಯಾದದ್ದು ಆಶ್ಚರ್ಯವೇ! ದೈವದತ್ತ ಪ್ರತಿಭೆಯ ಸಹಜ ಸಾಹಿತಿಯೆಂಬುದೇ ನನ್ನ ಅಭಿಮತ.

ಹಾಗೆ ನೋಡಿದರೆ ಆರ್ಯಾಂಬ ಅವರು ಹವ್ಯಾಸಿ ಲೇಖಕರಲ್ಲ. ಸಾಹಿತ್ಯ ಸಾಧನೆ ಮತ್ತು ಆರಾಧನೆ ಅವರ ಜೀವನ ಧರ್ಮವಾಗಿದೆ. ಪ್ರಿಯವಾದ ಕಾಯಕವಾಗಿದೆ. ಹೊಂಗನಸು, ಆರಾಧನೆ, ಪ್ರಿಯಸಂಗಮ, ಎರಡುಮುಖ, ಸವತಿಯನೆರಳು, ಬದುಕಿನ ಬವಣೆಯಲ್ಲಿ, ಆ ಹಾಡು, ಕಪ್ಪುಬಿಳುಪು, ಮರಳಿಗೂಡಿಗೆ, ಬೇವುಬೆಲ್ಲ, ದೇವಮಾನವ, ಸಾಕ್ಷಾತ್ಕಾರ, ಪರಂಪರೆ, ಕಸ್ತೂರಿ, ಪ್ರೇಮಕಥೆ, ಅಸಂಗತ, ಕಾಮನಬಿಲ್ಲು, ಯಜ್ಞವಶು, ಸಾಕುಮಗ, ನಿರ್ಣಯ, ಬಲೆ, ಸುಳಿ, ವಿಶ್ವಧರ್ಮ, ಅಮರಪ್ರೇಮ, ಅಪೂರ್ವಕಥೆ, ಗುರಿ, ಸಂಬಂಧಗಳು, ಬಂಡಾಯ, ಪತಿತಪಾವನ, ಪ್ರಕೃತಿಪುರುಷ, ಬಸವಿ ಇತ್ಯಾದಿ ನಲವತ್ತು ಕಾದಂಬರಿಗಳ ಅವರ ಮಾನಸಲೋಕದಿಂದ ಇಳಿದಿರಬೇಕಾದರೆ, ಅವರ ಬುದ್ಧಿಭಾವ ಕಲ್ಪನೆಗಳು ನಿರಂತರವಾಗಿ ಕ್ರಿಯಾಶೀಲವಾಗಿರಬೇಕು. ಅವರ ಲೇಖನಿ ಸದಾ ಕಾರ್ಯಪ್ರವೃತ್ತವಾಗಿದ್ದಿರಬೇಕು. ಹಾಗೆಯೇ ನಾಲ್ಕು ಕಾದಂಬರಿಗಳು ರಜತಪರದೆಯ ಮೇಲೆ ಮೆರೆದಾಡಿರುವಾಗ ಅವರ ಕಾದಂಬರಿಗಳ ಯೋಗ್ಯತೆ ಅಭೇದ್ಯವಾಗುತ್ತದೆ ಎಂಬುದು ಶ್ರೀ ದೇಜಗೌರವರು ಶ್ರೀಮತಿ ಸಾವಿತ್ರಮ್ಮದೇಜಗೌ ಮಹಿಳಾ ಪ್ರಶಸ್ತಿಯನ್ನು ಆರ್ಯಾಂಬರವರಿಗೆ ನೀಡಿದಾಗ ಮಾಡಿದ ಅಭಿನಂದನಾ ಭಾಷಣದ ತುಣುಕು, ಗುರುಗಳೂ ಆದ ಶ್ರೀ ದೇಜಗೌರವರ ಇಂಥ ಮಾತುಗಳು ಸಮಂಜಸವಾಗಿವೆ.

ಹೆಸರಾಂತ ಲೇಖಕಿ ಶ್ರೀಮತಿ ಆರ್ಯಾಂಬ ಖ್ಯಾತ ಕಾದಂಬರಿಗಾರ್ತಿ ತ್ರಿವೇಣಿಯವರ ತಂಗಿಯಾದರೂ ಅವರ ಕೀರ್ತಿ ಸಾಧನೆಗಳಿಗೆ ಅಕ್ಕನ ಹಂಗಿಲ್ಲ. ಏಕೆಂದರೆ ಅವರ ಕೃತಿಗಳ ಮೇಲೆ ಅವರದೇ ವಿಶಿಷ್ಟ ಮುದ್ರೆಯಿದೆ. ಆರ್ಯಾಂಬರ ಸಾಹಿತ್ಯ ಮೂರು ಬಗೆಯಲ್ಲಿ ನಮಗೆ ಅಚ್ಚರಿ ತರುತ್ತದೆ.

೧. ವಿಪುಲತೆ   ೨. ವೈವಿಧ್ಯ   ೩. ಅದರ ಸತ್ವ ಹಾಗೆ, ಅವರು ಬರೆದಿರುವ ನಲವತ್ತು ಕಾದಂಬರಿಗಳಲ್ಲಿ ನಾಲ್ಕು ಚಲನಚಿತ್ರಗಳಾಗಿವೆ ಎನ್ನುವುದು ಗಮನಾರ್ಹ. ಇದು ಖ್ಯಾತ ಸಾಹಿತಿ ಸಿ.ಪಿ.ಕೆ. ಯವರು ಆರ್ಯಾಂಬರವರ ಬಗ್ಗೆ ವ್ಯಕ್ತಪಡಿಸಿರುವ ಮೂರುಬಗೆಯ ಅಚ್ಚರಿಗಳಾಗಿವೆ.

ಕನ್ನಡ ಮಹಿಳಾ ಸಾಹಿತ್ಯದ ಹೆಜ್ಜೆಗಳ ದಿಕ್ಕನ್ನು ಸ್ಪಷ್ಟವಾಗಿ ಬದಲು ಮಾಡಲು ಪ್ರಯತ್ನಿಸಿದ ಲೇಖಕಿಯರಲ್ಲಿ ತ್ರಿವೇಣಿಯವರು ಗಮನಾರ್ಹರಾಗುತ್ತಾರೆ. ಇವರು ತಮ್ಮ ಸಮಕಾಲೀನ ಲೇಖಕಿಯರಿಗಿಂತ ಭಿನ್ನವಾಗುವುದು. ತಮ್ಮ ಕೃತಿಗಳಲ್ಲಿ ಹೆಣ್ಣಿನ ಮನೋವಲಯದಲ್ಲಿ ನಡೆಯುವ ವ್ಯಾಪಾರಗಳ ಸೂಕ್ಷ್ಮ ದಾಖಲಾತಿಗಾಗಿ ಕಾಲೇಜು ವಿದ್ಯಾಭ್ಯಾಸ ಮಹಿಳೆಯರಿಗೆ ತುಂಬಾ ಅಪರೂಪವಾಗಿದ್ದ ದಿನಗಳಲ್ಲೇ ಮನಃಶಾಸ್ತ್ರದಲ್ಲಿ ಬಿ.ಎ. ಅನರ್ಸ್ ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದು, ಕಾಲೇಜಿನಲ್ಲಿ ಕಲಿತ ಮನಃಶಾಸ್ತ್ರವನ್ನು ಗಾಳಿಗೆ ತೂರದೆ ತಮ್ಮ ಸಾಹಿತ್ಯಕ್ಕೆ ವಸ್ತುವಾಗಿ ಸ್ವೀಕರಿಸಿ ವೈವಿದ್ಯತೆ ತರುವ ಪ್ರಯತ್ನ ಮಾಡಿದರು.

ತ್ರಿವೇಣಿಯವರು ಮುಖ್ಯವಾಗಿ ಮಧ್ಯಮ ಕೆಳಮಧ್ಯಮವರ್ಗದ ಹೆಣ್ಣು ಮಕ್ಕಳ ಸಾಂಸಾರಿಕ ಸಮಸ್ಯೆಗಳ ನಾನಾ ಮಜಲುಗಳನ್ನು ತಮ್ಮ ಕಾದಂಬರಿಗಳ ಕೇಂದ್ರವಾಗಿರಿಸಿಕೊಳ್ಳುತ್ತಾರೆ. ತ್ರಿವೇಣಿಯವರಲ್ಲಿ ಸ್ಪಷ್ಟವಾದ ಸ್ತ್ರೀ ಕಾಳಜಿಗಳನ್ನು ಗಮನಿಸಬಹುದು. ಅವರ ಕೃತಿಗಳಲ್ಲಿ ಹೆಣ್ಣಿನ ವಿವಾಹ, ವರದಕ್ಷಿಣೆ, ಲೈಂಗಿಕ ದಬ್ಬಾಳಿಕೆ, ಮಾನಸಿಕ ಹೋರಾಟ, ವೇಶ್ಯಾಸಮಸ್ಯೆ, ವಿಧವಾ ಸಮಸ್ಯೆ, ವಿವಾಹೇತರ ಪ್ರೇಮ ಇತ್ಯಾದಿ ಕಾಣಿಸಿಕೊಳ್ಳುತ್ತವೆ. ವಿವಾಹ ಕುಟುಂಬ ಅರ್ಥವಂತಿಕೆಯಿಂದ ಪರಿಭಾವಿಸುವ ಗಂಡೊಬ್ಬ ಬಾಳಸಂಗಾತಿಯದರೆ, ಹೆಣ್ಣಿನ ಸಮಸ್ಯೆಗಳಲ್ಲ ಮಟಾಮಾಯವಾಗುತ್ತದೆ ಎಂಬ ಧ್ವನಿಯೊಂದು ಕೇಳಿಸುತ್ತದೆ. ಇವರ ಕಾದಂಬರಿಗಳಲ್ಲಿ ಸಮಸ್ಯೆಗಳ ಸಂಕೀರ್ಣತೆ ಗೋಜಲುಗಳು ಬಹಳ ಸುಲಭವಾಗಿ, ಸರಳವಾಗಿ ನೆಲೆಕಂಡುಕೊಂಡು ಬಿಡುತ್ತದೆ.

ತ್ರಿವೇಣಿಯವರ ಸಾಮಾಜಿಕ ವಿಷಮತೆ, ವಿಕೋಪತೆಯ ಅನೇಕ ಅಂಗಗಳನ್ನು ಗುರುತಿಸುತ್ತಾರೆ. ಲೈಂಗಿಕ ಪಾವಿತ್ರ್ಯವೇ ಮಹಿಳೆಯ ಬದುಕಿನ ಮಾನದಂಡವಲ್ಲ ಎಂದು ತುಂಬ ದೃಢವಾಗಿ ಹೇಳುತ್ತಾರೆ. ಅವರ 'ಶರಪಂಜರ' ಕಾದಂಬರಿಯಲ್ಲಿ ನಾಯಕಿ ಮೀರಾ ಕಾವೇರಿ ವಿವಾಹಕ್ಕೆ ಮುಂಚೆ ಪರಿಸ್ಥಿತಿಯ ಸುಳಿಗೆ ಸಿಕ್ಕು ಲೈಂಗಿಕ ಶೋಷಣೆಗೆ ಒಳಗಾಗಿರುವುದು. ಗಂಡನ ದೃಷ್ಟಿಯಲ್ಲಿ ಮಹಾಪರಾಧವಾದರೂ ಸತೀಶ ಕಾವೇರಿಯ ಹುಚ್ಚನ್ನು ನೆಪವಾಗಿರಿಸಿಕೊಂಡು ತನ್ನ ಸಹೋದ್ಯೋಗಿ ಹೆಣ್ಣಿನೊಂದಿಗೆ ಲೈಂಗಿಕ ಸಂಬಂಧ ಬೆಳೆಸುವುದು ಯಾವುದೇ ರೀತಿಯ ನೈತಿಕ ಅಪರಾಧವಾಗುವುದಿಲ್ಲ. 'ಕೀಲುಗೊಂಬೆ'ಯಲ್ಲೂ ಇಂತಹ ಗಂಡಿನ ದಬ್ಬಾಳಿಕೆಗೆ ಸಿಲುಕಿ ನರಳುವ ಹೆಣ್ಣಿದ್ದಾಳೆ. ಈ ಮೂಲಕ ತ್ರಿವೇಣಿಯವರು ತಮ್ಮ ಸಮಾಜದಲ್ಲಿರುವ ಎರಡು ರೀತಿಯ ನ್ಯಾಯಗಳನ್ನು ಪ್ರಶ್ನಿಸುತ್ತಾರೆ. ಪಾತಿವ್ರತ್ಯ, ಶೀಲ, ಚಾರಿತ್ರ್ಯ, ಹೆಣ್ಣಿಗೆ ಮಾತ್ರ ಮೀಸಲಾದ ಮೌಲ್ಯವೇ ಎಂದು ಸೂಕ್ಷ್ಮವಾಗಿ ಪ್ರಶ್ನಿಸುತ್ತಾರೆ.

ತ್ರಿವೇಣಿಯವರ ಸ್ತ್ರೀಸಂವೇದನೆಗಳು ನಿಚ್ಚಳವಾಗಿ ಪ್ರಕಟಗೊಳ್ಳುವ ಕಾದಂಬರಿಗಳೆಂದರೆ, ಶರಪಂಜರ, ಬೆಳ್ಳಿಮೋಡ, ಕಂಕಣ, ಮೊದಲಹೆಜ್ಜೆ, ಕೀಲುಗೊಂಬೆ ಮೊದಲಾದವುಗಳು. ಈ ಎಲ್ಲಾ ಕಾದಂಬರಿಗಳಲ್ಲೂ ಗಂಡು ಹೆಣ್ಣಿನ ಮೇಲೆ ತನ್ನ ಹತೋಟಿ ಸ್ಥಾಪಿಸಲು ಪ್ರಯತ್ನಿಸುತ್ತಾರಾದರೂ, ನೊಂದ ಅಥವಾ ಪರಿಸ್ಥಿತಿಯ ಅಸಹಾಯಕತೆಗೆ ಒಳಗಾಗಿ ಜಾರಿದ ಹೆಣ್ಣನ್ನು ಕೈಹಿಡಿದೆತ್ತಿ ಒಪ್ಪಿಕೊಳ್ಳುವ ಔದಾರ್ಯ, ಮಾನವೀಯತೆಯನ್ನು ತೋರಿಸುವುದಿಲ್ಲ. ಅದರೆ ತನ್ನ ವೈಯಕ್ತಿಕ ಲೈಂಗಿಕ ಬದುಕಿಗೆ ಹೆಂಡತಿಯ ಅನಾರೋಗ್ಯವೋ, ಮತ್ತೊಂದು ಎದುರಾದಾಗ ಅದಕ್ಕೆ ಸ್ಪಂದಿಸಿ ಹೆಂಡತಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಬದಲಾಗಿ ಪರ್ಯಾಯ ಲೈಂಗಿಕ ಸಂಬಂಧಗಳ ಸ್ಥಾಪನೆ, ಶೋಧನೆಗಳಿಗೆ ಪ್ರಯತ್ನಿಸುವ ಸಣ್ಣತನ ತೋರುತ್ತಾನೆ. ಇದಕ್ಕೆ ಶರಪಂಜರದ ಸತೀಶ, ಕಂಕಣದ ಸುರೇಶರಂತಹ ಗಂಡುಗಳನ್ನು ಕಾಣಬಹುದು.

ತ್ರಿವೇಣಿಯವರು ತಮ್ಮ ಕಾದಂಬರಿಗಳದ್ದಕ್ಕೂ, ಗಂಡಿನ ಸ್ವಾರ್ಥ, ಕ್ರೌರ್ಯ, ಸಣ್ಣತನ, ಸಮಯ ಸಾಧಕನತ, ಕಾಮುಕತೆಗಳನ್ನು ಚಿತ್ರಿಸುತ್ತಾರೆ. ಅವರ 'ಬೆಳ್ಳಿಮೋಡ'ದ ಇಂದಿರಾ ಗಂಡಿನ ಸ್ವಾರ್ಥ ಆಸೆಬುರುಕುತನವನ್ನು ಸಕಾಲದಲ್ಲಿ ಗುರುತಿಸಿಕೊಂಡು ಅವನನ್ನು ಸ್ಪಷ್ಟವಾಗಿ ತನ್ನ ಬದುಕಿನಿಂದಾಚೆ ಇರಿಸುವ ದಿಟ್ಟತನ ತೋರುತ್ತಾಳೆ. 'ಸೋತು ಗೆದ್ದವಳು' ಕಾದಂಬರಿಯ ನಾಯಕ ತಾನು ವಿದೇಶದಲ್ಲಿ ಹೆಂಡತಿಯಿಲ್ಲದ ಸಂದರ್ಭದಲ್ಲಿ ಪರಹೆಣ್ಣಿನ ಲೈಂಗಿಕ ಸಂಬಂಧ ಹೊಂದಿದ್ದರ ಕಾರಣದಿಂದ ತನ್ನ ಹೆಂಡತಿ ತಪ್ಪು ಮಾಡಿದಾಗ ಅದನ್ನು ಮನ್ನಾ ಮಾಡುತ್ತಾನೆ.

ಆದರೆ, ಇದು ಅವನ ಹೃದಯದಾಳದಿಂದ ಮಾಡಿದ ಕ್ಷಮೆ ಅಲ್ಲ. ತನ್ನ ಪಾಪ ಪ್ರಜ್ಞೆಯಿಂದ ಮೂಡಿದ ಪ್ರತಿಕ್ರಿಯೆಯಷ್ಟೇ ಆಗುತ್ತದೆ. ತನ್ನ ಶುದ್ಧ ಪ್ರೇಮವನ್ನುಳಿಸಿಕೊಂಡು ಅವಳನ್ನು ಕ್ಷಮಿಸುವ ಗುಣ ನಿಸ್ವಾರ್ಥ ಪ್ರತಿಕ್ರಿಯೆಯಾಗುವುದಿಲ್ಲ ಎಂಬುದು ಗಮನೀಯ.

ತ್ರಿವೇಣಿಯವರು ತಮ್ಮ ಕಾದಂಬರಿಗಳಲ್ಲಿ ಕಾದಂಬರಿಗಳಲಿ ಸಂಸಾರ ಸುಖದಲ್ಲಿ ಮುಳುಗಿದ ತೃಪ್ತಿ ಗೃಹಿಣಿ ತನ್ನ ಇತರೇ ಸಮಸ್ಯೆಗಳನ್ನು ದೊಡ್ಡದು ಎಂದು ಭಾವಿಸುವುದಿಲ್ಲ ಎಂಬ ಅರ್ಥದ ಚಿತ್ರಣ ನೀಡುತ್ತಾರೆ. 'ಅಪಸ್ವರ' 'ಅಪಜಯ' ಜೋಡಿ ಕಾದಂಬರಿಗಳ ಮೀರಾಳ ಬದುಕು ಇದಕ್ಕೆ ಉದಾಹರಣೆ. ಮೀರ ದೊಡ್ಡ ವೈದ್ಯಳಾಗಿ ಸಮಾಜ ಸೇವೆ ಮಾಡಬೇಕೆಂಬ ಕನಸು ಕಂಡವಳು. ಆದರೆ ವಿವಾಹ ಮಾಡಿಕೊಳ್ಳಲೇಬೇಕಾದ ಸಂದರ್ಭವೊದಗಿ ಬಂದಾಗ ಅದನ್ನು ಸ್ವೀಕರಿಸಿ ಮುದ್ದು ಮಗು ವೀಣಾಳನ್ನು ಪಡೆಯುತ್ತಾಳೆ. ಆಕಸ್ಮಿಕವಾಗಿ ಮಗು ಮಾಡಿದಾಗ ಅದರ ಶೂನ್ಯ ತುಂಬಿಕೊಳ್ಳಲು ಮತ್ತೆ ವೈದ್ಯಳಾಗುವ ಆಸೆಯನ್ನು ಈಡೇರಿಸಿಕೊಳ್ಳುತ್ತಾಳೆ. ಮೀರಾಳ ಬದುಕಿನ ಹೋರಾಟ, ಅಸ್ತಿತ್ವದ ಸ್ಥಾಪನೆಗಳು ನಮಗೆ ಮೆಚ್ಚುಗೆಮಾಗುತ್ತವಾದರೂ, ಗಂಡನಿಗೆ ತನ್ನಿಂದ ತೊಂದರೆಯಾಗಬಾರದೆಂದು ಮರುಮದುವೆ ಮಾಡಿ ತಾನು ಒಂಟಿಯಾಗಿ ಉಳಿಯುವ ನಿರ್ಧಾರ ಒಪ್ಪಿತವಾಗುವುದಿಲ್ಲ. ಕಾದಂಬರಿಯಲ್ಲಿ ಮೀರಾಳ ಸಂಘರ್ಷಗಳು, ಅವಳ ಅಚಲ ನಿರ್ಧಾರಗಳು ಬದುಕನ್ನು ಸಾಹಸದಿಂದ ಎದುರಿಸಿದ ಗುಣಗಳ ಬಗೆಗೆ ಮೆಚ್ಚುಗೆಯಾದರು, ವಿಷಮ ದಾಂಪತ್ಯದ ಸಂದರ್ಭದಲ್ಲಿ ಹೆಣ್ಣು ವಿದ್ಯಾವಂತೆ, ಸ್ವತಂತ್ರ ವ್ಯಕ್ತಿತ್ವವುಳ್ಳವಳಾದರೂ, ತ್ಯಾಗದ ಮೂಲಕ ಅವಳ ಗುಣವನ್ನು ವೈಭವೀಕರಿಸುವ ತ್ರಿವೇಣಿಯವರ ಇಂಗಿತ ಪ್ರಶ್ನಾರ್ಹವಾಗುತ್ತದೆ. ಗಟ್ಟಿ ವ್ಯಕ್ತಿತ್ವದ ಸ್ವತಂತ್ರ ಹೆಣ್ಣಿನ ಮಾದರಿ ಇಲ್ಲಿ ದೊರೆಯುವುದಾದರೂ, ಮೀರಾ ತನ್ನ ಆಕಾಂಕ್ಷೆಯ ಈಡೇರಿಕೆಗಷ್ಟೇ ವಿದ್ಯಾವಂತೆಯಾಗುವುದಿಲ್ಲ. ಬದಲಿಗೆ ತಾಯ್ತನದಿಂದ ವಂಚಿತಳಾದಾಗ ಮಾತ್ರ ಎಂಬ ತ್ರಿವೇಣಿಯವರ ನಿಲುವು ಒಪ್ಪಿತವಾಗುವುದಿಲ್ಲ.

ಸಮಾಜದ ಒಪ್ಪಿತ ಗಂಡುಹೆಣ್ಣಿನ ಸಂಬಂಧಗಳ ಚೌಕಟ್ಟಿನ ಆಚೆ ಈಚೆಗೆ ಸರಿಯುವ ಅನೇಕ ಹೆಣ್ಣುಗಳು ತ್ರಿವೇಣಿಯವರ ಕೃತಿಗಳಲ್ಲಿ ಸಾಲು ಸಾಲಾಗಿ ಕಾಣಿಸಿಕೊಳ್ಳುತ್ತಾರೆ. 'ಹೂವುಹಣ್ಣು'ವಿನಲ್ಲಿ ರಮಾ ಬಡತನ, ಪತಿಯ ಮರಣದಿಂದ ವೇಶ್ಯೆಯಾದರೆ, ಮಾನ್ಯತೆಯಿಲ್ಲದ ತಾಯ್ತನ ಪಡೆದು ಮಗುವನ್ನೇ ಕೊಲೆ ಮಾಡುವ ಮೊದಲಹೆಜ್ಜೆಯ ನಾಯಕಿ, ವಿವಾಹ ಸಂಸ್ಥೆ ಒಪ್ಪದ ವಿರೋಧಿಸುವ ಪರಪುರುಷನ ಆಕರ್ಷಣೆಗೆ ಒಳಗಾದ 'ತಾವರೆ ಕೊಳ'ದ ನಾಯಕಿ ರತ್ನಾ ವಿವಾಹವು ತನಗೆ ಪೂರೈಸಲು ಸೋತ ಲೈಂಗಿಕ ತೃಪ್ತಿಯನ್ನು ಆ ಚೌಕಟ್ಟಿನಿಂದ ಹೊರಗಡೆ ಬಯಸಿದ 'ಅವಳ ಮಗಳು'ವಿನ ವನಜಾ.

ಪತಿ ವಿದೇಶದಲ್ಲಿದ್ದುದರಿಂದ ಲೈಂಗಿಕ ಸೆಳೆತಕ್ಕೆ ಸಿಕ್ಕು ತನ್ನನ್ನು ಮತ್ತೊಬ್ಬನಿಗೆ ಒಪ್ಪಿಸಿಕೊಂಡ 'ಸೋತುಗೆದ್ದವಳು' ಕಾದಂಬರಿಯ ಭಾರತಿ ಇಲ್ಲೆಲ್ಲ ತ್ರಿವೇಣಿಯವರು ಪರಿಸ್ಥಿತಿಯ ಕೈಗೊಂಬೆಗಳಾಗಿ ನರಳುವ ಹೆಣ್ಣಿನ ಮಾದರಿಯನ್ನು ನೀಡುತ್ತಾರೆ. ಇಂತಹ ಹೆಣ್ಣುಗಳನ್ನು ಅವರು ಅತ್ಯಂತ ಸಹಾನುಭೂತಿಯಿಂದಲೇ ಗಮನಿಸಿದ್ದಾರೆ. ಒಟ್ಟು ವ್ಯವಸ್ಥೆಯ ಸಂದರ್ಭದಲ್ಲಿ ವಿನಾಶಕ್ಕೆ ಒಳಗಾಗುವವಳು ಹೆಣ್ಣೇ ಎಂಬ ಸಾಮಾಜಿಕ ಸತ್ಯವನ್ನು ಗುರುತಿಸುತ್ತಾರೆ. ಹೆಣ್ಣಿನ ಸಮಸ್ಯೆಗಳನ್ನು ಕೇವಲ ವೈಯಕ್ತಿಕ ನೆಲೆಯಲ್ಲಷ್ಟೇ ವಿವರಿಸಿಕೊಳ್ಳಲು ಹೊರಡುವುದರಿಂದಾಗಿ ತ್ರಿವೇಣಿಯವರ ಬರೆವಣಿಗೆಗೆ ಮಿತಿಯೊದಗಿ ಬಿಡುತ್ತದೆ.

ತ್ರಿವೇಣಿಯವರ 'ಕಂಕಣ', 'ಮುಕ್ತಿ'ಗಳು ಮಧ್ಯಮವರ್ಗದ ಹೆಣ್ಣುಗಳ ವಿವಾಹ, ಉದ್ಯೋಗಗಳ ಕಡೆಗೆ ಗಮನ ಹರಿಸುತ್ತವೆ. ತ್ರಿವೇಣಿಯವರು ಮದುವೆ ಹೆಣ್ಣಿಗೆ ಅವಶ್ಯಕವಾಗಿ ಆಗಲೇಬೇಕಾದ ಸಂಸ್ಕಾರ. ಅದರಲ್ಲಿ ಏರುಪೇರುಗಳಾದರೆ ಅವಳು ತನ್ನ ಜೀವನ ನಿರ್ವಹಣೆಗೆ, ಸಮಯ ಕಳೆಯಲು ಪರ್ಯಾಯ ವ್ಯವಸ್ಥೆಯಾಗಿ ಔದ್ಯೋಗಿಕ ಕ್ಷೇತ್ರ ಆರಿಸಿಕೊಳ್ಳಬಹುದೆಂಬ ನಂಬಿಕೆಯನ್ನು ವ್ಯಕ್ತಪಡಿಸುತ್ತಾರೆ. 'ಹೆಣ್ಣೆಲೆ ಚಿಗುರಿದಾಗ' ಕಾದಂಬರಿಯ ಮಾಲತಿ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವ ತವಕಕ್ಕಾಗಿ ಇಲ್ಲಿ ಉದ್ಯೋಗವನ್ನು ಸ್ವೀಕರಿಸುವುದಿಲ್ಲ. ಬದಲಾಗಿ ಬದುಕಿನ ಏರುಪೇರುಗಳಾದಾಗ 'ಉದ್ಯೋಗದ' ಆಯ್ಕೆ ಬರುತ್ತದೆ. ಸ್ತ್ರೀ ಸ್ವಾತಂತ್ರ್ಯ ಸಬಲೀಕರಣದ ಆರ್ಥಿಕ ಸ್ವಾತಂತ್ರ್ಯದ ಅಪೇಕ್ಷೆಯಾಗಿ ಇವರ ಹೆಣ್ಣುಗಳು ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳುವುದಿಲ್ಲ. 'ಬಾಳು ಬೆಳಗಿತು' ಕಾದಂಬರಿಯ ಕಲ್ಯಾಣಿ ಉದ್ಯೋಗಕ್ಕೆ ಹೋಗಬೇಕೆಂದಾಗ ಗಂಡ ರಾಮನಾಥ ತಾನು ಕೈತುಂಬ ದುಡಿಯುವಾಗ ಮನೆಯಲ್ಲಿ ಸುಖವಾಗಿ ಉಂಡಿದ್ದಿರಬಾರದೆ ಎಂಬ ಅಪೇಕ್ಷೆ ವ್ಯಕ್ತಪಡಿಸಿದರೂ ಇಷ್ಟವಿದ್ದರೆ ಕೆಲಸಕ್ಕೆ ಹೋಗಬಹುದೆಂಬ ಅನುಮತಿ ನೀಡುವ ಔದಾರ್ಯ ತೋರುತ್ತಾನೆ.

ಕಲ್ಯಾಣಿ ಕೆಲಸ ಮಾಡಲು ಹೋದ ಶಾಲೆಯ ಮುಖ್ಯೋಪಾಧ್ಯಾಯಿನಿ ಮಾಣಿಕ್ಯಮ್ಮ, ಮನ್ಮಥನಂಥ ಗಂಡ, ವಿದ್ಯಾವಂತ ಕೈತುಂಬ ಸಂಬಳ ಬರುವ ಉದ್ಯೋಗವಿದೆ. ಕಲ್ಯಾಣಿಗೆಲ್ಲಿಯ ಗ್ರಹಚಾರ! ಗಂಡ ಇದ್ದಾಗಂತೂ ಉದ್ಯೋಗದ ಕಡೆಗೆ ಕಣ್ಣಾಡಿಸುವುದೂ ಅಚ್ಚರಿಯ ವಿಚಾರ ಎಂಬ ಆಕ್ಷೇಪಣೆ ಮಾಡುತ್ತಾಳೆ. 'ದೂರದಬೆಟ್ಟ' ದಲ್ಲಿ ಚಿಕ್ಕಪ್ರಾಯದ ಸುನಂದ ತನ್ನ ಸಮಯವನ್ನು ಸದುಪಯೋಗ ಪಡಿಸಿಕೊಳ್ಳಲು ಶಾಲೆಯ ಅಧ್ಯಾಪಕಿಯಾಗುತ್ತಾಳೆ. ಉದ್ಯೋಗ ಮತ್ತು ವಿವಾಹ ತಳುಕು ಹಾಕಿಕೊಂಡಿರುವಂತಹ, ದುಡಿಯುವ ಮಹಿಳೆಯರ ಬಗೆಗೆ ತ್ರಿವೇಣಿ ಕಾದಂಬರಿಗಳಲ್ಲಿ ಮೂಡಿ ಬರುವ ಚಿಂತನೆಗಳು ಇವು.

ವಿಧವಾ ಸಮಸ್ಯೆ ಕೂಡ ತ್ರಿವೇಣಿಯವರ ಕಾದಂಬರಿಗಳಲ್ಲಿ ಚರ್ಚಿತವಾಗದೆ ಇಲ್ಲಿ ಆಧುನಿಕ ಹಾಗೂ ಸಂಪ್ರದಾಯಬದ್ಧ ಎರಡೂ ನೆಲೆಯ ಮನಸ್ಸುಗಳ ತಾಕಲಾಟ ಘರ್ಷಣೆಗಳು 'ಹಣ್ಣೆಲೆ ಚಿಗುರಿದಾಗ' ದಂತಹ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುತ್ತವೆ. ತಲೆಮಾರುಗಳ ಚಿಂತನಾ ಕ್ರಮದಲ್ಲಿ ವ್ಯತ್ಯಾಸಗಳಿವೆ. ಸಮಾಜದಲ್ಲಿ ಬದಲಾವಣೆ ಪ್ರಗತಿಗಳು ಕಾಣಿಸಿಕೊಳ್ಳಬೇಕಾದರೆ, ಸುಶಿಕ್ಷಿತ ಮನಸ್ಸು ಪ್ರಭಾವ ಬೀರಬಲ್ಲದು. ಇಂತಹ ಸುಶಿಕ್ಷಿತ ಚೇತನಶೀಲ ಅಭಿವೃದ್ಧಿ ಪ್ರಗತಿಯ ಕಡೆಗೆ ಸದಾ ಮುಖ ಮಾಡಿಕೊಂಡಿರುತ್ತದೆ ಎಂಬ ನಿಲುವು 'ದೂರದಬೆಟ್ಟ'ದಲ್ಲಿದೆ. ಸಂಪ್ರಾದಾಯಿಕತೆ ಹಾಗೂ ಆಧುನಿಕತೆ ಇವೆರಡರ ಘರ್ಷಣೆಗಳು ತಿಕ್ಕಾಟಗಳು ವ್ಯಕ್ತವಾಗಿದ್ದರೂ ತ್ರಿವೇಣಿಯವರಿಗೆ ಹಳೆಯ ಮೌಲ್ಯಗಳೇ ಪ್ರಿಯವಾಗುತ್ತದೆ.

ತ್ರಿವೇಣಿಯವರು 'ಮುಚ್ಚಿದ ಬಾಗಿಲು', 'ಶರಪಂಜರ', ಬೆಕ್ಕಿನಕಣ್ಣು' ಮುಂತಾದ ಕಾದಂಬರಿಗಳಲ್ಲಿ ಮನೋವೈಫಲ್ಯಕ್ಕೊಳಗಾದ ಹೆಣ್ಣುಗಳನ್ನು ಚಿತ್ರಿಸುತ್ತಾರೆ. ಹೆಣ್ಣಿನ ಮಾನಸಿಕ ಅಸ್ವಸ್ಥತೆಗೆ ಹೇಗೆ ಗಂಡ, ಅತ್ತೆ, ತಾಯಿ, ತಂದೆ ಹಾಗೂ ಸುತ್ತಲಿನ ಸಮಾಜ ಕಾರಣವಾಗುತ್ತದೆ ಎಂಬುದನ್ನು ಹೇಳುತ್ತಲೇ, ಮಾನಸಿಕ ರೋಗಿಯಾಗಿ ಆಕೆ ಮತ್ತೆ ಆರೋಗ್ಯವಾಗಿ ಕುಟುಂಬಕ್ಕೆ ವಾಪಸ್ಸಾಗುವ ಹೆಣ್ಣಿಗೆ ಬಾಳುವ ಅವಕಾಶ ನೀಡುವ ಮಾನವೀಯತೆಯನ್ನು ಬೆಳೆಸಿಕೊಳ್ಳಬೇಕು ಎಂಬ ಸಂದೇಶವನ್ನು ನೀಡಿದ್ದಾರೆ.

ತ್ರಿವೇಣಿಯವರಿಗೆ ನಮ್ಮ ಸಮಾಜದಲ್ಲಿ ರೂಢಿಗತವಾಗಿ ಆಚರಣೆಯಲ್ಲಿರುವ ಲೈಂಗಿಕ ಸಮಾನತೆಯ ಬಗೆಗೆ ಆದರವಿಲ್ಲ. ಅವರ ಅನೇಕ ಕಾದಂಬರಿಗಳಲ್ಲಿ ಮದುವೆ ಹೆಣ್ಣಿನ ಬದುಕಿಗೆ ಒಂದು ಅನಿವಾರ್ಯ ವಿಚಾರ ಎಂಬಂತೆಯೇ ಚಿತ್ರಿತವಾಗಿದೆ. ಮುಖ್ಯವಾಗಿ ಇವರ ಕೃತಿಗಳಲ್ಲಿ ಚಿತ್ರಿತವಾಗಿರುವ ಹೆಣ್ಣುಗಳು ಮಧ್ಯಮ, ಕೆಳಮಧ್ಯಮ ವರ್ಗದ ಬ್ರಾಹ್ಮಣತ್ವದ ಹಿನ್ನೆಲೆ ಇರುವವರು. ಇವರ ಬದುಕು ಆಂತರಿಕ ನಿಯಮಗಳಿಗೆ ಒಳಪಟ್ಟಂತಹದು. ಬ್ರಾಹ್ಮಣ ವಿಧವೆಯರು ತಮ್ಮ ಜೀವನೋಪಾಯಕ್ಕೆ ಇತರರ ಮನೆಯ ಕೆಲಸಗಳನ್ನು ಮಾಡಿಕೊಟ್ಟು ಹಣ ಸಂಪಾದನೆ ಮಾಡುತ್ತಾರೆ.

'ಕಾಶಿಯಾತ್ರೆ'ಯ ಬ್ರಾಹ್ಮಣ ವಿಧವೆ ಇತರರಿಗೆ ಮನೆಗೆಲಸದಲ್ಲಿ ಸಹಾಯ ಮಾಡುವ ವಿಧವೆ. ತನ್ನ ಹೊಟ್ಟೆ ಪಾಡಿಗೆ ಹಣ ಸಂಪಾದನೆಗೆ ದುಡಿಮೆಗೆ ಕೈ ಹಚ್ಚಿದ್ದಾಳೆ ಹೊರತು ಶುದ್ಧ ಸೇವಾ ಮನೋಭಾವದಿಂದಲ್ಲ. ಗಂಡನ ರಕ್ಷಣೆ ತಪ್ಪಿದ ಹೆಣ್ಣುಗಳು ಮಾತ್ರ ಇವರ ಕೃತಿಗಳಲ್ಲಿ ದುಡಿಮೆಗೆ ನಡೆಯುತ್ತಾರೆ. ಉಳಿದಂತೆ ಹೆಣ್ಣು ಮನೆಯಿಂದಾಚೆ ಹೋಗಿ ಹೊರಗೆ ದುಡಿದು ಸಂಸಾರ ತೂಗಿಸಲು ಗಂಡನಿಗೆ ನೆರವಾಗುವುದರ ಬಗ್ಗೆ ತ್ರಿವೇಣಿಯವರಿಗೆ ಅಂತಹ

ಆದರವೇನೂ ಇಲ್ಲ. ಮದುವೆ ಹೆಣ್ಣಿನ ಮುಕ್ಕಾಲು ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲುದು ಎಂಬ ಶುದ್ಧ ನಂಬಿಕೆ ಅವರದು. 'ತಾಯ್ತನ' ಹೆಣ್ಣಿನ ವ್ಯಕ್ತಿತ್ವಕ್ಕೆ, ಅವರ ಗೌರವಕ್ಕೆ ಹೆಚ್ಚಿನ ಶೋಭೆ ತರುತ್ತದೆ. 'ತಾಯ್ತನ'ವೇ ಹೆಣ್ಣಿನ ಬದುಕಿನ ಪರಮಸತ್ಯ ಎಂದು ನಂಬುತ್ತಾರೆ. ವ್ಯಕ್ತಿಗತ ಬದುಕಿನಲ್ಲೂ ತ್ರಿವೇಣಿಯವರು ಹೆಣ್ಣಿಗೆ ತಾಯ್ತನ ಬಹಳ ಮುಖ್ಯವಾದುದು ಎಂದು ಭಾವಿಸಿದವರು.

'ಹೆಣ್ತನದ ಫಲವಂತಿಕೆಯ ಸಂಕೇತ ತಾಯ್ತನ' ಎಂದು ತ್ರಿವೇಣಿ ಖಚಿತವಾಗಿ ನಂಬುತ್ತಾರೆ. ವಿವಾಹ ಕುಟುಂಬ ಇವೆಲ್ಲ ತ್ರಿವೇಣಿಯವರ ಅನೇಕ ಕಾದಂಬರಿಗಳಲ್ಲಿ ತಾಯ್ತನದ ಆಧಾರವಾಗುತ್ತದೆ. ಸ್ತ್ರೀತ್ವ ಮಾತೃತ್ವದೊಂದಿಗೆ ಸಮೀಕರಣವಾಗಿರುವ ವಿಚಾರ ನಮ್ಮ ಪರಂಪರೆಯಲ್ಲಿ ಸದಾ ಕಾಣಿಸಿಕೊಂಡೇ ಇರುವಂತಹದ್ದು. ತಾಯ್ತನದ ಭಾವನೆಗಳು, ತಾಯ್ತನದ ಸುಖದ ಅನುಭವಗಳು ಬಸುರಿಯ ಬಯಕೆಗಳು ಕಾಲ್ಪನಿಕ ಜಗತ್ತು, ಸುಂದರ ಕನಸುಗಳು 'ವಸಂತಗಾನ' ದಂತಹ ಕಾದಂಬರಿಗಳಲ್ಲಿ ವೈಭವೀಕರಣಕ್ಕೆ ಒಳಪಡುತ್ತದೆ.

ತ್ರಿವೇಣಿಯವರಿಗೆ ಹೆಣ್ಣಿನ ಸಮಸ್ಯೆಗಳ ಬಗೆಗೆ ಅರಿವಿದೆ. ಈ ಸಮಸ್ಯೆಗಳು ನಮ್ಮ ಮೊದಲ ತಲೆಮಾರಿನ ಲೇಖಕಿಯರ ಬದುಕಿನೊಳಗೆ ತಳುಕು ಹಾಕಿಕೊಡಂತವು. ಆದರೆ ತ್ರಿವೇಣಿಯವರು ತಮ್ಮ ಮನೋವಲಯದೊಳಗೆ ಭಾಷಿಕವಾಗಿ ಕಲಾತ್ಮಕಗೊಳಿಸುವ ಪ್ರಯತ್ನ ಮಾಡುತ್ತಾರೆ. ಆದ್ದರಿಂದಲೇ ಅವಕ್ಕೆ ದೃಢವಾಸ್ತವತೆಯ ನೆಲೆಯಲ್ಲಿ ಬೇರು ಬಿಡಲು ಸಾಧ್ಯವಾಗದೆ ಕೇವಲ ಗ್ರಹಿಕೆಗಳ ಕಲ್ಪನೆಗಳ ಮಟ್ಟದಲ್ಲೇ ನಿಂತು ಬಿಡುತ್ತವೆ.

ಹೆಣ್ಣಿನ ಬದುಕಿನ ನಾನಾ ಅನುಭವಗಳನ್ನು ಸಮಸ್ಯೆಗಳನ್ನು ತ್ರಿವೇಣಿಯವರು ತುಂಬು ಕಳಕಳಿಯಿಂದ ಚಿತ್ರಿಸುತ್ತಾರೆ. ತಮ್ಮ ಕೃತಿಗಳೊಳಗೆ ಪ್ರವೇಶ ಪಡೆದ ಓದುಗ ಇಂತಹ ವಿಚಾರಗಳಿಗೆ ಸ್ಪಂದಿಸುವಂತಹ ಆಕರ್ಷಕ ಭಾಷೆಯನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಅದಕ್ಕೊಂದು ರಸಿಕತೆಯ ಪ್ರೇಮಮಯ ಚೌಕಟ್ಟನ್ನು ಅನೇಕ ಕಾದಂಬರಿಗಳಲ್ಲಿ ತಯಾರಿಸಿಕೊಳ್ಳುತ್ತಾರೆ. ಆದರೆ, ಕೆಲವು ಸಂದರ್ಭಗಳಲ್ಲಿ ಓದುಗರು ಚುರುಕು ಸಂಭಾಷಣೆಗೆ ಚುಮುಚುಮು ಪ್ರೀತಿಯ ಸಣ್ಣ ನರಳುವಿಕೆಯಲ್ಲೇ ಮೈಮರೆತು ವಿಚಾರ ಕೇಂದ್ರದತ್ತ ಗಮನವೇ ಹರಿಸದೆ ಜಡವಾಗಿ ಬಿಡಬಹುದು. ಕೆಲವೊಮ್ಮೆ ಯಾವುದೇ ಮಹತ್ತರವಾದ ಆಕಾಂಕ್ಷೆಗಳನ್ನಾಗಲಿ, ಮತ್ತೊಂದನ್ನಾಗಲೀ ಯಾವುದೇ ಸಾತ್ವಿಕತೆಯ ವೇಷ ತೊಟ್ಟು, ಸಂದೇಶಗಳ ಸುರಿಮಳೆ ಸುರಿಸದೆ ಹೊಸ ಗಂಡ ಹೆಂಡಿರ ಪ್ರೀತಿ, ಪ್ರೇಮ, ವಿರಸ, ಸರಸಗಳ ಮುದದ ನಿರೂಪಣೆ

ಮಾಡುವುದು ಕಾದಂಬರಿಗಾರ್ತಿಯ ಯಶಸ್ಸು ಎಂದೇ ಹೇಳಬೇಕಾಗುತ್ತದೆ. ತ್ರಿವೇಣಿಯವರು 'ಬೆಳ್ಳಿಮೋಡ', 'ಶರಪಂಜರ', 'ಕಂಕಣ' ದಂತಹ ಕಾದಂಬರಿಗಳನ್ನೂ ಬರೆಯಬಲ್ಲರು ಹಾಗೆ 'ವಸಂತಗಾನ' ದಂತಹ ಹಗುರ ಓದಿನ ಕಾದಂಬರಿಗಳನ್ನು ರಚಿಸಬಲ್ಲರು.

ಒಟ್ಟಾರೆಯಾಗಿ, ಹೇಳುವುದಾದರೆ ತ್ರಿವೇಣಿಯವರು ಹೆಣ್ಣಿಗೆ ತಾಯ್ತನ, ಸಂಸಾರ, ಕುಟುಂಬಗಳು ಬಹಳ ಮುಖ್ಯ ಎಂದು ಭಾವಿಸಿದರು. ಅವರು ಹೆಣ್ಣಿನ ಸ್ವಂತಿಕೆಯನ್ನು ಪ್ರಗತಿಪರ ನಿಲುವುಗಳನ್ನು ಮೆಚ್ಚಿಕೊಂಡರೂ ಗಂಡಿನ ಅವಶ್ಯಕತೆ, ರಕ್ಷಣೆ ಅವಳ ಬದುಕನ್ನು ಮತ್ತಷ್ಟು ಗಟ್ಟಿಗೊಳಿಸಬಲ್ಲದು ಎಂದೇ ನಂಬುತ್ತಾರೆ. ಏಕೆಂದರೆ, ಮಹಿಳೆ ಆರ್ಥಿಕವಾಗಿ ಸದೃಢಗೊಳ್ಳಬೇಕು. ಆರ್ಥಿಕ ಸ್ವಾತಂತ್ರ್ಯ ಅವಳ ನಿಜವಾದ ಸ್ವಾತಂತ್ರ್ಯದ ಅನುಭವಿಸುವಿಕೆಗೆ, ವಿಮೋಚನೆಗೆ ದಾರಿಮಾಡಿಕೊಡಬಲ್ಲದು ಎಂಬುದರ ಕಡೆಗೆ ಅವರು ಅಷ್ಟಾಗಿ ಗಮನ ಹರಿಸುವುದಿಲ್ಲ. ಹೆಣ್ಣು ಆರ್ಥಿಕ ಪ್ರಪಂಚದ ಕಡೆಗೆ ಮುಖ ಮಡಿಕೊಳ್ಳುವ ಸಂದರ್ಭಗಳೆಂದರೆ ಗಂಡನ ನೆಲೆ ತಪ್ಪಿದ ಸಂದರ್ಭಗಳಲ್ಲಿ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲು ಉದ್ಯೋಗಾಕಾಂಕ್ಷಿಯಾಗುತ್ತಾಳೆ ಎಂಬ ಭಾವನೆ ಇದ್ದಂತೆ ಕಾಣುತ್ತದೆ.

ತ್ರಿವೇಣಿಯವರ ಕಾದಂಬರಿಗಳಲ್ಲಿ ನಗರ ವಾತಾವರಣದಲ್ಲಿ ಎಚ್ಚರಗೊಂಡ ಸುಶಿಕ್ಷಿತ ಪ್ರಜ್ಞೆಯೊಂದು ತನ್ನ ಸುತ್ತಲಿನ ಬದುಕಿನ ಒಳ್ಳೆಯ ಕೆಟ್ಟ ಅಂಶಗಳನ್ನು ದಾಖಲಿಸಿರುವ ಧಾಟಿ ನಿಚ್ಚಳವಾಗಿ ತೋರುತ್ತದೆ. ಇದನ್ನು ಹೊರತುಪಡಿಸಿದರು ಗ್ರಾಮೀಣ ಸಂವೇದನೆಗಳು ಇವರ ಕೃತಿಗಳಲ್ಲಿ ಅಷ್ಟಾಗಿ ಕಾಣಿಸುವುದಿಲ್ಲ. ಅನೇಕ ಮಿತಿಗಳು, ಸರಳೀಕೃತ ಪರಿಹಾರಗಳು ದಿಢೀರಾಗಿ ಕಾಣಿಸಿಕೊಂಡರೂ ಸ್ಪಷ್ಟ ಸ್ತ್ರೀಪರ ಧ್ವನಿಗಳಿವೆ. ಸಮಾಜದ ದ್ವಿಸ್ತರ ನ್ಯಾಯಗಳಿಗೆ ಸ್ಪಷ್ಟ ವಿರೋಧವಿದ್ದು, ಅವರ ಕೃತಿಗಳಲ್ಲಿ ಮನೋವೈಜ್ಞಾನಿಕ ನೆಲೆಯಲ್ಲಿ ಅದನ್ನು ವಿವರಿಸಿಕೊಳ್ಳುವಾಗ ಉದಾರವಾದ ನೆಲೆಗಳು, ನೆರಳುಗಳು ಕಂಡುಬರುತ್ತದೆ. ಮಹಿಳೆಗೆ ಉದ್ಯೋಗ, ಶಿಕ್ಷಣದ ಅಗತ್ಯವಿದೆ ಎಂಬ ಅರಿವಿದೆ, ಆದರೆ, ಗಂಡ ಆಸರೆ ತಪ್ಪಿದರೆ, ಇದು ತೀರಾ ಅನಿವಾರ್ಯವಾದ ಸಂಗತಿಯಾಗುತ್ತದೆ ಎಂದು ನಂಬುತ್ತಾರೆ. ತನ್ನ ಬೌದ್ಧಿಕತೆಗೆ ಪೋಷಣೆ ಬಯಸಿ, ವೃತ್ತಿಪರ ಬದುಕಿನಲ್ಲಿ ವ್ಯಕ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳುವ ಹೆಣ್ಣಿನ ಮಾದರಿಗಳು ಅವರ ಕಾದಂಬರಿಗಳಲ್ಲಿ ಬಹುಸಂಖ್ಯೆಯಲ್ಲಿಲ್ಲ. ಕೆಲವೊಮ್ಮೆ ಬಾಹ್ಯದ ವಿರೋಧಗಳಿದ್ದರೂ ಅಸಹಾಯಕತೆಯಿಂದ ಕೈಚೆಲ್ಲುವಾಗ ಕಾರಣಗಳನ್ನು ಕೊಟ್ಟು ಸಮಜಾಯಿಷಿ ಮಾಡಿಕೊಂಡರೆ ಕೆಲವೊಮ್ಮೆ ಇದು

ಹೊರಗಿನ ಪ್ರತಿರೋಧಗಳಷ್ಟೇ ಆಗಿರದೆ, ಹೆಣ್ಣಿನ ಅಂತರಂಗದಲ್ಲೇ ಇರುವ ವಿರೋಧಗಳ ಸಂಕೇತವೂ ಆಗುತ್ತದೆ.

ತ್ರಿವೇಣಿಯವರು ತಮ್ಮ ಪಾತ್ರ ವಿನ್ಯಾಸದಲ್ಲಿ ಅನುಭವ ನೆಲೆಯಲ್ಲಿ ಭಾಷೆಯನ್ನು ಬೆಳೆಸುತ್ತಾರೆ, ಪಾತ್ರವಿನ್ಯಾಸದಲ್ಲಿ ಅನುಭವ ನಿರೂಪಣೆಯಲ್ಲಿ ಜಾಣ್ಮೆಯಿದೆ. ಸಂಭಾಷಣೆಗಳು ಅತ್ಯಂತ ಸುಂದರವಾಗಿದೆ. ಹೀಗಾಗಿ ಹೆಣ್ಣಿನ ಮನೋವಲಯಗಳನ್ನು ಹಿಡಿದಿಟ್ಟು ತನ್ಮೂಲಕ ಹೆಣ್ಣಿನ ನೋವುಗಳನ್ನು ಸಮಸ್ಯೆಗಳನ್ನು ದಾಖಲಿಸುತ್ತಾರೆ. ಅವರ ಬರೆವಣಿಗೆಯಲ್ಲಿ ಸ್ಪಷ್ಟ ಸ್ತ್ರೀವಾದಿ ಚಿಂತನೆಗಳಿವೆ.

ತ್ರಿವೇಣಿಯವರ ವಿಶಿಷ್ಟ ಶಕ್ತಿಯಿರುವುದು ಸ್ತ್ರೀತ್ವದ ಅನೇಕಾನೇಕ ಮುಖಗಳನ್ನು ಸಂಗ್ರಹಿಸಿ, ಅವುಗಳನ್ನು ಯಶಸ್ವಿಯಾಗಿ ಅಭಿವ್ಯಕ್ತಿಗೊಳಿಸುವುದರಲ್ಲಿ ಸ್ತ್ರೀತ್ವದ ರಹಸ್ಯವನ್ನು ಮತ್ತು ಅದರ ವಿವಿಧ ರೂಪಗಳನ್ನು ತಮ್ಮ ಕೃತಿಗಳಲ್ಲಿ ಸಫಲವಾಗಿ ಸೆರೆ ಹಿಡಿದಿದ್ದಾರೆ. ಅವರ ಮೆಚ್ಚಿನ ಧಾಟಿಗಳೆಂದರೆ ಗಂಭೀರ ಮತ್ತು ವೈನೋದಿಕವಾಗಿವೆ.

ಎಲ್ಲದಕ್ಕಿಂತಲೂ ಮುಖ್ಯವಾಗಿ ತ್ರಿವೇಣಿಯವರು ಮೊದಲಬಾರಿಗೆ ಮನೋವೈಜ್ಞಾನಿಕ ಕಾದಂಬರಿಗಳನ್ನು ಮನೋವೈಕಲ್ಯಕ್ಕೆ ಒಳಗಾದವರ ಬಗ್ಗೆಯೇ ಬರೆದ ಕಾದಂಬರಿಗಳನ್ನು ಪರಿಚಯಿಸಿದರು ಮತ್ತು ಅವನ್ನು ಜನಪ್ರಿಯಗೊಳಿಸಿದರು. ಈ ಲೋಕದ ಜನರು ಅಪ್ರಜ್ಞಾಪೂರ್ವಕವಾಗಿ, ವಿಚಿತ್ರ ಹಾಗೂ ಕಾಲ್ಪನಿಕ ಆಟಗಳನ್ನು ತಮ್ಮೊಡನೆ ಹಾಗೂ ಇತರರೊಡನೆ ಹೇಗೆ ಆಡುತ್ತಾರೆ ಮತ್ತು ಅದರಿಂದಾಗಿ ನರಳುತ್ತಾರೆ ಎಂಬುದನ್ನು ವಿಶದಪಡಿಸಿದರು. ಅತಿ ಮುಖ್ಯವಾಗಿ ಮಾನವನ ಅಪ್ರಜ್ಞಾವಲಯದ ಪ್ರಬಲ ಬೋಧನೆಗಳು, ಭೀತಿಗಳು ಮತ್ತು ತೃಪ್ತಿಸಾಧನಗಳು ಇವುಗಳ ಮೇಲೆ ಬೆಳಕು ಚೆಲ್ಲಿ ಮಾನಸಿಕವಾಗಿ ನಾವು 'ಸ್ವಸ್ಥರು' ಮತ್ತು 'ಅಸ್ವಸ್ಥರು' ಎಂದು ಗುರುತಿಸುವವರ ಮಧ್ಯೆ ಅಂತಹ ಕುರುಹದಂತರವೇನೂ ಇಲ್ಲವೆಂದು ಮನದಟ್ಟು ಮಾಡಿಸಿದರು. ಮಾನಸಿಕ ಚಿಕಿತ್ಸಾಲಯಗಳಲ್ಲಿ ಬಂಧಿಯಾಗಿರುವ ಇಂತಹ ದುರ್ದೈವಿಗಳಿಗಾಗಿ ಜನರು ಮರುಗುವಂತೆ ಮತ್ತು ಯೋಚಿಸುವಂತೆ ಮಡಿದುದು ಯಾವ ಲೇಖಕರು ಅಭಿಮನ ಪಡಬಹುದಾದ ಸಾಧನೆ.

ಹೀಗೆ ತಮ್ಮ ಕಾದಂಬರಿಗಳ ಮೂಲಕ ಸ್ತ್ರೀಸಾಹಿತ್ಯಕ್ಕೆ ಮತ್ತು ಸ್ತ್ರೀಪರ ನಿಲುವಿಗೆ ಮಾನ್ಯತೆಯನ್ನು ಗಳಿಸಿಕೊಟ್ಟವರು. ಅವರ ನಂತರ ಬಂದ ಲೇಖಕಿಯರಿಗೆ ರಾಜಮಾರ್ಗವನ್ನು ಕಲ್ಪಿಸಿಕೊಟ್ಟರು ಇಂದು ಜನಪ್ರಿಯತೆಯಲ್ಲಿ ಮತ್ತು ಸಂಖ್ಯೆಯಲ್ಲಿ ಲೇಖಕಿಯರ ಕಾದಂಬರಿಗಳು ಮುಂಚೂಣಿಯಲ್ಲಿದ್ದರೆ, ಅದಕ್ಕೆ ಕಾರಣ ತ್ರಿವೇಣಿಯವರು ನಿರ್ಮಿಸಿದ ಕಾದಂಬರಿ ಪರಂಪರೆ. ಚಾರಿತ್ರಿಕ ನೆಲೆಯಲ್ಲಿ ಈ ಸಾಧನೆ ಯಾವ ಸಾಹಿತಿಯೂ ಹೆಮ್ಮೆ ಪಡಬಹುದಾದಂತಹುದು.

ಅಡಿಟಿಪ್ಪಣಿಗಳು

೧. ಪ್ರೇಮಭಟ್ : ಲೇಖಕಿ, ಸಹೃದಯಿ ಆರ್ಯಾಂಬ ಪಟ್ಟಾಭಿ, ಉನ್ಮೀಲನ (ಶ್ರೀಮತಿ ಆರ್ಯಾಂಬ ಪಟ್ಟಾಭಿ ಅಭಿನಂದನಾ ಗ್ರಂಥ), ಸಂ. ಪ್ರೊ. ಸ.ನ. ಗಾಯತ್ರಿ ಮತ್ತು ಡಾ.ಎಸ್.ಡಿ. ಶಶಿಕಲಾ; ಸಂವಹನ ಪ್ರಕಾಶನ, ಮೈಸೂರು, ೨೦೦೨, ಪುಟ ೩೧

೨. ಡಾ. ಜಿ.ಪ್ರಶಾಂತನಾಯಕ್ : ಸಾಹಿತ್ಯ ವಿಮರ್ಶೆ ೨೦೦೪, ಸಂ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬, ಪುಟ ೧೩೨

೩. ಅದೇ. ಪುಟ ೧೩೩

ಗ್ರಂಥ ಋಣ

ಆಕರ ಗ್ರಂಥಗಳು

ಆರ್ಯಾಂಬರವರ ಕಾದಂಬರಿಗಳು

* ಹೊಂಗನಸು
* ಆರಾಧನೆ
* ಪ್ರಿಯಸಂಗಮ
* ಎರಡುಮುಖ
* ಬೀಸಿದಬಲೆ
* ಸವತಿಯ ನೆರಳು
* ಬದುಕಿನ ಬವಣೆಯಲ್ಲಿ
* ಆ ಹಾಡು
* ಕಪ್ಪು-ಬಿಳುಪು
* ಮರಳಿಗೂಡಿಗೆ
* ಬೇವು-ಬೆಲ್ಲ
* ದೇವಮಾನವ
* ಸಾಕ್ಷಾತ್ಕಾರ
* ಪರಂಪರೆ
* ಕಸ್ತೂರಿ
* ಪ್ರೇಮಕಥೆ
* ಅಸಂಗತ
* ಕಾಮನಬಿಲ್ಲು
* ಯಜ್ಞಪಶು
* ಸಾಕುಮಗ
* ನಿರ್ಣಯ
* ಬಲೆ
* ಸುಳಿ
* ವಿಶ್ವಧರ್ಮ
* ಅಮರಪ್ರೇಮ
* ಅಪೂರ್ವಕಥೆ
* ಗುರಿ
* ಸಂಬಂಧಗಳು
* ಬಂಡಾಯ
* ಪತಿತಪಾವನ
* ಪ್ರಕೃತಿಪುರುಷ
* ಬಸವಿ

ತ್ರಿವೇಣಿಯವರ ಕಾದಂಬರಿಗಳು

* ಹೂವು-ಹಣ್ಣು
* ಅಪಸ್ವರ
* ಸೋತು ಗೆದ್ದವಳು
* ಬೆಕ್ಕಿನಕಣ್ಣು
* ದೂರದಬೆಟ್ಟ
* ಕೀಲುಗೊಂಬೆ
* ಮೊದಲಹೆಜ್ಜೆ
* ಅಪಜಯ
* ಹೃದಯಗೀತೆ
* ಮುಚ್ಚಿದಬಾಗಿಲು
* ಹಣ್ಣೆಲೆ ಚಿಗುರಿದಾಗ
* ಕಂಕಣ
* ಬೆಳ್ಳಿಮೋಡ
* ಮುಕ್ತಿ
* ಬಾನುಬೆಳಗಿತು
* ಅವಳಮನೆ
* ತಾವರೆಯಕೊಳ
* ವಸಂತಗಾನ
* ಕಾಶೀಯಾತ್ರೆ
* ಶರಪಂಜರ
* ಹಣ್ಣೆಲೆ ಚಿಗುರಿದಾಗ
* ಅವಳ ಮಗಳು

(ಪೂರ್ಣಗೊಳಿಸಿದವರು ಎಂ.ಸಿ. ಪದ್ಮಾ)

ಪರಾಮರ್ಶನ ಗ್ರಂಥಗಳು

* ಸಂ. ಡಾ. ಎಸ್.ಡಿ. ಶಶಿಕಲಾ : ಪ್ರೊ. ಸ.ನ.ಗಾಯಿತ್ರಿ, ಉನ್ಮೀಲನ (ಶ್ರೀಮತಿ ಆರ್ಯಾಂಬಪಟ್ಟಾಭಿ ಅಭಿನಂದನ ಗ್ರಂಥ) ಸಂವಹನ ಪ್ರಕಾಶನ, ಮೈಸೂರ, 2002
* ಸಿ.ಎನ್.ರಾಮಚಂದ್ರನ್ : ತ್ರಿವೇಣಿ, ಭಾರತೀಯ ಸಾಹಿತ್ಯ ನಿಮಾರ್ಪಕರು, ಸಾಹಿತ್ಯ ಅಕಾಡೆಮಿ, ನವದೆಹಲಿ, 1999
* ಸುಧಾರ್ಥಿ ಹಾಸನ : ತ್ರಿವೇಣಿ ಕೃತಿಗಳ ಒಳನೋಟ, ಪ್ರತಿಭಾ ಕಲಾ ಪರಿಷತ್, ಬೆಂಗಳೂರು, 1973
* ಭಾಗ್ಯ ಜಯ ಸುದರ್ಶನ : ತ್ರಿವೇಣಿ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2009
* ಸಂ. ಡಾ.ಹೆಚ್.ಎಸ್. ಶ್ರೀಮತಿ: ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006
* ಪ್ರ.ಗ. ಸಹಸ್ರಬುದ್ಧೆ : ಕನ್ನಡ ರೂಪಾಂತರ, ಶಕುಂತಲಾ ಎನ್.ರಾವ್, ಜೀವನಮೌಲ್ಯಗಳು-1 ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, 2010
* ಟಿ. ಜಯರಾಮು : ಮೌಲ್ಯ ಶಿಕ್ಷಣ, ಮಂದಾರ ಪ್ರಕಾಶನ, ಬೆಂಗಳೂರು, 2004
* ಮನು : ಜೀವನ ಮೌಲ್ಯಗಳು, ಕಾವ್ಯಶ್ರೀ ಪ್ರಕಾಶನ, ಮೈಸೂರು, 2010
* ಎನ್.ಗಾಯಿತ್ರಿ : ಮಹಿಳೆ ಬಿಡುಗಡೆಯ ಹಾದಿಯಲ್ಲಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 1996
* ಧರಣೀದೇವಿ ಮಾಲಗತ್ತಿ : ಸ್ತ್ರೀವಾದ ಮತ್ತು ಭಾರತೀಯತೆ, ಚೇತನ ಬುಕ್‌ಹೌಸ್, ಮೈಸೂರು, 1998
* ಡಾ. ಬಿ.ಎನ್. ಸುಮಿತ್ರಾಬಾಯಿ : ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
* ಸಂ. ಜಿ.ಎನ್. ಅವಧಾನಿ: ಸಾಹಿತ್ಯ ವಿಮರ್ಶೆ, 1991, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1992
* ಡಾ. ಜಿ. ಪ್ರಶಾಂತನಾಯಕ್ : ಸಾಹಿತ್ಯ ವಿಮರ್ಶೆ 2004, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2006
* ಸಂ. ಪಂಡಿತಾರಾಧ್ಯ: ಸಾಹಿತ್ಯ ವಿಮರ್ಶೆ 1999, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2001

* ಫೆಮಿನಿಸ್ಟ್ ಸ್ಟಡಿ ಸರ್ಕಲ್ (ತೆಲುಗಿನಲ್ಲಿ) ಕನ್ನಡಕ್ಕೆ ಬಿ.ಸುಜ್ಞಾನಮೂರ್ತಿ : ನಮಗೆ ಗೋಡೆಗಳಿಲ್ಲ, ಸ್ತ್ರೀವಾದ ಪರಿಚಯ, ಬಂಡಾಯ ಪ್ರಕಾಶನ, ಗದಗ, 2009
* ನೇಮಿಚಂದ್ರ : ಮಹಿಳಾ ಅಧ್ಯಯನ, ಅಂಕಿತ ಪುಸ್ತಕ, ಬೆಂಗಳೂರು, 2001
* ಸಂ. ಡಾ. ರಾ.ಗೌ: ಮಹಿಳಾ ಅಧ್ಯಯನದ ಆಯಾಮಗಳು, ಶ್ರೀಮತಿ ಯಶೋದಾ ರಾ.ಗೌ ಟ್ರಸ್ಟ್, ಮೈಸೂರು, 2008
* ಡಾ.ವಿಜಯಶ್ರೀ ಸಬರದ : ಅನುಪಮಾ ನಿರಂಜನ ಅವರ ಕಾದಂಬರಿಗಳು, ಒಂದು ಸಾಹಿತ್ಯಿಕ ಅಧ್ಯಯನ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು 1994
* ಡಾ. ವಿಜಯಶ್ರೀ ಸಬರದ : ತ್ರಿವೇಣಿಯರವ ಕಾದಂಬರಿಗಳು
* ಕವಿತಾ ರೈ : ನವನಿಸರ್ಗ, ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು, 2008
* ಕನ್ನಡ ಸಂಶೋಧನೆ (ಸಂ) : ತಾತ್ವಿಕ ವಿಚಾರ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007
* ವಿವೇಕ ರೈ ಬಿ.ಎ. (ಸಂ) : ಕನ್ನಡ ಕಾದಂಬರಿಯ ಮೊದಲಹೆಜ್ಜೆಗಳು, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು 1980
* ವಿವಿಧ ಲೇಖಕರು : ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – 1993
* ಸ.ನ. ಗಾಯಿತ್ರಿ : ಲೋಕಪಾವನಿ, ವಿವಿಧ ಲೇಖಕರು, ಶ್ರೀಮತಿ ಆರ್ಯಾಂಬಪಟ್ಟಾಭಿರವರ ಜೀವನ ಮತ್ತು ಕೃತಿಗಳು, 1973 ರವರೆಗಿನ ಕಾದಂಬರಿ ಸಮೀಕ್ಷೆ
* ವಿಮಲಾ, ಎನ್.ವಿ. ತ್ರಿವೇಣಿ ವ್ಯಕ್ತಿ ಮತ್ತು ಸಾಹಿತ್ಯ, 1978
* ಯಶೋಧರ ಹೆಚ್.ವಿ. : ತ್ರಿವೇಣಿ ಕಾದಂಬರಿ ಸಮೀಕ್ಷೆ, ಸಿಂಚನ – 1980
* ಪಾರ್ವತಿ ಹೆಚ್.ಎಸ್. : ತ್ರಿವೇಣಿ, ದಿನ ಒಳಗೆ 1981
* ಪಾರ್ವತಿ ಹೆಚ್.ಎಸ್. : ಪರಂಪರೆ, ಪ್ರತಿಭಟನೆ ಮತ್ತು ಲೇಖಕಿಯರು, ಚಿಂತನ ಮಂಥನ – 1984
* ಆರ್ಯಾಂಬ ಪಟ್ಟಾಭಿ ತ್ರಿವೇಣಿ : ನಾ ಕಂಡಂತೆ, ತರಂಗ, ಡಿಸೆಂಬರ್ 27, 1987
* ಅನೇಕ ಲೇಖಕರು : ತ್ರಿವೇಣಿ ನೆನಪುಗಳ ಸಂಗಮ, ತಾಯಿ, ಅಕ್ಟೋಬರ್ 1987
* ಸಂ. ಗಾಯಿತ್ರಿ ಎನ್. : ತ್ರಿವೇಣಿ, 1989
* ಡಾ. ವಿಜಯಶ್ರೀ ಸಬರದ : ತ್ರಿವೇಣಿರವರ ಕಾದಂಬರಿಗಳು

* ಶಂಕರರಾವ್ ಚ.ನ. : ಸಮಾಜಶಾಸ್ತ್ರ ಸಂಪುಟ-1, ಜೈಭಾರತ ಪ್ರಕಾಶನ, ಮಂಗಳೂರು, 1993
* ಎಸ್.ವಿ.ಪಾಟೀಲ : ಸಮಾಜ ಪ್ರಸ್ತಾವಿಕ ವಿಶ್ಲೇಷಣೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1976.
* ಡಾ.ಎಂ.ಚಿದಾನಂದಮೂರ್ತಿ :ಸಂಶೋಧನೆ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು 2011
* ಸಂ. ಸುಮಿತ್ರಾಬಾಯಿ ಬಿ.ಎನ್. ಹಾಗು ಎನ್ ಗಾಯಿತ್ರಿ : ಸ್ತ್ರೀವಾದಿ ಪ್ರವೇಶಿಕೆ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, 1995
* ಸ್ತ್ರೀವಾದ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2003
* ಶಿಕ್ಷಣದ ಪರಿಕಲ್ಪನಾತ್ಮಕ ಬುನಾದಿಗಳು : ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು, 2005
* ಡಾ. ಎಸ್.ಬಿ. ಯಾದವಾಡ : ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ, ವಿದ್ಯಾನಿಧಿ ಪ್ರಕಾಶನ, ಗದಗ 2004
* ಸಂ. ಡಾ. ವಿಜಯಶ್ರೀ ಸಬರದ : ಮಹಿಳೆ ಶೋಷಣೆ, ಸವಾಲುಗಳು, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, 2005
* ಎಚ್ಚಾರೆಸ್ ಮತ್ತು ಎಚ್ಚಾರ್ಕೆ : ಭಾರತೀಯ ಸಮಾಜ ಅಧ್ಯಯನ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2001
* ರೋಹಿಣಿ ಬಿ.ಎಂ. : ಸ್ತ್ರೀ ಸಂವೇದನೆ, ಹೇಮಾಂಶು ಪ್ರಕಾಶನ, ಮಂಗಳೂರು 1995
* ಮನು ಚಕ್ರವರ್ತಿ : ಭಾರತೀಯ ಸ್ತ್ರೀವಾದ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, 1993
* ಸಂ. ಬರಗೂರು ರಾಮಚಂದ್ರಪ್ಪ : ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993
* ಸುಧಾ ಸೀತಾರಾಮನ್ : ಮಹಿಳಾ ಅಧ್ಯಯನ, ಸಮಾಜಶಾಸ್ತ್ರೀಯ ದೃಷ್ಟಿಕೋನ, ಸ್ತ್ರೀಲೇಖ ಪ್ರಕಟಣೆ, ಬೆಂಗಳೂರು, 2010
* ಸಂ. ಶ್ರೀಮತಿ ಆರ್ಯಾಂಬ ಪಟ್ಟಾಭಿ : ಮಹಿಳಾ ಸಾಹಿತ್ಯ ಸಮೀಕ್ಷೆ, ಸಂವಹನ, ಮೈಸೂರು 2004

* ಪ್ರೊ. ಸಿ.ಎನ್. ರಾಮಚಂದ್ರನ್ : ತೌಲನಿಕ ಸಾಹಿತ್ಯ ಮತ್ತು ಇತರ ಲೇಖನಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, 1998
* ಬಿ. ಜನಾರ್ಧನಭಟ್ (ಸಂ.) : ಸಾಹಿತ್ಯ ವಿಮರ್ಶೆ 2001, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು 2002
* ಡಾ. ಜಿ.ಎಸ್. ಶಿವರುದ್ರಪ್ಪ (ಸಂ.) ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು 1971
* ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ : ತೌಲನಿಕ ಸಾಹಿತ್ಯಾಧ್ಯಯನ, ತತ್ತ್ವ ವ್ಯಾಪ್ತಿ ಜಿಜ್ಞಾಸೆ, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು 2008
* ನಾಯಕ ಹಾ.ಮಾ. ಹಾಗೂ ವೆಂಕಟೇಶಮೂರ್ತಿ ಎಂ.ವಿ. (ಸಂ) ಕಾದಂಬರಿ ಲೋಕ ಗೀತಾ ಬುಕ್ ಹೌಸ್, ಮೈಸೂರು 1990
* ನಾರಾಯಣ ಕವಿ : ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1989
* ಪ್ರೀತಿ ಶುಭಚಂದ್ರ, ಮಹಿಳಾ ಅಧ್ಯಯನ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2002
* ಮಂಗಳಾ ಚಿ.ನಾ. : ಎಚ್ಚೆತ್ತ ಹಾದಿಯಲ್ಲಿ ಮಹಿಳೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 2001
* ಡಾ. ಗೀತಾ ಪ್ರಸಾದ್, ಆಧುನಿಕ ಮಹಿಳಾ ಅಭಿವ್ಯಕ್ತಿ, ಧಾತ್ರಿ ಪ್ರಕಾಶನ, ಬೆಂಗಳೂರು 2009.

*****

AKSHARA GRANTHALAYA
ACC.NO.131995

MADHU COMPUTERS
311/2, 13th Main, 3rd Cross,
Saraswathipuram, Mysore-570 009.
Ph.: 9886228154